
ಅನಿರೀಕ್ಷಿತ

ಪದ್ಮಾ ಶ್ರೀಧರ್



ಪದ್ಮಾಶ್ರೀಧರ್

ಅನಿರೀಕ್ಷಿತ

ಶ್ರೀಮತಿ ಪದ್ಮಾ ಶ್ರೀಧರ್

ಕೀರ್ತಿ ಪ್ರಕಾಶನ
೨೩೦, ೧೬೭ ಕಟ್ಟಡ, KHB, MIG, A4,
ಶಿರ್ಕೆ ಅಪಾರ್ಟಮೆಂಟ್ಸ್, ಕೆಂಗೇರಿ ಉಪನಗರ,
ಬೆಂಗಳೂರು ೫೬೦೦೬೦

ANIREEKSHITHA - a social novel by Smt. Padma Shreedhar, 1246, 'chiguru', 7th B Cross, New Town, Yalahanka, Bangalore-560057 and published by M/S Keerthi Prakashana, 230, Bld.167, KHB, MIG-A4, Sirke Apts. Kengeri Upanagar, Bangalore 560060.

Printed on Maplitho 70 GSM paper. And 90 GSM Art paper
No.of Pages: 232+4 = 236, Demi 1/8.

First Edition: 2001
Second Edition: 2013

Price: Rs. 160/- Maplitho.
Rs. 200/- Art paper

DTP: Smt. Yogitha Bali.

Impression: Harshini Offset Printers, Bangalore

ಮುನ್ನುಡಿ

"ಅನಿರೀಕ್ಷಿತ" ಕಾದಂಬರಿ ನನ್ನ ಸ್ವಂತ ರಚನೆ, ಅನುವಾದ ಕೃತಿಯಲ್ಲ; ಭಾವಾನುವಾದವಲ್ಲ. ಇದರಲ್ಲಿ ಬರುವ ಪಾತ್ರಗಳು ನನ್ನ ಕಲ್ಪನೆಯಲ್ಲಿ ರೂಪುಗೊಂಡವು. ವೇಷ, ವೇಷಕ್ಕೆ ತಕ್ಕ ಭಾವ, ಭಾವಕ್ಕೆ ತಕ್ಕ ನಟನೆ, ನಡವಳಿಕೆಗಳನ್ನು ಪಾತ್ರಗಳ ಮುಖಾಂತರ ತಿಳಿಸುತ್ತಾ ಕತೆ ಬೆಳೆಯುತ್ತದೆ.

ವಿಚಿತ್ರ ಎನಿಸುವಂತಹ ಸಂಬಂಧಗಳನ್ನು ಒಳಗೊಂಡಿರುವ ಕಥಾ ಚಿತ್ರಣ ಇದು. ಅನಿರೀಕ್ಷಿತವಾದ ತಿರುವುಗಳಿಂದ ಪ್ರಾರಂಭವಾಗುವ ಈ ಸಾಂಸಾರಿಕ ಕತೆ, ಅನಿರೀಕ್ಷಿತವಾಗಿ ಮುಕ್ತಾಯಗೊಳ್ಳುತ್ತದೆ. ಸಾಧಾರಣವಾಗಿ ಒಂದುಕುಟುಂಬದಲ್ಲಿ ಅಸಂಭವ ಎನಿಸುವ ಘಟನೆಗಳ ಸುತ್ತ ಹೆಣೆದಿರುವ ಈ ಕಥಾ ಚಿತ್ರಣವನ್ನು ಸಹೃದಯ ಓದುಗರು ಸ್ವೀಕರಿಸುವರೆಂಬ ವಿಶ್ವಾಸ ನನ್ನದು.

ಕಾದಂಬರಿ ಪ್ರಕಟಗೊಂಡು, ಓದುಗರನ್ನು ಆಸಕ್ತಿಯಿಂದ, ಕುತೂಹಲ ದಿಂದ ರಂಜಿಸಿದರೆ, ನನ್ನ ಬರಹಕ್ಕೆ ಸನ್ಮಾನ ಸಿಕ್ಕಂತಾಗುತ್ತದೆ.

ಈ ದಿಸೆಯಲ್ಲಿ ನನಗೆ ಸಹಾಯಕರಾಗಿ, ಕಾದಂಬರಿಯನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ, ಹೊರತರುತ್ತಿರುವ ನಿಮ್ಮ ಪ್ರಕಾಶಕ ವೃಂದದವರಿಗೆಲ್ಲಾ ನನ್ನ ಕೃತಜ್ಞತೆಗಳು.

ವಂದನೆಗಳೊಂದಿಗೆ

– ಪದ್ಮಾಶ್ರೀಧರ್

ANIREEKSHITHA - a social novel by Smt. Padma Shreedhar, 1246, 'dhgurv', 7th B Cross, New Town, Yalahanka, Bangalore-560057 and published by Keerthi Prakashana, 230, Bld.187, KHB, MIG-A4, Sirke Apts. Kengeri Upanagar, Bangalore 560060.

ಅನಿರೀಕ್ಷಿತ

ಅನಿರೀಕ್ಷಿತ

ಓಡಿಸುತ್ತಿದ್ದ ಕಾರನ್ನು ನಿಲ್ಲಿಸಿ, ರಸ್ತೆ ಬದಿಯಲ್ಲಿ ಸೇರಿದ್ದ ಜನ ಸಮೂಹದ ಕಡೆ ಕಣ್ಣು ಹಾಯಿಸಿದ ಗೋಪಾಲ, ಗುಂಪಿನ ಮಧ್ಯೆ ಕಣ್ಣು ಮೂಗನ್ನು ಒರೆಸುತ್ತಾ ನಿಂತಿದ್ದ ಯುವತಿಯ ಕಡೆ ಅವನ ದೃಷ್ಟಿ ಹರಿದು ಅಲ್ಲಿಯೇ ನಿಂತಿತು. ಕೆಂದಾವರೆಯ ಬಣ್ಣದ ಮೊಗವನ್ನು ಮತ್ತಷ್ಟು ಕೆಂಪಾಗಿಸಿದ್ದ ಆ ಯುವತಿ ಅಳುತ್ತಿದ್ದಾಳೆಂದು ಅರ್ಥವಾಯಿತು. ಕಾರಣ ಏನಿರಬಹುದು ಎಂಬ ಕುತೂಹಲ ಮೂಡಿದೊಡನೆ ಸಮೀಪದಲ್ಲಿದ್ದ ವ್ಯಕ್ತಿಯೊಬ್ಬನನ್ನು ಸಂಜ್ಞೆ ಮಾಡಿ ಕರೆದು, ವಿಷಯ ಏನೆಂದು ವಿಚಾರಿಸಿದ. ಆ ವ್ಯಕ್ತಿ ಕೈ ತಿರುಗಿಸುತ್ತಾ "ಪಿಕ್ ಪಾಕೆಟ್ ಸಾರ್.... ಪಿಕ್ ಪಾಕೆಟ್.... ಆ ಹುಡುಗಿಯ ಹ್ಯಾಂಡ್ ಬ್ಯಾಗ್‌ನ ಕಿತ್ಕೊಂಡು ಓಡಿ ಹೋಗಿದ್ದಾನೆ ಕಳ್ಳ" ಎಂದಿತು.

ಮತ್ತೊಮ್ಮೆ ಅವಳ ಕಡೆ ನೋಡಿದಾಗ ಅಯ್ಯೋ ಪಾಪ ಎಂದೆನಿಸಿತ್ತು. ಆದರೆ ತಾನು ಏನು ಸಮಾಧಾನ ಹೇಳಲು ಸಾಧ್ಯ ಎಂದುಕೊಂಡ, ಆ ವ್ಯಕ್ತಿ ಮತ್ತೆ ತಾನಾಗಿಯೇ ನುಡಿದಿತ್ತು.

ಇಂಟರ್‌ವ್ಯೂಗೆ ಹೋಗಬೇಕಾಗಿತ್ತಂತೆ. ಪಾಪ.... ಈಗೇನ್ಮಾಡ್ತಾಳೆ, ಸರ್ಟಿಫಿಕೇಟ್ಸ್‌ಗಳೂ ಕಳೆದು ಹೋದವಲ್ಲ. ಅಷ್ಟೊತ್ನಿಂದ ಅಳ್ತಾನೇ ಇದಾಳೆ, ಅವನೇನು ವಾಪಸ್ಸು ತಂದುಕೊಡ್ತಾನ್ಯೇ ಮನೆಗೆ ಹೋಗಮ್ಮ ಅಂತ ಸಮಾಧಾನ ಹೇಳಿದರೂ ಕೇಳ್ತಾನೆ ಇಲ್ಲ.

ಗೋಪಾಲನಿಗೂ ಕೆಡುಕೆನಿಸಿತ್ತು. ತಾನು ಸಮಾಧಾನ ಹೇಳುವಂತಿದ್ದರೇ ಅಥವಾ ತಾನೇನಾದರೂ ಸಹಾಯ ಮಾಡುವಂತಿದ್ದರೇ.... ಆದರೆ ಕಾರಿನಿಂದ ಇಳಿದು ಹೋಗುವ ಮನಸ್ಸಿಲ್ಲ.

"ಪೋಲೀಸ್ ಕಂಪ್ಲೇಂಟ್ ಕೊಡಬೇಕಾಗಿತ್ತು' ಎಂದ.

"ಆ ಹುಡುಗಿ ಪೊಲೀಸ್‌ಸ್ಟೇಷನ್‌ಗೆ ಹೋಗಕ್ಕೆ ಒಪ್ತಾ ಇಲ್ಲ"

"ಯಾಕಂತೆ? ಕರೀರಿ ಇಲ್ಲಿ ನಾನು ಹೇಳ್ತೀನಿ"

ನೀವು ಹೇಳಿದರೆ ಕೇಳಿ ಬಿಡ್ತಾಳ್ಯ ಎನ್ನುವಂತೆ ಆ ವ್ಯಕ್ತಿ ಇವನನ್ನೇ ದುರುಗುಟ್ಟಿ ನೋಡಿ, ಅವಳು ಇದ್ದಕಡೆಗೆ ನಡೆದ.

"ನೋಡಮ್ಮಾ, ಆ ಕಾರಿನಲ್ಲಿದ್ದಾರಲ್ಲ ಆ ವ್ಯಕ್ತಿ, ನಿನ್ನನ್ನ ಕರೀತಿದಾರೆ ಹೋಗು. ನಿನಗೆ ಸಹಾಯ ಮಾಡಬಹುದು." ಅವನ ಮಾತಿನ ವ್ಯಂಗ್ಯವನ್ನು ಗಮನಿಸಿ, ಆ ಯುವತಿ ಅಂಜಿದಳು. ಯಾರೋ ಏನೋ ತನಗೇಕೆ ಅವನ ಗೊಡವೆ ಎಂದುಕೊಂಡರೂ, ಆ ಜನ ಸಮೂಹದಿಂದ ಹೊರಬರಲು ಒಂದು ಅವಕಾಶ ಎನ್ನುವಂತೆ ಕಣ್ಣು ಮೂಗನ್ನು ಒರೆಸುತ್ತಾ ಮುಂದೆ ಬಂದಳು. ಗೋಪಾಲ ಅವಳನ್ನೇ ಅವಲೋಕಿಸಿದ. ಸುಮಾರು ಇಪ್ಪತ್ತೈದು ಇಪ್ಪತ್ತಾರು ವಯಸ್ಸಿನ, ಲಕ್ಷಣವಾದ ಹುಡುಗಿ, ಉಟ್ಟಿರುವುದು ಅತಿ ಸಾಧಾರಣವಾದ ನೂಲಿನ ಸೀರೆ, ಆದರೂ ಅವಳ ಸೊಗಸು ಕಮ್ಮಿಯೇನಲ್ಲ ಎಂದುಕೊಂಡು, ಸೊಂಪಾಗಿದ್ದ ಅವಳ ದೇಹಶ್ರೀಯನ್ನೇ ಮತ್ತೆ ಮತ್ತೆ ನೋಡಿದ. ಬಂದು ಹತ್ತಿರ ನಿಂತಿದ್ದವಳು.

"ಏನ್ಸಾರ್ ಕರೆದ್ರಂತೆ?" ಎಂದಿದ್ದಳು ಯಾವ ಮುಜುಗರವಿಲ್ಲದೆ.

"ಪರ್ಸು ಕಳೆದುಹೋಯ್ತು ಅಂತ ಅಳ್ತಾ ನಿಂತಿದೀಯಲ್ಲ, ಪೋಲೀಸ್ ಕಂಪ್ಲೇಂಟ್ ಕೊಡಬೇಡವೇ?" ಎಂದಿದ್ದ ತೇಲಿಸಿ ನಗುತ್ತಾ

"ಏನು ಉಪಯೋಗ ಸಾರ್? ಕಳೆದು ಹೋದ, ನನ್ನ ಸರ್ಟಿಫಿಕೆಟ್ಸ್ ಮಾರ್ಕ್ಸ್‌ಕಾರ್ಡ್ ಎಲ್ಲಾ ಇವತ್ತೇ ಈಗಲೇ ಸಿಗುತ್ತಾ? ಖಂಡಿತಾ ಇಲ್ಲ, ಎಂದೋ ಸಿಕ್ಕಿದರೆಷ್ಟು? ಬಿಟ್ಟರೆಷ್ಟು? ಮತ್ತೆ ದುಃಖ ಉಕ್ಕಿತ್ತು ಅವಳಿಗೆ.

"ಅತ್ತರೇನು ಬರುತ್ತೆ? ದುಡ್ಡು ತುಂಬಾ ಇತ್ತಾ ಅದರಲ್ಲಿ?"

"ಹಣದ ಚಿಂತೆನನಗಿಲ್ಲ, ಇಂಟರ್‌ವ್ಯೂಗೆ ಹೋಗೋಕ್ಕೆ ಆಗಲಿಲ್ಲವಲ್ಲ ಅಂತ ಅಳ್ತಾ ಇದೀನಿ ಅಷ್ಟೆ" ಮತ್ತೆ ಕಣ್ಣು ಒರೆಸಿದಳು.

ಕೆಂಪಾಗಿದ್ದ ಅವಳ ಮುಖವನ್ನೇ ನೋಡಿ, 'ವೆರಿ ಸಾರಿ' ಎಂದಿದ್ದ. ಅವಳು ಸುಮ್ಮನೇ ಅವನ ಕಡೆ ನೋಡಿದಾಗ "ಇಂಟರ್‌ವ್ಯೂ ಎಲ್ಲಿತ್ತು? ಯಾವ ಪೋಸ್ಟ್‌ಗೆ?" ಎಂದು ವಿಚಾರಿಸಿದ.

ಇವನಿಗ್ಯಾಕೆ ಅದರ ವಿವರ ಎಂದುಕೊಂಡರೂ, ಕಂಪೆನಿಯ ಹೆಸರನ್ನು,

ಕೆಲಸದ ವಿಷಯವನ್ನು ತಿಳಿಸಿ, "ಹೋಗ್ಲಿ ಬಿಡಿ ಸಾರ್... ನನ್ನ ಅದೃಷ್ಟ ಚೆನ್ನಾಗಿಲ್ಲ, ಕೈಗೆ ಬಂದ ತುತ್ತು ಬಾಯಿಗಿಲ್ಲ" ಎಂದುಕೊಳ್ತೀನಿ ಎಂದಿದ್ದಳು. "ಭಲೇ" ಎಂದುಕೊಂಡ ಅವಳ ಧೈರ್ಯಕ್ಕೆ ತಲೆದೂಗಿ,

ಅವಳಿಗೆ ಸಹಾಯ ಮಾಡಿ, ಅವಳ ಒಲವನ್ನು ಸಂಪಾದಿಸುವ ಮನಸ್ಸಾಯಿತು. "ನೀನು ಧೈರ್ಯವಾಗಿ ಇಂಟರ್‌ವ್ಯೂಗೆ ಹೋಗು, ಯಾವ ಹೆದರಿಕೆಯೂ ಬೇಡ" ಎನ್ನುತ್ತಾ ತನ್ನ ಪರ್ಸಿನಿಂದ ಹತ್ತರ ನೋಟುಗಳನ್ನು ತೆಗೆದು ಅವಳೆಡೆ ನೀಡಿದ. ಅವಳು ಅವನನ್ನೇ ವಿಚಿತ್ರವಾಗಿ ನೋಡಿ ಹಿಂದೆ ಸರಿದಳು. ಅವನು ಮುಗುಳ್ನಕ್ಕು ಮತ್ತೆ ನುಡಿದ.

"ಆ ಕಂಪೆನಿಯಲ್ಲಿ ನನ್ನ ಆಪ್ತ ಸ್ನೇಹಿತನೊಬ್ಬನಿದಾನೆ, ಅವನಿಗೆ ಫೋನು ಮಾಡಿ ವಿಷಯ ತಿಳಿಸ್ತೀನಿ, ಅವನು ನಿನಗೆ ಸಹಾಯ ಮಾಡ್ತಾನೆ ಅಂದ್ಹಾಗೆ ನಿನ್ನ ಹೆಸರು...?" ಅವಳನ್ನೇ ದಿಟ್ಟಿಸಿ ನೋಡಿದ.

"ಸುಗುಣ..." ಅವಳ ಗಂಟಲು ಕಟ್ಟಿದಂತಾಗಿತ್ತು. ಹಾಗೆ ಅನುಮಾನಿಸುತ್ತಾ ನಿಂತವಳೆಡೆಗೆ, ಹತ್ತರ ನಾಲ್ಕಾರು ನೋಟುಗಳನ್ನು ಚಾಚಿದ. ಅವಳು ಮುಂದೆ ಬರದೇ ಹಾಗೇ ನಿಂತಿದ್ದನ್ನು ಕಂಡು ರೇಗಿತು

"ಹಣವಿಲ್ಲದೇ ಹೋಗ್ತೀರಾ? ಆಟೋದಲ್ಲಿ ಹೋಗಿ, ಈಗಾಗಲೇ ಹೊತ್ತಾಗಿದೆ, ನಿನ್ನ ಜತೆಗೆ ಯಾರಿದಾರೆ? ಅತ್ತಿತ್ತ ನೋಡಿದ.

"ನನ್ನ ತಂಗಿ..." ಎನ್ನುತ್ತಾ ಮುಂದೆ ಬಂದು ಹಣವನ್ನು ಕೈಗೆತ್ತಿಕೊಂಡಳು. "ಓ... ಕೇ... ಆಲ್ ದಿ ಬೆಸ್ಟ್" ಎಂದು ಹಾರೈಸಿ, ಕಾರನ್ನು ಮುಂದಕ್ಕೆ ಓಡಿಸಿದ. ಅಲ್ಲಿದ್ದವರೆಲ್ಲ ಬೆರಗಾಗಿದ್ದರು. ಒಂದು ಕಟ್ಟುಕತೆ ಜರುಗಿತು ಎಂಬಂತೆ ಎಲ್ಲರೂ ಅವಳನ್ನೇ ನೋಡುತ್ತಿದ್ದರು. ಅವಳಿಗೆ ಹೀನಾಯವೆನಿಸಿತ್ತು.

"ನೋಡಿದ್ಯೇನಯ್ಯಾ ಆ ದೊಡ್ಡ ಮನುಷ್ಯನ್ನ? ಹುಡುಗಿ, ಸುಂದರಿ ಅಂತ ಸಹಾಯ ಮಾಡಿದಾನೆ. ಇವಳು ಹೇಳಿದ್ದು ಎಷ್ಟು ನಿಜವೋ ಎಷ್ಟು ಸುಳ್ಳೋ ಯಾರಿಗೆ ಗೊತ್ತು!" ಯಾರೋ ಒಬ್ಬ ನುಡಿದಿದ್ದು ಕೇಳಿಸಿತ್ತು.

ಸುಗುಣಂಗೆ ಅವಮಾನವಾಗಿತ್ತು. ತಂಗಿಯನ್ನು ಎಳೆದುಕೊಂಡು ಜನ ಸಮೂಹದಿಂದ ಹೊರಬಂದಳು. ಮೊದಲು ಮಾತನಾಡಿಸಿದ್ದ ವ್ಯಕ್ತಿ ಹತ್ತಿರ ಬಂದ "ಈಗ ಏನ್ಮಾಡ್ತೀಯಮ್ಮಾ...?" ಕೇಳಿದ.

"ನನಗೇನೂ ತಿಳೀತಿಲ್ಲ, ಏನು ಮಾಡಲಿ?"

"ನೀನು ಹೇಳಿದ್ದೆಲ್ಲಾ ನಿಜವಾದರೆ, ಮೊದಲು ಇಂಟರ್‌ವ್ಯೂಗೆ ಹೋಗಿ ಬಾ... ಆಮೇಲೆ ಪೊಲೀಸರಿಗೆ ಕಂಪ್ಲೇಂಟ್ ಕೊಡು. ಕೆಲಸ ಸಿಗುವ ಅದೃಷ್ಟ ಇದ್ದರೆ ಸಿಗಲಿ..."

"ಹಾಗೇ ಮಾಡ್ತೀನಿ" ಎನ್ನುತ್ತಾ ಸುಗುಣ ಬಳಿಯಲ್ಲಿದ್ದ ಆಟೋ ಸ್ಟಾಂಡಿಗೆ ತಂಗಿಯೊಡನೆ ಬಂದಳು. ಒಂದು ಗಳಿಗೆ ಇದರಲ್ಲಿ ಏನಾದರೂ ವಂಚನೆಯಿರಬಹುದೇ ಅಂತನ್ನಿಸಿದರೂ "ಏನಾಗಿ ಬಿಡುತ್ತೋ ನೋಡಿಯೇ ಬಿಡ್ತೀನಿ" ಎಂದು ನಿರ್ಧರಿಸಿ ಆಟೋ ಹತ್ತಿದಳು.

ಇವಳಿಗಾಗಿ ಯಾರೂ ಕಾಯುತ್ತಾ ನಿಂತಿರಲಿಲ್ಲವಾದರೂ, ಸ್ವಲ್ಪ ದೂರದಲ್ಲಿ ಆಟೋ ನಿಲ್ಲಿಸಿ ಬರಿಗೈಯಲ್ಲಿ ಧೈರ್ಯವಾಗಿ ಕಟ್ಟಡದ ಮೆಟ್ಟಿಲನ್ನು ಹತ್ತಿದಳು. ಅತ್ತಿತ್ತ ನೋಡುತ್ತಿದ್ದಾಗ ಆಫೀಸಿನ ಜವಾನನೊಬ್ಬ ಬಂದು ಅವಳ ಹೆಸರನ್ನು ಕೇಳಿದ್ದ. ಅವಳಿಗೆ ಸ್ವಲ್ಪ ಧೈರ್ಯವಾಯಿತು. ಆ ಕೆಲಸ ತನಗೇ ಸಿಕ್ಕಿರೂ ಸಿಗಬಹುದು ಎಂಬ ಭರವಸೆ ಮೂಡಿತ್ತು.

ಇಂಟರ್‌ವ್ಯೂಗೆ ಮುಗಿದಿತ್ತು. ಕೇಳಿದಕ್ಕೆಲ್ಲಾ ಸರಿಯಾಗಿ ಉತ್ತರಿಸಿದಳು. ಎದುರಿಗೆ ಕುಳಿತಿದ್ದವರು ಪರಿಚಯಸ್ಥರಂತೆ ಆತ್ಮೀಯವಾಗಿ ಮಾತನಾಡಿಸಿದಾಗ ಇದೆಲ್ಲಾ ಆ ಪುಣ್ಯಾತ್ಮನ ಮಹಿಮೆ ಎಂದುಕೊಂಡು ಮನಸ್ಸಿನಲ್ಲೇ ಅವನಿಗೆ ವಂದಿಸಿ ಹೊರಬಂದಳು.

ಆ ನೌಕರಿಯ ಅಗತ್ಯ ಅವಳಿಗೆ ನಿಜವಾಗಿಯೂ ಇತ್ತು. ಅನುಕೂಲ ಸ್ಥರಲ್ಲದ ಮನೆಯಲ್ಲಿ ಎರಡನೆಯ ಮಗಳಾಗಿ ಹುಟ್ಟಿದ ಸುಗುಣಳಿಗೆ ಮೊದಲಿನಿಂಥ ಜವಾಬ್ದಾರಿ ಜಾಸ್ತಿ. ಅಂಗಹೀನೆಯಾದ ಹಿರಿಯ ಮಗಳು ವತ್ಸಲಾ ಯಾವುದಕ್ಕೂ ಆಗದವಳು ಚುರುಕಾಗಿದ್ದ ಸುಗುಣಳದೇ ಎಲ್ಲಾ ಕೆಲಸ. ತಂದೆಯ ನೆಚ್ಚಿನ ಮಗಳಾಗಿ ಬೆಳೆದವಳು ಮನೆಯ ಹಿರಿಮಗನಿದ್ದ ಹಾಗೆ ಅಂತ ಎಲ್ಲರೂ ಅನ್ನುತ್ತಿದ್ದರು. ಅವಳ ನಂತರ ಇನ್ನೂ ಮೂರು ಜನ ಹೆಣ್ಣು ಮಕ್ಕಳು ಚಿಕ್ಕವನು ತಮ್ಮ ಅವನನ್ನು ಬೆಳೆಸಿದವಳು ಇವಳೇ...ಓದಿನಲ್ಲಿ ಅಷ್ಟು ಜಾಣೆಯಲ್ಲದಿದ್ದರೂ, ಬಿ.ಕಾಂ. ಪಾಸು ಮಾಡಿ, ಟೈಪ್‌ರೈಟಿಂಗ್ ಕಲಿತು, ಟೈಪಿಸ್ಟ್ ಕೆಲಸಕ್ಕಾಗಿ ಪ್ರಯತ್ನಿಸುತ್ತಿದ್ದಳು. ಈಗ ಇಂಟರ್‌ವ್ಯೂ ನಡೆದಿದ್ದು ರಿಸಪ್ಷನಿಸ್ಟ್ ಕೆಲಸಕ್ಕಾಗಿ, ಅಲ್ಲಿ ಇಲ್ಲಿ ಸಣ್ಣಪುಟ್ಟ ಕೆಲಸ ಮಾಡಿ ಅನುಭವವಿದ್ದುದರ ಜತೆಗೆ, ಅವಳ ಚೆಲುವೂ ಸಹಾಯಕವಾಗಿತ್ತು.

ಈ ಕೆಲಸ ತನಗೇ ಸಿಗಲಿ ಎಂಬ ಆಸೆ ಇದ್ದರೂ, ತನ್ನಲ್ಲಿ ಯಾವ ಒರಿಜನಲ್ ಸರ್ಟಿಫಿಕೆಟ್ಸ್ ಇಲ್ಲ ಎಂಬ ನೆನಪಾದ ಕೂಡಲೇ ದುಃಖ ಉಕ್ಕಿ ಬಂದಿತ್ತು. ತಾನು ಶ್ರಮವಹಿಸಿ ಓದಿ ಪಡೆದಿದ್ದು...ಎಷ್ಟು ಸುಲಭವಾಗಿ ಕಳೆದು ಹೋಯ್ತಲ್ಲಾ. ಅದಿಲ್ಲದೇ ತಾನು ಉದ್ಯೋಗ ಪಡೆಯಲು ಅನರ್ಹಳು ಎಂದು ತಿಳಿದಿತ್ತು. ಆದಷ್ಟು ಬೇಗ ಡೂಪ್ಲಿಕೇಟ್ ಸರ್ಟಿಫಿಕೆಟ್ಸ್‌ಗಳನ್ನು ಮಾಡಿಸಬೇಕು. ಅದಕ್ಕೆ ಹಣ ಖರ್ಚಾಗುತ್ತೆ... ಪೇಪರಿನಲ್ಲಿ ಪ್ರಕಟಣೆ ಹಾಕಿಸಿದರೆ ಕಳೆದದ್ದು ಸಿಕ್ಕಿದರೂ ಸಿಗಬಹುದು. ಇವನ್ಯಾರೋ ಹಿಂದೆ ಮುಂದೆ ನೋಡದೆ

ನನಗೆ ನಲವತ್ತು ಐವತ್ತು ರೂಪಾಯಿಗಳನ್ನು ಕೊಟ್ಟಿದ್ದ. ಅವನಿಗೆ ಹಿಂತಿರುಗಿಸ ಬೇಡವೇ ಅವನ್ಯಾರೋ... ಎಲ್ಲಿದಾನೋ ಅವನ ಹೆಸರನ್ನು ಸಹ ತಾನು ವಿಚಾರಿಸಲಿಲ್ಲ ಎಂದುಕೊಂಡಾಗ ಸಿಟ್ಟೆನಿಸಿತ್ತು.

ಬಹುಃಶ ಅವನು ದಿನಾ ಇದೇ ರಸ್ತೆಯಲ್ಲಿ ಓಡಾಡಬಹುದು. ನಾಳೆ ಇದೇ ಸಮಯದಲ್ಲಿ ಅವನನ್ನು ಕಂಡು ಥ್ಯಾಂಕ್ಸ್ ಹೇಳಿ, ಅವನ ಹಣವನ್ನು ವಾಪಸ್ಸು ಮಾಡಬೇಕು ಎಂದು ನಿಶ್ಚಯಿಸಿಕೊಂಡಳು.

ಎರಡು ಮೂರು ದಿನಗಳು ಅವನಿಗಾಗಿ ಕಾದು ನಿಂತಿದ್ದರೂ, ಮತ್ತೆ ಅವನನ್ನು ಕಾಣಲಾಗಿರಲಿಲ್ಲ, ಅವನ ಕಾರು ಯಾವ ಬಣ್ಣದ್ದೋ, ನಂಬರು ಯಾವುದೋ ಅವಳಿಗೆ ತಿಳಿಯದು. ಮನೆಯಲ್ಲಿ ಈ ವಿಷಯಗಳನ್ನು ತಿಳಿಸಿದರೆ ಖಂಡಿತಾ ಬೈತಾರೆ ಎಂದುಕೊಂಡು ಏನನ್ನು ತಿಳಿಸಿರಲಿಲ್ಲ. ಇಂಟರ್‌ವ್ಯೂ ಚೆನ್ನಾಗಿ ನಡೆಯಿತೆಂದು ಅಷ್ಟೇ ಹೇಳಿದ್ದಳು. ತಂಗಿಗೂ ಹಾಗೆ ಹೇಳುವಂತೆ ತಿಳಿಸಿದ್ದಳು.

"ಅಷ್ಟು ಸುಲಭವಾಗಿ ಈ ಕೆಲಸ ಸಿಗುತ್ತೇನಮ್ಮಾ....ಈ ಕಾಲದಲ್ಲಿ ಲಂಚ, ಇನ್‌ಫ್ಲೂಯೆನ್ಸ್ ಇಲ್ಲದೇ ಯಾರು ಕೊಡ್ತಾರೆ?" ತಂದೆ ಉದಾಸೀನವಾಗಿ ನುಡಿದಾಗ ಅವಳಿಗೆ ರೇಗಿತ್ತು. "ಹೇಗಾದರೂ ಸರಿ ತನಗೇ ಈ ಕೆಲಸ ಸಿಗುವಂತಾಗಲಿ" ಎಂದು ದೇವರನ್ನು ಪ್ರಾರ್ಥಿಸುತ್ತಿದ್ದಳು.

ಈ ಮಧ್ಯೆ ಅವಳ ಹೆಸರಿಗೆ ಬೇರೆ ಕಡೆ ಇನ್ನೊಂದೆರಡು ಇಂಟರ್‌ವ್ಯೂಗೆ ಹೋಗಬೇಕಾಗಿ ಕರೆ ಬಂದಿದ್ದರೂ, ಅವಳು ಹೋಗಿರಲಿಲ್ಲ. ಯೂನಿವರ್ಸಿಟಿಗೆ ಹೋಗಿ ಅರ್ಜಿ ಸಲ್ಲಿಸಿ ಬಂದಿದ್ದಳು. ಅವರು ಪೇಪರಿಗೆ ಪ್ರಕಟಣೆ ಕೊಡುವಂತೆ ತಿಳಿಸಿದ್ದರು. ಎಲ್ಲಾ ಖರ್ಚಿನ ಬಾಬ್ತು ಅವಳು ಕಂಗೆಟ್ಟಳು.

ಈ ಸಮಯದಲ್ಲಿ ಅನಿರೀಕ್ಷಿತವಾಗಿ ಅವಳ ಹೆಸರಿಗೆ ಒಂದು ಪತ್ರ ಬಂದಿತ್ತು. ಈ ವಿಳಾಸಕ್ಕೆ ಬಂದು ತನ್ನನ್ನು ಕಾಣಬೇಕೆಂದು ಮಾತ್ರ ಬರೆದಿತ್ತು. ಹಿಂದೆ ಮುಂದೆ ತಿರುಗಿಸಿ ನೋಡಿದರೂ ಇನ್ನೇನಿರಲಿಲ್ಲ, ಒಂದು ಗಳಿಗೆ ಹೆದರಿಕೆ ಎನಿಸಿದರೂ, ಹೋಗಿ ನೋಡುವುದಾಗಿ ಆಲೋಚಿಸಿದಳು.

ಈ ಪತ್ರವನ್ನು ತೋರಿಸಿದೊಡನೆ ಅಲ್ಲಿದ್ದ ಜವಾನ ಅವಳನ್ನು ಒಳಗಿನ ಹವಾನಿಯಂತ್ರಿತ ಕೋಣೆಯೊಂದಕ್ಕೆ ಕರೆದುಕೊಂಡು ಹೋಗಿದ್ದ. ಸುತ್ತಲಿನ ಹತ್ತಾರು ಕಣ್ಣುಗಳು ಅವಳನ್ನೇ ಗಮನಿಸುತ್ತಿದ್ದರೂ, ದಿಟ್ಟತನದಿಂದ ಒಳಗೆ ಬಂದು ತನ್ನ ಎದುರಿಗೆ ಕೂತಿದ್ದ ವ್ಯಕ್ತಿಯನ್ನೇ ಗಮನಿಸಿದಳು. ಗುರುತು ಸಿಕ್ಕಿತು, ಮನಸ್ಸು ಮುದಗೊಂಡಿತು ಮುಗುಳ್ನಗುತ್ತಾ "ನಮಸ್ಕಾರ ಸಾರ್" ಎಂದಿದ್ದಳು.

"ಕೂತ್ಕೊಮ್ಮ" ಎಂದಿದ್ದ ಗೋಪಾಲ ಕುರ್ಚಿಯನ್ನು ತೋರಿ.

ಸುಗುಣ ಸಂಕೋಚದಿಂದ ಕುಳಿತಳು. ಇವನ್ಯಾರು? ಇವನೇಕೆ ತನ್ನನ್ನು ಇಲ್ಲಿಗೆ ಬರಹೇಳಿದಾನೆ? ತಾನು ಇಂಟರ್‌ವ್ಯೂಗೆ ಬಂದಿದ್ದು ಇವನ ಕಂಪೆನಿಯೇ, ನಾನಾ ಆಲೋಚನೆಗಳು ಅವಳ ತಲೆಯಲ್ಲಿ ಹರಿದಾಡುವಾಗ ಅವನು ಪ್ರಶ್ನಿಸಿದ್ದ.

"ಕೆಲಸದ ಆರ್ಡ್‌ರ್ ಬಂತಾ?" ಅವಳು ತಬ್ಬಿಬ್ಬಾದಳು.

"ಇಲ್ಲ ಆದರೆ ನನಗೇ ಸಿಗುತ್ತೆ ಅನ್ನುವ ನಂಬಿಕೆ ನನಗಿಲ್ಲ"

"ಸಿಕ್ಕಿದೆ... ನಾನು ವಿಚಾರಿಸಿದೆ ಆದರೆ ಸಂಬಳ ಕಡಿಮೆ ಅಲ್ವಾ?"

"ಎರಡು ಸಾವಿರ ನನ್ನ ಅರ್ಹತೆಗೆ ಕಡಿಮೆಯಲ್ಲ..."

"ಎರಡು ಸಾವಿರದಲ್ಲಿ ಈ ಕಾಲದಲ್ಲಿ ಏನು ಮಾಡಕ್ಕಾಗುತ್ತೆ?"

ಅವಳ ಮುಖ ಕೆಂಪಾಗಿತ್ತು. ಆ ಎರಡು ಸಾವಿರ ರೂಪಾಯಿಯಿಂದ ತನ್ನ ಮನೆಯಲ್ಲಿ ಏನೆಲ್ಲಾ ಅಗತ್ಯಗಳನ್ನು ಪೂರೈಸಿಕೊಳ್ಳಬಹುದು ಎಂದು ಈ ಮಹಾಶಯನಿಗೇನು ಗೊತ್ತು ಎಂದುಕೊಂಡು ತಲೆತಗ್ಗಿಸಿದಳು.

"ನಮ್ಮ ಆಫೀಸ್ನಲ್ಲಿ ಪಿ.ಎ. ಕೆಲಸ ಖಾಲಿಯಾಗುತ್ತೆ. ಐದು ಸಾವಿರ ಸಂಬಳ ಕೊಡ್ತೀನಿ... ಸೇರ್ಕೋ... ಆದರೆ" ಎನ್ನುತ್ತಾ ಅವಳನ್ನೇ ದಿಟ್ಟಿಸಿದ.

ಐದು ಸಾವಿರ ಎಂದೊಡನೆ ಅವಳ ನಾಲಿಗೆ ನೀರೂರಿತ್ತು.

"ಸ್ವಲ್ಪ ಕೆಲಸ ಜಾಸ್ತಿ ಇರುತ್ತೆ... ಆಗ ಈಗ ಹೊರಗೆ ಟೂರ್ ಹೋಗಬೇಕಾಗಬಹುದು"

ಅವಳ ಮುಖ ಕಳೆಗುಂದಿತು.

"ಆ ಖರ್ಚೆಲ್ಲಾ ಆಫೀಸಿನವರದ್ದೆ.... ಒಂದೆರಡು ದಿನಗಳ ಮಟ್ಟಿಗೆ ಹೋಗಿ ಬರಬೇಕಾಗುತ್ತೆ ಅದು ಇಷ್ಟವಿದ್ದರೆ.... ನಿನಗೆ ಕೆಲಸ ಗ್ಯಾರಂಟಿ".

"ನಾನು ಯೋಚಿಸಿಬಿಟ್ಟು ಹೇಳ್ತೀನಿ...."

"ಆದಷ್ಟು ಬೇಗ ತಿಳಿಸಬೇಕು... ನಾವು ಅಡ್ವರ್ಟೈಸ್ ಮೆಂಟ್ ಕೊಡಿಸಿ ಇಂಟರ್ ವ್ಯೂ ನಡೆಸಿದ ಮೇಲೆ ಏನೂ ಮಾಡಕ್ಕಾಗಲ್ಲ."

"ಆದಷ್ಟು ಆದಷ್ಟು ಬೇಗ ತಿಳಿಸ್ತೀನಿ" ಪ್ಯೂನ್ ತಂದಿಟ್ಟ ಕಾಫಿಯನ್ನು ಕುಡಿಯುವಂತೆ ಒತ್ತಾಯಿಸಿದಾಗ ಅವನ ಒಳ್ಳೆಯತನಕ್ಕೆ ಬೆರಗಾದಳು. ಆದರೂ ಏನೋ ದಿಗಿಲು. ಅವನಿಗೆ ವಂದಿಸಿ ಹೊರನಡೆದಳು. ಗೋಪಾಲ ಅವಳ ಹರವಾದ ಬೆನ್ನನ್ನೇ ದಿಟ್ಟಿಸಿದ. ಮೋಟಾದ ಗುಂಗುರು ಕೂದಲಿಗೆ ಸಿಕ್ಕಿಸಿದ್ದ ಕೆಂಪು ಗುಲಾಬಿ ಆಕರ್ಷಕವಾಗಿ ಕಂಡುಬಂದಿತು. ನನಗೂ ಕೆಂಪು ಗುಲಾಬಿ ಕಂಡರೆ ಇಷ್ಟ.... ಈ ಹುಡುಗಿಯು ಕೆನ್ನೆಗಳೂ ಕೆಂಪಾಗಿವೆ. ಎಷ್ಟು ಮುದ್ದಾಗಿದ್ದಾಳೆ.... ತನ್ನಲ್ಲೇ ನುಡಿದುಕೊಂಡ.

ಆ ಗಳಿಗೆಯಲ್ಲಿ ಅವನಿಗೆ ತನ್ನ ಮಡದಿ ಲಲಿತ ನೆನಪಿಗೆ ಬಂದಳು.

ಲಲಿತ ಸುಂದರಿಯೇ.... ಆದರೆ ಈ ಹುಡುಗಿಯ ಪರ್ಸನಾಲಿಟಿ ಅವಳಿಗೆ ಎಂದೂ ಇರಲಿಲ್ಲ ಅಂತೆನ್ನಿಸಿದಾಗ ಅವನಿಗೆ ಪೆಚ್ಚಾಗಿತ್ತು.

ಲಲಿತ ಗೋಪಾಲನ ಸೋದರ ಮಾವನ ಮಗಳು. ಈ ದಿನದ ಸುಖ ಸೌಲಭ್ಯ, ಅಂತಸ್ತು, ಐಶ್ವರ್ಯ ಎಲ್ಲವೂ ದೊರಕಿದ್ದು ಲಲಿತನಿಂದ ಎನ್ನುವುದನ್ನು ಎಂದೂ ಮರೆತಿರಲಿಲ್ಲ.

ಸಾಧಾರಣ ಸ್ಥಿತಿವಂತರ ಮನೆಯಲ್ಲಿ ಏಳು ಮಕ್ಕಳ ನಡುವೆ ಒಬ್ಬನಾಗಿ ಹುಟ್ಟಿ ಬೆಳೆದವನು. ಸ್ವಲ್ಪ ತಿಳುವಳಿಕೆ ಬಂದ ಸಮಯದಲ್ಲಿ ಆ ಮನೆಯಲ್ಲಿ ತನಗೆ ತುಂಬಾ ಅನ್ಯಾಯವಾಗುತ್ತಿದೆ ಎಂದು ಭಾವಿಸಿ ಕೊರಗಿದವನು. ಅಣ್ಣಂದಿರಿಬ್ಬರೂ, ಎಸ್.ಎಸ್.ಎಲ್.ಸಿ. ಪಾಸಾದ ನಂತರ, ತಂದೆಯ ಮಾತಿಗೆ ಒಪ್ಪಿ, ಟಿ.ಸಿ.ಎಚ್. ಮಾಡಿ ಸ್ಕೂಲ್ ಟೀಚರಾದರು. ಇವನಿಗೆ ಅವಮಾನವಾದಂತಾಗಿತ್ತು. ಇಂಜಿನಿಯರ್ರು, ಡಾಕ್ಟರು ಆಗುವ ಅದೃಷ್ಟ ತಮ್ಮ ಹಣೆಯಲ್ಲಿ ಕೊಡಿಸಲಾಗದ ತಂದೆ-ತಾಯಿಗಳಿಗೆ ಇಷ್ಟು ಮಕ್ಕಳೇಕೆ ಎಂದು ಅಸಹ್ಯವಾಗಿತ್ತು. ತಾಯಿಯಿಡನೆ ಇದೇ ಮಾತನ್ನಾಡಿದಾಗ "ನಿನಗೇನೂ ತಿಳಿಯದು. ಹೀಗೆಲ್ಲಾ ಮಾತನಾಡಬಾರದು" ಸುಮ್ಮನಿರು ಎಂದು ಗದರಿದ್ದಳು.

"ನಾನು ಮಾತ್ರ ಏನೇ ಆದರೂ, ಸ್ಕೂಲ್ ಟೀಚರಾಗುವುದಿಲ್ಲ, ನಾನು ಇಂಜನಿಯರ್ ಆಗಲೇಬೇಕು....." ಹಠದಿಂದ ನುಡಿದಿದ್ದ.

"ನಿನ್ನ ಅಕ್ಕಂದಿರಿಗೆ ಮದುವೆ ಆಗಬೇಡವೆ? ನಿಮ್ಮ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುತ್ತಿದ್ದರೆ ನೀವುಗಳು ಸಂಪಾದಿಸುವುದು ಯಾವಾಗ?"

"ಮದುವೆ, ಜವಾಬ್ದಾರಿ ನಿಮಗೆ ಸೇರಿದ್ದು, ಅದಕ್ಕೆ ನಮ್ಮನ್ನೇಕೆ ಎಳೆಯಬೇಕು? ಹೀಗೇ ಹೇಳ್ತಾ ಇದ್ದರೆ, ನಾನು ಈ ಮನೆ ಬಿಟ್ಟು ಹೋಗಿ ಬೇರೆ ಊರಿನಲ್ಲಿ ವಾರಾನ್ನ ಮಾಡಿದರೂ ಸರಿ, ನಾನು ಕಾಲೇಜಿಗೆ ಸೇರಿಯೇ ಸೇರ್ತೀನಿ" ತಾಯಿ ಏನನ್ನೂ ಆಡಿರಲಿಲ್ಲ.

ಹದಿನಾರು ವರ್ಷಕ್ಕೆ ಎಸ್ಸೆಸ್ಸೆಲ್ಸಿ ಮುಗಿಸಿದ. ಕಾಲೇಜಿಗೆ ಸೇರುವ ಆಸೆಯನ್ನು ಹೊತ್ತಿದ್ದವನಿಗೆ ಆ ಅವಕಾಶ ತಾನಾಗಿಯೇ ಒದಗಿಬಂತು. ಅಕ್ಕ ಪಾರ್ವತಿಯ ಮದುವೆಗೆ ಅವನ ಸೋದರಮಾವ ರಂಗಣ್ಣ ತನ್ನ ಹೆಂಡತಿ ಹಾಗೂ ಮಗಳೊಡನೆ ಬಂದಿದ್ದ. ಲಲಿತ ಅವನ ಏಕಮಾತ್ರ ಪುತ್ರಿ. ಬೆಳ್ಳಗೆ ತೆಳ್ಳಗೆ ಕರ್ಪೂರದ ಬೊಂಬೆಯಂತೆ ಇದ್ದ ಲಲಿತ, ನಯ ನಾಜೂಕಿನಿಂದ ಎಲ್ಲರನ್ನೂ ಆಕರ್ಷಿಸಿದ್ದಳು. ಹದಿಮೂರು ವರ್ಷದ ಹುಡುಗಿ ಲವಲವಿಕೆ ಯಿಂದ ಓಡಾಡುತ್ತಿದ್ದಾಗ ಯಾರೋ 'ಅವಳಿಗೆ ಯಾವಾಗ ಮದುವೆ?' ಎಂದು ವಿಚಾರಿಸಿದ್ದರು ರಂಗಣ್ಣ.

"ಈಗಲೇ ಮದುವೆಗೇನು ಅವಸರ? ಇನ್ನು ಓದಿ ಬರೆಯುವ ವಯಸ್ಸು

ಮೊದಲು ವಿದ್ಯಾಭ್ಯಾಸ ಮುಗಿಯಲಿ" ಎಂದಿದ್ದ. ಈ ಮಾತನ್ನು ಗೋಪಾಲ ಕೇಳಿಸಿಕೊಂಡಿದ್ದ. ಸಮಯ ಸಾಧಿಸಿ ಮಾವನೊಡನೆ ಮಾತನಾಡಿದ.

"ಮಾವ, ನನಗೂ ತುಂಬಾ ಓದಬೇಕು ಅಂತ ಆಸೆ. ಆದರೆ ಅಪ್ಪ ಅಮ್ಮನಿಗೆ ನಾನು ಕೆಲಸಕ್ಕೆ ಸೇರಲಿ ಅಂತ ಆಸೆ.... ನನಗೆ ಇಷ್ಟವಿಲ್ಲ. ನೀವು ಸ್ವಲ್ಪ ಅಮ್ಮನಿಗೆ ಹೇಳ್ತೀರಾ?" ವಿನೀತನಾಗಿ ಕೇಳಿದ್ದ.

"ನಾನೇನೋ ಹೇಳ್ತೀನಪ್ಪಾ...ನಿಮ್ಮಮ್ಮ ಒಪ್ಪದಿದ್ದರೆ?"

"ನನ್ನನ್ನು ಹೇಗಾದರೂ ಮಾಡಿ ಈ ಊರಿನಿಂದ ಕರೆದುಕೊಂಡು ಹೋಗಿ...ಯಾವುದಾದ್ರೂ ಹಾಸ್ಟೆಲ್ಲಿನಲ್ಲಾದ್ರೂ ಇದ್ದುಕೊಂಡು ಓದ್ತೀನಿ"

ಆಗ ರಂಗಣ್ಣ ಯೋಚಿಸಿದ್ದೇ ಬೇರೆ, ತನ್ನ ತಂಗಿಯ ಹತ್ತಿರ ಉಪಾಯವಾಗಿ ಮಾತನಾಡಿದ್ದ.

"ನನಗೂ ಗಂಡು ಮಕ್ಕಳಿಲ್ಲ, ಗೋಪಾಲನ್ನ ಮಗನಂತೆ ಸಾಕಿಕೊಳ್ತೀನಿ, ಅವನನ್ನು ಓದಿಸ್ತೀನಿ. ನನ್ನ ಜತೇಲಿ ಕಳಿಸಿಕೊಡು"

ಆಗ ಆಕೆ ಯೋಚಿಸಿದ್ದೇ ಬೇರೆ.

ಮಗನಂತೆ ಓದಿಸಿ, ಒಳ್ಳೆ ಕೆಲಸಕ್ಕೆ ಸೇರಿಸಿದರೆ, ನಮ್ಮ ಕಷ್ಟವೂ ಪರಿಹಾರವಾಗುತ್ತದೆ. ಗೋಪಾಲನ ಆಸೆಯೂ ನೆರವೇರುತ್ತದೆ ಎಂದುಕೊಂಡು ಸಲೀಸಾಗಿ ಒಪ್ಪಿದಳು. ಆದರೆ ಅಪ್ಪನ ತಕರಾರು ಇದ್ದೇ ಇತ್ತು.

"ಅವರಿಬ್ಬರೂ ನಾನು ಹೇಳಿದ ಹಾಗೆ ಕೇಳಿಕೊಂಡಿಲ್ವಾ! ಇವನದ್ದೇನು ಹೆಚ್ಚುಗಾರಿಕೆ? ನಮಗೆ ಯಾರ ಮುಲಾಜೂ ಬೇಡ...."

ಆದರೂ ಗೋಪಾಲ ಅಪ್ಪನ ಮಾತನ್ನ ಮೀರಿ, ಮಾವನ ಜತೆ ಬೆಂಗಳೂರಿಗೆ ಬಂದು ಕಾಲೇಜಿಗೆ ಸೇರಿದ್ದ. ತಂದೆ ಕೂಗಾಡಿ ರಂಪ ಮಾಡಿದ್ದರಿಂದ ತನ್ನೂರಿಗೆ ಹೋಗುವುದನ್ನೇ ಬಿಟ್ಟುಬಿಟ್ಟ. ಹುಟ್ಟಿದ ಮನೆಯಿಂದ ದೂರವಾದವನಿಗೆ ಹತ್ತಿರವಾದವಳು ಲಲಿತ.

ನಾಜೂಕಾಗಿದ್ದ ಲಲಿತ, ಗೋಪಾಲನನ್ನು ವಿಶ್ವಾಸವಾಗಿ ಕಾಣುತ್ತಿದ್ದಳು. ಯಾವ ಸಂಕೋಚವೂ ಇಲ್ಲದೇ, ಯಾವ ಬಿಗುಮಾನವೂ ಇಲ್ಲದೇ ಅವನೂ ತಮ್ಮವನೇ ಎಂಬ ಆತ್ಮೀಯತೆಯಿಂದ ಮಾತನಾಡಿಸುತ್ತಿದ್ದವಳನ್ನು ಗೋಪಾಲ ಮೆಚ್ಚಿದ. ಲಲಿತ ಎಷ್ಟು ಒಳ್ಳೆಯವಳು ಎಂದುಕೊಂಡ. ತನ್ನ ಮನೆಯಲ್ಲಿ ತನ್ನ ಅಕ್ಕತಂಗಿಯರು ಸಹ ಹೀಗೆ ವಿಶ್ವಾಸವನ್ನು ತೋರಿರಲಿಲ್ಲ ಎಂದುಕೊಂಡ. ಲಲಿತ ಅವನ ನೆಚ್ಚಿನ ಸ್ನೇಹಿತೆಯಾದಳು.

ಲಲಿತ, ಎಸ್ಸೆಸ್ಸಲ್ಸಿ ಪಾಸಾದ ನಂತರ ಓದುವುದನ್ನು ಬಿಟ್ಟಳು. ಸಂಗೀತ ಕಲಿತಳು, ಹೊಲಿಗೆ ಕಲಿತಳು, ಮನೆ ಕೆಲಸಗಳನ್ನು ಮಾಡಿ ತಾಯಿಗೆ ಸಹಾಯಕಳಾದಳು. ಶ್ರೀಮಂತರ ಮನೆಯ ಒಬ್ಬಳೇ ಮಗಳೆಂದು ಜಂಭಪಡದೇ

ಸೋಮಾರಿಯಾಗಿ ಕಾಲ ಕಳೆಯದೇ ಸ್ನೇಹಮಯಿಯಾಗಿದ್ದ ಲಲಿತ ದಿನದಿನಕ್ಕೂ ಅವನಿಗೆ ಹತ್ತಿರವಾದಳು. ಒಂದು ದಿನ ಕೇಳಿದ್ದ.

"ಕಾಲೇಜಿಗೆ ಯಾಕೆ ಹೋಗಬಾರದು? ಮನೇಲೇ ಕೂತು ಏನ್ಮಾಡ್ತೀಯ?"

"ನಾನು ಓದಿ ಏನು ಮಾಡಬೇಕಾಗಿದೆ? ನನಗೆ ಇರುವ ವಿದ್ಯೆ ನನಗೆ ಸಾಕು.... ಅಮ್ಮನಂತೂ ನನ್ನ ಓದು ಮುಗಿದರೆ ಸಾಕು ಅಂತ ಕಾದಿದ್ದಳು" ಲಲಿತ ನಕ್ಕಾಗ ಅವನು ನುಡಿದಿದ್ದ

"ಈ ದೊಡ್ಡವರಿಗೇಕೆ ಮಕ್ಕಳ ಓದಿನ ಮೇಲೆ ಕಣ್ಣೋ? ಬೇಗ ಕೆಲಸಕ್ಕೆ ಸೇರಿ ಬೇಗ ಮದುವೆಯಾಗಿ ಸಂಸಾರವಂತರಾಗಬೇಕು ಅಂತ ಹಾರೈಸುತ್ತಾರೆ."

"ಅದರಲ್ಲಿ ತಪ್ಪೇನು!" ಅವಳು ನುಡಿದಾಗ, ಅವನಿಗೇ ಬೇಸರ.

"ನೀನು ಹೀಗೆ ಮಾತನಾಡಬೇಡ ಲಲಿತಾ.... ಓದುವಾಗ ಓದಬೇಕು ಉಳಿದದ್ದೆಲ್ಲಾ ನಿಧಾನವಾಗಿ ಆಗಲಿ, ನೀನು ಮಾತ್ರ ಬೇಗ ಮದುವೆಯಾಗ ಬಾರದು" ಅವಳಿಗೆ ಸಲಹೆ ನೀಡಿದ್ದ.

ಲಲಿತ ನಕ್ಕು ಹೊರಟುಹೋಗಿದ್ದಳು.

ಗೋಪಾಲನ ಅಣ್ಣನ ಮದುವೆ ಗೊತ್ತಾಗಿತ್ತು, ಎಲ್ಲರೂ ಹೋಗಲೇ ಬೇಕಾಗಿತ್ತು. ಲಲಿತೆಗೆ ಸಡಗರ, ಗೋಪಾಲನಿಗೆ ಇಷ್ಟವಿರಲಿಲ್ಲ ಆದರೂ ಹೊರಟಿದ್ದ

ಮದುವೆ ಸಮಾರಂಭ ಮುಗಿದಿತ್ತು. ಗೋಪಾಲನ ಎರಡನೇ ಅಣ್ಣ ಗುಟ್ಟಾಗಿ ಲಲಿತಳ ಬಳಿಗೆ ಬಂದಿದ್ದ.

"ನನ್ನನ್ನ ಮದುವೆಯಾಗ್ತೀಯಾ ಲಲಿತಾ?" ಕೇಳಿದ್ದ.

ಲಲಿತ ಕೆಂಪಾಗಿ ಅಲ್ಲಿಂದ ಸರಿದು ಹೋಗಿದ್ದಳು. ಯಾರಿಗೂ ತಿಳಿಯದಂತೆ ಗುಟ್ಟಾಗಿ ಅತ್ತು ಕಣ್ಣೊರೆಸಿಕೊಂಡಿದ್ದಳು. ಲಲಿತ ಆ ವಿಷಯವನ್ನು ಯಾರಿಗೂ ತಿಳಿಸಿರಲಿಲ್ಲ.

ನಾಲ್ಕೈದು ತಿಂಗಳ ನಂತರ ರಂಗಣ್ಣ ಒಂದು ದಿನ ಗೋಪಾಲನೊಡನೆ ಗುಟ್ಟಾಗಿ ಮಾತನಾಡಿದ.

"ನಿನ್ನ ತಾಯಿಯಿಂದ ಕಾಗದ ಬಂದಿದೆ. ಲಲಿತನ್ನ ಮಾಧು ಮೆಚ್ಚಿದಾನಂತೆ. ನಿನ್ನ ಅಭಿಪ್ರಾಯವೇನು?"

ಗೋಪಾಲ ತಬ್ಬಿಬ್ಬು ಅನಿರೀಕ್ಷಿತ ವಾರ್ತೆ ಆದರೂ ನುಡಿದಿದ್ದ.

"ಲಲಿತನ್ನ ಕೇಳಿದ್ರಾ? ಅವಳೇನಂತಾಳೆ?"

"ಅವಳಿಗೆ ಏನು ತಿಳಿಯುತ್ತೆ! ಅವಳಿನ್ನು ಚಿಕ್ಕವಳು...."

"ಹಾಗೆನ್ನಬೇಡಿ, ಅವಳನ್ನು ಕೇಳದೇ ಮದುವೆ ನಿಶ್ಚಯಿಸಬೇಡಿ"

"ಹಾಗೇ ಆಗಲಿ, ಆದರೆ.... ನನ್ನ ಮನಸ್ಸಿನಲ್ಲಿದ್ದುದೇ ಬೇರೆ.... ನೀನು ಏನೆಂದುಕೊಳ್ತೀಯೋ..." ಅನುಮಾನಿಸಿದ್ದವನನ್ನೇ ನೋಡಿ ನುಡಿದ.

"ಪರವಾಗಿಲ್ಲ ಹೇಳಿ...."

"ಲಲಿತೂನ ನಿನಗೇ ಮಾಡಿಕೊಡಬೇಕು ಅಂತ ನನ್ನ ಆಸೆ. ನಿನಗಿಷ್ಟವಿದ್ದರೆ ಈಗಲೇ ತಿಳಿಸು. ಹಾಗೇ ಬಲವಂತವೇನಿಲ್ಲ...ಆದರೆ"

"ಮಾವ, ನಿಮ್ಮಾಸೇನ ತಿರಸ್ಕರಿಸುವಷ್ಟು ಶಕ್ತಿ ನನಗಿಲ್ಲ. ಆದರೆ ಲಲಿತನ್ನು ಒಂದು ಮಾತು ಕೇಳಿ...ಅವಳ ಆಸೆ ಏನಿದೆಯೋ...ಆದರೆ ನಾನೀಗಲೇ ಸದ್ಯಕ್ಕಂತೂ ಮದುವೆಯಾಗುವವನಲ್ಲ."

"ಆಗಲಿ ಮದುವೆ ನಿಧಾನವಾಗಿಯೇ ಆಗಲಿ, ಆತುರವೇನಿಲ್ಲ. ನಿನ್ನ ವಿದ್ಯಾಭ್ಯಾಸ ಮುಗಿದು, ಕೆಲಸ ಸಿಗಲಿ... ನಾನೇ ಕಾಗದ ಬರೆದು ಮದುವೆ ನಿಶ್ಚಯಿಸುತ್ತೇನೆ" ಮಾವ ಅತ್ತ ಹೋದ ಮೇಲೆ ಗೋಪಾಲ ತಲೆ ಕೆಡಿಸಿಕೊಂಡ.

ತನ್ನ ಮದುವೆ ಬಗ್ಗೆ ಯೋಚಿಸಿರಲೇ ಇಲ್ಲ. ಈ ಮಾಧುಗೇನು ಅವಾಂತರವೋ... ನನ್ನ ತಲೆ ಕೆಡಿಸಿದ ಎಂದು ಬೈದುಕೊಂಡರೂ ಯೋಚನೆ ತಪ್ಪಿರಲಿಲ್ಲ.

ತಾನು ಈ ಮನೆಗೆ ಬಂದು ಸೇರಿದ್ದು ಮಾವನ ದಯೆಯಿಂದ ಇಲ್ಲದಿದ್ದರೆ ತಾನು ಇಂಜಿನಿಯರಿಂಗ್ ಕೋರ್ಸ್‌ಗೆ ಸೇರಲು ಸಾಧ್ಯವಿತ್ತೆ! ಈ ಮನೆಯ ಋಣ ನನ್ನ ಮೇಲಿದೆ. ಲಲಿತ ನನ್ನ ಭಾಗ್ಯಲಕ್ಷ್ಮಿ ಅವಳನ್ನು ನಿರಾಕರಿಸಿ ನಾನು ಹೇಗೆ ಇರಬಲ್ಲೆ? ಈ ಆಸ್ತಿಪಾಸ್ತಿಯೆಲ್ಲಾ ನನ್ನದು... ಇದನ್ನೆಲ್ಲಾ ಮಾಧು ಸಹ ಬಯಸಿದನೇನೋ... ಅದನ್ನು ಅವನಿಗೆ ಬಿಟ್ಟುಕೊಡಲು ತಾನೇನು ಮಂಕನೇ? ಇದ್ದಕ್ಕಿದ್ದಂತೆ ಗೋಪಾಲನ ಯೋಚನಾ ಲಹರಿಯ ದಿಕ್ಕು ನಾನಾ ಕಡೆಗೆ ಹರಿದಾಡಿತು.

ಮಾವನ ಆಸೆಯಂತೆ ಲಲಿತ ನನ್ನ ಮಡದಿಯಾಗುತ್ತಾಳೆ. ಆದರೆ ಅವಳನ್ನು ಒಂದು ಮಾತು ಕೇಳಬೇಡವೇ ಎಂದುಕೊಂಡು ಅವಳನ್ನು ಹುಡುಕಿಕೊಂಡು ಹೋಗಿದ್ದ.

"ಲಲಿತಾ, ನನ್ನನ್ನು ಮದುವೆಯಾಗೋದು ನಿನಗೆ ಇಷ್ಟಾನಾ?"

ಅವಳು ನಾಚಿ, ಹೊರಡಲಿದ್ದವಳನ್ನು ಹಿಡಿದು ನಿಲ್ಲಿಸಿದ.

"ನಾಚಿಕೊಂಡರೆ ಹೇಗೆ? ಹೇಳು... ನಿನ್ನಿಷ್ಟ ಏನೂಂತ ಹೇಳು ಪರವಾಗಿಲ್ಲ" ಪುಸಲಾಯಿಸಿದ.

"ನನಗೆ ಒಪ್ಪಿಗೆ..." ಮೆಲುದನಿಯಲ್ಲಿ ಅವಳು ನುಡಿದಾಗ ಅವನ ಮನಸ್ಸು ಕುಣಿದಾಡಿತು.

"ಸರಿ...ಆದರೆ ನಮ್ಮ ಮದುವೆ ಈಗಲೇಬೇಡ... ನನ್ನ ಪರೀಕ್ಷೆ ಮುಗಿದು ಕೆಲಸ ಸಿಕ್ಕಿದ ಮೇಲೆ ಮದುವೆ ಮಾತು... ಏನಂತೀಯಾ?"

"ನಾನು ಕಾಯ್ತೀನಿ ಪರವಾಗಿಲ್ಲ" ಎಂದು ನುಡಿದು ನಕ್ಕು ಅಲ್ಲಿಂದ ಸರಿದಿದ್ದಳು.

ಗೋಪಾಲ ಪೆಚ್ಚಾದ. 'ನಾನು ರಾತ್ರಿಯೆಲ್ಲಾ ಯೋಚಿಸಿ ಒಂದು ತೀರ್ಮಾನಕ್ಕೆ ಬಂದಿದ್ದೆ. ಇವಳು ಎಷ್ಟು ಬೇಗ ಉತ್ತರಿಸಿಬಿಟ್ಟಳು... ನಾನು ಪೆದ್ದ... ಇವಳು ಜಾಣೆ' ಎಂದುಕೊಂಡು ನಗುತ್ತಾ ಅಲ್ಲಿಂದ ಸರಿದ.

ಗೋಪಾಲನೇ ಈ ಮನೆಯ ಅಳಿಯ ಎಂದು ನಿರ್ಧಾರವಾದ ಮೇಲೆ ಅವನ ತಂದೆ ಮನೆಯವರು ಅಸಂತುಷ್ಟತೆಯಿಂದ ದೂರವಾದರು. ಅವನಿಗೇನು? ಇಂಜಿನಿಯರ್ ಆದಮೇಲೆ, ಯಾವುದಾದರೂ ಶ್ರೀಮಂತರ ಮನೆ ಹೆಣ್ಣು ಸಿಗುತ್ತಿತ್ತು ಮಾಧುಗೆ ಲಲಿತನ್ನ ತಂದುಕೊಂಡಿದ್ದರೆ, ನಾವೂ ಶ್ರೀಮಂತರಾಗುತ್ತಿದ್ದೆವು ಎಂದುಕೊಂಡಿದ್ದರು.

ಗೋಪಾಲನಿಗೆ ತಾಯಿ ಕಾಗದ ಬರೆದಿದ್ದಳು.

"ಲಲಿತ ನಿನಗೆ ತಕ್ಕವಳಲ್ಲ... ನಿನಗೆ ಬೇರೆ ಹೆಣ್ಣನ್ನು ನೋಡ್ತೀವಿ, ನೀನು ಮಾವನ ಮಾತಿಗೆ ಮಣಿಯಬೇಡ" ಹಾಗೇ ಹೀಗೆ ಅಂತ. ಆದರೆ ಗೋಪಾಲ ತಲೆ ಕೆಡಿಸಿಕೊಳ್ಳಲಿಲ್ಲ. ಆದರೆ ಅಂದಿನಿಂದ ಲಲಿತಳನ್ನು ಗುಟ್ಟಾಗಿ ಪ್ರೀತಿಸಲಾರಂಭಿಸಿದ್ದ. ಅವಳು ತನ್ನ ಭಾಗದ ದೇವತೆ ಎಂಬಂತೆ ಅವಳ ಮೇಲೆ ವಿಶ್ವಾಸವೂ ಅಧಿಕವಾಯಿತು.

ಮಾಧೂಗೆ ಮದುವೆ ನಿಶ್ಚಯವಾಗಿತ್ತು. ಗೋಪಾಲ ಪರೀಕ್ಷೆಯ ನೆಪಹಾಕಿ ಮದುವೆಗೆ ಹೋಗಿರಲಿಲ್ಲ. ರಂಗಣ್ಣ ಒಂದು ದಿನದ ಮಟ್ಟಿಗೆ ಹೋಗಿಬಂದಿದ್ದರು.

ಕಡೆಯ ವರ್ಷದ ಪರೀಕ್ಷೆ ಮುಗಿಯುತ್ತಿದ್ದಂತೆಯೇ, ಗೋಪಾಲ ಕೆಲಸ ಹುಡುಕಲು ಪ್ರಾರಂಭಿಸಿದ್ದ. ಒಂದು ದಿನ ದಿಢೀರನೆ ತಂದೆತಾಯಿ ಬಂದಿಳಿದರು. ಅವನನ್ನು ಒಬ್ಬನನ್ನೇ ಕರೆದು, ಕೆಲವು ಶ್ರೀಮಂತರ ಮನೆಯ ಹೆಣ್ಣುಗಳ ಜಾತಕವನ್ನು ನೋಡಿರುವುದಾಗಿ ತಿಳಿಸಿದಾಗ ಕೆರಳಿದ.

"ನಾನು ಬೇರೆ ಯಾರನ್ನು ಮದುವೆಯಾಗುವುದಿಲ್ಲ....ನನಗೆ ಬೇರೆ ಹೆಣ್ಣುಗಳನ್ನು ತೋರಿಸಲೇ ಬೇಡಿ" ಕಟುವಾಗಿ ನುಡಿದಾಗ ತಾಯಿ ದೂಷಿಸಿದ್ದಳು.

"ನೀನು ಇವರ ಮನೆಗೆ ಕಾಲಿಟ್ಟು, ನಮ್ಮನ್ನೆಲ್ಲ ಮರೆತೇಬಿಟ್ಯಾ! ನಾವು ನಿನ್ನನ್ನು ಹೆತ್ತವರು ತಿಳೀತೇ...? ನೀನಿನ್ನು ಚಿಕ್ಕವನು, ನಿನಗೆ ತಿಳಿಯುವುದಿಲ್ಲ. ನಿನ್ನ ರೂಪಿಗೆ, ವಿದ್ಯೆಗೆ ಲಲಿತ ತಕ್ಕವಳಲ್ಲ... ಹೋಗಲಿ ಅಂದರೆ ದೃಢಕಾಯ ವಾಗಿಯೂ ಇಲ್ಲ.... ಕೃಶವಾಗಿದ್ದಾಳೆ... ನೀನು ಸುಮ್ಮನಿದ್ದು ಬಿಡು. ನಾವು

ಎಲ್ಲಾ ನೋಡಿಕೊಳ್ತೀವಿ"

"ಅವಳು ಹೇಗೇ ಇದ್ದರೂ ಅವಳೇ ನನ್ನ ಹೆಂಡತಿಯಾಗುವವಳು ನೀವ್ಯಾರೂ ನನ್ನ ಮದುವೆ ವಿಷಯಕ್ಕೆ ಬಾಯಿ ಹಾಕಬೇಡಿ..."

"ಏನೋ ಹೀಗಂತೀಯಾ? ಚೆನ್ನಾಗಿದೆ ನಿನ್ನ ಮಾತು... ನಾವಿನ್ನೂ ಬದುಕಿದೀವಿ. ನಮಗಿಂತ ಇವರುಗಳೇ ಹೆಚ್ಚೇ ನಿನಗೆ?"

"ಹೌದು ನನಗೆ ಮಾವನೇ ಹೆಚ್ಚು. ನನ್ನ ಈ ದಿನದ ಪ್ರಗತಿಗೆ ಮಾವನೇ ಕಾರಣ. ಇಲ್ಲದೇ ಇದ್ದಿದ್ದರೆ, ನಾನೂ ಒಬ್ಬ ಗುಮಾಸ್ತನೋ ಸ್ಕೂಲು ಮೇಷ್ಟ್ರೋ ಆಗಿರಬೇಕಾಗಿತ್ತಿತ್ತು..."

"ನಿನ್ನ ಅಣ್ಣಂದಿರು ಬಡವರು ಅಂತ ಹಂಗಿಸಬೇಡ. ಅವರೂ ನಿನ್ನ ಹಾಗೇ ಆಡಿದ್ದಿದ್ದರೆ...? ನೀನು ನಮ್ಮ ಮಗನಾಗಿ ಸಹಾಯ ಮಾಡುವುದನ್ನು ಬಿಟ್ಟು ವ್ಯತಿರಿಕ್ತವಾಗಿ ಮಾತನ್ನಾಡ್ತೀಯಲ್ಲ.

"ನೀನೂ ಕಷ್ಟಪಟ್ಟು ನನ್ನನ್ನು ಓದಿಸುವ ಮಾತನ್ನಾಡಿದ್ದರೆ ನಾನು ನಿನ್ನ ಮಾತಿನಂತೆ ನಡೆಯುತ್ತಿದ್ದೆ...."

"ಓದಿಸುವ ತಾಕತ್ತು ನಮಗಿರಲಿಲ್ಲ. ಆದರೆ ಈಗ ವಿದ್ಯಾವಂತನಾಗಿ ನಮ್ಮನ್ನೇ ದೂಷಿಸ್ತೀಯಲ್ಲ, ನೀನೂ ನಾಲ್ಕು ಕಾಸು ಸಂಪಾದಿಸಿ, ನೀನು ಹುಟ್ಟಿದ ಮನೆಗೆ ಕೊಟ್ಟರೆ ಏನೀಗ?"

"ಓ.... ಹಾಗಾದರೆ ಮಾವನ ಮನೆಗೆ ನನ್ನನ್ನು ಕಳಿಸುವಾಗ ಈ ಆಸೇನೂ ಇಟ್ಟುಕೊಂಡಿದ್ದೆ ಅಂತಾಯ್ತು... ಇದನ್ನೆಲ್ಲ ಮರೆತುಬಿಡು, ನಿಮ್ಮ ಹಣೆಬರಹಕ್ಕೆ ನಾನೇಕ ಒದ್ದಾಡಲಿ!"

"ಚೆನ್ನಾಗಿದೆ ಕಣೋ...ನೀನು ಇಷ್ಟು ಸ್ವಾರ್ಥಿ ಅಂತ ಗೊತ್ತಿರಲಿಲ್ಲ ಎದ್ದು ಹೋಗು. ಇನ್ನು ಹೆಚ್ಚು ಮಾತನ್ನಾಡಬೇಡ"

"ನಾನು ಶ್ರೀಮಂತನಾಗುತ್ತಿರುವುದನ್ನು ಕಂಡು ನಿಮಗೆಲ್ಲಾ ಹೊಟ್ಟೆ ಉರಿ. ನಾನೂ ಆ ಕೂಪದಲ್ಲೇ ಬಿದ್ದಿರಲಿ ಅಂತ ನಿಮಗೆಲ್ಲ ಆಸೆ.... ಲಲಿತ ನನ್ನನ್ನು ಮದುವೆಯಾಗುವುದಾದರೆ ನಿನಗೇಕೆ ಇಷ್ಟು ಅಸಮಾಧಾನ? ನಾನೂ ನಿನ್ನ ಮಗ ಅನ್ನುವುದನ್ನು ಮರತೇ ಬಿಟ್ಟಿದ್ದೀಯಾ?"

"ಹಂಗಿಸಿ ಅನ್ನು... ನೀನು ನನ್ನ ಮಗ ನಿಜ ಆದರೆ ಇಷ್ಟು ವರ್ಷಗಳಲ್ಲಿ ಒಂದು ದಿನವಾದರೂ ಬಂದು ನಮ್ಮ ಕಷ್ಟ ಸುಖ ವಿಚಾರಿಸಬೇಕು ಅಂತ ಅನ್ನಿಸಲಿಲ್ಲ ನಿನಗೆ...ಈ ಶ್ರೀಮಂತಿಕೆಯ ಮಧ್ಯೆ ನಿನಗೆ ನಮ್ಮ ನೆನಪು ಸಹ ಇರಲಿಲ್ಲವೇನೋ?"

"ನೀನು ಏನೇನೋ ಆಸೆ ಇಟ್ಟುಕೊಂಡಿದ್ದರೆ ಅದು ನನ್ನ ತಪ್ಪಲ್ಲ. ನಾನು ಕೆಲಸಕ್ಕೆ ಸೇರಿದ ಮೇಲೆ ನಮ್ಮ ಮನೆಗೆ ಬಂದರು. ನಿನ್ನನ್ನು ಚೆನ್ನಾಗಿ

ನೋಡಿಕೊಳ್ತೀನಿ." ಆ ಮಾತು ಆಕೆಯನ್ನು ರೇಗಿಸಿತ್ತು.

"ನನ್ನ ಮಾತನ್ನೇ ಕೇಳದವನು ನೀನು... ನನ್ನನ್ನೇನು ಚೆನ್ನಾಗಿ ನೋಡಿಕೊಳ್ತೀಯೋ? ಹೋಗು ಹೋಗು..." ಕೈ ಆಡಿಸಿ ದೂಷಿಸಿದಳು.

ಗೋಪಾಲನೂ ಸಿಟ್ಟಿನಿಂದ ಆಚೆಗೆ ಎದ್ದು ಹೋಗಿದ್ದ. ಅಮ್ಮ ಹೀಗೇಕೆ ಮಾತನಾಡಿದಳೋ ಎಂದು ಅವನಿಗೆ ಬೇಸರವುಂಟಾಗಿತ್ತು. ಎಲ್ಲರಿಗಿಂತ ಹೆಚ್ಚಿಗೆ ಓದಿದ್ದು,ಶ್ರೀಮಂತರ ಅಳಿಯನಾಗುತ್ತಿರುವುದು, ಹೆತ್ತ ತಾಯಿಗೇ ಸಹಿಸುತ್ತಿಲ್ಲವೆಂದರೇ ದುಗುಡ ಆವರಿಸಿಕೊಂಡಿತು. ಯಾರೊಡನೆಯೂ ತನ್ನ ದುಃಖವನ್ನು ಹೇಳಿಕೊಳ್ಳಬೇಕೆಂದೆನ್ನಿಸಲಿಲ್ಲ.

ಕೆಲವೇ ದಿನಗಳಲ್ಲಿ ಪ್ರೈವೇಟ್ ಕಂಪೆನಿಯೊಂದರಲ್ಲಿ ಕೆಲಸ ಸಿಕ್ಕಿತ್ತು. ರಂಗಣ್ಣ ಖುಷಿಯಿಂದ ತಂಗಿಯ ಮನೆಗೆ ಬಂದಿದ್ದ. ಗೋಪಾಲ ಬರದೇ, ಮಾವನನ್ನು ಕಳಿಸಿದ್ದಾನೆಂದು ಆಕೆಗೆ ಅಸಮಧ್ಧಾನವಾಗಿತ್ತು.

ಮದುವೆ ಮಾತು ಬಂದಾಗ, ಮೊದಲು ಹೆಣ್ಣು ಮಕ್ಕಳ ಮದುವೆ ಮುಗಿಯಲಿ, ಆಮೇಲೆ ಅವನ ಮದುವೆ ಚಿಂತೆ ಎಂದು ಖಂಡಿತವಾಗಿ ನುಡಿದಾಗ ರಂಗಣ್ಣ ಸುಮ್ಮನಾಗಿದ್ದ.

ತಂಗಿಯ ಮದುವೆ ನಿಶ್ಚಯವಾದಾಗ ತಾಯಿ ಗೋಪಾಲನನ್ನು ಕರೆಸಿದ್ದಳು.

"ನೀನಂತೂ ನಮ್ಮಗಳನ್ನು ಮರೆತೇ ಬಿಟ್ಟಿದೀಯ. ನಾವು ಹಾಗಿರಲು ಸಾಧ್ಯವೆ! ಎಲ್ಲರಿಗೂ ಅವರವರ ಸಂಸಾರ ತಾಪತ್ರಯ. ಈಗ ಈ ಮದುವೆಯನ್ನು ನೀನೇ ನಿಂತು ನಡೆಸಬೇಕು"

ತಾಯಿಯ ಜಾಣತನಕ್ಕೆ ಬೆರಗಾದ. "ನನ್ನಿಂದ ಆಗದ ಕೆಲಸ, ಇದು ಹೊಸದಾಗಿ ಕೆಲಸಕ್ಕೆ ಸೇರಿದೀನಿ, ರಜವಿಲ್ಲ"

"ಹಣವನ್ನಾದರೂ ಹೊಂದಿಸಿಕೊಡು."

"ನನ್ನ ಹತ್ತಿರ ಅಷ್ಟು ಹಣ ಎಲ್ಲಿದೆ?"

"ಶ್ರೀಮಂತನ ಅಳಿಯನಾಗುವವನು ನೀನು. ನೀನು ಮನಸ್ಸು ಮಾಡಿದರೆ ಎಲ್ಲಾ ಸುಲಭ"

"ಅಂತಹ ಆಸೆ ಇಟ್ಕೋಬೇಡಿ...ನಾನು ಅದನ್ನು ಮಾಡೋಕ್ಕಾಗೊಲ್ಲ"

"ಮನೆಗೆ ಮಾರಿ... ಪರರಿಗೆ ಉಪಕಾರಿ ಅಂತ... ಆ ಲಲಿತನ್ನ ಉದ್ಧಾರ ಮಾಡ್ತಿದೀಯ... ನಮ್ಮನ್ನು ಉದ್ಧಾರ ಮಾಡು... ಇವಳೂ ನಿನ್ನ ತಂಗಿ.

"ಲಲಿತ ನನ್ನ ಹೆಂಡತಿಯಾಗುವವಳು... ಅವರುಗಳಿಂದ ನಾನು ಉದ್ಧಾರವಾಗ್ತಿದೀನಿ ಅನ್ನೋದನ್ನು ಮರೀಬೇಡ"

"ನಿನಗೆ ನಮಗಿಂತ ಅವರೇ ಹೆಚ್ಚು"

"ಹೌದು... ಈಗ ನನಗೆ ಅವರುಗಳೇ ಹೆಚ್ಚು..."

"ನಾಚಿಕೆ ಇಲ್ಲದವನೇ, ನಂದೆ ತಪ್ಪೆಲ್ಲಾ... ನೀನು ರಂಗಣ್ಣನ ಮನೆಗೆ ಹೋಗದಂತೆ ತಡೆಯಬೇಕಾಗಿತ್ತು ನಾನು"

"ಹಾಗೇನಾದ್ರೂ ಮಾಡಿದಿದ್ರೆ ನಾನು ಮನೇ ಬಿಟ್ಟು ಓಡಿ ಹೋಗಿರುತ್ತಿದ್ದೆ ಇಲ್ಲಂತೂ ಇರುತ್ತಿರಲಿಲ್ಲ"

ಈಗಲೂ ಹಾಗೇ ತಾನೇ ಇದೀಯ. ಇದ್ದೂ ಇಲ್ಲದವನ ತರಹ ನಿನ್ನಂಥೋನು ನಮಗೆ ಇದ್ದರೆಷ್ಟು ಬಿಟ್ಟರೆಷ್ಟು!" ತಾಯಿ ತಿರಸ್ಕಾರವಾಗಿ ನುಡಿದಾಗ ಅವನಿಗೂ ರೇಗಿತ್ತು.

"ಕರೆಸಿ ಬೈತಿದೀಯಲ್ಲ, ನಿನ್ನನ್ನ ನನ್ನ ತಾಯಿ ಅಂತ ಹೇಳಿಕೊಳ್ಳೊಕೆ ಹೀನಾಯವಾಗುತ್ತೆ ನನಗೆ..."

"ಹೇಳಲೇ ಬೇಡ ಬಿಡು... ಹುಟ್ತಾನೇ ಅನಾಥನಾದೆ ಅಂತ ತಿಳಕೋ..." ತಾಯಿ ಮತ್ತೆ ನುಡಿದಾಗ ಅವನೂ ಸುಮ್ಮನಿರಲಿಲ್ಲ.

"ಈಗ ನಾನು ಇರುವುದು ಹಾಗೇ ತಾನೆ..." ಗೊಣಗುತ್ತಾ ಎದ್ದು ನಡೆದ... "ಯಾಕೆ? ಇದಾನಲ್ಲ ನಿನ್ನ ಮಾವ" ಎಂದು ಆಕೆ ಹಿಂದಿನಿಂದ ನುಡಿದಿದ್ದು ಕೇಳಿಸಿ ಹಲ್ಲು ಕಡಿದಿದ್ದ. ಯಾರಿಗೂ ಹೇಳದೇ ಆ ಗಳಿಗೆಯಲ್ಲೇ ಬೆಂಗಳೂರಿಗೆ ವಾಪಸ್ಸು ಬಂದಿದ್ದ.

ಗೋಪಾಲ ತಾನಾಗಿಯೇ ತನ್ನ ಮದುವೆಯ ವಿಷಯವನ್ನು ಮಾವನೊಡನೆ ಆಡಲು ಸಂಕೋಚಗೊಂಡ. ಆದರೆ ಹೆಚ್ಚು ಹೆಚ್ಚು ಹೊತ್ತು ಲಲಿತೆಯ ಜತೆಯಲ್ಲಿ ಕಳೆಯಲು ಪ್ರಾರಂಭಿಸಿದ. ಇಬ್ಬರ ಮಾತುಕತೆ, ಹರಟೆಗೆ ಬಿಡುವೇ ಇರಲಿಲ್ಲ. ಕೆಲವೊಮ್ಮೆ ಅವಳನ್ನು ತಿರುಗಾಡಲು ಸಹ ಕರೆದುಕೊಂಡು ಹೋಗಿ ಬರುತ್ತಿದ್ದ. ಇದನ್ನು ಗಮನಿಸಿದ ರಂಗಣ್ಣನ ಪತ್ನಿ ಗಂಡನನ್ನು ಮದುವೆಗೆ ದಿನವನ್ನು ನಿಶ್ಚಯಿಸಲು ಒತ್ತಾಯಿಸಿದಳು.

ಮದುವೆಯ ಸಿದ್ಧತೆಗಳನ್ನು ಮುಗಿಸಿ, ದಿನವನ್ನು ಗೊತ್ತು ಮಾಡಿದ ರಂಗಣ್ಣ ತನ್ನ ತಂಗಿಯ ಮನೆಗೆ ಹೋಗಿಬಂದ. ತನ್ನ ಮಾತು ನಡೆಯುವು ದಿಲ್ಲವೆಂದು ತಿಳಿದಿದ್ದ ಆಕೆ ಹೆಚ್ಚಿಗೆ ಏನನ್ನು ಆಡದೆ ತನ್ನ ಒಪ್ಪಿಗೆಯನ್ನು ಕೊಟ್ಟು ಗಾಂಭೀರ್ಯವನ್ನು ಪ್ರದರ್ಶಿಸಿದ್ದಳು.

ರಂಗಣ್ಣ ಅದ್ದೂರಿಯಿಂದ ಮಗಳ ಮದುವೆಯನ್ನು ಮಾಡಿ, ಬೀಗರನ್ನು ಸಂತೃಪ್ತಿಗೊಳಿಸಿದ್ದ. ಗೋಪಾಲ ಸಹ ತನ್ನ ಮನೆಯವರಿಗೆ ಉಡುಗೊರೆಗಳನ್ನು ತಂದಿದ್ದ. ತಾಯಿ ಅವನೊಡನೆ ಹೆಚ್ಚಿಗೆ ಮಾತನಾಡದೆ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದ್ದಳು.

ಕೆಲವಾರು ವರ್ಷಗಳಿಂದ ಲಲಿತೆಯ ಒಡನಾಟವಿದ್ದರೂ, ಅವಳನ್ನು

ಪತ್ನಿಯನ್ನಾಗಿ ಸ್ವೀಕರಿಸಿದಾಗ ಗೋಪಾಲನ ಮನದಲ್ಲಿ ಹೊಸ ಬಯಕೆಗಳು ಕಂಡವು. ನಾಚಿಕೆಯನ್ನು ಪ್ರಕಟಿಸುತ್ತಾ ಲಲಿತ, ಅವನು ಹೇಳಿದ್ದಂತೆ ಕೇಳಿ ಅವನ ಆಸೆಗೆ ಸಹಕರಿಸಿದಾಗ, ಅವನಿಗೆ ಆ ಹೊಸ ಜೀವನದಲ್ಲಿ ಏನೂ ಸ್ವಾರಸ್ಯ ಕಂಡುಬರಲಿಲ್ಲ, ಹಳೇ ಕಾಲದ ಪುಟ್ಟಕ್ಕನಂತೆ ಅವಳು ನಡೆದುಕೊಂಡಾಗ ಅವನಲ್ಲಿ ನಿರಾಸೆ ಮೂಡಿತ್ತು. ತಾನು ಹೇಳಿದಂತೆ ಕೇಳುವುದಷ್ಟೇ ಗೊತ್ತು. ಇವಳಿನ್ನೂ ತುಂಬಾ ಚಿಕ್ಕವಳು, ಎನ್ನುವ ನಿರ್ಧಾರಕ್ಕೆ ಬಂದ. ಇವಳು ನನಗೆ ಸರಿಸಮಾನಳಾದ ಪತ್ನಿಯಲ್ಲ. ಅಂತ ಮೊಟ್ಟಮೊದಲ ಬಾರಿಗೇ ಅನ್ನಿಸಿದರೂ, ಅವಳ ಮೇಲೆ ಅಸಹನೆಯನ್ನು ಪ್ರಕಟಿಸಲಿಲ್ಲ. ಅವಳ ಮೇಲೆ ಕನಿಕರವುಂಟಾಗಿತ್ತು. ಅವಳ ಮೇಲಿನ ಪ್ರೀತಿ ಹೆಚ್ಚಾಗಿತ್ತು. ಅವಳಿಗೆ ಯಾವುದೇ ತೊಂದರೆಯುಂಟಾಗದಂತೆ ನೋಡಿಕೊಳ್ಳಬೇಕಾದುದು ತನ್ನ ಕರ್ತವ್ಯ ಎಂದುಕೊಂಡ

ಆದರೆ ತಮ್ಮಿಬ್ಬರ ಮಧ್ಯೆ ಇರುವ ಅಸಮತೆಯ ಬಗ್ಗೆ ಅವಳನ್ನು ದೂಷಿಸಲಾರದೇ ಅಥವಾ ಅದನ್ನು ಹೇಗೆ ಸರಿಪಡಿಸಬೇಕು ಎಂಬ ಉಪಾಯವೂ ತಿಳಿಯದೇ ಹೊರಳಾಡುತ್ತಿದ್ದ.

ಕೆಳಗೆ ಏನೋ ಗಲಾಟೆ ನಡೆಯುತ್ತಿರುವಂತೆ ಕೇಳಿಸಿದಾಗ, ಮಹಡಿ ಇಳಿದು ಕೆಳಗೆ ಬಂದಿದ್ದ... ತಪ್ಪಿತಸ್ಥನಂತೆ ನಿಂತಿದ್ದ ರಂಗಣ್ಣನ ಕಡೆ ತಿರುಗಿ 'ಏನಾಯ್ತು ಮಾವ' ಎಂದು ಕೇಳಿದಾಗ ಅವನ ಬದಲು ಅವನ ತಂದೆ ಉತ್ತರಿಸಿದ್ದರು.

"ನಿನ್ನ ಮಾವ ಕೊಲೆ ಮಾಡಿದಾನೆ. ಇನ್ನೇನು ಪೋಲೀಸ್ನೋರು ಬರ್ತಾರೆ" ತಂದೆಯ ಕಡೆ ಬಿರುಗಣ್ಣು ಬಿಟ್ಟಿದ್ದ.

ಮದುವೆಗೆ ಬಂದಿದ್ದ ದೂರದ ನೆಂಟರ ಕಡೆಯುವರಿಬ್ಬರು ಮಧ್ಯರಾತ್ರಿಯ ನಂತರ ಮನೆಗೆ ನುಗ್ಗಿ ಬೀರು ಒಡೆಯುವ ಸನ್ನಾಹದಲ್ಲಿದ್ದಾಗ, ರಂಗಣ್ಣ ಹಿಂದೆ ಮುಂದೆ ನೋಡದೇ ಮನೆಯಲ್ಲಿದ್ದ ಒನಕೆಯಿಂದ ಚೆನ್ನಾಗಿ ಥಳಿಸಿದ್ದ. ಇಬ್ಬರಲ್ಲಿ ಒಬ್ಬ ಅಸುನೀಗಿದ್ದ. ಇನ್ನೊಬ್ಬ ಜ್ಞಾನ ತಪ್ಪಿ ಬಿದ್ದಿದ್ದ. ವಿಷಯ ತಿಳಿದು ಎಲ್ಲರಿಗೂ ಎಚ್ಚರವಾಗಿತ್ತು ಎಲ್ಲರೂ ರಂಗಣ್ಣನನ್ನು ಹಳಿಯುವವರೇ...

"ಏನೇ ಆಗಲಿ, ನಮ್ಮನ್ನೆಲ್ಲಾ ಕರೆಯಬಾರದಾಗಿತ್ತೇ... ಇಷ್ಟು ಕೆಟ್ಟದಾಗಿ ಹೊಡೆಯಬಾರದಾಗಿತ್ತು..."

"ಅಲ್ಲ ಮಾವ, ಅವರು ಇಬ್ಬಿಬ್ಬರು ಇದ್ದರು, ನಿನಗೇನಾದರೂ ಹೆಚ್ಚು ಕಡಿಮೆ ಆಗಿದ್ದಿದ್ದರೆ" ಗೋಪಾಲ ಕನಿಕರದಿಂದ ನುಡಿದಿದ್ದ.

"ನನಗೆ ಗೊತ್ತಾಗಲಿಲ್ಲಪ್ಪಾ... ಕೆಟ್ಟ ಧೈರ್ಯದಿಂದ ಹೊಡೆದು ಬೀಳಿಸಿದೆ

ಅಂತ ಅಂದ್ಕೊಂಡೆ.... ಈಗ ಹೀಗಾಯ್ತು... ನಾನೇನ್ಮಾಡ್ಲೀ?"

"ನೀವೇನೂ ಯೋಚಿಸಬೇಡಿ... ಎಲ್ಲಾ ಸರಿ ಹೋಗುತ್ತೆ"

"ಅದ್ಹೇಗೆ ಎಲ್ಲಾ ಸರಿ ಹೋಗುತ್ತೆ! ಮದುವೆಗೆ ಕರೆಸಿ, ಕಳ್ಳತನದ ಅಪವಾದ ಹೊರೆಸಿದ್ದೂ ಅಲ್ಲದೇ ಪ್ರಾಣಾನೂ ತೆಗೆದಿದಾನಲ್ಲ ಜೀವಾವಧಿ ಜೈಲು ಶಿಕ್ಷೆ ಆಗುತ್ತೆ..." ಸತ್ತವನ ಕಡೆಯುವರು ಯಾರೋ ಮಡಿದಾಗ ರಂಗಣ್ಣನ ಹೆಂಡತಿ ಪ್ರಜ್ಞೆ ತಪ್ಪಿ ಬಿದ್ದು ಬಿಟ್ಟಳು.

ರಂಗಣ್ಣನ್ನ ಪೋಲೀಸಿನವರು ಕರೆದುಕೊಂಡು ಹೊರಟಾಗ, ಗೋಪಾಲನ ತಾಯಿ ಸಮಾಧಾನ ಹೇಳುವ ಬದಲು ತನ್ನ ಅಣ್ಣನನ್ನು ಹಂಗಿಸಿ ನುಡಿದಿದ್ದಳು.

"ನನ್ನ ಹೊಟ್ಟೆ ಉರಿಸಿ, ನನ್ನ ಮಗನ್ನ ನಿನ್ನ ಬುಟ್ಟಿಗೆ ಹಾಕಿಕೊಂಡೆ. ಈಗ ಏನಾಯ್ತು ನೋಡು... ಮದುವೆ ಮಾಡಿದ ಗಳಿಗೆ ನಿನ್ನ ಬುಡಕ್ಕೇ ಬಂತಲ್ಲ..."

"ಅಮ್ಮಾ...ಸ್ವಲ್ಪ ಸುಮ್ಮನಿರು. ಹುಚ್ಚು ಹುಚ್ಚಾಗಿ ಏನೇನೋ ಆಡಬೇಡ" ಗೋಪಾಲ ನುಡಿದಿದ್ದ.

"ನನಗ್ಯಾಕೋ ಹುಚ್ಚು ಹಿಡಿಯುತ್ತೆ! ನಿನ್ನ ಅತ್ತೆಗೆ ಹುಚ್ಚು ಹಿಡಿಯುತ್ತೆ. ಇಂಥೋರ ಮನೆ ಅಳಿಯನಾಗಿ ಸೇರಿಕೊಂಡೆಯಲ್ಲಾ ಅನುಭವಿಸು. ಗಿಣಿಗೆ ಹೇಳಿದಹಾಗೆ ಹೇಳಿದರೆ, ನನ್ನ ಮಾತು ನಿನಗೆ ಅಸಭ್ಯವಾಯ್ತು... ಹಾಳಾಗಿ ಹೋಗು"

ತಾಯಿಯ ಬಿರುನುಡಿಗಳು ಅವನನ್ನು ಸ್ತಬ್ಧಗೊಳಿಸಿದವು. ಅಳುತ್ತಾ ನಿಂತಿದ್ದ ಲಲಿತೆಯನ್ನು ಸಮಾಧಾನಗೊಳಿಸಲು ಪ್ರಯತ್ನಿಸಿದ. ಬೆಳಗಾಗುತ್ತಿದ್ದಂತೇ ಬಂದಿದ್ದ ನೆಂಟರಿಷ್ಟರೆಲ್ಲಾ ಹೊರಟು ಹೋಗಿದ್ದರು. ಅತ್ತೆಯನ್ನು ಆಸ್ಪತೆಗೆ ಸೇರಿಸಿದ್ದರು.

ಹೀಗೆ ಪ್ರಾರಂಭವಾಗಿತ್ತು ಅವನ ಹೊಸ ಜೀವನ. ತಾಯಿಯ ನುಡಿಗಳು ಆಗಾಗ್ಗೆ ನುಗ್ಗಿ ತಿವಿಯುತ್ತಿದ್ದವು. ಇದರಲ್ಲಿ ನನ್ನದಾಗಲೀ, ಲಲಿತಾದಾಗಲೀ ಏನು ತಪ್ಪಿದೆ? ಒಳ್ಳೆಯ ಲಾಯರನ್ನಿಟ್ಟು ಮಾವನ ಬಿಡುಗಡೆ ಮಾಡಿಸಬೇಕು, ಅತ್ತೆಗೆ ಸರಿಯಾದ ಶುಶ್ರೂಷ ಕೊಡಿಸಿ, ಆದಷ್ಟು ಬೇಗ ಮನೆಗೆ ಬರುವಂತೆ ಮಾಡಬೇಕು ಎಂದು ಯೋಚಿಸಿದ. ಆದರೆ ಅದಕ್ಕೆ ಅವನ ತಂದೆಯಾಗಲೀ, ಅಣ್ಣಂದಿರಾಗಲೀ ಸಹಾಯ ಮಾಡಲು ಮುಂದೆ ಬರಲಿಲ್ಲ. ಗೋಪಾಲ ಬಹಳ ನೊಂದುಕೊಂಡ. ಅವನ ಹೃದಯ ಕಲ್ಲಾಯಿತು.

"ಅತ್ತೆ, ಈಗಲೇ ಹೋಗಬೇಡಿ... ಇವರೂ ಒಬ್ಬರೇ... ನಮಗೆ ಸಹಾಯ ಮಾಡುವವರು ಯಾರು?" ಲಲಿತಾ ಅಳುತ್ತಾ ಕೇಳಿಕೊಂಡಾಗ ಸಹ ತಾಯಿಯ

ಮನಸ್ಸು ಕರಗಿರಲಿಲ್ಲ.

"ಹುಟ್ಟಿದ ಮನೆಗೆ ಮೂರು ಕಾಸಿನ ಸಹಾಯ ಮಾಡಲಿಲ್ಲ ನಿನ್ನ ಗಂಡ... ನಿನ್ನನ್ನು ಉದ್ಧಾರ ಮಾಡೊಕೆ ಅಂತ ಇಲ್ಲಿ ಬಂದು ಸೇರಿಕೊಂಡ... ಅದ್ಹೇಗೆ ಉದ್ದಾರವಾಗ್ತಿರೋ ನಾನೂ ನೋಡ್ತೀನಿ..."

"ಅಮ್ಮಾ...ನಿನ್ನ ಬಾಯಿಯಿಂದ ಇಂತಹ ಮಾತುಗಳು ಬರಬಾರದು. ರಂಗಣ್ಣ ನಿನಗೂ ಅಣ್ಣಾನೇ ತಾನೇ..."

"ಕೊಲೆ ಮಾಡಿ ಜೈಲಿಗೆ ಹೋದವನನ್ನು ನನ್ನ ಅಣ್ಣ ಅಂತ ಹೇಳಿಕೊಳ್ಳೊಕೆ ನನಗೇನು ಬುದ್ಧಿ ಇಲ್ಲ ಅಂತ ಅಂದ್ಕೊಂಡ್ಯಾ? ಇನ್ನು ಈ ಮನೆಗೂ ನನಗೂ ಯಾವ ಸಂಬಂಧವೂ ಇಲ್ಲ..."

"ಹಾಗಾದರೆ ಇನ್ನು ಯಾಕೆ ಇಲ್ಲೀದಿರ.... ಹೊರಟು ಹೋಗಿ" ಗೋಪಾಲನೂ ಕಿರುಚಿದ್ದ. ಅವನಿಗೆ ತಾಯಿಯ ಮಾತುಗಳು ಅಸಹ್ಯವಾಗಿ ಕಂಡಿತ್ತು. ತಂದೆ ತಾಯಿಗಳೇ ಇಷ್ಟು ಸ್ವಾರ್ಥಿಗಳಾಗಿರುವಾಗ, ತಾನೇಕೆ ಸ್ವಾರ್ಥಿ ಯಾಗಬಾರದು ಎಂದೆನಿಸಿತ್ತು. ಅಂದಿನಿಂದ ಅವನ ನಡವಳಿಕೆ ಬದಲಾಯಿತು.

ಆದರೂ ಲಲಿತೆಯನ್ನು ಕಂಡೊಡನೆ ಅವನ ಹೃದಯ ಮೃದುವಾಗುತ್ತಿತ್ತು. "ನಾವಿಬ್ಬರೂ ಅನಾಥರಾದೆವು... ಇನ್ನು ಮುಂದೆ ನನಗೆ ನೀನು... ನಿನಗೆ ನಾನು... ನಾವಿಬ್ಬರೇ" ಎಂದು ಅವಳನ್ನು ಸಮಾಧಾನ ಗೊಳಿಸಿದ್ದ.

ಲಲಿತ ಮಾತುಕತೆ ಕಡಿಮೆ ಮಾಡಿ, ಪೂಜೆ ಪುನಸ್ಕಾರಗಳಲ್ಲಿ ಹೆಚ್ಚು ಹೆಚ್ಚು ಸಮಯ ಕಳೆಯತೊಡಗಿದಾಗ ಅವನಿಗೆ ಬೇಸರವಾಗುತ್ತಿತ್ತು. ಪತಿವ್ರತೆಯಂತೆ ಅವನನ್ನು ವಿರೋಧಿಸದೇ ಅವನು ಹೇಳಿದಂತೆ ಕೇಳುತ್ತಿದ್ದಾಗ ಅವನ ಅಸಹನೆ ಹೆಚ್ಚುತ್ತಿತ್ತು. ಏನನ್ನೂ ಹೇಳಲಾಗದ, ಹೇಳಲಾಗದೇ ಇರದ ಸ್ಥಿತಿಯಲ್ಲಿ ತೊಳಲಾಡುತ್ತಿದ್ದ. ಅವನ ಪ್ರೀತಿಗೆ, ಅವನ ರಸಿಕತೆಗೆ, ಅವಳ ನಡವಳಿಕೆ ಅಡ್ಡಿಯಾಗಿದೆಯೆಂದೆನಿಸುತ್ತಿತ್ತು. ಅವಳನ್ನು ದ್ವೇಷಿಸಲೂ ಆಗದೆ, ಪ್ರೀತಿಸಲೂ ಆಗದೆ ಹೆಚ್ಚು ಹೆಚ್ಚು ಹೊತ್ತು ಮನೆಯಿಂದ ಹೊರಗೇ ಇರಲಾರಂಭಿಸಿದ. ಅದನ್ನು ಸಹ ಅವಳು ಪ್ರಶ್ನಿಸಲಿಲ್ಲ.

ರಂಗಣ್ಣನಿಗೆ ಏಳು ವರ್ಷದ ಜೈಲು ವಾಸವಾಗಿತ್ತು. ಅವಮಾನದಿಂದ ಆತ ಕುಗ್ಗಿಹೋಗಿದ್ದ. ಈ ವಿಷಯ ತಿಳಿದ ಅವನ ಹೆಂಡತಿ ಚೇತರಿಸಿಕೊಳ್ಳ ಲಾಗಲಿಲ್ಲ. ಈ ಎಲ್ಲಾ ಮನೋವ್ಯಥೆಗಳನ್ನು ಗೋಪಾಲ ತನ್ನ ಆಫೀಸಿನ ಕೆಲಸಗಳಲ್ಲಿ ಮರೆಯಲೆತ್ನಿಸಿದ. ಆದರೆ ಲಲಿತ ಒಳಗೊಳಗೆ ಕೊರಗಿದಳು. ರಂಗಣ್ಣನ ಸಲಹೆಯಂತೆ, ಗೋಪಾಲ ಆ ಮನೆಯನ್ನು ಮಾರಿ ಬಂದ ಹಣದಲ್ಲಿ ಹೊಸ ಮನೆಯನ್ನು ಕೊಂಡುಕೊಂಡ. ತನ್ನದೇ ಒಂದು ಸ್ವಂತ

ಉದ್ಯೋಗವನ್ನು ಪ್ರಾರಂಭಿಸಿದ.

ಲಲಿತ ಹುಷಾರಿಲ್ಲದೇ ಮಲಗಿದಾಗ, ಡಾಕ್ಟರು ಅವಳು ಗರ್ಭಿಣಿ ಎಂದು ತಿಳಿಸಿದಾಗ ಅವನಿಗೆ ಖುಷಿಯಾಗಿರಲಿಲ್ಲ. ಮೊದಲೇ ಕೃಶಾಂಗಿ... ಇವಳು ಬಸಿರನ್ನು ಹೇಗೆ ಹೊತ್ತಾಳು ಎಂದು ಅಂಜಿಕೆಯಾಗಿತ್ತು. ಲಲಿತ ನಗುಮುಖದಿಂದ ಅವನ ಕಡೆ ನೋಡಿದಾಗ ಅವನಿಗೆ ಏನು ಹೇಳಬೇಕೆಂದು ತಿಳಿಯಲಿಲ್ಲ. ಪೆಚ್ಚಾಗಿ ಅವಳನ್ನೇ ನೋಡಿದ. ಡಾಕ್ಟರರ ಸಲಹೆಯಂತೆ ಅವಳ ಆರೋಗ್ಯದ ಕಡೆ ಹೆಚ್ಚು ಗಮನ ಕೊಡಲಾರಂಭಿಸಿದ.

ವಿಶ್ರಾಂತಿಯ ಅಗತ್ಯವಿದ್ದುದರಿಂದ ಒಬ್ಬ ಅಡಿಗೆಯವಳನ್ನು ನೇಮಿಸಿಕೊಂಡರು. ಆಗ ಬಂದು ಸೇರಿಕೊಂಡ ವೇದಮ್ಮ ಈಗ ಮನೆಯ ಒಬ್ಬ ಸದಸ್ಯೆಯಾಗಿಬಿಟ್ಟಳು.

ವೇದಮ್ಮ ಒಳ್ಳೆಯ ಹೆಂಗಸು. ಸುಮಾರು ಇಪ್ಪತ್ತೈದು ವರ್ಷದ ದೃಢಕಾಯ ಶರೀರದ ಹೆಂಗಸು. ಮನೆಯ ಎಲ್ಲಾ ಕೆಲಸವನ್ನೂ ಒಬ್ಬಳೇ ನಿಭಾಯಿಸುತ್ತಿದ್ದಳು. ಗಂಡನಿಲ್ಲದ ಅವಳನ್ನು ಅವಳ ಅತ್ತೆಯ ಮನೆಯವರು ಬಹಳ ತುಚ್ಛವಾಗಿ ಕಾಣುತ್ತಿದ್ದರು. ಅವಳಿಗೂ ಆ ಮನೆ ಬಿಟ್ಟು ಬೇರೆಲ್ಲಾದರೂ ಹೋದರೆ ಸಾಕೆಂದೆನಿಸಿತ್ತು. ಹೊಟ್ಟೆಬಟ್ಟೆಗೆ ಕಷ್ಟಪಡಬೇಕಿರಲಿಲ್ಲ. ಮರ್ಯಾದೆ ಯಿಂದ ಬಾಳುವ ಅವಕಾಶ ಸಿಕ್ಕಿತಲ್ಲ ಎಂದು ಸಂತಸಗೊಂಡಿದ್ದಳು. ಲಲಿತೆ ಯನ್ನು ತನ್ನ ಸ್ವಂತ ತಂಗಿ ಎಂಬಂತೆ ನೋಡಿಕೊಳ್ಳುತ್ತಿದ್ದಳು.

ಲಲಿತ ಆಗಾಗ್ಗೆ ಡಾಕ್ಟರ ಬಳಿ ತಪಾಸಣೆಗೆಂದು ಹೋಗಿ ಬರುತ್ತಿದ್ದಳು. ಒಂದು ಸಾರಿ ಡಾಕ್ಟರರು ಗೋಪಾಲನಿಗೆ ಹೇಳಿ ಕಳಿಸಿದಾಗ ಅವನಿಗೆ ಆತಂಕವಾಗಿತ್ತು

"ವೆರಿ ಸಾರಿ ಗೋಪಾಲರಾವ್. ಈ ವಿಷಯವನ್ನು ಹೇಗೆ ತಿಳಿಸಬೇಕೋ ನಮಗೆ ತಿಳಿಯುತ್ತಿಲ್ಲ"

"ಏಕೆ? ಏನು ತೊಂದರೆ ?" ಗಾಬರಿಯಿಂದ ಕೇಳಿದ್ದ.

"ನಿಮ್ಮ ಮಿಸೆಸ್ ಹೊಟ್ಟೆಯಲ್ಲಿ ಬೆಳೆಯುತ್ತಿರುವುದು ಸರಿಯಾದ ಶಿಶುವಲ್ಲ. ಒಂದು ಮುದ್ದೆ... ಆದಷ್ಟು ಬೇಗ ಆಪರೇಷನ್ ಮಾಡಬೇಕು..."

ಅವನಿಗೆ ನಿಜಕ್ಕೂ ಭಯವಾಗಿತ್ತು ಹೀಗೆಲ್ಲಾದರೂ ಉಂಟೆ ಎಂದೆನಿಸಿತ್ತು.... "ಏನು ಹೇಳ್ತೀರಾ ಡಾಕ್ಟರ್, ಇದು ಹೇಗೆ ಸಾಧ್ಯ?" ಎಂದ.

"ನಾವೂ ಪರೀಕ್ಷೆ ಮಾಡ್ತಾನೇ ಇದೀವಲ್ಲ. ಈಗೆರಡು ತಿಂಗಳಿನಿಂದ ಗರ್ಭದೊಳಗೆ ಯಾವ ಚಲನೆಯಿರಲಿಲ್ಲ. ನಮಗೆ ಅನುಮಾನ ಬಂದಿತ್ತು. ಸ್ಕ್ಯಾನಿಂಗ್ ಮಾಡಿದೆವು. ದೃಢವಾಯಿತು. ಒಂದು ಮಾಂಸದ ಮುದ್ದೆ ಬೆಳೀತಿದೆ"

"ಈ ವಿಷಯ ಲಲಿತಂಗೆ ಗೊತ್ತೆ!"

"ಇಲ್ಲ ಅವರಿಗೆ ತಿಳಿಯದು. ಅವರು [illegible] ನಾವು ತಿಳಿಸುವುದಿಲ್ಲ"

"ಹೌದು ಡಾಕ್ಟರ್, ಅವಳಿಗೆ ತಿಳಿಯಲೇಬಾರದು"

"ಹಾಗೆಂದರೆ ಹೇಗೆ? ಒಂದಲ್ಲ ಒಂದು ದಿನ ತಿಳಿಯಲೇಬೇಕು. ಮಗು ಹುಟ್ಟಿದ ಕೂಡಲೇ ಸತ್ತಿತ್ತು ಎಂದು ನಿಧಾನವಾಗಿ ತಿಳಿಸಿದರೆ ಆಯ್ತು"

"ನೋ... ಅವನು ಎದ್ದು ನಿಂತ. ಅವಳಿಗೆ ಈ ವಿಷಯ ತಿಳಿದರೆ ಅವಳೂ ಬದುಕಿ ಉಳಿಯುವುದಿಲ್ಲ. ಅವಳಿಗೆ ತಿಳಿಸಲೇಬಾರದು"

"ಅದು ಹೇಗೆ ಸಾಧ್ಯ ಮಿಸ್ಟರ್?"

"ಅದು ಸಾಧ್ಯ... ಸಾಧ್ಯ" ಎನ್ನುತ್ತಾ ಮತ್ತೆ ಕೂತ. ಲಲಿತಳ ತಂದೆ ತಾಯಿಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದ.

' ಅವಳಿಗೆ ಹೀಗಾಗಿದೆ ಅಂತ ಗೊತ್ತಾದ್ರೆ ಅವಳ ಜೀವಕ್ಕೇ ಅಪಾಯ. ಅವಳನ್ನು ಕಳೆದುಕೊಂಡು ನಾನು ಹೇಗೆ ಬದುಕಿರಲಿ? ಏನಾದ್ರೂ ಸರಿ ಅವಳು ಬದುಕುಳಿಯುವ ಉಪಾಯವನ್ನು ತಿಳಿಸಿ ಡಾಕ್ಟರ್..." ವಿನೀತನಾಗಿ ಕೈ ಮುಗಿದು ಕೇಳಿಕೊಂಡಾಗ, ಆಕೆಗೆ ವ್ಯಥೆಯಾಗಿತ್ತು.

ನಿಧಾನವಾಗಿ ನುಡಿದಳು.

"ಒಂದು ಉಪಾಯವಿದೆ... ಯಾವುದಾದರೂ ಹೊಸದಾಗಿ ಜನಮ್ಮ ತಾಳಿದ ಮಗುವನ್ನು ತಂದು, ಅದನ್ನು ಆಕೆಯ ಮಗು ಎಂದು ಮನವರಿಕೆ ಮಾಡಬೇಕು"

ಗೋಪಾಲ ಮುಖ ಕೆಟ್ಟಗೆ ಮಾಡಿದ.

"ಈಗಿರುವ ಉಪಾಯ ಅದೊಂದೇ... ಯಾವುದಾದರೂ ಆಸ್ಪತ್ರೆಯಲ್ಲಿ ಹುಟ್ಟಿದ ಶಿಶುಗಳು ಅನಾಥವಾಗಿ, ಅನಾಥಾಶ್ರಮ ಸೇರುವುದು ಹೊಸದೇನಲ್ಲ. ಅಂತಹ ಒಂದು ಶಿಶುವನ್ನು ಹುಡುಕಿ ತಂದು ನಿಮ್ಮ ಹೆಂಡತಿಗೆ ತೋರಿಸಿ."

"ಅವಳಿಗೆ ಅನುಮಾನ ಬಂದರೆ...?"

"ಅನುಮಾನ ಬರದಂತೆ ನಾವೆಲ್ಲರೂ ನೋಡಿಕೊಳ್ಳಬೇಕು... ಇನ್ನೊಂದು ತಿಂಗಳು ಬಿಟ್ಟು ನಿಮ್ಮ ಮಿಸೆಸ್‌ನ್ನು ನರ್ಸಿಂಗ್ ಹೋಂಗೆ ಸೇರಿಸಿ. ಆ ಸಮಯದಲ್ಲಿ ಹುಟ್ಟುವ ಯಾವುದಾದರೂ ಒಂದು ಅನಾಥ ಮಗು ನಿಮಗೆ ಸಿಕ್ಕೇ ಸಿಗುತ್ತದೆ. ನೀವು ಧೈರ್ಯವಾಗಿರಿ.

"ನಾನು ಯಾವ ಆಸ್ಪತ್ರೇಲಿ ಹುಡುಕಲಿ? ನನಗೆ ತಿಳಿಯುವುದಾದರೂ ಹೇಗೆ?"

"ನಮ್ಮ ನರ್ಸಗಳು ನಿಮಗೆ ಸಹಾಯ ಮಾಡ್ತಾರೆ ಬಿಡಿ... ಆದರೆ

ಅವರುಗಳಿಗೆ ಸ್ವಲ್ಪ ಹಣ ಕೊಡಬೇಕಾಗುತ್ತದೆ. "ಡಾಕ್ಟರೇ ಉಪಾಯವನ್ನು ಸೂಚಿಸಿದಾಗ ಅವನು ಖುಷಿಗೊಂಡಿದ್ದ. ಸಮಾಧಾನದಿಂದ ಎದ್ದು ಡಾಕ್ಟರಿಗೆ ವಂದಿಸಿ ಹೊರಟ. ಮನೆಗೆ ಬಂದು ಲಲಿತೆಯ ಮುಖವನ್ನು ಕಂಡೊಡನೆ ಪೆಚ್ಚಾಗಿದ್ದ.

ತಾಯಿ ಹೇಳಿದ ಮಾತುಗಳು ನೆನಪಿಗೆ ಬಂದವು...ಆದರೆ ಇದರಲ್ಲಿ ಲಲಿತೆಯ ತಪ್ಪೇನು! ತಂದೆ ತಾಯಿಯರನ್ನು ಅಗಲಿರುವವಳಿಗೆ, ತಾನೊಬ್ಬನೇ ದಿಕ್ಕು, ತಾನೂ ಸಮಾಧಾನ ಮಾಡದಿದ್ದರೆ ಅವಳ ಗತಿಯೇನು ನನಗೆ ಲಲಿತ, ಲಲಿತಂಗೆ ನಾನು. ಅವಳನ್ನು ನಾನು ಚೆನ್ನಾಗಿ ನೋಡಿಕೊಳ್ಳಬೇಕಾದದ್ದು ನನ್ನ ಕರ್ತವ್ಯ ಎಂದುಕೊಂಡು ಪ್ರೀತಿಯಿಂದ ಅವಳ ಬಳಿಗೆ ಬಂದ.

"ಡಾಕ್ಟರು ಏನು ಹೇಳಿದರು?" ಅವಳು ಪ್ರಶ್ನಿಸಿದಾಗ ಅವನ ಉತ್ಸಾಹ ಝುರ್ರನೆ ಇಳಿದಿತ್ತು. ಆದರೂ ನಗುತ್ತಾ,

"ಮಗು ಸಕ್ಕಾಬಟ್ಟೆ ಬೆಳೆದುಬಿಟ್ಟಿದೆ. ಆದಷ್ಟುಬೇಗ ಆಪರೇಷನ್ ಮಾಡಬೇಕು. ಇಲ್ಲದಿದ್ದರೆ ಕಷ್ಟವಾಗುತ್ತೆ ಅಂತ ಅಂದರು." ಎಂದಿದ್ದ.

"ಸುಳ್ಳು... ನೀವು ಹೆದರಿಸ್ತಿದೀರಾ... ಮಗು ಬೆಳೆದಿರುವಂತೆ ಅನ್ನಿಸ್ತಾನೇ ಇಲ್ಲ"

"ನಿನಗೆ ಹಾಗನ್ನಿಸುತ್ತೆ ಅಷ್ಟೇ. ಡಾಕ್ಟರಿಗೆ ಅಷ್ಟು ಗೊತ್ತಾಗಲ್ವೆ!" ಅವಳ ಕಡೆ ತಿರುಗದೇ ನುಡಿದ. ಅವಳು ಸುಮ್ಮನಾಗಿದ್ದಳು. ಇನ್ನು ಮೇಲೆ ಹೀಗೆ ತಮಾಷೆಯಾಗಿ ಮಾತನಾಡಬಾರದು ಎಂದುಕೊಂಡ.

ಒಂದು ದಿನ ಲಲಿತ ಆಯಾಸವೆಂದು ಮಲಗಿದ್ದಾಗ ಡಾಕ್ಟರರ ಬಳಿ ಫೋನ್‌ನಲ್ಲಿ ಮಾತನಾಡಿದ್ದ.

"ನಾಳೆ ಕರೆತಂದು ನರ್ಸಿಂಗ್ ಹೋಂಗೆ ಸೇರಿಸಿಬಿಡಿ. ನಾನು ಎಲ್ಲಾ ವ್ಯವಸ್ಥೆ ಮಾಡ್ತೀನಿ" ಡಾಕ್ಟರು ಆಶ್ವಾಸನೆ ನೀಡಿದ್ದರು.

ಒಂದೆರಡು ದಿನಗಳ ನಂತರ ಲಲಿತೆಗೆ ಆಪರೇಷನ್ ಮಾಡಿದ್ದರು. ಅವಳ ಬಳಿಯಲ್ಲೇ ಇದ್ದ ವೇದಮ್ಮನಿಗೆ ಸಹ ಯಾವ ಸುಳಿವೂ ಸಿಕ್ಕಿರಲಿಲ್ಲ.

"ವೇದಮ್ಮ ನನಗೇಕೋ ಭಯವಾಗುತ್ತೆ..." ಅವಳ ಕೈಹಿಡಿದು ಹೇಳಿದ್ದಳು.

"ಏನೂ ಆಗಲ್ಲ, ದೇವರಿದ್ದಾನೆ ದೇವರನ್ನು ನಂಬಿ" ವೇದಮ್ಮ ಸಮಾಧಾನ ಮಾಡಿದ್ದಳು.

ಗೋಪಾಲ ಕೆಟ್ಟ ಮೋರೆ ಹೊತ್ತು ನಿಂತಿದ್ದ.

ಐದಾರು ಗಂಟೆಗಳ ನಂತರ ಲಲಿತಂಗೆ ಜ್ಞಾನ ಬಂದಾಗ, ಎದುರಿಗೆ ಇದ್ದ ಒಬ್ಬೊಬ್ಬರನ್ನೇ ಗುರುತಿಸಿದಳು. ಗಂಡನ ಕಡೆ ತಿರುಗಿ ಕ್ಷೀಣವಾಗಿ

ನಕ್ಕಾಗ, ಅವನು ನಗಲಿಲ್ಲ. ಅವನು ಸಮಾಧಾನದ ಉಸಿರನ್ನು ಬಿಟ್ಟು ಹೊರಗೆ ಹೊರಟುಹೋಗಿದ್ದ. ಬಳಿಯಲ್ಲಿದ್ದ ವೇದಮ್ಮನ ಕೈಹಿಡಿದು ಕೇಳಿದ್ದಳು. "ಎಂಥಾ ಮಗು?" ಎನ್ನುತ್ತಾ ಪಕ್ಕದಲ್ಲಿ ತಿರುಗಿದ್ದಳು.

"ಗಂಡು ಮಗು... ಮಗು ಸ್ವಲ್ಪ ವೀಕಾಗಿದೆ. ಅದಕ್ಕೇ ಅದನ್ನು ಇಲ್ಲಿ ಕರೆತಂದು ಮಲಗಿಸಿಲ್ಲ"

"ಯಾಕೆ? ಏನಾಗಿದೆ?"

"ಏನಾಗಿಲ್ಲ.... ಡಾಕ್ಟ್ರನ್ನ ಕರೀಲಾ...?"

"ಹುಂ ಕರೀರಿ ಅವರನ್ನೇ ಕೇಳ್ತೀನಿ."

ವಾರ್ಡಿನೊಳಕ್ಕೆ ಬಂದ ಡಾಕ್ಟರು ನಸುನಗೆ ಬೀರಿದರು.

"ನನ್ನ ಮಗೂನ ನೋಡಬೇಕಲ್ಲ ಡಾಕ್ಟ್ರೇ..."

"ನೋಡೋರಂತೆ ಏನು ಆತುರ? ಅವನಿಗೇನು ರಾಜಕುಮಾರ ಇದ್ದ ಹಾಗೆ ಇದಾನೆ. ನೀವೇ ತುಂಬಾ ವೀಕಾಗಿದೀರಾ...ಅಲ್ಲಿ ನಾವುಗಳು ನೋಡಿಕೊಳ್ತೀವಿ..."

"ನಾನು ಹಾಲು ಕುಡಿಸಬೇಡವೇ...?"

"ಈಗಲೇ ಬೇಡ... ನಿಮಗೆ ಮೊದಲು ಸ್ವಲ್ಪ ಶಕ್ತಿ ಬರಲಿ, ಅಲ್ಲದೇ ಇಂಜೆಕ್ಷನ್, ಔಷಧಿಗಳ ಪ್ರಭಾವ ಕಡಿಮೆಯಾಗಲಿ..." ಡಾಕ್ಟರು ಅವಳ ಕಡೆ ನೋಡದೇ ನುಡಿದಿದ್ದರು.

ಆ ರಾತ್ರಿ ಲಲಿತ ಹಠ ಮಾಡಿ, ವೇದಮ್ಮನ ಕಳಿಸಿ ಮಗುವನ್ನು ತರಿಸಿ ನೋಡಿದಳು. ಕಪ್ಪಗಿದ್ದರೂ ಮುದ್ದಾದ ಮಗು. ತಲೆ ತುಂಬಾ ಕೂದಲು ಅವಳು ಮಮತೆಯಿಂದ ಮಗುವಿಗೆ ತಲೆಯನ್ನು ಸವರಿಸಿದಳು.

"ವೇದಮ್ಮಾ ನಮ್ಮ ಯಜಮಾನರು ಮಗೂನ ನೋಡಿದ್ರಾ?"

"ಏನೋ ನನಗೆ ತಿಳೀದು..."

"ಮಗು ಕಪ್ಪಗಿದೆ ಅಂತ ಬೇಜಾರು ಮಾಡಿಕೊಂಡರೇನೋ..."

"ಕಪ್ಪೋ... ಬಿಳುಪೋ... ಮಗು ಆರೋಗ್ಯವಾಗಿದೆಯಲ್ಲ... ನೀವ್ಯಾಕೆ ಅದನ್ನೆಲ್ಲ ಮನಸ್ಸಿಗೆ ಹಚ್ಚಿಕೊಳ್ತೀರಿ...?"

"ನಮ್ಮ ಅತ್ತೆ ನೋಡಿದ್ರೆ ಖಂಡಿತಾ ನಮ್ಮ ಯಜಮಾನರನ್ನ ಹಂಗಿಸದೇ ಬಿಡುವುದಿಲ್ಲ. ಅವರ ಮನೇಲಿ ಒಬ್ಬರಿಗಿಂತ ಒಬ್ಬರು ಬೆಳ್ಳಗಿದ್ದಾರೆ."

"ದೇವರು ಸೃಷ್ಟಿಸಿದ್ದು ಕಪ್ಪಾದರೇನು! ಗಂಡು ಮಗು... ಬಣ್ಣವನ್ನು ಯಾರು ನೋಡ್ತಾರೆ... ವಿದ್ಯೆ ಬುದ್ಧಿ ಉದ್ಯೋಗ ಮುಖ್ಯ..."

"ಹೌದು ವೇದಮ್ಮಾ ಹೇಗೋ ಬೆಳೆದು ದೊಡ್ಡವನಾಗಿ ಮುಂದೆ ಬಂದು ಅವರ ಅಪ್ಪನಿಗೆ ಸಹಾಯಕನಾದರೆ ಸಾಕು... ಪಾಪ ಅವರಿಗೆ ನನ್ನ

ಹೊರತು ಬೇರೆ ಯಾರೂ ಇಲ್ಲ. ಅವರು ಒಂಟಿಯಾಗಿ ಬಿಟ್ಟಿದ್ದಾರೆ"

"ತುಂಬಾ ಮಾತನಾಡಬೇಡಿ ಅಮ್ಮಾ, ಆಯಾಸವಾಗುತ್ತೆ" ನರ್ಸು ಎಚ್ಚರಿಸಿದಾಗ ಲಲಿತ ರಗ್ಗು ಹೊದೆದು ಮಲಗಿದಳು.

ಒಂದು ವಾರ ಕಳೆದರೂ ಲಲಿತ ಹಾಲು ಕುಡಿಸುವಂತೆ ಕಾಣದಿದ್ದಾಗ ಅವಳಿಗೆ ದುಃಖವಾಗಿತ್ತು.

"ಕೆಲವರಿಗೆ ಹೀಗಾಗುತ್ತೆ. ಅದಕ್ಕೆ ಅಳುವುದೇಕೆ ? ಒಳ್ಳೆಯ ಪುಡಿ ಹಾಲು ಸಿಗುತ್ತದೆ ಯೋಚಿಸಬೇಡಿ" ನರ್ಸು ಸಮಾಧಾನ ಹೇಳಿದ್ದಳು.

ಆದರೂ ಲಲಿತ ನಿರಾಶಳಾಗಿದ್ದಳು. ತನ್ನ ಗಂಡನಿಗೆ ತಿಳಿದರೆ ಏನೆಂದುಕೊಳ್ತಾನೋ ಎಂದು ಹೆದರಿದ್ದಳು. ಆದರೆ ಗೋಪಾಲ ಇದುವರೆಗೂ ಮಗುವಿನ ಬಗ್ಗೆ ವಿಚಾರಿಸಿಯೇ ಇಲ್ಲ ಎನ್ನುವುದು ಅವಳಿಗೆ ತಿಳಿದಿರಲಿಲ್ಲ.

ಯಾರ ಅತ್ಯಾಚಾರಕ್ಕೆ ಹುಟ್ಟಿದ ಮಗುವೋ, ತನ್ನ ಮಗುವಾಗಿ ಬೆಳೆಯಬೇಕಾಗಿ ಬಂದುದಕ್ಕೆ ಅಸಹ್ಯಗೊಂಡಿದ್ದ. ಎಲ್ಲಾ ಬಿಟ್ಟು ತನಗೇ ಈ ಸ್ಥಿತಿ ಒದಗಬೇಕೇ ಡಾಕ್ಟರು ಬೇರೆ ಕರೆಸಿ ಹೇಳಿದ್ದರು.

"ಇನ್ನು ನಿಮ್ಮ ಹೆಂಡತಿ ಗರ್ಭಿಣಿಯಾಗುವುದು ಸಾಧ್ಯವೇ ಇಲ್ಲ, ಈ ವಿಷಯವನ್ನು ಆಕೆಗೆ ತಿಳಿಸಿದ್ದರೆ ಆಕೆಯ ಜೀವಕ್ಕೆ ಅಪಾಯ" ಎಂದಿದ್ದರು. ಈ ವಿಷಯ ಅವನ ತಲೆಯನ್ನು ಕೊರೆಯುತ್ತಿತ್ತು. ಸಮ್ಮಿಶ್ರ ಭಾವನೆಗಳಿಂದ ಅವನು ಜರ್ಝರಿತನಾಗಿದ್ದ.

ಲಲಿತಂಗೆ ಈ ವಿಷಯ ತಿಳಿದರೆ ಖಂಡಿತಾ ಬದುಕುವುದಿಲ್ಲ ಎನ್ನುವುದನ್ನು ಬಲ್ಲ. ಆದ್ದರಿಂದ ಅವಳಿಗೆ ನೋವಾಗಬಾರದೆಂದು ದಿನದಲ್ಲಿ ಎರಡು ಬಾರಿ ಬಂದು ಅವಳನ್ನು ವಿಚಾರಿಸಿಕೊಂಡು ಹೋಗುತ್ತಿದ್ದ. ಮಗುವನ್ನು ಮತ್ತೆ ನೋಡಿರಲೇ ಇಲ್ಲ. ನರ್ಸು ಬೇರೆ ಆಸ್ಪತ್ರೆಯಿಂದ ತಂದಾಗ ಮಾತ್ರ ತೋರಿಸಿದ್ದಳು. ಗಂಡು ಮಗು ಎಂದು ತಿಳಿಸಿದ್ದಳು. ನೋಡಿದಂತೆ ಮಾಡಿ, ಅವನು ಅವಳಿಗೆ ಹಣ ಕೊಟ್ಟಿದ್ದ. ಡಾಕ್ಟರೇ ಆಸಕ್ತಿ ವಹಿಸಿದ್ದರಿಂದ ಈ ವಿಷಯ ರಹಸ್ಯವಾಗಿತ್ತು.

'ಮಗೂನ ನೋಡಿದ್ರಾ' ಎಂದು ಕೇಳುವ ತವಕವಾಗಿದ್ದರೂ, ಲಲಿತ ತಡೆದುಕೊಂಡಿದ್ದಳು. ಅವನ ಮುಖದ ಅಸಮಾಧಾನದ ಗೆರೆಗಳು ಅವಳನ್ನು ಎಚ್ಚರಿಸಿದ್ದವು.

"ಮನೆಗೆ ಯಾವಾಗ ಹೋಗೋಣ?"

"ಡಾಕ್ಟರನ್ನ ಕೇಳಿ ಹೇಳ್ತೀನಿ..." ಅವನು ಅವಳೆದುರಿನಿಂದ ತಪ್ಪಿಸಿಕೊಳ್ಳುವವನಂತೆ ಹೊರಗೆ ಬಂದಿದ್ದ.

"ನೋಡಿದ್ರಾ ವೇದಮ್ಮ... ಅವರಿಗೆ ಕೋಪ..."

"ಕೋಪ...ಯಾಕೆ"?

"ನಿಮಗೆ ಅರ್ಥವಾಗಲ್ಲ ಬಿಡಿ..."

"ಹೌದು ಲಲಿತಮ್ಮ ಇದೆಲ್ಲಾ ನನಗೆ ಅರ್ಥವಾಗದ ವಿಷಯ... ನನಗೆ ಮಕ್ಕಳಾಗಲಿಲ್ಲವಲ್ಲ..." ವೇದಮ್ಮ ನೊಂದು ನುಡಿದಾಗ ಲಲಿತ ಪೆಚ್ಚಾಗಿದ್ದಳು.

"ತಪ್ಪು ತಿಳಕೋಬೇಡಿ ವೇದಮ್ಮ... ನಿಮ್ಮ ಮನಸ್ಸಿಗೆ ನನ್ನ ಮಾತಿನಿಂದ ನೋವಾಗಿದ್ದರೆ ಕ್ಷಮಿಸಿ..."

"ಪರವಾಗಿಲ್ಲಬಿಡಿ... ನನ್ನ ಚಿಕ್ಕ ತಂಗಿ ಇದ್ದಂತೆ ನೀವು... ನನ್ನ ಅತ್ತೆ ಮಾವನಾಡಿದ ಮಾತುಗಳಿಗೇ ನಾನು ನೊಂದುಕೊಳ್ಳುತ್ತಿರಲಿಲ್ಲ.

"ಪಾಪ... ನಿಮ್ಮಂತಹವರಿಗೆ ಇಂತಹ ಕಷ್ಟ ಬರಬಾರದಾಗಿತ್ತು"

"ಅಂತಹ ಕಷ್ಟ ಬಂದುದರಿಂದಲೇ ನಿಮ್ಮಂಥ ಒಳ್ಳೆಯವರ ಮನೆ ಸೇರುವ ಅವಕಾಶ ನನಗೆ ಸಿಕ್ಕಿತು"

"ನನ್ನ ಮಗೂನೇ ನಿಮ್ಮ ಮಗು ಅಂತ ತಿಳಿದುಕೊಳ್ಳಿ ವೇದಮ್ಮ... ದೇವರ ಅನುಗ್ರಹವಿದ್ದರೆ, ನನಗೆ ಇನ್ನೂ ಒಂದೆರಡು ಮಕ್ಕಳಾಗಬಹುದು..." ಲಲಿತ ವೇದಮ್ಮ ಕೈಮುಟ್ಟಿ ನುಡಿದಾಗ, ಬಾಗಿಲಲ್ಲಿ ನಿಂತಿದ್ದ ಗೋಪಾಲ ಹಾಗೇ ಹಿಂದಕ್ಕೆ ಸರಿದಿದ್ದ.

ಇವಳಿಗೆ ಇನ್ನೂ ಒಂದೆರಡು ಮಕ್ಕಳಾಗುವ ಬಯಕೆ ಎಂದುಕೊಂಡಾಗ ಏನೋ ಅವಮಾನವಾದಂತೆ ಅನ್ನಿಸಿತ್ತು.

ಲಲಿತಂಗೆ ಬೇಸರವಾಗಬಾರದೆಂದು, ನಾಮಕರಣ ಸಮಾರಂಭವನ್ನಿಟ್ಟುಕೊಂಡ. ಊರಿನಿಂದ ತಂದೆ ತಾಯಿ ಪರಿವಾರ ಸಮೇತವಾಗಿ ಬಂದಿಳಿದಿದ್ದರು. ಹಿರಿಯವರು ಯಾರೂ ಇಲ್ಲದ ಮನೆ ಎಂದುಕೊಂಡು ತಾಯಿ ತನ್ನ ಯಜಮಾನಿಕೆಯನ್ನು ಪ್ರದರ್ಶಿಸಲಾರಂಭಿಸಿದ್ದಳು.

"ಏನೋ ಗೋಪಾಲ... ಮಗು ನಿಮ್ಮಿಬ್ಬರ ಹಾಗೂ ಇಲ್ಲವಲ್ಲ... ಆಸ್ಪತ್ರೇಲಿ ಅದಲು ಬದಲೇನಾದ್ರೂ ಆಯ್ತೋ ಹೇಗೆ?" ಅಲ್ಲಿದ್ದವರು ನಕ್ಕಿದ್ದರು.

"ಇರಬಹುದು... ಏನೀಗ? ಅಪರೂಪಕ್ಕೆ ನಕ್ಕಂತೆ ಮಾಡಿದ್ದ.

"ಯಾಕೋ... ಎಲ್ಲೋ ಹೆಣ್ಣು ಮಗು ಹುಟ್ಟಿತ್ತು ಅಂತ ಕಾಣಿಸುತ್ತೆ. ಗಂಡು ಮಗು ಹೇಗಿದ್ದರೇನು ಅಂತ ಯಾರದ್ದೋ ಮಗುವನ್ನು ಹಾರಿಸಿದ್ದೀಯ..."

"ಹುಂ. ಹೌದು, ನನಗೆ ಬೇರೆ ಕೆಲಸವಿಲ್ಲ" ಅವನು ರೇಗಿದಾಗ ಕಿಸಕ್ಕನೆ ನಕ್ಕವರೆಲ್ಲ ತೆಪ್ಪಗಾದರು.

ಅವರುಗಳ ಮಾತನ್ನು ಕೇಳಿಸಿಕೊಂಡ ವೇದಮ್ಮ ನೊಂದಳು.

"ಬಸಿರಿ ಅಂತ ನಮಗೆ ಒಂದು ಮಾತು ತಿಳಿಸಿದ್ರೆ ನಾವುಗಳು ಬಂದು ಆರೈಕೆ ಮಾಡುತ್ತಿರಲಿಲ್ಲವೇ... ಹಾಲಿಗೆ ಕೇಸರಿ ಹಾಕಿ ಕುಡಿದಿದ್ದರೆ ಮಗು ಖಂಡಿತಾ ಬೆಳ್ಳಗಿರುತ್ತಿತ್ತು..."

"ಮಗು ಹೇಗಿದ್ದರೇನು! ಮದುವೇಲಿ ರಂಪ ಮಾಡಿ ಹೋದವಳು ನೀನು... ಬಂದಾಗೆಲ್ಲಾ ನಿನ್ನ ಮಾತಿನ ಜಾಡನ್ನೇ ಬದಲಾಯಿಸಲಿಲ್ಲವಲ್ಲ. ನೀನು ಹಿತವಾಗಿದಿದ್ದರೆ, ನೀನೇ ಬಂದಿರುತ್ತಿದ್ದೆ. ನಾನು ಬಾ ಅಂತ ಕರೀಬೇಕಿರಲಿಲ್ಲ. ಈಗ ಬಂದಿದೀಯ ನಾಲ್ಕು ದಿನ ತೆಪ್ಪಗೆ ಇದ್ದು ನಿನ್ನ ಪಾಡಿಗೆ ನೀನು ಹೋಗು..."

"ಬಾಣಂತನ ಯಾರು ಮಾಡ್ತಾರೆ....?"

"ವೇದಮ್ಮ ಇದಾರೆ... ಅವರಿಗೆ ಎಲ್ಲಾ ಗೊತ್ತು..."

"ಹೌದು... ಅಂದ್ಹಾಗೇ ಆ ಹುಡುಗಿ ಯಾರು? ಚೆನ್ನಾಗಿ ತಿಂದು ಕೊಬ್ಬಿದ ಗೂಳಿ ಹಾಗಿದಾಳೆ. ಲಲಿತನ ಊಟವನ್ನೆಲ್ಲಾ ಅವಳೇ ತಿಂತಾಳೇನೋ...?"

"ಇರಬಹುದು ಯಾರು ಏನೂ ಬೇಕಾದರೂ ಮಾಡಲಿ, ಇದು ನಿನ್ನ ಮನೆಯೇನಲ್ಲವಲ್ಲ."

"ಪರವಾಗಿಲ್ಲ ತಗೋ... ತಾಯಿಗೆ ಮಗನ ಮನೆ ಬೇರೆಯವರ ಮನೆ ಹೇಗಾಗುತ್ತೆ....? ನಿನ್ನ ಮಾತೇ ವಿಚಿತ್ರ"

"ನೀನು ಹೀಗೆಲ್ಲಾ ಮಾತನಾಡುವುದಾದರೆ ಇವತ್ತೇ ಹೊರಡು. ನಾನು ಹೇಳಿ ಕಳಿಸಿದ್ದೇ ತಪ್ಪೇನೋ ಅಂತ ಅನ್ನಿಸ್ತಿದೆ ಈಗ."

"ನೀನಾಗಿಯೇ ಹೋಗು ಅಂತ ಅಂದ ಮೇಲೆ ನಾನು ಇಲ್ಲಿ ಒಂದು ಕ್ಷಣವೂ ಇರುವುದಿಲ್ಲ." ತಾಯಿ ಅಳಲು ಪ್ರಾರಂಭಿಸಿದಾಗ ಗೊಣಗಿದ್ದ.

"ನಿನ್ನ ಹಣೇ ಬರಹವೇ ಇಷ್ಟು"

ಲಲಿತ ಮಾತ್ರ ಗೋಗರೆದಿದ್ದಳು.

"ನಿನ್ನ ಗಂಡನಿಗೇ ಬೇಡವಾದ ಮೇಲೆ ನಾನೇಕೆ ಇಲ್ಲಿರಲಿ? ನಿಮ್ಮ ಹಣೇಬರಹ ಏನಾದ್ರಾ ಮಾಡ್ಕೊಳ್ಳಿ. ನನಗಂತೂ ಬಂದಾಗೆಲ್ಲಾ ಹೋಗು ಅಂತ ಅನ್ನಿಸಿಕೊಳ್ಳುವುದು ತಪ್ಪಿಲ್ಲ"

ಗೇಟಿನ ಹತ್ತಿರ ವೇದಮ್ಮ ಅವಳನ್ನು ತಡೆದಿದ್ದಳು.

"ನಿಮ್ಮ ಸೊಸೆಯ ಆರೋಗ್ಯ ಇನ್ನು ಸುಧಾರಿಸಿಲ್ಲ. ನಿಮ್ಮಂತಹ ಹಿರಿಯರ ಅವಶ್ಯಕತೆ ಇದೆ. ನಿಮ್ಮ ಮಗನ ಮಾತಿಗೆ ಬೇಸರಿಸಿ ಹೋಗಬೇಡಿ. ಲಲಿತಮ್ಮ ನೊಂದ್ಕೋತಾರೆ.

"ನನಗೆ ತಿಳುವಳಿಕೆ ಹೇಳಲು ನಿನಗೆ ಯಾವ ಅಧಿಕಾರವೂ ಇಲ್ಲ.

ಮನೆಯ ಯಜಮಾನಿಕೆಯೆಲ್ಲಾ ನಿನ್ನ ಕೈಗೆ ಸಿಕ್ಕಿದೆಯಲ್ಲ ಉಡಾಯಿಸು...." ಎಂದು ವ್ಯಂಗ್ಯವಾಗಿ ನುಡಿದು ಹೊರಟುಹೋಗಿದ್ದಳು.

ಆ ರಾತ್ರಿ ಲಲಿತ ಅತ್ತು ಅತ್ತು ಸುಸ್ತಾದಳು. ಸಣ್ಣದಾಗಿ ಜ್ವರ ಬಂದಿತೆಂದು ತಿಳಿದಾಗ ಗೋಪಾಲ ಹೆದರಿದ.

"ಲಲಿತ, ಅಳಬೇಡ, ಮುಂದಿನ ವಾರ ನಾನೇ ಹೋಗಿ ಅಮ್ಮನ್ನ ಕರೆದುಕೊಂಡು ಬರ್ತೀನಿ. ಈಗಲೇ ಹೋಗಿ ಕರೆದರೆ ಅವಳು ಖಂಡಿತಾ ಬರುವುದಿಲ್ಲ" ಅಂತ ಸಮಾಧಾನಗೊಳಿಸಿದ್ದ.

"ನನ್ನ ಅಮ್ಮನ ನೆನಪು ಬಂತು. ಅತ್ತೇನೂ ಕೋಪಿಸಿಕೊಂಡು ಹೊರಟುಹೋದರೆ ನಾನು ಹೇಗಿರಬೇಕು ನೀವೇ ಹೇಳಿ"

"ಅವಳಿಗೇನೋ ಕೋಪ ನನ್ನ ಮೇಲೆ"

"ನಾನು ಸತ್ತು ಹೋಗಿದ್ದರೆ ಚೆನ್ನಾಗಿತ್ತು. ಅವರು ನಿಮಗೆ ಬೇರೆ ಮದುವೆ ಮಾಡಿರುತ್ತಿದ್ದರು."

"ಲಲಿತಾ... ಇಂಥ ಮಾತನ್ನು ನನ್ನ ಎದುರಿಗೆ ಆಡಬೇಡ. ನೀನು ಸತ್ತು ಹೋದರೆ ನಾನು ಬದುಕಿರುತ್ತೀನಾ...?"

ಲಲಿತ ಎಷ್ಟೋ ಹೊತ್ತಿನ ನಂತರ ಕಣ್ಣೊರಸಿಕೊಂಡು ಕೇಳಿದ್ದಳು.

"ನೀವ್ಯಾಕೆ ಖುಷಿಯಾಗಿಲ್ಲವಲ್ಲ... ಮಗ ಹುಟ್ಟಿದ್ದೂ ಸಹ ಸಂತೋಷವಾಗಿಲ್ಲವೇ?

"ಹಾಗಂತ ನಾನೆಲ್ಲಿ ಹೇಳಿದೆ?"

"ಮತ್ಯಾಕೆ ಉದಾಸೀನವಾಗಿದೀರಲ್ಲ..."

"ನಾವು ಇನ್ನೂ ನಾಲ್ಕಾರು ವರ್ಷಗಳು ಬಿಟ್ಟು ಮದುವೆಯಾಗಿದ್ದಿದರೆ ಚೆನ್ನಾಗಿತ್ತು ಲಲಿತಾ... ಬೇಗ ಬೇಗ ಜವಾಬ್ದಾರಿ ಬೆಳೀತಿದೆ...."

"ಇಷ್ಟು ಬೇಗ ಸುಸ್ತಾದ್ರಾ?" ಲಲಿತಾ ನಕ್ಕಾಗ ಅವನು ನಗಲಿಲ್ಲ. ವೇದಮ್ಮ ಊಟದ ತಟ್ಟೆ ಹಿಡಿದು ಬಂದಾಗ ಗೋಪಾಲ ಎದ್ದ.

ಮಗು ಹುಟ್ಟಿದ ಮೇಲೆ ಗಂಡನಿಗೆ ತನ್ನ ಮೇಲೆ ಪ್ರೀತಿ ಕಡಿಮೆ ಆಗಿದೆ ಅಂತ ಲಲಿತ ಭಾವಿಸಿದಳು. ಇದೇ ಮಾತನ್ನು ವೇದಮ್ಮನಿಗೆ ಹೇಳಿದ್ದಳು.

"ಅವರಿಗೆ ಈಗಲೇ ಮಗು ಬೇಡ ಅಂತ ಮನಸ್ನಲ್ಲಿತ್ತೋ ಏನೋ ನನಗೆ ಏನೂ ಹೇಳಿರಲಿಲ್ಲ"

"ಇದೆ ಮಾತನ್ನು ಮತ್ತೆ ಮತ್ತೆ ಏಕೆ ಯೋಚಿಸ್ತೀರಿ?"

"ಅವರನ್ನು ನೋಡಿದರೆ, ಏನೋ ಕೊರಗ್ತಿದಾರೆ ಅಂತನ್ನಿಸುತ್ತೆ." ನಾಳೆಯಿಂದ ನಾನೇ ಅವರ ಅಡಿಗೆ ತಿಂಡೀನ ನೋಡಿಕೊಳ್ತೀನಿ. ನೀವು ಮಗು ಯೋಗಕ್ಷೇಮ ನೋಡಿಕೊಳ್ಳಿ"

"ಚೆನ್ನಾಗಿದೆ... ಇನ್ನೂ ಹದಿನೈದು ದಿನದ ಬಾಣಂತಿ ನೀವು. ಎರಡು ತಿಂಗಳಾದರೂ ಕಳೀಲಿ ತಡೀರಿ..."

"ವೇದಮ್ಮಾ... ಅವರ ಊಟ ತಿಂಡಿ ಕಡೆ ಸ್ವಲ್ಪ ಜಾಸ್ತಿ ಗಮನ ಕೊಡಿ. ನಾನು ಮನೇಲೇ ಇರ್ತೀನಿ ಹೇಗೋ ಆಗುತ್ತೆ"

"ಹಾಗೇ ಆಗಲಿ" ವೇದಮ್ಮ ನುಡಿದಿದ್ದರೂ ಲಲಿತಂಗೆ ಆತಂಕ. ಗಂಡನ ಬಗ್ಗೆ ವೇದಮ್ಮನನ್ನು ವಿಚಾರಿಸುತ್ತಲೇ ಇದ್ದಳು.

ಈ ನಡುವೆ ಹೊಸ ಬಿಸಿನೆಸ್ಸು ಪ್ರಾರಂಭಿಸಿದ್ದೇನೆಂದು, ಎರಡು ವಾರ ಊರಿನಿಂದ ಹೊರಗೆ ಹೋಗಿದ್ದವನು ಬಂದ ತಕ್ಷಣ ಲಲಿತನ್ನಾಗಲಿ, ಮಗುವನ್ನಾಗಲಿ ಕಂಡು ಮಾತನಾಡಿಸದಿದ್ದಾಗ ಲಲಿತಳ ಆತಂಕ ಹೆಚ್ಚಾಗಿತ್ತು ತಾನೇ ಗಂಡನ ರೂಮಿಗೆ ಹೋಗಿದ್ದಳು.

"ಲಲಿತಾ ನೀನ್ಯಾಕೆ ಬರೋಕೆ ಹೋದೆ!" ರೇಗಿದ್ದ. ಅವಳ ಮುಖ ಚಿಕ್ಕದಾಯಿತು.

"ಹದಿನೈದು ದಿನದಿಂದ ಹೊರಗಿದ್ರಿ. ಬಂದ ತಕ್ಷಣ ನನ್ನನ್ನು ಮಾತ ನಾಡಿಸಬೇಕು ಅಂತ ಅನ್ನಿಸಲಿಲ್ವಾ ನಿಮಗೆ! ಮಗೂನ ನೋಡಬೇಕು ಅಂತ ಅನ್ನಿಸೋಲ್ವಾ!"

ಗೋಪಾಲ ತಪ್ಪಿತಸ್ಥನಂತೆ ತಲೆ ತಗ್ಗಿಸಿದ.

"ಸ್ನಾನ ಮಾಡಿಬಿಟ್ಟು ಬರ್ತೀನಿ. ಮಗೂ ಬಾಣಂತಿ ರೂಮಿಗೆ ಹಾಗೇ ಸೀದಾ ಯಾರಾದ್ರೂ ಬರ್ತಾರಾ?" ಲಲಿತ ಸುಮ್ಮನಾಗಿದ್ದಳು.

ಎಷ್ಟೋ ಹೊತ್ತಿನ ನಂತರ ಅವಳ ರೂಮಿಗೆ ಬಂದ. ಮಗು ಮಲಗಿದ್ದುದರಿಂದ ಸುಮ್ಮನೇ ನೋಡಿದಂತೆ ಮಾಡಿದ.

"ಅನಂತ ಅಂತ ನಾಮಕರಣ ಮಾಡಿದ್ರೂ ಮಗೂ ಅಂತ ಕರೀತಿದ್ರೆ ಅದೇ ಹೆಸರು ಉಳಿಯುತ್ತೆ.... ಬೇರೆ ಯಾವುದಾದ್ರೂ ಮುದ್ದಿನ ಹೆಸರನ್ನು ಇಡೋಣ್ವಾ? ಲಲಿತಾ ಆಸೆಯಿಂದ ಕೇಳಿದಾಗ ನಿರಾಕರಿಸಿದ್ದ.

"ಯಾವುದೋ ಒಂದು.... ನಿನಗೆ ಹೇಗೆ ಇಷ್ಟವೋ ಹಾಗೇ ಮಾಡು ನನ್ನನ್ನೇನೂ ಕೇಳಬೇಡ..." ಲಲಿತ ಪೆಚ್ಚಾದಳು.

ಅನಂತಯ್ಯ ಎನ್ನುವುದು ಲಲಿತಳ ತಾತನ ಹೆಸರು. ಅದನ್ನೇ ಇಡುವಾಗ ಗೋಪಾಲ ಏನನ್ನು ಆಡಿರಲಿಲ್ಲ. ತನ್ನದಲ್ಲದ ಮಗುವಿಗೆ ಯಾವ ಹೆಸರಾದರೆ ಏನು ಎಂಬ ಧೋರಣೆ.

ಮಗು ತನ್ನದಲ್ಲ ಎನ್ನುವುದಕ್ಕಿಂತ ಯಾರ ವ್ಯಭಿಚಾರಕ್ಕೆ ಹುಟ್ಟಿದ ಕೂಸೋ ಎನ್ನುವುದು ಅವನಿಗೆ ಯೋಚಿಸಲೂ ಇಷ್ಟವಾಗದ್ದು... ಎಷ್ಟೋ ಸಲ ನಿಜವನ್ನು ಲಲಿತನಿಗೆ ತಿಳಿಸಿಬಿಡುವುದು ಎಂದುಕೊಂಡಿದ್ದರೂ, ಅವಳ

ಆರೋಗ್ಯ ಕೆಡುತ್ತದೆ ಎಂದು ಹೆದರಿ ಸುಮ್ಮನಾಗಿದ್ದ.

"ಲಲಿತಾ ನೀನು ಖುಷಿಯಾಗಿದೀಯಾ?" ಇದ್ದಕ್ಕಿದ್ದಂತೆ ಕೇಳಿದ್ದ.

"ಹೂಂ ಏಕೆ! ನಾನು ಮೆಚ್ಚಿದ ಗಂಡ ನೀವು... ನನ್ನ ಒಡಲ ಕುಡಿ ಇವನು, ನನಗಿನ್ನೇನು ಬೇಕು?"

"ಇಷ್ಟೇನಾ ನಿನ್ನ ಆಸೆ ಜೀವನದಲ್ಲಿ?"

"ಸದ್ಯಕ್ಕೆ ಇಷ್ಟೇ... ಮುಂದೆ ಇವನ ಓದು, ವಿದ್ಯಾಭ್ಯಾಸ... ಕೆಲಸ ಮದುವೆ..."

"ಸಾಕು... ಸಾಕು... ಮಾತನ್ನು ಕತ್ತರಿಸಿದ. ಈಗ ಊಟ ಮಾಡಿ ಮಲಗೋಣ... ಇದನ್ನೆಲ್ಲಾ ಈಗಲಿಂದ ಯಾಕೆ ಯೋಚಿಸಬೇಕು?"

ಊಟದ ನಂತರ ಎಲ್ಲರೂ ಮಲಗಿದ್ದರೂ, ಲಲಿತಂಗೆ ನಿದ್ದೆ ಬಂದಿರಲಿಲ್ಲ. ಅಲ್ಲೇ ರೂಮಿನಲ್ಲಿ ಮಲಗಿದ್ದ ವೇದಮ್ಮ ಗೊರಕೆ ಹೊಡೆಯುತ್ತಿದ್ದಾಗ ನಿಧಾನವಾಗಿ ಎದ್ದು ಗಂಡನ ರೂಮಿಗೆ ಬಂದಳು.

"ಯಾರು?" ಎಂದು ಬೆಚ್ಚಿ ಕೇಳಿದ್ದ.

"ನಾನು" ಎಂದಿದ್ದಳು ಪಿಸುದನಿಯಲ್ಲಿ ಹತ್ತಿರ ಬಂದು.

"ಏನಾದ್ರೂ ಬೇಕಿತ್ತಾ?" ದೀಪ ಹಾಕಲು ಹೋದವನನ್ನು ಲಲಿತ ತಡೆದು ಅವನ ಬಳಿ ಕುಳಿತಳು.

"ಲಲಿತಾ... ಇಷ್ಟು ಹೊತ್ನಲ್ಲಿ ಏಕೆ ಬಂದೆ... ಹೋಗು ಮಲಕ್ಕೋ..." ಸಣ್ಣ ಮಕ್ಕಳಿಗೆ ಹೇಳುವಂತೆ ಹೇಳಿದ್ದ.

"ನಿಮಗೆ ಬೇಜಾರಾಗುಲ್ವಾ..."

"ಯಾಕೆ ಬೇಜಾರೇಕೆ?"

"ನಾನು ಎಷ್ಟೋ ದಿನದಿಂದ ನಿಮ್ಮಿಂದ ದೂರವೇ ಇದೀನಲ್ಲ..." ಗೋಪಾಲ ಹೆದರಿದ. ಅವಳ ಮಾತು ಅವನಿಗೆ ಅರ್ಥವಾಗಿತ್ತು.

"ಲಲಿತ ಸುಮ್ಮನೇ ಹೋಗು... ನಿನಗಿನ್ನೂ ನಿಶ್ಶಕ್ತಿ ಇದೆ"

"ಯಾಕೆ ಹೋಗು ಅಂತೀರಿ... ನಾನು ನಿಮ್ಮ ಹೆಂಡತಿ"

"ನನಗೆ ಗೊತ್ತು... ನಿನಗೆ ಪೂರ್ತಿ ಶಕ್ತಿ ಬರುವವರೆಗೂ ನಾವು ಒಟ್ಟಿಗೆ ಇರುವಂತಿಲ್ಲ. ಡಾಕ್ಟರು ಹಾಗೇ ಹೇಳಿದಾರೆ"

"ನಾನು ಕೂತು ಇಲ್ಲಿ ಮಾತನಾಡಿದರೂ ತಪ್ಪಾ...?"

"ಗಂಡ ಹೆಂಡತಿ ಮಾತು, ಸರಸ ಸಲ್ಲಾಪಕ್ಕೆ ತಿರುಗುವುದಕ್ಕೆ ಹೆಚ್ಚು ಹೊತ್ತು ಬೇಕಾಗುವುದಿಲ್ಲ ಗೊತ್ತಾ!"

"ಹಾಗಾದ್ರೆ ನನ್ನ ಅಗತ್ಯ ನಿಮಗಿಲ್ಲ ಅಂತಾಯ್ತು"

"ಹಾಗೇ ತಿಳಕೋ..." ಅವನು ಒರಟಾಗಿ ನುಡಿದಾಗ ಲಲಿತ ಅಳಲು

ಪ್ರಾರಂಭಿಸಿದಳು.

"ಲಲಿತಾ ನೋಡು, ಇದಕ್ಕೇ ವೀಕ್‌ನೆಸ್ ಎನುವುದು. ಎಷ್ಟು ಬೇಗ ಅಳು ಬರುತ್ತೆ ನಿನಗೆ... ನೀನು ನನ್ನ ನೆಚ್ಚಿನ ಮಡದಿ. ನಿನಗೆ ನಾನು ನೋವುಂಟು ಮಾಡಲು ಇಷ್ಟಪಡುವುದಿಲ್ಲ. ನೀನು ಚೆನ್ನಾಗಿ ರೆಸ್ಟ್ ತಗೋ ನಾನು ಎಲ್ಲಿಯೂ ಓಡಿ ಹೋಗುವುದಿಲ್ಲ"

ಆದರೂ ಲಲಿತಂಗೆ ಏನೋ ದಿಗಿಲು. ಗಂಡ ಹದಿನೈದು ದಿನ ಊರಿನಲ್ಲಿರಲಿಲ್ಲ. ತನ್ನ ಬಳಿಗೆ ಬಂದು ಮಾತನಾಡುವ ಆಸೆ ಸಹ ತೋರಿಸಿಲ್ಲ. ತನ್ನಿಂದ ದೂರ ದೂರವೇ ಇರಬೇಕಾದರೆ ಏನೋ ಕಾರಣವಿದೆ. ಅದನ್ನು ತಿಳಿದುಕೊಳ್ಳಲೇಬೇಕು ಎನ್ನುವ ಹಠ ತೊಟ್ಟವಳಂತೆ ಅವನ ಮೈ ಮುಟ್ಟಿ ಅಲುಗಾಡಿಸಿದಳು. ಅವನು ದೂರ ಸರಿದ.

"ನಿಮಗೇನಾಗಿದೆ ಹೇಳಿ...ನಿಮ್ಮ ಉಧಾಸೀನ ನನ್ನನ್ನು ಹೆದರಿಸುತ್ತೆ. ಏನೇ ತೊಂದರೆ ಇದ್ದರೂ ನನಗೆ ಹೇಳಿ..." ಅವಳು ಬಲವಂತ ಮಾಡಿದಾಗ ಅವನಿಗೂ ರೇಗಿತ್ತು.

"ಡಾಕ್ಟರು, ನಾನೂ ನೀನೂ ಆದಷ್ಟು ದಿನ ದೂರ ಇರಬೇಕೂಂತ ಸಲಹೆ ನೀಡಿದಾರೆ. ನೀನು ಮತ್ತೆ ತಾಯಿ ಆಗಲೇಬಾರದು ಅಂತ ಹೇಳಿದಾರೆ"

ಲಲಿತ ಸಿಡಿದು ದೂರ ನಿಂತಳು.

"ಸುಳ್ಳು...ಇದು ನೀವು ನನ್ನನ್ನು ದೂರ ತಳ್ಳಲು ಹೂಡಿರುವ ಉಪಾಯ..."

"ಲಲಿತಾ... ಇಷ್ಟೇನಾ ನೀನು ನನ್ನನ್ನು ಅರ್ಥ ಮಾಡಿಕೊಂಡಿರುವುದು... ನಿನ್ನಿಂದ ದೂರ ಇದ್ದು ನಾನೇನು ಸಾಧಿಸುತ್ತೇನೆ! ಇದೆಲ್ಲಾ ನಿನ್ನ ಒಳ್ಳೆಯದಕ್ಕೇ... ನನಗೆ ನೀನು ಬೇಕು... ನಿನ್ನನ್ನು ಕಳೆದುಕೊಳ್ಳಲು ನಾನು ಸಿದ್ಧನಿಲ್ಲ. ನನ್ನ ಮಾತನ್ನು ನಂಬು... ನಿನಗೋಸ್ಕರ ನಾನು ನನ್ನ ಆಸೆಗಳನ್ನ ತಡೆದಿಟ್ಟುಕೊಳ್ಳಬಲ್ಲೆ... ಲಲಿತಾ ಪರಿಸ್ಥಿತೀನ ಅರ್ಥ ಮಾಡ್ಕೋ ಎಂದು ಗಟ್ಟಿಸಿ ಹೇಳಿದ. ಅವನ ಧ್ವನಿಯೂ ಗದ್ಗದವಾದಾಗ ಲಲಿತ ನಿರುತ್ತರವಾದಳು.

"ನನ್ನನ್ನು ಕ್ಷಮಿಸಿ" ಎಂದಷ್ಟೇ ಹೇಳಿ, ಅವನ ರೂಮಿನಿಂದ ಆಚೆ ಬಂದಳು. ನನ್ನಿಂದ ಎಷ್ಟು ದಿನ ದೂರವಿದ್ದಾನು! ಅವನಾಗಿಯೇ ಬರಬಹುದು ಎಂದು ಕಾದಳು. ಅವನ ರಸಿಕತೆ ಅವಳಿಗೆ ತಿಳಿದಿತ್ತು. ರಸಿಕ ಗಂಡಸರು ಒಂಟಿಯಾಗಿ ಮಲಗಲಾರರು ಎನ್ನುವುದನ್ನು ಎಲ್ಲಿಯೋ ಓದಿದ್ದಳು. ಅವಳ ಆತಂಕಕ್ಕೆ ಕೊನೆಯಿಲ್ಲವಾಗಿತ್ತು. ಆ ಕ್ಷಣದಲ್ಲೂ ನನ್ನ ಗಂಡ ಎಷ್ಟು ಒಳ್ಳೆಯವನು, ನನ್ನ ಆರೋಗ್ಯಕ್ಕಾಗಿ ನನ್ನಿಂದ ದೂರ ಇದಾನಲ್ಲ ಎಂದೆನಿಸಿದಾಗ ಅವನ ಬಗ್ಗೆ ಹೆಮ್ಮೆ ಮೂಡಿತ್ತು.

ತನ್ನ ಅಸಾರೋಗ್ಯದಿಂದ ಅವನು ಸುಖವಾಗಿರಲು ಸಾಧ್ಯವಿಲ್ಲವಾಯಿತಲ್ಲ ಎನ್ನುವ ಕೊರಗು ಅವಳನ್ನು ಕಾಡತೊಡಗಿತು. ದಿನಗಳು ಉರುಳಿದವು. ಲಲಿತ ಗಂಡನನ್ನು ಸಂಶಯದಿಂದ ನೋಡಲಾರಂಭಿಸಿದ್ದಳು. ಆದರೆ ಅಂತಹ ಯಾವ ಪುರಾವೆಯೂ ಸಿಕ್ಕಿರಲಿಲ್ಲ ಅವನು ಮನೆಗೆ ತಡವಾಗಿ ಬರುವಷ್ಟರಲ್ಲಿ ವಿನಾಕಾರಣ ಅವಳ ಎದೆ ನಡುಗುತ್ತಿತ್ತು. ತನ್ನ ಗಂಡ ಹೊರಗೆ ಮಜಾಮಾಡಿ ಬರುತ್ತಾನೆಂಬ ಅನುಮಾನ ಅವಳನ್ನು ಕಾಡತೊಡಗಿತು.

ಬೇರೆ ಯಾರೂ ಇಲ್ಲದುದರಿಂದ, ವೇದಮ್ಮನೇ ತನ್ನ ಆಪ್ತ ಗೆಳತಿ ಎಂಬಂತೆ ಅವಳೊಡನೆ ತನ್ನ ಅಳಲನ್ನು ತೋಡಿಕೊಂಡಿದ್ದಳು.

"ಮುಂಚೆ ನಮ್ಮವರು ಹೀಗಿರಲಿಲ್ಲ ವೇದಮ್ಮ...ಈಚೆಗೆ ತುಂಬಾ ಬದಲಾಗಿ ಹೋಗಿದಾರೆ... ಮಕ್ಕಳಾದರೆ ಗಂಡನ ಪ್ರೀತಿ ಕಡಿಮೆಯಾಗುತ್ತೆ ಅಂತ ನನಗೆ ಗೊತ್ತಿರಲಿಲ್ಲ."

ಇದಕ್ಕೆ ವೇದಮ್ಮ ಏನು ಹೇಳಿಯಾಳು? ಆದರೂ, ನುಡಿದಳು.

"ಮಗೂನ ನಾನು ನೋಡಿಕೊಳ್ತಿನಿ, ಅವರ ಬೇಕು ಬೇಡುಗಳನ್ನೂ ನೀವೇ ಗಮನಿಸಿ..."

"ಎಲ್ಲಿ ಬೈತಾರೋ ಅಂತ ನನಗೆ ಹೆದರಿಕೆ. ನಿಮ್ಮ ಹತ್ತಿರ ಈ ಮಾತನ್ನಾಡಲು ನನಗೆ ನಾಚಿಕೆಯಾಗುತ್ತೆ, ಆದರೂ ಹೇಳ್ತೀನಿ, ಅವರು ಒಂಟಿಯಾಗಿ ಮಲಗಲು ಇಷ್ಟವನ್ನೇ ಪಡುತ್ತಿರಲಿಲ್ಲ... ಅವರ ಈಚೆಗಿನ ನಡವಳಿಕೆ ನನಗೆ ಭಯವನ್ನುಂಟು ಮಾಡುತ್ತೆ. ಕಾರಣ ಏನೂಂತ ನನಗೆ ತಿಳೀತಿಲ್ಲ..."

"ಅದನ್ನು ನೀವೇ ಪತ್ತೆ ಹಚ್ಚಬೇಕು. ನಾನು ಹೇಗೆ ಹೇಳಲಿ?"

"ಹೌದು, ಅದೇ ಸರಿ..."

ಲಲಿತ ಪ್ರೀತಿಯಿಂದ ಮಾತನಾಡುತ್ತಾ, ಅವನನ್ನು ಹೆಚ್ಚು ಹೆಚ್ಚು ಗಮನಿಸಿದರೂ, ಅವಳ ಸಂದೇಹ ಪರಿಹಾರವಾಗದಿದ್ದಾಗ, ಅತ್ತು ಕರೆದು ಅವನನ್ನು ಬೇಡಿಕೊಂಡಿದ್ದಳು.

"ಪ್ಲೀಸ್, ನನ್ನನ್ನು ದೂರ ಮಾಡಬೇಡಿ... ನಿಮ್ಮ ಪ್ರೀತಿಯಿಲ್ಲದೇ ನಾನು ಬದುಕಿರಲಾರೆ"

"ಛಿ, ಹುಚ್ಚಿ...ನನ್ನ ಪ್ರೀತಿ ನಿನಗೆ ಮಾತ್ರ ಮೀಸಲು...ನಿನಗೆ ನನ್ನ ಮೇಲೇನೋ ಅನುಮಾನ....ಡಾಕ್ಟರರ ಸಲಹೆಯಂತೆ ನಿನ್ನನ್ನು ದೂರ ಇಟ್ಟಿದ್ದೀನಿ. ಆದರೆ ನಾನು ನಿನ್ನನ್ನು ಮಾತ್ರ ಪ್ರೀತಿಸುತ್ತೀನಿ"

"ಮತ್ತೆ... ನನ್ನ ಮಗುವನ್ನೂ ಏಕೆ ದ್ವೇಷಿಸ್ತೀರಿ?"

ಅವನು ತಟಸ್ಥನಾದ. ಮತ್ತೆ ಮಗುವಿನ ಮಾತು, ತನಗಿಷ್ಟವಿಲ್ಲದ, ತನ್ನದಲ್ಲದ ಮಗುವಿನ ಮಾತು.

"ಲಲಿತಾ... ನಿನ್ನ ಪ್ರೀತಿಗೂ ಇದಕ್ಕೂ ಏನು ಸಂಬಂಧ...?"

"ಮತ್ತೆ ಮಗುವಿನ ಮುಖ ನೋಡುಕ್ಕ ಹಿಂಜರಿಯುತ್ತೀರಲ್ಲ ಏನು ಕಾರಣ?"

"ಮಗುವಿನ ತಾಯಿ ನೀನು... ನಿಮ್ಮಿಬ್ಬರ ಮಧ್ಯೆ ನನಗೇನು? ಅಲ್ವಾ"

"ಹೀಗೇ ಏನಾದರೂ ಹೇಳ್ತೀರಿ...ನಿಮ್ಮ ಮನಸ್ನಲ್ಲಿ ಏನಿದೆ ಹೇಳಿ, ನಮ್ಮ ಮಗು ಬೆಳ್ಳಗಿಲ್ಲ ಅಂತ ನಿಮಗೆ ಬೇಜಾರೇ...?"

ಏನನ್ನಾದರೂ ಹೇಳಬೇಕು ಎಂದುಕೊಂಡು "ಇರಬಹುದು..." ಎಂದಿದ್ದ ಲಲಿತಳ ಮನಸ್ಸು ಮುದುಡಿತ್ತು.

"ಇವನೆಂತಹ ತಂದೆ... ಮಗುವನ್ನು ಈ ಕಾರಣದಿಂದ ದ್ವೇಷಿಸು ತ್ತಿದ್ದಾನೆಯೇ... ಹಾಗಾದರೆ ಇವನ ಪ್ರೀತಿಯನ್ನು ಗಳಿಸಬೇಕಾದರೆ ತಾನು ಆದಷ್ಟು ಬೇಗ ಇನ್ನೊಂದು ಮಗುವನ್ನು ಹೆರಬೇಕು ಎಂದುಕೊಂಡು ಅದೇ ಮಾತನ್ನು ಆಡಿದ್ದಳು.

ಗೋಪಾಲ ಗಹಗಹಿಸಿ ನಕ್ಕಿದ್ದ.

"ಇಲ್ಲ ಲಲಿತಾ ಇಲ್ಲ, ಇನ್ನು ನಮಗೆ ಮಕ್ಕಳಾಗುವಂತೆಯೇ ಇಲ್ಲ. ಹಾಗಂತ ಡಾಕ್ಟರು ಹೇಳಿಬಿಟ್ಟಿದ್ದಾರೆ, ಆವೇಶದಲ್ಲಿ ನುಡಿದು, ಅವಳ ಹೃದಯಕ್ಕೆ ಘಾಸಿ ಮಾಡಿದ್ದ, ಲಲಿತ ಹಿಂದಕ್ಕೆ ಸರಿದಿದ್ದಳು, ನಂಬದವಳಂತೆ "ನಿಜಾನಾ? ನೀವು ಹೇಳುತ್ತಿರುವುದು? ಮತ್ತೆ ಮತ್ತೆ ಕೇಳಿದಳು.

"ಹೌದು ಲಲಿತಾ... ನಾನು ನಿನಗೆ ಈ ವಿಷಯವನ್ನು ತಿಳಿಸಲೇ ಬಾರದಾಗಿತ್ತು" ಪಶ್ಚಾತ್ತಾಪದ ಧ್ವನಿಯಲ್ಲಿ ನುಡಿದ.

ಲಲಿತಾ ಏನನ್ನು ಆಡದೇ ಹಾಗೇ ಹೊರಟುಹೋಗಿದ್ದಳು. ಅವನಿಗೆ ವ್ಯಥೆಯಾಗಿತ್ತು.

ಆನಂತರ ಲಲಿತ ಮತ್ತೆಂದೂ ಅವನೊಡನೆ ಈ ವಿಷಯಗಳನ್ನು ಮಾತನಾಡಲಿಲ್ಲ. ತನ್ನ ಗಂಡನಿಗೆ ತನ್ನಿಂದ ಅನ್ಯಾಯವಾಗಿದೆ... ಆದ್ದರಿಂದಲೇ, ತನ್ನನ್ನು ತನ್ನ ಮಗುವನ್ನು ದ್ವೇಷಿಸುತ್ತಿದ್ದಾನೆ ಎಂದೇ ಭಾವಿಸಿದಳು. ಗಂಡ ತನ್ನ ವಿಷಯದಲ್ಲಿ ಕೆಟ್ಟ ಮಾತುಗಳನ್ನಾಡಿಲ್ಲ, ಆದರೆ ಹೀಗೇ ಇರುತ್ತಾನೆಂದು ಹೇಗೆ ಹೇಳಲಿ! ಅವನು ಮನಸ್ಸು ಬದಲಾಯಿಸಿ ನನ್ನೊಡನೆ ಜಗಳವಾಡಿ ಬೇರೆ ಹೊರಟುಹೋದರೆ... ನನ್ನ ಅತ್ತೆ ಖಂಡಿತಾ ಅವನಿಗೆ ಮತ್ತೆ ಮದುವೆ ಮಾಡುತ್ತಾರೆ. ಆಗ ನಾನು ಹೇಗಿರಲಿ! ನನ್ನ ಗಂಡ ನನ್ನೊಡನೆಯೇ ಇರಬೇಕು. ಅವನು ನನ್ನನ್ನು ದೂರವಿಟ್ಟರೂ ಪರವಾಗಿಲ್ಲ ದ್ವೇಷಿಸಿದರೂ ಪರವಾಗಿಲ್ಲ ಅವನು ಈ ಮನೆಯಲ್ಲೇ ಇರಬೇಕು. ಅವನು ಎದುರಿಗೆ ನಾನಾಗಾಲೀ, ಮಗುವಾಗಲಿ ಕಾಣಿಸಿಕೊಳ್ಳುವುದೇ ಇಲ್ಲ... ದೂರವೇ ಇದ್ದು ಅವನ

ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತೀನಿ ಎಂದು ನಿರ್ಧರಿಸಿದಳು. ಹೇಗೂ ವೇದಮ್ಮ ಇದಾಳೆ. ಅವನ ಊಟ ತಿಂಡಿಗೆ ತೊಂದರೆ ಇಲ್ಲ ಎಂದುಕೊಳ್ಳು ತ್ತಿದ್ದಂತೆಯೇ ಏನೋ ಒಂದು ಆಲೋಚನೆ ಹೊಳೆಯಿತು. ಒಂದು ಸಲ ಅದು ಸರಿಯಲ್ಲ ಅಂತನ್ನಿಸಿದರೂ ಮರುಗಳಿಗೆಯೇ ಸರಿ ಎಂದೆನಿಸುತ್ತಿತ್ತು.

ಹೊರಗೆ ತಿರುಗುವ ಗಂಡಸು.... ಇದುವರೆಗೂ ಹೇಗಿರುವನೋ ತನಗೆ ತಿಳಿಯದು. ಇನ್ನು ಮುಂದೆ ಅವನು ಮನೆಯಲ್ಲೇ ಇರುವಂತೆ ತಾನು ಮಾಡಬೇಕು. ಅದಕ್ಕೆ ಈ ವೇದಮ್ಮನೇ ಸರಿ...ಹೇಗೂ ಅವಳಿಗೆ ಗಂಡನಿಲ್ಲ ಸಂಸಾರವಿಲ್ಲ, ಈಗ ನಾನೇ ಎಲ್ಲಾ ಖಂಡಿತಾ ನಾನು ಹೇಳಿದಂತೆ ಕೇಳುತ್ತಾರೆ. ಗಂಡನೂ ಸುಖವಾಗಿರುತ್ತಾನೆ, ನಾನು ಮಗುವಿನ ಲಾಲನೆ ಪಾಲನೆಯಲ್ಲಿ ಒಂಟಿಯಾಗಿರಬಲ್ಲೆ. ಅವನು ಒಂಟಿಯಾಗಿರಲಾರು ಅಂತ ಅಂದುಕೊಳ್ಳುತ್ತಿ ದ್ದಂತೆಯೇ ಕಣ್ಣಲ್ಲಿ ನೀರುಕ್ಕಿತ್ತು.

ಆದರೆ ಅವರಿಬ್ಬರನ್ನು ಇದಕ್ಕೆ ಒಪ್ಪಿಸುವುದು ಹೇಗೆ ಎಂಬ ಉಪಾಯ ತಿಳಿಯಲಿಲ್ಲ. ವೇದಮ್ಮ ತಾನಾಗಿಯೇ ತನ್ನ ಗಂಡನ ಎದುರಿಗೆ ಹೋಗಿ ನಿಂತುದುದನ್ನು ಎಂದೂ ಕಂಡಿರಲಿಲ್ಲ. ಇನ್ನು ಮುಂದೆ ಹಾಗಾಗಬೇಕು ಎಂದು ತನ್ನಲ್ಲೇ ಎಂದುಕೊಂಡಳು.

ಆದರೆ ಈ ಉಪಾಯವು ಫಲಿಸಿರಲಿಲ್ಲ, ಗಂಡ ವೇದಮ್ಮನ ಕಡೆ ಕಣ್ಣೆತ್ತಿ ಸಹ ನೋಡಿರಲಿಲ್ಲ, ಆದರೂ ಏನೋ ಆತಂಕ, ಸಂಶಯ.

"ವೇದಮ್ಮ ನನ್ನ ಗಂಡ ದೇವರಂತಹ ಮನುಷ್ಯ. ಅವರು ಸುಖವಾಗಿರ ಬೇಕು ಅಂತ ನನ್ನಾಸೆ.... ಆದರೆ ನಾನೇನು ಮಾಡಲಿ!"

"ಏಕಮ್ಮಾ... ಊಟ ತಿಂಡೀಲಿ ಏನಾದರೂ ವ್ಯತ್ಯಾಸವಾಯಿತೆ?"

"ಹಾಗೇನಿಲ್ಲ, ಹಾಗಿದ್ದಿದ್ದರೆ ಖಂಡಿತಾ ಹೇಳಿರುತ್ತಿದ್ದರು. ಅವರು ಯಾವುದೋ ಕೊರಗಿನಿಂದ ಕೃಶವಾಗ್ತಾ ಇದಾರೆ. ನಾನು ನೋಡಿಕೊಂಡು ಹೇಗೆ ಇರಲಿ ನೀನೇ ಹೇಳಿ..."

"ನಾನೇನು ಹೇಳಲಿ?" ಅರ್ಥವಾಗದ ವಿಷಯ ಅವಳಿಗೆ.

"ನನ್ನದೊಂದು ಮಾತನ್ನು ನಡೆಸಿ ಕೊಡ್ತೀರಾ?"

"ನನ್ನಿಂದಾಗುವುದಾದರೆ ಖಂಡಿತಾ ನಡೆಸಿಕೊಡ್ತೀನಿ."

"ಆಮೇಲೆ ಇಲ್ಲ ಎನ್ನಬಾರದು..." ಎನ್ನುತ್ತಾ ತನಗೆ ತೋಚಿದ್ದ ಉಪಾಯವನ್ನು ತಿಳಿಸಿದಳು.

ವೇದಮ್ಮ ಎದ್ದುನಿಂತು ಗಳಗಳನೆ ಅಳತೊಡಗಿದಳು.

"ಲಲಿತಮ್ಮ ನನ್ನಿಂದ ಏನು ತಪ್ಪಾಯಿತು ಅಂತ ಇಂತಹ ಮಾತನ್ನಾಡ್ತೀರಿ, ನನ್ನ ನಡತೆ ಸರಿಯಾಗಿಲ್ಲ ಅಂತ ಅನುಮಾನ ಬಂದರೆ,

ಹೋಗು ಅಂತ ಹೇಳಿ ಹೊರಟು ಹೋಗ್ತೀನಿ

"ಇಲ್ಲ ವೇದಮ್ಮ ನೀವು ಅಂತಹವಳಲ್ಲ... ನೀವು ಒಳ್ಳೆಯವರೇ ಆದರೆ....ನನ್ನ ಗಂಡನಿಗಾಗಿ, ನನ್ನ ಸ್ವಾರ್ಥಕ್ಕಾಗಿ..."

"ಹಾಗಾದರೆ, ಅವರಿಗೆ ಬೇರೆ ಮದುವೆ ಮಾಡಿ.."

"ಬೇರೆ ಮದುವೆ ಮಾಡಿದರೆ ನನಗೆ ಸವತಿ ಬರ್ತಾಳೆ ವೇದಮ್ಮ ನನಗದು ಇಷ್ಟವಿಲ್ಲ. ಅಲ್ಲದೇ ಅವರ ಮನಸ್ನಲ್ಲಿ ಏನಿದೆಯೋ...?"

"ಒಂದ್ಮಾತು ಮೊದಲೇ ಕೇಳಿ, ಹಗರಣವಾಗುವುದು ಬೇಡ..."

"ಕೇಳ್ತೀನಿ, ಅವರು ಒಪ್ಪಿದರೆ... ನೀವೂ ಒಪ್ಪಬೇಕು..."

"ನಾನು? ಆಶ್ಚರ್ಯದಿಂದ ಕಣ್ಣರಳಿಸಿದಳು.

"ಹೌದು ವೇದಮ್ಮ ನೀವೇ... ನೀವು ಅವರನ್ನು ಮದುವೆಯಾಗ ಬೇಕು... ಅಲ್ಲಿಗೆ ಯಾವ ಅಡ್ಡಿಯೂ ಇಲ್ಲ"

"ಬೇಡ ಲಲಿತಮ್ಮ...ನನಗೆ ಆ ಆಸೆಗಳು ಖಂಡಿತಾ ಇಲ್ಲ...ಅಲ್ಲದೇ ನಾವಿಬ್ಬರೂ, ಅಕ್ಕ ತಂಗಿಯರ ತರಹ ಇದೀವಿ, ಹಾಗೇ ಇರೋಣ"

"ಇನ್ನು ಮುಂದೆಯೂ ನಾವು ಅಕ್ಕತಂಗಿಯರ ತರಹವೇ ಇರೋಣ... ನಿಮಗೂ ಸುಖವಾಗಿರಬೇಕು, ಅನ್ನುವ ಆಸೆ ಇಲ್ಲವೆ?"

"ಇಲ್ಲ, ಲಲಿತಮ್ಮ ದಯವಿಟ್ಟು ಈ ವಿಷಯದಲ್ಲಿ ಬಲವಂತ ಮಾಡಬೇಡಿ, ನಾನು ಎಲ್ಲಿಗಾದರೂ ಹೊರಟುಹೋಗ್ತೀನಿ"

"ಸರಿ ನಿಮ್ಮಿಷ್ಟ, ಆದರೆ ಚೆನ್ನಾಗಿ ಯೋಚನೆ ಮಾಡಿ ಇಲ್ಲಿ ನಿಮಗೆ ಯಾವ ಕೊರತೆಯೂ ಇಲ್ಲ ಅಂತ ಹೇಳಿದ್ರಿ... ಕಷ್ಟಪಡುವುದೇ ನಿಮ್ಮ ಹಣೆಯಲ್ಲಿ ಬರೆದಿದ್ದರೆ ನಾನು ತಪ್ಪಿಸಲು ಸಾಧ್ಯವಿಲ್ಲ" ಲಲಿತ ಕೋಪಿಸಿಕೊಂಡು ನುಡಿದಾಗ ವೇದಮ್ಮ ಅಲ್ಲಿಂದ ಸರಿದಳು.

ಆ ದಿನವೇ ವೇದಮ್ಮ 'ಹೊರಡ್ತೀನಿ' ಎಂದಾಗ ಲಲಿತ ಮಾತನಾಡ ಲಿಲ್ಲ, ಆದರೆ ಅಲ್ಲಿಯೇ ಇದ್ದ ಗೋಪಾಲ ಕೇಳಿದ್ದ.

"ಲಲಿತಾ... ಅದೇನು ಇವರು ಎಲ್ಲಿಗೆ ಹೋಗ್ತಿದಾರೆ? ನಿನಗೆ ಕಷ್ಟವಾಗಲ್ವಾ! ಇನ್ನೊಂದೆರಡು ತಿಂಗಳು ಇರಲಿ, ವೇದಮ್ಮ ಅಲ್ಲಿ ನಿಲ್ಲಲಿಲ್ಲ.

"ಆಗಲಿ ಬಿಡಿ, ನನ್ನ ಕಷ್ಟದ ಚಿಂತೆ ಯಾರಿಗಿದೆ....?"

"ಯಾಕೆ ಹೀಗಾಡ್ತೀಯಾ? ಏನು ಮಾಡಿದರು ಆಕೆ?"

"ನಾನು ಹೇಳಿದಂತೆ ಕೇಳಲು ಆಕೆಗೆ ಇಷ್ಟವಿಲ್ಲ..."

"ಸರಿ, ಸುಮ್ಮನಿದ್ದುಬಿಡು, ಬಲವಂತ ಮಾಡಬೇಡ"

"ನಾನು ಆಕೆಯ ಒಳ್ಳೇದಕ್ಕೇ ಹೇಳಿದ್ದು, ಆಕೆಗೆ ಇಷ್ಟವಾಗಲಿಲ್ಲ ಅಷ್ಟೇ" ಗೋಪಾಲ ನಕ್ಕ.

"ಅದೇನಂತಹ ಮಾತು...? ನನಗೂ ಹೇಳು"

ಗಂಡನ ನಗುವಿನ ಮುಖ ನೋಡಿ ಎಷ್ಟೋ ದಿನಗಳಾಗಿತ್ತು ಎಂದೆನಿಸಿದರೂ, ತಾನೀಗ ಮುಖ್ಯವಾದ ವಿಷಯಕ್ಕೆ ಬರಲೇಬೇಕು ಎಂದುಕೊಂಡು,

"ನಾನು ಆಕೆಗೆ ಮರುಮದುವೆಯಾಗುವಂತೆ ಸಲಹೆ ನೀಡಿದೆ ತಪ್ಪಾ?"

"ತಪ್ಪೇನಿಲ್ಲ, ಆದರೆ ಆಕೇಗೇಕೆ ಇಷ್ಟವಿಲ್ಲ ಅಂತ ಕೇಳಿದ್ಯಾ!"

"ಏನೋ ಭಯ, ಆಮೇಲೆ ಈ ಮನೇಲಿರಕ್ಕೆ ಇಷ್ಟವಿಲ್ಲದಿರಬಹುದು"

"ಮರು ಮದುವೆಯಾಗಿ ಗಂಡನ ಮನೆಯ ಸುಖಕ್ಕಿಂತ, ನಮ್ಮ ಮನೆಯ ಸುಖ ಹೆಚ್ಚೇ...? ನಾನು ಆಕೆಗೆ ಹೇಳ್ತೀನಿ"

"ಖಂಡಿತಾ ಹೇಳ್ತೀರಾ?"

"ಹೇಳ್ತೀನಿ ಅದಕ್ಕೇನು? ಆಕೆಗೆ ಹೊಸಬಾಳು ಸಿಗುವುದಾದರೆ ಅದಕ್ಕೆ ಯಾರೂ ಅಡ್ಡಿ ಬರಬಾರದು, ಆಕೆಗೆ ತಿಳುವಳಿಕೆ ಸಾಲದು..."

"ಆಕೆಗೆ ಖಂಡಿತಾ ತಿಳುವಳಿಕೆ ಸಾಲದು, ನೀವು ಹೇಗಾದರೂ ಸರಿ ಆಕೆಯನ್ನು ಒಪ್ಪಿಸಿ, ಆಗ ನನಗೆ ನೆಮ್ಮದಿ..."

"ಆಗಲಿ, ಲಲಿತಾ.,.. ನೀನೀಗ ಮಲಕ್ಕೋ..."

ಗಂಡನ ಮಾತಿನಿಂದ ಒಂದು ತರಹ ಸಂಕಟವೆನಿಸಿದ್ದರೂ, ಏನೋ ಅಳುಕು ತಳಮಳ. ಏನೋಮಾಡಲು ಹೋಗಿ ಏನೋ ಹಗರಣವಾದರೇನು ಗತಿ ಎಂಬ ಚಿಂತೆ.

ಆ ರಾತ್ರಿ ವೇದಮ್ಮ ಕೆಲಸ ಮುಗಿಸಿ ತಾನು ಹೊರಟಿದ್ದೀನಿ ಎಂದು ತಿಳಿಸಲು ಬಂದಾಗ ಲಲಿತ

"ನಮ್ಮ ಯಜಮಾನರಿಗೆ ಹೇಳಿಬಿಟ್ಟು ಹೋಗಿ... ನಿಮ್ಮ ಸಂಬಳ ಎಲ್ಲಾ ಕೊಡುವಂತೆ ಹೇಳಿದೀನಿ, ಅವರು ನಿಮಗಾಗಿ ಕಾಯುತ್ತಿರಬಹುದು" ಎಂದಿದ್ದಳು.

ರೂಮಿನ ಬಾಗಿಲಲ್ಲಿ ನಿಂತು ವೇದಮ್ಮ "ನ್ನಾನು ಬರ್ತೀನಿ" ಎಂದಿದ್ದಳು ಕೆಳದನಿಯಲ್ಲಿ.

"ಯಾರು? ವೇದಮ್ಮನಾ? ಬನ್ನಿ ಇಲ್ಲಿ" ಕರೆದಿದ್ದ.

ಅನುಮಾನಿಸುತ್ತಾ ಅವಳು ಒಳಗೆ ಬಂದಿದ್ದಳು. ಮೊಟ್ಟಮೊದಲ ಬಾರಿಗೆ ಅವನು ಅವಳನ್ನು ದೃಷ್ಟಿಸಿ ನೋಡಿದ. ಆಕೆ ನಾಚಿಕೊಂಡಳು ಅವನಿಗೆ ನಗು ಬಂದಿತ್ತು.

"ನಿಜ ವೇದಮ್ಮ... ಲಲಿತ ಹೇಳಿದ್ದು ನಿಜ... ನಿಮಗೆ ಖಂಡಿತಾ ತಿಳುವಳಿಕೆ ಸಾಲದು" ಅವಳು ಉತ್ತರಿಸಲಿಲ್ಲ.

"ನಿಮಗೆ ನಮ್ಮ ಮನೆ ಬಿಟ್ಟು ಹೋಗಕ್ಕೆ ಇಷ್ಟವಿಲ್ಲ, ಆದರೆ ಹೋಗ್ತೀನಿ ಅಂತ ಹೇಳೋಕೆ ಬಂದಿದೀರಿ, ಮರುಮದುವೆಯಾದರೆ ನಮ್ಮ ಮನೆ ಕೆಲಸ ಬಿಡಬೇಕು ಅಂತೇನಿಲ್ಲ... ನಿಮ್ಮ ಗಂಡ ಒಪ್ಪಿದರೆ ಈಗಿನಂತೇ ಮುಂದುವರೆಯ ಬಹುದು, ನಿಮಗೆ ಹೊಸಬಾಳು ಬೇಕು ಅಂತ ಅನ್ನಿಸಲ್ವಾ?"

ವೇದಮ್ಮ ತಲೆ ಎತ್ತಿ ಅವನ ಕಡೆ ನೋಡಿದ್ದಳು.

"ಯಾಕೆ ನಿಮಗೆ ಮತ್ತೆ ಮದುವೆಯಾಗೋಕ್ಕೆ ಇಷ್ಟವಿಲ್ವಾ!"

"ಇಲ್ಲ...." ಖಂಡಿತವಾಗಿ ಆಡಿದಳು.

"ಯಾಕೆ? ನಿಮಗೆ ಮತ್ತೆ ಈ ಅವಕಾಶ ಸಿಗದೇ ಹೋಗಬಹುದು"

"ಪರವಾಗಿಲ್ಲ, ಆದರೆ... ನಿಮ್ಮಿಬ್ಬರ ಬಾಳಿನಲ್ಲಿ ಮಧ್ಯೆ ಬರಲು ನನಗಿಷ್ಟವಿಲ್ಲ.

ತಕ್ಷಣಕ್ಕೆ ಅವಳ ಮಾತು ಅರ್ಥವಾಗಲಿಲ್ಲ, ಅವಳು ಏನೋ ನುಡಿದಳು ಎನ್ನುವಂತೆ ನಕ್ಕಂತೆ ಮಾಡಿದ. ಆದರೆ ಮರುಕ್ಷಣದಲ್ಲಿ ಏನೋ ಸಂದೇಹ "ಏನಂದ್ರಿ....? ನಿಮ್ಮ ಮದುವೆಗೂ, ನಮ್ಮಿಬ್ಬರಿಗೂ ಏನು ಸಂಬಂಧ?"

"ಹಾಗಾದರೆ....ಲಲಿತಾ ನಿಮಗೆ ಏನನ್ನು ತಿಳಿಸಲಿಲ್ವಾ?" ಕೆಟ್ಟ ಮುಖದಿಂದ ಅವಳು ಪ್ರಶ್ನಿಸಿದಾಗ, ಅವನಿಗೆ ನಿಧಾನವಾಗಿ ಎಲ್ಲಾ ಅರ್ಥವಾಗಿತ್ತು.

ವೇದಮ್ಮ ನೀವಿನ್ನು ಹೋಗಿ ಎಂದು ಗದರಿ, ಲಲಿತಳ ರೂಮಿಗೆ ಬಂದಿದ್ದ. ಅನಿರೀಕ್ಷಿತವಾಗಿ ಗಂಡ ಬಂದೊಡನೆ ಲಲಿತ ಬೆದರಿದಳು. ತೊಡೆಯ ಮೇಲಿದ್ದ ಮಗು ಬೆಚ್ಚಿ ಅಳತೊಡಗಿತು. ಅವನು ಅಸಹ್ಯಗೊಂಡ.

"ಏನಿದು ನಿನ್ನ ಅಧಿಕ ಪ್ರಸಂಗಿತನ? ವೇದಮ್ಮನೊಡನೆ ಇಂತಹ ಮಾತನ್ನಾ ನೀನು ಆಡೋದು?"

ಲಲಿತ ತಲೆ ಎತ್ತಲಿಲ್ಲ.

"ನಿನ್ನ ಈ ನಾಟಕಕ್ಕೆ ನಾನು ಒಪ್ಪಿಬಿಡ್ತೀನಿ ಅಂತಂದ್ಕೊಂಡ್ಯಾ! ಸುಮ್ಮನೇ ಇರಲಾರದೇ ಈ ವಿಧವೆ ಹೆಂಗಸಿನ ಮನಸ್ಸಿನಲ್ಲಿ ಆಸೆ ಹುಟ್ಸಿ, ನಾನು ಮತ್ತೆ ಮದುವೆಯಾಗ್ತೀನಿ ಅಂತ ನೀನು ಯೋಚಿಸಿದ್ದಾದರೂ ಹೇಗೆ!"

"ನೀವು ಸುಖವಾಗಿಲ್ಲ ಅಂತ ನನಗನ್ನಿಸಿತು..."

"ನನ್ನ ಸುಖಾನ ನಾನು ನೋಡಿಕೊಳ್ತೀನಿ, ಇದನ್ನು ನೀನು ತಿಳಿಸಿಕೊಡಬೇಕಾಗಿಲ್ಲ, ಇನ್ನು ಮೇಲೆ ಇಂತಹ ತಮಾಷೆ ಮಾಡಬೇಡ" ಅವನ್ನು ರೇಗಿ ಹೊರಟುಹೋಗಿದ್ದ, ದುಃಖದಲ್ಲೂ ಗಂಡನ ಮೇಲೆ ಅಭಿಮಾನ ಉಕ್ಕಿತ್ತು, ಕಣ್ಣೊರೆಸಿಕೊಂಡು ನೆಮ್ಮದಿಯಿಂದ ನಿದ್ರಿಸಿದಳು.

ಆದರೆ ಗೋಪಾಲನ ನೆಮ್ಮದಿ ಕೆಟ್ಟಿತ್ತು, ಹಾಗೆ ಆಲೋಚಿಸುತ್ತಾ

ಮಲಗಿದ. ಲಲಿತ ನನ್ನ ನೆಚ್ಚಿನ ಮಡದಿ, ಆದರೆ ಅವಳಿಂದ ತನಗೆ ದೊರಕಿರುವ ಆನಂದವಾದರೂ ಎಷ್ಟು? ಮದುವೆಯಾದಂದಿನಿಂದ ಅವಳು ತನಗೆ ಸಮಾನಳಲ್ಲ ಎನ್ನುವ ಕೊರತೆ ನನ್ನಲ್ಲಿ ಇದ್ದೇ ಇದೆ... ಹೋಗಲಿ ಎಂದರೆ, ನಮ್ಮ ಪ್ರೀತಿಯ ಕುರುಹಾಗಿ, ನಮ್ಮದೇ ಆದ ಒಂದು ಮಗುವನ್ನು ಹೆರಲು ಅಸಮರ್ಥಳಾದಳು. ಈ ಅನಾಥ ನನ್ನ ಮಗನಾಗಲು ಸಾಧ್ಯವೇ ಇಲ್ಲ. ನನಗೆ ಆ ಸುಖವೂ ಇಲ್ಲವಾಯಿತು, ಆದರೆ... ಆದರೆ ನಾನು ಇದುವರೆಗೂ ಮತ್ತೆ ಮದುವೆಯಾಗುವ ಆಲೋಚನೆಯನ್ನೇ ಮಾಡಿರಲಿಲ್ಲ, ಅಥವಾ ಬೇರೆ ಯಾವ ಹೆಣ್ಣಿನ ಸಂಗವನ್ನು ಬಯಸಿರಲಿಲ್ಲ, ಆದರೆ ಲಲಿತ ನನ್ನನ್ನು ತಾನಾಗಿಯೇ ಹೀಗೆ ಪ್ರೇರೇಪಿಸುತ್ತಿದ್ದಾಳಲ್ಲ ಏಕೆ? ಅವಳಿಗೆ ನನ್ನ ಮೇಲೆ ಸಂಶಯವೇ...?

ಒಮ್ಮೆ ಸಂಶಯ ಪಿಶಾಚಿ ಮನಸ್ಸನ್ನು ಹೊಕ್ಕರೆ ಅದು ನಮ್ಮಿಬ್ಬರನ್ನು ಸುಖವಾಗಿರಲು ಬಿಡುವುದಿಲ್ಲ. ಆದರೆ ಹಾಗಂತ ನಾನು ಲಲಿತೆಯ ಮಾತಿಗೆ ಒಪ್ಪಬೇಕೇ....? ಒಪ್ಪಿದರೇ ಅವಳಿಗೇ ನಷ್ಟ. ಅದು ಅವಳಿಗೆ ತಿಳಿಯದೇ? ಒಪ್ಪದಿದ್ದರೇ ಬಹುಶಃ ನನಗೆ ನಷ್ಟವಿರಬಹುದು... ಜೀವಮಾನವೆಲ್ಲಾ ನಾನು ಹೀಗೇ ಒಂಟಿಯಾಗಿರಬೇಕಾಗಬಹುದು, ನನ್ನ ಹಾಗೆ ಲಲಿತಳೂ ಒಂಟಿಯಾಗಿರುವುದಿಲ್ಲವೇ...ಆದರೆ ಅವಳೇ ಹೇಳಿದಂತೆ ಅವಳಿಗೆ ಎಲ್ಲವನ್ನೂ ಮರೆಸುವುದಕ್ಕೆ ಅಂತ ಒಂದು ಮಗು ಸಿಕ್ಕಿದೆ.... ನನಗೇ... ನನಗೇನು ಸಿಕ್ಕಿದೆ? ಮಗು ನನ್ನದಲ್ಲ...ಲಲಿತಳ ಒಲವು ಇಲ್ಲ.... ನಾನು ಒಂಟಿ ಅಲ್ಲವೆ? ಹೀಗೆ ಇರಲು ನನ್ನಿಂದ ಸಾಧ್ಯವಾಗುತ್ತದೆಯೇ... ಒಂದಲ್ಲ ಒಂದು ದಿನ ನಾನು ದಾರಿ ತಪ್ಪಬಹುದು.... ಆಗ ನಾನು ನನ್ನ ಹೆಂಡತಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ...?"

ಈ ಯೋಚನೆಗಳ ನಡುವೆಯೂ ಅವನಿಗೆ ಬೆಳಗಿನ ಝಾವದಲ್ಲಿ ನಿದ್ದೆ ಬಂದಿತ್ತು. ಎಚ್ಚರವಾದಾಗ, ಹಿಂದಿನ ರಾತ್ರಿಯ ಮಾತುಕತೆಗಳು ನೆನಪಿಗೆ ಬಂದವು. ಎದ್ದು, ಮುಖ ತೊಳೆದು ಕೂತ, ಎಷ್ಟು ಹೊತ್ತಾದರೂ ಅವನಿಗೆ ಕಾಫಿಯನ್ನು ತಂದು ಕೊಡಲಿಲ್ಲ, ಅಡಿಗೆ ಮನೆ ಕಡೆ ಇಣುಕಿ ನೋಡಿದ. ವೇದಮ್ಮ ಕಾಣಿಸಲಿಲ್ಲ, ಅವಳು ಹೊರಟು ಹೋಗಿರಬಹುದು ಎಂದೂಹಿಸಿ, ಲಲಿತಳ ರೂಮಿಗೆ ಬಂದ. ಮಗ್ಗುಲಿಗೆ ಮಗುವನ್ನು ಮಲಗಿಸಿಕೊಂಡು ನೆಮ್ಮದಿಯಿಂದ ನಿದ್ದೆ ಮಾಡುತ್ತಿದ್ದವಳನ್ನು ನೋಡಿ ಹಾಗೇ ಹಿಂತಿರುಗಿದ. ಈ ಅನಾಥ ಮುಂಡೇದು ಇಲ್ಲದೇ ಇದ್ದಿದ್ದರೆ, ಬಹುಶಃ ಅವಳ ಮಗ್ಗುಲಲ್ಲಿ ನಾನು ಮಲಗಿರುತ್ತಿದ್ದೆ ಅಂತ ಅಂದುಕೊಂಡಾಗ, ಮನದ ತುಂಬಾ ಕಹಿ ತುಂಬಿಕೊಂಡಿತು. ಅವಳನ್ನು ಎಬ್ಬಿಸುವ ಮನಸ್ಸಾಗದೇ, ತಾನೇ ತನಗೆ ಬಂದಂತೆ ಕಾಫಿ ಮಾಡಿಕೊಂಡು ಕುಡಿದ. ಅದು ರುಚಿಯಾಗಿರಲಿಲ್ಲ.

ಅಸಹ್ಯವೆನಿಸಿ, ಅರ್ಧದಷ್ಟನ್ನು ಚೆಲ್ಲಿದ, ವೇದಮ್ಮ ಮಾಡುತ್ತಿದ್ದ ಕಾಫಿ ಚೆನ್ನಾಗಿರುತ್ತಿತ್ತು ಎಂಬ ಅರಿವು ಮೂಡಿದೊಡನೆ ಏನನ್ನೋ ನಿರ್ಧರಿಸಿದವನಂತೆ ಎದ್ದ. ವೇದಮ್ಮನ ಮನೆ ಬಳಿ ಬಂದಾಗ, ಅವಳು ಒಂದು ವೇಳೆ ಇಲ್ಲಿಗೆ ಬಂದಿಲ್ಲದಿದ್ದರೆ ತಾನೀಗ ಏನು ಮಾಡಬೇಕು ಎಂಬ ಆತಂಕದಿಂದ ಬಾಗಿಲನ್ನು ಬಡಿದ, ಬಾಗಿಲನ್ನು ತೆಗೆದವಳು ವೇದಮ್ಮನೇ...

"ವೇದಮ್ಮ ಈಗಲೇ ಹೊರಡಿ.... ಮಗೂಗೆ ಹುಶಾರಿಲ್ಲ, ಲಲಿತ ಗಾಬರಿಯಾಗಿ ಬಿಟ್ಟಿದ್ದಾಳೆ..."

ವೇದಮ್ಮ ಒಂದು ಗಳಿಗೆ ಅವನನ್ನೇ ದಿಟ್ಟಿಸಿದಳು. ಆದರೆ ಅವನು ತಲೆ ತಗ್ಗಿಸಿದ್ದ, ಅತ್ತೆಗೆ ಹೇಳಿ ಅವನ ಹಿಂದೆ ಹೊರಟಳು

"ವೇದಮ್ಮ ಇನ್ನು ಮೇಲೆ ಹೀಗೆ ಮಾಡಬೇಡಿ.... ಲಲಿತಂಗೆ ನಿಮ್ಮ ನೆರವು ಬೇಕಾಗಿದೆ...." ಎಂದಿದ್ದ.

ಏನೂ ನಡೆದಿಲ್ಲವೆಂಬಂತೆ ವೇದಮ್ಮ ಮನಗೆ ಬಂದು, ಕೆಲಸಗಳನ್ನು ವಹಿಸಿಕೊಂಡಳು. ಅವಳು ಹೋಗಿದ್ದಾಗಲೀ, ಗೋಪಾಲ ಮತ್ತೆ ಕರೆತಂದುದಾಗಲೀ ಲಲಿತಂಗೆ ತಿಳಿಯಲೇ ಇಲ್ಲ, ಲಲಿತಾ ನೀನೆಷ್ಟು ಮುಗ್ಧೆ ಎಂದುಕೊಂಡ. ಅವಳ ಆಸೆಯಂತೆಯೇ ತಾನೀಗ ನಡೆದುಕೊಂಡರೆ ಅದು ತನ್ನ ತಪ್ಪಲ್ಲ ಎಂದು ತನಗೆ ತಾನೇ ಹೇಳಿಕೊಂಡು,

"ನಿನ್ನ ಮಾತಿನಿಂದ ನೊಂದ ವೇದಮ್ಮ ಮನೆ ಬಿಟ್ಟು ಹೊರಟುಹೋಗಿದ್ದರು. ನಿನಗೆ ಕಷ್ಟವಾಗಬಾರದು ಅಂತ ನಾನೇ ಹೋಗಿ ಕರೆತಂದೆ" ಎಂದ ಮುಗುಳ್ನಗುತ್ತಾ...."

ಹೊರಟು ಹೋಗಿದ್ದವಳನ್ನು ತಾನೇ ಹೋಗಿ ಕರೆತಂದಿರಬೇಕಾದರೆ ಇವನ ಮನಸ್ಸಿನಲ್ಲೂ ಆಸೆ ಮೂಡಿರಬಹುದು ಎಂದುಕೊಂಡಾಗ ಒಂದು ಗಳಿಗೆ ಅಸೂಯೆ ಇಣುಕಿತ್ತು, ಆದರೆ ಇದು ತಾನೇ ನಿಯೋಜಿಸಿದ್ದ ಉಪಾಯ, ಇದರ ಹೊಣೆ ತನ್ನದು ಎಂದುಕೊಂಡಳು.

"ಅವರು ಇಲ್ಲಿ ಇರುವುದಾದರೆ, ನಿಮ್ಮ ಹೆಂಡತಿಯಾಗಿ ಮಾತ್ರ ಇರಬೇಕು...ಅಡಿಗೆಯವರಾಗಿ ಮಾತ್ರ ಅಲ್ಲ...."

"ಲಲಿತಾ...."

"ಹೌದು... ಹೊರಟು ಹೋಗಿದ್ದವಳನ್ನು ಕರೆತಂದಿದೀರಿ...ಆಕೆಗೂ ಅಸಮಾಧಾನವಿರುವುದಿಲ್ಲವೇ...ಸಂಕೋಚವಾಗುವುದಿಲ್ಲವೆ....?"

"ಹಾಗಂತ..."

"ನೀವು ಇವತ್ತೇ ಆಕೆಯನ್ನು ಮದುವೆಯಾಗಿಬಿಡಿ...."

"ಸರಿ, ನಿನ್ನಿಷ್ಟ, ಮುಂದೆಂದೂ ನೀನು ನನ್ನನ್ನು ದೂಷಿಸಕೂಡದು..."

"ಖಂಡಿತಾ ಇಲ್ಲ" ಎನ್ನುವಾಗ ಲಲಿತಳ ಗಂಟಲು ಕಟ್ಟಿದಂತಾಗಿತ್ತು.

ಲಲಿತಾ ತಾನೇ ಸಾಕ್ಷಿಯಾಗಿ ನಿಂತು ಅವರಿಬ್ಬರ ವಿವಾಹವನ್ನು ತನ್ನ ಮನೆಯ ದೇವರ ಮನೆಯಲ್ಲಿ ನೆರವೇರಿಸಿದಳು. ಲಲಿತ ಕೊಟ್ಟ ಹೊಸ ಸೀರೆಯನ್ನು ಉಟ್ಟ ವೇದ ಗೋಪಾಲನ ಉಪಪತ್ನಿಯಾದಳು. ಹಣೆಯ ಮೇಲಿನ ಹೊಸ ಕುಂಕುಮ, ಕೊರಳಿನ ಮಾಂಗಲ್ಯ ತಾನು ಮತ್ತೊಮ್ಮೆ ಹೊಸ ಜೀವನವನ್ನು ಪ್ರಾರಂಭಿಸುವ ಸಂಕೇತ ಎಂದುಕೊಂಡು ಬಾಗಿ ಗೋಪಾಲನಿಗೆ ನಮಸ್ಕರಿಸಿದಳು. ಗೋಪಾಲ ಹಿಂದೆ ಸರಿದ. ಲಲಿತ ಅವರಿಬ್ಬರನ್ನೇ ಅಲ್ಲಿ ಬಿಟ್ಟು ಹೊರಗೆ ಹೊರಟು ಹೋಗಿದ್ದಳು.

"ವೇದ, ಲಲಿತನ ಮಾತಿಗೆ ಒಪ್ಪಿ ನಾನು ನಿನ್ನನ್ನು ಮದುವೆಯಾಗಿದ್ದೇನೆ, ಆದರೆ ಹಾಗಂತ, ನಾನು ನಿನಗೆ ಯಾವ ರೀತಿಯ ವಂಚಣೆಯನ್ನು ಮಾಡುವುದಿಲ್ಲ, ನನಗೆ ನೀವಿಬ್ಬರೂ ಬೇಕು, ನೀವಿಬ್ಬರೂ ಸವತಿಯರಂತೆ ಕಚ್ಚಾಡದೇ, ಅಕ್ಕತಂಗಿಯರಂತೆ ಬಾಳಿದರೆ, ನಮ್ಮ ಜೀವನಕ್ಕೆ ಒಂದು ಅರ್ಥ ಸಿಗುತ್ತದೆ."

ಅರ್ಥವಾದವಳಂತೆ ವೇದ ತಲೆ ಆಡಿಸಿದ್ದಳು.

ಅಂದಿನಿಂದ ಲಲಿತ ಆದಷ್ಟು ಅವರಿಬ್ಬರು ಒಟ್ಟಾಗಿರುವಂತೆ ನೋಡಿಕೊಂಡು, ತಾನು ರೂಮಿನಲ್ಲೇ ಮಗುವಿನೊಡನೆ ಇರುತ್ತಿದ್ದಳು. ತನ್ನ ಗಂಡ ವೇದಮ್ಮನೊಡನೆ ಹೇಗೆ ಕಾಲ ಕಳೆಯುತ್ತಿರಬಹುದು ಎಂದು ಕಲ್ಪಿಸಿಕೊಳ್ಳಲೂ ಹೆದರುತ್ತಿದ್ದಳು. ಇದು ಸ್ವಯಂಕೃತಾಪರಾಧ ಎಂದು ತನಗೆ ತಾನೇ ಸಮಾಧಾನ ಹೇಳಿಕೊಳ್ಳುತ್ತಿದ್ದಳು.

ಗಂಡಸಿನ ಸಹವಾಸವನ್ನೇ ಮರೆತು ಹೋದವಳಂತೆ ಇದ್ದ ವೇದ, ತಾನಾಗಿಯೇ ಗೋಪಾಲನ ರೂಮಿಗೆ ಬರಲು ನಾಚಿದ್ದಳು. ಆದರೆ, ತಾನಾಗಿಯೇ ದೊರೆತ ಅವಕಾಶವನ್ನು ಗೋಪಾಲ ಕಳೆದುಕೊಳ್ಳುವನೇ? ಲಲಿತ ಮಲಗಿ ನಿದ್ರಿಸಿರಬಹುದು ಎಂದೂಹಿಸಿ, ನಡುಮನೆಯಲ್ಲಿ ಮಲಗಿದ್ದ ವೇದಳ ಬಳಿಗೆ ಬಂದ.

"ಇನ್ನು ಮೇಲೆ ನೀನು ಇಲ್ಲಿ ಮಲಗಬಾರದು" ಎಂದು ಹೇಳಿ ಅವಳನ್ನು ತನ್ನ ರೂಮಿಗೆ ಕರೆತಂದಿದ್ದ. ಅಡಿಗೆ ಕೆಲಸಕಾರ್ಯಗಳಿಂದ ಯಾವ ಆರೈಕೆ ಉಪಚಾರಗಳಿಲ್ಲದ, ವೇದ ಒರಟು ಅಂತ ಅವನಿಗೆ ಅನ್ನಿಸಿದರೂ, "ಇದೇ ನನ್ನ ಪಾಲಿಗೆ ಬಂದದ್ದು..." ಎಂದುಕೊಂಡು ಕೊಂಕು ನಗೆ ನಕ್ಕ.

ಆದರೆ ಆ ರಾತ್ರಿ ಲಲಿತ ಮಗುವನ್ನು ತಟ್ಟಿಕೊಂಡು ರೋಧಿಸಿದ್ದಳು.

ದಿನಗಳೆದಂತೆ ವೇದ ಆ ಮನೆಯ ಹಿರಿಯ ಯಜಮಾನಿಯಾದಳು.

ಇದರಿಂದ ಲಲಿತಂಗೆ ಯಾವ ಅಸಮಾಧಾನವೂ ಇರಲಿಲ್ಲ. ಆದಷ್ಟು ತನ್ನ ಗಂಡನೆದುರಿಗೆ ಬರುತ್ತಿರಲಿಲ್ಲ. ಗೋಪಾಲ ಮಾತ್ರ ತನ್ನದು ಏನೂ ತಪ್ಪಿಲ್ಲ ವೆಂಬಂತೆ ತನ್ನ ಪಾಡಿಗೆ ತಾನಿದ್ದ. ದಿನದಿನಕ್ಕೂ ಅನಂತ ಬೆಳೆಯುತ್ತಿದ್ದ.

ಅನಂತನ್ನ ಸ್ಕೂಲಿಗೆ ಸೇರಿಸುವ ಸಮಯ ಬಿದ್ದಾಗ ಗೋಪಾಲ ಅಸಹನೆಯಿಂದ ಕುದ್ದು ಹೋಗಿದ್ದ. ಅವನು ಹೋಗಲು ಇಷ್ಟಪಡದಿದ್ದರಿಂದ ಲಲಿತ, ವೇದರೇ ಸ್ಕೂಲಿಗೆ ಹೋಗಿದ್ದರು. ತಂದೆ ಊರಿನಲ್ಲಿಲ್ಲ ಎಂದು ತಿಳಿಸಿದ್ದರು. ಸ್ವಂತ ಮಗನ ವಿದ್ಯಾಭ್ಯಾಸದಲ್ಲೂ ಗಂಡನಿಗೆ ಆಸಕ್ತಿ ಇಲ್ಲವೇ ಎಂದುಕೊಂಡಾಗ ವ್ಯಥೆ ಆಗಿತ್ತು. ಇವನು ಅಷ್ಟು ಬೇಡವಾದವನೇ ಎಂದು ತಬ್ಬಿಕೊಂಡು ಅತ್ತಿದ್ದಳು.

"ವೇದಮ್ಮ... ನೋಡಿ ಅವರ ಮನಸ್ಸಿನಲ್ಲಿ ಏನಿದೆ ಅಂತ ನನಗೆ ಅರ್ಥವೇ ಆಗೋಲ್ಲ.... ನನ್ನಿಂದ ಅವರಿಗೆ ಸುಖವಿಲ್ಲವಾಯಿತು. ನಿಮಗೆ ಒಂದು ಮಗುವಾದರೆ ಅದನ್ನಾದರೂ ಅವರು ಪ್ರೀತಿಯಿಂದ ಬೆಳೆಸಲಿ ಅಂತ ನನ್ನಾಸೆ...."

"ಲಲಿತಾ.... ನಿನ್ನಾಸೆಗೆ ಮಿತಿ ಇಲ್ಲ. ಈಗ ನೀನು ಮಾಡಿರುವ ಉಪಕಾರವೇ ಹೆಚ್ಚು, ನನಗೂ ಒಂದು ಮಗುವಾದರೆ...?

ಆದರೆ, ವೇದಮ್ಮನಿಗೂ ಆ ಬಯಕೆ ಇತ್ತು, ಸುಮಾರು ನಾಲ್ಕು ಐದು ವರ್ಷಗಳು ಕಳೆದಿದ್ದವು. ಆದರೂ ತನಗೆ ಆ ಭಾಗ್ಯ ಒದಗಿರಲಿಲ್ಲ, ತಾನಾಗಿಯೇ ಈ ವಿಷಯವನ್ನು ಗೋಪಾಲನೊಡನೆ ಆಡಲು ಹಿಂಜರಿದಿದ್ದಳು, ತನಗೆ ಈಗಿರುವ ಸುಖವೇ ಜಾಸ್ತಿ, ಮಗುವಾಗುವ ಆಸೆಯನ್ನು ತಾನು ಪಡಬಾರದು ಎಂದುಕೊಂಡಿದ್ದಳು. ಆದರೆ ಲಲಿತಳೇ ಈಗ ಆ ಮಾತನ್ನೆತ್ತಿರು ವಾಗ ತಾಯಿಯಾಗುವ ಆಸೆ ಅವಳಲ್ಲಿ ಮತ್ತೆ ಮೂಡಿತ್ತು. ತನಗೆ ಮೊದಲ ವಿವಾಹದಲ್ಲೂ ಮಕ್ಕಳಾಗುವ ಸೂಚನೆಯಿರಲಿಲ್ಲ, ಬಹುಶಃ ತನ್ನಲ್ಲೇ ಏನೋ ದೋಷವಿರಬಹುದು... ಅನಂತನೇ ತನಗೂ ಮಗ... ತನ್ನ ಪ್ರೀತಿ ವಿಶ್ವಾಸವೆಲ್ಲಾ ಅವನಿಗೇ ಮೀಸಲು ಎಂದುಕೊಂಡಳು.

ಅನಂತನ ಮೇಲೆ ತನ್ನ ಗಂಡನಿಗೆ ಮಮತೆಯಿಲ್ಲ ಎನ್ನುವುದನ್ನು ತಿಳಿದಿದ್ದಳು. ಆದರೆ ಅದಕ್ಕೆ ಕಾರಣ ಗೊತ್ತಿರಲಿಲ್ಲ, ಅದನ್ನು ಕೇಳುವ ಸಾಹಸ ಮಾಡಿರಲಿಲ್ಲ, ಈ ದಿನ ಸ್ಕೂಲಿಗೆ ಸೇರಿಸುವ ಸಮಯದಲ್ಲೂ ಗೋಪಾಲ ತೋರಿಸಿದ ನಿರುತ್ಸಾಹ ಅವಳಲ್ಲೂ ಬೇಸರವನ್ನುಂಟು ಮಾಡಿತ್ತು.

"ಅನಂತನ ಬಗ್ಗೆ ನಿಮಗೆ ಮಮತೆಯೇ ಇಲ್ಲ ಅಂತ ಲಲಿತ ಬೇಸರ ಮಾಡಿಕೊಳ್ಳುತ್ತಾಳೆ... ಪಾಪ ಆ ಮಗುವಿನ ತಪ್ಪಾದರೂ ಏನು?" ಧೈರ್ಯ ವಹಿಸಿ ಕೇಳಿದ್ದಳು.

"ಅವನ ಹೆಸರನ್ನು ನನ್ನ ಮುಂದೆ ಎತ್ತಬೇಡ..." ರೇಗಿದ್ದ.

"ಪಾಪ.... ಮಗು... ಅವನೇನು ಮಾಡಿದ?"

"ಅವನ್ನೇನು ಮಾಡಿದನೋ... ನನಗೆ ಗೊತ್ತಿಲ್ಲ, ನಾನು ಮಾಡಿದ್ದು ತಪ್ಪು ಅಂತ ತಿಳೀತಿದೆ...ನನ್ನ ಆಸೆಯೆಲ್ಲಾ ಹಾಳಾಗಿ ಹೋಯಿತು, ಈ ಸುಖಕ್ಕೆ ಇಬ್ಬಿಬ್ಬರು ಹೆಂಡಿರು..."

ವೇದ ನಿರುತ್ತರಳಾದಳು.

ಅನಂತನಿಂದ ಅಂತಹ ಅಪರಾಧವೇನುಂಟಾಗಿದೆ ಎಂದು ಅವಳಿಗೆ ಅರ್ಥವಾಗಿರಲಿಲ್ಲ. ತಾನು ಒಂದು ಮಗುವನ್ನು ಹೆತ್ತುಕೊಡಲು ಅಶಕ್ಯಳಾದೆ ಎಂದು ತನ್ನನ್ನೇ ಹಳಿದುಕೊಂಡಳು.

"ಅವನನ್ನು ಮೀರಿಸುವಂತಹ ಒಂದು ಮಗುವನ್ನು ನೀನು ಹೆತ್ತು ಬಿಡು...ಆಮೇಲೆ ನನ್ನನ್ನು ಹಿಡಿಯೋರೂ ಯಾರೂ ಇರಲ್ಲ"

"ತಮಾಷೆ ಮಾಡಬೇಡಿ.... ಆಗೋದಾಗಿದ್ದಿದ್ರೆ.... ಎಂದೋ ಆಗಿರುತ್ತಿತ್ತು, ನಿಮಗೆ ಮಕ್ಕಳು ಅಂದರೆ ಆಸೇನಾ...?"

"ಸ್ವಂತ ನಮ್ಮದೇ ಮಕ್ಕಳು ಅಂತ ಆದ್ರೆ ಯಾರಿಗೆ ತಾನೇ ಆಸೆ ಇರುವುದಿಲ್ಲ...." ವೇದ ಚಕಿತಳಾದಳು. ಬೆರಗಾಗಿ ನೋಡಿದಳು.

"ನಿನಗೆ ಆಶ್ಚರ್ಯವಾಗುತ್ತಿದೆ ಅಲ್ವಾ.. ನಾನೇಕೆ ಹೀಗೆ ಆಡ್ತಿದಿನಿ ಅಂತ, ಅವನು ನನ್ನ ಸ್ವಂತ ಮಗನಾಗಿದ್ದಿದ್ರೆ.... ಈಗ್ಯಾಕೆ ಆ ಮಾತು?"

"ಅನಂತ ನಿಮ್ಮ ಸ್ವಂತ ಮಗನಲ್ವಾ..? ಹಾಗಾದ್ರೆ..."

"ಇಲ್ಲ.... ಅವನು ಅವನು... ಯಾವುದೋ ಅತ್ಯಾಚಾರಕ್ಕೆ ಹುಟ್ಟಿದ ಅನಾಥ..."

"ಛೀ ಬಿಡ್ತು ಅನ್ನಿ"

"ತಮಾಷೆ ಅಲ್ಲ ವೇದು..." ಎಂದು ಲಲಿತಂಗಾದ ಅನ್ಯಾಯದ ವಿಷಯವನ್ನು ತಿಳಿಸಿದ" ಆದರೆ ಲಲಿತಂಗೆ ಈ ವಿಷಯ ಗೊತ್ತಿಲ್ಲ..."

"ಒಂದು ಒಳ್ಳೆ ಕೆಲಸವನ್ನು ಮಾಡೀಯೂ ನೀವೇಕೆ ಹೀಗೆ ಪರಿತಪಿಸ್ತೀರಿ...?" ವೇದ ಸಮಾಧಾನ ಮಾಡುವಂತೆ ನುಡಿದಳು.

"ಲಲಿತನಿಗೋಸ್ಕರ ಈ ಕೆಲಸ ಮಾಡಿದೆ..."

"ಈಗ ಲಲಿತಂಗೆ ನೋವಾಗುತ್ತಿಲ್ಲವೇ?"

"ಆ ನೋವನ್ನೆಲ್ಲ ಮರೆಸಲು ಅವನಿದಾನಲ್ಲ, ನನಗೆ ಯಾರಿದಾರೆ? ನನ್ನ ಸ್ವಂತದವರು ಯಾರಿದಾರೆ..." ಅವನು ಎತ್ತರದ ಧ್ವನಿಯಲ್ಲಿ ನುಡಿದಾಗ ವೇದ ಹೆದರಿ ಸುಮ್ಮನಾದಳು.

ಆದರೆ ಅದರಿಂದ ಅವಳಿಗೆ ಅನಂತನ ಮೇಲಿನ ಪ್ರೀತಿ ಕಡಿಮೆ

ಯಾಗಲಿಲ್ಲ. ದಿನದಿನಕ್ಕೂ ಹೆಚ್ಚಾಯಿತು ಗೋಪಾಲನ ಧೋರಣೆ ಅವಳಿಗೆ ಸರಿ ಎನಿಸಿರಲಿಲ್ಲ. ತಾನಾಗಿಯೇ ಅವನಿಂದ ದೂರದೂರ ಇರತೊಡಗಿದಳು. ಈ ಕಾರಣದಿಂದ ಲಲಿತ–ವೇದ ಇನ್ನು ಹತ್ತಿರವಾದರು.

"ನೀವೆಲ್ಲಾ ಒಂದೇ ಜಾತಿ. ನನ್ನ ಆಸೆ ಪೂರೈಸಲಾಗದೇ ನನ್ನಿಂದ ದೂರವಾಗುತ್ತಿದ್ದೀರಿ" ಎಂದು ತನ್ನಲ್ಲೇ ಅಂದುಕೊಂಡಿದ್ದ ಗೋಪಾಲ.

ಹೀಗೇ ಇಪ್ಪತ್ತು ವರ್ಷಗಳು ಕಳೆದು ಹೋಗಿದ್ದವು. ಗೋಪಾಲ ತನ್ನದೇ ಸ್ವಂತ ಕಂಪೆನಿಯೊಂದನ್ನು ಪ್ರಾರಂಭಿಸಿ ಚೆನ್ನಾಗಿ ಲಾಭ ಗಳಿಸಿದ್ದ. ಈಗ ಅವನು ಅತಿ ಶ್ರೀಮಂತನಾಗಿದ್ದ, ಬಂಗಲೆ, ಕಾರು, ಎಲ್ಲಾ ಇತ್ತು. ಅವನ ಶ್ರೀಮಂತಿಕೆಯ ವೈಭವವನ್ನು ಕಂಡು ತಾಯಿ ಅಲ್ಲೇ ನೆಲೆಸಲು ನಿರ್ಧರಿಸಲು ಸಿದ್ಧಳಾಗಿದ್ದಳು. ಆದರೆ ಗೋಪಾಲ ಒಪ್ಪಲಿಲ್ಲ.

"ನನಗೂ, ನಿನಗೂ ಸರಿ ಹೋಗಲ್ಲ... ನೀನು ಅಲ್ಲೇ ಇರು, ನಿನಗೆ ಹಣಬೇಕಾದರೆ ಕೇಳು...ಕೊಡ್ತೀನಿ"

"ನಿನಗೆ ಹೆತ್ತ ತಾಯಿ ನಾನು ಬೇಡ, ಯಾರೋ ಕಂಡು ಕೇಳರಿಯದ ವೇದ ಈ ಮನೆ ಯಜಮಾನತಿ. ಲಲಿತಂಗಾದರೂ ಬುದ್ಧಿ ಬೇಡವೇ?"

"ನಿನಗೇಕೆ ಅದೆಲ್ಲ... ಇದು ಲಲಿತನ ಮನೆ, ಅವಳಿಗೆ ಹೇಗೆ ಇಷ್ಟವೋ ಹಾಗೇ ನಡೆಯುತ್ತೆ"

"ಚೆನ್ನಾಗಿದೆ ನಿಮ್ಮ ಸಂಸಾರ...ನಾನು ಆಗಲೇ ಹೇಳಿದ್ದೆ ಲಲಿತನ ಕೈಯಲ್ಲಿ ಏನೂ ಆಗಲ್ಲ ಅಂತ ಒಂದು ಮಗೂಗೇ ಸುಸ್ತು... ಇಷ್ಟೊಂದು ಆಸ್ತಿಪಾಸ್ತೀನಲ್ಲ ಅನುಭವಿಸೋಕೆ ಇನ್ನು ನಾಲ್ಕಾರು ಮಕ್ಕಳಾಗಬೇಕಾಗಿತ್ತು ನಿನಗೆ...." ಅವನನ್ನು ಕೆಣಕುವಂತೆ ನುಡಿದಳು.

ಅವಳ ಮಾತುಗಳನ್ನು ಕೇಳಿಸಿಕೊಂಡಿದ್ದ ವೇದ ಲಲಿತ ಮುಖಮುಖ ನೋಡಿಕೊಂಡರು. ಅನಂತ ಮನೆಯಲ್ಲಿರಲಿಲ್ಲ, ಅವನ ತಾಯಿ ಸಹ ಅನಂತನ್ನ ಪ್ರೀತಿಯಿಂದ ಮಾತನಾಡಿಸಿದ್ದನ್ನು ಕಂಡಿರಲಿಲ್ಲ. "ಅಮ್ಮನಿಗೆ ನಾನೇ ಬೇಡ...ಇನ್ನು ನನ್ನ ಮಗನೇ ಅಲ್ಲದವನು ಇವನು...ಅವಳಿಗೆ ಏನು ಸಂಬಂಧ?" ಎಂದುಕೊಂಡಿದ್ದ.

"ನೀನು ನಾಲ್ಕಲ್ಲ, ಹತ್ತು ದಿನ ಇಲ್ಲಿ ಅತಿಥಿಯಂತೆ ಇದ್ದು ಹೋಗು... ನಮ್ಮ ಮನೆ ವ್ಯವಹಾರಕ್ಕೆ ಬಾಯಿ ಹಾಕಬೇಡ. ನಾವು ಇರುವುದೇ ಹೀಗೆ... ನಿನಗೆ ಸರಿ ಎನಿಸದಿದ್ದರೆ ಈಗಲೇ ಹೊರಡು..." ಮಗ ಖಡಾಖಂಡಿತವಾಗಿ ನುಡಿದಾಗ ತಾಯಿ ದನಿ ಏರಿಸಿದ್ದಳು.

"ನಿನಗೆ ಶ್ರೀಮಂತಿಕೆಯ ಮದ ಕಣೋ... ಎಲ್ಲಾ ಹೀಗೇ ಇರುತ್ತೆ ಅಂತ ತಿಳಕೋ ಬೇಡ. ಒಂದು ದಿನ ಎಲ್ಲಾ ತಲೆ ಕೆಳಕಾಗುತ್ತೆ"

"ಆಗಲಿ ಪರವಾಗಿಲ್ಲ, ಆಗ ನಾನೇನು ನಿನ್ನ ಮನೆ ಬಾಗಿಲಿಗೆ ಬರುವುದಿಲ್ಲ"

ತಾಯಿ ಮಗನ ವಾದ ಹೀಗೇ ಮುಂದುವರೆಯುತ್ತಿತ್ತು. ಮುಗಿಯುತ್ತಲೇ ಇರಲಿಲ್ಲ, ಲಲಿತ ಬೇಜಾರು ಮಾಡಿಕೊಳ್ಳುತ್ತಿದ್ದಳು. ವೇದ ಮಾತ್ರ.

"ಅಮ್ಮಾ... ನೀವು ಈ ಮನೆಗೆ ಹಿರಿಯರು. ನಿಮಗೆ ಹೇಗೆ ಬೇಕೋ ಹಾಗಿರಿ... ನಾನು ನಿಮ್ಮ ಸೇವೆ ಮಾಡ್ತೀನಿ" ಎಂದಿದ್ದಳು.

"ನನ್ನ ಸೇವೆ ಮಾಡುಕ್ಕೆ ನೀನ್ಯಾರಮ್ಮಾ... ನನ್ನ ಮಗ ಸೊಸೆಗೆ ನಾನು ಬೇಡ... ಏನೋ ಗಾದೆ ಹೇಳ್ತಾರಲ್ಲ ಹಾಗೇ... ಆಮೇಲೆ ಅಡಿಗೆಯವಳ ಹತ್ತಿರ ಏನು ಪಿತೂರಿ ಅಂತ ಅನ್ನದೇ ಬಿಡ್ತಾನ್ಯೆ...?"

ಈಕೆಯ ಕಣ್ಣಿಗೆ ತಾನಿನ್ನು ಅಡಿಗೆಯವಳು ಎಂದುಕೊಂಡು ವೇದ ಮನಸ್ಸಿನಲ್ಲೇ ನಕ್ಕಳು. ನಾಲ್ಕು ದಿನ ಇಲ್ಲಿಯೇ ಇದ್ದರೆ ಗುಟ್ಟು ಹೊರಬೀಳುತ್ತೆ ಅಂತ ಗೋಪಾಲ ಇವರನ್ನು ಸಾಗಹಾಕುತ್ತಿರಬಹುದು ಎಂದು ಭಾವಿಸಿದಳು.

ಇಷ್ಟೆಲ್ಲಾ ಮಾತು ನಡೆದರೂ ಗೋಪಾಲನ ತಾಯಿ ಮತ್ತೆ ತಾನಾಗಿಯೇ ಆಡಿದ್ದಳು. "ನೀನು ಈಗಲೂ ಹುಂ ಎಂದರೆ, ನಮ್ಮೂರಿನ ಹೆಣ್ಣನ್ನು ನಿನಗೆ ಮದುವೆ ಮಾಡಿಸ್ತೀನಿ, ರಾಮಭಟ್ಟರ ಮಗಳು ಶಾರೀ ನಿನಗೆ ಹೇಳಿಮಾಡಿಸಿ ದಂತಹ ಹೆಣ್ಣು. ಏನೋ ಪಾಪ... ಬಡತನ ಎರಡನೇ ವರನಿಗೆ ಕೊಡಲು ಸಿದ್ಧರಾಗಿದಾರೆ... ನಿನಗೆ ತಾನೇ ಏನು ವಯಸ್ಸಾಗಿದೆ? ಇನ್ನು ನಲವತ್ತೆರಡು ಮುಖ ನೋಡಿದರೆ ಇನ್ನು ಚಿಕ್ಕವನಾಗಿ ಕಾಣ್ತೀಯ..."

"ಸಾಕು ನಿಲ್ಲಿಸು..." ಗೋಪಾಲ ರೇಗಿದ್ದ.

"ನಿನ್ನನ್ನು ನೋಡಿದರೆ ಅಯ್ಯೋ ಅಂತ ಅನ್ನಿಸುತ್ತೆ... ಅವನೋ... ನಿನ್ನ ಮಗ ಅನಂತ... ಅವನನ್ನು ನೋಡಿದರೆ ಈ ಮನೆಯವನು ಅನ್ನುವ ಭಾವನೆಯೇ ಬರಲ್ಲ ನನಗೆ...ಒಂದು ದಿನ ನಿನ್ನ ಮುಖಕ್ಕೆ ಮಂಗಳಾರತಿ ಎತ್ತಿ ಓಡಿ ಹೋದರೂ ಹೋದನೇ..."

ಲಲಿತನಿಗೆ ತಡೆಯಲಾಗಿರಲಿಲ್ಲ.

"ಅತ್ತೆ... ಸುಮ್ಮನಿದೀನಿ ಅಂತ ಎಷ್ಟು ಅಂತೀರಿ... ನನ್ನ ಮಗನ ಮೇಲೇಕೆ ನಿಮಗೆ ಹೊಟ್ಟೆ ಉರಿ... ನಾನು ನಿಮ್ಮ ಮಗನ ಹೆಂಡತಿಯಾಗಲು ಲಾಯಕ್ಕಿಲ್ಲದಿರಬಹುದು ಬೇಕಾದರೆ ನಿಮ್ಮ ಮಗನ್ನ ನೀವೇ ಕರೆದುಕೊಂಡು ಹೋಗಿ... ನನ್ನನ್ನಾಗಲೀ ನನ್ನ ಮಗನ್ನಾಗಲೀ ಅನ್ನಬೇಡಿ..."

"ಚೆನ್ನಾಗಿದೆ ಕಣೇ ನಿನ್ನ ಮಾತು... ಒಳ್ಳೆ ಮಳ್ಳಿ ತರಹ ಕರೆದುಕೊಂಡು ಹೋಗಿ ಅಂತ ಅಂತೀಯಲ್ಲ... ಅವನೇನು ಕೈ ಕೂಸೇ ಅದೇನು ಅರೆದು

ತಲೆಗೆ ಮೆತ್ತಿದೇಯೋ ಲಲಿತಾ... ಲಲಿತಾ... ಅಂತ ನಿನ್ನ ಹಿಂದೆ ಮುಂದೇನೇ ಇರ್ತಾನೆ...ನಾಚಿಕೆ ಇಲ್ಲದವನು"

"ಲಲಿತಾ ಸಾಕು ಸುಮ್ಮನಿರು. ನೀನು ಅಮ್ಮನ ಹತ್ತಿರ ಮಾತನಾಡ ಬೇಡ... ಅಮ್ಮ ನಿನಗೆ ನನ್ನ ಶ್ರೀಮಂತಿಕೆ ಕಂಡು ಹೊಟ್ಟೆ ಉರಿ, ಅದಕ್ಕೇ ಹೀಗಾಡ್ತೀಯ... ಈಗಲೇ ಹೊರಡು... ಒಂದು ಗಳಿಗೆ ಇಲ್ಲಿರಬೇಡ..."

"ಹೋಗ್ತೀನೋ... ಹೋಗ್ತೀನಿ... ಮತ್ತೆ ಈ ಕಡೆ ತಲೆ ಹಾಕಲ್ಲ."

"ಖಂಡಿತಾ ಹಾಗೇ ಮಾಡು, ನನಗೆ ನೆಮ್ಮದಿ ಸಿಗುತ್ತೆ"

ಎರಡು ಮೂರು ದಿನಗಳಲ್ಲೇ ಇಷ್ಟು ಮಾತನಾಡಿ ಅತ್ತೆ ಹೊರಟು ಹೋದಮೇಲೆ, ವೇದ, ಲಲಿತ ಇಬ್ಬರೂ ತುಂಬಾ ನೋಂದುಕೊಂಡಿದ್ದರು. ಗೋಪಾಲ ಆದಷ್ಟೂ ಹೊತ್ತನ್ನು ತನ್ನ ಆಫೀಸಿನಲ್ಲೇ ಕಳೆಯುತ್ತಿದ್ದ. ಮನೆಗೆ ಬರೀ ಊಟ ನಿದ್ದೆಗೆ ಬರುವವನಂತೆ ಬರುತ್ತಿದ್ದ. ಯಾರೂ ಅವನನ್ನು ಏನೂ ಪ್ರಶ್ನಿಸಲಿಲ್ಲ. ದಿನಗಳು ಉರುಳಿ ಹೋಗಿದ್ದವು. ಮತ್ತೆ ಮತ್ತೆ ತಾಯಿ ಬರುತ್ತಲೇ ಇದ್ದಳು. ಬೇರೆ ಊರಿನಲ್ಲಿ ಹಾಸ್ಟೆಲ್ಲಿನಲ್ಲಿದ್ದುಕೊಂಡು ಓದುತ್ತಿದ್ದ ಅನಂತ ಪರೀಕ್ಷೆ ಮುಗಿದೊಡನೆ, ರಜ ಕಳೆಯಲು ಊರಿಗೆ ಬಂದಿದ್ದ ಮನೆಯ ವಾತಾವರಣ ಅವನಿಗೆ ಬೇಸರವನ್ನುಂಟು ಮಾಡಿತ್ತು.

"ಅದ್ಯಾಕೆ ಎಲ್ಲಾ ಹೀಗಿದೀರಿ?" ನಗುತ್ತಾ ಪ್ರಶ್ನಿಸಿದ್ದ.

"ನಿಮ್ಮ ಅಜ್ಜಿ ಬಂದು, ನಿಮ್ಮ ಅಪ್ಪನ ತಲೆ ಕೆಡಿಸಿ ಹೋದರು ಲಲಿತ ನಗುತ್ತಾ ನುಡಿದಳು.

"ನಾನಿಲ್ಲದಾಗ, ಅಪ್ಪ ಖುಷಿಯಾಗಿರುತ್ತಾರೇನೋ ಎಂದುಕೊಂಡಿದ್ದೆ.... ಅಜ್ಜಿ ಬಂದು ಮತ್ತೆ ಮೂಡ್ ಕೆಡಿಸಿದ್ರಾ?"

"ಯಾಕೋ ಹೀಗಂತೀಯಾ?"

"ಮತ್ತಿನ್ನೇನು! ಅಪ್ಪನಿಗೆ ನನ್ನ ಮೇಲೆ ಪ್ರೀತಿ ಇಲ್ಲ ಅಂತ ನನಗೇನೂ ಗೊತ್ತಿಲ್ವಾ? ಅದಕ್ಕೆ ನನ್ನನ್ನು ಬೇರೆ ಊರಿನ ಕಾಲೇಜಿಗೆ ಸೇರಿಸಿದ್ದು ಅಪ್ಪನಿಗೆ ಅಜ್ಜೀನೇ ಸರಿ..."

"ಹಾಗೇನಿಲ್ಲ... ಲಲಿತ ಕೆಳದನಿಯಲ್ಲಿ ನುಡಿದಳು.

"ಏನು ಹಾಗೇನಿಲ್ಲ? ನನಗೆ ತಿಳುವಳಿಕೆ ಬಂದಾಗಿನಿಂದ ನೀನು ಇದೇ ಮಾತನ್ನಾಡ್ತಿದೀಯ! ನಂಗೂ ಎಲ್ಲಾ ಗೊತ್ತಾಗುತ್ತೆ"

"ಅವರಿಗೆ ಅವರ ಕಂಪೆನಿ ಕೆಲಸವೇ ಜಾಸ್ತಿ...ನೀನು ಬೇಗ ಓದು ಮುಗಿಸಿ, ಇಂಜಿನಿಯರ್ ಆಗಿ ಅವರ ಕಂಪೆನಿಗೇ ಸೇರಿಕೋ..."

"ನಾನು ಏನೇ ಆದರೂ ಆ ಕಂಪೆನಿಗೆ ಮಾತ್ರ ಸೇರಲ್ಲ. ನನಗೆ ಈ ಊರೇ ಬೇಡ. ಬೇರೆ ಊರಿನಲ್ಲೇ ಇರ್ತೀನಿ ನಿನ್ನನ್ನು ಕರೆದುಕೊಂಡು ಹೋಗ್ತೀನಿ"

"ನಿಮ್ಮ ಅಪ್ಪ ನನ್ನನ್ನು ಕಳಿಸಬೇಕಲ್ಲ, ಅವರನ್ನು ನೋಡಿಕೊಳ್ಳುವವರು ಯಾರು!"

"ಅವರನ್ನು ನೋಡಿಕೊಳ್ಳಕ್ಕೆ ದೊಡ್ಡಮ್ಮ ಇದಾರಲ್ಲ..." ಅವನ ಮಾತಿಗೆ ಲಲಿತ ನಕ್ಕಿದ್ದಳು.

"ಅಗಲಿ ನೋಡೋಣ, ಈಗ ಹೇಳು ನಿನ್ನ ಓದು, ಕಾಲೇಜು, ಹಾಸ್ಟೆಲ್ಲು ಎಲ್ಲಾ ಹೇಗಿದೆ ಅಂತ"

ವೇದಮ್ಮ ಬಡಿಸಿದ, ಬಿಸಿಬಿಸಿ ರುಚಿಯಾದ ಊಟವನ್ನು ಮಾಡುತ್ತಾ ತಾಯಿ ಮಗ ಬಹಳ ಹೊತ್ತು ಮಾತನಾಡಿದರು. ವೇದಮ್ಮ ನಗುನಗುತ್ತಾ ತಾನೂ ಮಾತಿನಲ್ಲಿ ಪಾಲ್ಗೊಂಡಿದ್ದಳು.

ಸ್ವಲ್ಪ ಹೊತ್ತಿನಲ್ಲೇ ಗೋಪಾಲ ಮನೆಗೆ ಬಂದ. ಎಲ್ಲರೂ ಮಾತನ್ನು ನಿಲ್ಲಿಸಿ ತಮ್ಮ ತಮ್ಮ ಪಾಡಿಗೆ ಹೊರಟುಹೋದುದನ್ನು ಅವನು ಗಮನಿಸಿದ. ತನ್ನ ಆಗಮನದಿಂದ ಎಲ್ಲರೂ ಸುಮ್ಮನಾದರು ಎಂದುಕೊಂಡಾಗ ಒಂದು ತರಹದ ಅಹಂಕಾರ ಮೂಡಿತ್ತು. ತಾನಾಗಿಯೇ ಅನಂತನ ಬಗ್ಗೆ ವಿಚಾರಿಸಲಿಲ್ಲ.

"ಅವನಿಗೇನು ಹಾಯಾಗಿರ್ತಾನೆ ಒಬ್ಬ ಶ್ರೀಮಂತ ಹುಡುಗನಿಗೆ ಸಿಗಬೇಕಾದ ಅನುಕೂಲಗಳೆಲ್ಲ ಈ ಅನಾಥನಿಗೆ ಸಿಕ್ಕಿದೆಯಲ್ಲ ಎಂದುಕೊಂಡಾಗ ತಾಯಿ ಆಡಿದ್ದ ಮಾತುಗಳು ನೆನಪಾದವು.

ಇವನ ಬದಲು ನಾಲ್ಕಾರು ಬಡಹುಡುಗರನ್ನು ಸಾಕಿ ವಿದ್ಯಾವಂತರ ನ್ನಾಗಿ ಮಾಡಿದ್ದರೆ ತನಗೆ ತೃಪ್ತಿಯಾದರೂ ಇರುತ್ತಿತ್ತೇನೋ... ಇವನೋ ಸ್ವಂತವೂ ಅಲ್ಲ... ಬಡವನೂ ಅಲ್ಲ... ನನ್ನಿಂದ ಉದ್ಧಾರವಾಗುತ್ತಿರುವ ಮುಂದೆ ನನ್ನ ಆಸ್ತಿಗೆ ವಾರಸುದಾರನಾಗುವ, ನನಗೆ ಬೇಡವಾದವನು..." ಆ ಭಾವನೆ ಮೂಡಿ ಅವನ ಮನಸ್ಸು ಕೆಟ್ಟುಹೋಯಿತು.

"ಛೇ... ತಾನೆಂತಹ ಕೆಲಸ ಮಾಡಿದೆ? ಲಲಿತೆಯ ಪ್ರೀತಿಗೆ ಕಟ್ಟುಬಿದ್ದು ತಾನು ವೇದಳಂತಹ ಬರಡು ಹೆಂಗಸನ್ನು ಮದುವೆಯಾಗಬಾರದಿತ್ತು. ಅವಳು ನನ್ನಿಂದ ಉದ್ಧಾರವಾದಳು. ಆದರೆ ನಾನು ಹಾಳಾದೆ... ಆ ಮನೆಯಲ್ಲಿ ಎಲ್ಲಾ ಇದ್ದರೂ, ನನಗೆ ಏನೂ ಇಲ್ಲ... ನಾನು ಏಕಾಂಗಿ... ನನ್ನ ಮನದ ತುಮುಲವನ್ನು ಅರ್ಥ ಮಾಡಿಕೊಳ್ಳುವವರು ಯಾರೂ ಇಲ್ಲ... ಎಲ್ಲರಿಗೂ ಅವರವರ ಚಿಂತೆ..."

ನನಗೀಗ ನಲವತ್ತೈದು ವರ್ಷ. ಇಷ್ಟು ವರ್ಷಗಳಲ್ಲಿ ನಾನು ಗಳಿಸಿದ್ದು ಈ ಶ್ರೀಮಂತಿಕೆಯೊಂದೇ ಆದರೆ ಸಂಸಾರ ಸುಖ ನನ್ನ ಪಾಲಿಗೆ ಇಲ್ಲವಾಯಿತು. ಲಲಿತ, ವೇದ ಯಾರೂ ಆಪ್ತರಲ್ಲ... ಅವರೆಲ್ಲಾ ಒಂದು ನಾನೊಬ್ಬನೇ ಒಂದು... ನನ್ನ ಚಿಂತೆ ಯಾರಿಗೂ ಇಲ್ಲ. ಇದ್ದಕ್ಕಿದ್ದಂತೆ ಅವನಿಗೆ ಅವರೆಲ್ಲರ ಮೇಲೆ

ಅಸಹನೆ ಹೆಚ್ಚಾಯಿತು. ಕಾರಣವಿಲ್ಲದೇ ಎಲ್ಲರ ಮೇಲೆ ರೇಗುತ್ತಿದ್ದ. ತಪ್ಪುಗಳನ್ನು ಹುಡುಕಿ ಅನ್ನುತ್ತಿದ್ದ. ಅನಂತನನ್ನು ಎದುರಿಗೆ ಅಲ್ಲವಾದರೂ, ಪರೋಕ್ಷವಾಗಿ ಬೈಯುತ್ತಿದ್ದ.

ಅನಂತ ಬೇಸರಿಸಿಕೊಂಡು ಕೆಲವೇ ದಿನಗಳಲ್ಲಿ ಹೊರಟುಬಿಟ್ಟ.

"ಅಮ್ಮಾ... ನಾನು ಈ ಮನೆಗೆ ಬರೋಲ್ಲ. ದಿನದಿನಕ್ಕೂ ಅಪ್ಪನಿಗೆ ನನ್ನ ಮೇಲಿನ ತಾತ್ಸಾರ ಹೆಚ್ಚಾಗಿದೆ. ನಾನು ಆದಷ್ಟು ಬೇಗ ಕೆಲಸಕ್ಕೆ ಸೇರಿ ಬೇರೆ ಮನೆ ಮಾಡಿ ನಿನ್ನನ್ನು ಕರೆದುಕೊಂಡು ಹೋಗ್ತೀನಿ" ಅವನು ಹೊರಟಾಗಲೂ, ಗೋಪಾಲ ಮನೆಯಲ್ಲಿರಲಿಲ್ಲ, ನಂತರವೂ ವಿಚಾರಿಸದಿದ್ದಾಗ ಎಂತಹ ಕಲ್ಲು ಹೃದಯ ಎಂದುಕೊಂಡಿದ್ದರು ಇಬ್ಬರೂ.

ದಿನಗಳು ಸರಿದವು. ಇನ್ನು ತನ್ನ ಬಾಳಿನಲ್ಲಿ ಮೊದಲಿನ ಉತ್ಸಾಹದ ದಿನಗಳು ಬರಲು ಸಾಧ್ಯವೇ ಇಲ್ಲವೇನೋ ಎಂದುಕೊಂಡಿದ್ದ ಗೋಪಾಲ ಸುಗುಣಳನ್ನು ಕಂಡ ದಿನದಿಂದ ಚುರುಕಾದ. ಅವಳನ್ನು ನೋಡುತ್ತಿದ್ದಂತೇ ಅವನು ತನ್ನ ಬೇಸರವನ್ನೆಲ್ಲಾ ಮರೆತ. ಅವಳ ಮೇಲೆ ಆಸಕ್ತಿ ಮೂಡಿತ್ತು, ಭೇಟಿ ಅನಿರೀಕ್ಷಿತವಾದರೂ, ಅನಂತರ ಅವಳನ್ನೇ ಕುರಿತು ಯೋಚಿಸಿ, ತಲೆ ಕೆಡಿಸಿಕೊಂಡಿದ್ದ. ಸುಗುಣ... ಸುಗುಣ... ಎಂದು ತಾನೇ ಹತ್ತಾರು ಸಾರಿ ಅವಳ ಹೆಸರನ್ನು ಜಪಿಸಿದ್ದ. ಅವಳಿಗೆ ಜಾಸ್ತಿ ಸಂಬಳದ ಆಸೆಯನ್ನು ತೋರಿ, ಅವಳು ಸದಾ ತನ್ನೆದುರಿಗೇ ಇರುವಂತೆ ಮಾಡಬೇಕು ಎಂದು ಆಲೋಚಿಸಿ ಅವಳಿಗೆ ಹೇಳಿಕಳಿಸಿದ್ದ. ಅವನ ಉಪಾಯ ಫಲಿಸಿತ್ತು. ಸುಗುಣ ಅವನ ಪರ್ಸನಲ್ ಸೆಕ್ರೆಟರಿಯಾಗಿ ಕೆಲಸಕ್ಕೆ ಸೇರಿಕೊಂಡಳು.

ಅವಳಿಗೆ ಸಾಕಷ್ಟು ಅಡ್ವಾನ್ಸ್ ಹಣವನ್ನು ಕೊಡಿಸಿ ನುಡಿದಿದ್ದ.

"ನಿಮಗೆ ಅಗತ್ಯವಾದ ಬಟ್ಟೆ, ಕಾಸ್ಮೆಟಿಕ್ಸ್ ಎಲ್ಲಾ ತಗೊಳ್ಳಿ... ನೀವು ಸ್ಮಾರ್ಟ್ ಆಗಿರಬೇಕು, ಐ ಲೈಕ್ ಸ್ಮಾರ್ಟ್ ಗರ್ಲ್ಸ್" ಎಂದಿದ್ದ.

ನಾಚಿಕೆಯಿಂದ ಕೆಂಪಾದ ಅವಳ ಕೆನ್ನೆಗಳನ್ನೇ ಆಸೆಗಣ್ಣಿನಿಂದ ನೋಡಿದ. ಸಣ್ಣದಾಗಿ ಮೂಡಿದ ಕೆನ್ನೆಯ ಗುಳಿ ಅವಳ ಸೊಬಗನ್ನು ಹೆಚ್ಚಿಸಿತ್ತು. ಹೇಗಾದರೂ ಸರಿ, ಈ ಹುಡುಗಿಯನ್ನು ತನ್ನವಳನ್ನಾಗಿ ಮಾಡಿಕೊಳ್ಳಲೇಬೇಕು ಎಂದು ನಿರ್ಧರಿಸಿದ. ಆದರೆ ಆ ಕಂಪೆನಿಯ ಮಾಲೀಕನಾಗಿ, ಯಾವ ಆತುರವನ್ನೂ ತೋರುವಂತಿರಲಿಲ್ಲ. ಶ್ರೀಮಂತಿಕೆಯ ಜಾಲವನ್ನು ಬೀಸಿ, ಅವಳನ್ನು ತನ್ನ ಕಡೆಗೆ ಆಕರ್ಷಿಸಿಲಾರಂಭಿಸಿದ.

ಸುಗುಣ ಅವನ ದೊಡ್ಡಸ್ತಿಕೆಗೆ ಬೆರಗಾಗಿದ್ದಳು. ಅವನ ಶ್ರೀಮಂತಿಕೆಗೆ ಸೋತಿದ್ದಳು. ತಾನು ಕೇಳದೆಯೇ ತನಗೆ ಲಭ್ಯವಾಗುವ ಮುಂಗಡ ಹಣ ಅವಳನ್ನು ಮುದಗೊಳಿಸುತ್ತಿತ್ತು. ಬಾಸ್... ತುಂಬಾ ಒಳ್ಳೆಯವರು ಎಂದು

ಹೊಗಳಿದ್ದಳು ತನ್ನ ಮನೆಮಂದಿಯೊಡನೆ.

ಕಂಪೆನಿಯ ಕಡೆಯ ಪಾರ್ಟಿಗಳಿಗೆ ಹೋಗಬೇಕಾದ ಸಂದರ್ಭದಲ್ಲಿ ಗೋಪಾಲ ಅವಳಿಗೆ ಹೊಸ ಹೊಸ ಸೀರೆಗಳನ್ನು ಕೊಳ್ಳಲು ತಾನೇ ಹಣವನ್ನು ಕೊಡುತ್ತಿದ್ದ. ಕಾರಿನಲ್ಲಿ ಅವನ ಜತೆ ಕುಳಿತು ಠೀವಿಯಿಂದ ಹೊರಡುವಾಗ ಅವಳು ಉಬ್ಬಿ ಹೋಗುತ್ತಿದ್ದಳು. ಆದರೆ ಅವನೆಂದೂ ಸಭ್ಯತೆಯ ಎಲ್ಲೆಯನ್ನು ಮೀರಿರಲಿಲ್ಲ. ಅವಳಿಗೆ ಅವನ ಬಗ್ಗೆ ಗೌರವ ಅಭಿಮಾನ ಉಂಟಾಗಿತ್ತು. ಇವನು ನನ್ನ ಭಾಗದ ದೇವರು... ಇಲ್ಲದಿದ್ದರೆ, ಒಂದು ಹೊತ್ತಿನ ಕೂಳಿಗೆ ಪರದಾಡುತ್ತಿದ್ದ ನಾವು ಈ ದಿನ ತಕ್ಕಮಟ್ಟಿಗೆ ಇರಲು ಸಾಧ್ಯವಾಗಿದೆ ಎಂದುಕೊಂಡಿದ್ದಳು.

ಐದಾರು ತಿಂಗಳು ಕಳೆದವು. ಅವನು ದಿನಾ ಅವಳನ್ನು ಗಮನಿಸುತ್ತಲೇ ಇದ್ದ. ಆಫೀಸಿನಲ್ಲಿ ಒಳ್ಳೆಯ ಹುಡುಗಿ ಎಂದು ಹೊಗಳಿಸಿಕೊಂಡಿದ್ದಳು. ಅವನಿಗೂ ಹೆಮ್ಮೆ ಎನಿಸಿತ್ತು.

"ಸುಗುಣ.... ನಮ್ಮ ಕಂಪೆನಿಯಲ್ಲಿ ಆರು ತಿಂಗಳು ಕಳೆಯಿತು. ಇನ್ನು ನಿಮ್ಮ ಕೆಲಸ ಖಾಯಂ....ಸದ್ಯದಲ್ಲೇ ನಿಮಗೆ ಬಡ್ತೀ ಸಿಗುತ್ತೆ. ಅದರ ಜತೆಗೆ ಇದು ನನ್ನ ಕಿರುಕಾಣಿಕೆ" ಎಂದು ಹತ್ತು ಸಾವಿರ ರೂಗಳ ಕಟ್ಟನ್ನು ಅವಳಿಗೆ ನೀಡಿದ್ದ.

"ಇದು.... ಇಷ್ಟೊಂದು ನನಗ್ಯಾಕೆ?" ಎಂದಿದ್ದಳು ತೊದಲುತ್ತಾ...

" ಇರಲಿ ಪರವಾಗಿಲ್ಲ... ತಗೊಳ್ಳಿ... ಇಷ್ಟು ಕೊಟ್ಟರೆ ನಾನು ನಿರ್ಗತಿಕವಾಗಿ ಹೋಗುವುದಿಲ್ಲ. ನಿಮಗೆ ಇಷ್ಟವಾದ ಒಡವೆ ಮಾಡಿಸಿಕೊಳ್ಳಿ... ನಿಮ್ಮ ಕೊರಳಿಗೆ ನೆಕ್ಲೆಸ್ ತುಂಬಾ ಚೆನ್ನಾಗಿ ಒಪ್ಪುತ್ತೆ" ಎಂದು ಹೊಗಳಿದ್ದ.

ಅವಳು ನಾಚಿ ಕೆಂಪಾಗಿದ್ದಳು. ಕೆನ್ನೆಯ ಮೇಲಿನ ಸಣ್ಣ ಗುಳಿ ಅವನನ್ನು ತೃಪ್ತಿಗೊಳಿಸಿದ್ದವು. ಅದನ್ನೇ ಗಮನಿಸುತ್ತಾ ಸುಗುಣ 'ಐ ಲವ್ ಯೂ' ಎಂದು ತನ್ನಲ್ಲೇ ಹೇಳಿಕೊಂಡ. ಎದುರಿಗೇ ಹೇಳಲು ಹಿಂಜರಿದ.

ಸುಗುಣ 'ಥ್ಯಾಂಕ್ ಯು ಸರ್' ಎಂದು ಮತ್ತೊಮ್ಮೆ ಹೇಳಿ, ಹಣದ ಕಟ್ಟನ್ನು ತೆಗೆದುಕೊಂಡು ಹೋಗಿದ್ದಳು. ಆ ಹಣವನ್ನು ಸುಗುಣ ಹೇಗೆ ಖರ್ಚು ಮಾಡಿದಳೋ ಅವನು ಮತ್ತೆ ಪ್ರಶ್ನಿಸಲಿಲ್ಲ.

ಕೆಲವೇ ದಿನಗಳಲ್ಲಿ ಅವನಿಗೆ ಸುಗುಣಳೊಡನೆ ಊರಿನಿಂದ ಹೊರಗೆ ಹೋಗುವ ಅವಕಾಶ ಒದಗಿಬಂತು. ಅದು ಅವನೇ ಮಾಡಿದ ಯೋಜನೆ.

ಮುಂದಿನವಾರ ಡೆಲ್ಲಿಗೆ ಸೆಮಿನಾರ್‌ಗೆ ಹೋಗಬೇಕು ನನ್ನ ಜತೆ ನೀವೂ ಬರಬೇಕು ಎಂದಿದ್ದ.

ಸುಗುಣ ಬೆದರಿ.... "ನಾನಾ?" ಎಂದು ಕೇಳಿದ್ದಳು

"ಹೂಂ.... ಏಕೆ ಹೆದರಿದ್ರಾ? ಅಲ್ಲಿ ಬೇರೆ ಬೇರೆ ಊರಿನಿಂದ

ಬೇಕಾದಷ್ಟು ಜನ ಹೆಂಗಸರು ಬಂದಿರುತ್ತಾರೆ ಭಯವೇನಿಲ್ಲ"

"ಹಾಗಲ್ಲ.... ನಾನೆಂದೂ ಅಷ್ಟು ದೂರ ಹೋದವಳಲ್ಲ"

"ನಾನೂ ಇರ್ತೀನಲ್ಲ...."ನಕ್ಕಿದ್ದ.

"ಆದರೂ ನಮ್ಮ ತಂದೇನ ಒಂದು ಮಾತು ಕೇಳಬೇಕು"

"ಕೇಳಿ... ಆದರೆ... ಬರದೇ ಇದ್ದರೆ, ನಾನು ಬೇರೆಯವರನ್ನು ಕರೆದು ಕೊಂಡು ಹೋಗ್ತೀನಿ. ಆಗ ನಿಮಗೇ ಲಾಸ್.... ಈಗ ಸುನಾಯಾಸವಾಗಿ, ಏರೋಪ್ಲೇನ್‌ನಲ್ಲಿ ಹಾರಾಟ... ಡೆಲ್ಲಿಯ ಪ್ರೇಕ್ಷಣೀಯ ಸ್ಥಳಗಳ ಸುತ್ತಾಟವನ್ನು ಕಳೆದುಕೊಳ್ತೀರಿ ಅಷ್ಟೆ...." ಅವಳಿಗೆ ಆಸೆಯನ್ನು ತೋರಿಸಿದ್ದ.

ತಂದೆ ಒಪ್ಪದಿದ್ದರೂ ಬರುವಳೆಂಬ ನಂಬಿಕೆ ಅವನಿಗಿತ್ತು. ಹೆಣ್ಣು ಮಕ್ಕಳ ಸಂಪಾದನೆಯಿಂದ ಅನುಕೂಲವನ್ನು ಪಡೆಯುವ ತಂದೆ ಬಹುಶಃ ಬೇಡ ಅಂತ ಎಂದೂ ಅನ್ನಲಾರ ಎಂದುಕೊಂಡಿದ್ದು ನಿಜವಾಗಿತ್ತು. ಸುಗುಣ ಅವನೊಡನೆ ಬರಲು ಒಪ್ಪಿದಳು.

ಹನಿಮೂನ್‌ಗೆ ಹೊರಡುವವನಂತೆ ಗೋಪಾಲ ಸಿದ್ಧನಾದ.

ಸೆಮಿನಾರ್ ಮುಗಿಯುವವರೆಗೂ, ಅವರಿಬ್ಬರೂ ಹೊರಗೆ ತಿರುಗಾಡಲೂ ಎಲ್ಲಿಯೂ ಹೋಗಿರಲಿಲ್ಲ. ಸ್ವರ್ಗ ಎಂದರೆ ಹೀಗಿರುತ್ತೇನೋ ಎನ್ನುವ ಸುಖ ಸೌಲಭ್ಯಗಳಿಸುವ ಫೈವ್ ಸ್ಟಾರ್ ಹೋಟೆಲ್ಲಿನ ಹವಾನಿಯಂತ್ರಿತ ಕೋಣೆಯಲ್ಲಿ ಸುಗುಣ ತನ್ನನ್ನು ತಾನೇ ಮರೆತಳು. ಇದ್ದರೆ ಹೀಗಿರಬೇಕು....ಹೀಗೆ ಮಜಾ ಮಾಡಬೇಕು ಎಂಬ ಆಸೆಯಲ್ಲಿ ಮುಳುಗಿ ಹೋಗಿದ್ದಳು.

ದಿನಕ್ಕೊಂದು ಬಗೆಯಲ್ಲಿ ಶೃಂಗರಿಸಿಕೊಂಡು, ಮನಮೋಹಕವಾಗಿ ಮುಗುಳ್ನಗುತ್ತಾ ಪಾರ್ಟಿಗಳಲ್ಲಿ ಪಾಲ್ಗೊಂಡವಳನ್ನೇ ಗೋಪಾಲ ಬೆರಗಾಗಿ ನೋಡಿದ. "ಸುಗುಣ.... ನಿನ್ನಂತಹವಳೇ ನನಗೆಬೇಕಾದ್ದುದು..." ಎಂದು ಪದೇ ಪದೇ ಹೇಳಿಕೊಂಡ.

ನಂತರ ಇಬ್ಬರೂ ಆಗ್ರಾಕ್ಕೆ ಬಂದರು. ಪ್ರಖರವಾದ ಬೆಳದಿಂಗಳ ಶೀತಲ ರಾತ್ರಿ.... ತಾಜಮಹಲಿನ ಭವ್ಯ ನೋಟ ಗೋಪಾಲನ ಅಂತರಂಗದ ಹುಯ್ಯಿಲನ್ನು ಹೊಡೆದೆಬ್ಬಿಸಿತ್ತು. ಅಮೃತ ಶಿಲೆಯಷ್ಟೇ ಮನೋಹರವಾಗಿ ಕಾಣುತ್ತಿದ್ದ ಅವಳ ನುಣುಪಾದ ಕೆನ್ನೆಗಳನ್ನು ಸವರಬೇಕೆನ್ನಿಸಿತ್ತು. ತನ್ನ ಆಸೆಯನ್ನು ಅದುಮಿಟ್ಟುಕೊಳ್ಳಲಾರದೇ ಅವನು ಅವಳ ಸೊಂಟವನ್ನು ಬಳಸಿ ತನ್ನ ಹತ್ತಿರಕ್ಕೆಳೆದುಕೊಂಡು ಅವಳನ್ನು ತನ್ನೆಡೆಗೆ ತಿರುಗಿಸಿಕೊಂಡ.

ಸುಗುಣ ಬೆಚ್ಚಿ ಹಿಂದೆ ಸರಿಯಲು ನೋಡಿದಳು.

"ನೋಡು ಎಲ್ಲರೂ ಹೇಗೆ ಒಟ್ಟೊಟ್ಟಿಗೇ ಕೈಕೈ ಹಿಡಿದು ಹೋಗ್ತಾ ಇದಾರೆ..." ಪ್ರಣಯಿಗಳನ್ನು ತೋರಿಸಿದ

ಸುಗುಣ ನಾಚಿದ್ದಳು. ಏನೋ ಅವ್ಯಕ್ತ ಭಯದಿಂದ ಅವಳ ಎದೆ ಢವಗುಟ್ಟುತ್ತಿತ್ತು. ತಾಜಮಹಲಿನ ಸೌಂದರ್ಯವನ್ನು ನೋಡುವ ಆಸೆ ತಣಿಯಿತು.

"ಊರಿಗೆ ಯಾವಾಗ ಹೋಗೋಣ?" ಕೇಳಿದ್ದಳು.

"ಊರಿಗೆ ಹೋಗುವ ಆತುರ ಯಾಕೆ?" ಪ್ರಶ್ನಿಸಿದ.

"ನನಗ್ಯಾಕೋ ಭಯವಾಗ್ತಿದೆ" ನಿಜವನ್ನೇ ಹೇಳಿದ್ದಳು.

"ಯಾವ ಭಯ?" ನಗುತ್ತಾ ಕೇಳಿದ್ದ.

"ನಂಗೊತ್ತಿಲ್ಲ" ಎನ್ನುತ್ತಾ ದೂರ ಹೋದವಳನ್ನು ಹಿಡಿದು ನಿಲ್ಲಿಸಿದ.

"ಐ ಲವ್ ಯೂ ಸುಗುಣ. ಐ ಲವ್ ಯೂ.... ನನ್ನಿಂದ ದೂರ ಹೋಗಬೇಡ. ನನಗೆ ನೀನು ಬೇಕು..." ಹತ್ತಿರದಲ್ಲಿ ನುಡಿದಾಗ ಅವಳು ಬಿಳುಪೇರಿ ಹೋಗಿದ್ದಳು.

"ಸಾರ್.... ನೀವು.... ನೀವು ಹೀಗೆ ಅಂತ ನನಗೆ ತಿಳಿದಿರಲಿಲ್ಲ....."

"ನಾನು ಹೀಗೆ ಅಂತ ನನಗೇ ಗೊತ್ತಿರಲಿಲ್ಲ. ಬೆಳದಿಂಗಳ ರಾತ್ರಿ ಶೀತಲ ವಾತಾವರಣ.... ಅದ್ಭುತ ಪ್ರೇಮಿಗಳ ಇತಿಹಾಸವನ್ನು ಸಾರುವ ಈ ತಾಜಮಹಲಿನ ಮುಂದೆ ಯಾವ ರಸಿಕ, ಅರಸಿಕನಾಗಲು ಸಾಧ್ಯ ನೀನೇ ಹೇಳು" ಎನ್ನುತ್ತಾ ಅವಳ ಕೆನ್ನೆಯನ್ನು ಚುಂಬಿಸಿದ.

ಅವಳು ಅವನಿಂದ ತಪ್ಪಿಸಿಕೊಂಡು ಓಡಲಿಲ್ಲ. ಇಲ್ಲಿ ಇವನ ಕೈಗೆ ಸಿಕ್ಕಿ ಬಿದ್ದಾಗಿದೆ. ಓಡಿ ಹೋದರೂ ಪ್ರಯೋಜನವಿಲ್ಲ, ಪರಿಚಯದವರ್ಯಾರೂ ಇಲ್ಲದ ಈ ಊರಿನಲ್ಲಿ ತಾನು ಹೋಗುವುದಾದರೂ ಎಲ್ಲಿಗೆ ಎಂದುಕೊಂಡು,

"ಬಯಲಿನಲ್ಲಿ ಈ ಆಟಗಳೆಲ್ಲ ಬೇಡ.... ಪ್ಲೀಸ್ ನನ್ನನ್ನು ಬಿಡಿ" ಎಂದಳು ಗೋಗರೆಯುತ್ತಾ... ಅವನು ಅವಳನ್ನು ಬಿಟ್ಟ. ಅವಳು ಓಡಿಹೋಗದೇ ನಿಧಾನವಾಗಿ ಅವನ ಜತೆಜತೆಯಾಗಿ ನಡೆದು ಬಂದಾಗ ಅವನು ಉತ್ತೇಜಿತನಾದ.

ಸುಗುಣಳ ರೂಪವನ್ನು ಬೆಡಗನ್ನು ಬಣ್ಣಿಸಿ ಹೊಗಳಾರಂಭಿಸಿದ.

"ನನಗೆ ಇವತ್ತು ಅರ್ಥವಾಯಿತು.... ನನಗೇಕೆ ಅಷ್ಟು ಉಪಕಾರ ಮಾಡಿದಿರಿ ಅಂತ. ಆ ಋಣವನ್ನು ನನ್ನಿಂದ ಬಯಸುತ್ತೀರಿ ಅಲ್ಲವೇ? ಈ ದಿನಕ್ಕಾಗಿ ನೀವು ತಾಳ್ಮೆಯಿಂದ ಕಾದಿದ್ದಿರಿ ಅಲ್ಲವೆ?"

ಅವಳ ಮಾತುಗಳು ಅವನನ್ನು ಆಶ್ಚರ್ಯಗೊಳಿಸಿತ್ತು.

"ಹೌದು, ಸುಗುಣ ಈ ದಿನಕ್ಕಾಗಿ ನಾನು, ನಿನ್ನ ಕಂಡ ದಿನದಿಂದ ಕಾಯುತ್ತಿದ್ದೆ. ನಾನು ನಿನಗೆ ಯಾವ ಅನ್ಯಾಯವನ್ನು ಮಾಡುವುದಿಲ್ಲ. ನೀನು ಕೇಳಿದ್ದನ್ನೆಲ್ಲಾ ಕೊಡ್ತೀನಿ..... ನನಗೆ ನೀನು ಬೇಕೆಬೇಕು...."

"ನಾನು ಒಪ್ಪದಿದ್ದರೇ....?"

"ನಿನ್ನನ್ನು ಕೆಲಸದಿಂದ ತೆಗೆದುಹಾಕ್ತೀನಿ.... ನಿನ್ನ ಬಗ್ಗೆ ಅಪಪ್ರಚಾರ ಮಾಡಿಸ್ತೀನಿ, ನಿನಗೆ ಬೇರೆಲ್ಲೂ ಕೆಲಸ ಸಿಗದೇ ಮತ್ತೆ ನನ್ನ ಬಳಿಗೆ ಬರುವಂತೆ ಮಾಡ್ತೀನಿ"

"ನೀವು ಖಂಡಿತಾ ಮಾಡ್ತೀರಿ ಅಂತ ನನಗೆ ಗೊತ್ತು, ನಿಮಗೆ ಆ ಬಲವಿದೆ, ನನಗೆ ಯಾವ ಬೆಂಬಲವೂ ಇಲ್ಲ, ನನಗೆ ಇಷ್ಟೆಲ್ಲಾ ಮಾಡಿದಾಗಲೇ ನಾನು ಎಚ್ಚೆತ್ತುಕೊಳ್ಳಲಿಲ್ಲ, ನೀವು ಗೋಮುಖವ್ಯಾಘ್ರ ಅಂತ ನನಗೀಗ ತಿಳಿಯಿತು. ಈಗ ಹುಲಿಯ ಕೈನಿಂದ ಬಿಡಿಸಲು ಇಲ್ಲಿ ಯಾರೂ ಇಲ್ಲ...." ಗಡುಸಾಗಿ ನುಡಿದಳು.

"ಸುಮ್ಮನೇ ಜಾಣೆ ತರಹ ಮಾತನಾಡಬೇಡ ನನಗಿಷ್ಟವಿಲ್ಲ"

ಆಮೇಲೆ ಸುಗುಣ ಮತ್ತೆ ಮಾತಾಡಲಿಲ್ಲ, ಆದರೆ ಯಾವ ರಂಪರಾದ್ಧಾಂತವನ್ನು ಮಾಡಲಿಲ್ಲ, ಅವನು ಹೇಳಿದಂತೆ ಕೇಳಿ ಅವನನ್ನು ಸಂತೋಷಗೊಳಿಸಿದಳು. ಅದು ಅವನಿಗೇ ಆಶ್ಚರ್ಯ, ಆನಂತರ ಮತ್ತು ಇನ್ನು ಒಂದೆರಡು ಡೆಲ್ಲಿಯಲ್ಲೇ ಉಳಿಯಬೇಕಾಗಿತ್ತು. ಗೋಪಾಲ ಯಾವ ದಯಾದಾಕ್ಷಿಣ್ಯವನ್ನು ತೋರದೇ ಅವಳ ಪ್ರೀತಿಯಲ್ಲಿ ಆನಂದಗೊಂಡ. ಕೋಲೇಬಸವನಂತೆ ಅವನು ಹೇಳಿದ್ದನ್ನು ತುಟಿಪಿಟಕೆನ್ನದೇ ಕೇಳಿದ್ದಳು.

ಒಂದೆರಡು ಸಲ, ಅವಳ ಮೌನ, ಅವಳ ಸಹಕಾರ ಅವನಿಗೆ ಹೆದರಿಕೆಯನ್ನುಂಟು ಮಾಡಿತ್ತು, ಅಲ್ಲಿಂದ ಹೊರಡುವ ಮೊದಲು ಅವಳ ಕೈ ಹಿಡಿದು ಕೇಳಿಕೊಂಡಿದ್ದ.

"ನನ್ನನ್ನು ಕ್ಷಮಿಸು ಸುಗುಣ....ನಾನೆಂತಹ ವಂಚಕ ಅಂತ ನೀನು ಅಂದುಕೊಂಡಿರಬಹುದು...ಆದರೆ ನಾನೆಂದೂ ಇಷ್ಟು ಹ್ಯಾಪಿಯಾಗಿರಲಿಲ್ಲ, ನಿನ್ನ ಸಹಕಾರಕ್ಕೆ ಥ್ಯಾಂಕ್ಸ್....ನಿನಗೇನು ಬೇಕೋ ಕೇಳು. ಖಂಡಿತಾ ಕೊಡ್ತೀನಿ."

"ನನಗೇನೂ ಬೇಡ, ನನಗೆ ಇದುವರೆಗೂ ಕೊಟ್ಟ ಶ್ರೀಮಂತಿಕೆಯ ಋಣವನ್ನು ತೀರಿಸಿದ್ದೇನೆ, ಇನ್ನು ಮುಂದೆ ದಯವಿಟ್ಟು ನನ್ನ ತಂಟೆಗೆ ಬರಬೇಡಿ"

ಅವನು ನಕ್ಕು ಅವಳ ಕೆನ್ನೆ ಸವರಿದ.

"ಒಂದು ಸಲ ಪ್ರಾರಂಭವಾದ ಈ ಸಂಬಂಧ, ಅಷ್ಟು ಸುಲಭವಾಗಿ ಬಿಟ್ಟು ಹೋಗಲ್ಲ, ಸುಗುಣ.... ಪೆದ್ದು ಪೆದ್ದಾಗಿ ಕೆಲಸಕ್ಕೆ ಬರುವುದನ್ನು ನಿಲ್ಲಿಸಬೇಡ"

"ಪರವಾಗಿಲ್ಲ, ಚೆನ್ನಾಗಿ ಬ್ಲಾಕ್ ಮೇಲೆ ಮಾಡ್ತೀರಿ"

"ಇದು ಬ್ಲಾಕ್ ಮೇಲಲ್ಲ... ಅನುಸಂಧಾನ. ಇನ್ನು ಮುಂದೆ ನನಗೆ ನೀನು ಬೇಕು.... ನಿನಗೆ ನಾನು ಬೇಕು.... ಅದೇ ಸರಿ"

ಸುಗುಣ ಕೆಟ್ಟ ಮುಖ ಹಾಕಿ ಹೊರಟುಹೋಗಿದ್ದಳು.

ಖುಷಿ ಖುಷಿಯಾಗಿ ಊರಿಗೆ ಬಂದ ಗೋಪಾಲನನ್ನು ಕಂಡು, ವೇದ ಲಲಿತ ಮುಖಮುಖ ನೋಡಿಕೊಂಡಿದ್ದರು. ಆಗ ತಾನು ಅವರುಗಳಿಗೆಂದು ಡೆಲ್ಲಿಯಿಂದ ಏನನ್ನು ತಂದಿರಲಿಲ್ಲವೆನ್ನುವುದು ನೆನಪಾಗಿತ್ತು.

"ಮೀಟಿಂಗ್ ಗ್ಲಲಾಟೆಯಲ್ಲಿ ಬಿಡುವೇ ಆಗಲಿಲ್ಲ.... ಷಾಪಿಂಗ್‌ಗೆ ಹೋಗುಕ್ಕಾಗಲಿಲ್ಲ" ಸುಳ್ಳು ಹೇಳಿದ್ದ.

"ಪರವಾಗಿಲ್ಲ.... ನಮಗೆ ಅಂತಹ ಅಪೇಕ್ಷೆ ಏನೂ ಇಲ್ಲ"

ಆ ರಾತ್ರಿ ವೇದಮ್ಮ ಕುಡಿಯಲು ನೀರನ್ನು ಇಡಲು ಬಂದಿದ್ದವಳಿಗೆ ಅವನು ಏನೂ ಮಾತನಾಡಿಸದೇ ಇದ್ದಾಗ ಮುಖಭಂಗವಾದಂತಾಗಿತ್ತು ಇದುವರೆಗೂ, ಅವನೆಂದೂ ಹಾಗೆ ಮಾಡಿರಲಿಲ್ಲ.

ನಾನು ಹೋಗಲೇ ಅಂತ ಕೇಳಿದಾಗ 'ಹೂಂ' ಎಂದಿದ್ದ. ನನ್ನ ಅಗತ್ಯ ಇನ್ನು ಇವನಿಗಿಲ್ಲ ಎನ್ನುವುದನ್ನು ಅರಿತಳು. ಬಹುಶಃ ನಾನು ಬೇಸರವಾಗಿರಬಹುದು ಅಥವಾ ಅವನಿಗೇ ವಯಸ್ಸಾಗಿರಬಹುದು ಎಂದಿಕೊಂಡಳು.

ಮಾರನೇ ದಿನ ಶಿಸ್ತಾಗಿ ಅವನು ಆಫೀಸಿಗೆ ಹೊರಟಿದ್ದ. ಆದರೆ ಅಲ್ಲಿ ಅವನಿಗೆ ನಿರಾಸೆ ಕಾದಿತ್ತು. ಸುಗುಣ ರಜ ಹಾಕಿದ್ದಳು.

ಬಹುಶಃ ಆಯಾಸವಾಗಿರಬಹುದು ಅಥವಾ ಬೇಜಾರಿರಬಹುದು ಎಂದುಕೊಂಡ. ನಾಲ್ಕೈದು ದಿನಗಳು ಅವನು ಅವಳಿಗಾಗಿ ಚಡಪಡಿಸಿದ. ನನ್ನ ಮೇಲಿನ ಕೋಪದಿಂದ ಕೆಲಸವನ್ನು ಬಿಟ್ಟುಬಿಟ್ಟಳೇ ಅಂತ ಅಂದುಕೊಂಡಾಗ, ಮೂರ್ಖ ಹುಡುಗಿ ಎಂದು ಬೈದುಕೊಂಡ.

ಒಂದು ವಾರದ ನಂತರ ಅವಳು ಬಂದಾಗ, ಅವಳು ಬಹಳ ಬದಲಾಯಿಸಿದ್ದಾಳೆಂದೆನಿಸಿತು. ಆದರೆ ಅವಳು ಏನೂ ನಡೆದಿಲ್ಲವೆಂಬಂತೆ, ನಗು ನಗುತ್ತಾ ಮಾತನಾಡಿಸಿದ್ದಾಗ ಸಮಾಧಾನಗೊಂಡ. ಅವಳ ಮನದಾಳದಲ್ಲಿ ಏನಿದೆ ಎಂದು ತಿಳಿಯುವುದು ಅಗತ್ಯ ಎಂದೆನಿಸಿತ್ತು ಸಮಯ ಸಾಧಿಸಿ ಕೇಳಿದ್ದ.

"ನನ್ನ ಮೇಲೆ ಕೋಪಾನ ಸುಗುಣ?"

"ಕೋಪ ಮಾಡಿಕೊಳ್ಳುವ ಸ್ವಾತಂತ್ರ್ಯ ಸಹ ನನಗಿಲ್ಲವಲ್ಲ..." ವಿಷಾದದಿಂದ ನಕ್ಕಾಗ ಅವನಿಗೆ ಧೈರ್ಯ ಬಂದಿತ್ತು. ಅವಳೊಡನೆ ಸರಸವಾಗಿ ಮಾತನಾಡುವ ಆಸೆಯಾದರೂ ತಡೆದುಕೊಂಡ.... ಅದು ಆಫೀಸು...

"ಸಾಯಂಕಾಲ ಎಲ್ಲಾದರೂ ಹೊರಗೆ ತಿರುಗಾಡಿ ಬರೋಣ ಬರ್ತೀಯಾ?" ಆಸೆಯಿಂದ ಕೇಳಿದಾಗ ಅವಳು ನಿರಾಕರಿಸಿದ್ದಳು.

"ಹೂಂ.... ಹೂಂ... ಖಂಡಿತಾ ಇಲ್ಲ"

ಪರಿಚಯದವರು ಕಂಡಾರು ಎಂಬ ಹೆದರಿಕೆ ಇವಳಿಗೆ ಎಂದುಕೊಂಡು, ಊರಿನಿಂದ ಹೊರಗೆ ಎಲ್ಲಾದರೂ ಕರೆದೊಯ್ಯಬೇಕೆಂಬ ಆಲೋಚನೆ ಮಾಡಿದ. ಆದರೆ ತಕ್ಷಣಕ್ಕೆ ಹೋಗುವಂತಿಲ್ಲ.

ಅನಂತರ ಎರಡು ತಿಂಗಳು ಕಳೆದ ನಂತರ ಅವಳನ್ನು ಕಾಶ್ಮೀರಕ್ಕೆ ಕರೆದುಕೊಂಡು ಹೋಗಿದ್ದ ಸ್ವರ್ಗ ಸುಂದರ ಎಂಬ ಪ್ರಸಿದ್ಧಿ ಪಡೆದ ಪ್ರಕೃತಿ ಸೌಂದರ್ಯವನ್ನು ಸವಿಯುವ ಉತ್ಸಾಹ ಸುಗುಣಳಲ್ಲಿರಲಿಲ್ಲ. ಅವಳು ಅನ್ಯಮನಸ್ಕಳಾಗಿರುವುದನ್ನು ಕಂಡು, ಅವಳನ್ನು ಹರ್ಷಗೊಳಿಸಲು ಎಷ್ಟೆಷ್ಟೋ ಪ್ರಯತ್ನಿಸಿದ. ಅವಳು ಯಾವುದೋ ಆಳವಾದ ಆಲೋಚನೆಯಲ್ಲಿರುವಂತೆ ಕಂಡಿತ್ತು. ಕಡೆಗೂ ಬಾಯಿ ಬಿಟ್ಟಿದ್ದಳು.

"ಇನ್ನು ಮುಂದೆ ನಾನು ನಮ್ಮ ಮನೆಯಲ್ಲಿರುವುದು ಕಷ್ಟವಾಗುತ್ತೆ. ನೀವೇ ಅದಕ್ಕೂ ಉಪಾಯ ಹೇಳಬೇಕು"

"ಅಂಥದ್ದೇನಾಯ್ತು ಈಗ? ಯಾರಿಗಾದರೂ ಅನುಮಾನ ಬಂತಾ?"

"ಇದುವರೆಗೂ ಬಂದಿಲ್ಲ, ಇನ್ನೆರಡು ತಿಂಗಳು ಕಳೆದರೆ ಖಂಡಿತ ಅನುಮಾನ ಬರುತ್ತೆ ಆಗ ಏನು ಮಾಡಲಿ?"

"ನಿನಗೇ ಪ್ರತ್ಯೇಕವಾಗಿ ಒಂದು ಮನೆ ಗೊತ್ತು ಮಾಡ್ತೀನಿ, ಅಲ್ಲಿ ಯಾರ ತಂಟೆಯೂ ಇರುವುದಿಲ್ಲ"

"ಹಾಗಾದರೆ ಆದಷ್ಟು ಬೇಗ ನನ್ನನ್ನು ಮದುವೆಯಾಗಿ... ಮದುವೆ ಯಾಗದೇ ನಾನು ತಾಯಿಯಾದರೆ ಜನ ಆಡಿಕೊಳ್ಳುವುದಿಲ್ಲವೆ?"

"ನಾನು ನಿನ್ನನ್ನು ಮದುವೆಯಾಗಲು ಸಾಧ್ಯವಿಲ್ಲ ಸುಗುಣ.... ಆದರೆ... ಏನೆಂದೆ? ತಾಯಿಯಾದರೆ ಎಂದೆಯಲ್ಲ.... ಯಾಕೆ?"

"ಯಾಕಂದ್ರೆ ಆ ಲಕ್ಷಣಗಳು ಈಗಾಗಲೇ ಕಂಡಿವೆ..."

"ಏನಂದೆ? ನಿಜಾನಾ?" ಅವನು ಖುಷಿಯಿಂದ ಅವಳ ಭುಜಗಳನ್ನು ಹಿಡಿದು ಅಲುಗಾಡಿಸಿದಾಗ ಅವಳು ಚಕಿತಳಾದಳು.

"ಇದರಲ್ಲಿ ಖುಷಿ ಪಡುವಂಥಾದ್ದೇನಿದೆ? ನನ್ನ ಜೀವ ಹೋಗ್ತಿದೆ. ಈಗ ನೀವು ನನ್ನನ್ನು ಮದುವೆಯಾಗದಿದ್ದರೆ ನಾನು ಬಾವಿಗೆ ಬೀಳಬೇಕು"

"ಅಂತಹ ಕೆಲಸ ಮಾತ್ರ ಮಾಡೀಯಾ? ಎಂತಹ ಒಳ್ಳೆಯ ಸುದ್ದಿಯನ್ನು ತಿಳಿಸಿದೀಯ ನಿನಗಿವತ್ತು ಪಾರ್ಟಿ ಕೊಡಿಸಲೇಬೇಕು"

"ನಿಮಗೆ ನಿಜವಾಗಿಯೂ ಖುಷಿಯಾಯ್ತಾ? ಎಷ್ಟು ಖರ್ಚಾದರೂ ಪರವಾಗಿಲ್ಲ ಅದನ್ನು ಮೊದಲು ತೆಗೆಸು ಅಂತ ಅಂತೀರಾ ಅಂತ ಅಂದ್ಕೊಂಡಿದ್ದೆ"

'ಛಿ ಹುಚ್ಚಿ ಇಂತಹ ಪಾಪದ ಕೆಲಸವನ್ನು ನಾನು ಕನಸಿನಲ್ಲಿಯೂ

ಸಹ ಯೋಚಿಸಲಾರೆ..."

"ಹಾಗಾದರೆ ನಿಮಗೇನೂ ಭಯವಾಗ್ತಾ ಇಲ್ವಾ?"

"ಭಯ ಯಾಕೆ? ನನಗೆ ಹೆಮ್ಮೆ ಆಗ್ತಿದೆ.... ನಾನು ನಾನು ತಂದೆ ಆಗ್ತಾ ಇದೀನಿ... ಇದು ಖಂಡಿತಾ ನನ್ನ ಮಗುವೇ ತಾನೇ...?" ಓರೆನೋಟ ಬೀರಿದ್ದ.

"ಛೆ... ಎಷ್ಟು ಹೊಲಸು ಬುದ್ಧಿ.... ನಿಮ್ಮದು?"

"ಸಾರಿ...ತಮಾಷೆ ಮಾಡಿದೆ...." ಅವಳ ಗಲ್ಲ ಹಿಡಿದೆತ್ತಿದ.

"ತಮಾಷೆಗೆ ಇದು ಸಮಯವಲ್ಲ, ಸೀರಿಯಸ್ಸಾಗಿ ಯೋಚನೆ ಮಾಡಬೇಕಾದ ವಿಷಯ..."

"ಓ... ಕೆ.... ಮಗು, ಗಂಡೋ ಹೆಣ್ಣೋ...?"

"ನನಗೇನು ಗೊತ್ತು!?"

"ಇನ್ನುಮೇಲೆ ನಗನಗ್ತಾ ಇರಬೇಕು. ನನ್ನ ಮಗು ಆರೋಗ್ಯವಾಗಿರ ಬೇಕು. ಇಲ್ಲದಿದ್ದರೆ ನಾನು ಸುಮ್ಮನಿರುವುದಿಲ್ಲ" ಒರಟನಂತೆ ನುಡಿದ.

"ನಿಮಗೆ ಮಕ್ಕಳು ಅಂದರೆ ಇಷ್ಟು ಇಷ್ಟ ಅಂತ ನನಗೆ ಗೊತ್ತಿರಲಿಲ್ಲ. ನನಗೆ ಯಾರೋ ಹೇಳಿದರು.... ನಿಮಗೆ ವಯಸ್ಸಿಗೆ ಬಂದಿರುವ ಒಬ್ಬ ಮಗನಿದಾನೆ ಅಂತ..."

"ಅವನ ವಿಷಯ ಈಗ ಬೇಡ...."

"ಯಾಕೆ ಬೇಡ? ಈಗ ಹುಟ್ಟುವ ಮಗುವಿಗೆ ಸಮಾನ ಅಧಿಕಾರಿಯಾಗಿ ದಾನಲ್ಲ.... ಅದು ಸರಿತಾನೇ?"

"ಸುಗುಣ ನೀನು ತುಂಬಾ ಜಾಣೆ. ಕೂಸು ಹುಟ್ಟುವ ಮುಂಚೆ ಕುಲಾವಿ (ಹೆಣೆಯಬೇಡ) ಇಷ್ಟು ವರ್ಷಗಳ ನಂತರ ನಾನು ತಂದೆ ಆಗ್ತಿದೀನಿ. ಆ ಖುಷಿ ಮಾತ್ರ ನನಗಿರಲಿ... ನಿನಗಾಗಲೀ, ನಿನ್ನ ಮಗುವಿಗಾಗಲೀ ಯಾವ ತೊಂದರೆ ಆಗದಂತೆ ನೋಡಿಕೊಳ್ಳುವುದು ನನ್ನ ಕರ್ತವ್ಯ"

"ಹಾಗಾದರೆ ಊರಿಗೆ ಯಾವಾಗ ವಾಪಸ್ಸು ಹೋಗೋಣ?"

"ಈಗಾಗಲೇ ಊರಿನ ಚಿಂತೇನಾ! ಹನಿಮೂನ್ ಪ್ರೇಮಿಗಳು ಬರುವ ಜಾಗ ಇದು. ಹಾಯಾಗಿ ಕಾಲ ಕಳೆದು ಹೋಗೋಣ"

"ಮದುವೆಗೆ ಮುಂಚೆಯೆ ಈ ಹನಿಮೂನ್ ನನಗೆ ಹೆದರಿಕೆಯನ್ನುಂಟು ಮಾಡುತ್ತೆ"

"ಆದರೆ ಈ ಮಜ ಆಮೇಲೆ ಖಂಡಿತಾ ಇರೊಲ್ಲ" ಎನ್ನುತ್ತಾ ಅವಳನ್ನು ಬರಸೆಳೆದು ಅಪ್ಪಿ ಮುದ್ದಾಡಿದ. ಸುಗುಣ ಅವನ ಅತಿರೇಕಕ್ಕೆ ಅಚ್ಚರಿ ಗೊಂಡಳು. ಅವನಿಗೆ ನನ್ನ ಸಹವಾಸ ಮಜಾ ಮಾಡಲು ಬೇಕಾಗಿತ್ತೊ

ಅಥವಾ ತಂದೆಯ ಪಟ್ಟ ಸಿಗಲು ಬೇಕಾಗಿತ್ತೊ ತಿಳಿಯಲಿಲ್ಲ.

ಅವನ ಹೆಂಡತಿ ಲಲಿತ, ಸುಂದರಿ, ಸುಶೀಲೆ ಪತಿವ್ರತೆ ಎಂದು ಯಾರೋ ಹೇಳಿದ್ದನ್ನು ಕೇಳಿಸಿಕೊಂಡಿದ್ದಳು. ಅವಳಿಗೊಬ್ಬ ಮಗನಿರುವ ವಿಷಯವೂ ತಿಳಿದಿತ್ತು. ಇಷ್ಟಾದರೂ ಅವನು ಅವಳ ಸಂಗ ಮಾಡಿದಾಗ ಏನೋ ಚಟ ಎಂದು ಭಾವಿಸಿದ್ದಳು. ಹಾಗಾದರೆ ತಾನೀಗ ಏನು ಮಾಡಬೇಕು, ತನ್ನ ಅಧಿಕಾರವನ್ನು ಹೇಗೆ ಪಡೆಯಬೇಕು ಎಂದು ಗೊತ್ತಾಗಲಿಲ್ಲ.

ಇವನು ತನ್ನ ಕೈ ಬಿಟ್ಟರೇನು ಗತಿ! ಆತ್ಮಹತ್ಯೆ ಮಾಡಿಕೊಳ್ತೀನಿ ಎನ್ನುವ ಜಾಯಮಾನದವಳಲ್ಲ ಇವಳು. ಆದದ್ದಾಯಿತು, ಇವನು ಒಪ್ಪಿದರೆ, ಗರ್ಭಪಾತಕ್ಕೂ ಸಿದ್ಧಳಾಗಿರುತ್ತಿದ್ದಳು ಹೇಗೂ ಖರ್ಚು ಅವನದ್ದೆ. ಆದರೆ ಅವನು ಆಡಿದ ಮಾತುಗಳೇ ಬೇರೆ. ಇಂತಹ ಶ್ರೀಮಂತನ ಎರಡನೇ ಹೆಂಡತಿಯಾಗಿ ಮೆರೆಯುವ ಭಾಗ್ಯ ನನ್ನ ಹಣೆಯಲ್ಲಿ ಬರೆದಿತ್ತೋ ಏನೋ ಎಂದು ತನಗೆ ತಾನೇ ಸಮಾಧಾನ ಹೇಳಿಕೊಂಡಳು.

ಆದರೆ ಗೋಪಾಲ ಯೋಚಿಸುತ್ತಿದ್ದುದೇ ಬೇರೆ. ತಾನೀಗಾಗಲೇ ಎರಡು ಮದುವೆಯಾಗಿದ್ದೇನೆ. ಮೂರನೆಯ ಮದುವೆಯನ್ನು ಅದು ಆ ಇಬ್ಬರೂ ಬದುಕಿರುವಾಗ ಹೇಗೆ ಸಾಧ್ಯ! ಹಾಗಂತ ತಾನೀಗ ಅವರಿಬ್ಬರ ಕೊಲೆ ಮಾಡಲಾರ. ಲಲಿತ ಎಲ್ಲಾ ರೀತಿಯಿಂದಲೂ ಸರಿಯಾಗಿದ್ದಿದ್ದರೆ, ವೇದಳನ್ನು ಮದುವೆಯಾಗುವ ಅಗತ್ಯವೇ ಬರುತ್ತಿರಲಿಲ್ಲ ಅಥವಾ ಅವಳಿಂದ ತನಗೆ ಒಂದು ತನ್ನದೇ ಆದ ಮಗುವಾಗಿದ್ದಿದ್ದರೆ ಬಹುಶಃ ತಾನು ಸುಗುಣಳೊಡನೆ ಈ ಸಂಬಂಧವನ್ನು ಖಂಡಿತಾ ಬೆಳೆಸುತ್ತಿರಲಿಲ್ಲ ಎಂದು ತನಗೇ ಹೇಳಿಕೊಂಡ. ಈ ಅನಂತನೊಬ್ಬ ತನ್ನ ಮನೆಗೆ ಬಂದು ಸೇರಿರದೆ ಇದ್ದಿದ್ದರೆ ಯಾವ ಯೋಚನೆಯೂ ಇರಲಿಲ್ಲ. ಈಗ ಜನ ಆಡಿಕೊಂಡು ನಗುವುದಿಲ್ಲವೇ, ಮದುವೆಯ ವಯಸ್ಸಿನ ಮಗನಿದ್ದಾನೆ, ಈಗೇಕೆ ಇವನಿಗೆ ಮೂರನೇ ಮದುವೆ ಅಂತ.... ಆಗ ಜನರ ಕಣ್ಣಿನಲ್ಲಿ ತಾನೊಬ್ಬ ಲಂಪಟ ಎಂದೆನಿಸಿಕೊಳ್ಳುತ್ತೇನೆ..... ಜನ ನನ್ನನ್ನು ತುಚ್ಛವಾಗಿ ಕಾಣುತ್ತಾರೆ. ಲಲಿತ ಏನೆಂದುಕೊಳ್ಳಬಹುದು! ಪಾಪ.... ಆ ಲಲಿತ ನನ್ನ ಖುಷಿಗಾಗಿ ನನಗೆ ಇನ್ನೊಂದು ಮದುವೆ ಮಾಡಿಸಿದಳು. ಈಗ ಮತ್ತೆ ಮದುವೆಯಾದರೆ ಖಂಡಿತಾ ಯಾರಿಗೂ ಖುಷಿಯಾಗುವುದಿಲ್ಲ. ನನ್ನ ಸ್ಥಾನಮಾನಗಳು ಕಡಿಮೆಯಾಗುತ್ತದೆ. ನಾನು ಸಾಕಿ ಬೆಳೆಸಿದ ಆ ಅನಾಥ ಮುಂಡೇದು ಸಹ ಆಡಿಕೊಳ್ಳುವಂತಾಗುತ್ತದೆ. ಹಾಗಾಗಬಾರದು... ಆದರೆ ಈಗ ಹುಟ್ಟಲಿರುವ ಮಗು ಅನಾಥನಾಗಬಾರದು. ಅತ್ಯಾಚಾರಕ್ಕೆ ಒಳಗಾಗಿ ಹುಟ್ಟಿದ ಮಗು ಎಂದು ಯಾರೂ ಆಡಿಕೊಳ್ಳುವಂತಾಗಬಾರದು. ಅದು ನನ್ನ ಮನೆಯಲ್ಲಿ

ಹುಟ್ಟಬೇಕು, ಬೆಳೆಯಬೇಕು.... ಸಮಾಜದಲ್ಲಿ ಸ್ಥಾನಮಾನ ಸಿಗುವಂತಿರಬೇಕು.... ಅದು ಹೇಗೆ...ಸುಗುಣ ಯಾರಿಗೂ ತಿಳಿಯದಂತೆ ನಮ್ಮ ಮನೆಯಲ್ಲಿರಲು ಸಾಧ್ಯವಿಲ್ಲ. ಲಲಿತ, ವೇದ ಅವಳಿಗೆ ಬಾಣಂತನ ಮಾಡುವುದು ಖಂಡಿತಾ ಸುಳ್ಳು.... ಯಾರಿಗೂ ತಿಳಿಯದಂತೆ ಅವಳು ಯಾವುದೇ ಬೇರೆ ಊರಿನಲ್ಲಿದ್ದರೂ, ಎಲ್ಲರಿಗೂ ತಿಳಿದೇ ತಿಳಿಯುತ್ತೆ. ಆಗ ತನಗೆ ಅವಮಾನವಾಗುವುದು ಖಂಡಿತಾ... ಹಾಗಾಗಬಾರದು... ಹಾಗಾಗಬಾರದು. ಎಷ್ಟು ಯೋಚಿಸಿದರೂ ಅವನಿಗೆ ಉಪಾಯ ಹೊಳೆದಿರಲಿಲ್ಲ.

ಹತ್ತು ದಿನಗಳ ನಂತರ ಅವರಿಬ್ಬರೂ ಊರಿಗೆ ವಾಪಸ್ಸು ಬಂದರು. ಬಾಗಿಲು ತೆಗೆದವನು ಅನಂತನೇ. ಅವನನ್ನು ಕಂಡು ಹುಬ್ಬುಗಳು ಕೂಡಿದವು. ಈಗೇಕೆ ಬಂದಿದಾನೋ...? ನಾನು ನಿನ್ನ ಮಗ ಎಂದು ನೆನಪಿಸುವಂತೆ, ಇವನೇ ಎದುರಾಗಬೇಕೇ? ಗಡ್ಡ ಮೀಸೆ ಬೆಳೆದಿರುವ ಇವನೆದುರಿಗೆ, ಸುಗುಣಳನ್ನು ಇಲ್ಲಿ ಕರೆತಂದು ಇಟ್ಟುಕೊಳ್ಳಲು ಸಾಧ್ಯವೇ...?

ಇದ್ದಕ್ಕಿದ್ದಂತೆ ಅವನ ತಲೆಯಲ್ಲಿ ಒಂದು ವಿಚಾರ ಹೊಳದೇಬಿಟ್ಟಿತು. ಇದೇ ಸರಿಯಾದ ಉಪಾಯ... ತಕ್ಷಣಕ್ಕೆ ಇದೇ ಸರಿಯಾದ ಉಪಾಯ ಎಂದು ತನಗೆ ತಾನೇ ಹೇಳಿಕೊಂಡು, ಎಲ್ಲರೊಡನೆ ನಗುನಗುತ್ತಾ ಮಾತನಾಡಿದ ಆಶ್ಚರ್ಯದ ವಿಷಯವೆಂದರೆ ಅನಂತನ್ನ ಅವನ ವಿದ್ಯಾಭ್ಯಾಸದ ಬಗ್ಗೆ ವಿಚಾರಿಸಿದ್ದು ಅದು ಪ್ರಪಂಚದ ಅದ್ಭುತದಲ್ಲಿ ಒಂದು ವಿಷಯ ಎಂಬಂತೆ ಎಲ್ಲರೂ ಬೆರಗಾಗಿ ಅವನನ್ನೇ ನೋಡಿದರು.

ಅನಂತನ ಗ್ರಹಚಾರಕ್ಕೆ ಅವನು ಪರೀಕ್ಷೆಯಲ್ಲಿ ಫೇಲಾಗಿದ್ದ. ಫಲಿತಾಂಶ ಕೇಳಿದರೆ ತನ್ನನ್ನು ಖಂಡಿತಾ ಬೈಯುತ್ತಾರೆಂದು ತಿಳಿದಿದ್ದರೂ, ಹೇಳಿದ್ದ "ಬೈದರೆ, ಬಯ್ಯಲಿ.... ಇನ್ನು ಮತ್ತೆ ತಾನು ಪರೀಕ್ಷೆಗೆ ಕಟ್ಟುವುದಿಲ್ಲ ಎಂದು ತಿಳಿಸಿದರಾಯ್ತು" ಎಂದುಕೊಂಡಿದ್ದ. ಆದರೆ ಹಾಗಾಗಲೇ ಇಲ್ಲ, ಗೋಪಾಲ ಬಯ್ಯಲಿಲ್ಲ, "ಹೋಗಲಿ ಬಿಡು.... ಸಪ್ಲಿಮೆಂಟರಿ ಪರೀಕ್ಷೆಗೆ ಹೋಗುವಂತೆ.... ಅದ್ಯಾವಾಗ ಪರೀಕ್ಷೆ" ಎಂದು ವಿಚಾರಿಸಿದ್ದ.

ಲಲಿತಳ ಹೃದಯ ಹಗುರಾಗಿತ್ತು. ಅಬ್ಬಾ ಇಷ್ಟು ದಿನಗಳ ನಂತರ, ನನ್ನ ಮಗ, ತಂದೆಯ ಕಣ್ಣಿಗೆ ಮಗನಾಗಿ ಕಂಡ ಎಂದು ಸಂತಸಗೊಂಡಳು.

"ಅಂತೂ ಇಷ್ಟು ವರ್ಷಗಳ ನಂತರವಾದರೂ, ಅಪ್ಪ ಮಗ ಅನ್ಯೋನ್ಯ ವಾದರಲ್ಲ, ನನಗೆ ಅಷ್ಟೇ ಸಾಕು" ಎಂದಿದ್ದಳು ವೇದಳೊಡನೆ.

ಅನಂತ ಎದ್ದುಹೋದ ಕೂಡಲೇ ವಿಚಾರಿಸಿದ್ದ.

"ಅವನಿಗೀಗ ಇಪ್ಪತ್ತೈದು ವರ್ಷವಲ್ಲವೆ? ಅವನಿಗೂ ಮದುವೆ ಮಾಡಿಬಿಡೋಣ ಏನಂತೀಯಾ?"

ಈ ದಿನದ ಆಶ್ಚರ್ಯಕರ ಮಾತಿನಿಂದ ತನ್ನ ಎದೆ ಒಡೆದು ಹೋಗುತ್ತದೆ ಎನ್ನುವಂತೆ ಲಲಿತ ತನ್ನ ಎದೆಯ ಮೇಲೆ ಕೈಯನ್ನಿಟ್ಟುಕೊಂಡು "ಅಬ್ಬಾ" ಎಂದಳು.

"ಯಾಕೆ ಲಲಿತಾ... ನಿನಗೆ ಈಗಲೇ ಸೊಸೆ ಬೇಡವೆ?"

"ಅವನಿಗಿನ್ನೂ ಇಪ್ಪತ್ಮೂರು ವರ್ಷ ತುಂಬಿದೆ. ಅಲ್ಲದೇ ಮೊದಲು ಅವನ ವಿದ್ಯಾಭ್ಯಾಸ ಮುಗಿದು ಕೆಲಸಕ್ಕೆ ಸೇರಿಕೊಳ್ಳಲಿ ಮದುವೆಗೆ ಏನು ಅವಸರ!

"ನನಗೂ ಮದುವೆಯಾದಾಗ ಇಪ್ಪತ್ತೆರಡು ಆಗಿತ್ತು ಅಷ್ಟೇ. ಆದಷ್ಟು ಬೇಗ ಮದುವೆ ಆದರೆ ಬೇಗ ಮೊಮ್ಮಕ್ಕಳಾಗುತ್ತವೆ. ನಿನಗೆ ಅಜ್ಜಿಯಾಗುವ ಆಸೆ ಇಲ್ಲವೆ?"

"ಇವತ್ತು ಏನಾಗಿದೆ ನಿಮಗೆ? ಏನೇನೂ ಆಡ್ತಿದೀರಲ್ಲ"

"ನಮ್ಮ ಆಫೀಸಿಗೆ ಹೊಸದಾಗಿ ಕೆಲಸಕ್ಕೆ ಸೇರಿಕೊಂಡ ಹುಡುಗಿ ಒಬ್ಬಳಿದಾಳೆ, ಎಷ್ಟು ಚೆನ್ನಾಗಿದಾಳೆ ಗೊತ್ತಾ. ನಿನ್ನ ಸೊಸೆಯಾಗಲು ಲಾಯಖ್ಖಾದ ಹುಡುಗಿ, ಪಾಪ ಬಡವರ ಮನೆಯವಳು, ಮನೆ ತುಂಬಾ ಜನ ತುಂಬಾ ಒದ್ದಾಡ್ತಾಳೆ.... ಅವಳಿಗೆ ಸಹಾಯ ಮಾಡೋಣ ಅಂತನ್ನಿಸ್ತು. ಬಡವರ ಮನೆ ಹುಡುಗಿ ಬೇಡ ಅಂತಿದ್ರೆ ಹೇಳಿಬಿಡು..."

"ಹಾಗೇನಿಲ್ಲ... ನಮಗೇ ಬೇಕಾದಷ್ಟು ಇರುವಾಗ ನನಗೆ ಯಾವ ಆಸೆಯೂ ಇಲ್ಲ. ಆದರೆ ಅನಂತನ್ನ ಒಂದ್ಮಾತು ಕೇಳ ಬೇಡವೇ?"

" ಕೇಳಯ... ಕೇಳು... ಆದರೆ ಅವನು ಒಪ್ಪುವಂತೆ ಮಾತನಾಡಬೇಕು. ನೀನು...." ನಗುನಗುತ್ತಾ ಹೇಳಿದಾಗ ಅವಳು ಬೆರಗು.

"ಬಲವಂತ ಮಾಡುವುದು ಬೇಡ, ಅವನಿಷ್ಟ ತಿಳಿದುಕೊಳ್ಳೋಣ"

"ನಾನು ಅವಳನ್ನು ಮನೆಗೆ ಕರೆದುಕೊಂಡು ಬರ್ತೀನಿ ಯಾರೂ ಬೇಡ ಅನ್ನವಂತಿಲ್ಲ ಅವಳು ಹಾಗಿದಾಳೆ, ಅವಳನ್ನು ಬೇಕಾದರೆ ಮೊದಲು ನೀವಿಬ್ಬರೂ ನೋಡಿ, ಆಮೇಲೆ ಅವನನ್ನು ಒಪ್ಪಿಸಲು ಸುಲಭವಾಗುತ್ತೆ"

"ಈ ಅವಾಂತರ ಯಾಕೆ?"

"ಅವಳ ತಂದೆಗೆ ಏನೋ ಕಾಯಿಲೆ, ತಾನು ಬದುಕಿರುವಾಗಲೇ ಮಗಳ ಮದುವೆ ಮಾಡುವ ಆಸೆ, ಇಲ್ಲದಿದ್ದರೆ ಹಾಳಾಗಿ ಹೋಗ್ತಾಳೆ ಅನ್ನುವ ಸಂದೇಹ"

"ನೀವು ಅವಳಿಗೆ ಉಪಕಾರ ಮಾಡ್ತೀನಿ ಅಂದರೆ ನಾನೇಕೆ ತಡೆಯಲಿ? ಕರೆದುಕೊಂಡು ಬನ್ನಿ"

"ಹಾಗಾದರೆ ನಾಳೇನೇ ಕರೆದುಕೊಂಡು ಬರ್ತೀನಿ" ಉತ್ಸಾಹದಿಂದ

ನುಡಿದಾಗ ಲಲಿತ ವೇದಳ ಕಡೆ ತಿರುಗಿ ಮುಗುಳ್ನಕ್ಕಳು.

"ನಿಮ್ಮಿಬ್ಬರ ಮದುವೇಲಿ ಹೀಗೇ ಉತ್ಸಾಹದಿಂದ ಇದ್ದುದು ಅಂತ ಅನ್ನಿಸುತ್ತೆ ಅಲ್ವಾ?" ವೇದ ಪ್ರಶ್ನಿಸಿದ್ದಳು ಲಲಿತಾ ನಾಚಿದ್ದಳು.

ಅನಂತನ್ನ ಕಂಡರೆ ಆಗದವನಿಗೆ ಅವನ ಮದುವೆಯ ಉತ್ಸಾಹ ಇಷ್ಟು ಎಂದರೆ ನಂಬುಕ್ಕೆ ಆಗಲ್ಲ ಎಂದುಕೊಂಡಿದ್ದರು ಅವರು.

ಮಾರನೇ ದಿವನೇ ಸುಗುಣಳನ್ನು ತನ್ನ ಮನೆಗೆ ಕರೆದುಕೊಂಡು ಬಂದಿದ್ದ. "ಹೌದು ನಿಜಕ್ಕೂ ಚಿನ್ನದ ಪುತ್ತಳಿಯಂತೆಯೇ ಇದಾಳೆ ಎಂದು ಕೊಂಡಿದ್ದರು ಲಲಿತ ಹಾಗೂ ವೇದ. ಒಳಗಿದ್ದ ಅನಂತನನ್ನ ಕರೆದು ಪರಿಚಯ ಮಾಡಿಕೊಡುವಂತೆ ತಿಳಿಸಿ, ತಾನು ಅಲ್ಲಿಂದ ಎದ್ದು ಹೋಗಿದ್ದ ಗೋಪಾಲ.

"ಯಾರೋ ಬಂದರೆ ನಾನೇಕೆ ಬರಬೇಕು? ನನಗಿಷ್ಟವಿಲ್ಲ" ಎಂದು ಅನಂತ ಕೊಸರಾಡಿದ.

"ನಿಮ್ಮ ಅಪ್ಪನ ಕಂಪನಿಯಲ್ಲಿ ಕೆಲಸ ಮಾಡುವ ಹುಡುಗಿ...ಬಂದು ಮಾತನಾಡಿಸಿದರೆ ನಿನ್ನ ಗಂಟೇನು ಹೋಗುತ್ತದೆ! ನಿನಗೆ ದುರಹಂಕಾರ ಅಂತ ಅಂದ್ಕೊಳ್ತಾರೆ ಅಷ್ಟೆ....

"ಹೂಂ ಸರಿ" ಎನ್ನುತ್ತಾ ಅನಂತ ಹೊರಗೆ ಬಂದಿದ್ದ. ಪೈಜಾಮ ಜುಬ್ಬಾ ಧರಿಸಿದ್ದ ಅನಂತನಲ್ಲಿ ಯಾವ ಆಕರ್ಷಣೆಯನ್ನು ಕಂಡಿರಲಿಲ್ಲ ಅವಳು. ವಿದ್ಯಾರ್ಥಿಯಾಗಿರುವ ಅವನೊಡನೆ ಏನು ಮಾತನಾಡಬೇಕೆಂದೂ ಸಹ ತಿಳಿಯಲಿಲ್ಲ. ಪರಿಚಯ ಮಾಡಿಸಿಕೊಟ್ಟಾಗ ಮುಗುಳ್ನಕ್ಕಿದ್ದಳು ಅಷ್ಟೆ.

"ಇವನು ಗೋಪಾಲನ ಮಗನೇ...?" ಅನೇಕ ಬಾರಿ ತನಗೆ ತಾನೇ ಕೇಳಿಕೊಂಡಿದ್ದಳು.

ಕನ್ನಡಕದ ಮೇಲಿನಿಂದ ಅನಂತ ಅನೇಕಸಾರಿ ಅವಳ ಕಡೆ ನೋಡಿ ಹೌದು ಅಮ್ಮ ಹೇಳಿದಂತೆ ಸುಂದರಿಯೇ...ನೋಡಿದರೆ ಶ್ರೀಮಂತರ ಮನೆಯವಳಂತೆ ಕಾಣುತ್ತಾಳೆ, ಇವಳಿಗೇಕೆ ನೌಕರಿ?" ಎಂದುಕೊಂಡಿದ್ದ.

ಗೋಪಾಲ ಮತ್ತೆ ಹೊರಬಂದಾಗ ಅನಂತ ಚಡಪಡಿಸಿದ.

"ಸುಗುಣ ಹೊರಡೋಣ್ವಾ? ನನಗಿನ್ನು ಬೇಕಾದಷ್ಟು ಕೆಲಸವಿದೆ" ಎನ್ನುತ್ತ ಅವಳನ್ನು ಎಬ್ಬಿಸಿಕೊಂಡು ಹೊರನಡೆದ.

ಅನಂತ, ತನ್ನ ಕಣ್ಣಿನ ಮಸೂರದಲ್ಲಿ ಅವಳ ಭಾವಚಿತ್ರವನ್ನು ಸೆರೆಹಿಡಿದಿಟ್ಟುಕೊಂಡ. ಆದರೆ ಅವಳೇಕೆ ತನ್ನ ಮನೆಗೆ ಬಂದಿದ್ದಳು ಎನ್ನುವುದು ನಿಗೂಢ ರಹಸ್ಯ. ಯಾರೂ ಆ ಬಗ್ಗೆ ತಿಳಿಸಿರಲಿಲ್ಲ.

ಯಾರೂ ತಾನಾಗಿಯೇ ಮತ್ತೆ ಸುಗುಣಳ ಬಗ್ಗೆ ವಿಚಾರಿಸದಿದ್ದಾಗ

ಗೋಪಾಲ ಆತಂಕಗೊಂಡಿದ್ದ.

"ವೇದ, ಸುಗುಣಳನ್ನು ನೋಡಿ ಏನನ್ನಿಸಿತು? ಲಲಿತ ಏನೆಂದಳು?"

"ನೀವು ಹೇಳಿದಂತೆ ಸುಗುಣ ಸುಂದರಿ. ಆದರೆ ಅವಳ ಎದುರಿಗೆ ಅನಂತ ಪೀಚು ಅಂತ ಅನ್ನಿಸೋಲ್ವೆ! ಅವಳು ಒಪ್ತಾಳ್ಯೆ?"

"ಅವನ ಹುಟ್ಟೇ ಹಾಗೇ.... ಅವಳನ್ನು ಒಪ್ಪಿಸುವ ಜವಾಬ್ದಾರಿ ನನಗಿರಲಿ"

"ನಿಮ್ಮ ಮಾತಿಗೆ ಇಲ್ಲ ಅನ್ನೊಲ್ವೆ? ಹಾಗಾದ್ರೇ?"

"ಇಲ್ಲ ಅವಳಿರುವ ಪರಿಸ್ಥಿತಿ ಹಾಗಿದೆ. ಅವಳಿಗೀಗ ಬೇಕಾಗಿರುವುದು ಅನುಕೂಲಸ್ಥರ ಮನೆ ಸೇರುವುದು ಅಷ್ಟೆ"

"ಹಾಗಾದರೆ, ಅವಳ ಮನೆಯವರನ್ನೆಲ್ಲಾ ನಾವೇ ಸಾಕಬೇಕೆ?"

"ಅದನ್ನು ಆಮೇಲೆ ಯೋಚಿಸಿದರಾಯ್ತು.. ಅದೆಲ್ಲ ನಿನಗೇಕೆ?"

"ಅನಂತ ಇದಕ್ಕೆಲ್ಲಾ ಒಪ್ತಾನೋ ಇಲ್ಲವೋ...? ಅದಕ್ಕೇ...?"

"ಒಪ್ಪದೇ ಇರುವುದಕ್ಕೆ ಇವನಾರು? ನನ್ನ ಮನೆಯಲ್ಲಿ ನಾನು ಹೇಳಿದ ಹಾಗೆ ಕೇಳಬೇಕು. ಇಲ್ಲದಿದ್ದರೆ ಎಲ್ಲಾದರೂ ಹೋಗಲಿ"

"ಅವನು ನಿಮ್ಮ ಸ್ವಂತ ಮಗನಲ್ಲದ ಮಾತ್ರಕ್ಕೆ ಇಷ್ಟು ಕಟುವಾಗಿ ಮಾತನಾಡಬೇಡಿ... ನಮಗೆ ಅವನನ್ನು ಬಿಟ್ಟು ಬೇರೆ ಯಾರಿದಾರೆ?"

"ಅವನಿಗೂ ಅಷ್ಟೇ... ನಮ್ಮನ್ನು ಬಿಟ್ಟರೆ ಬೇರೆ ಯಾರಿದಾರೆ? ಅನಾಥ ಮುಂಡೇದನ್ನ ತಂದು..." ಹಲ್ಲು ಕಡಿದ.

ಗಂಡನ ಮಾತಿನ ವೈಖರಿಗೆ ಅವಳು ಬೇಸರಿಸಿದಳು. ಈಗ ಅವನನ್ನು ಉದ್ಧಾರ ಮಾಡಲು ಹೊರಟಿದ್ದಾನೋ? ಅಥವಾ ಸರ್ವನಾಶ ಮಾಡಲು ಹೊರಟಿದ್ದಾನೋ ಎಂಬ ಸಂಶಯ ಮೂಡಿತ್ತು.

ಮದುವೆಯ ಪ್ರಸ್ತಾಪ ಬಂದಾಗ ಅನಂತ ವಿರೋಧಿಸಿದ್ದ.

"ನನಗೀಗಲೇ ಖಂಡಿತಾ ಮದುವೆ ಬೇಡ... ನನ್ನ ವಿದ್ಯಾಭ್ಯಾಸವೇ ಮುಗಿದಿಲ್ಲ...."

"ನಿನ್ನ ಅಪ್ಪ ನಿರ್ಧರಿಸಿರುವಾಗ ಸುಮ್ಮನೇ ಹೂಂ ಅನ್ನು... ಹುಡುಗಿ ಚೆನ್ನಾಗಿದಾಳೆ, ಇನ್ನೇನಾಗಬೇಕು? ಪರೀಕ್ಷೆ, ಕೆಲಸ ಎಲ್ಲಾ ಆಮೇಲೆ,

"ಜನ ತಮಾಷೆ ಮಾಡ್ತಾರೆ ಅಷ್ಟೇ."

"ತಮಾಷೆ ಮಾಡುವ ಜನ ನಮಗೆ ಬಂದು ಏನನ್ನು ಮಾಡುವುದಿಲ್ಲ ಅನಂತ. ನಾವು ಮನೆಯವರು ಒಂದಾಗಿರಬೇಕು. ನೀನೀಗ ಒಪ್ಪದಿದ್ದರೆ ನಿನ್ನ ಅಪ್ಪನಿಗೆ ಕೋಪ ಬರುತ್ತೆ. ಆಮೇಲೆ ಮುಂದೆಂದೂ ಅವರು ನಿನ್ನ ಮದುವೆ ಬಗ್ಗೆ ಪ್ರಸ್ತಾಪವನ್ನೇ ಮಾಡಲ್ಲ."

"ಬಿಡು ನನ್ನ ಮದುವೆ ಚಿಂತೆ ಅವರಿಗೇಕೆ?"

"ನಿನ್ನ ಮದುವೆ ಚಿಂತೆ ನನಗೂ ಇದೆ ಅನಂತ. ಈ ಮನೆಯಲ್ಲಿ ಸಂಭ್ರಮ, ಸಮಾರಂಭ ಅಂತ ನನಗೂ ಆಸೆಯಾಗುತ್ತೆ"

"ಏನಮ್ಮ...ನನಗಾಗಲೇ ಮದುವೆ ವಯಸ್ಸಾಯಿತೆ?"

"ಮದುವೆ ವಯಸ್ಸಾಗಾಲಿ ಅಂತ ಕಾದರೆ, ಆಮೇಲೆ ಹುಡುಗಿ ಇವಳಂತಹವಳು ಸಿಗ್ತಾಳೋ ಇಲ್ಲವೋ..."

"ಇವಳೇ ಆಗಬೇಕು ಅಂತ ಯಾಕೆ ಹಠ?"

"ಹಠವೇನಿಲ್ಲ, ನಿನ್ನಿಷ್ಟ, ಏನೋ ಅನಾನುಕೂಲವಾಗಿದೆ ಅಂತ ಅವರಿಗೆ ಸಹಾಯ ಮಾಡುವ ಅವಕಾಶ ಬಂದಿದೆ. ನಿನಗಿಷ್ಟವಿಲ್ಲದಿದ್ದರೆ ಹಾಗೇ ಹೇಳ್ತೀನಿ ಆದರೆ ಆಮೇಲೆ ಪಶ್ಚಾತ್ತಾಪ ಪಡಬೇಡ."

"ಲಲಿತ, ಅವನಿಗೆ ಯೋಚಿಸಕ್ಕೆ ಅವಕಾಶ ಕೊಡಬೇಕು, ದಿಢೀರನೇ ಹೇಗೆ ಒಪ್ಪಿಗೆ ಕೊಡ್ತಾನೆ?" ವೇದ ನುಡಿದಾಗ ಅವನಿಗೆ ಸರಿ ಎನ್ನಿಸಿತ್ತು.

"ಹೌದು, ದೊಡ್ಡಮ್ಮ ನಾನು ಯೋಚಿಸಬೇಕು"

"ಹೂಂ, ಸರಿ ಯೋಚಿಸು" ಎಂದು ಹೇಳಿ ಇಬ್ಬರೂ ಅಲ್ಲಿಂದ ಸರಿದು ಹೋಗಿದ್ದರು. ಅವನೀಗ ಸಂದಿಗ್ಧಕ್ಕೆ ಸಿಕ್ಕಿಬಿದ್ದ.

ತನಗೀಗಲೇ ಮದುವೆಯ ವಯಸ್ಸಂತೂ ಅಲ್ಲ, ಅಂತಹ ಕಾರಣ ಹೇಳುವಂತಿಲ್ಲ, ಹಿಂದಿನ ಕಾಲದಲ್ಲಿ ತನಗಿಂತ ಚಿಕ್ಕವರು ಸಹ ಮದುವೆಯಾಗಿರುತ್ತಿದ್ದರು. ವಿದ್ಯಾಭ್ಯಾಸ ಮುಗಿಸಿ, ಕೆಲಸಕ್ಕೆ ಸೇರಬೇಕೆಂಬ ಗುರಿಯೇನೋ ಇದೆ. ಆದರೆ ಸುಗುಣಳನ್ನು ಕಂಡಾಗಿನಿಂದ ಹೊಸ ಆಸೆ ಉದಿಸಿದೆ. ತನ್ನ ವಯಸ್ಸಿನ ಹುಡುಗರು ತಮ್ಮ ಗರ್ಲ್ ಫ್ರೆಂಡ್ಸ್ ಜತೆ ತಿರುಗಾಡುವುದನ್ನು ಕಂಡಿದ್ದ. ಇವನಿಗೆ ಯಾವ ಗೆಳತಿಯೂ ಇರಲಿಲ್ಲ ಬಹುಶಃ ಅದಕ್ಕೆ ಇವನ ಇರಸರಿಕೆ ಕಾರಣವಾಗಿರಬಹುದು, ಅವನಿಗೇ ಗೊತ್ತು. ಅವನದು ಆಕರ್ಷಕ ರೂಪವಲ್ಲ, ಆಕರ್ಷಕ ಮೈಕಟ್ಟಿಲ್ಲ ಅಥವಾ ಷೋಕಿಯಂತೂ ಇಲ್ಲವೇ ಇಲ್ಲ, ಯಾವ ಹುಡುಗಿ ತಾನಾಗಿಯೇ ಅವನಿಗೆ ಮನ ಸೋಲುತ್ತಾಳೆ? ತನ್ನ ಅಪ್ಪ ಅಮ್ಮ ಇಬ್ಬರೂ ನೋಡಲು ಚೆನ್ನಾಗಿದಾರೆ, ಆದರೆ ತನಗೋ ಅತೀ ಸಾಧಾರಣವಾದ ರೂಪ. ಒಂದು ಸಲ ತಮಾಷೆಯಾಗಿ ತಾಯಿಯನ್ನು ಕೇಳಿದ್ದ. "ನೀನು ಹೇಗೇ ಇದ್ದರೂ ನನ್ನ ಮುದ್ದುಗಾರ ಮಗ" ಎಂದು ಮುದ್ದಿಸಿದ್ದಳು. ತನ್ನಂತಹವನನ್ನು ಈ ಸುಗುಣ ಒಪ್ಪುತ್ತಾಳೆಯೇ.... ಒಪ್ಪಿದರೆ ನಾನು ಅದೃಷ್ಟಶಾಲಿಯೇ...

"ಹೂಂ ಸರಿ ಅಂತ ಒಪ್ಪಿಗೆ ಕೊಟ್ಟುಬಿಡ್ತೀನಿ. ಆದರೆ ತಕ್ಷಣಕ್ಕಂತೂ ಖಂಡಿತಾ ಮದುವೆಯಾಗುವುದಿಲ್ಲ. ಇನ್ನು ಎರಡು ಪರೀಕ್ಷೆಗಳಿವೆ. ಅದು

ಮುಗಿದ ನಂತರವೇ ಮದುವೆ ಅದಕ್ಕೆ ಅವಳು ಒಪ್ಪಿಕೊಂಡರೆ ನನ್ನದೇನೂ ಅಭ್ಯಂತರವಿಲ್ಲ" ಹೀಗೆ ಆಲೋಚಿಸಿದ.

ಇದೇ ವಿಷಯವನ್ನು ವೇದಳಿಗೆ ತಿಳಿಸಿ, ನಾನು ಮೊದಲು ಅವಳೊಡನೆ ಮಾತನಾಡಬೇಕು ಎಂಬ ತನ್ನ ನಿರ್ಧಾರವನ್ನು ತಿಳಿಸಿದ. ವೇದ ಗೋಪಾಲನಿಗೆ ತಿಳಿಸಿದಾಗ ಅವನು ಆತಂಕಗೊಂಡ.

"ಆಗಲೇ ಮದುವೆ ಆಸೆ ಈ ಮುಂಡೇದಕ್ಕೆ... ಮಾತು ಬೇರೆ ಆಡಬೇಕಂತೋ? ಏನಿದೆ ಆಡುವುದಕ್ಕೆ? ಹೂಂ ಅಥವಾ ಇಲ್ಲ ಅಷ್ಟೇ."

"ಪರೀಕ್ಷೆಗಳೂ ಮುಗಿದುಹೋಗಲಿ ಅಂತ ಅವನ ಆಸೆ..."

ಒಂದು ಗಳಿಗೆ ಯೋಚಿಸಿದ ಗೋಪಾಲ. ಇದೂ ಒಂದು ತರಹ ಒಳ್ಳೆಯದಕ್ಕೇ ಎಂದುಕೊಂಡ. ಆದರೆ ಸುಗುಣಳಿಗೆ ತಾನು ಈ ಬಗ್ಗೆ ಏನನ್ನು ತಿಳಿಸಿರಲಿಲ್ಲ. ಅವಳನ್ನು ಒಪ್ಪಿಸುವ ಉಪಾಯವನ್ನು ಹುಡುಕಿದ.

"ಎಲ್ಲರೂ ನಿನ್ನನ್ನು ಒಪ್ಪಿಕೊಂಡಿದಾರೆ ಸುಗುಣ. ನೀನಿನ್ನೂ ನಮ್ಮ ಮನೆಯಲ್ಲೇ ಇರಬಹುದು..." ಎಂದಿದ್ದ ಖುಷಿಯಿಂದ ಅವಳೊಡನೆ.

"ನಿಜವಾಗಿಯೂ? ಯಾವಾಗ ಮದುವೆ?"

"ಆದಷ್ಟು ಬೇಗ... ಮೊದಲು ಅವನ ಪರೀಕ್ಷೆ ಮುಗಿಯಲಿ"

"ಅವರ ಪರೀಕ್ಷೆಗೂ ನಮ್ಮ ಮದುವೆಗೂ ಏನು ಸಂಬಂಧ?"

"ಸಂಬಂಧ ಇದೆ.... ನೀನೀಗ ಇದಕ್ಕೆ ಒಪ್ಪಲೇಬೇಕು. ನಮಗೀಗ ಇರುವ ಉಪಾಯ ಇದೊಂದೇ" ಎನ್ನುತ್ತಾ ತನ್ನ ಯೋಜನೆಯನ್ನು ತಿಳಿಸಿದ. ಅವಳು ಹೌಹಾರಿದಳು.

"ಇಂಪಾಸಿಬಲ್... ನಾನಿದಕ್ಕೆ ಖಂಡಿತಾ ಒಪ್ಪುವುದಿಲ್ಲ. ನನಗೆ ಮೋಸವಾಗಿದೆ ಅಂತ ನಾನು ಅವರಿಗೆ ಮೋಸ ಮಾಡಲಾರೆ. ಇಂತಹ ಮಾತುಗಳನ್ನಾಡುಕೆ ನಿಮಗೆ ಮನಸ್ಸಾದರೂ ಹೇಗೆ ಬಂತು... ಅವರು ನಿಮ್ಮ ಮಗ. ಅವರಿಗೇ ವಂಚನೆ ಮಾಡುವ ದುರ್ಬುದ್ಧಿ ನಿಮಗಿದೆ ಅಂತ ನಾನು ತಿಳಿದುಕೊಂಡಿರಲಿಲ್ಲ

"ನೀನು ಏನು ಬೇಕಾದರೂ ಅಂದ್ಕೋ...ನಮಗಿರುವ ದಾರಿ ಅದೊಂದೇ ನೀನೀಗ ಇದಕ್ಕೆ ಒಪ್ಪಲೇಬೇಕು"

"ಒಪ್ಪದಿದ್ದರೆ ಏನು ಮಾಡ್ತೀರಿ?"

"ಒಪ್ಪುವಂತೆ ಮಾಡ್ತೀನಿ. ಇದರಲ್ಲಿ ನಿನ್ನ ತಪ್ಪು ಏನೂ ಇರುವುದಿಲ್ಲ, ಎಲ್ಲಾ ದೋಷ ನನಗೇ ಇರಲಿ, ನಮ್ಮ ಮಗು ಹುಟ್ಟಿ ಬಿಡಲಿ...ಅಲ್ಲೀವರೆಗೆ ತಡೆದುಕೊ. ಆಮೇಲೆ ಅವನಿಗೆ ಡೈವೋರ್ಸ್ ಕೊಟ್ಟುಬಿಡು"

"ನೀವು ಇಷ್ಟು ನೀಚರು ಅಂತ ನನಗೆ ಗೊತ್ತಿರಲಿಲ್ಲ. ನಿಮ್ಮ

ಮಗುವಾಗಲೀ, ನಿಮ್ಮ ಆಸ್ತಿಪಾಸ್ತಿಯಾಗಲೀ ನನಗೆ ಬೇಕಿಲ್ಲ, ನಾನು ಆತ್ಮಹತ್ಯೆ ಮಾಡಿಕೊಳ್ತೀನಿ"

"ನೀನು ಹೀಗೆ ಅಂತೀಯ ಅಂತ ನನಗೆ ಗೊತ್ತಿತ್ತು. ನೀನು ಆತ್ಮಹತ್ಯೆ ಮಾಡಿಕೊಂಡರೆ ನಿನ್ನ ತಂದೆ ತಾಯಿ, ಅಕ್ಕತಂಗಿ ತಮ್ಮಂದಿರಗತಿಯೇನು ಅಂತ ಯೋಚಿಸಿದೀಯ? ಅವರೂ ನಿಮ್ಮೊಂದಿಗೇ ಸಾಯಬೇಕು ಅಷ್ಟೇ... ನೇಣು ಹಾಕಿಕೊಳ್ಳುತ್ತಾರೆ ಅಷ್ಟೆ...."

"ಇಷ್ಟು ಹಗುರವಾಗಿ ಮಾತನಾಡಬೇಡಿ.... ನಾನು ಇವತ್ತೇ ಹೋಗಿ ಅಬಾರ್ಷನ್ ಮಾಡಿಸಿಕೊಳ್ತೀನಿ"

"ಏನಂದೆ? ಎನ್ನುತ್ತಾ ಅವನು ಅವಳ ಕೆನ್ನೆಗೆ ಬಿಗಿದಿದ್ದ. ಇನ್ನು ಮುಂದೆ ನನ್ನೆದುರಿಗೆ ಇಂತಹ ಮಾತನ್ನಾಡುವ ಸಾಹಸ ಮಾಡಬೇಡ. ನನ್ನ ಮಗುವನ್ನು ನಾಶಗೊಳಿಸುವ ಅಧಿಕಾರ ನಿನಗಿಲ್ಲ..."

"ನನ್ನ ಮಗು ನನ್ನ ಮಗು ಅಂತೀರಲ್ಲ... ನೀವೇ ಏಕೆ ಮದುವೆಯಾಗ ಬಾರದು? ಯಾಕೆ ಈ ಕೆಟ್ಟ ಆಲೋಚನೆ?" ಅಳುತ್ತಾ ನುಡಿದಾಗ ಅವನು ಸಮಾಧಾನಗೊಳಿಸಿದ.

"ವೆರಿ ಸಾರಿ ಸುಗುಣ... ನಾನೆಂದೂ ಯಾರಿಗೂ ಹೊಡೆದಿರಲಿಲ್ಲ. ನನ್ನ ಬಗ್ಗೆ ನಿನಗೆ ತಿಳಿಯದಿರುವ ವಿಷಯಗಳಿವೆ. ಅದನ್ನು ತಿಳಿದಮೇಲೆ ನನ್ನ ಮಾತು ಸರಿ ಎನಿಸಿದರೆ..."

"ಹೊಸ ಕತೆ ಹೇಳಿ, ನನ್ನನ್ನು ರಂಜಿಸಲು ನೋಡಬೇಡಿ"

"ಹೊಸ ಕತೆಯಲ್ಲ, ಹಳೆಯ ಕತೆ.... ಆದರೆ ಅದಕ್ಕೇ ಹೀಗೆ ಹೊಸ ರೂಪ ಸಿಗುತ್ತೆ ಅಂತ ನಾನು ಖಂಡಿತಾ ಅಂದುಕೊಂಡಿರಲಿಲ್ಲ. ನೀನು ನನಗೆ ಸಿಗದೇ ಇದ್ದಿದ್ದರೆ ಆ ಮಾತೇ ಬೇರೆ ಆಗಿರುತ್ತಿತ್ತು. ಈಗ ನನಗೆ ನೀನೂ ಬೇಕು, ನಮ್ಮ ಮಗುವೂ ಬೇಕು... ಅದಕ್ಕೆ ನಾನು ಏನು ಮಾಡುವುದಕ್ಕೂ ಹಿಂಜರಿಯುವುದಿಲ್ಲ" ಎಂದು ತನ್ನ ಕತೆ ಹೇಳಿಕೊಂಡ.

ಅನಂತ ನನ್ನ ಸ್ವಂತ ಮಗನಲ್ಲ, ಯಾವ ಅನಾಥ ಮಗುವೋ ಯಾರಿಗೆ ಹುಟ್ಟಿದ್ದವನೋ ಅಂತ ನೆನಸಿಕೊಂಡರೆ ನನ್ನ ಮೈಯೆಲ್ಲಾ ಉರಿದು ಹೋಗುತ್ತೆ. ಆದರೆ ನಾನು ಲಲಿತಳಿಗೋಸ್ಕರ ಎಲ್ಲವನ್ನೂ ಸಹಿಸಿದೆ. ಲಲಿತ ತುಂಬಾ ಒಳ್ಳೆಯವಳು. ನನ್ನ ಖುಷಿಗಾಗಿ ಅವಳು ತಾನೇ ವೇದಳೊಡನೆ ನನ್ನ ಮದುವೆ ನೆರವೇರಿಸಿದಳು. ನನಗೀಗಾಗಲೇ ಇಬ್ಬರು ಹೆಂಡತಿಯರಿರುವಾಗ ನಾನು ನಿನ್ನನ್ನು ಹೇಗೆ ಮದುವೆಯಾಗಲಿ? ಜನ ಆಡಿಕೊಂಡು ನಗುವುದಿಲ್ಲವೆ? ನಿನ್ನ ಮೇಲೂ ಅಪವಾದ ಬರುತ್ತೆ. ನಿನ್ನ ಸ್ನೇಹ ನನಗೆ ಬೇಕಿತ್ತು... ಸಿಕ್ಕಿತು.. ನನ್ನದೇ ಆದ ಸ್ವಂತ ಮಗು ನಿನ್ನ ಉದರದಲ್ಲಿ ಬೆಳೆಯುತ್ತಿದೆ ಅಂತ

ನನ್ನದೇ ಆದ ಸ್ವಂತ ಮಗು ನಿನ್ನ ಉದರದಲ್ಲಿ ಬೆಳೆಯುತ್ತಿದೆ ಅಂತ ತಿಳಿದ ದಿನ ನನಗೆ ಸುದಿನ. ನನಗೆ ಎಷ್ಟು ಖುಷಿಯಾಯಿತು ಗೊತ್ತಾ! ಲಲಿತ, ವೇದಳಿಂದ ಆಗದ್ದು ನಿನ್ನಿಂದ ಆಗುತ್ತಲಿದೆ ಅಂತ ತಿಳಿದು ನಾನು ನಿನ್ನನ್ನು ಅಪ್ಪಿ ಮುದ್ದಾಡಿರಲಿಲ್ಲವೆ?... ಆ ಮಗು ಹುಟ್ಟಬೇಕು... ಅದಕ್ಕೆ ರಕ್ಷಣೆ ಸಿಗಬೇಕು, ಎನ್ನುವ ವಿಷಯ ಆಲೋಚಿಸಿದಾಗ, ನನಗೆ ಈ ಉಪಾಯ ಹೊಳೆಯಿತು. ಅನಂತ ನನ್ನ ಸ್ವಂತ ಮಗನಲ್ಲವಾದ್ದರಿಂದಲೇ ನಾನು ಹೀಗೆ ಯೋಚಿಸಿದ್ದು, ಸಮಾಜದ ಕಣ್ಣಿಗೆ ನೀನು ಅನಂತನ ಪತ್ನಿ, ಮಗು ಅವನದು, ಆದರೆ ಮಗುವಿಗೆ ಸಿಗುವ ಸಕಲ ಸೌಲಭ್ಯವೂ ನನ್ನದು. ನಾನು ಯಾವುದಕ್ಕೂ ಕೊರತೆ ಮಾಡುವುದಿಲ್ಲ.

ಈಗ ಹೇಳು, ನೀನು ಇದಕ್ಕೆ ಒಪ್ಪಿಕೊಂಡರೆ, ನನ್ನ ನಿನ್ನ ಮರ್ಯಾದೆ ಉಳಿಯುತ್ತದೆ. ಇಲ್ಲದಿದ್ದರೆ ಬೀದಿ ಪಾಲು, ಬದುಕಿದ್ದೂ ಸತ್ತಂತೆ ಯಾರಿಗೂ ಸಂದೇಹ ಬರದಂತೆ ನಿಭಾಯಿಸುವುದರಲ್ಲಿ ಜಾಣತನವಿದೆ... ನಿನಗೆ ಏನು ಬೇಕೋ ಕೇಳು... ಕೊಡ್ತೀನಿ... ನೀನು ನನ್ನ ಮಗುವಿನ ತಾಯಿ... ನಿನಗಿರುವ ಅಧಿಕಾರ ಬೇರೆ ಯಾರಿಗೂ ಇಲ್ಲ"

"ಈ ಮಾತನ್ನೇ ನಿಮ್ಮ ಮನೆಯವರ ಎದುರಿಗೇ ಹೇಳಿ"

"ಹೇಳಿದರೆ ನಾನಾ ಸಮಸ್ಯೆಗಳು ಹುಟ್ಟುತ್ತವೆ, ನನ್ನ ಈ ಕಂಪೆನಿ ಈ ಒಡೆತನ ಎಲ್ಲಾ ಲಲಿತಳ ಆಸ್ತಿ, ಅವಳ ತಂದೆಯಿಂದ ಅವಳಿಗೆ ಬಂದಿದ್ದು ಅವಳ ನಂತರ ಎಲ್ಲಾ ಅವಳ ಮಗ ಅನಂತನಿಗೆ ಸೇರುತ್ತದೆ. ಆಗ ನನಗೆ ನಿನಗೆ ಹುಟ್ಟಲಿರುವ ಮಗುವಿಗೆ ಏನಿಲ್ಲ, ಕಾನೂನು ನಮ್ಮ ಬೆಂಬಲಕ್ಕೆ ಬರುವುದಿಲ್ಲ ಬೀದಿಗೆ ಬರಬೇಕಾಗುತ್ತದೆ. ಭಿಕ್ಷೆ ಬೇಡವಾಗುತ್ತದೆ"

"ಇದನ್ನೆಲ್ಲ ಈ ಮುಂಚೆ ಏಕೆ ಆಲೋಚಿಸಲಿಲ್ಲ?"

"ಆಗ ನೀನು ಸಿಕ್ಕಿರಲಿಲ್ಲ.... ಈ ಮಗುವಿನ ಸುದ್ದಿ ಇರಲಿಲ್ಲ... ನೀನು ಈಗ ಅನಂತನ ಮಡದಿಯಾದರೆ ಹುಟ್ಟಲಿರುವ ಮಗುವಿಗೆ ಎಲ್ಲಾ ಸೇರುತ್ತದೆ"

"ನೀವು ಇಷ್ಟು ಸ್ವಾರ್ಥಿ ಅಂತ ನನಗೆ ಖಂಡಿತಾ ತಿಳಿದಿರಲಿಲ್ಲ"

"ನನಗೇ ಗೊತ್ತಿರಲಿಲ್ಲ ಇದು ದಿಢೀರನೇ ಹುಟ್ಟಿದ ಸ್ವಾರ್ಥ.... ಈಗ ಇದರಲ್ಲಿ ನೀನು ಷಾಮೀಲು, ನನ್ನ ಮಾತು ಕೇಳಿದರೆ ನಿನಗೆ ಬದುಕು ಇಲ್ಲದಿದ್ದರೆ ಭಂಗ"

"ಇದೆಂತಹ ಬದುಕು? ಅದು ಭಂಗಕ್ಕಿಂತ ಭಂಡಬಾಳು..."

"ನೀನು ಹಾಗೆ ಭಾವಿಸಿದರೆ... ಈಗ ಈ ಮಾತೆಲ್ಲ ಸಾಕು, ನಿನ್ನ ಒಪ್ಪಿಗೆ ಏನು ಅಂತ ತಿಳಿಸು"

"ಇದನ್ನೆಲ್ಲ ಮೊದಲೇ ಅವರಿಗೆ ತಿಳಿಸಿದರೇ...."

"ನಿನ್ನಂತಹ ಪೆದ್ದಿ ಇನ್ನೊಬ್ಬರಿಲ್ಲ, ಹೇಗೂ ಅವನು ನಿನ್ನೊಡನೆ ಮಾತನಾಡಬೇಕು, ಅಂತ ಹೇಳಿದಾನಂತೆ ನಾಲ್ಕು ದಿನ ಅವನೊಡನೆ ಕಾಲಕಳೆದುಬಿಡು, ಆಮೇಲೆ ಎಲ್ಲವೂ ಸುಲಭ"

"ಎಷ್ಟು ಕೆಟ್ಟ ಬುದ್ಧಿ ನಿಮ್ಮದು... ನಾನು ಒಪ್ಪದಿದ್ದರೆ?"

"ನನ್ನ ಕಂಪೆನಿಯಲ್ಲಿ ನಿನಗೆ ಕೆಲಸವಿಲ್ಲ, ನಿನ್ನ ಹಣೇ ಬರಹ..." ಎಂದು ಹೇಳಿ ಅವಳನ್ನು ಬಿಟ್ಟು ತಾನು ಹೊರಗೆ ಹೋಗಿದ್ದ.

ಮೊದಲು ತನ್ನ ದುರ್ವಿಧಿಗೆ ತನ್ನನ್ನು ತಾನೇ ಹಳಿದುಕೊಂಡರೂ ನಂತರ, ಹೇಗಾದರೂ ಸರಿ ಇವನ ಮೇಲೆ ಸೇಡು ತೀರಿಸಿಕೊಳ್ಳಬೇಕು ಇವನು ನಿರ್ಗತಿಕನಾಗುವಂತೆ ಮಾಡಬೇಕು ಇವನ ಜಂಭ ಅಡಗಬೇಕು....ಇದಕ್ಕೆ ಸದ್ಯದ ಉಪಾಯ ಇದೊಂದೇ, ಹೇಗಾದರೂ ಸರಿ, ಮೊದಲು ಇವನ ಮನೆಗೆ ಹೋಗಿ ಸೇರಬೇಕು. ನಂತರ ನಿಧಾನವಾಗಿ ಎಲ್ಲಾ ವಿಷಯವನ್ನು ಬಹಿರಂಗೋಳಿಸಿ, ಆ ಮನೆಯಲ್ಲಿ ಅವನಿಗೆ ಸ್ಥಾನವಿಲ್ಲದಂತೆ ಮಾಡಬೇಕು. ತನ್ನನ್ನು ಬೀದಿಪಾಲು ಮಾಡುತ್ತೀನಿ ಎಂದನಲ್ಲವೇ...? ಎಂದು ಹೇಳಿಕೊಂಡು ಎದ್ದಳು. ಕೋಪ, ತಾಪ, ಸೇಡು, ಸಿಟ್ಟು ಎಲ್ಲವನ್ನು ಅಡಗಿಸಿಟ್ಟುಕೊಂಡು ಅವನ ಯೋಚನೆಯನ್ನು ಅನುಮೋದಿಸಿದಳು.

"ಸುಗುಣ ಐ ಥ್ಯಾಂಕ್ ಯೂ... ನನಗೆ ಗೊತ್ತಿತ್ತು ನೀನು ನಾನು ಹೇಳಿದಂತೆ ಕೇಳ್ತೀಯ ಅಂತ. ಬಿ ಬ್ರೇವ್.... ಏನೂ ಆಗಲ್ಲ. ನಾನು ನಿನ್ನ ಜತೆಗಿರ್ತೀನಿ" ಎಂದು ಅವಳ ಕೆನ್ನೆ ತಟ್ಟಿದ. ಅವಳು ಪ್ರೀತಿಯನ್ನು ನಟಿಸಿದಳು.

ಗೋಪಾಲನ ಆದೇಶದಂತೆ ಸುಗುಣ ಅವನೊಡನೆ ಮನೆಗೆ ಬಂದಾಗ, ಎಲ್ಲರೂ ಹರ್ಷದಿಂದ ಅವಳನ್ನು ಸ್ವಾಗತಿಸಿದರು. ಸುಗುಣ ಅನಂತನ ಕಣ್ಣು ತಪ್ಪಿಸಿದಳು. ಲೋಕಾರೂಢಿಯ ಮಾತಿನನಂತರ, ಅನಂತನ ಸಂಜ್ಞೆ ಅರಿತು, ವೇದ ಸುಗುಣ ಅವಳನ್ನು ಮಹಡಿಯ ಮೇಲಿನ ರೂಮಿಗೆ ಕರೆದೊಯ್ದಳು. ಅಲ್ಲಿ ಅನಂತ ಅವಳಿಗಾಗಿ ಕಾದಿದ್ದ. ಸುಗುಣ ಭಯದಿಂದ ಬೆವೆತಳು. ಹಾಗೇ ಗೋಡೆಗೆ ಒರಗಿ ನಿಂತಳು.

ಅನಂತ ಮಂದಹಾಸದಿಂದ ಮಾತನಾಡಿದಾಗ ಅವಳು ನೆಲವನ್ನು ನೋಡುತ್ತಿದ್ದಳು.

"ಇನ್ನೆರಡು ತಿಂಗಳ ನಂತರ ನನ್ನ ಪರೀಕ್ಷೆ ಇದೆ. ಅದು ಮುಗಿದ ನಂತರ ನಾನು ಕೆಲಸಕ್ಕೆ ಪ್ರಯತ್ನ ಮಾಡ್ತೀನಿ, ಆಮೇಲೆ ನಮ್ಮ ಮದುವೆ, ಏನಂತೀರಿ, ಇದಕ್ಕೆ ನಿಮ್ಮ ಒಪ್ಪಿಗೇನಾ?"

"ಇದಕ್ಕೆ ನಾನು ಏನು ಹೇಳಲಿ? ತಂದೇನ ಕೇಳಿ..."

"ಹೌದು... ನಿಮ್ಮ ತಾಯಿ ತಂದೆಯ ಪರಿಚಯವಾಗಲೇ ಇಲ್ಲವಲ್ಲ"

"ನಮ್ಮ ಮನೆ, ನಿಮ್ಮಂತಹವರು ಬರಲು ಯೋಗ್ಯವಾಗಿಲ್ಲ, ಅವರೇ ಇಲ್ಲಿಗೇ ಬರುತ್ತಾರೆ..."

"ಅದು ನ್ಯಾಯವೇ..." ಸರಸವಾಗಿ ಏನನ್ನಾದರೂ ಮಾತನಾಡಲು ಹವಣಿಸುವ ಮುನ್ನವೇ ಸುಗುಣ "ನಾನಿನ್ನು ಬರಲಾ?" ಎಂದಿದ್ದಳು.

"ಸುಗುಣ ನೀವು ನನ್ನನ್ನು ಒಪ್ಪಿದೀರಾ?" ಕಡೆಯದಾಗಿ ಕೇಳಿದ್ದ.

ಅವಳು 'ಹೂಂ' ಎಂದು ತಲೆ ತಗ್ಗಿಸಿ ನುಡಿದಾಗ ನಾಚಿಕೆ ಎಂದು ಕೊಂಡರೂ 'ಥ್ಯಾಂಕ್ ಯೂ ವೆರಿಮಚ್' ಎಂದಿದ್ದ. ಅವಳು ಅವನ ಕಡೆಗೆ ಒಂದು ಕ್ಷಣ ನೋಡಿ, ತನ್ನ ತುಮಲ ಅವನಿಗೆ ಅರ್ಥವಾದೀತೆಂದು ಹೆದರಿ ಅಲ್ಲಿಂದ ಸರ‍್ರನೆ ಸರಿದಿದ್ದಳು.

ಹೊರಗೆ ನಿಂತಿದ್ದ ವೇದ ತಮಾಷೆ ಮಾಡಿದ್ದಳು.

"ಎಷ್ಟು ಹೆದರಿದ್ದಳು ಅವಳು ಏನು ಆಡಿದೆ? ಏನು ಹೇಳಿದೆ...?" ಅನಂತ ತಲೆ ಆಡಿಸಿದ್ದ.

"ನೀವು ಇಲ್ಲಿದೀರಿ ಅಂತ ನನಗೆ ತಿಳಿದಿತ್ತು. ಅದಕ್ಕೇ ಅವಳೂ ಹೆದರಿರಬಹುದು"

"ಸರಿಯಪ್ಪಾ ನಡಿ...." ವೇದ ಅವನ ತಲೆ ಸವರಿದ್ದಳು.

ಅನಂತರ, ಗೋಪಾಲ, ಸುಗುಣಳ ತಂದೆಯನ್ನು ಭೇಟಿ ಮಾಡಿ ಮಾತನ್ನಾಡಿದ್ದ. "ನಿಮ್ಮ ಮಗಳನ್ನು ನನ್ನ ಮಗ ಮೆಚ್ಚಿದಾನೆ.... ಆದಷ್ಟು ಬೇಗ ಮದುವೆ ನಡೆಯಲಿ ಅಂತ ನಮ್ಮ ಆಸೆ.... ಏನು ಹಾಳ್ತೀರಾ?"

"ನಾನೇನು ಹೇಳಲಿ? ನೀವಾಗಿಯೇ ಬಂದು ಕೇಳುತ್ತಿರುವಾಗ ನಾನು ಇಲ್ಲ ಎನ್ನಲಾರೆ.... ಆದರೆ, ಈ ಮನೆಯ ಜವಾಬ್ದಾರಿಯೆಲ್ಲಾ ಅವಳದ್ದೇ...."

"ನನಗೆ ಗೊತ್ತು, ಸುಗುಣ ಎಲ್ಲಾ ಹೇಳಿದ್ದಳು. ಅವಳಿಗೆ ಈ ಕೆಲಸ ಕೊಟ್ಟವನೂ ನಾನೇ..... ನಿಮಗೆ ಯಾವ ರೀತಿಯ ತೊಂದರೆ ಆಗದಂತೆ ನೋಡಿಕೊಳ್ಳುವ ಆಸೆ ನನಗೆ, ಮದುವೆಯ ಖರ್ಚು ಸಹ ನಮ್ಮದೇ...."

"ನೀವು ಇಷ್ಟು ಹೇಳಿದ ಮೇಲೆ ನಾನು ಏನೂ ಹೇಳಲಿ? ನಿಮ್ಮ ಇಚ್ಛೆ ಇದ್ದಂತಾಗಲೀ..." ಆತನಂತೂ ವಿರೋಧಿಸುವ ಶಕ್ತಿಯವನಲ್ಲ.

"ಒಂದು ವಾರ ನಿಮ್ಮ ಮಗಳು ನಮ್ಮ ಮನೆಯಲ್ಲಿರಲಿ. ಆಮೇಲೆ ಅವನ ಪರೀಕ್ಷೆ ಮುಗಿದ ನಂತರ ಮದುವೆ.... ಅವಳು ನಮ್ಮ ಮನೆಯ ರೀತಿನೀತಿಗಳಿಗೆ ಹೊಂದಿಕೊಳ್ಳಲಿ"

"ನನ್ನ ಮಗಳು ಬೇಗ ಹೊಂದಿಕೊಳ್ಳುತ್ತಾಳೆ, ಜಾಣೆ..."

"ಹೌದು ತುಂಬಾ ಜಾಣೆ..." ತಾನೂ ಹೊಗಳಿದ್ದ

ಸುಗುಣ ಅವಳ ತಂದೆಯ ಜತೆ ಮತ್ತೆ ಬಂದು, ಅಲ್ಲಿಯೇ ಉಳಿದು ಕೊಂಡಾಗ ಲಲಿತ ಹೆದರಿದಳು.

"ಇದೆಂತಹ ಶಿಷ್ಟಾಚಾರ? ಆತನಿಗೆ ಅಷ್ಟು ತಿಳಿಯಬೇಡವೇ? ಲಗ್ನಪತ್ರಿಕೆ ಸಹ ಆಗಿಲ್ಲ"

"ನಾಳೇನೇ ಲಗ್ನಪತ್ರಿಕೆ ಮಾಡಿದರಾಯ್ತು...."

"ಆದರೂ ಏನೋ ಅತಿರೇಕ ಇದು ಸರಿಯಲ್ಲ"

"ಅವಳು ಇಲ್ಲಿ ಬಂದಿರುವುದು ಅವನಿಗಾಗಿ, ಅವನು ಬೇಡ ಎನ್ನಲಿ ಈ ಕ್ಷಣ ಅವಳನ್ನು ಕಳಿಸಿಬಿಡೋಣ..." ಗೋಪಾಲ ನುಡಿದಿದ್ದ.

ಅನಂತ, ಅವಳು ಇಲ್ಲಿ ಬಂದಿರಲಿ ಎಂದು ಆಸೆಪಟ್ಟಿದ್ದು ಅವಳಿಗೆ ಸರಿ ಎನಿಸಲಿಲ್ಲ.

"ಸದ್ಯದಲ್ಲೇ ನಿನಗೆ ಪರೀಕ್ಷೆ ಅಲ್ಲವೇನೋ...ಅವಳು ಇಲ್ಲಿ ಬಂದಿದ್ದರೆ ನಿನಗೆ ತೊಂದರೆ ಆಗಲ್ವೆ!"

"ಅವಳು ಇರ್ತೀನಿ ಅಂತ ಆಸೆಪಟ್ಟರೆ ಇರಲಿ. ನನ್ನ ಓದಿಗೆ ತೊಂದರೆ ಅಂತ ಅನ್ನಿಸಿದರೆ, ನಾನೇ ವಾಪಸ್ಸು ಹೊರಟುಹೋಗ್ತೀನಿ"

"ಆದರೆ ಇದು ಚೆನ್ನ ಅಲ್ಲಪ್ಪಾ... ಅವಳೇಕೆ ಈಗ ಇಲ್ಲಿರಬೇಕು?"

"ನನಗೇನಮ್ಮಾ ಗೊತ್ತು? ನನ್ನ ಪಾಡಿಗೆ ನಾನಿದ್ದೆ. ಇದೆಲ್ಲಾ, ಸೇರಿ ಮಾಡಿದ್ದು ನೀವುಗಳೇ.... ಈಗ ನನ್ನನ್ನೇಕೆ ಕೇಳ್ತೀರಿ... ಅವಳಿಷ್ಟ ನಿಮ್ಮಿಷ್ಟ"

"ಹಾಗಾದರೆ ಅವಳು ಭಂಡ ಹುಡುಗಿಯೇ" ಎಂಬ ನಿರ್ಣಯಕ್ಕೆ ಬಂದಳು ಲಲಿತ.

"ವೇದಮ್ಮ ಇದೇಕೋ ಅತಿರೇಕವಾಗಿ ಕಾಣ್ತಿದೆ. ಉಪಕಾರ ಮಾಡಕ್ಕೆ ಹೊರಟರೆ ಮೈಮೇಲೆ ಹತ್ತಿಕೂತ ಹಾಗಾಯ್ತು, ನನಗಿಷ್ಟವಿಲ್ಲ"

"ಬಡವರ ಮನೇಲಿ ಬೆಳೆದ ಹುಡುಗಿ ಈ ಶ್ರೀಮಂತಿಕೆಗೆ ಬೆರಗಾಗಿರ ಬಹುದು, ನಾಲ್ಕು ದಿನ ಇರಲಿ, ಅನಂತ ಊರಿಗೆ ಹೋದನಂತರ ತಾನೇ ಹೋಗ್ತಾಳೆ ಇಲ್ಲಿ ಯಾಕೆ ಇರ್ತಾಳೆ?"

"ಲಗ್ನಪತ್ರಿಕೆ ಆಗುವವರೆಗೂ ಅವಳು ಇಲ್ಲಿಗೆ ಬಂದಿರುವುದು ಬೇಡ" ಎಂದು ಲಲಿತ ಖಡಾಖಂಡಿತವಾಗಿ ನುಡಿದಾಗ ಗೋಪಾಲ ಮೆತ್ತಗಾದ.

"ಇದೆಂತಹ ತಂದೆತಾಯಿ? ಹೆಣ್ಣು ಮಕ್ಕಳು ಮನೆಯಿಂದ ತೊಲಗಿದರೆ ಸಾಕು ಅಂತ ಕಾಯ್ತ ಇರ್ತಾರೇನೋ ಮೊದಲು ಅವಳನ್ನು ಅವಳ ಮನೆಗೆ ಕಳಿಸಿ"

"ನಿನ್ನ ಮಗ ಬಾಯಿಬಿಟ್ಟು ಏನನ್ನು ಹೇಳಲ್ಲ, ಆದರೆ ಆಮೇಲೆ ಕೋಪಿಸ್ಕೋತಾನೆ... ಆಮೇಲೆ ನನಗೇನನ್ನು ಹೇಳಬೇಡ"

"ನನಗೇಕೋ ಎಲ್ಲಾ ವಿಚಿತ್ರವಾಗಿ ಕಾಣ್ತಿದೆ. ಎಲ್ಲರಿಗೂ ಏಕೆ ಆತುರವೋ... ಮೊದಲು ಆದಷ್ಟು ಬೇಗ ಮದುವೆಯ ದಿನವನ್ನು ನಿಶ್ಚಯಿಸಿ, ಆಮೇಲೆ ಏನಾದರೂ ಆಗಲಿ"

"ಗೋಪಾಲನಿಗೆ ಬೇಕಾದುದೂ ಅದೇ. ತಾನೇ ಹೋಗಿ ಶಾಸ್ತ್ರಿಗಳನ್ನು ಕಂಡು ಲಗ್ನ ನಿಶ್ಚಯಿಸಿ ಹಾಗೇ ಅವರನ್ನು ಮನೆಗೆ ಕರೆದು ಬಂದ.

"ನಾಡಿದ್ದೇ ಲಗ್ನಪತ್ರಿಕೆ ಇನ್ನೆರಡು ದಿನ ನೀನು ನಿನ್ನ ತಂದೆ ಮನೆಯಲ್ಲಿರು, ಆಮೇಲೆ ಇಲ್ಲೇ ಇರೂವಂತೆ"

ಆದರೆ ಸುಗುಣ ಒಪ್ಪಲಿಲ್ಲ, "ಇನ್ನು ನಾನಲ್ಲಿರಲ್ಲ, ನಮ್ಮ ತಾಯಿಗೆ ಅನುಮಾನ ಬಂದರೆ ನನ್ನನ್ನು ಕೊಂದೇ ಬಿಡ್ತಾರೆ ಇಷ್ಟೆ."

ಹಾಗಾದರೆ ಯಾವುದಾದರೂ ಹೋಟೆಲ್ಲಿನಲ್ಲಿ ಇರು. ಎಂದು ಹೇಳಿ, ತಾನೇ ಅವಳನ್ನು ಕರೆದುಕೊಂಡು ಹೋಗಿ, ರೂಮು ಗೊತ್ತು ಮಾಡಿ, ಅವಳೊಡನೆ ಕೆಲ ಸಮಯ ಕಳೆದು ಹಿಂತಿರುಗಿದ.

ಲಗ್ನಪತ್ರಿಕೆಯ ಶಾಸ್ತ್ರ ಮುಗಿಯಿತು. ಗೋಪಾಲ ನಿಶ್ಚಿಂತನಾದ. ಸುಗುಣ ಅವನ ಆದೇಶದಂತೆ, ಸುಗುಣಳ ಜತೆ, ಅವಳ ತಂಗಿಯನ್ನು ತನ್ನ ಮನೆಗೆ ಕರೆಸಿಟ್ಟುಕೊಂಡಳು. ಆ ಹುಡುಗಿ ಬಂದುದು ಅನಂತನಿಗೆ ಒಬ್ಬ ಸ್ನೇಹಿತೆ ಸಿಕ್ಕಂತೆ ಆಗಿತ್ತು. ಎಲ್ಲರಿಗೂ ಆ ಹುಡುಗಿಯ ಓಡಾಟದಿಂದ ಮನೆ ತುಂಬಿದಂತಿದೆ ಅಂತನ್ನಿಸಿತ್ತು. ಸದ್ಯ ಒಳ್ಳೆಯದೇ ಆಯ್ತು ಎಂದು ಲಲಿತ ನಿಟ್ಟುಸಿರು ಬಿಟ್ಟಳು.

ಅನಂತ, ಓದು ಬಿಟ್ಟು ಅವಳೊಡನೆ ಲಲ್ಲೆ ಹೊಡೆಯುತ್ತಿರಲಿಲ್ಲ ಅವಳು ಏಕಾಂತದಲ್ಲಿ ಸಿಗುತ್ತಿದ್ದುದೇ ಅಪರೂಪ. ರಾತ್ರಿ ಹೊತ್ತು ಅವಳ ಜತೆ ವೇದಮ್ಮ ಮಲಗುತ್ತಿದ್ದರು. ಅನಂತ ಈಗಲೂ, ತಾಯಿಯ ರೂಮಿನಲ್ಲಿ ಮಲಗುತ್ತಿದ್ದ.

ಈಗ ಎಲ್ಲರಿಗೂ ಅವಳು ಬಾಸ್‌ನ ಸೊಸೆಯಾಗಲಿದ್ದಾಳೆಂದು ತಿಳಿದಿತ್ತು. ತಮಗೆ ತಿಳಿದಂತೆ ಮಾತನಾಡಿಕೊಂಡರು ಕೆಲವರು. ಆದರೆ ಸುಗುಣ ಯಾವ ಗುಟ್ಟನ್ನು ಬಿಟ್ಟುಕೊಡಲಿಲ್ಲ.

ಒಂದು ವಾರದ ನಂತರ ಅನಂತ ಪರೀಕ್ಷೆಗೆ ಬರೆಯಲು ವಾಪಸ್ಸು ಹೊರಟಿದ್ದ. ಹೊರಡುವ ಮೊದಲು ಸುಗುಣಳನ್ನು ಕಂಡು ಮಾತನಾಡುವ ಅವಕಾಶ ಅವನಿಗೆ ದೊರೆತಿರಲಿಲ್ಲ. ಅವಳು ಆಫೀಸಿಗೆ ಹೊರಟುಹೋಗಿದ್ದಳು. ಆಫೀಸಿಗೇ ಫೋನು ಮಾಡಿದ್ದ ಅವನು ಆಡಿದ್ದಕ್ಕೆ ಹೂಂ ಎಂದುತ್ತರ ಕೊಟ್ಟು ಗೋಪಾಲನ ಕಡೆ ನೋಡಿದಾಗ, ಅವನು ನಕ್ಕಿದ್ದ. ಅವಳಿಗೆ ನಗಬೇಕೆನಿಸಿರಲಿಲ್ಲ.

ಪರೀಕ್ಷೆ ಮುಗಿಸಿ ವಾಪಸ್ಸು ಬರಲು, ಅನಂತನಿಗೆ ಎರಡು ತಿಂಗಳುಗಳು

ಬೇಕಾಯ್ತು. ಮನೆಗೆ ಬಂದವನು ಅತ್ತಿತ್ತ ನೋಡಿದ. ಲಲಿತ ಎದುರಿಗೆ ಬಂದು, ಹೇಗೆ ಮಾಡಿದೀಯ ಅಂತ ಮಾತನಾಡಿಸಿದಳು ಕಡೆಗೇ ತಾನೇ ವೇದಮ್ಮನ್ನ ಕೇಳಿದ್ದ.

"ಸುಗುಣ ಆಫೀಸ್ನಿಂದ ಇನ್ನೂ ಬಂದಿಲ್ವಾ!"

"ನೀನು ಬರುವ ವಿಷಯ ಗೊತ್ತಿದ್ದಿದ್ದರೆ ಸೀದಾ ಇಲ್ಲಿಗೆ ಬರುತ್ತಿದ್ದ ಳೇನೋ?"

"ಯಾಕೆ? ಅವಳು ಇಲ್ಲಿಂದ ಹೊರಟು ಹೋದ್ಲಾ?"

"ಇಲ್ಲಿ ನೀನೂ ಇರಲಿಲ್ಲ, ಇದ್ದು ಏನು ಮಾಡ್ತಾಳೆ, ಆಗ ಈಗ ಬಂದು ಹೋದಳು... ಫೋನು ಮಾಡು... ಬರ್ತಾಳೆ"

ಅವನು ಫೋನು ಮಾಡಿದಾಗ ಸುಗುಣ ಆಫೀಸಿಗೆ ಬಂದಿಲ್ಲ ಎನ್ನುವ ವಿಷಯ ತಿಳಿಯಿತು. ಹುಷಾರಿಲ್ಲ ಅಂತ ಒಂದು ವಾರ ರಜಾ ಹಾಕಿದಾಳೆ ಅಂತ ತಿಳಿಸಿದ್ದರು. ಅವನಿಗೆ ನಿರಾಸೆಯಾಗಿತ್ತು. ಅವಳನ್ನು ಹುಡುಕಿಕೊಂಡು ಅವಳ ತಂದೆ ಮನೆಗೆ ಹೋಗುವ ಆಸೆಯಾಗಲಿಲ್ಲ, ಒಂದೆರಡು ದಿನಗಳ ನಂತರ, ಬೇರೆ ಯಾವುದೋ ಪರೀಕ್ಷೆ ಇದೆ ಅಂತ ಅವನು ಮತ್ತೆ ಹೊರಟುಹೋಗಿದ್ದ. ಅವನು ಹೋದದ್ದು ತಿಳಿದ ನಂತರ ಸುಗುಣ ಮನೆಗೆ ಬಂದಿದ್ದಳು.

"ತುಂಬಾ ಬಡವಾಗಿ ಹೋಗಿದೀಯ... ಮದುವೆಯಾಗುವ ಹುಡುಗಿ ಅಂದರೆ ಹೇಗಿರಬೇಕು?" ವೇದಮ್ಮ ಉಪಚರಿಸಿದಾಗ ಅವಳಿಗೆ ವಾಕರಿಕೆ ಬಂತು.

ಲಲಿತ ವೇದ ಮುಖಮುಖ ನೋಡಿಕೊಂಡರು. "ಜ್ವರ ಬಂದಾಗಿ ನಿಂದ ಹೀಗೇ ಆಗಿದೆ. ಏನೂ ಸೇರಲ್ಲ, ವಾಕರಿಕೆ ಅಸಹ್ಯ" ಎಂದಿದ್ದಳು.

"ಡಾಕ್ಟರು ಏನಂದ್ರು?" ಎಂದು ಕೇಳುವ ತವಕವಾದರೂ ವೇದಮ್ಮ ಸುಮ್ಮನಾದಳು. ಅವಳ ಅನುಮಾನವನ್ನು ದೃಢಪಡಿಸುವಂತೆ ಅವಳ ತಾಯಿ ತಂದೆ ಬಂದು, ವರ್ತಮಾನ ತಿಳಿಸಿದ್ದರು.

"ಶ್ರೀಮಂತಿಕೆಯ ಆಸೆ ತೋರಿಸಿ, ನನ್ನ ಮಗಳನ್ನು ನಿಮ್ಮ ಮನೆಗೆ ಕರೆಸಿಕೊಂಡಿದ್ದೀರಿ. ಈಗ ನೋಡಿ ಎಂತಹ ಕೆಲಸವಾಗಿದೆ! ನಿಮ್ಮ ಮಗ ಬಂದು ಹೋದ ವಿಷಯವನ್ನು ಸಹ ನೀವು ನಮಗೆ ತಿಳಿಸಲಿಲ್ಲ."

"ಅವನಿಗೆ ಇನ್ನು ಒಂದು ಪರೀಕ್ಷೆ ಇದೆ. ಬರ್ತಾನೆ"

"ಯಾವಾಗ ಬರ್ತಾರೆ! ಈಗ ಬೇಗ ಮದುವೆ ನಡೆಯದಿದ್ದರೆ ನಾವು ತಲೆ ಎತ್ತಿ ತಿರುಗುವಂತಿಲ್ಲ. ಬಡವಾ ನೀನು ಮಡಗಿದ ಹಾಗಿರು ಅಂತ ನಾವು ನಿಮ್ಮ ನೆಂಟಸ್ತಿಕೆ ಬಯಸಬಾರದಾಗಿತ್ತು"

"ಈಗ ಅಂಥದ್ದೇನಾಯ್ತು?"

"ಯಾಕೆ ಸುಗುಣ ಹೇಳಲಿಲ್ವಾ?"

"ಪಾಪ ಹುಷಾರಿರಲಿಲ್ಲ, ಸುಸ್ತಾಗಿದ್ದಳು ಅವಳೇ ಏನು ಹೇಳ್ತಾಳೆ?"

"ನಾವು ಹೇಳ್ತೀವಿ ಕೇಳಿ, ಮದುವೆಗೆ ಮುಂಚೇನೆ ನಿಮ್ಮ ಸೊಸೆ ಬಸರಿಯಾಗಿದ್ದಾಳೆ, ಆರತಿ ಯಾವಾಗ ಇಟ್ಟುಕೊಳ್ತೀರಿ?"

ಆಕೆಯ ವ್ಯಂಗ್ಯದ ಮಾತು ಲಲಿತಳನ್ನ ಚುಚ್ಚಿತು

"ಏನು ಮಾತಾಡ್ತಿದೀರಿ? ಇದು ಹೇಗೆ ಸಾಧ್ಯ?"

"ಯಾಕೆ? ಅವಳು ಒಂದು ವಾರ ನಿಮ್ಮ ಮನೇಲಿರಲಿಲ್ವೆ? ನೀವೇ ಮೆಹರ್ಬಾನಿ ಅಂತ ಇಟ್ಟುಕೊಂಡಿದೀರಿ"

ಲಲಿತ ತಲೆತಗ್ಗಿಸಿ ಕುಳಿತಳು. ಅನಂತ ಹೀಗೆ ಮಾಡಬಹುದು ಅಂತ ನಾನು ಖಂಡಿತಾ ಯೋಚಿಸಿರಲಿಲ್ಲ? ಯಾಕೆ ಹೀಗಾಯ್ತು? ಅವಳನ್ನು ಬಿಟ್ಟಿರುವ ಆಸೆ ಇಲ್ಲದಿದ್ದರೆ, ಆಗಲೇ ಮದುವೆ ಮಾಡಿರುತ್ತಿದ್ದೆವು ಎಂದುಕೊಂಡಳು.

"ಸುಗುಣನ್ನ ಕಳಿಸಿ, ನಾನು ಅವಳ ಹತ್ತಿರ ಮಾತನಾಡ್ತೀನಿ"

"ಏನೂ ಬೇಡ. ಮೊದಲು ನಿಮ್ಮ ಮಗನನ್ನು ಕರೆಸಿ, ಮೊದಲು ಮದುವೆ ಶಾಸ್ತ್ರ ಮುಗೀಲಿ, ಆಮೇಲೆ ಏನಾದ್ರೂ ಹಾಳಾಗ್ಲೀ...."

"ಏನು ಹೀಗೆ ಮಾತನಾಡ್ತೀರಿ? ಏನೋ ಚಿಕ್ಕವರು, ಅಚಾತುರ್ಯ ನಡೆದಿರಬಹುದು ನಾವೇನು ಈಗ ನಿರಾಕರಿಸಿದೆವೆ? ನಾವು ಅವನಿಗೆ ಬರುವಂತೆ ತಿಳಿಸ್ತೀನಿ, ನೀವೆಲ್ಲಾ ಸಿದ್ಧತೆ ಮಾಡಿಕೊಳ್ಳಿ"

"ನಾವು ಏನು ಸಿದ್ಧತೆ ಮಾಡುವುದು? ಸಿದ್ಧತೆಯೆಲ್ಲಾ ನಿಮ್ಮದೇ ಹೀಗೆಲ್ಲಾ ಇಲ್ಲದಿದ್ದರೆ ನಾವು ನಿಮ್ಮ ಮನೆ ಬಾಗಿಲಿಗೇ ಬರುತ್ತಿರಲಿಲ್ಲ. ನಿಮ್ಮ ಶ್ರೀಮಂತಿಕೇನ ಹೀಗಾ ತೋರಿಸುವುದು?"

"ದಯವಿಟ್ಟು ಸುಮ್ಮನಿರಿ, ಹೀಗೆಲ್ಲಾ ಮಾತನಾಡಬೇಡಿ. ನಮ್ಮ ಯಜಮಾನರು ನಿಮ್ಮ ಮಗಳಿಗೆ ಉಪಕಾರ ಮಾಡಿರುವುದನ್ನು ಮರೀಬೇಡಿ"

"ಏನ್ರೀ ಉಪಕಾರ? ತಿಂಗಳಿಗೆ ಐದು ಸಾವಿರ ರೂಪಾಯಿ ಸಂಬಳ ತರುತ್ತಾಳೆ, ಈ ಮದುವೆ ನಡೀದಿದ್ರೂ ನಾವು ಆರಾಮಾಗಿರುತ್ತಿದ್ದೆವು"

ಅವನ ಆಸೆ ಅವರುಗಳಿಗೆ ಅರ್ಥವಾಯಿತು

"ನಮ್ಮ ಯಜಮನರು ನಿಮ್ಮ ಹತ್ತಿರ ಮಾತನಾಡ್ತಾರೆ. ನಾನು ನಿಮ್ಮ ಮಗಳಿಗೆ ಅನ್ಯಾಯ ಮಾಡುವುದಿಲ್ಲ, ಅವಳು ನಮ್ಮ ಮನೆ ಸೊಸೆ"

"ಹೂಂ ಆದಷ್ಟು ಬೇಗ ಈ ಕೆಲಸ ಮುಗಿಸಿ" ಎಂದು ಹೇಳಿ ದುರ್ದಾನ ತೆಗೆದುಕೊಂಡವರಂತೆ ಅವರಿಬ್ಬರೂ ಎದ್ದು ಹೋಗಿದ್ದರು.

"ಬಡತನವಿದ್ದರೂ ಎಷ್ಟು ದುರಂಕಾರ ಇವರುಗಳಿಗೆ? ಇವರಿಗೆ

ಬುದ್ಧಿ ಇಲ್ಲ, ನಮ್ಮ ಅನಂತೂಗೆ ಮದುವೇನು ಅವಾಂತರವಿತ್ತೋ ಆಸೆ ತೋರಿಸಿ, ಹುಡುಗೀನ ಕಣ್ಣು ಮುಂದೆ ತಂದು ನಿಲ್ಲಿಸಿ, ಅವನಿಂದ ಅಚಾತುರ್ಯ ನಡೆಯುವಂತೆ ಮಾಡಿದರು. ಅವರಿಗೆ ಈಗ ಈ ವಿಷಯನ್ನು ತಿಳಿಸುವುದೇ ಬೇಡ.... ಸುಗುಣನ್ನ ನಮ್ಮ ಮನೆಗೆ ಕರೆಸಿಟ್ಟುಕೊಳ್ಳೋಣ. ಅನಂತನನ್ನು ಒಂದು ದಿನದ ಮಟ್ಟಿಗೆ ಬಂದುಹೋಗುವಂತೆ ಮಾಡಿ ಮದುವೆ ಶಾಸ್ತ್ರ ಮುಗಿಸಿಬಿಡೋಣ. ಅವನಿಗೂ ಈ ವಿಷಯವನ್ನು ತಿಳಿಸುವುದು ಬೇಡ"

ಲಲಿತ, ವೇದ ತಮ್ಮಲ್ಲೇ ಹೀಗೆ ನಿರ್ಧರಿಸಿಕೊಂಡರು. ವೇದ ಅನಂತನಿಗೆ ಬಂದು ಹೋಗುವಂತೆ ಟೆಲಿಗ್ರಾಂ ಕೊಟ್ಟಳು.

ಅನಂತ ಬಂದ. ಸುಗುಣ ಸಹ ಆಫೀಸಿಗೆ ಹೋಗದೇ ಮನೆಯಲ್ಲಿದ್ದಳು. ವೇದ ಗೋಪಾಲನೊಡನೆ ಮಾತನಾಡಿ, ಮಾರನೇ ದಿನವೇ, ಮನೆಯಲ್ಲಿ ಸುಗುಣಳ ತಂದೆ ತಾಯಿಯರ ಎದುರಿಗೆ ಅವರಿಬ್ಬರ ಮದುವೆ ನಡೆಯುವಂತೆ ಏರ್ಪಾಡು ಮಾಡಿದಳು. ಗೋಪಾಲನ ಮುಖ ಕೆಟ್ಟುಹೋಗಿತ್ತು.

"ಇದೆಲ್ಲಾ ಏನು? ಯಾಕೆ ಗಡಿಬಿಡಿ?" ಎಂದು ಕಾರಣವಿಲ್ಲದೇ ಹರಿಹಾಯ್ದ....

"ಈ ದಿನ ತಪ್ಪಿದರೆ, ಇನ್ನು ಅನಂತನಿಗೆ ಗುರುಬಲವಿಲ್ಲ.... ಸುಮ್ಮನೇ ಮುಂದುವರಿಸಿದರೆ ಎಷ್ಟು ದಿನ ಕಾಯಬೇಕಾಗುತ್ತದೋ, ಮದುವೆ ಅಂತ ಆಗಲಿ, ಅವನ ಪರೀಕ್ಷೆ ಮುಗೀಲಿ, ಆಮೇಲೆ ರಿಸೆಪ್ಷನ್ ಇಟ್ಟುಕೊಂಡು ನೆಂಟರಿಷ್ಟರನ್ನು ಕರೆದರಾಯಿತು." ಗೋಪಾಲನಿಗೆ ಈ ಸಲಹೆ ಹಿಡಿಸಿತ್ತು ಆದರೆ ಅನಂತ ವಿರೋಧಿಸಿದ್ದ.

"ನಾನು ಇನ್ನೂ ಎರಡು ವರ್ಷಬೇಕಾದ್ರೂ ಕಾಯ್ತೀನಿ" ಎಂದಿದ್ದ.

"ಸುಗುಣ ಕಾಯಬೇಕಲ್ಲ, ನೋಡು ವಿರಹದಿಂದ ಹೇಗಾಗಿದ್ದಾಳೆ?"

ಆಗ ಅವಳನ್ನು ತದೇಕವಾಗಿ ನೋಡಿದ್ದ. ಹೌದು ಆ ದಿನಕ್ಕಿಂತ ಕೃಶವಾಗಿರುವಂತೆ ಅನ್ನಿಸಿತು. ಅವಳೊಡನೆ ಮಾತನಾಡಿ, ಕಾರಣ ತಿಳಿದು ಕೊಳ್ಳುವ ಆಸೆಯಾಗಿತ್ತು. ಅತಿ ಮೌನವನ್ನು ಪ್ರಕಟಿಸಿದ್ದ ಅವಳು, ಪ್ರಶ್ನೆಯಾಗಿ ಕಂಡಿದ್ದಳು.

ಮದುವೆಯ ಕಲಾಪ ಮುಗಿದ ನಂತರ, ಅವಳ ತಂದೆ ತಾಯಿ ಅವಳನ್ನು ಬಿಟ್ಟು ಹೊರಟು ಹೋಗಿದ್ದರು. ಗೋಪಾಲನ ಆದೇಶದಂತೆ ಸುಗುಣ ಸುಸ್ತಾದವಳಂತೆ ಮಲಗಿದ್ದಳು.

"ದೊಡ್ಡಮ್ಮ ಅವಳಿಗೇನಾಗಿದೆ! ಯಾಕೆ ಮಲಗಿಬಿಟ್ಟಳು!?" ಅನಂತ ಆತಂಕದಿಂದ ಪ್ರಶ್ನಿಸಿದಾಗ ವೇದಮ್ಮ ನಕ್ಕಿದ್ದಳು.

"ನಂಗೆ ಗೊತ್ತಿಲ್ಲಪ್ಪ ನೀನೇ ಕೇಳಿ ತಿಳಿದುಕೋ. ಆದರೆ ಈಗ

ಎಬ್ಬಿಸಬೇಡ, ರಾತ್ರಿ ಚೆನ್ನಾಗಿ ವಿಚಾರಿಸಿಕೋ..." ತಮಾಷೆಯಿಂದ ಆಡಿದ್ದಳು.

"ಅವಳು ಹೀಗೇ ಮಲಗಿದ್ರೆ ವಿಚಾರಿಸಿದ ಹಾಗೇನೇ ವೈರಸ್ ಫಿವರ್ ಆಗಿದ್ರೆ...." ಅನಂತನೂ ತನಗೆ ತಿಳಿದಂತೆ ಮಾತನಾಡಿದ್ದ.

"ಎಂತಹ ಜ್ವರವಿದ್ರೂ ನಿನಗೆ ಹೆದರಲೇಬೇಕು..." ಮತ್ತೆ ನಕ್ಕಳು.

"ಇದರಲ್ಲಿ ನಗುವಂಥಾದ್ದೂ ಏನು?"

"ಏನೂ ಇಲ್ಲ.... ನೀನೇನು ತಿಳುವಳಿಕೆ ಇಲ್ಲದ ಹುಡುಗನೇ... ನಿನ್ನ ಪರೀಕ್ಷೆ ಯಾವಾಗ?"

"ಮುಂದಿನವಾರ"

"ಹಾಗಾದ್ರೆ ನೀನು ಅವಳಿಂದ ದೂರವಿರುವುದೇ ಒಳ್ಳೆಯದು. ಜ್ವರ ಬಂದರೆ ಕಷ್ಟ...."

"ನೀವೆಲ್ಲಾ ಸೇರಿ ನನ್ನಿಂದ ಏನನ್ನೋ ಮುಚ್ಚಿಡ್ತಾ ಇದೀರ. ಟೆಲಿಗ್ರಾಂ ಕೊಟ್ಟು ಕರೆಸಿ, ಹುಷಾರಿಲ್ಲದವಳ ಜತೆ ಆತುರಾತುರವಾಗಿ ಮದುವೆ ಮುಗಿಸುವ ಅವಾಂತರವೇನಿತ್ತು?"

"ನಿನ್ನ ಹೆಂಡತೀನ ಕೇಳು, ಅವಳೇ ಎಲ್ಲಾ ಹೇಳ್ತಾಳೆ" ಎಂದು ಲಲಿತಾ ಸಹ ತಮಾಷೆ ಮಾಡಿದಾಗ ಅವನಿಗೆ ರೇಗಿಹೋಗಿತ್ತು.

"ಆಗಲಿ ಈಗಲೇ ಕೇಳ್ತೀನಿ" ಎಂದು ಅವಳು ಮಲಗಿದ್ದ ರೂಮಿಗೆ ಬಂದಿದ್ದ. ಮುಸುಕು ಬೀರಿ ಮಲಗಿದ್ದವಳು ಅವನು ಬಂದುದು ತಿಳಿದರೂ ಅಲುಗಾಡಲಿಲ್ಲ. ಅಲ್ಲೇ ಕೂತಿದ್ದ ಸುಗುಣಳ ತಂಗಿಯ ಕಡೆ ನೋಡಿ ನಕ್ಕು ಹೊರಗೆ ಹೋಗಿದ್ದ. ಲಲಿತ ವೇದ ಮುಸಿಮುಸಿ ನಕ್ಕಿದ್ದರು. ಅವನಿಗೆ ಕೋಪ ಹಚ್ಚಾಯಿತು ಆ ರಾತ್ರಿ ಸಂಪ್ರದಾಯದಂತೆ ಅವನು ಸುಗುಣಳೊಂದಿಗೆ ಮಲಗಲು ನಿರಾಕರಿಸಿದ.

"ನನ್ನೊಡನೆ ಮಾತನಾಡುವ ಆಸೆ ಇದ್ದರೆ ಅವಳಾಗಿಯೇ ಬಂದು ಮಾತನಾಡಲಿ, ನನಗೇನೂ ಆಸೆ ಇಲ್ಲ" ಉದಾಸೀನವನ್ನು ಪ್ರಕಟಿಸಿದ.

"ಏನೋ ಹೀಗಂತೀಯಾ... ನೀನೇ ಹೋಗಿ ಮಾತನ್ನಾಡಿಸು... ಏನೀಗ?"

"ಜ್ವರ ಅಂತ ನರಳ್ತಾ ಮಲಗಿರುವವಳ ಜತೆ ಏನು ಮಾತಿರುತ್ತೆ?" ಅವಳ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳೊಕ್ಕೆ ನೀವೆಲ್ಲಾ ಇದೀರಲ್ಲ" ತುಸು ಮುನಿಸಿನಿಂದ ನುಡಿದ.

"ಹೆಂಡತಿಗೆ ಜ್ವರ ಅಂತ ಇವನಿಗೆ ಕೋಪ...." ನಗೆಯಾಡಿದ್ದರು.

ಹೆದರಿಕೆಗೋ, ಆತಂಕಕ್ಕೋ ಸುಗುಣಳ ಜ್ವರದ ತಾಪ ಹೆಚ್ಚುತ್ತಾ ಹೋಯಿತು. ಭಯಗೊಂಡು ಅವಳನ್ನು ನರ್ಸಿಂಗ್ ಹೋಂಗೆ ಸೇರಿಸಿದ್ದರು.

ಬೇಸರಗೊಂಡ ಅನಂತ ಮಾರನೇ ದಿನವೇ ವಾಪಸ್ಸು ಹೊರಟುಹೋಗಿದ್ದ.

ಆದರೆ ಆಮೇಲೆ ಏನನ್ನಿಸಿತ್ತೋ, ಅವಳಿಗೆ ಕಾಗದ ಬರೆದಿದ್ದ. ಆ ಕಾಗದ ಗೋಪಾಲನ ಕೈ ಸೇರಿತ್ತು. ಅವನು ಹರಿದು ಹಾಕಿದ್ದ ಒಂದು ವಾರದ ನಂತರ ಸುಗುಣ ಚೇತರಿಸಿಕೊಂಡು ಮನೆಗೆ ಬಂದಿದ್ದಳು. ಅವಳ ಆರೈಕೆ ಪ್ರಾರಂಭವಾಯಿತು.

ಅವಳಿಂದ ಮರುತ್ತರ ಬರದಿದ್ದಾಗ ಅವನು ಮತ್ತೆ ಪತ್ರ ಬರೆಯಲಿಲ್ಲ. ಪರೀಕ್ಷೆ ಮುಗಿದೊಡನೆ ನೇರವಾಗಿ ಮನೆಗೆ ಬಂದಿದ್ದ. ಬಾಗಿಲಿನಲ್ಲಿ ಅವನನ್ನು ಕಂಡೊಡನೆ ಸುಗುಣ ಬಿಳುಚಿಹೋದಳು. ಹಾಗೆ ಜ್ಞಾನವಿಲ್ಲದವಳಂತೆ ವಾಲಿದಳು. ಅನಂತ ಸರ್‍ರನೆ ಬಂದು ಅವಳನ್ನು ಹಿಡಿದುಕೊಂಡಿದ್ದ.

"ನನ್ನನ್ನು ನೋಡಿದ ಕೂಡಲೇ ಇವಳಿಗೇನಾಗುತ್ತೆ! ಅಥವಾ ನಾಟಕವೋ" ಅಂತ ಅನ್ನಿಸದೇ ಇರಲಿಲ್ಲ. ವೇದ ಸರ್‍ರನೆ ಬಂದಿದ್ದಳು.

"ದೊಡ್ಡಮ್ಮ... ನೀವು ಅವಾಂತರ ಮಾಡಿದಿರಿ. ಇವಳಿಗೇನೋ ಕೆಟ್ಟ ಕಾಯಿಲೆ ಇದೆ, ನನ್ನನ್ನು ನೋಡಿ ಏಕೆ ಹೆದರಿದಳು? ನಾನೇನು ಮಾಡಿದೆ?"

"ಅವಳೀಗ ನಾಜೂಕಾಗಿದಾಳೆ, ನಿನಗೆ ಅದು ಅರ್ಥವಾಗುವುದಿಲ್ಲ. ನೀನು ದಿಢೀರನೇ ಬಂದು ನಿಂತಾಗ ಗಲಿಬಲಿಗೊಂಡಿರಬಹುದು. ನೀನು ಕೈಕಾಲು ತೊಳೆದುಕೊಂಡು ಹೋಗಿ ಮಾತನಾಡಿಸು. ಅವಳಿಗೆ ಏನೂ ಆಗಿಲ್ಲ"

"ಹಾಗಾದ್ರೆ ಏನು ಈ ನಾಟಕ...?"

"ಹಾಗೇ ತಿಳಕೋ... ಏನೂಂತ ನೀನೇ ವಿಚಾರಿಸು"

"ಆಗಲಿ ವಿಚಾರಿಸ್ತೀನಿ, ಖಂಡಿತಾ ವಿಚಾರಿಸ್ತೀನಿ, ಬಿಡಲ್ಲ"

ಸುಗುಣ ಅವನಿಗಾಗಿ ಕಾದು ಕುಳಿತಿರಲಿಲ್ಲ. ಅವಳು ಎಲ್ಲಿದ್ದಳೋ... ಗೋಪಾಲ ಮಾತ್ರ ಆ ಸಮಯವನ್ನು ಎದುರಿಸಲು ಅಶಕ್ಯನೆಂಬಂತೆ ಯಾವುದೋ ಪಾರ್ಟಿ ಇದೆ ಎಂದು ಹೊರಟುಹೋಗಿದ್ದ. ಸುಗುಣಳಿಗೆ ಕೆಲವು ಸೂಕ್ತ ಸಲಹೆಗಳನ್ನು ನೀಡಿದ್ದ.

ಅವಳನ್ನೇ ನಿರೀಕ್ಷಿಸುತ್ತಾ ಕೂತಿದ್ದ ಅನಂತನಿಗೆ ತೂಕಡಿಕೆ ಬರಲಾರಂಭಿಸಿತ್ತು. ಅವಳೊಡನೆ ತನ್ನ ಮದುವೆ ನೆರವೇರಿದೆ. ಇದು ನನ್ನ ಮೊದಲ ರಾತ್ರಿ ಅವಳು ಈ ದಿನವೂ ಬರದೇ ಹೇಗೆ ಉಳಿದಾಳು ಎಂದು ಅವಳಿಗಾಗಿ ಕಾದಿದ್ದ. ಎಷ್ಟೋ ಹೊತ್ತಿನ ನಂತರ ಅವಳು ಬಂದು ರೂಮಿನ ಬಾಗಿಲನ್ನು ಭದ್ರಪಡಿಸಿದಾಗ ಅವನು ತಬ್ಬಿಬ್ಬು.

ಅವಳು ಹೆದರುತ್ತಿರಲಿಲ್ಲ, ಏನನ್ನೋ ನಿರ್ಧರಿಸಿದವಳಂತೆ ತಾನೇ ಅವನ ಬಳಿಗೆ ಬಂದು ಸರ್‍ರನೆ ಅವನ ಕಾಲುಗಳನ್ನು ಹಿಡಿದಳು. ಬಿಡಿಸಿಕೊಳ್ಳಲು

ಹೆಣಗಿದ. "ಕ್ಷಮಿಸಿ...ನನ್ನನ್ನು ಕ್ಷಮಿಸಿ....ನಾನು ಪಾಪಿ" ಎಂದು ಅವಳು ನುಡಿದಿದ್ದು ಕೇಳಿಸಿತ್ತು.

"ಸುಗುಣ ಇದೇನಿದು? ಏಳು" ಎನ್ನುತ್ತಾ ಅವಳ ತೋಳುಗಳನ್ನು ಹಿಡಿದು ನಿಲ್ಲಿಸಲು ನೋಡಿದ. ಅವಳು ಹಿಂದಕ್ಕೆ ಸರಿದಳು.

"ಮುಟ್ಟಬೇಡಿ.... ಪ್ಲೀಸ್ ನನ್ನನ್ನು ಮುಟ್ಟಬೇಡಿ..." ಎನ್ನುತ್ತಾ ಹಿಂದೆ ಹಿಂದೆ ಸರಿದು ಗೋಡೆಗೊರಗಿದಳು.

"ಅವಳಿಗೇನೋ ಅನಾರೋಗ್ಯ ತನಗೆ ಮೋಸವಾಯಿತು" ಎಂದು ಹೆದರಿ, ಬಾಗಿಲನ್ನು ತೆಗೆಯಲು ಹೊರಟವನನ್ನು ತಡೆದಳು.

"ನಾನು.... ನಾನು ನಿಮ್ಮ ಹತ್ತಿರ ಸ್ವಲ್ಪ ಮಾತನಾಡಬೇಕು..."

"ತಡೀ ಎಲ್ಲರನ್ನು ಕರಿತೀನಿ, ಎಲ್ಲರೆದುರಿಗೆ ಹೇಳೂವಂತೆ..."

"ಇಲ್ಲ, ಇದು ನಿಮಗೆ ಮಾತ್ರ ತಿಳಿಯುವ ವಿಷಯ.... ನೀವು ತುಂಬಾ ಒಳ್ಳೆಯವರು, ನಿಮ್ಮ ಹತ್ತಿರ ಮುಚ್ಚು ಮರೆ ಮಾಡಲು ನನಗಿಷ್ಟವಿಲ್ಲ, ಆದ್ದರಿಂದ ಈಗಲೇ ತಿಳಿಸಿಬಿಡ್ತಿನಿ, ಈ ವಿಷಯ ತಿಳಿದ ನಂತರ ನೀವು ನನ್ನನ್ನು ಪತ್ನಿ ಅಂತ ಖಂಡಿತಾ ಸ್ವೀಕರಿಸುವುದಿಲ್ಲ. ಆದರೆ ನನಗೇನೂ ದುಃಖವಿಲ್ಲ"

ಅನಂತ ನಿಂತಂತೇ ಶಿಲೆಯಾಗಿದ್ದ....ಖಂಡಿತಾ ತನಗೇನೋ ಮೋಸವಾಗಿದೆ. ಅದಕ್ಕೆ ಎಲ್ಲರೂ ಸೇರಿ ಆತುರದಲ್ಲಿ ಮದುವೆ ಮಾಡಿದಾರೆ. ಇದರಲ್ಲಿ ಎಲ್ಲರೂ ಷಾಮೀಲಾಗಿದಾರೆ ಎಂದುಕೊಂಡ.

"ನನ್ನನ್ನು ಹೊಡೀರಿ, ಬಡೀರಿ, ಬೇಕಾದರೆ ಸಾಯಿಸಿಬಿಡಿ.....ನಿಮ್ಮನ್ನು ಮದುವೆಯಾದುದರಲ್ಲಿ ನನ್ನ ತಪ್ಪು ಏನೂ ಇಲ್ಲ, ತಪ್ಪೆಲ್ಲಾ ನಿಮ್ಮ ತಂದೆಯದು"

"ಅವರೇನು ಮಾಡಿದರು?" ಅನಂತ ಕೆರಳಿದ್ದ.

"ಅವರು ನಿಮಗೆ ಮೋಸ ಮಾಡಿದಾರೆ....ನನ್ನ ಮಾತನ್ನು ನಂಬಿ..."

"ತಂದೆ, ಮಗನಿಗೆ ಈ ವಿಷಯದಲ್ಲಿ ಮೋಸ ಮಾಡಲು ಹೇಗೆ ಸಾಧ್ಯ? ನಾನಿದನ್ನು ನಂಬುವುದಿಲ್ಲ ನೀನೇ ಮೋಸಗಾತಿ ಇರಬಹುದು"

"ಹಾಗಿದ್ದಿದ್ದರೆ ಈ ದಿನ ನಾನು ಸುಮ್ಮನಿರುತ್ತಿರಲಿಲ್ಲವೇ. ಇದೆಲ್ಲಾ ನಿಮ್ಮ ತಂದೆಯ ಉಪಾಯ...." ನಂಬಿಸುವಂತೆ ಮಾತನಾಡಿದಳು.

"ಅದರಿಂದ ಅವರಿಗೇನು ಲಾಭ....? ಯಾವ ತಂದೆಯೂ ತನ್ನ ಸ್ವಂತ ಮಗನಿಗೆ ಮೋಸ ಮಾಡುವುದಿಲ್ಲ" ಅನಂತ ಧೈರ್ಯದಿಂದ ಆಡಿದ್ದ.

"ನೀವು ಅವರನ್ನು ನಂಬಿ ಕೆಟ್ಟಿರಿ, ಅವರು ನಿಮ್ಮ ತಂದೆಯೇ ಅಲ್ಲ"

"ಏನಂದೆ? ನಿನ್ನ ತಲೆ ಕೆಟ್ಟಿದೆಯೇ...." ಕೋಪದಿಂದ ಕಿರುಚಿದ.

"ತಲೆ ಕೆಡುವ ಮೊದಲು ನಿಜಾಂಶವನ್ನು ನಿಮಗೆ ತಿಳಿಸಲೇಬೇಕು

ಅಂತ ನಿರ್ಧರಿಸಿದೆ ನೀವು ಅವರ ಮಗನಲ್ಲ.... ನಾನು ನಿಮ್ಮ ಪತ್ನಿ... ಆದರೆ ಅವರ ಪ್ರೇಯಸಿ, ನಾನು ಅವರ ಕಾಮಕ್ಕೆ ಬಲಿಯಾದವಳು"

"ಏನಂದೆ?" ಎನ್ನುತ್ತಾ ಹೊಡೆಯಲು ಕೈ ಎತ್ತಿದವನು ತಟಸ್ಥನಾದ. ಇದ್ದಕ್ಕಿದ್ದಂತೆ ಅವಳು ನಿಜವನ್ನು ಹೇಳುತ್ತಿರಬಹುದೇ... ಅಂತ ಅನ್ನಿಸಿದಾಗ ಮತ್ತೆ ಅವಳೊಡನೆ ಮಾತನಾಡುವ ಇಚ್ಛೆಯಾಗಲಿಲ್ಲ.

"ಹೋಗು... ನನ್ನೆದುರಿನಿಂದ ಹೊರಟುಹೋಗು...." ಎನ್ನುವಂತೆ ಸಂಜ್ಞೆ ಮಾಡಿ ಹಾಗೇ ಕುಸಿದು ಕೂತ.

"ಹೋಗ್ತೀನಿ, ಆದರೆ ನೀವು ನನ್ನನ್ನು ಪತ್ನಿ ಅಂತ ಸ್ವೀಕರಿಸದಿದ್ದರೂ, ನನಗೆ ದುಃಖವಿಲ್ಲ, ಆದರೆ ಆತನ ಮೇಲೆ ಸೇಡು ತೀರಿಸಿಕೊಳ್ಳಬೇಕು. ಆದ್ದರಿಂದ ದಯವಿಟ್ಟು ನನಗೆ ಇಲ್ಲೇ ಇರಲು ಅವಕಾಶ ಮಾಡಿಕೊಡಿ. ಇದಷ್ಟನ್ನೇ ನಾನು ಕೇಳಿಕೊಳ್ಳುವುದು ಅವರ ಸ್ನೇಹದಿಂದ ನಾನೀಗ ಗರ್ಭಿಣಿ ಅದು ಅವರ ಸ್ವಂತ ಮಗು, ಅದನ್ನು ಉಳಿಸಿಕೊಳ್ಳಲು ಅವರು ಈ ಉಪಾಯ ಮಾಡಿದರು. ಮಗುವನ್ನು ಅವರಿಗೆ ಕೊಟ್ಟು ನಾನು ಹೊರಟುಹೋಗುತ್ತೇನೆ. ಆಮೇಲೆ...." "ಗರ್ಭಿಣಿ ಹೆಂಗಸನ್ನು ನನ್ನ ತಲೆಗೆ ಕಟ್ಟುವಷ್ಟು ನೀಚನೇ.... ಹಾಗಾದರೆ ಖಂಡಿತಾ ಅವನು ನನ್ನ ತಂದೆಯಲ್ಲ ಇದು ಈ ದಿನ ತೀರ್ಮಾನ ವಾಗಲೇಬೇಕು ಎಂದುಕೊಂಡು ಹೊರಗೆ ಬಂದ. ಅಲ್ಲಿ ಮೂಲೆಯಲ್ಲಿ ಮಲಗಿದ್ದ ವೇದಮ್ಮನ್ನ ಎಬ್ಬಿಸಿದ.

ಗಾಬರಿಯಿಂದ ಎದ್ದವಳನ್ನು ತನ್ನ ರೂಮಿಗೆ ಎಳೆತಂದ.

"ದೊಡ್ಡಮ್ಮ ನೀವು ಹೇಳಿ.... ನಾನು ಯಾರ ಮಗ?" ನೇರವಾಗಿ ಅವನು ಕೇಳಿದಾಗ, ಅವಳು ಸುಗುಣಳ ಕಡೆ ನೋಡಿದಳು.

"ಇದೇನಮ್ಮಾ ಹಗರಣ? ಏನಿದೆಲ್ಲಾ....?"

"ನಾನು ಈ ಮನೆಯಲ್ಲಿ ಬೆಳೆದವನು, ನನಗೆ ತಿಳಿಯದ ಹೊಸ ವಿಚಾರಗಳನ್ನು ಈ ಹುಡುಗಿ ನನಗೆ ಹೇಳ್ತಿದಾಳೆ. ಎಲ್ಲರೂ ಸೇರಿ ನನಗೆ ಮೋಸ ಮಾಡಬೇಕೆಂದು ಎಷ್ಟು ದಿನದಿಂದ ಹೊಂಚು ಹಾಕಿದ್ದಿರಿ, ಹೇಳಿ"

"ನಿನಗೆ ಯಾರು ಮೋಸ ಮಾಡ್ತಾರೆ...? ಏನೋ ನಿನ್ನ ಮಾತು?"

"ಈ ತಲೆ ಸರಿ ಇಲ್ಲದಿರುವ ಹುಡುಗೀನ ನನಗೆ ಗಂಟು ಹಾಕೋಕ್ಕೆ ನಿಮಗೆ ಎಷ್ಟು ಆತುರ? ಅಲ್ವಾ? ಯಾಕೆ ಅಂತ? ಹೇಳಿ"

"ಏನಮ್ಮ ಸುಗುಣ.... ಈಗೇನಾಯ್ತು?.... ಏನಿದು?"

"ನನ್ನನ್ನು ಕ್ಷಮಿಸಿ.... ನಾನು ಇವರ ಪತ್ನಿಯಾಗಲು ಸಾಧ್ಯವೇ ಇಲ್ಲ" ಕೆಟ್ಟ ಮುಖ ಮಾಡಿದಳು.

"ಏನು ಹೇಳ್ತಿದೀಯಾ... ಮದುವೆಗೆ ಮುಂಚೆ ಅಷ್ಟು ಸ್ನೇಹದಿಂದ

ಇದ್ದವರಿಗೆ ಈಗ ಇದ್ದಕ್ಕಿದ್ದಂತೆ ಏನಾಯ್ತು?"

"ಅವಳ ತಲೆ ಕೆಟ್ಟಿದೆ, ಅವಳೀಗ ತಾಯಿಯಾಗಲಿದಾಳಂತೆ, ಅವಳ ಪ್ರಿಯಕರ ಯಾರು ಗೊತ್ತಾ? ನಮ್ಮ ಅಪ್ಪ.... ಸಾರಿ ನಾನು ಅವರ ಮಗನೇ ಅಲ್ಲವಂತೆ ಅವರು ನನ್ನ ಅಪ್ಪನಾಗಲು ಹೇಗೆ ಸಾಧ್ಯ! ಅಲ್ವಾ?" ಎತ್ತರದ ಧ್ವನಿಯಲ್ಲಿ ಹೇಳಿದ.

ವೇದಳ ಎದೆ ಢವಢವ ಹೊಡೆದುಕೊಂಡಿತು.

"ಸುಗುಣ, ಈ ವಿಷಯನ್ನು ನಿನಗ್ಯಾರು ಹೇಳಿದರು? ನೀನು ಹೇಳ್ತಿರುವುದು ನಿಜಾನಾ?" ಅವಳನ್ನು ಅಲುಗಾಡಿಸಿ ಕೇಳಿದಳು.

"ಹೌದು..." ಎಂದಿದ್ದಳು ತಲೆ ಬಗ್ಗಿಸಿ, ಅನಂತ ವೇದಮ್ಮನ ತೋಳನ್ನು ಹಿಡಿದ...."

"ನೋಡಿದ್ರಾ ದೊಡ್ಡಮ್ಮ.... ಯಾರಿಗೂ ತಿಳಿಯದ ವಿಷಯಗಳೆಲ್ಲಾ ಇವಳಿಗೆ ತಿಳಿದಿದೆ. ನಾನು ಯಾರ ಮಗ? ನೀವಾದ್ರೂ ಹೇಳಿ.... ನನಗೇಕೆ ಮೋಸ ಮಾಡಿದ್ರಿ? ನಿಜ ಏನೂಂತ ಈಗ್ಲಾದ್ರೂ ಹೇಳಿ" ಭುಜವನ್ನು ಅಲುಗಾಡಿಸಿದ.

"ನೀನು ಇವರ ಸ್ವಂತ ಮಗನಲ್ಲ ಅನ್ನುವ ವಿಷಯ ಮಾತ್ರ ನನಗೆ ತಿಳಿದಿತ್ತು. ಆದರೆ ಈ ಮೋಸ ಖಂಡಿತಾ ನನಗೆ ಗೊತ್ತಿರಲಿಲ್ಲ....." ಅವಳು ಕೈ ಹಿಡಿದು ದೈನ್ಯದಿಂದ ಹೇಳಿದಾಗ ಅವನು ಅವಡುಗಚ್ಚಿದ. ಒರಟಾಗಿ ಕೈಯನ್ನು ಬಿಡಿಸಿಕೊಂಡ.

"ಸರಿ, ಈ ದಿನ ಈ ಮನೆಯ ಋಣ ತೀರಿತು ನನಗೆ. ನನಗೆ ಯಾರೂ ಇಲ್ಲ, ನಾನು ಅನಾಥ..." ಎಂದು ಹೊರಟವನನ್ನು ತಡೆದಳು.

"ನಿನ್ನ ತಾಯಿ, ಲಲಿತಾ.., ನಿನ್ನ ದೊಡ್ಡಮ್ಮ, ನಾವು ಇದೀವಲ್ಲ.... ನೀನು ನಮ್ಮ ಮಗ.... ಆನಾಥನಲ್ಲ... ಅನಾಥನಲ್ಲ ಕಣೋ..." ಮತ್ತೆ ಕೈಯನ್ನು ಬಲವಾಗಿ ಹಿಡಿದಳು. ಅವನು ಕೊಡವಿಕೊಂಡ.

"ಸಾಕು ಈ ಬೂಟಾಟಿಕೆ ಮಾತು... ಸ್ವಂತ ಮಗನಲ್ಲದಿರುವುದರಿಂದಲೇ ಇಂತಹ ಮೋಸ... ಇಂತಹ ಮನೆಯಲ್ಲಿ ನಾನು ಇನ್ನು ಒಂದು ಗಳಿಗೆ ಇರಲಾರೆ" ಎನ್ನುತ್ತಾ ಬಾಗಿಲನ್ನು ತೆಗೆದು ಹೊರಟೇಬಿಟ್ಟ.

ವೇದಮ್ಮ ಗೊಳೋ ಎಂದು ಅತ್ತಾಗ ಸುಗುಣ ಸಮಾಧಾನಗೊಳಿಸಲು ನೋಡಿದಳು.

"ಹೋಗು, ನೀನೂ ಹೊರಟುಹೋಗು. ಇನ್ನು ಇಲ್ಲಿ ನಿನಗೇನು ಕೆಲಸ?" ಸಿಡುಕಿದಾಗ ಸುಗುಣ ಹೆದರಲಿಲ್ಲ.

"ನನಗೆ ಹೆರಿಗೆಯಾಗುವವರೆಗೂ ಈ ಮನೆಯಿಂದ ನನಗೆ ಬಿಡುಗಡೆ

ಇಲ್ಲ...." ಇದೆಲ್ಲಾ ನಿಮ್ಮ ಯಜಮಾನರದೇ ಉಪಾಯ ಎಂದು ನುಡಿದಾಗ ವೇದಮ್ಮ ಚಕಿತಳಾದಳು.

"ಅವರು ನನಗೆ ಎಲ್ಲವನ್ನು ಹೇಳಿದಾರೆ, ನೀವು ಅವರ ಪತ್ನಿ...ಆದರೆ ಎಲ್ಲವನ್ನೂ ಅನಂತನಿಗೆ ತಿಳಿಸಿರಲಿಲ್ಲ, ಆದರೆ ನಿಜವನ್ನು ತಿಳಿಸದೇ ಅನಂತನ ಪತ್ನಿಯಂತೆ ನಟಿಸಲು ನನ್ನಿಂದ ಸಾಧ್ಯವಿಲ್ಲ. ಗೋಪಾಲನ ಮಗುವನ್ನು ನನ್ನೊಡಲಲ್ಲಿಟ್ಟುಕೊಂಡು, ನಾನು ಅವರಿಗೆ ದ್ರೋಹ ಮಾಡಲಾರೆ. ನನ್ನ ಸ್ಥಿತಿ ಯಾರಿಗೂ ಬೇಡ. ಗರ್ಭವನ್ನು ತೆಗೆಸಲು ಒಪ್ಪಲಿಲ್ಲ, ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಬಿಡುವುದಿಲ್ಲ. ತಮ್ಮ ಆಸೆಯನ್ನು ತೀರಿಸಿಕೊಳ್ಳಲು ಸ್ವಾರ್ಥಿ ಯಾದರೂ ನನಗೆ ಮಾತ್ರ ಯಾವ ಆಸೆಯೂ ಉಳಿದಿಲ್ಲ ನನ್ನ ಹೆರಿಗೆ ಯಾಗುವವರೆಗೂ ನನಗೆ ಇಲ್ಲಿರಲು ಅವಕಾಶ ಕೊಡಿ. ಅಷ್ಟೇ ಸಾಕು...."

"ಎಂತಹ ನೀಚ ಕೆಲಸ ಮಾಡಿದೆ? ಇದನ್ನೆಲ್ಲಾ ಮುಂಚೆಯೇ ಏಕೆ ತಿಳಿಸಲಿಲ್ಲ?" ಯಾಕೆ ಈ ಕುತಂತ್ರ?"

"ತಿಳಿಸಿದ್ದರೆ, ಈ ಮದುವೆ ನಡೆಯುತ್ತಿರಲಿಲ್ಲ, ನನ್ನ ಮರ್ಯಾದೆ ಬೀದಿಪಾಲಾಗುತ್ತಿತ್ತು. ಕೆಲಸ ಕಳೆದುಕೊಂಡು, ಮನೆಯಿಂದ ಹೊರಬಿದ್ದು ಬೀದಿಯಲ್ಲಿ ಭಿಕ್ಷೆ ಬೇಡಬೇಕಾಗುತ್ತಿತ್ತು.... ನಾನು ಏನು ಮಾಡ್ಲೀ?"

"ಮೊದಲೇ ತಿಳಿದಿದ್ದರೆ, ನೀನು ಅವರನ್ನೇ ಮದುವೆಯಾಗಲು ಸಹಾಯ ಮಾಡುತ್ತಿದ್ದೆವು..."

"ಈ ವಯಸ್ಸಿನಲ್ಲಿ ಮೂರನೆಯ ಮದುವೆಯಾಗುವ ಆಲೋಚನೆ ಅವರಿಗಿರಲಿಲ್ಲ. ಅಲ್ಲದೇ ಈ ವಿಷಯ, ಅಂದರೆ ತನ್ನದೇ ಆದ ಸ್ವಂತ ಮಗು ಹುಟ್ಟಲಿರುವ ವಿಷಯ ಲಲಿತಮ್ಮನಿಗೆ ತಿಳಿಯಬಾರದು ಅಂತ..."

"ಈಗ ನೀನು ಏನೇ ಹೇಳಿದರೂ ನಡೆದು ಹೋದುದನ್ನು ಸರಿಪಡಿಸಲು ಸಾಧ್ಯವಿಲ್ಲ. ಅನಂತ ಅವರ ಮಗನಲ್ಲ ಎನ್ನುವ ವಿಷಯವನ್ನು ನೀನು ಅವನಿಗೆ ತಿಳಿಸಬಾರದಾಗಿತ್ತು. ಅವನಿಗೆ ಎಂತಹ ಆಘಾತ! ಛೆ...."

"ಸ್ವಂತ ಮಗನಿಗೆ ಯಾರಾದರೂ ಈ ರೀತಿ ದ್ರೋಹ ಮಾಡ್ತಾರಾ? ನೀವೇ ಹೇಳಿ"

ಅದರೇನಂತೆ! ಅವನು ನಮ್ಮ ಸಾಕು ಮಗ...ಲಲಿತನಿಗೋಸ್ಕರ ತಂದವರೂ ಅವರೇ....ಈಗ ಲಲಿತನಿಗೆ ತಿಳಿದರೆ ಏನು ಗತಿ?".

"ಲಲಿತನಿಗೆ ಆ ವಿಷಯ ತಿಳಿದುಹೋಯಿತು. ಹೊರಬಾಗಿಲಿನಲ್ಲಿ ನಿಂತಿದ್ದವಳು ಅನಂತ ಸಾಕುಮಗ ಎನ್ನುವುದನ್ನು ಕೇಳಿಸಿಕೊಂಡಳು. ಅವಳ ಹೃದಯ ಒಡೆದುಹೋಯಿತು. ಅದಕ್ಕೇ ತನ್ನ ಗಂಡ ಅವನನ್ನು ಅಷ್ಟು ದ್ವೇಷಿಸುತ್ತಿದ್ದ ಎನ್ನುವುದು ಅರ್ಥವಾಗಿ ಸಂಕಟವಾಯಿತು. ಅನಂತೂ...

ಅನಂತೂ ಎಂದು ಕೂಗಿ ಕೆಳಗೆ ಬಿದ್ದುಬಿಟ್ಟಳು. ಆ ಆಘಾತವನ್ನು ಅವಳಿಂದ ತಡೆದುಕೊಳ್ಳಲಾಗಿರಲಿಲ್ಲ.

ವೇದ, ಸುಗುಣ ಇಬ್ಬರೂ ಬಂದು ಎಬ್ಬಿಸಲು ನೋಡಿದರು ಅಲ್ಲಾಡಿಸಲಾಗಿರಲಿಲ್ಲ. ಸುಗುಣ ಹೆದರಿ ಚೀರಿ ಬಿದ್ದುಬಿಟ್ಟಳು. ವೇದ ದಿಕ್ಕು ತೋಚದವಳಂತೆ ಹಾಗೇ ನಿಂತಿದ್ದಳು. ಎಷ್ಟೋ ಹೊತ್ತಿನ ಬಳಿಕ ಗೋಪಾಲ ಮನೆಗೆ ಬಂದ. ಮುಂಬಾಗಿಲು ತೆರೆದೇ ಇತ್ತು. ಏನೋ ಅನುಮಾನದಿಂದ ಒಳಬಂದ. ಏನು ನಡೆದಿರಬಹುದು ಎಂದು ಊಹಿಸಿದ. ನೆಲದ ಮೇಲೆ ಬಿದ್ದಿದ್ದ ಲಲಿತಳ ಕಡೆ ನೋಡಿದ. ಮೂಲೆಯಲ್ಲಿ ಕೆಟ್ಟ ಮುಖ ಹೊತ್ತು ಕೂತಿದ್ದ ವೇದಳ ಕಡೆ ನೋಡಿದ. ಅವಳು ಕತ್ತೆತ್ತಲಿಲ್ಲ... ಸುಗುಣ ರೂಮಿನಲ್ಲೇ ಬಿದ್ದು ಹೊರಳಾಡಿದಳು.

"ಲಲಿತಾ... ನನ್ನನ್ನು ಕ್ಷಮಿಸು.... ಲಲಿತಾ" ಎಂದು ಅವನು ಗೋಳಾಡಿದಾಗ ವೇದ ಹೆದರಿದ್ದಳು, ವೇದ ಏನನ್ನು ನುಡಿಯಲಿಲ್ಲ.

ಸುಗುಣಳಾಗಲೀ, ಅನಂತನಾಗಲೀ ಕಾಣದಿದ್ದಾಗ ರೂಮಿನಲ್ಲಿರ ಬಹುದು ಎಂದುಕೊಂಡ.

"ವೇದ... ಹೇಳು ಲಲಿತಂಗೇನಾಯ್ತು.... ಹೇಳು ಅವಳನ್ನು ಕೊಂದವರು ಯಾರು? ಅವಳನ್ನು ಅಲುಗಾಡಿಸಿದ. ರೂಮಿನಿಂದ ಹೊರಬಂದ ಸುಗುಣ ನುಡಿದಳು.... ಅವಳ ಮುಖ ಧುಮುಗುಟ್ಟುತ್ತಿತ್ತು.

"ನೀವೇ.... ನಿಮ್ಮ ಹೆಂಡತಿಯನ್ನು ಕೊಂದವರು ನೀವೇ..."

"ಷಟಪ್...." ಎಂದು ನುಡಿದು, ಲಲಿತಳ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ರೋಧಿಸತೊಡಗಿದ. ಎಷ್ಟು ಹೊತ್ತಾದರೂ ಅನಂತನ ಸುಳಿವೇ ಇಲ್ಲವಾದಾಗ ಅವನು ಮನೆಬಿಟ್ಟು ಹೋಗಿರಬಹುದು ಎಂದೂಹಿಸಿದ. ಆದರೆ ಅವನು ಯಾರನ್ನು ಏನನ್ನು ಪ್ರಶ್ನಿಸಲಿಲ್ಲ. ಯಾರೂ ಅವನಿಗೆ ಯಾವ ವಿಷಯವನ್ನು ತಿಳಿಸಲಿಲ್ಲ. ಅವನು ನಿರೀಕ್ಷಿಸಿರದ ಘಟನೆ ಜರುಗಿತ್ತು. ಅವನು ಹೆದರಿದ "ಲಲಿತ ಅನಂತನಲ್ಲಿ ಜೀವವನ್ನೇ ಇಟ್ಟುಕೊಂಡಿದ್ದಳು.. ಈಗ ಅವನು ಬರಲೇಬೇಕು, ಅವನು ಎಲ್ಲಿದ್ದರೂ ಸರಿ ಕಾಲಿಗೆ ಬಿದ್ದು ಕೇಳಿಕೊಂಡು ಬರ್ತೀನಿ" ಎಂದು ಹುಡುಕಿಕೊಂಡು ಹೊರಟವನನ್ನು ಸುಗುಣ ತಡೆದಳು.

"ಈಗ ನೀವಾಗಿಯೇ ಅವರು ಮನೆಬಿಟ್ಟು ಹೋದರು ಅಂತ ಪ್ರಚಾರ ಮಾಡಿದ ಹಾಗಾಗುತ್ತೆ. ಎಲ್ಲರಿಗೂ ಎಲ್ಲಾ ವಿಷಯ ತಿಳಿಯುತ್ತೆ.... ಏನೂ ಬೇಡ"

ಗೋಪಾಲ ಸುಮ್ಮನಾದ. ಅವನ ಹೃದಯ ಒಡೆದುಹೋಗಿತ್ತು. ತಾನು ಆಡಿದ ನಾಟಕ ದುರಂತಕ್ಕೆ ಕಾರಣವಾಯಿತಲ್ಲ.. ಎಂದು ಮತ್ತೆ ಮತ್ತೆ ಅತ್ತ.

ಅಕ್ಕಪಕ್ಕದವರು ವಿಚಾರಿಸುವ ಮೊದಲೇ ತಾನೇ ಎಲ್ಲವನ್ನೂ ಮುಗಿಸಿ, ಲಲಿತ ಸತ್ತ ನಕ್ಷತ್ರ ಚೆನ್ನಾಗಿಲ್ಲವೆಂಬ ನೆವ ಹೂಡಿ, ಒಂದೇ ವಾರದಲ್ಲಿ ಆ ಮನೆಯನ್ನು ಬದಲಾಯಿಸಿದ. ಸುಗುಣಳ ತಂದೆ ತಾಯಿ ಬಂದು, ಅವಳನ್ನೇ ದೂಷಿಸಿ ಹೋಗಿದ್ದರು. ಈಗ ಉಳಿದವರು ಅವರು ಮೂರೇ ಜನ. ಯಾರಿಗೆ ಯಾರೂ ಸಮಧಾನ ಹೇಳುವ ಸ್ಥಿತಿಯಲ್ಲಿರಲಿಲ್ಲ. ಎಲ್ಲರೂ ಅಪರಾಧಿಗಳೇ, ವೇದಮ್ಮ ಎಂದಿನಂತೇ ಮನೆಕೆಲಸಗಳಲ್ಲಿ ತನ್ನನ್ನು ತಾನೇ ತೊಡಗಿಸಿಕೊಂಡಳು. ಸುಗುಣ ಅನಂತನಿಂದ ತಾನಾಗಿಯೇ ದೂರವಾದಳು. ಗೋಪಾಲನಿಗೆ ಹತ್ತಿರವಾಗಲಿಲ್ಲ, ಅವನನ್ನು ಕಂಡರೆ ಅಸಹ್ಯಗೊಳ್ಳುತ್ತಿದ್ದಳು. ಗೋಪಾಲ ಅವಳ ಯೋಗಕ್ಷೇಮವನ್ನು ವೇದಮ್ಮನಿಗೆ ವಹಿಸಿದ.

ವೇದಮ್ಮನಿಗೆ ಆಗಾಗ್ಗೆ ಅನಂತನ ನೆನಪು ಕಾಡುತ್ತಿತ್ತು. ಈಗ ಎಲ್ಲಿದಾನೋ... ಹೇಗಿದಾನೋ... ಛೆ.... ಈ ಗೋಪಾಲ ಎಂತಹ ಅನ್ಯಾಯ ಮಾಡಿಬಿಟ್ಟ ಎಂದು ಬೈದುಕೊಳ್ಳುತ್ತಿದ್ದಳು. ಅವನ ಆಸೆಯಂತೆ ಅವರದೇ ಆದ ಸ್ವಂತ ಮಗು ಬರುವ ಸಂಭ್ರಮ ಯಾರಲ್ಲೂ ಇರಲಿಲ್ಲ.

*   *   *

ದಿಕ್ಕೆಟ್ಟವನಂತೆ ಕತ್ತಲೆಯಲ್ಲಿ ದುಡುದುಡನೆ ನಡೆದುಹೋಗುತ್ತಿದ್ದವನನ್ನು ಬೀಟ್ ತಿರುಗುತ್ತಿದ್ದ ಗೂರ್ಖ ಹಿಡಿದು ನಿಲ್ಲಿಸಿದ. ಆಗ ಅನಂತನಿಗೆ ಎಚ್ಚರ ಬಂದಂತಾಯಿತು. ತಾನು ಎಷ್ಟು ದೂರ ನಡೆದು ಬಂದಿರಬಹುದು ಎಂದು ಅರಿವಾಗಲಿಲ್ಲ. ಅವನನ್ನೇ ಕೇಳಿದ.... ಗೂರ್ಖಾ ಅಬ್ಬರಿಸಿದ.

"ಹಮ್ ಸೆ ಪೂಚ್ ತಾ ಹೈ.... ಥಲೋ ಸ್ಟೇಷನ್ ಕೋ..."

"ಸುನೋ.... ಮುಝೆ ಕುಛ್ ಯಾದ್ ನಹೀ...." ಎಂದಿದ್ದ ತನಗೆ ತಿಳಿದ ಹಿಂದಿಯಲ್ಲಿ

"ಬಹುತ್ ಛಡ್‌ಗಯಾ ಹೈ.... ಇಸಲಿಯೇ ಯಾದ್ ನಹೀ.... ಉದರ್ ಪಥಾ ಚಲ್ತಾ ಹೈ ಥಲೋ... ಥಲೋ...." ಒರಟಾಗಿ ತಳ್ಳಿದ.

"ಮೈ ಪೀಯಾ ನಹೀ... ಮೈ ಪೀಯಾ ನಹೀ... ಎಂದು ಅವನು ತಪ್ಪಿಸಿಕೊಳ್ಳಲು ನೋಡಿದಾಗ ಅವನು ಸೀಟಿ ಊದಿದ್ದ. ಹತ್ತಿರದಲ್ಲೆ ಮತ್ತೆರಡು ಸೀಟಿಗಳು ಕೇಳಿದ್ದವು. ಪಹರೆ ತಿರುಗುತ್ತಿದ್ದವರು ಓಡಿ ಬಂದಿದ್ದರು. ಒಬ್ಬ ಸೀದಾ ಅನಂತನ ಷರಟಿನ ಕಾಲರನ್ನು ಹಿಡಿದಿದ್ದ. ಅವನಿಗೆ ಉಸಿರು ಕಟ್ಟಿದಂತಾಗಿತ್ತು. ಅವರೊಡನೆ ಈಗ ಏನು ಹೇಳಿದರೂ, ಅವರುಗಳು ನಂಬುವುದಿಲ್ಲ. ತಾನು ಹೇಗೂ ಮನೆ ಬಿಟ್ಟು ಬಂದವನು, ಲಾಕಪ್‌ನಲ್ಲೇ ಈ ರಾತ್ರಿ ಕಳೆದರಾಯಿತು ಎಂದುಕೊಂಡು ಕತ್ತು ಬಗ್ಗಿಸಿ ಅವರೊಡನೆ ಬಂದ ನೈಟ್‌ಡ್ಯೂಟಿಯ ಎಸ್.ಐ. ಅವನ ಕಡೆ ಕ್ರೂರವಾಗಿ ನೋಡಿ ಹೂಂ ಎಂದು

ಹೂಂಕರಿಸಿ ಬೆತ್ತವನ್ನು ಮೇಜಿನ ಮೇಲೆ ಕುಟ್ಟಿದ. ಅದೇಕೆಂದು ಅನಂತನಿಗೆ ಅರ್ಥವಾಗಿರಲಿಲ್ಲ. ಪೊಲೀಸರು ಅವನನ್ನು ಲಾಕಪ್‌ಗೆ ತಳ್ಳಿದ್ದರು. ಅವನು ಪ್ರತಿಭಟಿಸದೇ ಹಾಗೇ ಒಂದು ಕಡೆ ಕೂತ.

ಬೆಳಗಾಗಿ ಎಷ್ಟೋ ಸಮಯ ಕಳೆದ ನಂತರ, ಹಗಲ ಡ್ಯೂಟಿಯ ಎಸ್.ಐ. ಬಂದ. ಒಬ್ಬೊಬ್ಬರನ್ನಾಗಿ ಕರೆದು ವಿಚಾರಿಸಿದ. ಅನಂತ ನಿಜವನ್ನೇ ನುಡಿದರೂ ಬಹುಶಃ ಅವನಿಗೆ ನಂಬಿಕೆ ಬಂದಿರಲಾರದು.

"ಮನೆಬಿಟ್ಟು ಅಲ್ಲಿ ಏಕೆ ತಿರುಗಾಡುತ್ತಿದ್ದೆ...." ಎಂದು ಜಪ್ತಿ ನಡೆಸಿದಾಗ ಅವನ ಜೇಬಿನಲ್ಲಿ ಬಿಡಿಗಾಸು ಸಿಕ್ಕಿರಲಿಲ್ಲ. ವಿಚಿತ್ರವಾಗಿ ನೋಡುತ್ತಾ

"ಮನೆಯಿಂದ ಏಕೆ ಓಡಿ ಬಂದೆ?" ಎಂದು ಪ್ರಶ್ನಿಸಿದ್ದ.

"ನನಗೆ ಅಲ್ಲಿರಲು ಮನಸ್ಸಿಲ್ಲ... ಅದಕ್ಕೆ"

"ಏನಾದರೂ ಜಗಳ ಕದನ...ನಡೀತಾ?"

"ಏನಿಲ್ಲ...." ಎಂದಿದ್ದ ಕತ್ತು ತಗ್ಗಿಸಿ.

"ಹಾಗಾದರೆ ಆತ್ಮಹತ್ಯೆ ಮಾಡಿಕೊಳ್ಳಲು ಹೊರಟಿದ್ದೆಯಾ.... ಅದೂ ಸಹ ಅಪರಾಧವೇ..."

"ಆತ್ಮಹತ್ಯೆ ಮಾಡಿಕೊಳ್ಳಲು ನಾನು ಇಷ್ಟು ದೂರ ಬರಬೇಕಾಗಿರಲಿಲ್ಲ. ನಮ್ಮ ಮನೇಲೇ ಬಾವಿ ಇತ್ತು ಅಲ್ಲದೆ ನಾನು ಅಂಥ ಹೇಡಿಯಲ್ಲ?"

"ಕೇಳಿದಷ್ಟಕ್ಕೆ ಉತ್ತರ ಕೊಡು. ನಿನ್ನ ಮನೇಲಿ ಫೋನ್ ಇದೆಯಾ?"

"ಇಲ್ಲ...." ಎಂದು ನುಡಿದಿದ್ದ. ಇನ್ಸ್‌ಪೆಕ್ಟರ್ ಅವನ ಹೆಸರು, ವಿಳಾಸವನ್ನು ಬರೆಸಿಕೊಂಡು ಸಹಿ ಹಾಕಿಸಿಕೊಂಡ.

"ನೀನಿನ್ನು ಹೋಗಬಹುದು, ಒಂದು ರಾತ್ರಿ ಲಾಕಪ್‌ನಲ್ಲಿ ಕಳೆದಿದೀಯ ಅದನ್ನು ಮರೀಬೇಡ. ಸುಮ್ಮನೇ ನೇರವಾಗಿ ಮನೆಗೆ ಹೋಗು"

"ಹುಂ" ಎಂದು ಹೇಳಿ ಆಚೆ ಬಂದರೂ, ಅಲ್ಲಿಯೇ ಮುಂದಿದ್ದ ಕಲ್ಲುಬೆಂಚಿನ ಮೇಲೆ ಕೂತ.

"ಇಲ್ಲಿ ಕೂತ್ಕೋಬೇಡ.... ಎದ್ದು ಹೋಗು..." ಎಂದು ಪೊಲೀಸ್ ಪೇದೆ ಗದರಿಸಿದಾಗ ಎದ್ದು ನಿಲ್ಲಲಾಗದೇ ದೊಪ್ಪನೆ ಕುಸಿದು ಬಿದ್ದ. ಎಲ್ಲರೂ ಹೆದರಿ ದೂರದಿಂದ ನೋಡಿ, ತಮ್ಮತಮ್ಮಲ್ಲೇ ಪಿಸುದನಿಯಲ್ಲಿ ಮಾತನಾಡಿ ಕೊಂಡರು. ಎಷ್ಟು ಹೊತ್ತಾದರೂ ಅವನು ಏಳದಿದ್ದಾಗ ಅವರುಭಯದಿಂದ ಒಳಗೆ ಓಡಿದ್ದರು.

ಎಸ್.ಐ. ಪುರುಷೋತ್ತಮ ಮುಖ ಕೆಳಗೆ ಮಾಡಿ ಬಿದ್ದವನನ್ನು ತಿರುಗಿಸಿ ನೋಡಿದ. ಅವನಿಗೂ ಭಯವೆನ್ನಿಸಿತು.

"ಯಾರಾದ್ರೂ ನೀರು ತನ್ರೋ...." ಕಿರುಚಿದ್ದ.

ನೀರನ್ನು ಸಿಂಪಡಿಸಿದಾಗ ಅನಂತ ಕಣ್ಣುಬಿಟ್ಟ....

"ಏಯ್ ಏನಾಯ್ತು ನಿನಗೆ?" ಯಾರೋ ಪ್ರಶ್ನಿಸಿದ್ದರು, ಒರಟಾಗಿ,

"ನೀರು... ನೀರು..." ಅಂತ ಕ್ಷೀಣವಾಗಿ ನುಡಿದಾಗ ಪುರಷೋತ್ತಮ ಅವನನ್ನು ಎಬ್ಬಿಸಿ ಕೂರಿಸಿ, ಕುಡಿಯಲು ನೀರನ್ನು ಕೊಟ್ಟ ನೀರನ್ನು ಕುಡಿದ. ಸ್ವಲ್ಪ ಹಾಯೆನ್ನಿಸಿತ್ತು... "ಥ್ಯಾಂಕ್‌ಯೂ ಇನ್ಸ್‌ಪೆಕ್ಟರ್" ಎಂದಿದ್ದ.

"ನಡೀ.... ನಿನ್ನ ಮನೆಗೆ ನಿನ್ನನ್ನು ಬಿಟ್ಟು ಬರ್ತಾರೆ.... ಇಲ್ಲಿ ಕಸ್ಟಡಿಯಲ್ಲಿದ್ದವನು ನೀನು ನಿನಗೇನಾದರೂ ಆದರೆ ಕಾಂಪ್ಲಿಕೇಷನ್ ಆಗುತ್ತೆ"

"ಆ ಮನೆಗೆ ಹೋಗಲು ನನಗಿಷ್ಟವಿಲ್ಲ, ದಯವಿಟ್ಟು ಬಲವಂತ ಮಾಡಬೇಡಿ..."

"ಹಾಗಾದ್ರೆ ಎಲ್ಲಿಗೆ ಹೋಗ್ತೀಯಾ? ನಿನ್ನ ಹತ್ತಿರ ಹಣವೂ ಇಲ್ಲವಲ್ಲ"

"ಆ ಮನೆಯ ಋಣವೇ ಬೇಡ ಅಂತ ಬಂದವನು ನಾನು, ಹಣ ತರುವ ಪ್ರಶ್ನೆಯೇ ಇಲ್ಲ, ನಾನು ಇಲ್ಲೇ ಇರ್ತೀನಿ."

"ಇಲ್ಲಿ ಹಾಗೆಲ್ಲ ನಿನ್ನನ್ನು ಇಟ್ಟುಕೊಳ್ಳೊಕ್ಕೆ ಆಗಲ್ಲ"

"ನನಗೆ ಏನಾದ್ರೂ ಕೆಲಸ ಕೊಡಿಸಿ..."

"ಕೂಲಿನಾಲಿ ಮಾಡುವವನಂತೆ ಕಾಣಿಸುವುದಿಲ್ಲ, ಏನು ಓದಿದೀಯ?"

"ಇಂಜಿನಿಯರಿಂಗ್ ಮುಗಿಸಿದೀನಿ ರಿಸಲ್ಟ್ ಬಂದಿಲ್ಲ ಇನ್ನು..."

"ಸರಿ ನೋಡೋಣ... ತಕ್ಷಣಕ್ಕೆ ಏನು ಮಾಡ್ತೀಯಾ?"

"ನಂಗೊತ್ತಿಲ್ಲ" ಎನ್ನುತ್ತ ಕೊರಳನ್ನು ಸವರಿಕೊಂಡ. ಸರ ಕೈಗೆ ಸಿಕ್ಕಿತು ಅದು ಲಲಿತನ ತಂದೆಯ ಸರವಂತೆ, ತಾಯಿ ಪ್ರೀತಿಯಿಂದ ಕೊಟ್ಟಿದ್ದು ಅಂತ ಅನ್ನಿಸಿದರೂ ಅವಳೂ ನನ್ನ ಸ್ವಂತ ತಾಯಿಯಲ್ಲ ಅಂದ ಮೇಲೆ ಇದಕ್ಕೆ ಪ್ರೀತಿ ಎಲ್ಲಿದೆ ಎಂದುಕೊಂಡರೂ, ತಾಯಿ ತನ್ನನ್ನು ಸಾಕಿ ಬೆಳೆಸಿದ ದಿನಗಳು ನೆನಪಿಗೆ ಬಂದು ಕಣ್ಣಲ್ಲಿ ನೀರುಕ್ಕಿತು. ಒಂದು ದಿನವೂ ತನ್ನನ್ನು ಸಾಕಿದ ಮಗ ಎನ್ನುವಂತೆ ಅನಾದರಣೆ ಮಾಡಲಿಲ್ಲ, ತನ್ನ ಪರವಹಿಸಿ ತನ್ನ ಗಂಡನೊಡನೆ ವಾದ ಮಾಡುತ್ತಿದ್ದಳು. ನಾನೀಗ ಪೊಲೀಸ್ ಸ್ಟೇಷನ್ ಬಳಿ ಉಪವಾಸದಿಂದ ಬಳಲಿ ಬಿದ್ದು ಬಿಟ್ಟಿದೀನಿ ಅಂತ ತಿಳಿದರೆ ಅವಳ ಎದೆ ಒಡೆಯುವುದಿಲ್ಲವೆ... ಊರಿಗೆ ಬಂದಾಗೆಲ್ಲಾ ತಿಂಡಿಗಳನ್ನು ಮಾಡಿಸಿಕೊಟ್ಟು ಹೇಗೆ ಉಪಚರಿಸು ತ್ತಿದ್ದಳು.... ಅವನ ಕೈ ಕೊರಳಿನಿಂದ ಇಳಿಯಿತು. ಕಣ್ಣೀರನ್ನು ಒರೆಸಿಕೊಂಡ.

"ತಗೋ.... ಈ ಹತ್ತು ರೂಪಾಯಿ.... ಹೊರಗೆ ಎಲ್ಲಾದರೂ ಹೋಗಿ ತಿಂಡಿ ತಿನ್ನು" ಎನ್ನುತ್ತಾ ಇನ್ಸ್‌ಪೆಕ್ಟರ್ ಕೈ ನೀಡಿದಾಗ ಅನಂತ ಕೈ ಚಾಚಲಿಲ್ಲ.

"ಹೋಗ್ರೋ ಯಾರಾದ್ರೂ ಇವನಿಗೆ ತಿನ್ನಕ್ಕೆ ಏನಾದರೂ ತಂದುಕೊಡಿ"

ಎಂದು ಕಳಿಸಿದ್ದ. ಅಷ್ಟರಲ್ಲಿ ಯಾವುದೋ ಫೋನ್ ಕಾಲ್ ಬಂದಿತೆಂದು ಒಳಕ್ಕೆ ಹೋದವನು ಅಲ್ಲಿಯೇ ಉಳಿದುಬಿಟ್ಟ. ಅವನು ಮತ್ತೆ ಎಷ್ಟೋ ಹೊತ್ತಿನ ಮೇಲೆ ಹೊರಗೆ ಬಂದಾಗಲೂ ಅನಂತ ಅಲ್ಲಿಯೇ ಕೂತಿದ್ದ.

"ನೀನಿನ್ನು ತಿಂಡಿ ತಿಂದು ಮುಗಿಸಿ ಹೋಗಲಿಲ್ವಾ?"

"ಇಲ್ಲ ಎಲ್ಲಿಗೆ ಹೋಗಲಿ?"

"ಚೆನ್ನಾಗಿದೆ" ಎಂದು ಮುಗುಳ್ನಕ್ಕು ಅವನ ಜೀಪಿನ ಬಳಿಗೆ ಹೋದಾಗ ಅನಂತ ಅವನನ್ನು ಹಿಂಬಾಲಿಸಿದ. ಇವನು ಒಳ್ಳೆಯವನು ಇವನಿಂದ ತನಗೆ ಯಾವುದಾದರೂ ನೌಕರಿ ಸಿಗಬಹುದು ಎಂಬ ಆಲೋಚನೆ....

ಪುರುಷೋತ್ತಮನಿಗೆ ಏನನ್ನಿಸಿತೋ ನಾನೀಗ ನನ್ನ ಮಗನ ಸ್ಕೂಲಿಗೆ ಹೋಗುತ್ತಿದ್ದೇನೆ.... ಅಲ್ಲಿ ನಿನಗೆ ಏನಾದರೂ ಕೆಲಸ ಸಿಗುತ್ತಾ ಅಂತ ವಿಚಾರಿಸೋಣ ನಡಿ, ಅನಂತ ಜೀಪಿನ ಹಿಂಭಾಗದಲ್ಲಿ ಹತ್ತಿ ಕುಳಿತ.

ಹೆಡ್‌ಮಾಸ್ಟರ್‌ರ ರೂಮಿನಲ್ಲಿ ನೋವಿನಿಂದ ಮುಖ ಕಿವುಚುತ್ತಾ ಕೂತಿದ್ದ ಪ್ರಶಾಂತ ತಂದೆಯನ್ನು ಕಂಡು ಸಂತಸವನ್ನು ಸೂಚಿಸಿದ್ದ.

"ಆಟ ಆಡ್ತಾ ಇದ್ದಾಗ ಬಿದ್ದು ಬಿಟ್ಟಿದ್ದಾನೆ.... ಬಹುಶಃ ಕೈ ಫ್ರಾಕ್ಚರ್ ಆಗಿರಬಹುದು.... ನಿಮ್ಮ ಮಗನನ್ನು ಕರೆದುಕೊಂಡು ಹೋಗಿ, ಈಗಲೇ ಡಾಕ್ಟರಿಗೆ ತೋರಿಸಿ" ಪುರುಷೋತ್ತಮ ತನಗಾದ ವ್ಯಥೆಯನ್ನು ವ್ಯಕ್ತಪಡಿಸಲಿಲ್ಲ.

"ಏನೂ ಆಗಿಲ್ಲ ನಡೀ" ಎಂದು ಮಗನ ತಲೆ ಸವರಿ ಅವನನ್ನು ತನ್ನ ಜತೆ ಕರೆದುಕೊಂಡು ಬಂದ. ಅಲ್ಪ ಸ್ವಲ್ಪ ಸಣ್ಣ ಗಾಯಗಳಾಗಿದ್ದು ಉರಿಯುತ್ತಿದ್ದುದರಿಂದ ನಿಧಾನವಾಗಿ ನಡೆದು ಬಂದ. ಅನಂತ ಆ ಹುಡುಗನ ಜತೆ ಉಳಿದ.... ಪುರುಷೋತ್ತಮ ಮುಂದೆ ಮುಂದೆ ಹೋಗಿದ್ದ.

"ಅಂಕಲ್ ನೀವು ಅಪ್ಪನ ಸ್ನೇಹಿತರಾ?" ಎಂದು ಪ್ರಶಾಂತ ಕೇಳಿದಾಗ 'ಇಲ್ಲ' ಎನ್ನಲಾಗಿರಲಿಲ್ಲ, ಪ್ರಶಾಂತ, ಅನಂತನ ನೆರವಿನಿಂದ ಜೀಪ್ ಹತ್ತಿದಾಗ ಪುರುಷೋತಮ ಅನಂತನನ್ನೇ ದಿಟ್ಟಿಸಿ ನೋಡಿದ. ಅನಂತ ಮತ್ತೆ ಜೀಪನ್ನು ಹತ್ತಿದಾಗ, ತಾನೇಕೆ ಇಲ್ಲಿಗೆ ಕರೆತಂದಿದ್ದೆ ಎನ್ನುವ ವಿಷಯ ಜ್ಞಾಪಕಕ್ಕೆ ಬಂದರೂ, ಏನೂ ಆಡಲಿಲ್ಲ.

ಪೊಲೀಸ್ ಇನ್ಸ್‌ಪೆಕ್ಟರ್ ಮಗನ ಶುಶ್ರೂಷೆ ವಿಳಂಬವಿಲ್ಲದೇ ನಡೆಯಿತು. ಎಕ್ಸ್‌ರೇ ನಂತರ ಪ್ಲಾಸ್ಟರ್ ಹಾಕಿ ಬಿಗಿದರು. ಅಂಜದೇ ಕೂತಿದ್ದ ಪ್ರಶಾಂತನನ್ನು ಕಂಡು ಅನಂತ ಅಚ್ಚರಿಗೊಂಡಿದ್ದ.

"ನಿನಗೆ ನೋವಾಗ್ತಾ ಇಲ್ವಾ!" ಅನಂತ ಕೇಳಿದ್ದ.

"ಆಗ್ತಾ ಇದೆ, ಆದರೆ ತಡೆದುಕೊಂಡಿದೀನಿ" ಎಂದು ನುಡಿದಾಗ

ಪುರುಷೋತ್ತಮ ಮಗನ ಬೆನ್ನು ತಟ್ಟಿದ. "ಇವನು ತುಂಬಾ ಧೈರ್ಯಶಾಲಿ" ಎಂದು ಹೊಗಳಿದ್ದ.

ತಂದೆ ಮಗನ ಆತ್ಮೀಯತೆ ಕಂಡು, ಅವನಿಗೆ ತಾನು ಬೆಳೆದಿದ್ದ ಮನೆಯಲ್ಲಿ ತಂದೆಯ ಸ್ಥಾನದಲ್ಲಿದ್ದವನು ತನಗೆ ದ್ರೋಹ ಮಾಡಿದ್ದು ನೆನಪಿಗೆ ಬಂದಿತ್ತು ಮನಸ್ಸು ಕೆಟ್ಟುಹೋಯಿತು. ಎದ್ದು ಹೊರಗೆ ಬಂದು ನಿಂತು ಸುತ್ತಲೂ ನೋಡಿದ. 'ದೊಡ್ಡ ಆಸ್ಪತ್ರೆ ನಾನಾ ವಿಭಾಗಗಳು ಇಲ್ಲಿ ತನಗೇನಾದರೂ ಕೆಲಸ ಸಿಬಹುದು ಈ ಇನ್ಸ್‌ಪೆಕ್ಟರನ ಶಿಫಾರಸ್ಸಿದ್ದರೆ ಅಂತ ಅಂದುಕೊಂಡರೂ, ಮಗನ ಶುಶ್ರೂಷೆ ಅವನಿಗೆ ಈಗ ಮುಖ್ಯ, ನಾನು ಕೇಳಿದರೆ ಏನಂದುಕೊಳ್ತಾನೋ ನಿಧಾನವಾಗಿ ಕೇಳಿದರಾಯ್ತು' ಎಂದುಕೊಂಡ.

"ಅಂಕಲ್ ಬನ್ನಿ ಆಯ್ತು" ಎಂದು ಪ್ರಶಾಂತ ನುಡಿದಾಗ ಅವನು ಪುರುಷೋತ್ತಮನ ಕಡೆ ನೋಡಿದ್ದ. ಅವನು ಬೇಡ ಎಂದಿರಲಿಲ್ಲ, ಎಲ್ಲರೂ ಮನೆಯ ಬಳಿಗೆ ಬಂದರು. ಅನಂತನ ಸಹಾಯದಿಂದ ಪ್ರಶಾಂತ ಜೀಪಿನಿಂದ ಇಳಿದ. ಅಷ್ಟರಲ್ಲಿ ಪುರುಷೋತಮ್ಮ ಮನೆಗೆ ಹಾಕಿದ್ದ ಬೀಗವನ್ನು ತೆಗೆದ.

"ಮನೆಯಲ್ಲಿ ಇನ್ಯಾರೂ ಇಲ್ಲವೇ...ಅವನ ತಾಯಿ ಕೆಲಸಕ್ಕೆ ಹೋಗಿರಬಹುದು" ಎಂದುಕೊಂಡ ಅನಂತ.

"ಅನಂತ, ನೀನು ನಾನು ಬರುವವರೆಗೆ ಇವನ ಜತೆ ಇಲ್ಲಿಯೇ ಇರು, ನನಗೆ ಸ್ಟೇಷನ್‌ಗಳಲ್ಲಿ ಕೆಲವು ಕೇಸ್ ಅಟೆಂಡ್ ಮಾಡುವುದಿದೆ. ಅಡಿಗೆ ಮನೇಲಿ ಅಡಿಗೆ ಸಿದ್ಧವಾಗಿದೆ ಹೊಟ್ಟೆ ಹಸಿದರೆ ಇಬ್ಬರೂ ತಿನ್ನಿ" ಎಂದು ಹೇಳಿ ಹೊರಟುಹೋಗಿದ್ದ.

ತಾನು ಅಪರಿಚಿತ. ಆದರೂ, ತನ್ನ ಮೇಲೆ ಈ ಮನೆಯ ಜವಾಬ್ದಾರಿ ಯನ್ನು ಮಗನ ಜವಾಬ್ದಾರಿಯನ್ನು ವಹಿಸಿಹೋಗಿದ್ದಾನೆ ಅಂದರೆ ಅವನಿಗೆ ತನ್ನ ಮೇಲೆ ವಿಶ್ವಾಸ ಮೂಡಿರಬಹುದು, ಅದನ್ನು ತಾನು ಉಳಿಸಿಕೊಳ್ಳಬೇಕು ಎಂದುಕೊಂಡು, ಮುಂಬಾಗಿಲನ್ನು ಭದ್ರಪಡಿಸಿದ. ಪ್ರಶಾಂತನ ಸ್ಕೂಲ್ ಯುನಿಫಾರಂ ಬಟ್ಟೆಗಳನ್ನು ಬಿಚ್ಚಿ, ಬೇರೆ ಬಟ್ಟೆಗಳನ್ನು ತೊಡಿಸಿದ. ಕೈಕಾಲು ಮುಖ ತೊಳೆಸಿ, ಕ್ಯಾರಿಯರ್‌ನಲ್ಲಿದ್ದ ಊಟವನ್ನು ಬಿಸಿ ಮಾಡಿ ತಿನ್ನಿಸಿದ.

"ಅಂಕಲ್ ನೀವು ಎಲ್ಲಿದ್ರಿ? ನಾನೆಂದೂ ನೋಡಿರಲೇ ಇಲ್ಲ ನಿಮ್ಮನ್ನ?"

"ನಾನು ಬೇರೆ ಊರಿನಿಂದ ಬಂದಿದೀನಿ..." ಎನ್ನುತ್ತಾ ನೋವು ಕಮ್ಮಿಯಾಗಲು ಕೊಟ್ಟಿದ್ದ ಮಾತ್ರೆಯನ್ನು ನುಂಗಿಸಿ, ಮಲಗುವಂತೆ ಹೇಳಿದ.

ತಾನು ಕ್ರಿಕೆಟ್ ಆಡುತ್ತಿರುವಾಗ, ಬಾಲ್ ಕ್ಯಾಚ್ ಮಾಡಲು ಹೋಗಿ ತೊಡರಿ ಬಿದ್ದುದನ್ನ ವರ್ಣಿಸುತ್ತಾ, ಪ್ರಶಾಂತ ನಿದ್ದೆ ಹೋಗಿದ್ದ ಕುಳಿತಲ್ಲೇ ಅನಂತ ಮನೆಯನ್ನೊಮ್ಮೆ ವೀಕ್ಷಿಸಿದ.

ಅತೀ ದೊಡ್ಡದೂ ಅಲ್ಲದ, ಅತೀ ಚಿಕ್ಕದೂ ಅಲ್ಲದ ಸಾಧಾರಣವಾದ ಎರಡು ರೂಮಿನ ಮನೆ. ಪಕ್ಕದ ರೂಮಿನ ಬಾಗಿಲು ಹಾಕಿತ್ತು. ಬಾಗಿಲ ಮೇಲೆ ಗೋಡೆಗೆ ಒಂದು ಹೆಂಗಸಿನ ಭಾವಚಿತ್ರವನ್ನು ತಗುಲಿ ಹಾಕಿತ್ತು ಹೂವಿನ ಹಾರದ ನಡುವೆ ಮುಖ ಸರಿಯಾಗಿ ಕಾಣಲಿಲ್ಲ ಎಂದುಕೊಂಡರೂ ಎದ್ದುಹೋಗಿ ನೋಡಲು ಇಚ್ಛಿಸಲಿಲ್ಲ. ಯಾರೋ ನನಗೇನು ಎಂಬ ಉದಾಸೀನ ಮೂಡಿತ್ತು.

ಹಾಗೇ ಎಷ್ಟು ಹೊತ್ತು ಕೂತಿದ್ದನೋ.... ಪ್ರಶಾಂತ ಎದ್ದು ಕಣ್ಣುಬಿಟ್ಟ.

"ನಾನು ಟಾಯ್ಲೆಟ್‌ಗೆ ಹೋಗಬೇಕು" ಎಂದವನಿಗೆ ಸಹಾಯ ಮಾಡಿದ.

"ಬೋರ್ನ್‌ವಿಟಾ ಮಾಡಿಕೊಡ್ತೀರಾ? ಅಂತ ಕೇಳಿದಾಗ, ಇವನು ಮತ್ತೆ ಅಡಿಗೆ ಮನೆಗೆ ಬಂದ. ಜೋಡಿಸಿಟ್ಟ ಸಾಮಾನುಗಳಲ್ಲಿ ಯಾವುದನ್ನು ಹೇಗೆ ಎಲ್ಲಿ ಹುಡುಕಬೇಕು ಎಂದು ಅರಿವಾಗಲಿಲ್ಲ, ಪ್ರಶಾಂತ ಹಿಂದೆ ಬಂದು ನಿಂತಿದ್ದ.

"ದಿನಾ ಹೀಗೇ.... ಅಪ್ಪ ಬಿಡುವಾದಾಗ ಮಾತ್ರ ಎಲ್ಲಾ ಸರಿ ಮಾಡ್ತಾರೆ... ನಾನೂ ಅವರಿಗೆ ಸಹಾಯ ಮಾಡ್ತೀನಿ, ಇನ್ನು ಒಂದೂವರೆ ತಿಂಗಳು ನನ್ನಿಂದ ನಮ್ಮ ಅಪ್ಪನಿಗೆ ತೊಂದರೆ, ಆಮೇಲೆ ನಾನೇ ಎಲ್ಲಾ ಮಾಡ್ತೀನಿ" ಎಂದ ಎದೆಯುಬ್ಬಿಸಿ.

"ಯಾಕೆ? ನಿಮ್ಮ ಅಮ್ಮ ಇಲ್ಲವೇ" ಎಂದುಕೇಳುವ ತವಕವಾದರೂ ತಡೆದಿಟ್ಟುಕೊಂಡ.

"ನಿಮಗೆ ಬೇಕಾದರೆ ಕಾಫಿ ಬೆರೆಸಿಕೊಳ್ಳಿ.... ಫಿಲ್ಟರ್‌ನಲ್ಲಿ ಡಿಕಾಕ್ಷನ್ ಇರುತ್ತೆ.... ಅನಂತ ಸಂಕೋಚಗೊಂಡರೂ ಕಾಫಿ ಬೆರೆಸಿಕೊಂಡು ಕುಡಿದ. ಮಧ್ಯಾಹ್ನ ಸರಿಯಾಗಿ ಊಟ ಮಾಡಿರಲಿಲ್ಲ, ಕತ್ತಲಾಗುತ್ತಾ ಬಂದಿತ್ತು. ಜೀಪು ನಿಂತ ಸದ್ದು ಕೇಳಿದೊಡನೆ.

"ಪ್ಲೀಸ್, ಅಂಕಲ್ ದೀಪ ಹಾಕಿ, ಅಪ್ಪನಿಗೆ ಕತ್ತಲೆ ಅಂದರೆ ಕೋಪ" ಎಂದಿದ್ದ. ಅನಂತ ಹುಡುಕಿ ಹುಡುಕಿ ದೀಪಗಳನ್ನು ಹೊತ್ತಿಸಿದ.

"ಏನಯ್ಯಾ ಹೇಗಿದೀಯಾ? ಎಂದು ಪುರುಷೋತ್ತಮ ಮಗನನ್ನು ಕೇಳಿದಾಗ ಅನಂತ ತನಗೆಂದು ಭಾವಿಸಿ, "ಪರವಾಗಿಲ್ಲ ಸಾರ್" ಎಂದಿದ್ದ ಓ.ಕೆ. ಎನ್ನುತ್ತಾ ಅವನು ಮಗನನ್ನು ಸಮೀಪಿಸಿದ. "ಬೋರ್ನ್‌ವಿಟಾ ಕುಡಿದೆಯಾ?" 'ಹುಂ' ಎಂದು ತಲೆಯಾಡಿಸಿದ್ದ.

"ನಿಮಗೆ ಕಾಫಿ ಮಾಡಿಕೊಡಲಾ ಸಾರ್" ಎಂದು ಕೇಳಿದ.

"ಹೂಂ... ಮಾಡಪ್ಪಾ ಇವತ್ತಂತೂ ತಲೆಚಿಟ್ಟು ಹಿಡಿದು ಹೋಗಿದೆ....

ನರಕ್ಕೆ ಚೈತನ್ಯ ಬೇಕು"

ಅನಂತ ಅಡಿಗೆ ಮನೆಯಿಂದ ಆಗಾಗ ತಂದೆ ಮಗನ ಕಡೆ ಸಂದೇಹ ದಿಂದ ನೋಡಿದ. ಆದರೆ ಅವರು ರಹಸ್ಯವಾಗಿ ಮಾತನಾಡುತ್ತಿಲ್ಲವೆಂದು ಗಮನಿಸಿದಾಗ ನೆಮ್ಮದಿಯಾಗಿತ್ತು.

"ತುಂಬಾ ಥ್ಯಾಂಕ್ಸ್" ಎಂದು ಬಿಸಿಬಿಸಿ ಕಾಫಿ ಕುಡಿದಿಟ್ಟ. ಇವತ್ತು ನೀನಿಲ್ಲದೇ ಹೋಗಿದ್ದರೆ ಇವನನ್ನು ಆಸ್ಪತ್ರೆಯಲ್ಲೇ ಬಿಟ್ಟು ಬರಬೇಕಾಗಿತ್ತು. ಪ್ರಶಾಂತ್, ಅಂಕಲ್‌ನ ಗೋಳುಹೊಯ್ದುಕೊಳ್ಳಲಿಲ್ಲ ತಾನೇ..."

"ಛೆ.... ನಿಮ್ಮ ಮಗ ತುಂಬಾ ಒಳ್ಳೆಯವರು ಸಾರ್...."

"ಅನಂತ, ಈಗಲೇ ಹೋಗಿ ನಿನಗೆ ಬೇಕಾದ ಬಟ್ಟೆಗಳನ್ನು ತೆಗೆದು ಕೊಂಡು ಬಾ.... ಇವತ್ತಿನಿಂದ ಇವನು ಪೂರ್ಣ ಹುಶಾರಾಗುವವರೆಗೆ ನೀನು ಇಲ್ಲೇ ಇರಬೇಕು. ನಿನಗೇನೇನೋ ಬೇಕೋ ಎಲ್ಲಾ ತಗೋ..." ಎನ್ನುತ್ತಾ ಇನ್ನೂರು ರೂಪಾಯಿಗಳನ್ನು ಕೊಡಲು ಬಂದ. ಅನಂತ ಹಿಂಜರಿದ.

"ನನಗೆ ನನ್ನ ಡ್ಯೂಟಿಯಿಂದ ಪುರುಸೊತ್ತು ಸಿಗುವುದೇ ಕಡಿಮೆ.... ಅವನು ಒಬ್ಬನೇ ಆಗಿಬಿಡ್ತಾನೆ ನಿನಗೆ ಇಷ್ಟವಿದ್ದರೆ ಇರಬಹುದು."

"ಇರ್ತೀನಿ.... ಆದರೆ...."

"ಮೊದಲು ಹೋಗಿ ಬಟ್ಟೆಗಳನ್ನು ತಂದು ಸ್ನಾನಗೀನ ಮುಗಿಸು, ನೆನ್ನೆಯಿಂದ ನೀನು ಸ್ನಾನ ಮಾಡಿಲ್ಲ ಅಲ್ಲವೇ....?"

ಸಂಕೋಚದಿಂದ ಅನಂತ ದುಡ್ಡನ್ನು ತೆಗೆದುಕೊಂಡು ಬೀದಿಗೆ ಬಂದ. ತಾನೀಗ ಭಿಕಾರಿಯಂತೆ, ತನಗೆ ಇನ್ನೊಂದು ಸೆಟ್ಟು ಬಟ್ಟೆಯಿಲ್ಲ, ಶ್ರೀಮಂತನ ಮಗನಾಗಿ ಬೆಳೆದ ತನ್ನೊಡನೆ ಸಾಕಷ್ಟು ಬಟ್ಟೆಗಳಿದ್ದರೂ, ಬೇಡ ಎಂದರೂ ಲಲಿತ ಬಲವಂತದಿಂದ ಕೊಡಿಸುತ್ತಿದ್ದಳು ಎಂದುಕೊಂಡಾಗ ಅವಳ ನೆನಪು ಕಾಡಿತ್ತು. ತನ್ನನ್ನು ಪ್ರೀತಿಯಿಂದ ಸಾಕಿದ ತಾಯಿಗೆ ಒಂದು ಮಾತು ಹೇಳದೇ ತಾನೀಗ ಪರದಾಡುತ್ತಿದ್ದೀನಿಲ್ಲ. ಈ ವಿಷಯ ತಿಳಿದರೆ ಅವಳೆಷ್ಟು ನೊಂದು ಕೊಳ್ಳಬಹುದು. ಅವಳಿಗೆ ಫೋನು ಮಾಡಿಯಾದರೂ ಈ ವಿಷಯ ತಿಳಿಸಬೇಕು ಅಂತ ಅಂದುಕೊಂಡರೂ ಸುಮ್ಮನಾಗಿದ್ದ.

ತಾನೇ ಈಗ ದಿಕ್ಕೆಟ್ಟವನು! ಅವಳಿಗೆ ತಾನೇನು ಮಾಡಬಲ್ಲೆ! ಅವಳಿಗೆ ನಿಜಾಂಶ ತಿಳಿದಿದ್ದರೆ, ನನಗಾಗಿ ನಾಲ್ಕು ದಿನ ಶೋಧಿಸುತ್ತಾಳೆ, ನಂತರ ಮರೆಯುತ್ತಾಳೆ ಎಂದುಕೊಂಡ.

ಸೋಪು, ಬ್ರೆಷ್ಷು, ಟೂತ್‌ಪೇಸ್ಟ್‌ಗಳೊಂದಿಗೆ ರೆಡಿಮೇಡ್ ಬಟ್ಟೆಗಳನ್ನು ಖರೀದಿಸಿ, ಮತ್ತೆ ವಾಪಸ್ಸಾದ. ಅಷ್ಟರಲ್ಲಿ ಪುರುಷೋತ್ತಮ ಸ್ನಾನಕ್ಕೆ ನೀರನ್ನು ಕಾಯಿಸಿದ್ದ. ಬಿಸಿ ನೀರಿನ ಸ್ನಾನ ಮಾಡಿದಾಗ ಹಾಯೆನ್ನಿಸಿತ್ತು.

ತನಗೊಬ್ಬ ಇಂತಹ ಮಹಾತ್ಮನ ಪರಿಚಯವಾಗುತ್ತೆ ಅಂತ ನಾನಂತೂ ಖಂಡಿತಾ ಭಾವಿಸಿರಲಿಲ್ಲ ಎಂದುಕೊಂಡು ಸ್ನಾನ ಮುಗಿಸಿ ಹೊರಬಂದ.

"ಬಾ.... ಅನಂತ ಊಟ ಮಾಡೋಣ..." ಎಂದು ಕರೆದ. ಟೇಬಲ್ ಮೇಲೆ ಕ್ಯಾರಿಯರ್‌ಗಳಲ್ಲಿ ಬಿಸಿಯಾದ ಅಡಿಗೆ ರೆಡಿಯಾಗಿತ್ತು, ಹೋಟೆಲ್ಲಿಂದ ತರಿಸಿರಬಹುದು ಎಂದುಕೊಂಡು, ಪ್ರಶಾಂತನಿಗೆ "ತಿನ್ನಿಸ್ಲಾ...?" ಕೇಳಿದ.

"ಅವನೇ ಚಮಚದಲ್ಲಿ ತಿನ್ನುತ್ತಾನೆ" ಎನ್ನುತ್ತಾ ಕಲೆಸಿದ ಅನ್ನಗಳನ್ನ ತಟ್ಟೆಗೆ ಹಾಕಿ ಚಮಚವನ್ನಿಟ್ಟ. ಪ್ರಶಾಂತ ಸಹ ಟೇಬಲ್ ಬಳಿಗೆ ಬಂದಿದ್ದ ಮೂವರು ಕುಳಿತು ಊಟ ಮಾಡಿದರು. ಅದು ಹೋಟೆಲ್ಲಿನ ಅಡಿಗೆಯಲ್ಲ ಎಂದುಕೊಂಡ.

ಪ್ರಶಾಂತ ಮಲಗಿ ನಿದ್ರಿಸಿದ. "ಬಾ ಟೇರೆಸ್ ಮೇಲೆ ಕೂತು ಮಾತನಾಡೋಣ" ಎನ್ನುತ್ತಾ ಮೆಟ್ಟಲನ್ನೇರಿದ. ಅನಂತ ಹಿಂಬಾಲಿಸಿದ. ಪುರುಷೋತ್ತಮ ಒಂದು ಸಿಗರೇಟನ್ನು ಹೊತ್ತಿಸಿ 'ನಿನಗೆ' ಎಂದು ನೀಡಿದ್ದ.

"ಬೇಡ.... ನನಗೆ ಅಭ್ಯಾಸವಿಲ್ಲ"

"ಗುಡ್.... ಇದು ಕೆಟ್ಟ ಅಭ್ಯಾಸ ಅಂತ ತಿಳಿದಿದ್ದೂ ನನ್ನಿಂದ ಬಿಡಲಾಗ ಲಿಲ್ಲ, ಆತಂಕ, ಯೋಚನೆ ಹೆಚ್ಚಾದಾಗ ಇದೇ ನನ್ನ ಸಂಗಾತಿ..."

ಅನಂತನಿಗೆ ತಾನು ಕಂಡ ಭಾವಚಿತ್ರದ ನೆನಪಾಗಿತ್ತು.

"ವಿನಾಕಾರಣ ಒಂದು ರಾತ್ರಿ ಲಾಕಪ್‌ನಲ್ಲಿರಬೇಕಾದ ಸ್ಥಿತಿ ನಿನಗೆ ಬಂತು! ಮನೆಬಿಟ್ಟು ಹಾಗೆ ಅರ್ಧರಾತ್ರಿಯಲಿ ತಿರುಗಾಡಲು, ಏನಾದರೂ ಬಲವಾದ ಕಾರಣವಿರಲೇಬೇಕು, ನಿನಗೆ ಹೇಳುವ ಮನಸ್ಸಿದ್ದರೆ ಹೇಳು...."

"ಹೇಳಿಕೊಂಡರೆ, ನನಗೆ ನ್ಯಾಯ ಸಿಗುತ್ತಾ ಸಾರ್...?"

"ನನ್ನಿಂದಾಗುವ ಸಹಾಯ ಮಾಡ್ತೀನಿ... ಹೇಳಿಕೊಂಡರೆ ನಿನ್ನ ಮನಸ್ಸಿಗೂ ಹಗುರವಾಗುತ್ತೆ. ನಿನಗೆ ಕೆಲಸ ಕೊಡಿಸಲು ಅನುಕೂಲವಾಗುತ್ತೆ. ಹುಂ ಹೇಳು" ಅವನು ಒತ್ತಾಯಿಸಿದಾಗ ಅನಂತ ನಡೆದ ವಿಷಯವನ್ನೆಲ್ಲಾ ಸಂಕ್ಷಿಪ್ತವಾಗಿ ತಿಳಿಸಿದ.

"ಸ್ವಂತ ಮಗನಂತೆ ಬೆಳೆಸಿ, ನನಗೆ ದ್ರೋಹ ಮಾಡಿದರು. ಪತ್ನಿಯ ರೂಪದಲ್ಲಿ ಬಂದು ನನಗೆ ಮೋಸ ಮಾಡಿದಳು. ನಾನು ಅಲ್ಲಿಂದ ಹೊರಬರದೇ ಅಲ್ಲೇ ಹೇಗಿರಬೇಕಿತ್ತು? ನೀವೇ ಹೇಳಿ..."

ಪುರುಷೋತ್ತಮ ನಿಜಕ್ಕೂ ಅಚ್ಚರಿಗೊಂಡಿದ್ದ.

"ಹಿಂದೆಂದೋ, ಇಂತಹ ಸಂಬಂಧ ಕುರಿತು, ಒಂದು ಇಂಗ್ಲೀಷ್ ಕಾದಂಬರಿಯನ್ನು ಓದಿದ ನೆನಪು. ಆದರೆ ನಿಜ ಜೀವನದಲ್ಲಿ ಹೀಗೆ ನಡೆಯಬಹುದು ಅಂತ ನಾನು ಭಾವಿಸಿರಲಿಲ್ಲ"

"ಇಬ್ಬರಿಂದಲೂ ನನಗೆ ದ್ರೋಹವಾಗಿದೆ. ಇವರಲ್ಲಿ ನನಗೆ ಹೇಗೆ ನ್ಯಾಯ ಸಿಗಲು ಸಾಧ್ಯ ಹೇಳಿ.... ಇದರಲ್ಲಿ ಒಬ್ಬರ ತಪ್ಪಿದ್ದರೆ ಅವರನ್ನು ಕ್ಷಮಿಸಬಹುದಾಗಿತ್ತು"

"ತಂದೆಯ ಸ್ಥಾನದಲ್ಲಿ ನಿಂತ ಆ ವ್ಯಕ್ತಿ ಹೀಗೆ ಮಾಡಬಾರದಾಗಿತ್ತು"

"ಆದ್ದರಿಂದಲೇ ನನಗೆ ಈ ಸಂಬಂಧಗಳು ಅನ್ನುವ ಪದದಲ್ಲಿ ನಂಬಿಕೆ ಬರುತ್ತಿಲ್ಲ. ಆದರೆ ನೆನ್ನೆಯಿಂದ ನಿಮ್ಮನ್ನು ಕಂಡಾಗಿನಿಂದ, ನಿಮ್ಮಂತಹವರೂ ಇರ್ತಾರೆ ಅನ್ನುವ ವಿಶ್ವಾಸ ಮೂಡುತ್ತಿದೆ" ಅನಂತ ಅವನನ್ನು ಹೊಗಳಿದ್ದ.

"ಹೆಚ್ಚಿಗೆ ಹೊಗಳಬೇಡಪ್ಪಾ ನಾನು ಉಬ್ಬಿ ಹೋಗ್ತೀನಿ ಅಷ್ಟೇ. ಸಮಸ್ಯೆಗಳು ಮನುಷ್ಯನಿಗೇ ಬರುವುದು. ಅದಕ್ಕೆ ನಾನೂ ಹೊರತಲ್ಲ ಮೊದಲೇ ಪೋಲೀಸರ ದಿರುಸನ್ನು ಧರಿಸಿ, ನಾವುಗಳು ಜನರ ಕಣ್ಣಿಗೆ ಭಯಂಕರ ರಾಕ್ಷಸರಾಗಿ ಕಾಣುತ್ತೇವೆ. ನಾವು ಸುಮ್ಮನೇ ಇನ್ನೊಬ್ಬರನ್ನು ಹೆದರಿಸಿಕೊಂಡು ತಿರುಗಿದ್ರೆ ಆಯ್ತೆ? ನಮಗೂ ಸಮಯ ಅಂದರೆ ಅವರುಗಳು ಸಹಾಯ ಬೇಕಾಗುತ್ತದೆ. ಈಗ ನೋಡು, ನಿನ್ನ ಸಹಾಯ ನನಗೆ ಬೇಕಾಯಿತಲ್ಲವೆ!"

"ನೀವು ಮಾಡಿದ ಉಪಕಾರಕ್ಕೆ ಇದೇನು ಮಹಾ?"

"ಹಾಗೆನ್ನಬೇಡ, ಜನರು ಅರ್ಥಮಾಡಿಕೊಳ್ಳಬೇಕು.... ಪೆಟ್ಟು ತಿಂದ ಪ್ರಶಾಂತನ್ನ ಬಿಟ್ಟು ಹೋಗಿದ್ದರೆ, ಅವನಿಗೆ ನನ್ನ ಬಗೆ ಏನನ್ನಿಸುತ್ತಿತ್ತು? ಅವನೂ ಕೋಪಿಸಿಕೊಂಡರೆ, ನನಗೆ ಇನ್ನು ಯಾರಿದಾರೆ?"

"ಏನೋ ಮಾತನಾಡಿ ನಿಮ್ಮ ಮನಸ್ಸನ್ನು ನೋಯಿಸಿದೆ"

"ಮನುಷ್ಯನಿಗೆ ತಿಳುವಳಿಕೆ ಬಂದಾಗಿನಿಂದ ಒಂದಲ್ಲ ಒಂದು ತರಹ ಮನಸ್ಸು ನೋಯುತ್ತದೆ. ಅದನ್ನು ದಾಟಿಹೋಗುವ ದಾರ್ಢ್ಯಬೇಕು"

"ನಿಮ್ಮಷ್ಟು ತಿಳುವಳಿಕಸ್ಥ ನಾನಲ್ಲ"

"ನೋಡಿದ್ಯಾ ಮತ್ತೆ ಹೊಗಳ್ತಾ ಇದೀಯ. ನಿದ್ದೆ ಬರುವಂತಿದ್ದರೆ ಹೋಗಿ ಮಲಗು. ನಾನು ಸ್ವಲ್ಪ ಹೊತ್ತು ಇಲ್ಲೇ ಕೂತಿದ್ದು ಬರ್ತೀನಿ."

ಅನಂತ ಕೆಳಗಿಳಿದ. ಹಿಂದಿನ ರಾತ್ರಿ ಲಾಕಪ್‌ನಲ್ಲಿ ಹೆದರಿಕೆಯಿಂದ ನಿದ್ದೆ ಬಂದಿರಲಿಲ್ಲ. ಪುರುಷೋತ್ತಮ ತೆಗೆದಿಟ್ಟಿದ್ದ ದಿಂಬು ಹಾಸಿಗೆಗಳನ್ನು ಕೆಳಗೆ ಹಾಸಿಕೊಂಡು ಮಲಗಿದ. ಕ್ಷಣದಲ್ಲಿ ನಿದ್ದೆ ಬಂದಿತ್ತು. ಎಷ್ಟೋ ಹೊತ್ತಿನ ನಂತರ ಎಚ್ಚರವಾದಾಗ ಇನ್ನೂ ಬೆಳಕು ಹರಿದಿರಲಿಲ್ಲ. ಹಾಗೇ ಯೋಚಿಸುತ್ತಾ ಮಲಗಿದ್ದ.

ಪ್ರಶಾಂತ ಕನವರಿಸಿಕೊಂಡಾಗ, ಪುರುಷೋತ್ತಮ ಎದ್ದು ಸಾಂತ್ವನ ಹೇಳಿ, ನೀರು ಕುಡಿಸಿ ಮಲಗಿಸಿದುದನ್ನು ಗಮನಿಸಿದ. ಈ ಮನುಷ್ಯನಿಗೆಷ್ಟು

ಸಹನೆ, ಸಾಮಾನ್ಯವಾಗಿ ತಾಯಿ ಮಕ್ಕಳನ್ನು ಈ ರೀತಿ ಸಲಹುತ್ತಾಳೆ. ಆದರೆ ಇಲ್ಲಿ ತಂದೆ.... ತಾನೇ ತಾಯಿಯಂತೆ ಮಗನ ಶುಶ್ರೂಷೆ ಮಾಡುತ್ತಿದ್ದಾನೆ. ಪ್ರಶಾಂತನಿಗೆ ತಾಯಿಯಿಲ್ಲ ತಾನು ಕಂಡ ಭಾವಚಿತ್ರದ ನೆನಪಾಗಿತ್ತು.

ಪುರುಷೋತ್ತಮ ಕಾಫಿ ಬೆರೆಸಿ, ಇಬ್ಬರಿಗೂ ಕೊಟ್ಟ. ಅಷ್ಟರಲ್ಲಿ ಒಬ್ಬ ಗಂಡಸು, ಒಂದು ಕ್ಯಾರಿಯರ್ ಹಾಗೂ ಕೆಲವು ಪ್ಯಾಕೆಟ್‌ಗಳೊಂದಿಗೆ ಬಂದು ಸೀದಾ ಅಡಿಗೆ ಮನೆಗೆ ಹೋಗಿ ಇಟ್ಟುಬಂದ.

"ನರಸಿಂಹ, ನಾಳೆಯಿಂದ ಇನ್ನು ಒಂದು ಎಕ್ಸ್‌ಟ್ರಾ, ಕ್ಯಾರಿಯರ್‌ನಲ್ಲಿ ಊಟ ಕಳಿಸಬೇಕಂತೆ ಅಂತ ನಿಮ್ಮ ಅಜ್ಜಿಗೆ ಹೇಳು..."

ನರಸಿಂಹ ಅನಂತನ ಕಡೆ ನೋಡಿ 'ಹೂಂ' ಎಂದಿದ್ದ.

ಎಲ್ಲರೂ ಕೂತು ಒಟ್ಟಿಗೇ ತಿಂಡಿ ತಿಂದರು. ಅನಂತ, ಈ ಊಟ ಮಧ್ಯಾಹ್ನ ನಿಮ್ಮಿಬ್ಬರಿಗೇ, ನನಗೆ ಒಂದು ಮೀಟಿಂಗ್ ಇದೆ. ಬರುವುದು ತಡವಾಗಬಹುದು.... "ಬರ್ತೀನೋ ಪಚ್ಚು" ಎಂದು ತಲೆಗೂದಲಲ್ಲಿ ಕೈ ಯಾಡಿಸಿ ಹೊರಬಂದ. ಹೊರಗಡೆ ಜೀಪು ಹೊರಟ ಸದ್ದು ಕೇಳಿದ ನಂತರ ಅನಂತ ಎದ್ದು ಬಂದು ಮುಂಬಾಗಿಲನ್ನು ಹಾಕಿಕೊಂಡ.

ಅನಂತನಿಗೆ ಆ ದಿನ ಹೊತ್ತು ಕಳೆಯುವುದು ಕಷ್ಟವೆನಿಸಿತ್ತು. ಪ್ರಶಾಂತನ ಮಾತುಗಳಲ್ಲಿ ಅವನಿಗೆ ಧ್ಯಾನವಿರಲಿಲ್ಲ. ತಾನು ಹೇಗೆ ಇಲ್ಲಿ ಎಷ್ಟು ದಿನ ಕಾಲ ಕಳೆಯಬೇಕು? ಒಬ್ಬ ಹುಡುಗನನ್ನು ನೋಡಿಕೊಳ್ಳುವ ಕೆಲಸ ತನ್ನಿಂದ ಸಾಧ್ಯವೇ? ಆದಷ್ಟು ಬೇಗ ಬೇರೆ ಕೆಲಸ ಸಿಕ್ಕಿದರೆ.... ಅಂತ ಯೋಚಿಸುತ್ತಿದ್ದ.

"ಅಂಕಲ್.... ಸ್ವಲ್ಪ ನನ್ನ ಪುಸ್ತಕಗಳನ್ನು ತಂದುಕೊಡ್ತೀರಾ! ಮುಂದಿನ ತಿಂಗಳೇ ನನಗೆ ಪರೀಕ್ಷೆ" ಎಂದಾಗ ಅನಂತ ಎದ್ದ.

"ಪ್ರತಿ ಸಲ ಕ್ಲಾಸಿಗೆ ನನಗೇ ಫಸ್ಟ್‌ರ್‍ಯಾಂಕ್, ಈ ಸಲ ಏನಾಗುತ್ತೋ ಸದ್ಯ ಅಷ್ಟು ಹೊತ್ತಿಗೆ ಕೈ ಸರಿ ಹೋಗಿದ್ದರೆ ಸಾಕು"

"ಸರಿ ಹೋಗುತ್ತೆ.... ಮಕ್ಕಳಿಗೆ ಗಾಯ ಬೇಗ ವಾಸಿ ಆಗುತ್ತದೆ. ಮುರಿದ ಮೂಳೆ ಬೇಗ ಕೂಡುತ್ತದೆ ಅದು ಪ್ರಕೃತಿಯ ವರ."

"ದೊಡ್ಡವರಿಗೆ?"

"ದೊಡ್ಡವರಿಗೆ ಸುಮ್ಮನೆ ಏನೇನನ್ನೋ ಯೋಚನೆ ಮಾಡ್ತಾರಲ್ಲ ಅದಕ್ಕೇ ಅವರಿಗೆ ನಿಧಾನವಾಗುತ್ತೆ...."

"ಅದಕ್ಕೇ ಏನೋ [illegible] ಅಮ್ಮನಿಗೆ ಆಕ್ಸಿಡೆಂಟ್ ಆದಾಗ, ತಲೆ ಬಿದ್ದ ಪೆಟ್ಟು ವಾಸಿಯಾಗಲೇ ಇಲ್ಲ, ಸತ್ತೇ ಹೋದಳು."

"[illegible] ಯಾವಾಗ?" ವ್ಯಥೆಯಿಂದ ಕೇಳಿದ.

"ಆಗ ನಾನಿನ್ನೂ ನರ್ಸರೀಲಿ ಓದುತ್ತಿದ್ದೆ. ಅಮ್ಮ ರಸ್ತೆ ಕ್ರಾಸ್ ಮಾಡುವಾಗ ಆಕ್ಸಿಡೆಂಟ್ ಆಯ್ತು...."

"ಛೆ.... ಪಾಪ... ನಿನಗೆ ನಿನ್ನ ಅಮ್ಮನ ನೆನಪು ತುಂಬಾ ಬರುತ್ತಾ?"

"ಹುಂ, ಬರುತ್ತೆ ಸದಾ ಬರುತ್ತೆ. ಆದರೆ ಅಪ್ಪ ನನಗೋಸ್ಕರ ಇನ್ನೊಂದು ಅಮ್ಮನ್ನ ಕರೆದುಕೊಂಡು ಬಂದಿದ್ದರು. ನನಗೆ ಅವರು ಇಷ್ಟವಾಗಲೇ ಇಲ್ಲ."

"ಅವರು ಈಗ ಎಲ್ಲಿದಾರೆ?"

"ಅವರು ಎಲ್ಲಿದಾರೋ ಗೊತ್ತಿಲ್ಲ, ಯಾರ ಜತೆಯೋ ಓಡಿ ಹೋದ್ರಂತೆ."

ಅನಂತ ಬೆಚ್ಚಿದ, "ತಾನು ಇನ್ನು ಪ್ರಶ್ನೆಗಳನ್ನು ಕೇಳಬಾರದು ಪುರುಷೋತ್ತಮನಿಗೆ ತಿಳಿದರೆ ಏನೆಂದುಕೊಂಡಾರು" ಎಂದುಕೊಂಡು ಸುಮ್ಮನಾದ.

"ನಮ್ಮ ಅಪ್ಪನಿಗೆ ಇನ್ನೊಂದು ಮದುವೆ ಮಾಡಿಕೋ ಅಂತ ಸ್ನೇಹಿತರೆಲ್ಲಾ ಬಲವಂತ ಮಾಡ್ತಾರಂತೆ ಆದರೆ ಅವರಿಗೇ ಇಷ್ಟವಿಲ್ಲ. ನನಗೆ ಸರಿಹೋಗಲ್ಲ ಅಂತ"

"ಇದನ್ನೆಲ್ಲ ನಿನಗೆ ಯಾರು ಹೇಳಿದರು?"

"ನಮ್ಮ ಮನೆ ಕೆಲಸದವಳು ಆಮೇಲೆ ಅಪ್ಪ ಅವಳನ್ನು ಬಿಡಿಸಿಬಿಟ್ಟರು. ಅದಕ್ಕೇ ನನ್ನನ್ನು ಬೋರ್ಡಿಂಗ್ ಸ್ಕೂಲಿಗೆ ಸೇರಿಸುತ್ತಿದ್ದಾರೆ, ಅವರಿಗೆ ಡ್ಯೂಟಿ ಮನೆ ಕೆಲಸ ಎರಡೂ ಕಷ್ಟವಾಗುತ್ತಲ್ಲ, ಅದಕ್ಕೇ ನಾನು ಒಪ್ಪಿಕೊಂಡೆ"

"ಯಾವಾಗ ಹೋಗ್ತಿಯಾ!"

"ಈ ಸಲದ ಪರೀಕ್ಷೆ ಆದಮೇಲೆ, ಅನಂತ ನಿಟ್ಟುಸಿರುಬಿಟ್ಟ. ಈ ಹುಡುಗ ಹೇಳಿದ್ದೆಲ್ಲಾ ನಿಜವೇ ಇರಬಹುದು, ಪಾಪ ಈತನೂ ಸುಖವಾಗಿಲ್ಲ, ಪ್ರಪಂಚದ ಮನುಷ್ಯರಲ್ಲಿ ಒಬ್ಬೊಬ್ಬರಿಗೆ ಒಂದೊಂದು ತರಹ ಸಮಸ್ಯೆ. ಬಗೆಹರಿಸುವ ಬದಲು, ಹೆಚ್ಚು ಮಾಡುವ ಧೂರ್ತರೂ ಇರ್ತಾರಲ್ಲ ಅಂತ ಅಂದುಕೊಂಡಾಗ ಅವನಿಗೆ ಗೋಪಾಲನ ನೆನಪಾಗಿತ್ತು.

ಗೋಪಾಲ ತನ್ನ ತಂದೆಯಲ್ಲ ಅಂತ ತಿಳಿದಿದ್ದು ಕೇವಲ ಎರಡು ದಿನಗಳ ಹಿಂದೆ. ಆದರೆ ಈ ಮುಂಚೆಯೂ ಅವನೆಂದೂ ತಂದೆಯ ಮಮಕಾರ ವನ್ನು ತೋರಿರಲಿಲ್ಲ. ತನ್ನನ್ನು ಎತ್ತಿಕೊಂಡು ಮುದ್ದಾಡಿದ್ದಾಗಲೀ, ಕೈ ಹಿಡಿದು ನಡೆಸಿದ್ದಾಗಲೀ, ಚಾಕ್ಲೇಟು ಪೆಪ್ಪರ್‌ಮೆಂಟುಗಳನ್ನು ತಂದುಕೊಟ್ಟಿದ್ದಾಗಲೀ ನೆನಪಿಲ್ಲ. ಅವನನ್ನು ಸ್ಕೂಲಿಗೆ ಕರೆದುಕೊಂಡು ಹೋಗುತ್ತಿದ್ದುದು ದೊಡ್ಡಮ್ಮನೇ. ಈ ದೊಡ್ಡಮ್ಮ ಯಾರು? ಎಲ್ಲಿಯವಳು ಎಂದು ಅವನೆಂದೂ ವಿಚಾರಿಸಿರಲಿಲ್ಲ. ಆದರೆ ಗೋಪಾಲನ ಅತ್ತಿಗೆ ಅಲ್ಲ, ಲಲಿತಳ ಅಕ್ಕ ಅಲ್ಲ ಎನ್ನುವುದನ್ನು ಬಲ್ಲ.

ಮನೆಯ ಎಲ್ಲ ಕೆಲಸವೂ ಅವಳದೇ, ಅಡಿಗೆ, ಕೆಲಸ ಎಲ್ಲಾ. ಬೇರೆ ಕೆಲಸದವರು ಹೊರಗಿನ ಕೆಲಸಕ್ಕೆ ಮಾತ್ರ.... ತನ್ನ ಅಪ್ಪ ತನ್ನ ತಾಯಿಗಿಂತ ಹೆಚ್ಚಾಗಿ ಮಾತಾಡುತ್ತಾ ಇದ್ದುದು ದೊಡ್ಡಮ್ಮನೊಡನೆ. ಈಗ ನೆನಪಿಗೆ ಬಂದಾಗ ಅಸಹ್ಯವೆನಿಸಿತ್ತು. ಆದರೆ ತನ್ನ ತಾಯಿ ಹಾಗೂ ಅವಳು ಎಂದೂ ಜಗಳ ವಾಡಿದ್ದುದನ್ನು ಕಂಡಿರಲಿಲ್ಲ. ಇದೆಂತಹ ಸ್ನೇಹವೋ ಅಂತ ಅಂದುಕೊಂಡಾಗ ವಿಚಿತ್ರವೆನಿಸಿತ್ತು.

ಗೋಪಾಲ ಕಾಮುಕ, ತನ್ನ ಮಗಳ ವಯಸ್ಸಿನ ಹುಡುಗಿಯ ಜತೆ ಸಂಬಂಧವನ್ನಿಟ್ಟು ಕೊಂಡಿದ್ದವನು ಇನ್ನೂ ಎಷ್ಟು ಸಂಬಂಧಗಳು ಇದ್ದವೋ.... ಸದ್ಯ.... ನಾನು ಅವನ ಸ್ವಂತ ಮಗನಲ್ಲವಲ್ಲ.... ಇಲ್ಲದಿದ್ದರೆ ತಾನು ಈ ದಿನ ಎಷ್ಟು ಪ್ರಾಯಶ್ಚಿತ್ತ ಮಾಡಿಕೊಂಡರೂ, ತನಗೆ ಹೊಸ ಜನ್ಮವಿಲ್ಲ. ಆದರೆ ನನಗೆ ಜನ್ಮಕೊಟ್ಟವರು ಯಾರು? ನನ್ನನ್ನೇಕೆ ಈ ಮನೆಗೆ ಕೊಟ್ಟರು? ಹುಟ್ಟಿದ ಕೂಡಲೇ ಹುಟ್ಟಿದವರಿಂದ ದೂರವಾಗಬೇಕಾದರೆ ನಾನೆಂತಹ ಪಾಪಿ ಇರಬೇಕು? 'ಪಾಪಿ ಸಮುದ್ರ ಹೊಕ್ಕರೆ ಮೊಳಕಾಲುದ್ದ ನೀರು' ಅನ್ನುವಂತೆ, ಸೇರಿದ್ದಾದರೂ ಎಂತಹ ನೀಚನ ಮನೆಗೆ....? ಮಗನಂತೆ ಸಾಕಿದವನಿಗೇ ದ್ರೋಹ ಮಾಡಲು ಹೇಸದವ ನೀಚನಲ್ಲದೇ ಇನ್ನೇನು?"

"ಅಂಕಲ್.... ಅಂಕಲ್" ಪ್ರಶಾಂತ ಕೂಗುತ್ತಿದ್ದ.

"ಏನಪ್ಪಾ...?"

"ಊಟ ಮಾಡೋಣ್ವಾ? ಹೊಟ್ಟೆ ಹಸೀತಿದೆ" 'ಹೂಂ' ಎನ್ನುತ್ತಾ ಎದ್ದ.

ಎಲ್ಲವನ್ನು ಬಿಸಿ ಮಾಡಿ, ಅವುಗಳನ್ನು ತಟ್ಟೆಗೆ ಬಡಿಸಿ, ಚಮಚವನ್ನು ಇಟ್ಟು ತಂದುಕೊಟ್ಟ. "ನಾನು ತಿನ್ನಿಸ್ಲಾ?"

"ಬೇಡ...." ಎಂದ ಪ್ರಶಾಂತ ನಾಚಿಕೆಯಿಂದ, ಮರುಕಳಿಸಿದ ನೆನಪುಗಳಿಂದ ಅವನಿಗೆ ಊಟ ಮಾಡಬೇಕೆನಿಸಿರಲಿಲ್ಲ. ಮನಸ್ಸು ಕಹಿಯಿಂದ ತುಂಬಿ ಹೋಗಿತ್ತು. ಪ್ರಶಾಂತನ ಊಟದ ನಂತರ ಅವನಿಗೆ ಮಾತ್ರೆ ಕೊಟ್ಟ ಅವನ ಮಲಗಿದ ನಂತರ, ತಾನೂ ಮಲಗಿದ. ಆಲೋಚನೆಗಳ ನಡುವೆ ನಿದ್ದ ಬರಲಿಲ್ಲ. ಎದ್ದು ಅಲ್ಲಿದ್ದ ವಾರಪತ್ರಿಕೆ, ಮಾಸ ಪತ್ರಿಕೆಗಳನ್ನು ತಿರುವಿ ಹಾಕಿದ.

ಒಂದು ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದ ಒಂದು ಆಶ್ರಮವನ್ನು ಕುರಿತು ಬರೆದ ಲೇಖನ ಅವನನ್ನು ಆಕರ್ಷಿಸಿತ್ತು. ಜಗನ್ನಾಥಾಶ್ರಮದ ಹುಟ್ಟು ಬೆಳವಣಿಗೆ, ಸಾಧನೆ ಇತ್ಯಾದಿಗಳನ್ನು ಕುರಿತ ಲೇಖನದ ಜತೆ ವರ್ಣಚಿತ್ರಗಳು ಇದ್ದವು. ಬರಹದ ಅಡಿಯಲ್ಲಿ ಆಸಕ್ತರು ಸಂಪರ್ಕಿಸಬೇಕಾದ ವಿಳಾಸ ಎಂದಿದ್ದುದು

ಅವನ ಗಮನವನ್ನು ಸೆಳೆಯಿತು. ಆ ಪತ್ರಿಕೆಯನ್ನು ಜೋಪಾನವಗಿ ತೆಗೆದಿರಿಸಿಕೊಂಡ.

ಮತ್ತೆ ನಾಲ್ಕಾರು ಬಾರಿ ಆ ಬರಹವನ್ನು ಓದಿದ್ದರೂ, ಅವನ ಮನಸ್ಸು ಡೋಲಾಯಮಾನವಾಗಿತ್ತು. ಈ ಆಶ್ರಮ ತನ್ನಂತಹವರಿಗಲ್ಲ, ಅಶಕ್ತ ವೃದ್ಧರು, ಅನಾಥ ಮಕ್ಕಳಿಗೆ ಅನುಕೂಲವನ್ನು ವಸತಿಯನ್ನು ಒದಗಿಸಿಕೊಡುವ ಆಶ್ರಮ, ತಾನು ವೃದ್ಧನಂತೂ ಅಲ್ಲ.... ಒಂದು ರೀತಿಯಲ್ಲಿ ನಾನು ಅನಾಥನೇ.... ಆದರೆ ಓದುಬರಹ ಕಲಿತ ತನ್ನನ್ನು ತಾನು ರಕ್ಷಿಸಿಕೊಳ್ಳಬಲ್ಲ ಅನಾಥ, ತನಗೆ ಅಲ್ಲಿ ಪ್ರವೇಶ ಸಿಗುವುದಾದರೂ ಹೇಗೆ? ಹೇಗಾದರೂ ಸರಿ ತಾನು ಆ ಆಶ್ರಮವನ್ನು ಒಂದು ಸಲ ನೋಡಿಬರಬೇಕೆಂಬ ಆಸೆ ಹುಟ್ಟಿತು.

ಸಮಯ ಸಾಧಿಸಿ ಈ ವಿಷಯವನ್ನು ಪುರುಷೋತ್ತಮನಿಗೆ ತಿಳಿಸಿದ.

ಅವನು ಗಂಭೀರನಾದ. "ಅಂತಹ ಆಶ್ರಮಕ್ಕೆ ಹೋಗಿ ಸೇರಿಕೊಳ್ಳುವುದಾದರೆ ನೀನು ತನುಮನಧನದಿಂದ ಅಂತಹ ಸೇವಾಕೇಂದ್ರದಲ್ಲಿ ದುಡಿಯಬೇಕಾಗುತ್ತದೆ. ಅದು ನಿನ್ನಿಂದ ಸಾಧ್ಯವೆ?"

"ಅಂದರೆ....?"

"ನೀನು ಯಾವ ಫಲಾಪೇಕ್ಷೆಯಿಲ್ಲದೇ ದುಡಿದರೆ ನೀನು ಅಲ್ಲಿ ಹೋಗಿ ಇದ್ದುದಕ್ಕೂ ಸಾರ್ಥಕ. ಅದನ್ನು ನೀನು ಮೊದಲೇ ನಿರ್ಧರಿಸಬೇಕಾಗುತ್ತದೆ"

ಅನಂತ ಚಿಂತೆಗೊಳಗಾದ. ಪುರುಷೋತ್ತಮನೇ ಸಲಹೆ ಕೊಟ್ಟ.

"ಒಂದು ಸಲ ಸುಮ್ಮನೇ ಹೋಗಿ ನೋಡಿಕೊಂಡು ಬರೋಣ. ಆಮೇಲೆ ಯೋಚಿಸಿದರಾಯ್ತು." ಅವನು ನುಡಿದಂತೆ ಎರಡು ದಿನಗಳ ನಂತರ, ತನ್ನ ಕೆಲಸಗಳ ಮಧ್ಯೆ ಬಿಡುವು ಮಾಡಿಕೊಂಡ. ಅವರಿಬ್ಬರ ಜತೆ ಪ್ರಶಾಂತನೂ ಹೊರಟಿದ್ದ ಅವನಿಗೆ ಖುಷಿಯೋ ಖುಷಿ.

ಆಶ್ರಮದ ವಿಶಾಲವಾದ ಗೇಟಿನ ಮುಂದೆ ಜೀಪು ನಿಂತಿತು. ಎಲ್ಲರೂ ಇಳಿದರು. "ಶ್ರೀ ಜಗನ್ನಾಥಾಶ್ರಮ" ಎಂಬ ಫಲಕ ಅವರನ್ನು ಸ್ವಾಗತಿಸಿತು. ಅಲ್ಲಿ ಗೇಟಿನ ಬಳಿ ಇದ್ದ ವಾಚ್‌ಮನ್ ಪುರುಷೋತ್ತಮನನ್ನು ಕಂಡು, ಸೆಲ್ಯೂಟ್ ಹೊಡೆದು "ಜೈ ಜಗನ್ನಾಥಾ" ಎಂದಿದ್ದ. ಅನಂತ ಅಚ್ಚರಿಗೊಂಡ. ಪುರುಷೋತ್ತಮ ತಾನು "ಜೈ ಜಗನ್ನಾಥಾ" ಎಂದಾಗ ಪ್ರಶಾಂತ ದನಿಗೂಡಿಸಿದ್ದ. ಅನಂತ ಯಾರಿಗೂ ಕೇಳಿಸದಂತೆ "ಜೈ ಜಗನ್ನಾಥಾ" ಎಂದುಕೊಂಡು ಗೇಟನ್ನು ದಾಟಿ ಒಳಬಂದ.

ವಿಶಾಲವಾದ ಕಾಲುದಾರಿಯಲ್ಲಿ ಮುಂದೆ ಮುಂದೆ ನಡೆದು, ಆಶ್ರಮದ ಕಟ್ಟಡವನ್ನು ತಲುಪಿದರು. ಮುಂದಿದ್ದ ಚಪ್ಪರದಲ್ಲಿ ಕೆಲವರು ಸ್ವಾಮಿಗಳ ದರ್ಶನಕ್ಕಾಗಿ ಕಾಯುತ್ತಾ ಕುಳಿತಿದ್ದರು. ಆದರೆ ಇವರುಗಳು ಕಾಯಬೇಕಾಗಿರ

ಲಿಲ್ಲ, ಪುರುಷೋತ್ತಮ ಹೇಳಿಕಳಿಸಿದೊಡನೆ ಅವನಿಗೆ ಒಳಗೆ ಬರಲು ಅನುಮತಿ ಸಿಕ್ಕಿತ್ತು.

ಧ್ಯಾನ ಮಂದಿರದ ಆಚೆ ಇದ್ದ ಭವ್ಯವಾದ ವಿಶಾಲವಾದ ಕೋಣೆಯಲ್ಲಿ ಕೂತಿದ್ದ ಸ್ವಾಮಿಗಳನ್ನು ಕಂಡು ಪುರುಷೋತ್ತಮ ನಮಸ್ಕರಿಸಿದ. "ಜೈ ಜಗನ್ನಾಥಾ" ಎಂದು ನುಡಿದ ಸ್ವಾಮಿಗಳು ಪ್ರಶಾಂತನನ್ನು ತಮ್ಮ ಬಳಿಗೆ ಕರೆದರು.

ಪ್ರಶಾಂತ ಬಳಿ ಸರಿದು, "ಜೈ ಜಗನ್ನಾಥಾ" ಎಂದಿದ್ದ. ಅವರು ಮುಗುಳ್ನಕ್ಕು ಮೈದಡವಿ, ಅವನ ತಲೆ ಮೇಲೆ ಕೈಇಟ್ಟು ಏನನ್ನೋ ಜಪಿಸಿ, ಪಕ್ಕದ ತಟ್ಟೆಯಲ್ಲಿದ್ದ ಕಲ್ಲು ಸಕ್ಕರೆ ಬಾದಾಮಿಗಳನ್ನು ಹಿಡಿತುಂಬ ತೆಗೆದು ಅವನ ಕೈಗಿತ್ತರು. ಪ್ರಶಾಂತ ಹಿಂದೆ ಬಂದ. ಪುರುಷೋತ್ತಮ ವಿನೀತನಾಗಿ ನುಡಿದ. "ಇವನು ಅನಂತ ಅಂತ ನಡೆದ ಒಂದು ವಿಚಿತ್ರ ಸನ್ನಿವೇಶದಿಂದ ಬಹಳ ನೊಂದಿದ್ದಾನೆ. ತಾವು ಆಶೀರ್ವಾದ ಮಾಡಿ ಕರುಣಿಸಬೇಕು."

" 'ಜೈ ಜಗನ್ನಾಥಾ' ಭಗವಂತನು ನಿನ್ನನ್ನು ಅನುಗ್ರಹಿಸಲಿ ಅನಂತ"

ಅನಂತ, ಅವರಿಗೆ ಬಾಗಿ ವಂದಿಸಿದ. "ನೀವು ಸಂಜೆಯವರೆಗೆ ಇಲ್ಲಿದ್ದು ಇಲ್ಲಿಯ ಆತಿಥ್ಯವನ್ನು ಸ್ವೀಕರಿಸಿ ಹೋಗುವಿರಂತೆ.... ಈಗ ಹೊರಗೆ ಸುತ್ತಾಡಿ ಬನ್ನಿ. ನನಗಾಗಿ ಕಾದಿರುವ ಜನರಿಗೆ ನಿಧಾನವಾಗುತ್ತೆ, ನಂತರ ನಿಧಾನವಾಗಿ ಮಾತನಾಡೋಣ ಎಂದು ಸ್ವಾಮೀಜಿಯು ಹೇಳಿ, ಅಲ್ಲಿ ನಿಂತಿದ್ದ ಒಬ್ಬ ವ್ಯಕ್ತಿಯನ್ನು ಕರೆದರು, "ಭೈರಪ್ಪಾ.... ಇವರಿಗೆ ನಮ್ಮ ಆಶ್ರಮದ ಪರಿಚಯವನ್ನು ಮಾಡಿಕೊಡು"

ಮತ್ತೊಮ್ಮೆ ವಂದಿಸಿ, ಎಲ್ಲರೂ ಹೊರಗೆ ಬಂದರು.

ವೃದ್ಧರ ವಸತಿ ಗೃಹ, ಅನಾಥ ಮಕ್ಕಳ ವಾಸಗೃಹ, ಪಾಕಶಾಲೆ, ಗೋಶಾಲೆಗಳನ್ನು ದಾಟಿ ಮನೋಹರವಾದ ತೋಟದ ಕಡೆ ನಡೆದರು. ಮೊದಲು ಕಂಡುಬಂದ ಹೂವಿನ ತೋಟವನ್ನು ದಾಟಿ ಹಣ್ಣಿನ ತೋಟವನ್ನು ಪ್ರವೇಶಿಸಿದರು. ಭೈರಪ್ಪ ಎಲ್ಲದರ ವಿವರಣೆಯನ್ನು ಕೊಡುತ್ತಿದ್ದ.

ಕೈಗೆಟಕುವಂತೆ ಬಿಟ್ಟಿದ್ದ ಮಾವಿನಕಾಯಿಗಳು ಪ್ರಶಾಂತನಬಾಯಲ್ಲಿ ನೀರೂರಿಸಿತು. "ಅಪ್ಪಾ.... ಮಾವಿನಕಾಯಿ" ಕೈ ಎತ್ತಿ ತೋರಿದ.

"ಬೇಡ ಕೆಮ್ಮು ಆಗುತ್ತೆ"

"ಅಪ್ಪಾ.... ಅಲ್ನೋಡು ಹಲಸಿನ ಹಣ್ಣುಗಳು...." ಆಸೆಯಿಂದ ಕಣ್ಣರಳಿಸಿದ. "ಬೇಡ.... ಹೊಟ್ಟೆ ನೋವು ಬರುತ್ತೆ?"

"ಯಾಕೆ ಹೆದರಿಸ್ತೀರಿ ಸಾರ್ ಮಗೂನ? ಕೆಮ್ಮು ಬಂದರೆ ಕಷಾಯ ಕುಡಿದರಾಯ್ತು. ಹೊಟ್ಟೆ ನೋವು ಬಂದರೆ ಒಂದು ಹೊತ್ತು ಉಪವಾಸವಿದ್ದ

ರಾಯ್ತು" ಭೈರಪ್ಪ ನಗುತ್ತಾ ಉತ್ತರಿಸಿದ.

"ಹಾಗಲ್ಲ ಭೈರಪ್ಪಾ..."

"ಮಾವು ಹಲಸು ಎಲ್ಲಾ ಸೃಷ್ಟಿ ನಮಗಾಗಿ ಪ್ರಕೃತಿ ಕೊಡುವುದು ನಾವು ತಿಂದು ಸಂತೋಷವಾಗಿರಲಿ ಅಂತ ತಾನೇ...?"

"ಅದೇನೋ ಸರಿ.... ಆದರೆ ಪರೀಕ್ಷೆ ಸಮಯದಲ್ಲಿ ಆರೋಗ್ಯ ಕೆಡಿಸಿಕೊಂಡರೆ ಕಷ್ಟ ಅಂತ ಅಷ್ಟೇ...."

"ಒಂದು ಮಿತಿಯಲ್ಲಿ ತಿಂದರೆ ಏನೂ ಆಗಲ್ಲ ಬಿಡಿ. ಉಂಡು ಮಾವಿನ ಹಣ್ಣು, ಹಸಿದು ಹಲಸು.... ಅಂತ, ಮಧ್ಯಾಹ್ನ ಊಟವಾದ ನಂತರ ಮಾವಿನಹಣ್ಣು ತಿನ್ನುವಂತೆ, ರಾತ್ರಿ ಹಲಸಿನ ತೊಳೆ.... ಊಟ ಮಾಡಬೇಡ ಏನು ಹೇಳ್ತೀಯಾ ಪ್ರಶಾಂತಪ್ಪ....?"

ಅನಂತ ಭೈರಪ್ಪನ ಮಾತುಗಳನ್ನೇ ಆಲಿಸುತ್ತಾ ಬಂದಿದ್ದ. ಸುತ್ತಲಿನ ಹಣ್ಣು ಕಾಯಿಗಳ ಮೇಲೆ ಅವನ ಗಮನವಿರಲಿಲ್ಲ.

"ನೋಡಿ ಸಾರ್, ಇದು ಧ್ಯಾನ ಮಂಟಪ....ಇಲ್ಲಿ ಕುಳಿತು ಮೌನವಾಗಿ ಧ್ಯಾನ ಮಾಡಬಹುದು. ಜೋರಾಗಿ ಸಂಗೀತ ಹಾಡಬಹುದು, ಅತ್ತು ಗೋಳಾಡಬಹುದು, ಮನಸ್ಸಿಗೆ ಬಂದಂತೆ ಯಾರನ್ನಾದರೂ ಬೈಯಬಹುದು." ಭೈರಪ್ಪ ನಗುತ್ತಾ ನುಡಿದಾಗ ತಮಾಷೆ ಮಾಡುತ್ತಿದ್ದಾನೆಂದುಕೊಂಡರು. ಆದರೂ ಅನಂತನಿಗೆ ಅಲ್ಲಿ ತಾನೊಬ್ಬನೇ ನಿಂತು, ಗೋಪಾಲನನ್ನೂ ಸುಗುಣನನ್ನೂ ಬಾಯಿಗೆ ಬಂದಂತೆ ಬೈಯಬೇಕೆಂದೆನಿಸಿತ್ತು..... ಆದರೆ ಈಗಲ್ಲ....ಎಂದಾದರೂ ಏಕಾಂಗಿಯಾಗಿ ನಿಂತು....

ಮಂಟಪದ ಮೆಟ್ಟಿಲುಗಳನ್ನು ಕಂಡೊಡನೆ, ಎಲ್ಲರಿಗೂ ಆಯಾಸ ವಾಗಿದೆಯೆಂದೆನಿಸಿತ್ತು. ಪ್ರಶಾಂತ ಸ್ವಲ್ಪ ಹೊತ್ತು ಕೂರುವ ಆಸೆಯನ್ನು ವ್ಯಕ್ತಪಡಿಸಿದ. ಕೂತೊಡನೆ ತಮಾಷೆಗೆ ಎಂಬಂತೆ ಕಣ್ಣು ಮುಚ್ಚಿ ಧ್ಯಾನಿಸಿದ.

"ಅಪ್ಪಾ.... ನೀವು ತುಂಬಾ ಒಳ್ಳೆಯವರು. ನಾನು ನಿಮ್ಮನ್ನು ಸದಾ ಕಾಲಕ್ಕೂ ಪ್ರೀತಿಸುತ್ತೇನೆ. ಅಂಕಲ್ ನೀವೂ ಸಹ ಒಳ್ಳೆಯವರು, ನೀವು ನನ್ನ ಜತೆ ಇಲ್ಲದೇ ಇದ್ದಿದ್ದರೆ ನನ್ನ ಕೈ ನೋವು ಕಡಿಮೆಯಾಗುತ್ತಿರಲಿಲ್ಲ. ಭೈರಪ್ಪಾ ನೀವಂತೂ ತುಂಬಾ ಒಳ್ಳೆಯವರು, ನಾನು ನಿನ್ನನ್ನು ಯಾವತ್ತಿಗೂ ಮರೆಯುವುದಿಲ್ಲ" ಎಂದು ಆಡಿದಾಗ ಎಲ್ಲರೂ ಕಣ್ಣರಳಿಸಿದರು... ಮುಗುಳ್ನಗೆ ತೇಲಿತು.

"ಏಯ್.... ಪಚ್ಚು... ಏಳು ಹೊತ್ತಾಯ್ತು. ವಾಪಸ್ಸು ಹೋಗೋಣ" ಅವನು ಹೆದರಿದ್ದವನಂತೆ. ಎದ್ದುನಿಂತ ಭೈರಪ್ಪ ನಕ್ಕ.

"ಈ ಸ್ಥಳವೇ ಹಾಗೇ... ಯಾರ ಬಾಯಲ್ಲೂ ಕೆಟ್ಟ ಮಾತು ಬರಲು

ಸಾಧ್ಯವೇ ಇಲ್ಲ..... ಇದು ಜಗನ್ನಾಥಾನಂದ ಸ್ವಾಮೀಜಿಯವರು ಸಮಾಧಿ ಹೊಂದಿದ ಸ್ಥಳ." ಅನಂತ ಛಂಗನೆ ಎದ್ದ. ಇದ್ದಕ್ಕಿದ್ದಂತೆ ವಾತಾವರಣ ಗಂಭೀರವಾಯಿತು. ಅಂತೆನ್ನಿಸಿದಾಗ ತೋಟದ ಆಳುಗಳಿಗೆ ಹೇಳಿ ಎಳನೀರನ್ನು ಕೆಡವಿಸಿ ಕುಡಿಯಲು ಕೊಟ್ಟ.

ಆ ಮಧ್ಯಾಹ್ನದ ಭೋಜನಾನಂತರ, ಸ್ವಾಮೀಜಿಯವರು ಅವರುಗಳೊಡನೆ ಮಾತನಾಡಲು ಕುಳಿತರು.

"ಏನಪ್ಪಾ... .ನೀನು ಎಲ್ಲಿಯವನು? ನಿನ್ನ ಸಮಸ್ಯೆಯೇನು!" ಸ್ವಾಮೀಜಿ ಪ್ರಶ್ನಿಸಿದಾಗ ಅನಂತ ಪುರುಷೋತ್ತಮನ ಕಡೆ ನೋಡಿದ.

"ಇರಲಿ ನೀನೇ ಹೇಳು. ನಿನ್ನ ಸಮಸ್ಯೆ ನಿನ್ನದು, ಅದನ್ನು ಎದುರಿಸುವವನು ನೀನೇ ತಾನೇ..." ಅವರು ಮುಗುಳ್ನಗುತ್ತಾ ನುಡಿದಾಗ ಅವರಲ್ಲಿ ವಿಶ್ವಾಸ ಮೂಡಿತು. ವಿನಯದಿಂದ ಕೇಳಿಕೊಂಡ.

"ನಾನು ಮನೆಬಿಟ್ಟು ಹೊರಬಂದಿದ್ದೇನೆ. ನನಗೀಗ ಈ ಆಶ್ರಮದಲ್ಲಿರುವ ಮನಸ್ಸಾಗಿದೆ. ಅದಕ್ಕೆ ಅವಕಾಶ ಕೊಡಬೇಕು"

"ವೈರಾಗ್ಯ ನಿನ್ನಂತಹವನಿಗಿಲ್ಲ. ನೀನು ವೃದ್ಧನೂ ಅಲ್ಲ, ಅನಾಥನೂ ಅಲ್ಲ.... ಅಥವಾ ಅಂಗವಿಕಲನೂ ಅಲ್ಲ.... ನಿನಗೆ ಆಶ್ರಮದಲ್ಲಿ ಅವಕಾಶವಿಲ್ಲ."

"ಹಾಗೆ ಹೇಳಬೇಡಿ ಸ್ವಾಮೀಜಿ.... ನನ್ನವರು ಅಂತ ಅನ್ನಿಸಿದ್ದವರು ನನಗೆ ದ್ರೋಹ ಮಾಡಿದರು. ನನಗೆ ಮನಶ್ಯಾಂತಿ ಇಲ್ಲವಾಗಿದೆ. ನನ್ನ ವಿದ್ಯಾಭ್ಯಾಸ ಅಪೂರ್ಣವಾಗಿದೆ..... ಇರಲು ನೆಲೆಯಿಲ್ಲವಾಗಿದೆ. ಆದರೆ ಎಲ್ಲವನ್ನು ತ್ಯಜಿಸಿ ಹೇಡಿಯಂತೆ ಆತ್ಮಹತ್ಯೆ ಮಾಡಿಕೊಳ್ಳುವ ಆಸೆಯಂತೂ ನನಗಿಲ್ಲ. ಜೀವನದಲ್ಲಿ ಏನನ್ನಾದರೂ ಸಾಧಿಸುವ ಬಯಕೆಯುಂಟಾಗುತ್ತಿದೆ. ಇಲ್ಲಿದ್ದುಕೊಂಡು, ನಿಮ್ಮಂತಹವರ ಸೇವೆ ಮಾಡಿ ಧನ್ಯವಾಗುತ್ತೇನೆ. ನನಗೆ ದಯವಿಟ್ಟು ಅವಕಾಶವನ್ನು ಮಾಡಿಕೊಡಿ. ಇಲ್ಲ ಎನ್ನಬೇಡಿ"

"ನೀನಿನ್ನು ಚಿಕ್ಕವನು, ಉದ್ಯೋಗ, ವಿವಾಹ ಬಂಧನಗಳು ನಿನ್ನನ್ನು ಸೆಳೆಯಬಹುದು. ಅಗ ನೀನು ಏನನ್ನು ಸಾಧಿಸಿದಂತಾಗುವುದಿಲ್ಲ"

ಆಗ ಪುರುಷೋತ್ತಮ, ಅನಂತನಿಗಾದ ಅನ್ಯಾಯವನ್ನು ತಿಳಿಸಿದ.

"ಇವನು ನನ್ನ ಮನೆಯಲ್ಲಿದ್ದು, ಯಾವುದಾದರೂ ಉದ್ಯೋಗವನ್ನು ಮಾಡಬಹುದು. ಆದರೆ ಆ ಊರಿನಲ್ಲಿರಲು ಅವನಿಗೆ ಮನಸ್ಸಿಲ್ಲ.... ಸದ್ಯಕ್ಕಂತೂ ಹತಾಶನಾಗಿದ್ದಾನೆ. ಯಾವ ಆಸಕ್ತಿಯೂ ಇವನಿಗಿಲ್ಲ...." ಅನಂತನ ಕೈ ಸವರಿದ.

"ಒಮ್ಮೆ ನೀನು ಇಲ್ಲಿಗೆ ಸೇರಿದೆಯೆಂದರೆ ಆಸಕ್ತಿಯಿಂದ ಇಲ್ಲಿನ ಕೆಲಸ, ಕಾರ್ಯಕಲಾಪಗಳಲ್ಲಿ ನಿನ್ನನ್ನು ನೀನು ತೊಡಗಿಸಿಕೊಳ್ಳಬೇಕಾಗುತ್ತದೆ.

ಅದು ನಿನ್ನಿಂದ ಸಾಧ್ಯವೇ? ಇಲ್ಲಿಯ ಕೆಲಸಗಳೂ ಸುಲಭವಲ್ಲ. ಬೇಕಾದಷ್ಟು ಜನ ಸಿಬ್ಬಂದಿಗಳಿದ್ದಾರೆ. ಅವರವರಲ್ಲಿ ಅನ್ಯೋನ್ಯತೆ ಇಲ್ಲವಾದಾಗ ಒಡಕು ಮೂಡುತ್ತದೆ. ಅದರಿಂದ ಅನ್ಯಾಯವಾಗುವುದು ನಮ್ಮ ಈ ಆಶ್ರಮಕ್ಕೆ ಒಮ್ಮೆ ಕೆಟ್ಟ ಹೆಸರು ಅಂಟಿತೆಂದರೆ ಆಶ್ರಮದ ಸರ್ವನಾಶ...."

"ನಾನು ಒಳ್ಳೆಯ ರೀತಿಯಲ್ಲಿ ಸಹಕರಿಸಲು ಪ್ರಯತ್ನಿಸುತ್ತೇನೆ."

"ಒಳ್ಳೆಯದು.... ಒಂದು ವೇಳೆ ಆಗದಿದ್ದರೆ....?"

"ನಿಮ್ಮ ಅಪ್ಪಣೆ ಪಡೆದು ನಾನು ವಾಪಸ್ಸು ಹೊರಟುಹೋಗುತ್ತೇನೆ"

"ಅದು ಮಾತ್ರ ಸಾಧ್ಯವಿಲ್ಲ, ಒಂದು ಸಲ ಈ ಆಶ್ರಮಕ್ಕೆ ಸದಸ್ಯನಾದರೆ, ನೀನು ನಮ್ಮ ಆಜ್ಞೆಯಿಲ್ಲದೇ ಎಲ್ಲಿಗೂ ಹೋಗುವಂತಿಲ್ಲ. ಅದನ್ನು ನಾವುಗಳು ನಿರ್ಧರಿಸುತ್ತೇವೆ ಇರಲಿ, ನಿನಗೆ ಸ್ವಲ್ಪ ಕಾಲಾವಕಾಶ ಕೊಡುತ್ತೇನೆ, ಚೆನ್ನಾಗಿ ಆಲೋಚಿಸು.. ಇಲ್ಲಿಯ ರೀತಿ ನೀತಿ ನಿಯಮಾವಳಿಗಳು ಹೊರಗಿನ ಆಗು ಹೋಗುಗಳಿಗಿಂತ ಭಿನ್ನವಾಗಿರುತ್ತದೆ. ಇಲ್ಲಿಯ ಜೀವನ ಒಂದು ರೀತಿಯ ತಪಸ್ಸು, ಸಾಧನೆ..."

ಅನಂತನನ್ನು ಹೆದರಿಸುವಂತೆ ಇತ್ತು ಅವರ ನುಡಿಗಳು.... ಹೌದು ಅವರೇ ಹೇಳಿದಂತೆ ತಾನು ಆಲೋಚಿಸಿ ಈ ಹೊಳೆಗೆ ಇಳಿಯಬೇಕು. ಇಲ್ಲದಿದ್ದರೆ ನಾನು ಈಜುವುದಾದರೂ ಹೇಗೆ.... ದಡ ಸೇರುವುದು ಹೇಗೆ?

ಸ್ವಾಮೀಜಿಯವರು ಹೊರಡುವಂತೆ ಸಂಜ್ಞೆ ಮಾಡಿದಾಗ, ಅನಂತ, ಪುರುಷೋತ್ತಮ ಇಬ್ಬರೂ ಎದ್ದು ವಂದಿಸಿದರು. "ಜೈ ಜಗನ್ನಾಥಾ" ಎನ್ನುತ್ತಾ ಆಶೀರ್ವಾದ ಮಾಡಿ ಪಕ್ಕದ ಕೊಠಡಿಗೆ ಹೊರಟುಹೋದರು. ಹೊರಗೆ ಕೂತಿದ್ದ ಪ್ರಶಾಂತ ತೂಕಡಿಸುತ್ತಿದ್ದ ಇವರುಗಳನ್ನು ಕಂಡು ಭೈರಪ್ಪ ಎದ್ದುನಿಂತ.

"ಹೊರಟೇ ಬಿಟ್ರಾ? ಸಾರ್....?"

"ಹೂಂ, ಹೊತ್ತಾಯ್ತು..." ಜೀಪಿನ ಬಳಿಗೆ ಬಂದರು ಭೈರಪ್ಪ ಬಂದು ಹಲಸಿನ ಹಣ್ಣನ್ನು ಹತ್ತಾರು ಮಾವಿನ ಹಣ್ಣುಗಳನ್ನು ತಂದಿರಿಸಿದ್ದ.

"ಇದೆಲ್ಲಾ ಯಾಕೆ ಭೈರಪ್ಪಾ.....?"

"ಇದೆಲ್ಲ ಈ ಮಗೀಗೆ ಎನ್ನುತ್ತ ಭೈರಪ್ಪ, ಪ್ರಶಾಂತನ ಕೆನ್ನೆಗಳನ್ನು ತಟ್ಟಿದ. ಜೀಪು ಹೊರಟಿತ್ತು, ಭೈರಪ್ಪ ಟಾ... ಟಾ..' ಮಾಡಿದ್ದ.

"ಈ ತೋಟ ಈ ಜಮೀನು ಎಲ್ಲಾ ಭೈರಪ್ಪನದೇ.... ಅದನ್ನೆಲ್ಲ ಆಶ್ರಮಕ್ಕೇ ವಹಿಸಿಕೊಟ್ಟು ಬಿಟ್ಟಿದಾನೆ. ತಾನೂ ಅಲ್ಲೇ ಇದ್ದು ಬಿಟ್ಟಿದಾನೆ" ಪುರುಷೋತ್ತಮ ಹೇಳಿದ್ದ.

"ಯಾಕೆ? ಅವರಿಗೆ ಹತ್ತಿರದವರು ಯಾರೂ ಇಲ್ವಾ?"

"ಇದಾರೆ.... ಸ್ವಂತ ಅಣ್ಣನ ಮಕ್ಕಳು ದಗಾಹಾಕಿ. ಆಸ್ತಿ ಲಪಟಾಯಿಸಲು

ನೋಡಿದಾಗ ಸಾಕಷ್ಟು ಗಲಾಟೆ ನಡೆಯಿತು. ಭೈರಪ್ಪನ ಕೊಲೆಗೂ ಪ್ರಯತ್ನ ನಡೆಯಿತು. ಅದಾದ ನಂತರ ರೋಸಿ ಹೋದ ಭೈರಪ್ಪ ಹೇಗೋ ಈ ಆಶ್ರಮಕ್ಕೆ ಬಂದು ಸೇರಿದ. ನಂತರ ತನ್ನ ಸ್ವತ್ತನ್ನೆಲ್ಲ ಆಶ್ರಮಕ್ಕೆ ದಾನ ಮಾಡಿಬಿಟ್ಟ. ಆ ನಂತವೂ ಸಾಕಷ್ಟು ಗಲಾಟೆ ನಡೆಯಿತು. ಆದರೆ ಕಾನೂನು ಭದ್ರವಾಗಿ ರಕ್ಷಣೆ ನೀಡಿದೆ"

"ಭೈರಪ್ಪನ ಹೆಂಡತಿ ಮಕ್ಕಳ ಗತಿ?"

"ಹೆಂಡತಿಯೂ ಇಲ್ಲ, ಮಕ್ಕಳೂ ಇಲ್ಲ, ಅಣ್ಣನ ಮಕ್ಕಳನ್ನು ತನ್ನ ಮಕ್ಕಳಂತೆ ಬೆಳೆಸಿದ. ಅವರುಗಳು ಆಸ್ತಿಯನ್ನು ಇವನಿಗೆ ತಿಳಿಯದಂತೆ ಮಾರಿ ಬಿಡುವ ಸನ್ನಾಹದಲ್ಲಿದ್ದರು. ಸ್ವಂತ ಮಕಳಿದ್ದಿದ್ದರೆ ಭೈರಪ್ಪನಿಗೆ ಇಲ್ಲಿ ಬಂದಿರ ಬೇಕಾದಂತಹ ಸ್ಥಿತಿ ಬರುತ್ತಿರಲಿಲ್ಲ"

"ಹಾಗೆ ಹೇಳಬೇಡಿ ಸಾರ್... ಮಕ್ಕಳು ತಂದೆತಾಯಿಯರನ್ನು ನಿಯತ್ತಿನಿಂದ ನೋಡಿಕೊಂಡಿದ್ದರೆ, ಈ ವೃದ್ಧಾಶ್ರಮಗಳು ಏಕೆ ತಲೆ ಎತ್ತುತ್ತಿದ್ದವು?"

"ಹೌದು ಅದು ನಿಜ, ಆದರೆ ಎಲ್ಲಾ ಮಕ್ಕಳೂ ಹಾಗೇ ಅಂತ ಹೇಳುವು ದಕ್ಕಾಗುವುದಿಲ್ಲ. ಆದರೆ ಮಕ್ಕಳಿಂದ ಅನಾದರಣೆಗೊಳಗಾದ ತಂದೆತಾಯಿಗಳ ಗೋಳು ಬೇಡ ಕೆಲವರು ಮಕ್ಕಳಿಗೆ ಹಿಡಿ ಶಾಪ ಹಾಕುವಷ್ಟು ಬೇಸತ್ತಿರುತ್ತಾರೆ. ಇದಕ್ಕೆಲ್ಲ ಸಮಾಜದಲ್ಲಿ ಆಗುವ ಬದಲಾವಣೆಗಳೇ ಕಾರಣ ಅಂತ ಅನ್ನಿಸುತ್ತೆ. ಜನಗಳ ಮನೋಭಾವ ಬದಲಾದಂತೆ, ಸಮಾಜ ಬದಲಾವಣೆ, ಅದು ಎಲ್ಲೆಲ್ಲೋ ಹೋಗುತ್ತದೆ. ಒಟ್ಟಿನಲ್ಲಿ ಸುಖವಿಲ್ಲ ನೆಮ್ಮದಿ ಇಲ್ಲ, ವೃದ್ಧಾಶ್ರಮದಲ್ಲಿರುವವರು ಸುಖವಾಗಿರ್ತಾರೆ ಅಂತ ಅಂದ್ಕೊಡ್ಯಾ? ಅಲ್ಲೂ ಕಚ್ಚಾಟ."

"ಇದೆಲ್ಲ ನಿಮಗೆ ಹೇಗೆ ಗೊತ್ತು?"

ಭೈರಪ್ಪ ಎಲ್ಲಾ ಹೇಳ್ತಾನೆ ಅವನು ಎಲ್ಲರಿಗೂ ಬೇಕಾದವನು. ಅವನು ಒಂದು ಸಮಾಧಿಯ ಮಂಟಪದ ಬಳಿ ಹೇಳಲಿಲ್ಲವೆ... ಯಾರು ಯಾರನ್ನಾದರೂ ಭೈಯಬಹುದು ಅಂತ...."

"ಓ... ಹಾಗಾದರೆ ಅಲ್ಲೂ ರಾಜಕೀಯ"

"ಹೂಂ ನಾನು ಹೆಚ್ಚು ತಾನು ಹೆಚ್ಚು ಅಂತ. ಕೆಲವರು ಜಾಸ್ತಿ ಹಣ ಕೊಟ್ಟಿರುತ್ತಾರೆ. ಕೆಲವರು ಯಾರದೋ ಇನ್‌ಪ್ಲೂಯೆನ್ಸ್ ಮೇಲೆ ಬಂದು ಸೇರಿರುತ್ತಾರೆ. ಕೆಲವರಿಗೆ ಅವರ ಮಕ್ಕಳು ಮನೆಯಿಂದಾಚೆ ಬರಿಗೈಯಲ್ಲಿ ಕಳಿಸಿದ್ದರೂ ಸರಿ, ಅಮೇರಿಕಾದಲ್ಲಿದ್ದಾರೆ ಎನ್ನುವ ಜಂಭ.... ಹೀಗೇ ಏನೇನೋ"

"ಹೀಗೇ ಮುಂದುವರೆದರೇನು ಗತಿ?"

"ಅಧೋಗತಿ.... ಕಾಲಕ್ರಮೇಣ ಅಲ್ಲಿಯೂ ಸಾಕಷ್ಟು ಬದಲಾವಣೆ

ಗಳನ್ನು ತರಬೇಕಾಗುತ್ತದೆ. ಆಶ್ರಮ ನಡೆಸುವುದು ಸುಲಭವಲ್ಲ ಎಲ್ಲರೂ ನಿಸ್ವಾರ್ಥಿಗಳಾಗಿ ದುಡಿಯಬೇಕು...."

"ಸ್ವಾಮೀಜಿ....?"

"ಸ್ವಾಮೀಜಿ ಒಳ್ಳೆಯವರೇ, ಆದರೆ ಅವರ ಅನುಯಾಯಿಗಳೋ ಅವರವರಲ್ಲೇ ಪೈಪೋಟಿ, ಸ್ವಾಮೀಜಿ ಒಬ್ಬರು ಏನು ಮಾಡಬಲ್ಲರು? ಶಿಕ್ಷೆ ದಂಡ ಯಾವುದನ್ನು ವಿಧಿಸುವಂತಿಲ್ಲ, ಬಾಯಲ್ಲಿ ತಿಳುವಳಿಕೆ ಹೇಳುತ್ತಾರೆ.... ಆದ್ದರಿಂದಲೇ ಭೈರಪ್ಪನಂತಹ ಕೆಲವು ಮಂದಿಯನ್ನು ಆಶ್ರಮದ ಮೇಲ್ವಿಚಾರಣೆ ಗಾಗಿ ಇಟ್ಟುಕೊಂಡಿದ್ದಾರೆ. ಆದರೆ ಇವನಿಗೆ ವಿದ್ಯಾ ಇಲ್ಲ, ಎಷ್ಟೋ ವಿಷಯದ ಅರಿವಿಲ್ಲ, ಅದಕ್ಕೆ ಬೇರೆಯವರು ತಮಗೆ ತೋಚಿದಂತೆ ಹಾಗೇ ನಡೀತಿದೆ...."

"ಮೂವತ್ತು ಮೂವತ್ತೈದು ಜನ ವೃದ್ಧರಿರಬಹುದು. ಆದರೆ ಅನಾಥಾಶ್ರಮದಲ್ಲಿ ನೂರಾರು ಮಕ್ಕಳಿವೆ.... ಆ ಮಕ್ಕಳಿಗೆ ಆಹಾರ, ಬಟ್ಟೆ, ವಿದ್ಯೆ ಎಲ್ಲಾ ಸಾಗಬೇಕಲ್ಲ. ದಾನದತ್ತಿಗಳಿಂದ ಹಣ ಸಂಗ್ರಹವಾಗುತ್ತದೆ. ಆದರೂ ಏನೋ ಕಚ್ಚಾಟ

"ಆ ಮಕ್ಕಳನ್ನು ನೋಡಿದರೆ, ಯಾಕಾದರೂ ಹುಟ್ಟಿ ಬಿಡುತ್ತವೋ ಅಂತನ್ನಿಸುತ್ತೆ. ಯಾವ ಆಶ್ರಮವಾದರೇನು! ತಂದೆ ತಾಯಿ ನೋಡಿಕೊಂಡತೆ ಆಗುತ್ಯೇ? ಜನಕ್ಕೆ ಮೊದಲು ತಿಳುವಳಿಕೆ ಮೂಡಬೇಕು, ಅನಾಥರನ್ನಾಗಿ ಬಿಸಾಡಿ ಹೋಗುವುದು ಹೆಚ್ಚಲ್ಲ, ಬೆಳೆಸುವ ಧೈರ್ಯವೂ ಇರಬೇಕು....ಇಲ್ಲದಿದ್ದರೆ ಆ ಕೀಳು ಬುದ್ಧಿಯನ್ನಾದರೂ ಬಿಡಬೇಕು..."

ಎಷ್ಟೋ ವಿದ್ಯಾವಂತ ದಂಪತಿಗಳು, ಸಮಾಜ ಸೇವಕರು, ಈಚೆಗೆ ಅನಾಥ ಮಕ್ಕಳನ್ನು ದತ್ತು ತೆಗೆದುಕೊಂಡು ಸಾಕಿ ಸಲಹುತ್ತಾರೆ.... ಆದ್ದರಿಂದಲೋ ಏನೋ ಈ ಅನಾಥ ಮಕ್ಕಳ ಸಂಖ್ಯೆಯೂ ಬೆಳೆಯುತ್ತಲೇ ಇದೆ.

ಅನಾಥ....ಅನಾಥ ಎಂದು ಪುರುಷೋತ್ತಮ ಮಾತನಾಡುತ್ತಿದ್ದಂತೇ ಅನಂತನ ತಲೆಯ ನರಗಳು ಸಿಡಿಯತೊಡಗಿದವು. ಅಮ್ಮ ಎಂದು ಕಿರುಚಿ ತಲೆಯನ್ನು ಬಿಗಿಯಾಗಿ ಹಿಡಿದುಕೊಂಡ. ಸರ್ರನೆ ಬ್ರೇಕ್ ಹಾಕಿ ಜೀಪನ್ನು ನಿಲ್ಲಿಸಿ, "ಏನಾಯ್ತು....?" ಎಂದು ಗಾಬರಿಯಿಂದ ಕೇಳಿದ ಪುರುಷೋತ್ತಮ.

"ಏನಿಲ್ಲ.... ತಲೆಯ ನರ ಚುಳ್ ಅಂತು ತಡೆಯಲಾಗಲಿಲ್ಲ"

"ನಿನಗೆ ನಿನ್ನ ಅಮ್ಮನ ನೆನಪು ಬಂತೆ?"

"ಹೂಂ," ಎಂದಿದ್ದ ಏನನ್ನು ಚಿಂತಿಸದೇ....

"ಹೋಗಿ ನೋಡಿಕೊಂಡು ಬಾ.... ಬೇಕಾದರೆ ನಾನೂ ಬರ್ತೀನಿ"

"ಬೇಡ, ಬೇಡ ನಾನು ಅಲ್ಲಿಗಂತೂ ಹೋಗಲ್ಲ" ಎಂದು ಎತ್ತರದ ಧ್ವನಿಯಲ್ಲಿ ನುಡಿದಾಗ ಪುರುಷೋತ್ತಮ ಸುಮ್ಮನಾದ. ಪಾಪ, ಈತ ಒಳ್ಳೆಯ

ಮನುಷ್ಯ, ಅನಾವಶ್ಯಕ ತಾನು ಹೀಗೆ ರೇಗಬಾರದಾಗಿತ್ತು ಎಂದುಕೊಂಡು "ಸಾರಿ ಸಾರ್" ಎಂದಿದ್ದ. "ಪರವಾಗಿಲ್ಲ ಬಿಡಯ್ಯಾ ನಿನ್ನ ತೊಳಲಾಟ ನನಗೆ ಅರ್ಥವಾಗುತ್ತೆ" ಎಂದು ಬೆನ್ನುತಟ್ಟಿದ.

ಆಶ್ರಮದ ಮಧ್ಯಾಹ್ನದ ಊಟ ರುಚಿಯಾಗಿತ್ತು ಎಂದು ಹೇಳುವಂತಿರಲಿಲ್ಲವಾದರೂ ಹೊಟ್ಟೆ ತುಂಬಿತ್ತು. ರಾಗಿಮುದ್ದೆ, ಎಲ್ಲಾ ತರಕಾರಿಗಳನ್ನು ಹಾಕಿಮಾಡಿದ್ದ ಕೂಟು, ಗೋಧಿ ರವೆಯ ಪಾಯಸ ಕೋಸಂಬರಿ ಇತ್ಯಾದಿಯೊಂದಿಗೆ ಶುಂಠಿ, ಕರಿಬೇವಿನ ಸೊಪ್ಪಿನ ಘಮಘಮ ಗುಟ್ಟುವ ನೀರು ಮಜ್ಜಿಗೆ, ರಾಗಿ ಮುದ್ದೆ ಸೇರದವರಿಗೆ ಅನ್ನ ಸಹ ಮಾಡಿದ್ದರು. ಪುರುಷೋತ್ತಮ ನಿರಾಯಸವಾಗಿ ಮುದ್ದೆ ನುಂಗಿದ್ದ ಅನಂತನಿಗೆ ಅದರ ಅಭ್ಯಾಸವಿರಲಿಲ್ಲವಾದರೂ ಸ್ವಲ್ಪ ರುಚಿ ನೋಡಿದ್ದ. ಈಗ ಯಾರಿಗೂ ರಾತ್ರಿಯ ಊಟದ ಅಗತ್ಯವಿಲ್ಲದಿದ್ದರೂ ಬಾಯರಿಕೆಯಾಗಬಾರದೆಂದು, ಮೊಸರನ್ನವನ್ನು ಕಲೆಸಿ ತಿಂದರು. ಪ್ರಶಾಂತ ನಿದ್ದೆ ಹೋಗಿದ್ದ. ಪುರುಷೋತ್ತಮ ಸಿಗರೇಟು ಸೇವನೆಗೆಂದು ಮಾಡಿನ ಮೇಲೆ ಹೋಗಿದ್ದ. ಅನಂತ, ತಲೆಗೆ ಕೈಕೊಟ್ಟು ಯೋಚನೆಯ ಆಳಕ್ಕೆ ಇಳಿದಿದ್ದ.

ಆಶ್ರಮದ ವಾಸ ಕಲ್ಪನೆಯಷ್ಟು ಸುಂದರವಲ್ಲ ಎಂದು ಅನಿಸತೊಡಗಿತ್ತು. ಅಲ್ಲಿ ತಾನು ಇರುವುದಾದರೆ, ವೃದ್ಧರ, ಅನಾಥ ಮಕ್ಕಳ ಸಹಚರನಾಗಿ ಇರಬೇಕಾಗುತ್ತದೆ. ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅವರ ಕಷ್ಟಸುಖಗಳಲ್ಲಿ ಭಾಗಿಯಾಗಬೇಕಾಗುತ್ತದೆ, ಅವರ ನೋವುನಲಿವುಗಳಿಗೆ ಸ್ಪಂದಿಸಬೇಕಾಗುತ್ತದೆ. ಅವರುಗಳೊಂದಿಗೆ ಸ್ನೇಹದಿಂದಿದ್ದು ಅವರ ಸ್ನೇಹವನ್ನು ಗಳಿಸಬೇಕಾಗುತ್ತದೆ. ಇಲ್ಲದಿದ್ದರೆ ತನಗೆ ಅಲ್ಲಿ ಬಾಳಲು ಸಾಧ್ಯವಾಗದೇ ಇರಬಹುದು. ಆಗ ಎಲ್ಲಿಗೆ ಹೋಗಲಿ? ಏಕೆಂದರೆ ಒಂದು ಸಾರಿ ತಾನು ಆಶ್ರಮವಾಸಿಯಾದರೆ ಇನ್ನು ಅಲ್ಲಿಯೇ ಜೀವಮಾನವನ್ನೆಲ್ಲಾ ಕಳೆಯುವುದು ಖಂಡಿತಾ.... ಆದರೆ ತಾನಿನ್ನು ವಯಸ್ಸಿನಲ್ಲಿ ಚಿಕ್ಕವನು ತನ್ನಿಂದ ಸಾಧ್ಯವೇ.... ಆಶ್ರಮದ ನಿಯಮಗಳು ಕಠಿಣವಿರಲಾದು...ಭೈರಪ್ಪನಂತಹವರು ಅಲ್ಲಿ ಇಲ್ಲವೇ.... ಆದರೆ ಭೈರಪ್ಪನಿಗೆ ನನ್ನ ಎರಡರಷ್ಟು ವಯಸ್ಸಾಗಿರಬಹುದು.... ಹೀಗೇ ಅವನ ಯೋಚನಾಲಹರಿ ಹರಿದಿತ್ತು ಹಾಗೇ ನಿದ್ದೆ ಹೋಗಿದ್ದ.

ಪುರುಷೋತ್ತಮ ಎದ್ದು ದಿನಚರಿಯನ್ನು ಆರಂಭಿಸಿದಾಗ ಅನಂತನಿಗೆ ಎಚ್ಚರವಾಗಿತ್ತು ಸಂಕೋಚದಿಂದ ಎದ್ದು ಬಂದ.

"ನನಗೂ ಏನಾದರೂ ಕೆಲಸ ಹೇಳಿ, ಮಾಡ್ತೀನಿ"

"ನಿನಗೇನೂ ಕೆಲಸ ಬರಲ್ಲ ಅಂತ ನನಗೆ ಗೊತ್ತು, ಸದ್ಯಕ್ಕೆ ಪ್ರಶಾಂತನ ಜತೆಗಿರುವುದೇ ನಿನ್ನ ಕೆಲಸ"

"ಇನ್ನೊಂದೆರಡು ದಿನಗಳ ನಂತರ ಸ್ಕೂಲಿಗೆ ಹೊರಟು ಹೋಗ್ತಾನಲ್ಲ"

"ಆಗ ಪೊಲೀಸ್ ಸ್ಟೇಷನ್‌ನಲ್ಲಿ ಬಂದು ಕೂತಿರುವಂತೆ ಎಷ್ಟೋ ಸಮಯ ಕಳೆದು ಹೋಗುತ್ತೆ...." ಆದರೆ ಅನಂತ ಏನನ್ನು ನುಡಿಯಲಿಲ್ಲ.

"ಓ.... ಆ ದಿನದ ಲಾಕಪ್ ನೆನಪು ಅಲ್ವಾ? ಹೋಗಲಿ ಬಿಡು..."

"ನಾನು, ಆಶ್ರಮಕ್ಕೆ ಹೋಗಿ ಸೇರಿಕೊಳ್ಳಬೇಕೆಂದು ನಿರ್ಧರಿಸಿದೀನಿ" ಪುರುಷೋತ್ತಮ ಅಚ್ಚರಿಯಿಂದ ಕಣ್ಣರಳಿಸಿದ.

"ಓ..... ಅಂತೂ ಒಂದೇ ರಾತ್ರಿಯಲ್ಲಿ ನಿರ್ಧರಿಸಿಬಿಟ್ಟೆ ಅನ್ನು...."

"ಬೇಗ ನಿರ್ಧಾರ ತಗೊಳ್ಳದಿದ್ದರೆ, ನಿಧಾನವಾದರೆ ಏನನ್ನು ನಿರ್ಧರಿಸಲು ಆಗುವುದಿಲ್ಲ ಅಂತ ಅನ್ನಿಸ್ತು..."

"ನಿನ್ನ ನಿರ್ಧಾರ ತಪ್ಪು ಅಂತ ನಾನು ಅನ್ನಲ್ಲ....ಆದರೆ ವೈರಾಗ್ಯ ನಿನ್ನಂಹವನಿಗಲ್ಲ.... ಹತ್ತಾರು ವರ್ಷಗಳ ನಂತರ ಹೋಗಬಹುದಾಗಿತ್ತು."

"ಹತ್ತಾರು ವರ್ಷಗಳ ನಂತರ, ಏನು ಬದಲಾವಣೆ ಬರಲಿದೆಯೋ.... ಈಗ ಯಾವ ಬಂಧನವೂ ಇಲ್ಲದೇ ಮುಕ್ತನಾಗಿದೀನಿ, ಈಗ ಹೋಗಲಾಗದಿದ್ದರೆ ಮುಂದೆ ಈ ಅವಕಾಶ ಬರುತ್ತೋ ಇಲ್ಲವೋ....?

"ನೀನು ಸನ್ಯಾಸಾಶ್ರಮಕ್ಕೆ ಅಡಿ ಇಡ್ತಿದೀಯ ಅಂತ ನಿನ್ನ ತಾಯಿಗೆ ತಿಳಿದರೆ ಆಕೆಗೆ ವ್ಯಥೆಯಾಗುವುದಿಲ್ಲವೆ!"

"ತಾಯಿಗೆ ವ್ಯಥೆಯಾಗುತ್ತಿದೆ ಎಂದು ತಿಳಿದರೂ, ಶಂಕರಾಚಾರ್ಯರು ಸನ್ಯಾಸ ಸ್ವೀಕರಿಸಲಿಲ್ಲವೆ? ನಾನು ಅಂತಹ ಮಹಾನುಭಾವರಿಗೆ ನನ್ನನ್ನು ಹೋಲಿಸಿಕೊಳ್ಳುತ್ತಿಲ್ಲ, ಯಾಕೆಂದರೆ, ನಾನು ಗೃಹಸ್ಥಾಶ್ರಮವನ್ನು ದಾಟಿ ಸನ್ಯಾಸಿಯಾಗಲು ಹೊರಟಿದ್ದೇನೆ"

"ನಿನ್ನ ತಾಯಿ, ನಿನಗೆ ಮತ್ತೆ ಮದುವೆ ಮಾಡಿಸುವ ಆಸೆಯನ್ನಿಟ್ಟು ಕೊಂಡಿದ್ದರೆ....?"

"ನಾನು ಮತ್ತೆ ಆ ಮನೆಗೆ ಹೋಗುವುದಿಲ್ಲ. ನಾನು ಆಕೆಯ ಸ್ವಂತ ಮಗನಲ್ಲವಾದುದರಿಂದ ಕೆಲವೇ ದಿನಗಳಲ್ಲಿ ಆಕೆ ಸಮಾಧಾನಗೊಳ್ಳ ಬಹುದು"

"ಜನ್ಮ ಕೊಟ್ಟ ತಾಯಿಗಿಂತ ಸಾಕಿದ ತಾಯಿಯ ಋಣ ಹೆಚ್ಚಾಗಿರುತ್ತೆ ಕೃಷ್ಣಾವತಾರದಲ್ಲಿ ದೇವಕಿಯ ಪಾತ್ರಕ್ಕಿಂತ ಹೆಚ್ಚಿನ ಮಹತ್ವ ಯಶೋದೆಗೆ ಇದೆ.

"ಇರಬಹುದು ಅದು ದ್ವಾಪರಯುಗದಲ್ಲಿ ಇದು ಕಲಿಯುಗ...ಇಷ್ಟು ಹೊತ್ತಿಗೆ ನನ್ನ ತಾಯಿ ನನ್ನನ್ನು ಮರೆತಿದ್ದರೂ ಮರೆತಿರಬಹುದು.

"ನೀನು ಆಕೆಯ ಮಡಿಲಿನಲ್ಲಿ ಇಪ್ಪತ್ತಕ್ಕಿಂತ ಹೆಚ್ಚು ಸಂವತ್ಸರಗಳನ್ನು ಕಳೆದಿದೀಯೆ.... ಆಕೆಯ ಮಮತೆಯ ಆಳ ನೀನು ಬಲ್ಲೆ...."

ಅನಂತ ಪೆಚ್ಚಾದ. ಈ ಪೋಲೀಸ್ ಪುಣ್ಯಾತ್ಮ ತನಗೆ ತಿಳಿದಿರುವ ಪುರಾಣದ ಉದಾಹರಣೆಗಳಿಂದ, ನನ್ನ ನಿರ್ಧಾರವನ್ನು ಬದಲಿಸಲು ನೋಡುತ್ತಿದಾನೋ ತಿಳಿಯದಲ್ಲ. ಇಲ್ಲಿ ತನ್ನ ಮನೆಯಲ್ಲಿ ಮಗನ ಜೊತೆಗಾರ ನಾಗಲಿ ಅಂತ ಆಸೆಯೇ. ಹಾಗಿದ್ದರೆ ಬಾಯುಬಿಟ್ಟು ಹೇಳಬಾರದೇಕೆ? ಅಥವಾ ಇನ್ನೇನು ಕುತಂತ್ರವೋ....?"

ಛೆ. ತಾನು ಹಾಗೆಲ್ಲಾ ಯೋಚಿಸಬಾರದು. ನನ್ನ ಆಪತ್ತಿಗೆ ಆದ ಈ ಪುಣ್ಯಾತ್ಮನೇ ನನ್ನ ನೆಂಟ. ಏನೋ ಒಳ್ಳೆಯ ಉದ್ದೇಶದಿಂದ ಹೇಳುತ್ತಿರ ಬಹುದು. ನನ್ನ ಮೇಲೆ ಮರುಕವಿರಬಹುದು. ನಾನು ವಿದ್ಯಾಭ್ಯಾಸವನ್ನು ಮುಂದುವರೆಸಿ, ಕೆಲಸಕ್ಕೆ ಸೇರಿ ತಾಯಿಯನ್ನು ಸಾಕಿ ಸಲಹಲಿ ಎಂಬ ಅರ್ಥವಿರಬಹುದು, ಹೌದು, ಈಗ ನನ್ನ ತಾಯಿಗೆ ಇನ್ನೂ ಒಬ್ಬ ಸವತಿ ಬಂದಿದ್ದಾಳಲ್ಲ, ಅವಳು ಇನ್ನು ಸುಖವಾಗಿರಲು ಸಾಧ್ಯವೇ.... ಆ ಸವತಿಯ ಕಾಟವನ್ನು ತಪ್ಪಿಸಲು ತನ್ನಿಂದ ಮಾತ್ರ ಸಾಧ್ಯ, ಅದನ್ನು ಈಗ ಸೂಚಿಸು ತ್ತಿದಾನೆಯೇ ಎಂದುಕೊಂಡು "ಹಾಗಾದ್ರೆ ನಾನೀಗ ಏನು ಮಾಡಲಿ?" ಅಂತ ಪ್ರಶ್ನಿಸಿದ.

"ಮೊದಲು ಒಂದು ಸಲ ನಿನ್ನ ತಾಯಿಯನ್ನು ಹೋಗಿ ನೋಡಿ ಬಾ ಆಮೇಲೆ ನೀನು ಏನು ಮಾಡಬೇಕೆಂದು ತಾನಾಗಿಯೇ ನಿರ್ಧಾರ ವಾಗುತ್ತದೆ."

ಅನಂತ ಇಷ್ಟವಿಲ್ಲದಿದ್ದರೂ ಒಪ್ಪಿದ. ಹೋಗಲು ಮನಸ್ಸಿಲ್ಲದುದರಿಂದ ಮುಂದಿನ ಹತ್ತಾರು ದಿನಗಳನ್ನು ಮುಂದೂಡಿದ. ಅಂತೂ ಒಂದು ದಿನ ಗಟ್ಟಿ ಮನಸ್ಸನ್ನು ಮಾಡಿ, ಪ್ರಶಾಂತ ಸ್ಕೂಲಿಗೆ ಹೋದನಂತರ ಹೊರಟ. ಮನೆಯ ಬಾಗಿಲಿಗೆ, ಗೇಟಿಗೆ ಹಾಕಿದ್ದ ಬೀಗ ಅವನನ್ನು ಅಣಕಿಸಿದವು. ಅಕ್ಕಪಕ್ಕದವರ್ಯಾರನ್ನು ವಿಚಾರಿಸುವ ಆಸೆ ಇಲ್ಲದೆ ಹಾಗೇ ಹಿಂತಿರುಗಿದ್ದ.

"ಈಗ ಅವರುಗಳು ಎಲ್ಲಿದಾರೋ, ತನಗಂತೂ ತಿಳಿಯದು ಆದ್ದರಿಂದ ನನ್ನದೇನೂ ತಪ್ಪಾಗುವುದಿಲ್ಲ... ನಾನು ಬರಲಿ, ವಾಪಸ್ಸು ಬಂದೇ ಬರುತ್ತಾನೆ ಎಂಬ ಆಸೆ, ನಂಬಿಕೆ ಅವರುಗಳಿಗೆ ಇದ್ದಿದ್ದರೆ, ಖಂಡಿತಾ ನನಗಾಗಿ ಕಾಯುತ್ತಿದ್ದರು, ನಾನು ಹೋದದ್ದೇ ಸಾಕು ಎಂಬಂತೆ, ನನ್ನ ಭಾಗಕ್ಕೆ ಎಲ್ಲಾ ಬಾಗಿಲುಗಳನ್ನು ಮುಚ್ಚಿಬಿಟ್ಟರಲ್ಲ ಇನ್ನು ಬಾಕಿ ಉಳಿದಿರುವುದಾದರೂ ಏನು" ಎಂದುಕೊಂಡು ಹಿಂತಿರುಗಿದ.

ಏನೋ ಕೆಲಸದ ಬಿಸಿಯಲ್ಲಿದ್ದ ಪುರುಷೋತ್ತಮ ಮತ್ತೆ ವಿಚಾರಿಸ ಲಿಲ್ಲ. ಇವನೂ ಹೇಳಲಿಲ್ಲ, ಹಾಗೇ ದಿನಗಳೂ ಕಳೆದವು. "ಪ್ರಶಾಂತನ ಪರೀಕ್ಷೆ ಮುಗಿಯುವವರೆಗೂ ಇದ್ದು ಅವನಿಗೆ ಸಹಾಯ ಮಾಡಿದರೆ ಈತನ

ಋಣವನ್ನು ತೀರಿಸಿದಂತಾಗುತ್ತದೆ" ಎಂದುಕೊಂಡ.

ಪರೀಕ್ಷೆ ಮುಗಿದ ನಂತರ ಪುರುಷೋತ್ತಮ, ಅನಂತನ ಕೈಗಳನ್ನು ಹಿಡಿದು ತನ್ನ ಕೃತಜ್ಞತೆಯನ್ನು ಹೇಳಿದ.

"ನನ್ನ ಮಗನಿಗಾಗಿ ನಾನೂ ಸ್ವಾರ್ಥಿಯಾಗಿ ಬಿಟ್ಟೆ ಅನಂತ.... ಅವನ ಪರೀಕ್ಷೆ ಮುಗಿಯುವವರೆಗೂ, ನೀನು ಅವನಿಗೆ ಸಹಾಯಕನಾಗಿರಲಿ ಅಂತ ನನಗೆ ಆಸೆ ಇತ್ತು.... ಈ ವರ್ಷದಿಂದ ಇವನನ್ನು ಬೋರ್ಡಿಂಗ್ ಸ್ಕೂಲಿಗೆ ಸೇರಿಸಿಬಿಡುತ್ತೇನೆ.... ನಿನ್ನ ಆಶ್ರಮದ ನಿರ್ಧಾರ ಬದಲಾಯಿಸಿದ್ದರೆ ಹೇಳು....ನಿನಗೆ ನೌಕರಿ ಕೊಡಿಸುವುದು ನನ್ನ ಜವಾಬ್ದಾರಿ."

"ಬೇಡಾ ಸಾರ್, ಇದುವರೆಗೂ ಯಾರೋ ಅಪರಿಚಿತನನ್ನು ನಿಮ್ಮ ಸ್ವಂತ ತಮ್ಮನಂತೆ ನೋಡಿಕೊಂಡಿರಿ. ನನಗೆ ಅಷ್ಟು ಸಾಕು.... ಎನ್ನುತ್ತಾ ತನ್ನ ಕತ್ತಿನಲ್ಲಿದ್ದ ತನ್ನ ಸರವನ್ನು ತೆಗೆದು ಪ್ರಶಾಂತನ ಕೊರಳಿಗೆ ಹಾಕಿದ.

"ಇದೇನಿದು! ಬೇಡ.... ಬೇಡ" ಎಂದು ತಡೆದವನನ್ನು ಬೇಡಿಕೊಂಡ.

"ದಯವಿಟ್ಟು ಬೇಡ ಎನ್ನಬೇಡಿ.... ನೀವಾಗಲೀ, ಪ್ರಶಾಂತನಾಗಲೀ ನನಗೆ ನಿಮ್ಮೊಡನೆ ಇರಲು ಅವಕಾಶ ಮಾಡಿಕೊಡದೇ ಇದ್ದಿದ್ದರೆ, ಬಹುಶಃ ನನ್ನ ಗತಿ ಏನಾಗುತ್ತಿತ್ತೋ....? ವೈರಾಗ್ಯವನ್ನು ಬಯಸಿ ಹೋಗುತ್ತಿರುವವನಿಗೆ ಈ ಚಿನ್ನದ ಸರ ಏಕೆ? ಈ ಅಂಕಲ್‌ನ ಕಿರುಕಾಣಿಕೆ ಅಂತ ಭಾವಿಸಿ.... ಮತ್ತೆ ನಮ್ಮ ಭೇಟಿ ಈ ಜನ್ಮದಲ್ಲಿ ಸಾಧ್ಯವಿದೆಯೋ ಇಲ್ಲವೋ...?

"ಏಯ್.... ಹಾಗೆ ಮಾತ್ರ ಮಾಡಬೇಡ. ನಿನಗೆ ಅಲ್ಲಿಂದ ಹೊರ ಬರಲು ಅವಕಾಶವಿರುತ್ತೋ ಇಲ್ಲವೋ... ನಾವೇ ಬಂದು ನಿನ್ನನ್ನು ಮಾತನಾಡಿಸಿ ಕೊಂಡು ಹೋಗುತ್ತೇವೆ. ಪ್ರಶಾಂತನಿಗೆ ರಜ ಸಿಕ್ಕಾಗ... ಅಲ್ವಾ ಪ್ರಶಾಂತ?"

"ಅಪ್ಪಾ.... ಅಂಕಲ್ ಏಕೆ ಹೋಗಬೇಕು? ಇಲ್ಲೇ ನಮ್ಮ ಮನೆಯಲ್ಲಿರಲಿ, ನೀವೂ ಒಬ್ಬರೇ.... ನಿಮ್ಮ ಜತೆಗಿರ್ತಾರೆ"

"ನನ್ನ ಜತೆಗೆ ಪೊಲೀಸ್ ಸ್ಟೇಷನ್‌ನಲ್ಲಿ ಬೇಕಾದಷ್ಟು ಜನ ಇರ್ತಾರೆ.... ನನಗೋಸ್ಕರ ಬಲವಂತ ಮಾಡುವುದು ಸರಿಯಲ್ಲ.... ಅನಂತ ನಿನ್ನ ಬಟ್ಟೆಗಳನ್ನು ಜೋಡಿಸಿಕೋ, ನಾನೇ ಬಿಟ್ಟು ಬರುತ್ತೇನೆ."

ಪ್ರಶಾಂತನೂ ಖುಷಿಯಿಂದ ಹೊರಟ. ಅವನ ಕೈ ಈಗ ಸರಿ ಹೋಗಿತ್ತು. ತಾನೇ ಛಂಗನೇ ಜೀಪನ್ನೇರಿದ್ದ. ಅನಂತ ಮಾತ್ರ ಮಂಕಾಗಿದ್ದ ನಾನಾಗಿಯೇ ನಾನು ಆಯ್ಕೆ ಮಾಡಿಕೊಂಡಿರುವ ದಾರಿ, ಸರಿಯಾಗಿದ್ದರೆ, ನಾನು ದಾರಿ ತಪ್ಪದಂತೆ ನನ್ನನ್ನು ಅನುಗ್ರಹಿಸಿ ಕಾಪಾಡು ದೇವರೇ" ಎಂದು ಪ್ರಾರ್ಥಿಸಿದ.

ಕೆಲವೇ ದಿನಗಳ ನಂತರ ಮತ್ತೆ ಅವರುಗಳು ಆಶ್ರಮಕ್ಕೆ ಬಂದಾಗ,

ಭೈರಪ್ಪ ಅವರುಗಳನ್ನು ಅದರದಿಂದ ಬರಮಾಡಿಕೊಂಡು, ಯೋಗಕ್ಷೇಮವನ್ನು ವಿಚಾರಿಸಿದ. ಪ್ರಶಾಂತನ ಕೈ ಸರಿಹೋದುದನ್ನು ಕಂಡು ಸಂತಸವನ್ನು ವ್ಯಕ್ತ ಪಡಿಸಿದ. ಎಲ್ಲರನ್ನು ಅತಿಥಿಗೃಹಕ್ಕೆ ಕರೆದುಕೊಂಡು ಹೋದ.

"ಈ ದಿನ ಸ್ವಾಮೀಜಿಯವರದು ಮೌನವ್ರತ. ಅವರು ಯಾರಿಗೂ ದರ್ಶನ ಕೊಡುವುದಿಲ್ಲ" ಎಂದಾಗ ಅನಂತನ ಕಡೆ ನೋಡಿದ ಪುರುಷೋತ್ತಮ ಕೇಳಿದ್ದ.

"ಈಗ ಹೇಗೂ ಅವರೊಡನೆ ಮಾತನಾಡಲು ಆಗುವುದಿಲ್ಲ, ಮತ್ತೆಂದಾದರೂ ಬಂದರೆ ಆಯಿತು. ಇವತ್ತು ಹೊರಟುಹೋಗೋಣ"

"ನಾನು ಬಂದುದು ಆಗಿದೆ. ನಾನು ಇನ್ನು ಇಲ್ಲಿಂದ ಇನ್ನೆಲ್ಲಿಗೂ ಬರುವುದಿಲ್ಲ, ಭೈರಪ್ಪ ನನಗೆ ಪರಿಚಯವಾಗಿದಾರಲ್ಲ"

"ಹಾಗಲ್ಲ ಅನಂತ, ಸ್ವಾಮೀಜಿಯವರನ್ನು ಒಂದು ಮಾತನ್ನು ಕೇಳಿದ್ದರೆ ಚೆನ್ನಾಗಿತ್ತೇನೋ....?"

"ಅವರು ಒಪ್ಪದಿದ್ದರೆ ನಾನು ಇನ್ನೆಲ್ಲಿಗೂ ಹೋಗುವುದಿಲ್ಲ. ನಿಮ್ಮಲ್ಲಿಗೇ ಬರ್ತೀನಿ. ಇನ್ನೆಲ್ಲಿಗೆ ಹೋಗಲಿ" ಎಂದಾಗ ಪುರುಷೋತ್ತಮ ನುಡಿದ.

"ಹಾಗೇ ಮಾಡು ಅನಂತ, ನನ್ನ ಮನೆಗೆ ಯಾವ ಸಂಕೋಚವೂ ಇಲ್ಲದೇ ನೀನು ಬರಬಹುದು, ನಿನಗೆ ಆ ಅಧಿಕಾರವಿದೆ, ನನಗೂ ಪ್ರಶಾಂತನಿಗೂ ನಿನ್ನಂತಹ ಒಬ್ಬ ಗೆಳೆಯನ ಅಗತ್ಯವಿದೆ. ಭೈರಪ್ಪಾ ಇವರನ್ನು ಚೆನ್ನಾಗಿ ನೋಡ್ಕೊಳ್ಳಿ.... ನೆಮ್ಮದಿಯನ್ನು ಹುಡುಕಿಕೊಂಡು ಸಮಾಜ ಸೇವೆಯನ್ನು ಮಾಡುವ ಆಸೆಯಿಂದ ಇಲ್ಲಿಗೆ ಬಂದಿದಾನೆ. ನೀವು ಅವನಿಗೆ ಸಹಕಾರ ನೀಡಬೇಕು"

"ನಾನಿಲ್ಲಿರುವುದೇ ಅದಕ್ಕಾಗಿ, ನೀವೇನೂ ಚಿಂತಿಸಬೇಡಿ, ಇನ್ನು ಮೇಲಿಂದ ಇವರು ನಮ್ಮೋರು..." ಭೈರಪ್ಪ ಆಶ್ವಾಸನೆ ನೀಡಿದ.

ಪುರುಷೋತ್ತಮ ಹೊರಡುವುದಾಗಿ ನುಡಿದಾಗ "ಊಟಕ್ಕೇಳಿ ಸಾರ್" ಎಂದು ಕರೆದ.

"ಇವತ್ತು ಬೇಡ ಭೈರಪ್ಪಾ, ಸ್ವಾಮೀಜಿಯ ದರ್ಶನ ಮಾಡದೇ ಇಲ್ಲಿಯ ಊಟ ಮಾಡಲು ನನ್ನ ಮನಸ್ಸು ಒಪ್ಪುವುದಿಲ್ಲ" ಎನ್ನುತ್ತಾ "ನಡೀ ಪ್ರಶಾಂತ" ಎಂದು ಮಗನ ಕೈ ಹಿಡಿದು ಜೀಪ್ ಬಳಿಗೆ ಬಂದ. ಅನಂತನ ಕೈ ಕುಲುಕಿ ವಿಶ್ವಾಸವನ್ನು ಸೂಚಿಸಿ ಸೀಟನ್ನೇರಿದ. ಪ್ರಶಾಂತ, "ಬೈ ಅಂಕಲ್" ಎಂದು ಕೈ ಆಡಿಸಿದಾಗ ಅನಂತನಿಗೆ ಗಂಟಲುಬ್ಬಿ ಬಂದಿತ್ತು. ಈ ಎರಡು-ಮೂರು ತಿಂಗಳಿನಲ್ಲಿ ತಮ್ಮಿಬ್ಬರ ಸ್ನೇಹ ಗಾಢವಾಗಿತ್ತು. ತನಗೆ ಎಷ್ಟೋ ಸಲ ಬೇಸರ ವಾದುದುಂಟು. ಆದರೆ ಈ ಹುಡುಗ, ನನ್ನನ್ನು ಸ್ವಂತ ಚಿಕ್ಕಪ್ಪನಿಗಿಂತ ಹೆಚ್ಚಿನ

ಗೌರವದಿಂದ ಮಾತನಾಡಿಸುತ್ತಿದ್ದ.

"ಪ್ರಶಾಂತ್, ನಿನಗೆ ಆದಾಗ ಕಾಗದ ಬರಿ....ಚೆನ್ನಾಗಿ ಓದು" ಪ್ರಶಾಂತ 'ಹೂಂ' ಎಂದು ತಲೆ ಆಡಿಸಿದ. ಜೀಪು ಹೊರಟಿತು.

"ಬನ್ನೀ ಸಾರ್.... ಗೆಸ್ಟ್ ಹೌಸ್‌ಗೆ ಹೋಗ್ತೀರೋ.... ನನ್ನ ರೂಮಿಗೆ ಬರ್ತೀರೋ..."

"ನಿಮ್ಮ ರೂಮಿಗೆ ಬರ್ತೀನಿ, ನನಗೆ ಇಲ್ಲಿಯ ವಿಚಾರಗಳನ್ನೆಲ್ಲ ತಿಳಿದು ಕೊಳ್ಳಬೇಕಾಗಿದೆ. ಆಮೇಲೆ ನಿಧಾನವಾಗಿ ಗೆಸ್ಟ್ ಹೌಸ್‌ಗೆ ಹೋದರಾಯ್ತು.."

"ಹಾಗಾದರೆ ಮೊದಲು ಊಟ ಆಗಿಹೋಗಲಿ.... ನಡೀರಿ"

"ಭೈರಪ್ಪಾ.... ನಾನು ನಿಮಗಿಂತ ಚಿಕ್ಕವನು, ನನ್ನನ್ನು ಬಹುವಚನದಲ್ಲಿ ಕರೆಯಬೇಡಿ, ನನಗೆ ಮಾತನಾಡಲು ಕಷ್ಟವಾಗುತ್ತೆ"

"ಹಾಗೇ ಆಗಲಿ ಅನಂತಪ್ಪ" ಇಬ್ಬರೂ ಒಟ್ಟಾಗಿ ನಡೆದುಬಂದಾಗ ಎದುರಾದವರು ಅನೇಕರು. ಭೈರಪ್ಪ ಕೆಲವರಿಗೆ ಅವನನ್ನು ಪರಿಚಯ ಮಾಡಿ ಕೊಟ್ಟಾಗ ಅವನು 'ನಮಸ್ಕಾರ' ಎಂದಷ್ಟೇ ಹೇಳಿದ್ದ.

ಊಟ ಮುಗಿಸಿ ಇಬ್ಬರೂ ಭೈರಪ್ಪನ ರೂಮಿಗೆ ಬಂದರು, ವಿಶಾಲ ವಾದ ಒಂದು ರೂಮಿನಲ್ಲೇ ಒಂದು ಬಚ್ಚಲು ಮನೆ ಸಹ ಇತ್ತು ಒಬ್ಬರಿಗೆ ವಾಸ ಮಾಡಲು ಅನುಕೂಲವಾಗುವಂತೆ ಇತ್ತು. ಒಂದು ಮೂಲೆಯಲ್ಲಿ ಜಮಖಾನ ಹಾಸಿತ್ತು, ಹಾಸಿಗೆಯನ್ನು ಸುತ್ತಿಟ್ಟಿತ್ತು.

"ಒಂದು ಗಳಿಗೆ ಮಲಗ್ತೀರಾ? ದಿಂಬು ಕೊಡಲೆ?"

"ಬೇಡ, ನೀವು ಬೇಕಾದರೆ ಮಲಗಿ..."

"ಇಲ್ಲ ನಾನೂ ಮಲಗಲ್ಲ, ಈಗ ಮಲಗಿದರೆ ರಾತ್ರಿ ನಿದ್ದೆ ಬರಲ್ಲ" ಎನ್ನುತ್ತಾ ತಾನು ಎಲೆ ಅಡಿಕೆಗಳನ್ನು ಹಾಕಿಕೊಂಡ. ಹೊಗೆಸೊಪ್ಪಿನ ಪುಡಿಯನ್ನು ತೆಗೆದು "ಇದು ನನಗೆ ಒಂದು ದುರಾಭ್ಯಾಸ, ನಾನು ಬದುಕಿರುವವರೆಗೂ ಇದು ನನ್ನನ್ನು ಬಿಡುವುದಿಲ್ಲ"

"ದುರಭ್ಯಾಸಗಳೆಲ್ಲ ಹಾಗೇ ಅಲ್ಲವೆ?ಮನಸ್ಸಿನ ದುಗುಡಗಳನ್ನು ಮರೆಯಲು ನಾವು ದುರಾಭ್ಯಾಸಗಳ ದಾಸರಾಗುತ್ತೇವೆ, ಆಮೇಲೆ ಅವು ನಮ್ಮನ್ನೇ ಹಿಂಡಿ ಹಿಪ್ಪೆ ಮಾಡಿಬಿಡುತ್ತವೆ"

"ಮನಸ್ಸು ಅಂತ ಅನ್ನುವುದನ್ನು ಭಗವಂತ ಮನುಷ್ಯನಿಗೆ ಯಾಕೆ ಕೊಟ್ಟನೋ.... ಕೊಟ್ಟರೂ ಎಲ್ಲರಿಗೂ ಒಂದೇ ತರಹದ ಮನಸ್ಸನ್ನು ಕೊಟ್ಟಿದ್ದಿದ್ದರ. ಈ ಭೇದಭಾವ, ಮೇಲೆ ಕೆಳಗೆ ಯಾವುದೂ ಇರುತ್ತಿರಲಿಲ್ಲ ಅಲ್ವಾ!"

""ಚೆನ್ನಾಗಿದೆ ನಿಮ್ಮ ಮಾತು! ಹಾಗೇನಾದರೂ ಇದ್ದಿದ್ದರೆ, ಪ್ರಪಂಚ ಇಷ್ಟು ವರ್ಷಗಳು ಮುಂದುವರೆಯುತ್ತಲೇ ಇರಲಿಲ್ಲ. ಅಲ್ಲಿ ಹೊಸತನ, ಹೊಸ

ರೀತಿ, ಹೊಸಹೊಸ ಆವಿಷ್ಕಾರಗಳು ಯಾವುದೂ ಇರುತ್ತಿರಲಿಲ್ಲ"

"ಆವಿಷ್ಕಾರ ಎಂದರೆ?"

"ಹೊಸತನ್ನು ಕಂಡುಹಿಡಿಯುವುದು.. ಆಸಗಳು, ಭಾವನೆಗಳೂ ಎಲ್ಲಾ ಭಿನ್ನಭಿನ್ನವಾಗಿರುವುದರಿಂದಲೇ ಎಲ್ಲಾ ಮುಂದುವರೆಯುತ್ತದೆ. ಇಲ್ಲದಿದ್ದರೆ, ಮನುಷ್ಯ ಒಂದು ನಿರ್ಜೀವ ವಸ್ತುವಿನಂತೆ ಅಷ್ಟೇ.. ಆದರೆ ಆಸೆ ದುರಾಸೆಯಾಗ ಬಾರದು. ಆಸೆಗೆ ಒಂದು ಮಿತಿ ಇರಬೇಕು.... ಬೇರೆಯವರಿಗೆ ತೊಂದರೆ ಯಾಗಬಾರದು. ಸಮಸ್ಯೆಗಳನ್ನು ಹುಟ್ಟಿಸುವಂತಿರಬಾರದು"

"ಹೌದು.... ಹೌದು" ಎನ್ನುತ್ತಾ ಭೈರಪ್ಪ ತಲೆದೂಗುತ್ತಿದ್ದ.

"ಬರ್ತೀರಾ ಅನಂತಪ್ಪ? ಹಾಗೇ ಆಶ್ರಮಾನ ಒಂದು ಸುತ್ತು ಹಾಕಿ ಬರೋಣ...."

"ಹೂಂ, ನಡೀರಿ, ಎಲ್ಲವನ್ನು ಪರಿಚಯ ಮಾಡಿಕೊಂಡ ಹಾಗಾಗುತ್ತೆ."

ಇಬ್ಬರೂ ಹೊರಟರು. ಮೊದಲು ಇಬ್ಬರೂ ಪಾಕಶಾಲೆಗೆ ಬಂದರು.

"ಭೈರಪ್ಪಾ.... ಕಾಫಿ ಬೇಕಾ?" ಅಡಿಗೆಯವರು ಕೇಳಿದ್ದರು.

"ಹೂಂ, ಕೊಡಿ ಎನ್ನುತ್ತಾ ಅಲ್ಲಿದ್ದ ಚಾಪೆಯ ಮೇಲೆ ಕುಳಿತ. ಅನಂತ ಚಕಿತನಾಗಿದ್ದ. ಮನೆಯಂತೆ ಇಲ್ಲಿ ಬೇಕಾದುದೆಲ್ಲ ಸಿಗುತ್ತೋ ಅಥವಾ ಈ ರಿಯಾಯಿತಿ ಭೈರಪ್ಪನಿಗೆ ಮಾತ್ರವೋ ಎಂದು ಯೋಚಿಸುತ್ತಿದ್ದ. ಅನಂತ ನಿಂತುಕೊಂಡೇ ಕಾಫಿ ಕುಡಿದ. ಅವನಿಗೆ ಸಂಕೋಚವೆನಿಸಿತ್ತು.

ಕಂಡು ಕೇಳರಿಯದ ಜಾಗದಲ್ಲಿ, ತಾನು ಅಲ್ಲಿಯವನಾಗುವ ಮೊದಲು ಕಾಫಿ ಸೇವನೆ... ಕಾಪಿ ರುಚಿಸಲಿಲ್ಲ.

ಅಲ್ಲಿಂದ ಇಬ್ಬರೂ ಅನಾಥಾಶ್ರಮದ ಕಡೆ ನಡೆದರು. ಸ್ಕೂಲಿನಿಂದ ಬಂದಿದ್ದ ಹುಡುಗರು ಕೆಲವರು ಆಟ ಆಡುತ್ತಿದ್ದರು. ಕೆಲವರು ಹೋಂವರ್ಕ್ ಮಾಡುತ್ತಿದ್ದರು.

ಇಲ್ಲಿ ಸುಮಾರು ಐವತ್ತು ಮಕ್ಕಳು ಇದಾರೆ. ಎಲ್ಲಾ ಸ್ಕೂಲಿಗೆ ಹೋಗುವ ವಯಸ್ಸಿನವರು. ಇವರುಗಳಿಗೆ ಫ್ರೀ ಊಟ, ಫ್ರೀ ವಿದ್ಯಾಭ್ಯಾಸ. ಸ್ವಲ್ಪ ದೂರದಲ್ಲಿ ಕುಳಿತು, ಹುಡುಗರ ಆಟಪಾಠಗಳನ್ನು ನೋಡುತ್ತಿದ್ದ ವೃದ್ಧರಲ್ಲಿ ಕೆಲವರು ಭೈರಪ್ಪನ ಕಡೆ ಕೈ ಮಾಡಿ ಕರೆದರು.

"ಅವರುಗಳು ಕರೀತಿದಾರೆ ಬಾ ಹೋಗೋಣ" ಇಬ್ಬರೂ ಅತ್ತ ನಡೆದರು.

"ಏನ್ ಭೈರಪ್ಪಾ... ಇವತ್ತು ನೀವು ಮಾತನಾಡಿಸಲೇ ಇಲ್ಲ, ನಾವೇ ಕರೀಬೇಕಾ?"

"ನನ್ನಿಂದ ಏನಾದರೂ ಕೆಲಸವಿತ್ತಾ?"

"ಹೂಂ ಒಂದು ವಾರ ಆಯಿತು. ನನ್ನ ಮಗಳಿಂದ ಕಾಗದವೇ ಬರಲಿಲ್ಲ"

"ಹೇಳಿ ಕಳಿಸ್ತೀನಿ.... ಬರಬಹುದು ಅವರೇ...."

"ಹಾಗಲ್ಲ ಎಲ್ಲಾ ಹುಶಾರಾಗಿದಾರೋ ಇಲ್ಲವೋ ಅಂತ ಆತಂಕ ಅಷ್ಟೇ...."

"ಹುಶಾರಾಗಿಲ್ಲದೇ ಇದ್ದಿದ್ದರೆ ನಿಮ್ಮ ಜ್ಞಾಪಕ ತಕ್ಷಣವೇ ಬರುತ್ತಿತ್ತು ಹಾಗೇನಿಲ್ಲ, ಆರಾಮವಾಗಿರುತ್ತಾರೆ ನಿಮಗೇಕೆ ಚಿಂತೆ?"

"ನಾನೆಷ್ಟೋ ಹೇಳಿದೆ, ಇವರಿಗೆ ಅದೇ ಚಿಂತೆ" ಇನ್ನೊಬ್ಬ ವೃದ್ಧರು ನುಡಿದಾಗ ಭೈರಪ್ಪ ನಕ್ಕು, ಅನಂತನ ಪರಿಚಯ ಮಾಡಿಕೊಟ್ಟ.

"ಇವರು ಅನಂತ ಅಂತ.... ಇಂಜಿನಿಯರಿಂಗ್ ಓದಿದಾರೆ.... ಇನ್ನು ಮೆಲೆ ಈ ಆಶ್ರಮದಲ್ಲೇ ಇರ್ತಾರೆ"

"ಹೌದಾ?" ಆಶ್ಚರ್ಯದಿಂದ ಒಟ್ಟಿಗೇ ಕೇಳಿದಾಗ ಅನಂತ ತಲೆ ತಗ್ಗಿಸಿದ. ಅಲ್ಲಿಂದ ಮುಂದೆ ಹೊರಟರೆ ಸಾಕು, ಮಾತು ಬೇಡವೆನಿಸಿತ್ತು.

"ಇಲ್ಲಿ ಲೈಬ್ರರಿ ಮುಖ್ಯಸ್ಥನಾಗಿ ಕೆಲಸ ಮಾಡ್ತಾರೆ"

"ತನಗೇ ಗೊತ್ತಿಲ್ಲದ್ದು ಈ ಭೈರಪ್ಪನಿಗೆ ಹೇಗೆ ಗೊತ್ತು" ಎಂದುಕೊಂಡು ಅವನು ಪಿಳಿಪಿಳಿ ಕಣ್ಣುಬಿಟ್ಟಾಗ, ಅನಂತನಿಗೆ ಸುಮ್ಮನಿರುವಂತೆ ಸಂಜ್ಞೆ ಮಾಡಿದ.

"ಇನ್ನು ಮೇಲೆ ಇಲ್ಲೇ ಇರ್ತಾರಲ್ಲ. ಆಗಾಗ್ಗೆ ಸಿಕ್ತಾನೇ ಇರ್ತಾರೆ ನಡೀ ಅನಂತಪ್ಪ..."

ಅನಂತ ಅವರುಗಳನ್ನು ದಾಟಿ ಮುಂದೆ ಬಂದರೂ, ತನ್ನ ಹಿಂದೆ ಅವರುಗಳು ಏನಾದರೂ ಮಾತನಾಡುತ್ತಿರಬಹುದೆಂದು ಸಂದೇಹ ಕಾಡಿತ್ತು.

"ಸುಮ್ಮನೇ ಹೊತ್ತು ಹೋಗಲ್ಲ, ಮಾಡಕ್ಕೆ ಕೆಲಸವಿಲ್ಲ, ಹರಟೆ ಹೊಡೆಯೋಕೆ ಒಬ್ಬರು ಬೇಕು, ನೀನು ಸ್ವಲ್ಪ ಹುಷಾರಾಗಿರಬೇಕು"

"ಯಾಕೆ ಅವರುಗಳೇ ಬೇಕಾದಷ್ಟು ಜನರಿದ್ದಾರಲ್ಲ...."

"ಅವರ ವಿಷಯಗಳನ್ನೆಲ್ಲ ಆಡಿ ಮುಗಿಸಿ ಖಾಲಿ ಮಾಡಿಕೊಂಡು ಬಿಟ್ಟಿರುತ್ತಾರೆ. ಹೊಸ ವಿಷಯ ಬೇಕಲ್ಲ..." ಅಣಂತ ಬೆವರನ್ನು ಒರೆಸಿಕೊಂಡ.

"ಯಾಕಪ್ಪಾ ಸುಸ್ತಾಗಿ ಬಿಟ್ಟೆಯಾ?" ಭೈರಪ್ಪ ನಗುತ್ತಾ ಪ್ರಶ್ನಿಸಿದ.

"ಹಾಗೇನಿಲ್ಲ ಸ್ವಲ್ಪ ಸೆಖೆ ಅಂತನ್ನಿಸ್ತು.... ಅವತ್ತು ಹೋಗಿದ್ದೆವಲ್ಲ.... ಆ ತೋಟದ ಕಡೆಗೆ ಹೋಗೋಣ್ವಾ?"

"ಹುಂ ನಡಿಯಪ್ಪಾ..." ಇಬ್ಬರೂ ತೋಟದ ಕಡೆಗೆ ತಿರುಗಿದರು. ಅನಂತನಿಗೆ ಮಾತು ಬೇಕೆನಿಸಿರಲಿಲ್ಲ. ಮೌನವಾಗಿ ಹೆಜ್ಜೆ ಹಾಕುತ್ತಿದ್ದ ಭೈರಪ್ಪ ಸುತ್ತಮುತ್ತಲಿನ ವಿಷಯುಗಳ ಬಗ್ಗೆ ಹೇಳುತ್ತಿದ್ದ. ಅನಂತ ಹೂಂ ಗುಟ್ಟುತ್ತಿದ್ದ

ಸಮಾಧಿಯ ಬಳಿ ಬಂದಾಗ, ಒಂದುಗಳಿಗೆ ಮೆಟ್ಟಿಲ ಮೇಲೆ ಕುಳಿತು, ಹೋಗ ಬೇಕು ಎನಿಸಿತ್ತು ಅವನಿಗೆ.

"ಭೈರಪ್ನೋರೆ ನಾನು ಒಂದ್ನಿಮಿಷ ಅಲ್ಲಿ ಕೂತಿದ್ದು ಬರ್ತೀನಿ, ನೀವು ಬೇಕಾದರೆ ಹಾಗೇ ಸುತ್ತಾಡಿ ಬನ್ನಿ"

"ನಾನು ದಿನಾ ತಿರುಗಾಡುವ ಜಾಗ ಇದು. ನಾನೂ ಇಲ್ಲೇ ಕೂತ್ಕೋತೀನಿ...." ಇಬ್ಬರೂ ಮೆಟ್ಟಿಲ ಮೇಲೆ ಕುಳಿತರು. ತಂಗಾಳಿ ಬೀಸುತ್ತಿತ್ತು. ಮನಸ್ಸಿಗೆ ಹಿತವೆನಿಸಿತ್ತು. ಅನಂತ ಹಾಗೇ ಕಣ್ಣು ರೆಪ್ಪೆಗಳನ್ನು ಮುಚ್ಚಿಕೊಂಡ. ಏನೋ ಒಂದು ರೀತಿಯ ಚೇತನ ಮೈಯನ್ನು ಮನಸ್ಸನ್ನು ಆವರಿಸಿಕೊಂಡಂತಾಯಿತು. ಉಲ್ಲಾಸದಿಂದ ಕಣ್ಣು ತೆರೆದು ಅತ್ತಿತ್ತ ನೋಡಿದ. ಯಾರೂ ಕಾಣಲಿಲ್ಲ. ಯಾರೋ ತನ್ನ ಮೈದಡವಿ ಮಾತನಾಡಿಸಿದಂತೆ ಅನ್ನಿಸಿತ್ತು. ಭ್ರಮೆ ಎಂದುಕೊಂಡು ಎದ್ದ ಅವನ ಆಯಾಸವೆಲ್ಲ ಪರಿಹಾರವಾದಂತಾಗಿತ್ತು.

"ಹೋಗೋಣ್ವಾ!" ಅವನು ಎದ್ದುದನ್ನು ಕಂಡು ಭೈರಪ್ಪನೂ ಎದ್ದ. ಸ್ವಲ್ಪ ದೂರ ಬಂದ ನಂತರ ಎದುರಿಗೆ ಸಿಕ್ಕ ವ್ಯಕ್ತಿಯನ್ನು ಅನಂತನಿಗೆ ಪರಿಚಯ ಮಾಡಿಕೊಟ್ಟ.

"ಇವರು ಡಾಕ್ಟರ್" ಭೀಮಸೇನರಾವ್ ಅಂತ. ಆಶ್ರಮದ ಡಿಸ್ಪೆನ್ಸರಿ ಯಲ್ಲಿದ್ದಾರೆ. ಅಲ್ಲೇ ವಾಸವಾಗಿದಾರೆ"

ಅನಂತ ಅವರನ್ನೇ ನೇರವಾಗಿ ನೋಡಿದ. ಹೆಸರಿಗೆ ತಕ್ಕಂತೆ ಭೀಮ ಕಾಯ.. ನಡೆದರೆ ಭೂಮಿಒ ನಡುಗುತ್ತದೇನೋ ಎನ್ನುವಂತೆ ಕೈಯಲ್ಲಿ ಗದೆಯ ಬದಲು ಸ್ಟೆತೋಸ್ಕೋಪು ಅಷ್ಟೇ, ಬಿಳಿ ಷರಟು, ಪ್ಯಾಂಟು ತೊಟ್ಟಿದ್ದ. ಪೊದೆ ಮೀಸೆಯ ವ್ಯಕ್ತಿ ಸ್ನೇಹಮಯಿಯಂತೆ ಕಂಡುಬಂದ. ಅನಂತ ಕೈ ಕಲುಕಿ ತನ್ನ ಸಂತಸವನ್ನು ವ್ಯಕ್ತಪಡಿಸಿದ.

"ನಿಮ್ಮ ಪರಿಚಯವಾದದ್ದು ತುಂಬಾ ಸಂತೋಷವಾಯಿತು"

"ಇಲ್ಲಿ ಒಬ್ಬರನ್ನೊಬ್ಬರು ಪರಿಚಯ ಮಾಡಿಕೊಳ್ಳಲೇಬೇಕು ಅಲ್ಲದೇ ನಾನು ಡಾಕ್ಟರು, ನನ್ನ ಪರಿಚಯ ಎಲ್ಲರಿಗೂ ಬೇಕು" ಎಂದು ನಕ್ಕ.

"ರೌಂಡ್ಸ್ ಮುಗೀತಾ?" ಭೈರಪ್ಪ ಕೇಳಿದ.

"ಹೂನಪ್ಪ, ಇವತ್ತಿನ ಡ್ಯೂಟಿ ಆಯ್ತು. ಆದರೆ ಒಬ್ಬ ಮುದುಕರು ಮಾತ್ರ ಮಗಳು ಬರಲಿಲ್ಲ ಅನ್ನೋದನ್ನೇ ಹಚ್ಚಿಕೊಂಡು ಕೊರಗ್ತಿದಾರೆ..."

"ನಾಳೆ ಟೆಲಿಗ್ರಾಂ ಕೊಡಿಸಲಾ.... ಮೊದಲೇ ವಯಸ್ಸಾಗಿದೆ"

"ಹಾಗೇನಿಲ್ಲ, ಹಾರ್ಟ್ ಬಿ.ಪಿ. ಎಲ್ಲಾ ಸರಿಯಾಗಿದೆ, ಮಕ್ಕಳು ತಮ್ಮನ್ನ ದೂರ ಮಾಡಿದಾರಲ್ಲ ಅಂತನ್ನುವ ಕೊರಗು... ಏನಾದರೂ ನೆವ ಮಾಡಿ ಅವರನ್ನು ಕರೆಸಬೇಕು ಅಂತ ಆಸೆ. ಅವರುಗಳಿಗೋ ಅವರದ್ದೇ

ಅವರಿಗೆ ಇಲ್ಲದಿದ್ದರೆ ಇಲ್ಲಿ ವೃದ್ಧಾಶ್ರಮಕ್ಕೆ ಯಾಕೆ ಸೇರಿಸುತ್ತಿದ್ದರು!"

"ಅದು ಸರಿ.... ಕಾಫಿ ಕುಡೀತೀರಾ ಡಾಕ್ಟ್ರೇ...."

"ಹೂಂ.... ಕೊಡಿಸಿ" ಎಲ್ಲರೂ ಮತ್ತೆ ಅಡಿಗೆ ಮನೆ ಕಡೆಗೆ ಬಂದರು.

"ನೀವು ಏನೇ ಹೇಳಿ ಭೈರಪ್ಪಾ, ಕಾಫಿ ಆರೋಗ್ಯಕ್ಕೆ ಒಳ್ಳೇದಲ್ಲ ಅಂತ ಗೊತ್ತಿದ್ರೂ ನೀವೂ ಕುಡೀತೀರಿ. ನಮಗೂ ಕುಡಿಸ್ತೀರಿ ಯಾಕೆ?"

"ನಮ್ಮಂತಹವರಿಗೆ ಇನ್ನೇನಿದೆ? ಕಾಫಿ ಮೊದಲ್ನಿಂದ ಅಭ್ಯಾಸ. ನಾನು ಕೇಳಿದಾಗಲೆಲ್ಲಾ ಅಡಿಗೆಯವರು ಕೊಡ್ತಾರೆ. ಹಾಗಂತ ನಾನು ರಾತ್ರಿಯೆಲ್ಲಾ ಕುಡಿಯಲ್ಲವಲ್ಲ.... ನಾನು ಬದುಕಿರುವವರೆಗೆ ಕಾಫಿ, ಅಡಿಕೆ ಎಲೆ ತಂಬಾಕು, ಇವೇ ನನ್ನ ಸಂಗಾತಿಗಳು."

"ಈ ಬಗ್ಗೆ ಯಾರೂ ಏನೂ ಅನ್ನಲ್ವೇ?"

"ವೃದ್ಧಾಶ್ರಮದವರಲ್ಲಿ ಕೆಲವರಿಗೆ ಮತ್ತೆ ಮತ್ತೆ ಕಾಫಿ ಕುಡಿಯುವ ಅಭ್ಯಾಸ ಮಾಡಿಸಿಬಿಟ್ಟಿರುತ್ತಾರೆ"

"ಇಲ್ಲಿ ಆಶ್ರಮದಲ್ಲಿ ಅವರುಗಳು ಮಜಾ ಮಾಡ್ತಾ ಇದಾರೆ ಬಿಡಿ.... ಮಗನ ಮನೆಯಲ್ಲಿ ಈ ಆದರ ಆತಿಥ್ಯ ಎಲ್ಲಿರುತ್ತಿತ್ತು? ಸೊಸೆ ಸಿಡಿಸಿಡಿ ಅಂದರೆ ಸಾಕು, ಮಗನೂ ಅವಳ ಪರವಾಗಿ ಅಪ್ಪನನ್ನೇ ಅನ್ನುತ್ತಿದ್ದ...."

"ಅದಕ್ಕೆ ಕೆಲವರು ಎಲ್ಲಾ ಸಂಬಂಧಗಳನ್ನು ತೊರೆದು ತಾವಾಗಿಯೇ ಬಂದು ಇಲ್ಲಿಗೆ ಸೇರಿಕೊಂಡಿದ್ದಾರೆ. ವೃದ್ಧರು, ಅವರ ಆಸೆಗಳೂ ಪೂರೈಸಬೇಕು.... ಅವರ ಆರೋಗ್ಯವೂ ಕೆಡಬಾರದು, ಅದಕ್ಕೆ ನೀವಿದೀರಿ"

ಅನಂತ ಸುಮ್ಮನೇ ಕೂತ. ಅವನಿಗೆ ಕಾಫಿ ಬೇಕೆನಿಸಲಿಲ್ಲ, ಹಾಸ್ಟೆಲ್ಲಿನಲ್ಲಿ ಕೇಳಿದಾಗಲೆಲ್ಲಾ ಕಾಫಿ ಸಿಗುತ್ತಿರಲಿಲ್ಲ, ಹೊರಗೆ ಹೋಟೇಲ್ಲಿಗೆ ಹೋಗಬೇಕಾಗುತ್ತಿತ್ತು. ಅಲ್ಲಿಯ ಕಾಫಿ ಚೆನ್ನಾಗಿರುತ್ತಿರಲಿಲ್ಲ, ಹಾಗಾಗಿ ಹೆಚ್ಚಿಗೆ ಕುಡಿಯುತ್ತಿರಲಿಲ್ಲ.

"ಊಟಕ್ಕೆ ಇನ್ನು ತುಂಬಾ ಟೈಮಿದೆ ಕುಡಿಯಪ್ಪಾ" ಎಂದು ಭೈರಪ್ಪ ಬಲವಂತ ಮಾಡಿದರೂ ಕುಡಿಯಲಿಲ್ಲ.

"ಹಾಲು, ಹಾರ್ಲಿಕ್ಸ್ ಏನಾದ್ರೂ.... ಅಡಿಗೆಯವರು ವಿಚಾರಿಸಿದಾಗ ಅನಂತ ಅಚ್ಚರಿಗೊಂಡ. ಇದು ಆಶ್ರಮ ಅಲ್ಲ, ಸ್ಟಾರ್ ಹೊಟೇಲ್ ಎಂದುಕೊಂಡ.

"ಕೆಲವರಿಗೆ ಹಾರ್ಲಿಕ್ಸ್ ಕುಡಿದು ತಾವು ಶಕ್ತಿವಂತರಾಗಿರಬೇಕು ಎನ್ನುವ ಆಸೆ, ಅಂತಹವರಿಗೆ ಅಂತ ತಂದಿಟ್ಟಿರುತ್ತಾರೆ. ಭೈರಪ್ಪ ಮಾತು ಸೇರಿಸಿದ.

"ಏನೂ ಬೇಡ.... ಪ್ಲೀಸ್" ಎನ್ನುತ್ತಾ ಅನಂತ ಎದ್ದ.

ಹೀಗೇ ಈ ಕಾಫಿ, ಹಾರ್ಲಿಕ್ಸ್ ಹಾಲಿನ ಸರಬರಾಜು, ಅನಾಥಾಶ್ರಮದ ಮಕ್ಕಳಿಗೂ ಸಿಗುತ್ತದೆಯೇ ಎಂದು ವಿಚಾರಿಸಬೇಕು ಎಂದುಕೊಂಡ.

ತಾನಿನ್ನು ಇಲ್ಲಿಯ ಸದಸ್ಯನಾಗಿಲ್ಲ. ಈಗಲೇ ಅದೆಲ್ಲ ತನಗೇಕೆ

ಎಂದುಕೊಂಡು ಸುಮ್ಮನಾದ.

ಕಾಫಿ ಕುಡಿದು ಡಾಕ್ಟರು ಹೋದನಂತರ ಇವರಿಬ್ಬರೂ ಮತ್ತೆ ಅತಿಥಿ ಗೃಹಕ್ಕೆ ಬಂದರು.

"ಈ ರಾತ್ರಿ ನೀವು ಇಲ್ಲಿ ಇರುತ್ತೀರೋ ಅಥವಾ ನನ್ನ ರೂಮಿನಲ್ಲಿ ರುತ್ತೀರೋ...."

"ಇಲ್ಲೇ ಇರ್ತೀನಿ ಪರವಾಗಿಲ್ಲ.... ಲೈಬ್ರರಿ ಎಲ್ಲಿದೆ?"

"ಇಲ್ಲಿ ಎರಡು ಲೈಬ್ರರಿ ರೂಮುಗಳಿವೆ. ಒಂದು ವೃದ್ಧಾಶ್ರಮದವರಿಗೆ ಅಲ್ಲಿ ದಿನಪತ್ರಿಕೆಗಳು, ವಾರಪತ್ರಿಕೆಗಳು, ಕತೆ, ಕಾದಂಬರಿಗಳು, ಬೇರೆಬೇರೆ ತರಹದ ಪುಸ್ತಕಗಳಿವೆ. ಇನ್ನೊಂದು ಭಜನಾ ಮಂದಿರದ ಪಕ್ಕದಲ್ಲಿದೆ ಅಲ್ಲಿ ವೇದ, ಪುರಾಣ, ಆಧ್ಯಾತ್ಮಿಕ ಗ್ರಂಥಗಳಿವೆ. ಅಲ್ಲಿಗೆ ಮಾತ್ರ ಎಲ್ಲರಿಗೂ ಪ್ರವೇಶವಿಲ್ಲ. ಅದನ್ನು ಓದುವ ಅಸಕ್ತರಿಗೆ ಮಾತ್ರ ಪ್ರವೇಶ.

"ಈಗ ಲೈಬ್ರರಿ ತೆಗೆದಿದ್ದರೆ, ನಾನು ಹೋಗಿ ನೋಡಿ ಬರ್ತೀನಿ"

"ನಾನು ಬರಲಾ?"

"ಬೇಡ ಭೈರಪ್ಪಾ, ನನ್ನ ಜತೆ ತಿರುಗಿ ತಿರುಗಿ ನಿಮಗೆ ಸುಸ್ತಾಗಿರಬಹುದು ಅಲ್ವಾ?" ಹಾಗೆ ಹೇಳಿದ್ದರೂ ಭೈರಪ್ಪ ಅವನ ಜತೆ ಬಂದ.

"ಒಳ್ಳೆ ನಕ್ಷತ್ರಿಕನ ತರಹ ಬೆನ್ನು ಹತ್ತಿದಾನೆ ಅಂತ ಅಂದ್ಕೊಬೇಡಪ್ಪಾ.... ನೀನಿನ್ನು ಹೊಸಬ.... ಇಲ್ಲಿಯ ಪರಿಚಯ ಮಾಡಿಕೊಡುವುದು ನನ್ನ ಕರ್ತವ್ಯ... ಅದೇ ನನ್ನ ಕೆಲಸ.. "

ಅನಂತ ಏನನ್ನೂ ನುಡಿಯಲಿಲ್ಲ.

ಲೈಬ್ರರಿಯ ಒಳಬಾಗಿಲಿನಲ್ಲಿ ನಿಂತು ಅನಂತ ಸುತ್ತಲೂ ನೋಡಿದ. ಓದುತ್ತಿದ್ದ ಕೆಲವರು ಅವನ ಕಡೆ ತಿರುಗಿದರು. ಒಂದಿಬ್ಬರು ಹುಡುಗರು ಪುಸ್ತಕ ಹುಡುಕುತ್ತಿದ್ದರು. ಅನಂತ ಒಂದೆರಡು ವಾರ ಪತ್ರಿಕೆಗಳನ್ನು ಹಿಡಿದು, ಖಾಲಿ ಇದ್ದ ಕುರ್ಚಿಯ ಮೇಲೆ ಕೂತ. ಭೈರಪ್ಪ ಯಾರೊಡನೆಯೋ ಮಾತನಾಡುತ್ತಾ ಹೊರಕ್ಕೆ ಹೊರಟುಹೋದ.

ಬಾಗಿಲು ಮುಚ್ಚುವ ಸಮಯವಾಯಿತೆಂದು ಅಲ್ಲಿದ್ದ ಕಾವಲುಗಾರ ಹೇಳಿದಾಗ, ಅವನು ಪುಸ್ತಕಗಳನ್ನು ಮಡಿಸಿಟ್ಟು ಎದ್ದು ಹೊರಬಂದ. ಭೈರಪ್ಪ ಎಲ್ಲಿಯೂ ಕಾಣಲಿಲ್ಲ. ಆ ಮಂದ ಬೆಳಕಿನಲ್ಲಿ ಎತ್ತ ಕಡೆ ಹೋಗಬೇಕೆಂದು ತಿಳಿಯದೇ ಅಲ್ಲೇ ಇದ್ದ ಕಲ್ಲು ಬೆಂಚಿನ ಮೇಲೆ ಕುಳಿತ. ಎಷ್ಟೋ ಹೊತ್ತಿನ ನಂತರ ಭೈರಪ್ಪ ಎದುಸಿರು ಬಿಡುತ್ತಾ ವೇಗವಾಗಿ ಬಂದ.

"ಅದೇನು ಇಲ್ಲೇ ಕೂತ್ಬಿಟ್ಟೆ ಅನಂತಪ್ಪಾ, ಭೋಜನಾ ಶಾಲೆಗಾದರೂ ಬರಬಾರದಾಗಿತ್ತಾ? ಯಾರನ್ನಾದರೂ ಕೇಳಿದರೆ ಹೇಳಿರೋರು."

"ಅದೆಲ್ಲಿದೆ ಅಂತ ಕತ್ತಲೇಲಿ ತಿಳೀಲಿಲ್ಲ, ನೀವು ಬಂದೇ ಬರ್ತೀರಾ ಅಂತ ನಿಮಗಾಗಿ ಕಾದು ಕೂತೆ" ಎನ್ನುತ್ತಾ ಎದ್ದ. ಭೈರಪ್ಪ ಬರದೇ ಇದ್ದಿದ್ದರೆ ಈ ರಾತ್ರಿಯನ್ನೆಲ್ಲ ಇಲ್ಲೇ ಕಳೆಯಬೇಕಾಗಿತ್ತೇನೋ ಅಂತ ಅನ್ನಿಸಿದಾಗ ಮೈ ಬೆವರಿತ್ತು. ಹೊಸ ಜಾಗ, ಹೊಸ ಜನ, ತನಗೆ ಭೈರಪ್ಪನ ಸಹಕಾರದ ಅಗತ್ಯವಿದೆ ಎಂದುಕೊಂಡ.

ಇಬ್ಬರೂ ಊಟ ಮುಗಿಸಿ, ಅತಿಥಿ ಗೃಹಕ್ಕೆ ಬಂದರು.

"ಅನಂತಪ್ಪಾ ನಿಮಗೆ ತುಂಬಾ ಸಂಕೋಚ, ಈ ರಾತ್ರಿ ನಾನು ಇಲ್ಲಿ ನಿಮ್ಮ ಜತೇಲಿರ್ತೀನಿ" ಎನ್ನುತ್ತಾ ಭೈರಪ್ಪ ಅಲ್ಲಿಯೇ ಉಳಿದುಕೊಂಡ.

ವಿಶಾಲವಾದ ಮೆತ್ತೆಗಳಿರುವ ಮಂಚ, ಇಳಿಬಿಟ್ಟಿರುವ ಸೊಳ್ಳೆ ಪರದೆ ಮಂದವಾದ ಬೆಳಕು, ಮೇಲೆ ತಿರುಗುತ್ತಿರುವ ಫ್ಯಾನು... ಆದರೂ ಭೈರಪ್ಪ ಮಾತಿಗೆ ಪ್ರಾರಂಭಿಸಿದ.

"ಹೊಸ ಜಾಗ ನಿದ್ದೆ ಬರ್ತಿಲ್ಲ ಅಲ್ವಾ! ನನಗೂ ಹೀಗೇ ಆಗಿತ್ತು. ಈಗ ಇಲ್ಲಿ ಮರದ ಕೆಳಗೆ ಮಲಗಿದ್ರೂ ನಿದ್ದೆ ಬರುತ್ತೆ"

"ಬೆಳಿಗ್ಗೆ ಎಷ್ಟು ಹೊತ್ತಿಗೆ ಏಳಬೇಕು?"

"ಸೂರ್ಯೋದಯಕ್ಕೆ ಮುಂಚೆ ಎದ್ದರೆ ಸಾಕು... ನಾನು ಎಬ್ಬಿಸ್ತೀನಿ ಆಮೇಲೆ ಸ್ನಾನಗೀನ ಮುಗಿಸಿ, ಸ್ವಾಮೀಜಿಯವರ ಹತ್ತಿರ ಹೋಗೋಣ"

ಸ್ವಾಮೀಜಿಯವರ ಹತ್ತಿರ ತಾನೂ ಹೇಗೆ ಮಾತನಾಡಬೇಕು ಎಂಬುದನ್ನು ಯೋಚಿಸುತ್ತಾ ಮಲಗಿದವನಿಗೆ ಬಹಳ ತಡವಾಗಿ ನಿದ್ದೆ ಬಂದಿತು.

ಬೆಳಗ್ಗೆ ಭೈರಪ್ಪ ಎಬ್ಬಿಸಿದಾಗ, ಬೇಸರವಾದರೂ ಎದ್ದ. ಇಲ್ಲಿ ತನ್ನ ದಿನಚರಿ ಇಲ್ಲಿಯ ನಿಯಮಗಳಿಗನುಸಾರವಾಗಿ ಬದಲಾಗಬೇಡವೇ....? ಇದು ತನ್ನ ಮನೆಯಲ್ಲ... ಎಂದುಕೊಂಡಾಗ ಒಂದು ವಿಚಿತ್ರ ಸನ್ನಿವೇಶ ಒದಗಿ ತಾನು ಇಲ್ಲಿ ಬಂದು ಇರಬೇಕಾದ ಪರಿಸ್ಥಿತಿ ಒದಗಿತಲ್ಲ ಎಂದು ತನ್ನ ಬಗ್ಗೆಯೇ ಅನುಕಂಪ ಮೂಡಿತ್ತು.

ಧ್ಯಾನ ಪೂಜೆ ಇತ್ಯಾದಿಗಳನ್ನು ಮುಗಿಸಿ ಹೊರಬಂದ ಸ್ವಾಮೀಜಿಯು ಭೈರಪ್ಪನನ್ನು ಕರೆದು, ಅನಂತನನ್ನು ಒಳಗೆ ಕಳಿಸುವಂತೆ ತಿಳಿಸಿದರು.

ಅನಂತ ಕೈ ಮುಗಿದು ನಿಂತ, "ಜೈ ಜಗನ್ನಾಥಾ" ಎಂದು ಸ್ವಾಮೀಜಿ ಆಶೀರ್ವದಿಸಿ ಮುಗುಳ್ನಗುತ್ತಾ ಅವನ ಕಷ್ಟ ಸುಖಗಳನ್ನು ವಿಚಾರಿಸಿದಾಗ ಅನಂತ ಅಚ್ಚರಿಗೊಂಡಿದ್ದ. ಹಿಂದೆಂದೋ ಬಂದಿದ್ದ ತನ್ನ ಬಗ್ಗೆ ಇವರಿಗೆ ನೆನಪಿದೆ. ಅಲ್ಲದೇ ತಾನು ಈಗ ಬಂದಿರುವ ವಿಚಾರ ಇವರಿಗೆ ತಿಳಿದುದ್ದಾದರೂ ಹೇಗೆ? ಭೈರಪ್ಪನೇ ತಿಳಿಸಿರಬಹುದೇ?

"ಅಂತೂ, ಆಶ್ರಮವಾಸಿಯಾಗಬೇಕು ಎಂಬ ಆಸೆಯಿಂದ

ಬಂದಿದ್ದೀಯೆ. ಜಗನ್ನಾಥನ ದಯೆ ನಿನ್ನ ಮೇಲಿರಲಿ. ಸದ್ಯಕ್ಕೆ ನೀನು ಇಲ್ಲಿಯ ಅತಿಥಿ. ಒಂದು ವಾರದ ನಂತರ, ನಿನ್ನ ಕರ್ತವ್ಯ ಕೆಲಸ, ನಿಯಮಗಳ ಬಗ್ಗೆ ನಿನಗೆ ತಿಳಿಸಿಕೊಡಲಾಗುತ್ತದೆ. ಯಾವುದಕ್ಕೂ ಚಿಂತಿಸಬೇಡ, ಯಾವುದೇ ಜಿಜ್ಞಾಸೆಯಿದ್ದರೂ ಅದನ್ನು ನಿಸ್ಸಂಕೋಚವಾಗಿ ನಮಗೆ ತಿಳಿಸು, ಎಲ್ಲರನ್ನು ನಿನ್ನವರೆಂದು ತಿಳಿ, ಆಗ ನೀನೇ ಅವರಲ್ಲಿ ಒಬ್ಬನಾಗಿರುತ್ತೀಯೆ" ಅವರು ಕೈ ಸಂಜ್ಞೆ ಮಾಡಿದಾಗ ಅನಂತ ಹೊರಬಂದ. ಭೈರಪ್ಪ ಬಂದು ಅವನನ್ನು ಸೇರಿಕೊಂಡ.

ಅಂದಿನಿಂದ ಅನಂತ ಆ ಆಶ್ರಮವಾಸಿಯಾದ. ತಾನಾಗಿಯೇ ಯಾರ ಸ್ನೇಹವನ್ನು ಮಾಡಿಕೊಳ್ಳದೇ ದೂರದೂರವಿರುತ್ತಿದ್ದ. ಭೈರಪ್ಪ, ಡಾ. ಭೀಮ ಸೇನರು ಮಾತ್ರ ಅವನ ಸ್ನೇಹಿತರಾಗಿದ್ದರು. ಒಮ್ಮೊಮ್ಮೆ ಭೈರಪ್ಪನ ಮಾತು ಸಹ ಬೇಸರ ತರುತ್ತಿತ್ತು. ಒಂದು ವಾರ ಅತಿಥಿಯಾಗಿ ಕಾಲ ಕಳೆಯವುದು ಕಠಿಣವಾಗಿ ಕಂಡಿತ್ತು. ಬೆಳಗಿನ ವಾಕಿಂಗ್ ಮುಗಿಸಿ, ಸ್ನಾನದ ನಂತರ ಉಪಹಾರ ಲೈಬ್ರರಿಗೆ ಬಂದು ಕೂತು ದಿನಪತ್ರಿಕೆ, ವಾರಪತ್ರಿಕೆಗಳನ್ನು ಓದಿ ಮುಗಿಸಿದ ನಂತರ ಊಟದ ಸಮಯದವರೆಗೂ ಏನು ಕೆಲಸವೂ ಇರುತ್ತಿರಲಿಲ್ಲ. ಭೈರಪ್ಪ ಸಿಕ್ಕಿದರೆ ಒಂದಿಷ್ಟು ಮಾತು ಇಲ್ಲದಿದ್ದರೆ ಅದೂ ಇಲ್ಲ.

ವೃದ್ಧಾಶ್ರಮದ ಹಿರಯ ಸದಸ್ಯರ ಕುತೂಹಲಭರಿತ ನೋಟ ಅವನನ್ನು ಮುಜುಗರಗೊಳಿಸುತ್ತಿತ್ತು. ಅನಾಥಾಶ್ರಮದ ಹುಡುಗರ ಆಟ ನೋಡುತ್ತಾ ಕೂತಿರುತ್ತಿದ್ದ. ಆ ಹುಡುಗರೋ, ಆಟ ಆಡುವುದಕ್ಕಿಂತ ಜಗಳವಾಡುವುದು ಜಾಸ್ತಿ. ಅದೂ ಅಸಹನೀಯವೆನಿಸುತ್ತಿತ್ತು. ತಾನು ಅವರುಗಳಿಗೆ ತಿಳುವಳಿಕೆ ಹೇಳುವಂತಿದ್ದರೆ.... ಒಂದು ವಾರದ ಅತಿಥಿ ಪಾತ್ರ ಮುಗಿದರೆ ಸಾಕೆಂದು ಕಾದ. ಆ ದಿನವೂ ಕಳೆಯಿತು.

ಸ್ವಾಮೀಜಿಯವರು ಅವನಿಗೆ ಕರೆ ಕಳಿಸಿದರು.

"ಇಂದಿನಿಂದ ನೀನು ಉಳಿದವರಂತೆ, ಆಶ್ರಮದ ಸದಸ್ಯ. ಈ ಒಂದು ತಿಂಗಳು, ನೀನು ಆಶ್ರಮದ ಎಲ್ಲಾ ಆಗುಹೋಗುಗಳ, ಚಟುವಟಿಕೆಗಳ ಬಗ್ಗೆ ಗಮನವಿಟ್ಟು ನೋಡಬೇಕು... ಎಲ್ಲಾ ಸರಿಯಾಗಿದೆಯೇ ಸಮರ್ಪಕವಾಗಿದೆಯೇ? ಏನಾದರೂ ಬದಲಾವಣೆ ತರಬಹುದೇ? ಎಂತಹ ಮಾರ್ಪಾಟನ್ನು ತರಬಹುದು... ಇತ್ಯಾದಿ, ಇತ್ಯಾದಿ ನಿರ್ಭಯವಾಗಿ ನೀನು ನಿನ್ನ ಅಭಿಪ್ರಾಯವನ್ನು ತಿಳಿಸಬಹುದು.."

ಅನಂತ ಅಧೀರನಾದ ಇದು ಕಷ್ಟಕರವಾದ ಕೆಲಸವೇ ಹಾಗಂತ ತನ್ನಿಂದಾಗುವುದಿಲ್ಲ ಎಂದು ಹೇಳಲಾಗುವುದಿಲ್ಲ. ನಾನು ಹೊಸಬ ಇನ್‌ಸ್ಪೆಕ್ಷನ್‌ಗೆ ಬಂದವನಂತೆ ಓಡಾಡಿದರೆ, ಉಳಿದವರಿಗೆ ಸರಿಹೋಗದೇ ಇರಬಹುದು

ತನ್ನಿಂದ ಆಗದೇ ಇದ್ದರೆ, ಮೊದಲ ಹಂತದಲ್ಲೇ ತಾನು ಸೋತಂತೆ.... ತನಗೀಗ ಭೈರಪ್ಪನೇ ಗತಿ ಎಂದು ಅವನ ಶರಣು ಹೊಕ್ಕ

ಭೈರಪ್ಪ ಅವನ ಹೆದರಿಕೆಯನ್ನು ಕಂಡು ನಕ್ಕ.

"ನಿನಗೇನಪ್ಪಾ ಅಂಜಿಕೆ? ಇಲ್ಲಿಯ ವಹಿವಾಟು ಸರಿಯಾಗಿಯೇ ನಡೆಯುತ್ತಿದೆ. ಏನಾದರೂ ಹೊಸ ಬದಲಾವಣೆ ತರಬಹುದು ಅಂತ ನಿನ್ನಗನ್ನಿಸಿದರೆ, ಹೇಳಿದರಾಯ್ತು, ತರುವುದು ಬಿಡುವುದು ಅವರ ಇಷ್ಟ. ಅಷ್ಟರಲ್ಲಿ ನೀನು ಇಲ್ಲಿಗೆ ಹಳಬನಾಗಿರುತ್ತೀಯೆ. ಅವರು ಬದಲಾವಣೆ ತರದಿದ್ದರೂ ನಿನಗೆ ಏನೂ ಅನ್ನಿಸುವುದಿಲ್ಲ"

"ಹಾಗಾದರೆ ಹೀಗೆ ಹೇಳುವುದೇಕೆ?"

"ಹೊಸಬನಾದವನಿಗೆ, ಹೀಗಿದ್ದರೆ ಸರಿ, ಹಾಗಿದ್ದರೆ ಸರಿ ಅಂತ ಅನ್ನಿಸುತ್ತೋ ಇಲ್ಲವೋ? ಇದು ನಿನಗೆ ಒಂದು ಅವಕಾಶ ಆಶ್ರಮದ ಆಡಳಿತ, ಉದ್ಧಾರದ ಬಗ್ಗೆ ನಿನಗೆಷ್ಟು ಆಸಕ್ತಿ, ಉತ್ಸಾಹ ಎಷ್ಟಿದೆ ಅಂತ ತಿಳಿದುಕೊಳ್ಳುವ ಒಂದು ಉಪಾಯ ಅಷ್ಟೆ."

"ನಿಮಗೆ ಹೊಸದರಲ್ಲಿ ಹೀಗೇ ಹೇಳಿದ್ದರೇ..."

"ಇಲ್ಲಿ... ಆಶ್ರಮಕ್ಕೆ ಬಂದು ಸೇರುವವರೆಲ್ಲರನ್ನೂ ಒಂದೇ ತರಹದಲ್ಲಿ ಪರೀಕ್ಷಿಸುವುದಿಲ್ಲ. ಒಬ್ಬೊಬ್ಬರನ್ನು ಒಂದು ತರಹ, ನಿನಗೇಕೆ ಚಿಂತೆ! ನಾನಿದೀನಲ್ಲ..."

"ಭೈರಪ್ಪ ಇಲ್ಲಿ ನೀವು ಸಿಗದಿದ್ದರೆ, ನಾನು ಏನು ಮಾಡಬೇಕಾಗುತ್ತಿತ್ತು! ಬಹುಶಃ ಒಂದು ವಾರದ ಆತಿಥ್ಯದ ನಂತರ ಎಲ್ಲಾದರೂ ಓಡಿ ಹೋಗು ತ್ತಿದ್ದೆನೋ ಏನೋ..."

"ಅಂತಹ ಕೆಲಸ ಮಾತ್ರ ಎಂದಿಗೂ ಮಾಡಬೇಡ. ಅದು ಹೇಡಿಗಳ ಲಕ್ಷಣ. ಹಿಡಿದ ಕೆಲಸವನ್ನು ಶಿರಸಾವಹಿಸಿ ಮಾಡುವುದು ಧೀರರ ಕೆಲಸ. ಆಶ್ರಮದ ಹೆಸರನ್ನು ನಿಮ್ಮಂತಹವರು ಊರ್ಜಿತಗೊಳಿಸಬೇಕು"

ತನ್ನ ಸತ್ವ ಪರೀಕ್ಷೆ ಕಠಿಣವಾಗಿ ತೋರಿತು ಅನಂತನಿಗೆ. ಆಶ್ರಮದ ಆಡಳಿತದಲ್ಲಿ ಯಾವ ಕುಂದು ಕೊರತೆಯೂ ಅವನಿಗೆ ಕಂಡುಬರಲಿಲ್ಲ. ಎಲ್ಲಾ ಸರಿಯಾಗಿ ನಡೆಯುತ್ತಿದೆಯೆಂದು ತೋರಿತ್ತು. ಅವನಿಗೂ ಯಾವ ತೊಂದರೆಯಾಗಲೀ, ಸಮಸ್ಯೆಯಾಗಲಿ ಕಂಡುಬಂದಿರಲಿಲ್ಲ. ತನ್ನ ಮೇಲ್ವಿಚಾರಣೆಯ ಕೆಲಸದ ನಂತರ ಸಾಕಷ್ಟು ಸಮಯವನ್ನು ಲೈಬ್ರರಿಯಲ್ಲಿ ಕಳೆಯುತ್ತಿದ್ದ. ಹೆಸರಾಂತ ಲೇಖಕರ ಕೃತಿಗಳನ್ನು ಓದುವ ಅವಕಾಶ ಸಿಕ್ಕಿತ್ತು. ಲೈಬ್ರರಿ ಅವನ ಆಪ್ತವಾದ ಸ್ಥಳ. ಪ್ರಶಾಂತವಾದ ವಾತಾವರಣ ಹಿತವಾಗಿತ್ತು.

ವೃದ್ಧ ಸದಸ್ಯರ ಊಟ ಉಪಚಾರ, ಶುಶ್ರೂಷೆಗಳಲ್ಲಿ ಯಾವ

ಲೋಪದೋಷವೂ ಇರಲಿಲ್ಲ. ಅಗತ್ಯಕ್ಕಿಂತ ಹೆಚ್ಚಿನ ಸೌಲಭ್ಯಗಳಿದ್ದವು. ಡಿಸ್ಪೆನ್ಸರಿಯಲ್ಲಿ ತತ್‌ಕ್ಷಣಕ್ಕೆ ಬೇಕಾದ ಔಷಧಿ ಸಾಮಗ್ರಿಗಳಿದ್ದವು. ಡಾಕ್ಟರು, ಕಾಂಪೌಂಡರ್ ಅಲ್ಲಿಯೇ ವಾಸವಾಗಿದ್ದರು

ಪಾಕಶಾಲೆಯ ಸಿಬ್ಬಂದಿಯವರು ಯಾವ ದುರಾಸೆ, ಸ್ವಾರ್ಥಗಳಿಲ್ಲದೇ ತಮ್ಮ ತಮ್ಮ ಕೆಲಸವನ್ನು ನಿರ್ವಹಿಸುತ್ತಿದ್ದರು. ಆಶ್ರಮದಲ್ಲಿಯೇ ಸಾಕಿದ್ದ ದನ ಎಮ್ಮೆಗಳ ಹಾಲನ್ನು ನಿಯಮಿತವಾಗಿ ಕರೆದು ತಂದಿಡುತ್ತಿದ್ದರು. ಬೆಳೆಸಿದ ತರಕಾರಿಗಳು ತಾಜಾತನದಿಂದ ಪಾಕಶಾಲೆಯನ್ನು ಅಂದಂದಿನ ಅಡಿಗೆಗೆ ಅನುಸಾರವಾಗಿ ಬಂದು ಸೇರುತ್ತಿದ್ದವು. ಹೂವು ಹಣ್ಣುಗಳಿಗೆ ಕೊರತೆ ಇರಲಿಲ್ಲ. ಒಂದು ತರಹ ಮಾದರಿ ಆಶ್ರಮ. ಹಣಕಾಸಿನ ಆದಾಯ ವ್ಯಯದ ಬಗ್ಗೆ ಅನಂತ ಗಮನ ಕೊಡಲಿಲ್ಲ. ಧಾರಾಳವಾದ ಆದಾಯವಿಲ್ಲದೇ ಇಷ್ಟೆಲ್ಲಾ ನಡೆಸಲು ಸಾಧ್ಯವೆ? ಹಣ ಉಳಿಸಿದರೂ ತನಗೇನೂ ಲಾಭವಿಲ್ಲ. ಉಳಿಸದಿದ್ದರೂ ತನಗೆ ನಷ್ಟವಿಲ್ಲ ಎಂದುಕೊಂಡ.

ಫಾರಂ ಡೈರಿಯಿಂದ ಹೆಚ್ಚಿನ ಹಾಲನ್ನು ಮಾರಾಟ ಮಾಡುತ್ತಿದ್ದರು. ತರಕಾರಿ ಹಣ್ಣುಹಂಪಲನ್ನು ಮಾರ್ಕೆಟ್ಟಿಗೆ ಕಳಿಸುತ್ತಿದ್ದರು. ಅದರ ಲಾಭ ನಷ್ಟದ ಬಗ್ಗೆ ಅಥವಾ ಅದನ್ನು ನಿರ್ವಹಿಸುವವರ ಬಗ್ಗೆ ಅನಂತ ಅನುಮಾನಪಡುವಂತಿರಲಿಲ್ಲ.

ಆದರೆ ಅನಾಥ ಮಕ್ಕಳನ್ನು ಕಂಡಾಗ, ಅವರ ಮುಖದ ಮೇಲಿನ ಖಿನ್ನತೆ ಅವನನ್ನು ಖಿನ್ನನನ್ನಾಗಿ ಮಾಡಿಬಿಡುತ್ತಿತ್ತು. ತಾನೂ ಅನಾಥ, ಒಂದು ವೇಳೆ ತನ್ನನ್ನು ಆ ಗೋಪಾಲನೆಂಬ ಮನುಷ್ಯ ಸಾಕದೇ ಇದ್ದಿದ್ದರೆ, ತಾನೂ ಇಂತಹ ಒಂದು ಅನಾಥಾಶ್ರಮದಲ್ಲಿ ಹಲವರಲ್ಲಿ ಒಬ್ಬನಾಗಿ ಬೆಳೆಯಬೇಕಾಗುತ್ತಿತ್ತೋ, ಏನೋ ಅಂತನ್ನಿಸಿದಾಗ, ಗೋಪಾಲನ ಋಣಭಾರದಿಂದ ತಾನು ಕುಗ್ಗಿ ಹೋಗಿದ್ದೇನೆ ಎಂದೆನಿಸುತ್ತಿತ್ತು.

ವಾರಕ್ಕೊಮ್ಮೆ ನಡೆಸುತ್ತಿದ್ದ ಭಜನಾ ಕಾರ್ಯಕ್ರಮದಲ್ಲಿ ಆ ಮಕ್ಕಳು ಕಡ್ಡಾಯವಾಗಿ ಭಾಗವಹಿಸಬೇಕಾಗುತ್ತಿತ್ತು. ಸಾಮೂಹಿಕ ಭಜನೆ ಮೈ ನವಿರೇಳಿಸುವಂತೆ ಇದ್ದರೂ, ಆ ಮಕ್ಕಳಲ್ಲಿ ಕೆಲವರಿಗೆ, ಯಾವ ಉತ್ಸಾಹವೂ ಇರಲಿಲ್ಲ. ಕಾಟಾಚಾರಕ್ಕೆ ಕುಳಿತಂತೆ ಕಂಡುಬರುತ್ತಿತ್ತು. ಭಜನೆ ಮುಗಿದು ಎಂದಿಗೆ ತಮ್ಮ ಕೈಗೆ ಪ್ರಸಾದ ಸಿಗುವುದೋ ಎಂದು ಕಾದಿರುವಂತೆ ತೋರುತ್ತಿತ್ತು.

ಆಶ್ರಮದ ಶಿಸ್ತನ್ನು ಕಾಪಾಡಿಕೊಂಡು ಬರುವುದರಲ್ಲಿ ಈ ಭಜನೆಯ ಕಾರ್ಯಕ್ರಮ ಅತ್ಯಂತ ಮುಖ್ಯವಾದದ್ದು. ಇಲ್ಲದಿದ್ದರೆ ಒಗ್ಗಟ್ಟು ಖಂಡಿತಾ ಇರುವುದಿಲ್ಲ. ಇಂತಹ ಕಾರ್ಯಕ್ರಮವನ್ನು ವಾರದಲ್ಲಿ ಎರಡು ಸಲ ಮಾಡುವುದು ಸರಿ ಎನಿಸಿತ್ತು ಅವನಿಗೆ. ಅದೇ ವಿಷಯವನ್ನು ಭೈರಪ್ಪನೊಡನೆ

ನುಡಿದಾಗ, ಆತ ಹೇಳಿದ್ದ.

ನೀವು ಹೇಳುವುದು ಸರಿ, ಎಲ್ಲರನ್ನು ಒಂದಾಗಿಸುವುದರಲ್ಲಿ ಭಜನೆಯ ಕಾರ್ಯಕ್ರಮದ ಪಾತ್ರ ಹೆಚ್ಚಿನದು. ಆದರೆ ವಾರದಲ್ಲಿ ಇರುವುದು ಏಳೇ ದಿನ. ಮಕ್ಕಳ ಪಾಠ ಪ್ರವಚನವೂ ಇದೆಯಲ್ಲವೆ? ಹಾಗೇ ಸ್ವಾಮೀಜಿ ಸಹ ಏಳು ದಿನದಲ್ಲಿ ಏಳು ತರಹ ತಮ್ಮ ಕೆಲಸವನ್ನು ಗೊತ್ತು ಮಾಡಿಕೊಂಡಿರುತ್ತಾರೆ. ಇದು ದಿನಚರಿಯ ಪಟ್ಟಿ. ಇದನ್ನು ಬದಲಾಯಿಸಲು ಸಾಧ್ಯವಿಲ್ಲ ಅನಂತ ಪೆಚ್ಚಾದ.

"ಆದರೂ ಆ ಹುಡುಗರಿಗೆ ಮನರಂಜನೆ ಸಾಲದು. ಆಶ್ರಮದ ಒಳಗೆ ಆಟವಾಡಿದರೆ ಮಾತ್ರ ಸಾಲದು ಹೊರಗೆ ಹೋಗಿ ಬರಬೇಕು. ವನವಿಹಾರ ಇಂತಹ ಕಾರ್ಯಕ್ರಮವನ್ನು ಹಾಕಿಕೊಂಡರೆ...?"

"ಅದು ಅತೀ ಜವಾಬ್ದಾರಿಯುತ ಕೆಲಸ ಅನಂತ, ಎಲ್ಲ ಹುಡುಗರನ್ನು ಒಟ್ಟಾಗಿ ಸೇರಿಸಿ ತಪ್ಪಿಸಿಕೊಳ್ಳದಂತೆ ನೋಡಿಕೊಂಡು, ವಾಪಸ್ಸು ಕರೆತರಬೇಕು..."

"ಪದೇ ಪದೇ ಬೇಡ. ವರ್ಷದಲ್ಲಿ ಎರಡು ಸಲ ಅದೂ ಪರೀಕ್ಷೆ ಮುಗಿದ ನಂತರ ಆ ಮಕ್ಕಳ ಜತೆ ದೊಡ್ಡವರು ನಾಲ್ಕಾರು ಜನರಂತೂ ಹೋಗಲೇಬೇಕಲ್ಲ..."

"ಸರಿ, ಈ ವಿಷಯವನ್ನು ಸ್ವಾಮೀಜಿಯ ಮುಂದಿಡೋಣ. ಅವರು ಏನಂತಾರೋ? ಅವರು ಒಪ್ಪದಿದ್ದರೆ ನೀನು ಬೇಸರಿಸಕೂಡದು"

"ಇಲ್ಲಿಗೆ ಬಂದ ಮೇಲೆ, ಬೇಸರ ಕೋಪ, ತಾಪ, ದ್ವೇಷ ಅಸೂಯೆ ಎಲ್ಲವನ್ನೂ ಬಿಡಬೇಕಲ್ಲವೇ..."

"ಬಿಡಲೇಬೇಕು, ಬಿಡದಿದ್ದರೂ, ತಾನಾಗಿಯೇ ಬಿಡಿಸುತ್ತದೆ. ಅಂತಹ ಪುಣ್ಯಭೂಮಿ ಇದು. ಅಂತಹ ಪವಿತ್ರ ಸ್ಥಳ ಇದು" ಎಂದು ಭೈರಪ್ಪ ತನ್ಮಯತೆ ಯಿಂದ ನುಡಿದಾಗ ಅನಂತ ಅವನನ್ನೇ ನೋಡಿದ.

"ಭೈರಪ್ನೋರೆ ನಿಮಗೆಷ್ಟು ವರ್ಷ?"

"ನನಗೆ ಸರಿಯಾಗಿ ಗೊತ್ತಿಲ್ಲ, ನೀನು ವಿದ್ಯಾವಂತ, ನೀನೇ ಊಹಿಸಿ ಹೇಳು ನೋಡೋಣ"

"ನಿಮ್ಮ ಮೀಸೆ ನೋಡಿದರೆ ತುಂಬಾ ವಯಸ್ಸಾಗಿದೆ ಅಂತ ಅನ್ನಿಸುತ್ತೆ. ಅದೇ ನಿಮ್ಮ ತಲೆಕೂದಲನ್ನು ನೋಡಿದರೆ ನಿಮಗೆ ಹೆಚ್ಚಿಗೆ ವಯಸ್ಸಾಗಿಲ್ಲ ಅಂತ ಅನ್ನಿಸುತ್ತೆ"

"ಚಿಕ್ಕವರಾಗಿದ್ದಾಗ ತಲೆಗೆ ಹರಳೆಣ್ಣೆ ತಟ್ಟುತ್ತಿದ್ದರಲ್ಲ ಅದರ ಮಹಿಮೆ ಅದು. ಮೀಸೆ ದೊಡ್ಡವರಾದ ಮೇಲೆ ಬೆಳೆದದ್ದು ಅಲ್ವಾ!" ಭೈರಪ್ಪ ಅನಂತನ ಕಡೆ ನೋಡಿ ನಕ್ಕ.

"ನಿಮ್ಮ ತಂದೆ ತಾಯಿ ನಿಮ್ಮ ತಲೆ ಕೂದಲಿಗೆ ಮಾಡಿದಷ್ಟು ಆರೈಕೇನ ನೀವು ನಿಮ್ಮ ಮೀಸೆಗೆ ಮಾಡಿಲ್ಲ ಅಂತಾಯ್ತು"

"ಇರಬಹುದು, ನನಗೆ ಒಂದು ಅನುಮಾನ ಮೀಸೆ ಕೂದಲು ಬೇಗ ಏಕೆ ಬೆಳ್ಳಗಾಗುತ್ತೆ!"

"ಕಾರಣ ನನಗೂ ಗೊತ್ತಿಲ್ಲ ಡಾಕ್ಟ್ರನ್ನ ಕೇಳಿ"

"ಮೀಸೆ ಮಾತನ್ನೆತ್ತಿದರೆ ಅವರು ಓಡಿ ಹೋಗ್ತಾರೆ"

"ಅವರ ಭಾರಿ ಮೀಸೆಯ ಮೇಲೆ ನಿಮ್ಮ ದೃಷ್ಟಿ ಬಿದ್ದೀತೆಂದು ಅವರಿಗೆ ಭಯ" ಎನ್ನುತ್ತಾ ಅನಂತ ನಕ್ಕಾಗ, ಭೈರಪ್ಪ ಏನೋ ನೆನಪಾದವನಂತೆ.

"ನಾಳೆ ಭಾನುವಾರ ಅಲ್ವಾ? ಹಜಾಮ ಬರ್ತಾನೆ. ಯಾರ್ಯಾರು ಕಟಿಂಗ್‌ಗೆ ಸಿದ್ಧವಾಗಿದಾರೋ ಕೇಳಬೇಕು, ಬಿಸಿ ನೀರು ಕಾಯಿಸಿಡಬೇಕು... ಮುಂಚಿತವಾಗಿ, ಕೆಲಸದವರಿಗೆ ತಿಳಿಸಬೇಕು"

"ಈ ಎಲ್ಲಾ ಕೆಲಸವನ್ನು ನೀವೇ ಮಾಡಬೇಕಾ?"

"ಯಾರಾದ್ರೂ ಒಬ್ಬರು ಮಾಡಬೇಕು ತಾನೇ... ನನಗೆ ಬೇರೆ ಇನ್ನೇನು ಕೆಲಸವಿದೆ! ನಾನು ಸ್ವಲ್ಪ ಬಂದೆ" ಎನ್ನುತ್ತಾ ಅಲ್ಲಿಂದ ನಡೆದ. ಅನಂತ ತನ್ನ ತಲೆಯ ಮೇಲೆ ಕೈಯಾಡಿಸಿಕೊಂಡ. ತಾನು ಈಗಿನ ಕಾಲದ ಫ್ಯಾಷನ್ನಿನಂತೆ ಹೇರ್‌ಕಟ್ ಮಾಡಿಸಿಕೊಂಡಿದ್ದ. ಈಗ ಇಲ್ಲಿಯ ವಾತಾವರಣಕ್ಕೆ ಸರಿ ಹೋಗುತ್ತೋ ಇಲ್ಲವೋ... ಆದರೆ ಯಾರೂ ಏನೂ ಹೇಳಿರಲಿಲ್ಲ. ನಾಳೆ ಹಜಾಮ ಬಂದಾಗ ತಾನೂ ಹೋಗಿ ಕೂತರಾಯ್ತು ಅಂತ ಅಂದುಕೊಂಡ. ಆಗ, ತನ್ನ ಉಡುಪುಗಳನ್ನು ಸಹ ಬದಲಾಯಿಸಬೇಕು. ಇಲ್ಲಿಯ ಪರಿಸರಕ್ಕೆ ಪಾಯಿಜಾಮ, ಜುಬ್ಬಾ ಒಪ್ಪುತ್ತದೆ. ತನ್ನ ಹತ್ತಿರವಿರುವುದು ಬರೀ ಪ್ಯಾಂಟು, ಷರಟು, ಲುಂಗಿ, ಇದಕ್ಕೂ ಭೈರಪ್ಪನ ಸಲಹೆಯನ್ನೇ ಕೇಳಬೇಕಾಗುತ್ತದೆ. ಭೈರಪ್ಪನಿಗೆ ಒಂದು ಅಡ್ಡ ಪಂಚೆ, ತುಂಬು ತೋಳಿನ ಷರಟು, ಮೇಲೊಂದು ಟವೆಲ್ಲು... ತಾನು ಹಾಗಿರಲು ಸಾಧ್ಯವೆ? ಈಗ ತನ್ನ ಹತ್ತಿರ ಹಣವೂ ಇಲ್ಲ ಪುರುಷೋತ್ತಮನನ್ನು ಮತ್ತೆ ಭೇಟಿಯಾಗಿಯೇ ಇಲ್ಲ. ಯಾಕೋ ಅವರೂ ಬರಲಿಲ್ಲ. ಅದೇ ಚಿಂತೆಯಲ್ಲಿದ್ದವನನ್ನು ಭೈರಪ್ಪನೇ ಬಂದು ಎಚ್ಚರಿಸಿದ.

"ನಿದ್ದೆ ಬಂತಾ?"

"ಇಷ್ಟು ಬೇಗ ಇದ್ದೆ ಎಲ್ಲಿ ಬರುತ್ತೆ"

"ಏನಪ್ಪಾ ಚಿಂತೆ ಸತಾಯಿಸ್ತಾ ಇದೆ.... ನಿನ್ನನ್ನ?"

"ದಿಢೀರನೇ ಆಶ್ರಮಕ್ಕೆ ಬಂದುಬಿಟ್ಟೆ. ಯಾರಿಗೂ ಹೇಳಲೂ ಇಲ್ಲ... ನನ್ನ ತಲೆ ಕೂದಲು ಬೆಳೆದುಬಿಟ್ಟಿದೆ. ಪ್ಯಾಂಟು ಷರಟು ಬಿಟ್ರೆ ಬೇರೆ ಬಟ್ಟೆ ಇಲ್ಲ, ನನಗೆ ಮುಜುಗರವಾಗುತ್ತಿದೆ"

"ಅದನ್ನೆಲ್ಲ ನಿಧಾನವಾಗಿ ಬದಲಾಯಿಸಿಕೊಂಡರಾಯಿತು. ಅಷ್ಟರಲ್ಲಿ ಮನಸ್ಸೂ ಇಲ್ಲಿಯ ವಾತಾವರಣಕ್ಕೆ ಹೊಂದಿಕೊಂಡಿರುತ್ತೆ. ನಾಳೆ ಹೇಗೂ ಹಜಾಮ ಬರ್ತಾನೆ ನೀನೂ ಕೂತ್ಕೋ" ಭೈರಪ್ಪ ನಕ್ಕಾಗ ಅನಂತ ಮುಸುಕೆಳೆದು ಮಲಗಿದ.

ಹಾಸ್ಟಲ್ಲಿನ ಜೀವನ ಒಂದು ತರಹ, ಈಗ ಇಲ್ಲಿಯ ಜೀವನ ಇನ್ನೊಂದು ತರಹ... ಮಧ್ಯದಲ್ಲಿ ಆ ಅಹಿತಕರ ಘಟನೆ ನಡೆಯದೇ ಇದ್ದಿದ್ದರೆ... ಇದ್ದಕ್ಕಿದ್ದಂತೆ ಅವನಿಗೆ ಸುಗುಣಳ ಮುಖ ನೆನಪಿಗೆ ಬಂತು. ಸುಂದರವಾದ ಮುಖವಾಡವನ್ನು ಹೊತ್ತ ಮಾಯಾವಿನಿ... ದಿಢೀರನೆ ನನ್ನ ಬಾಳಿನ ಈ ಬದಲಾವಣೆಗಳಿಗೆ ಅವಳೇ ಕಾರಣ. ನಾನು ಅವಳಿಂದ ಡೈವೋರ್ಸ್ ತೆಗೆದು ಕೊಂಡು ಮತ್ತೆ ಮರುಮದುವೆಯಾದರೆ ಹೇಗಿರುತ್ತೆ?" ಎಂದು ಯೋಚಿಸಿ ಕೊಂಡಾಗ ಮನಸ್ಸು ಕಹಿಯಿಂದ ತುಂಬಿತ್ತು.

"ತನ್ನ ಪಾಡಿಗೆ ತಾನು ಓದಿಕೊಂಡಿದ್ದವನಿಗೆ, ಮದುವೆಯ ಆಸೆ ಹೊತ್ತಿಸಿ, ನನ್ನ ಆಸೆಗಳನ್ನೇ ಉರಿಸಿ ಬೂದಿ ಮಾಡಿಬಿಟ್ಟರು. ಮತ್ತೆ ಮದುವೆ ಯಾದರೂ, ಈ ಘಟನೆಯನ್ನೂ ತಾನು ಮರೆಯಲು ಸಾಧ್ಯವೇ... ತನಗೆ ಕೆಲಸವಿಲ್ಲ, ಸಂಬಳವಿಲ್ಲ, ಹೇಳಿಕೊಳ್ಳುವ ಬಂಧುಬಳಗವಿಲ್ಲ ಆಸ್ತಿಪಾಸ್ತಿಗಳಿಲ್ಲ. ತಾನು ದುಡುಕಿ ಇಲ್ಲಿಗಂತೂ ಬಂದಿಲ್ಲ. ಯೋಚಿಸಿಯೇ ತೀರ್ಮಾನ ತೆಗೆದು ಕೊಂಡಿದ್ದೇನೆ. ಕಾಯಾ, ವಾಚಾ, ಮನಸಾ ಈ ಆಶ್ರಮದ ವಾಸಿಗಳಲ್ಲಿ ಒಬ್ಬನಾಗಬೇಕು. ನನ್ನ ಕೈಲಾದ ಸಮಾಜಸೇವೆ ಮಾಡಬೇಕು. ಅದೇ ನನ್ನ ಬಾಳಿಗೆ ಗುರಿ.... ಅಂತ ಅಂದುಕೊಂಡರೂ, ತನಗೂ ತನ್ನವರು ಅಂತ ಸ್ವಂತದವರು ಇದ್ದಿದ್ದರೆ ತಾನು ಇಲ್ಲಿಗೆ ಬರುವ ಅವಶ್ಯಕತೆಯೇ ಒದಗುತ್ತಿರಲಿಲ್ಲ. ಯಾರೂ ಇಲ್ಲದ ನನ್ನಂತಹ ಅನಾಥರು ಹುಟ್ಟಲೇಬಾರದು. ಹುಟ್ಟಿದರೂ ಗೋಪಾಲನಂತಹ ವಂಚಕನ ಮನೆಯಲ್ಲಿ ಬೆಳೆಯಬಾರದು. ಛೆ... ಎಂತಹ ಮೋಸ? ಎಂತಹ ವಂಚನೆ! ತನ್ನ ಕಾಮುತನಕ್ಕೆ ಬೇಕಾದವಳನ್ನು, ನನ್ನ ಕತ್ತಿಗೆ ಕಟ್ಟಿ... ಪ್ರೀತಿ ಎಂದರೇನು? ಹೆಂಗಸು ಎಂದರೇನು? ದಾಂಪತ್ಯ ಎಂದರೇನು ಎಂದು ಅರ್ಥವಾಗುವ ಮೊದಲೇ ಎಲ್ಲವನ್ನು ನಾಶಗೊಳಿಸಿದ ಪಾಪಿ ಅವನು... ನನ್ನ ಆಸೆ, ಕಾಮನೆಗಳಿಗೆ ಕಲ್ಲು ಹಾಕಿದವನು ಅವನು... ಇಲ್ಲದಿದ್ದರೆ ತಾನು ಎಲ್ಲರಂತೆ ಹಾಯಾಗಿರಬಹುದಾಗಿತ್ತು ಅಂತ ಅಂದುಕೊಂಡು ವಿಲಿವಿಲಿ ಒದ್ದಾಡಿದ.

ತನಗೆ ಇಲ್ಲಿ ಏನು ಕಮ್ಮಿಯಾಗಿದೆ? ಇಲ್ಲಿಯೂ ಹಾಯಾಗಿದೀನಲ್ಲ. ಮಂಚ, ಮೆತ್ತನೆಯ ಹಾಸಿಗೆ... ಆದರೆ ನನ್ನ ಬಳಿ ಬೇರೆ ಯಾರೂ ಇಲ್ಲ. ಸುಗುಣ ನನ್ನ ಪತ್ನಿಯಾಗಿದ್ದರೂ, ನಾನು ಅವಳೊಡನೆ ಎಂದೂ ಮಲಗಿರಲಿಲ್ಲ...

ಅಂತ ನೆನಪಿಸಿಕೊಂಡಾಗ ಮೈಯೆಲ್ಲಾ ಮುಳ್ಳು ಚುಚ್ಚಿದ ಅನುಭವ. ಸುಂದರ ಗುಲಾಬಿ ಹೂವಿನಂತಿದ್ದ ಅವಳು ನನ್ನ ಪಾಲಿಗೆ ಮುಳ್ಳಾದಳು. ನನ್ನಷ್ಟೇ ವಯಸ್ಸಿನವಳು, ಆ ಮುದುಕನೊಡನೆ ಹೇಗೆ ಮಲಗಿರಬಹುದು, ಛೀ... ನೆನಸಿಕೊಂಡರೆ ಅಸಹ್ಯವಾಗುತ್ತದೆ. ಪ್ರಪಂಚದ ಕಣ್ಣಿಗೆ ಅವಳು ನನ್ನ ಪತ್ನಿ, ಆದರೆ ಅವಳು ಆ ಮುದುಕನ ಸೂಳೆ... ಸೂಳೆ ಎಂದು ಕಿರುಚಲಿದ್ದವನು, ತಟ್ಟನೇ ಸುಮ್ಮನಾದ. ತಾನು ಇರುವುದು ಒಂದು ಸುಂದರವಾದ ಪ್ರಶಾಂತವಾದ ಆಶ್ರಮ, ಯಾವುದೋ ಕೊಳೆಗೇರಿಯಲ್ಲ ಇಲ್ಲಿ ಅಂತಹುದನ್ನು ನೆನಸಿಕೊಳ್ಳು ವುದೂ ಮಹಾಪಾಪ ಎಂದುಕೊಂಡು ಎದ್ದು ಬಂದು ಕಿಟಕಿಯ ಬಳಿನಿಂತ. ಹೊರಗಿನ ತಂಗಾಳಿಗೆ ಮುಖ ಒಡ್ಡಿದ. ಹಾಯೆನ್ನಿಸಿತು ಹಾಯಾಗಿ ಗೊರಕೆ ಹೊಡೆಯುತ್ತಾ ಮಲಗಿದ್ದ ಭೈರಪ್ಪನ ಕಡೆ ನೋಡಿದ. ಒಂದು ಗಳಿಗೆ ಅಸೂಯೆ ಮೂಡಿತು. ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ಸರ ಯಾವುದೂ ಒಳ್ಳೆಯದಲ್ಲ. ಒಂದೊಂದಾಗಿ ಮನಸ್ಸಿನಿಂದ ಎಲ್ಲವನ್ನೂ ತೆಗೆದು ಹಾಕಬೇಕು. ಭೈರಪ್ಪನಂತೆ ನಿಷ್ಕಲ್ಮಶ ಮನಸ್ಸಿನವನಾಗಬೇಕು. ಒಬ್ಬ ಆದರ್ಶ ವ್ಯಕ್ತಿಯಾಗಬೇಕು ಎಲ್ಲರಿಗೂ ಮಾದರಿಯಾಗಬೇಕು.

ಅನಂತ ಅನಾಥನಲ್ಲ; ಅವನಿಗೆ ಜಗನ್ನಾಥನ ರಕ್ಷಣೆ ಇದೆ. ಈ ಆಶ್ರಮವಾಸಿಗಳ ಸಹಕಾರವಿದೆ. ಇವರೇ ನನ್ನ ಬಂಧುಬಳಗ ಈ ಗಿಡಮರಗಳೇ ನನ್ನ ಆಸ್ತಿ... ಈ ದನಕರುಗಳೇ ನನ್ನ ಸಂಪತ್ತು ಈ ಪ್ರಪಂಚವನ್ನು ಬಿಟ್ಟು ತಾನು ಬೇರೆ ಏನನ್ನು ಯೋಚಿಸಬಾರದು... 'ಹೇ ಜಗನ್ನಾಥ ನನ್ನನ್ನು ಅನುಗ್ರಹಿಸು' ಎಂದು ಮನದಲ್ಲೇ ಬೇಡಿ, ಮತ್ತೆ ಮಲಗಿದ.

ಪುರುಷೋತ್ತಮ ಬಂದು ಎದುರು ನಿಂತಾಗ ಅನಂತ ಸಂಭ್ರಮಾಶ್ಚರ್ಯಗಳಿಂದ ಎದ್ದು ನಿಂತು ಕೈಯಲ್ಲಿದ್ದ ಪುಸ್ತಕವನ್ನು ಬದಿಗಿಟ್ಟ.

"ಹೇಗಿದೀಯಾ ಅನಂತ...?"

"ಚೆನ್ನಾಗಿದೀನಿ ನೀವು...? ಪ್ರಶಾಂತ ಬರಲಿಲ್ವಾ!"

"ನಿನ್ನ ಬಳಿ ಮಾತನಾಡುಕ್ಕೆ ಅಂತ ಬಂದೆ... ಎನ್ನುತ್ತಾ ಅಲ್ಲಿದ್ದ ಕುರ್ಚಿಯ ಮೇಲೆ ಕೂತ. ನಿನಗೆ ಇಲ್ಲಿ ಒಗ್ಗಿದೆಯಾ?"

"ಹೂಂ ಯಾಕೆ!"

"ಈಗಲೂ ನಿನಗೆ ಬೇಕೆನಿಸಿದರೆ, ಇಲ್ಲಿಂದ ಹೊರಟುಬಾ...ನಾನು ನಿನಗೆ ಕೆಲಸ ಕೊಡಿಸ್ತೀನಿ"

"ಇಲ್ಲಿಂದ ಎಲ್ಲಿಗೂ ಬರುವ ಆಸೆ ನನಗಿಲ್ಲ ಸಾರ್..."

"ನಿನ್ನ ತೀರ್ಮಾನ ಇದೇ ಆದರೆ ನಾನು ಏನೂ ಹೇಳುಲ್ಲ. ಅಂದ ಹಾಗೇ ನನಗೆ ಬೇರೆ ಊರಿಗೆ ವರ್ಗವಾಗಿದೆ ಸದ್ಯದಲ್ಲೇ ಷಿಫ್ಟ್ ಮಾಡ್ತಿದೀನಿ,

ನನಗೆ ಆದಾಗ ಬರ್ತೀನಿ"

"ಹಾಗೇ ಆಗಲಿ" ಎಂದ ಅನಂತ ಏನು ಹೇಳಬೇಕೆಂದು ತೋಚದೆ,

ಅನಂತನೊಡನೆ ಊಟ ಮುಗಿಸಿ, ಸ್ವಾಮೀಜಿಯುವರೊಡನೆ ಮಾತನಾಡಿ ಪುರುಷೋತ್ತಮ ಹೊರಟುಹೋದ. ಎಷ್ಟೋ ಹೊತ್ತಿನ ನಂತರ ಸ್ವಾಮೀಜಿ ಅನಂತನಿಗೆ ಹೇಳಿ ಕಳಿಸಿದರು. ಅವರು ಏನು ಕೇಳಿ ಬಿಡುವರೋ ಎಂಬ ಆತಂಕ ಅವನ ಮುಖದ ಮೇಲೆ ಕಂಡಿತ್ತು. ಸ್ವಾಮೀಜಿ ಮುಗುಳ್ನಕ್ಕರು.

"ನಾಡಿದ್ದು, ಪಕ್ಕದ ಊರಿನ ಅನಾಥಾಶ್ರಮವೊಂದರಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿವೆ. ನನ್ನ ಜತೆಯಲ್ಲಿ ನೀನು ಬರಬೇಕು..."

ತಾನೇಕೆ ಹೋಗಬೇಕು ಎಂದು ತಿಳಿಯದಿದ್ದರೂ, ಪ್ರಶ್ನಿಸಲಾರ.

"ಅಲ್ಲಿಯ ಅನಾಥಾಶ್ರಮದ ಮಕ್ಕಳನ್ನು ಕುರಿತು ನಾಲ್ಕು ಮಾತುಗಳನ್ನಾಡಬೇಕು. ಅದನ್ನು ಬರೆದು ಸಿದ್ಧ ಮಾಡಿಕೊಂಡು ಮಾತನಾಡುವುದು ನಿನ್ನ ಕೆಲಸ..."

"ನಾನು! ನನ್ನಿಂದ ಸಾಧ್ಯವೆ?"

"ಸಾಧ್ಯ... ಅಸಾಧ್ಯ ನಿನಗೆ ಹೇಗೆ ಗೊತ್ತು! ಇಲ್ಲಿಯ ಮಕ್ಕಳನ್ನು ನೋಡಿದೀಯ... ಮಾತನಾಡಿಸಿದೀಯ... ಅವರ ಅನಿಸಿಕೆಗಳನ್ನು ಅರಿತಿದ್ದೀಯ. ಆ ಮಕ್ಕಳಿಗೆ ಬೇಕಾದುದೇನು? ಅವರು ಮುಂದುಬರಲು ಸಂಸ್ಥೆಗಳು ಆಶ್ರಮಗಳು ಮಾಡಬೇಕಾದುದು ಏನು? ಎಲ್ಲಾ ಕುರಿತು ಸಂಕ್ಷಿಪ್ತವಾಗಿ ಬರೆದಿಟ್ಟುಕೊಂಡು ಅದನ್ನು ಓದಿದರೂ ಸಾಕು" ಅನಂತನ ಆತಂಕ ಕಂಡು ಮುಗುಳ್ನಕ್ಕರು.

"ನೀನು ಬರೆದುದನ್ನು ಭೈರಪ್ಪನೆದುರು ಓದಿ ಅಭ್ಯಾಸ ಮಾಡಿಕೋ ಪರವಾಗಿಲ್ಲ" ಅನಂತ ಹಾಗೇ ನಿಂತಿದ್ದ.

"ಅಲ್ಲಿಂದ ಬಂದ ಮೇಲೆ ಮುಂದೆ ನಿನ್ನ ದಿನಚರಿ ಏನು ಎನ್ನುವುದನ್ನು ತಿಳಿಸುತ್ತೇನೆ. ಈಗ ನೀನಿನ್ನು ಹೋಗಬಹುದು" ಅನಂತ ಹೊರಬಂದ.

"ಸ್ವಾಮೀಜಿಯೊಡನೆ ನಡೆದ ಮಾತುಕತೆಗಳನ್ನು ಭೈರಪ್ಪನಿಗೆ ತಿಳಿಸಿ, ಇದೆಲ್ಲ ನನಗೆ ಹೊಸದು, ನನಗೆ ಗಾಬರಿಯಾಗ್ತಿದೆ, ನಾನೇನು ಮಾಡಲಿ!" ಎಂದ. "ಏಯ್... ಗಾಬರಿ ಏಕೆ ನಿಮಗೆ ಅನಿಸಿದ್ದನ್ನು ಹೇಳಿದರಾಯ್ತು." ಭೈರಪ್ಪ ಸುಲಭವಾಗಿ ಹೇಳಿದ.

ಅನಂತ ಸಾವಕಾಶವಾಗಿ ತನಗೆ ಅನ್ನಿಸಿದ್ದನ್ನು ಬರೆದು ಒಂದು ಕರಡು ಪ್ರತಿಯನ್ನು ತಯಾರು ಮಾಡಿದ. ಭೈರಪ್ಪನನ್ನು ಕೂರಿಸಿಕೊಂಡು ಓದಿದ.

"ಈ ಮಕ್ಕಳೂ ನಮ್ಮ ಮಕ್ಕಳಂತೆಯೇ...ಎಲ್ಲಾ ಮಕ್ಕಳಂತೆ ಬೆಳೆಯುವ

ಹಕ್ಕು ಇವರಿಗೂ ಇದೆ. ಹುಟ್ಟಿಸಿದ ದೇವರು ಹುಲ್ಲು ಮೇಯಿಸುವುದಿಲ್ಲ ಎನ್ನುವಂತೆ, ಇವರನ್ನು ದೇವರು ರಕ್ಷಿಸುತ್ತಾನೆ, ಬದುಕುವ ದಾರಿಯನ್ನು ತೋರಿಸಿಕೊಡುತ್ತಾನೆ ಆ ಮಕ್ಕಳಿಗೂ ಪ್ರೀತಿ ವಿಶ್ವಾಸಗಳ ಅಗತ್ಯವಿದೆ. ಅದನ್ನು ಸಮಾಜ ನೀಡಬೇಕು. ಸಂಘ, ಸಂಸ್ಥೆ ಆಶ್ರಮಗಳು ಮುಂದೆ ಬಂದು ಅಂತಹ ಮಕ್ಕಳನ್ನು ಉದ್ಧಾರ ಮಾಡಬೇಕು. ಆ ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಮುಂದುವರೆಯಲು ಸಹಾಯ ಮಾಡಬೇಕು ಶ್ರೀಮಂತರು ಹೇರಳವಾಗಿ ಧನ ಸಹಾಯ ಮಾಡಬೇಕು. ವಿದ್ಯಾವಂತರು ಉಚಿತ ಶಿಕ್ಷಣ ನೀಡಲು ಮುಂದೆ ಬರಬೇಕು "ಇಷ್ಟು ಸಾಕು ಅಲ್ಲವೆ? ಭೈರಪ್ಪಾ...?"

"ಯಾರಾದರೂ ಮಕ್ಕಳಿಲ್ಲದವರು, ಮಕ್ಕಳನ್ನು ದತ್ತು ತೆಗೆದುಕೊಂಡು, ಆ ಮಗುವನ್ನು ಸ್ವಂತ ಮಗುವಿನಂತೆ ಬೆಳೆಸಿ ಮುಂದೆ ತರಲು ಸಹಾಯ ಮಾಡಬೇಕು... ಹಾಗಂತಾನೂ ಸೇರಿಸಿ ಬರೆಯಪ್ಪಾ..." ಭೈರಪ್ಪ ತನ್ನ ಮಾತನ್ನು ಸೇರಿಸಿದ.

ಅನಂತ ಗಂಭೀರನಾದ.

"ಮಕ್ಕಳಿಲ್ಲದವರು ದತ್ತು ತೆಗೆದುಕೊಂಡರೂ ಆ ಮಕ್ಕಳು ಉದ್ಧಾರ ವಾಗುವುದಿಲ್ಲ ಭೈರಪ್ಪಾ... ಹೊರಗಿನಿಂದ ಉದಾರವಾಗಿ ಸಹಾಯ ಮಾಡಿದರೆ ಸಾಕು..."

"ಅದ್ಯಾಕೆ ಹಾಗಂತೀಯಾ! ಅನಾಥಾಶ್ರಮದ ಮಕ್ಕಳನ್ನು ಎಷ್ಟೋ ಜನ ದತ್ತು ತಗೊಂಡಿದಾರೆ... ಸಾಕಿದಾರೆ...ಬೆಳೆಸಿದಾರೆ..."

"ಅವರಿಗೆ ಸುಲಭವಾಗಿ ದ್ರೋಹವನ್ನು ಮಾಡ್ತಾರೆ..." ಕಟುವಾಗಿ ನುಡಿದ.

"ದ್ರೋಹ? ಹಾಗ್ಯಾಕೆ ಮಾಡ್ತಾರೆ? ಕೆಲವರು ಕೆಲವು ಸಲ, ಆಮೇಲೆ ಅವರಿಗೇ ಮಕ್ಕಳಾದರೆ... ಈ ಮಗುವನ್ನು ಕಡೆಗಣಿಸುತ್ತಾರೆ ಅಂತ ಕೇಳಿದ್ದೆ..."

"ಹೌದು, ಹಾಗೆ ಮಾಡೇ ಮಾಡ್ತಾರೆ. ಏನೇ ಆದರೂ ಅನಾಥ ಮಕ್ಕಳನ್ನು ಮಾತ್ರ ದತ್ತು ಕೊಡಬಾರದು..." ಎಂದು ಅನಂತ ಉದ್ವೇಗದಿಂದ ನುಡಿದಾಗ ಭೈರಪ್ಪ ಬೆಪ್ಪಾದ.

"ಭೈರಪ್ಪಾ.... ನನ್ನಿಂದ ಈ ಭಾಷಣಗಳನ್ನು ಓದುಕ್ಕಾಗೊಲ್ಲ... ನಾನೇ ಯಾಕೆ ಓದಬೇಕು? ಬೇರೆ ಯಾರೂ ಇಲ್ವಾ!"

"ಅವರು ನಿನ್ನನ್ನೇ ಆಯ್ಕೆ ಮಾಡಿಕೊಂಡಿರುವುದಕ್ಕೆ ಏನೋ ಕಾರಣವಿರುತ್ತೆ. ಅದನ್ನು ನಾವು ಕೇಳುಕ್ಕಾಗುತ್ತಾ!"

"ನಾನೀಗ ಏನು ಮಾಡಲಿ!"

"ನಿನಗೆ ಯಾಕೆ ಈ ಉದ್ವೇಗ?"

ಅವನು ಹೇಳಲಾರ... ಆದರೆ ಹೇಳದಿದ್ದರೆ ಭೈರಪ್ಪನಿಗೆ ತಿಳಿಯುವುದಾದರೂ ಹೇಗೆ? ಅಷ್ಟಾದರೂ ತನಗಾದ ದ್ರೋಹವನ್ನು ಹೇಳಿಕೊಳ್ಳಲಿಲ್ಲ. ಒಂದು ಗಳಿಗೆ ಸುಮ್ಮನಾದ ಭೈರಪ್ಪ ನಂತರ ಕೇಳಿದ.

"ಈ ವಿಷಯ ಸ್ವಾಮೀಜಿಗೆ ಗೊತ್ತಿದೆ. ಆದರೂ ನಿನ್ನನ್ನೇ ಆಯ್ಕೆ ಮಾಡಿದಾರೆ. ನಿನಗೆ ಅನ್ನಿಸಿದ್ದನ್ನು ನಿರ್ಭಯವಾಗಿ ಹೇಳು. ತೊಂದರೆ ಇಲ್ವ" ಆದರೂ ಅನಂತನಿಗೆ ಸಮಾಧಾನವಾಗಿರಲಿಲ್ಲ.

ವ್ಯಾನಿನಲ್ಲಿ ಸ್ವಾಮೀಜಿ ಕುಳಿತ ನಂತರ ಉಳಿದವರು ಕೂತರು. ಅನಂತನಲ್ಲದೇ ಇನ್ನೊಂದಿಬ್ಬರು ಬ್ರಹ್ಮಚಾರಿಗಳಿದ್ದರು. ಭೈರಪ್ಪನೂ ಹೊರಟಾಗ ಅನಂತನಿಗೆ ಹಿತವೆನಿಸಿತ್ತು. ಸುಮಾರು ಮುಕ್ಕಾಲು ಗಂಟೆ ಪ್ರಯಾಣ ಮಾಡಿದ ನಂತರ ಅವರು ಆ ಊರನ್ನು ತಲುಪಿದರು. ಇವರುಗಳಿಗಾಗಿ ಕಾದಿದ್ದ ಆ ಆಶ್ರಮದವರು, ಆದರದಿಂದ ಬರಮಾಡಿಕೊಂಡು ಉಪಚರಿಸಿದರು. ನಂತರ ಕಾರ್ಯಕ್ರಮ ಪ್ರಾರಂಭವಾಯಿತು, ಪ್ರಾರ್ಥನಾ ಗೀತೆಯೊಂದಿಗೆ...ಆಶ್ರಮದ ಸ್ಥಾಪನೆ, ಉದ್ದೇಶ, ಸಾಧನೆ, ಕುರಿತು ಅಲ್ಲಿಯ ಆಡಳಿತದವರು ಮಾತನಾಡಿದರು. ನಂತರ ಅನಂತನ ಭಾಷಣ ಅನಂತ ತಾನು ಬರೆದಿರುವುದನ್ನು ಸಾವಕಾಶವಾಗಿ, ಅಲ್ಲಿ ನೆರೆದಿದ್ದ ಮಕ್ಕಳಿಗೆಲ್ಲ ಅರ್ಥವಾಗುವಂತೆ ಓದಿದ. ಎಲ್ಲರೂ ಚಪ್ಪಾಳೆ ತಟ್ಟಿದಾಗ ಅವನು ಬೆವರು ಒರೆಸಿಕೊಂಡು ತನ್ನ ಸ್ವಸ್ಥಾನದಲ್ಲಿ ಕುಳಿತ.

ನಂತರ ಮಕ್ಕಳಿಂದ ಮನರಂಜನಾ ಕಾರ್ಯಕ್ರಮ, ಅನಂತರ ಆಹ್ವಾನಿತ ಅತಿಥಿಗಳಿಗೆ ಗೌರವ ಸನ್ಮಾನ... ವಂದನಾರ್ಪಣೆ ಮಾಡಿದವರು ಅನಂತನನ್ನು ಹೊಗಳಿದರು.

"ತುಂಬಾ ಚೆನ್ನಾಗಿ ಮಾತನಾಡಿದೆಯಪ್ಪಾ... ನಿನ್ನಂತಹ ಆದರ್ಶ ವ್ಯಕ್ತಿಗಳು ಮುಂದಾಗಿ ಬಂದು ಸಹಕಾರ ನೀಡಿದರೆ, ಅನಾಥ ಮಕ್ಕಳ ಬಾಳು ಬೆಳಗುವುದರಲ್ಲಿ ಅನುಮಾನವೇ ಇಲ್ಲ..."

ಅಲ್ಲಿಯೇ ನಿಂತಿದ್ದ ಭೈರಪ್ಪ ನುಡಿದ.

"ಸರಕಾರ ಕುಟುಂಬ ಯೋಜನೆ ಅದೂ ಇದು ಅಂತ ಸಲಹೆ ನೀಡ್ತಾರೆ. ಆದರೆ ಈ ತರಹ ಅನಾಥ ಮಕ್ಕಳು ಹುಟ್ಟಲು ಕಾರಣವಾದವರನ್ನು ಏಕೆ ಶಿಕ್ಷಿಸುವುದಿಲ್ಲ! ಹಾಗೆ ಮಾಡಿದರೆ ಅನಾಥ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತದೆ"

"ಹಾಗೆ ಸಂಖ್ಯೆ ಕಡಿಮೆಯಾದರೆ, ನಮ್ಮಂತಹವರ ಗತಿ ಏನಪ್ಪಾ!"

"ಯಾಕೆ? ನೀವು ಇದರಿಂದ ಉದ್ಧಾರ ಆಗ್ತಿದೀರಾ!" ಭೈರಪ್ಪ ನೇರವಾಗಿ ಕೇಳಿದಾಗ, ಸ್ವಾಮೀಜಿ ಕೆಮ್ಮಿ ಗಂಟಲನ್ನು ಸರಿಮಾಡಿಕೊಂಡರು. ಎಲ್ಲರಿಗೂ ಮುಜುಗರವಾದಂತಾಗಿತ್ತು. ಎಲ್ಲರೂ ಅಲ್ಲಿಂದ ಹೊರಟರು.

ವ್ಯಾನಿನಲ್ಲಿ ಡ್ರೈವರು ನರಳುತ್ತಾ ಮಲಗಿದ್ದ.

"ಯಾಕೋ ತುಂಬಾ ಹೊಟ್ಟೆ ನೋವು... ಕೂರಕ್ಕೇ ಆಗ್ತಿಲ್ಲ" ಎಂದಿದ್ದ. ಎಲ್ಲರಿಗೂ ಆತಂಕವಾಗಿತ್ತು.

"ಇಲ್ಲೇ ಹತ್ತಿರದಲ್ಲಿ ಡಾಕ್ಟರಿದ್ದರೆ ಹೋಗಿ ಔಷಧಿ ತಂದು ಕುಡಿ. ಆದಷ್ಟು ಬೇಗ ಇಲ್ಲಿಂದ ಹೊರಡೋಣ..." ಆ ಮಾತು ಅನಂತನಿಗೆ ಸರಿ ಎನಿಸಲಿಲ್ಲ.

"ನಾನು ಡ್ರೈವ್ ಮಾಡ್ತೀನಿ, ನೀವು ಹಾಗೇ ಒರಗಿಕೊಂಡು ಕೂತ್ಕೊಳ್ಳಿ ಅಲ್ಲಿ ಹೇಗೂ ಕ್ಲಿನಿಕ್ ಇದೆಯಲ್ಲ, ಎಂದು ಅವನು ಡ್ರೈವರನ ಸೀಟನ್ನು ಏರಿದಾಗ ಎಲ್ಲರಿಗೂ ಸೋಜಿಗ!

"ನಿನಗೆ ನಿಜವಾಗಿಯೂ ಡ್ರೈವಿಂಗ್ ಬರುತ್ತಾ!" ಭೈರಪ್ಪ ಕೇಳಿದ. "ಕಾಪಾಡಬೇಕು... ಜೈ ಜಗನ್ನಾಥಾ" ಎನ್ನುತ್ತಾ ವ್ಯಾನನ್ನು ಸ್ಟಾರ್ಟ್ ಮಾಡಿದ. ಸ್ವಾಮೀಜಿ ಅನಂತನ ಬಗ್ಗೆಯೇ ಯೋಚಿಸುತ್ತಿದ್ದರು.

ಯಾವ ತಕರಾರು ಇಲ್ಲದೇ ಅವರು ಆಶ್ರಮವನ್ನು ವಾಪಸ್ಸು ಬಂದು ಸೇರಿದಾಗ ಮಧ್ಯ ರಾತ್ರಿಯಾಗುತ್ತಾ ಬಂದಿತ್ತು. ಎಲ್ಲರೂ ಇಳಿದ ನಂತರ ಅನಂತ ಡ್ರೈವರನ್ನು ಕ್ಲಿನಿಕ್‌ಗೆ ಕರೆದುಕೊಂಡು ಬಂದ. ಮಲಗಿದ್ದ ಡಾಕ್ಟರು ವ್ಯಾನಿನ ಹಾರನ್ ಕೇಳಿ ಎದ್ದು ಬಂದರು. ಆ ರಾತ್ರಿ ಅನಂತ ಡ್ರೈವರನ ಸಂಗಡ ಅಲ್ಲಿಯೇ ಉಳಿದ. ಡಾಕ್ಟರು ಪರೀಕ್ಷಿಸಿ,

"ಅಪೆಂಡಿಸೈಟಿಸ್... ಆದಷ್ಟು ಬೇಗ ಆಪರೇಷನ್ ಮಾಡಬೇಕು ನಾಳೇನೇ ಹತ್ತಿರದ ದೊಡ್ಡಾಸ್ಪತ್ರೆಗೆ ಸೇರಿಸಬೇಕು..." ನೋವು ಕಡಿಮೆಯಾಗಿ, ನಿದ್ದೆ ಬರುವಂತಹ ಇಂಜೆಕ್ಷನ್ ಕೊಡುತ್ತಾ ನುಡಿದಿದ್ದರು.

ಮುಂದಿನ ಜವಾಬ್ದಾರಿಯನ್ನು ಅನಂತನೇ ಹೊತ್ತ. ತಾನೇ ಸ್ವಾಮೀಜಿಯವರ ಬಳಿ ಮಾತನಾಡಿ, ಡ್ರೈವರನ್ನು ದೊಡ್ಡಾಸ್ಪತ್ರೆಗೆ ಸೇರಿಸಿ, ಆದಷ್ಟು ಬೇಗ ಆಪರೇಷನ್ ಮಾಡುವಂತೆ ಕೇಳಿಕೊಂಡ.... ಎಲ್ಲಾ ಸುಸೂತ್ರವಾಗಿ ನಡೆದು, ಒಂದು ವಾರದೊಳಗೆ ಡ್ರೈವರ್ ಮತ್ತೆ ಆಶ್ರಮಕ್ಕೆ ವಾಪಸ್ಸಾಗಿದ್ದ. ಅನಂತ ಬೇಸರವಿಲ್ಲದೇ ಅವನ ಶುಶ್ರೂಷೆಗಳನ್ನು ಮಾಡಿದ.

"ಅನಂತ, ನೀವೆಷ್ಟು ಒಳ್ಳೆಯವರು... ನಿಮಗೆಷ್ಟು ತೊಂದರೆ ಯಾಯಿತೋ..." ಡ್ರೈವರ್ರು ಅವನ ಕೈಗಳನ್ನು ಹಿಡಿದು ನುಡಿದಿದ್ದ.

"ಇದರಲ್ಲಿ ತೊಂದರೆ ಏನು ಬಂತು! ಮನುಷ್ಯ ಮನುಷ್ಯನಿಗೆ ಆಪತ್ತಿನಲ್ಲಿ, ಅಗತ್ಯವಿದ್ದಾಗ ಮಾಡಬೇಕಾದ ಕರ್ತವ್ಯ ಇದು...ನಿಮ್ಮ ಹತ್ತಿರದ ಬಂಧುಗಳಿಗೆ ತಿಳಿಸಬೇಕಿದ್ದರೆ ತಿಳಿಸ್ತೀನಿ"

"ನನಗೆ ಬಂಧುಗಳು ಯಾರೂ ಇಲ್ಲ... ನಾನು ಒಬ್ಬ ಅನಾಥ...

ನಾನೂ ಈ ಅನಾಥಾಶ್ರಮದಲ್ಲಿ ಬೆಳೆದವನೇ...ಇವರೇ ನನ್ನ ಆಪ್ತರು"

ಗುಣ ಮುಖನಾಗಿ ಬಂದಿದ್ದ ಡ್ರೈವರನ್ನು ಆಶ್ರಮದವರೆಲ್ಲರೂ ಬಂದು ವಿಚಾರಿಸಿಕೊಂಡು ಹೋದುದನ್ನು ಅನಂತ ಗಮನಿಸಿದ್ದ. ಹಿತವಾದ ಭಾವನೆ ಅವನನ್ನು ತುಂಬಿಕೊಂಡಿತು.

ಈ ಒಂದು ಘಟನೆಯಿಂದ, ಅನಂತ ಆಶ್ರಮದ ಆಕರ್ಷಕ ಕೇಂದ್ರ ವಾದ. ಎಲ್ಲರೂ ಅವನನ್ನು ಹೊಗಳುವವರೇ... ಎಲ್ಲರೂ ಬಂದು ಮಾನಾಡಿಸು ವವರೇ...

ಕೆಲವರಿಗೆ ಅವನ ಬಗ್ಗೆ ಅಸೂಯೆ ಮೂಡಿರಬಹುದು. ಆದರೆ ಅದನ್ನು ಯಾರೂ ಪ್ರಕಟಿಸಲಿಲ್ಲ. ಭೈರಪ್ಪ ಹಾಗೂ ಡಾ॥ ಭೀಮಸೇನರುಅವನನ್ನು ಪ್ರಶಂಸೆ ಮಾಡಿ ಅವನ ಬೆನ್ನು ತಟ್ಟಿದ್ದರು. ಅನಂತ ಕುಬ್ಜನಂತೆ ನಿಂತಿದ್ದ

"ನನ್ನನ್ಯಾಕೆ ಎಲ್ಲರೂ ಹೀಗೆ ಹೊಗಳ್ತಿದೀರೋ...ತಿಳಿಯದು. ಒಂದು ವೇಳೆ ನನಗೂ ಹೀಗೇನಾದರೂ ಆದರೆ, ನೀವುಗಳೂ ಹೀಗೆ ವಿಚಾರಿಸಿಕೊಳ್ತೀರಿ ಅಲ್ಲವೇ!" ಅವರುಗಳನ್ನೇ ನೇರವಾಗಿ ಪ್ರಶ್ನಿಸಿದ್ದ.

"ಅಂತಹ ದಿನ ಯಾರಿಗೂ ಬರುವುದು ಬೇಡ... ಅನಂತ ಎಲ್ಲರೂ ಖುಷಿ ಖುಷಿಯಾಗಿ ಒಬ್ಬರನ್ನೊಬ್ಬರು ಅರಿತುಕೊಂಡು ಬಾಳಿದರೆ ಸಾಕು..."

ಆ ನಂತರ ಅನಂತ ಆಶ್ರಮದಲ್ಲಿ ಎಲ್ಲರಿಗೂ ಪರಿಚಿತನಾದ. ಸ್ವಾಮೀಜಿ ಸಹ ಅವನನ್ನು ಕರೆದು ಹೊಗಳಿದ್ದರು. ಡ್ರೈವರನಿಗೆ ಹುಶಾರಾಗಿ ಮತ್ತೆ ಕೆಲಸಕ್ಕೆ ಬರುವಂತಾಗುವವರೆಗೂ, ನೀನೇ ಡ್ರೈವ್ ಮಾಡಬೇಕು" ಎಂದು ನುಡಿದರು.

"ನನ್ನ ಹತ್ತಿರ ಲೈಸೆನ್ಸ್ ಇಲ್ಲವಲ್ಲ"

"ನಾನು ಮಾಡಿಸಿ ಕೊಡುತ್ತೇನೆ," ಅಲ್ಲಿಗೆ ಎಲ್ಲಾ ಇತ್ಯರ್ಥವಾಗಿತ್ತು. ಕೆಲವೇ ದಿನಗಳಲ್ಲಿ ಅನಂತ ಸ್ವಾಮೀಜಿಯವರ ಆಪ್ತ ಸಲಹೆಗಾರನಾದ. ಸದಾ ಸ್ವಾಮೀಜಿಯವರ ಬಳಿಯಲ್ಲಿದ್ದು ಎಲ್ಲಾ ನೋಡಬೇಕಾಗಿರಲಿಲ್ಲ. ಈಗ ಅವನು ಸರ್ವಾಂತರ್ಯಾಮಿಯಂತೆ. ಎಲ್ಲಾ ವ್ಯವಹಾರಗಳ ಮೇಲೂ ಅವನ ನಿಗಾ ಇರುತ್ತಿತ್ತು. ಬಿಡುವಿದ್ದಾಗ ಗ್ರಂಥಾಲಯಕ್ಕೆ ಹೋಗಿ, ಪುರಾಣ ಪುಣ್ಯಕತೆಗಳನ್ನೂ ಪಠಣ ಮಾಡಿ, ಅದರ ಅರ್ಥಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದ. ತಿಳಿಯದುದನ್ನು ಸ್ವಾಮೀಜಿಯವರು ತಿಳಿಸುತ್ತಿದ್ದರು.

ಅನಂತ ತಾನೇ ಖುದ್ದಾಗಿ ಹೋಗಿ ವೃದ್ಧ ಬಂಧುಗಳ ಯೋಗಕ್ಷೇಮ ವನ್ನು ವಿಚಾರಿಸುತ್ತಿದ್ದ. ಅನಾಥಾಶ್ರಮಕ್ಕೆ ಹೋಗಿ, ಮಕ್ಕಳೊಡನೆ ಕೂತು ಕತೆ ಹೇಳುತ್ತಿದ್ದ. ಪಾಕಶಾಲೆಗೆ ಹೋಗಿ ಅಡಿಗೆ ಭಟ್ಟರಿಗೆ ಪಾಕಶಾಸ್ತ್ರದ ಬಗ್ಗೆ ಪಾಠವನ್ನೇ ಹೇಳುತ್ತಿದ್ದ ಗೋಶಾಲೆಗೆ ಹೋಗಿ ದನಕರುಗಳ ಬೆನ್ನು ಚಪ್ಪರಿಸಿ

ಪ್ರೀತಿಯನ್ನು ಪ್ರಕಟಿಸುತ್ತಿದ್ದ ಹೂದೋಟದಲ್ಲಿ ನಲಿದಾಡುತ್ತಿದ್ದ. ಹಣ್ಣಿನ ತೋಟದಲ್ಲಿ ಎಗರಾಡಿ ಹಣ್ಣುಗಳನ್ನು ಕೈಯಿಂದ ಮುಟ್ಟುತ್ತಿದ್ದ. ಸಮಾಧಿಯ ಮೆಟ್ಟಿಲ ಕೂತು ಧ್ಯಾನ ಮಾಡುತ್ತಿದ್ದ.

ಹೆಚ್ಚು ಕಡಿಮೆ ಆಶ್ರಮವಾಸಿಗಳು ಎಲ್ಲದಕ್ಕೂ ಅನಂತನನ್ನೇ ಕೇಳುತ್ತಿದ್ದರು. ಆದರೆ ಅನಂತ ಎಲ್ಲವನ್ನೂ ಭೈರಪ್ಪನಿಗೆ ವಹಿಸುತ್ತಿದ್ದ.

"ಇವರು ನನಗಿಂತ ಹಿರಿಯರು, ಅವರನ್ನೇ ಕೇಳಿ..."

ತಾನು ಆಶ್ರಮದಲ್ಲಿದ್ದರೂ, ತನ್ನ ಮನಸ್ಸಿನ ನೆಮ್ಮದಿ ಕೆಡುವಂತಹ ಯಾವ ಗೋಜಲಿಗೂ ಸಿಕ್ಕಿ ಹಾಕಿಕೊಳ್ಳಲು ಇಚ್ಛಿಸುತ್ತಿರಲಿಲ್ಲ. ಈಗಲೂ ಅವನ ಆಪ್ತ ಸ್ನೇಹಿತರು, ಭೈರಪ್ಪ ಹಾಗೂ ಭೀಮಸೇನ ಡಾಕ್ಟರು.

ಅನಂತ ಆಶ್ರಮಕ್ಕೆ ಬಂದು ಒಂದು ವರ್ಷ ಕಳೆಯುವಷ್ಟರಲ್ಲಿ ಎಲ್ಲರಿಗೂ ಬೇಕಾದವನಾದ. ಅಷ್ಟಾದರೂ ಅವನು ಒಂಟಿಯಾಗಿದ್ದಾಗ ಅವನನ್ನು ಹಳೆಯ ನೆನಪುಗಳು ಕಾಡದೇ ಬಿಡುತ್ತಿರಲಿಲ್ಲ. ಅಂತಹ ಸಮಯದಲ್ಲಿ ಬಲವಂತ ವಾಗಿ ಭೈರಪ್ಪನನ್ನು ಎಬ್ಬಿಸಿಕೊಂಡು, ಆಶ್ರಮದ ಕಾಲು ದಾರಿಯಲ್ಲಿ ತಿರುಗುತ್ತಿದ್ದ... ಒಂದು ಸಲ ಹಾಗೆ ತಿರುಗುತ್ತಿದ್ದಾಗ, ಒಬ್ಬ ಹುಡುಗ ಓಡೋಡಿ ಬಂದು ಕರೆದಿದ್ದ.

"ಡಾಕ್ಟರು ಕರೀತಿದಾರೆ, ಈಗಲೇ ಬರಬೇಕಂತೆ"

ಅನಂತ ಆ ಹುಡುಗನ ಹಿಂದೆಯೇ ಓಡಿ ಬಂದ. ವೃದ್ಧರೊಬ್ಬರಿಗೆ ಬಿ.ಪಿ. ಹೆಚ್ಚಾಗಿ ಚಡಪಡಿಸುತ್ತಿದ್ದರು. ಡಾಕ್ಟರು ಸಮಾಧಾನ ಹೇಳಿ, ಮಾತ್ರೆ ಕೊಟ್ಟು ಬಿ.ಪಿ. ಒತ್ತಡವನ್ನು ಕಡಿಮೆ ಮಾಡಿದ್ದರೂ, ಆತನ ಚಿಂತೆ ದೂರವಾಗಿರಲಿಲ್ಲ. ಆತ ಹೊಸದಾಗಿ ಬಂದು ಸೇರಿದ್ದರು.

"ಡಾಕ್ಟರೇ ನನ್ನ ರಕ್ತದ ಒತ್ತಡವನ್ನು ಕಡಿಮೆ ಮಾಡಿದಿರಿ. ಆದರೆ ನನ್ನ ಮನಸ್ಸಿನ ಒತ್ತಡವನ್ನು ಹೇಗೆ ಕಡಿಮೆ ಮಾಡ್ತೀರಿ?"

"ಮನಸ್ಸನ್ನು ಹಗುರ ಮಾಡಿಕೊಳ್ಳದಿದ್ದರೆ, ನಿಮ್ಮ ಆರೋಗ್ಯ ಸರಿ ಹೋಗುವುದಾದರೂ ಹೇಗೆ! ನಿಮ್ಮ ಮನಸ್ಸಿನ ಚಿಂತೆಗಳನ್ನು ನಿಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳಿ, ಹೃದಯ ಹಗುರವಾಗುತ್ತೆ."

"ಅವರುಗಳಿಗೂ ಅವರವರ ಚಿಂತೆಯೇ ಹೆಚ್ಚಾಗಿರುತ್ತೆ"

"ಅವರು ನಿಮ್ಮ ಹತ್ತಿರ ಹೇಳಿಕೊಂಡು ಹೃದಯ ಹಗುರ ಮಾಡಿ ಕೊಳ್ಳುತ್ತಾರೆ, ಅದರಲ್ಲೇನು!"

"ನೀವು ಆದಷ್ಟು ಸುಲಭವಾಗಿ ಹೇಳ್ತೀರಿ! ಆದಷ್ಟು ಸುಲಭವಲ್ಲ" ಎಂದು ಹೇಳಿ ಆತ ತನ್ನ ಚಡಪಡಿಕೆಯನ್ನು ಹೆಚ್ಚು ಮಾಡಿಕೊಂಡಿದ್ದ. ಡಾಕ್ಟರರ ಸಲಹೆಯಂತೆ, ಅನಂತ ಸ್ವಾಮೀಜಿಗೆ ತಿಳಿಸಿ, ಆತನನ್ನು ವ್ಯಾನಿನಲ್ಲಿ ಮಲಗಿಸಿ

ಕೊಂಡು, ಸಿಟಿಯಲ್ಲಿನ ಆಸ್ಪತ್ರೆಗೆ ಕರೆದೊಯ್ದರು.

ಆ ರಾತ್ರಿ ಅನಂತ ಅಲ್ಲೇ ಅವರ ಬಳಿ ಉಳಿದುಕೊಂಡ, ಆತನಿಗೂ ಏನೋ ನೆಮ್ಮದಿ, ಎರಡೇ ದಿನಗಳಲ್ಲಿ ಆತ ಹುಶಾರಾಗಿ ವಾಪಸ್ಸು ಆಶ್ರಮಕ್ಕೆ ಬಂದರು.

"ನೀನು ಯಾವ ಜನ್ಮದಲ್ಲಿ ನನ್ನ ಮಗನಾಗಿದ್ದೆಯೋ...ಆ ಒಂದು ಬಾಂಧವ್ಯದಿಂದ ನನಗೆ ಶುಶ್ರೂಷೆ ಮಾಡಿದೀಯ. ನನ್ನ ಮಕ್ಕಳೇ ನನಗೆ ದೂರವಾದರು. ಅವರಿಗೆ ನಾನು ಬೇಡವಾದೆ. ನಾವು ನಮ್ಮ ಮಕ್ಕಳು ಎನ್ನುವ ಹುಚ್ಚು ವಾತ್ಸಲ್ಯದಿಂದ ಹೊಟ್ಟೆ ಬಟ್ಟೆ ಕಟ್ಟಿ ಬೆಳೆಸಿ, ಓದಿಸಿ ಒಂದು ನೆಲೆಗೆ ತಂದೆವು ಮದುವೆಯಾಯಿತು, ದೊಡ್ಡ ಹುದ್ದೆಯಾಯಿತು. ಅವರುಗಳಿಗೆ ನಾವುಗಳು ಬೇಡವಾದೆವು. ಅವರ ಅನಾದರಣೆಯನ್ನು ಮನಸ್ಸಿಗೆ ಹಚ್ಚಿಕೊಂಡು ನನ್ನ ಹೆಂಡತಿ ಅದೇ ಕೊರಗಿನಲ್ಲಿ ಸತ್ತು ಹೋದಳು. ನಾನು ಈಗ ಏಕಾಂಗಿ... ನನ್ನನ್ನು ಇಲ್ಲಿಗೆ ಕರೆತಂದು ಸೇರಿಸಿದರು. ನನ್ನದೇ ಹಣ ಕಾಸು... ಆದರೂ ಇಲ್ಲಿ ನನಗೆ ನೆಮ್ಮದಿ ಇಲ್ಲ, ಇಲ್ಲಿ ನಾನು ಹಾಯಾಗಿದೀನಿ, ಆದರೂ ಹಾಳು ಮನಸ್ಸು ಕೇಳಬೇಕಲ್ಲ, ಗಂಡು ಮಕ್ಕಳು, ಸೊಸೆಯರು, ತಾವು ಆರಾಮ ವಾಗಿರಬೇಕು ಎನ್ನುವ ಆಸೆಯಿಂದ ನನ್ನನ್ನು ಹೀಗೆ ತೊರೆದಿದಾರಲ್ಲ. ಇದು ನ್ಯಾಯಾನಾ? ನಮ್ಮ ಮಕ್ಕಳಿಗೆ ಮುತುವರ್ಜಿಯಿಂದ ಮಾಡಿದ್ದಕ್ಕೆ ಸಿಕ್ಕ ಪ್ರತಿಫಲ ಇದು...ನನ್ನ ಮನೆಯಲ್ಲಿ ನನಗೆ ಜಾಗವಿಲ್ಲದಂತಾಯ್ತು. ಎಲ್ಲೋ ಕಂಡು ಕೇಳರಿಯದ ಜಾಗದಲ್ಲಿ ಪರದೇಶಿಯಂತೆ ಬಿದ್ದಿರಬೇಕಾಯ್ತು" ಆತ ನಿಟ್ಟುಸಿರು ಬಿಟ್ಟರು.

"ಅವರುಗಳು ಎಲ್ಲಿದಾರೆ ಈಗ! ನನಗೆ ವಿಳಾಸ ಕೊಡಿ. ನಾನು ಅವರುಗಳನ್ನು ಭೇಟಿ ಮಾಡಿ, ಮಾತನಾಡುತ್ತೇನೆ..."

"ಒಬ್ಬ ಅಮೆರಿಕಾದಲ್ಲಿದಾನೆ, ಇನ್ನೊಬ್ಬ ದುಬೈನಲ್ಲಿದಾನೆ... ಅಲ್ಲಿಗೆ ನನ್ನನ್ನು ಅವರುಗಳು ಖಂಡಿತಾ ಕರೆದೊಯ್ಯುವುದಿಲ್ಲ.

"ಟೆಲಿಗ್ರಾಂ ಕೊಟ್ಟು ಕರೆಸೋಣ... ನಿಮಗೆ ನೋಡಬೇಕೆನ್ನಿಸಿದ್ದರೆ"

"ಬೇಡ ಬಿಡಪ್ಪಾ... ಅವರುಗಳು ಬಂದು ಈಗ ಏನು ಮಾಡ್ತಾರೆ? ಸುಮ್ಮನೇ ಎಷ್ಟು ಡಾಲರ್ಸ್ ಖರ್ಚಾಯ್ತು ಅಂತ ಲೆಖ್ಖ ಹಾಕ್ತಾರೆ... ನನಗೆ ರೇಗಿ ಹೋಗುತ್ತೆ. ಒಂದು ವೇಳೆ ನಾನು ಸತ್ತು ಹೋದರೂ ಅವರುಗಳಿಗೆ ತಿಳಿಸಲೇಬೇಡಿ, ನನಗೆ ಅವರುಗಳು ಮುಲಾಜೇ ಬೇಡ..." ಆತ ಅಲವತ್ತು ಕೊಂಡು ನುಡಿದಾಗ ಅನಂತ ಗಂಭೀರನಾದ.

"ಹೋಗಲಿ ಬಿಡಪ್ಪಾ... ನನ್ನ ಗೋಳನ್ನು ಕಟ್ಟಿಕೊಂಡು ನೀನೇನು ಮಾಡ್ತೀಯಾ. ನಿನಗೆ ಬೇರೆಲ್ಲೂ, ಕೆಲಸ ಸಿಗಲಿಲ್ಲವೆ? ಆಶ್ರಮಕ್ಕೇಕೆ ಬಂದು

ಸೇರಿದೆ! ಏನು ಓದಿದೀಯ....?"

ಅನಂತನಿಗೆ ತನ್ನ ಬಗ್ಗೆ ಹೇಳಿಕೊಳ್ಳಲು ಇಷ್ಟವಿರಲಿಲ್ಲ. ತಡವರಿಸುತ್ತಿದ್ದಾಗ ಎದುರಿಗೆ ಬೇರೊಬ್ಬ ವ್ಯಕ್ತಿ ಬಂದು ನಿಂತಾಗ ಸಮಾಧಾನಗೊಂಡ, ಅವರು ವೃದ್ಧನ ಮತ್ತೊಬ್ಬ ವೃದ್ಧ ಸ್ನೇಹಿತರು.

"ನೀವಿಬ್ಬರೂ ಮಾತನಾಡ್ತಿರಿ... ನಾನು ಈಗ ಬರ್ತೀನಿ" ಎಂದು ಹೇಳಿ ಹೊರಬಂದು ಸೀದಾ ತೋಟದ ಕಡೆಗೆ ದುಡು ದುಡು ನಡೆದ.

ಹಳೆಯದನ್ನು ಮರೆಯಲು ಪ್ರಯತ್ನಿಸಿದಷ್ಟೂ... ಮರೆಯಲಾಗುತ್ತಿಲ್ಲವಲ್ಲ ಮನಸ್ಸು ಪ್ರಕ್ಷುಬ್ಧಗೊಂಡಿತು.

ತಾನು ಇಲ್ಲಿಗೆ ಬಂದು ಹದಿನೇಳು ತಿಂಗಳುಗಳು ಉರುಳಿ ಹೋಗಿವೆ. ಆದರೂ ತನಗಿನ್ನೂ ಹಳೆಯ ನೆನಪುಗಳಿಂದ ಮುಕ್ತಿ ಇಲ್ಲ... ಛೆ...

ತಂದೆಯ ಪ್ರೀತಿ ತನಗೆ ಸಿಕ್ಕದಿದ್ದರೂ, ತಾಯಿಯ, ದೊಡಮ್ಮನ ಪ್ರೀತಿಯ ಆರೈಕೆಯಲ್ಲಿ ಬೆಳೆದವನಿಗೆ, ಬೇರೆ ಯಾವ ಕೊರತೆಯೂ ಇರಲಿಲ್ಲ ಎಡರು ತೊಡರುಗಳಿಲ್ಲದೇ ವಿದ್ಯಾಭ್ಯಾಸ ನಡೆದಿತ್ತು. ಅವನ ಇಚ್ಛೆಯಂತೆ ಇಂಜಿನಿಯರ್ ಸಹ ಆಗಲಿದ್ದ. ಮದುವೆಯ ಆಲೋಚನೆ ಇರಲಿ, ಯಾವ ಗರ್ಲ್‌ಫ್ರೆಂಡ್ ಸಹ ಅವನಿಗೆ ಇರಲಿಲ್ಲ. ಅನಿರೀಕ್ಷಿತವಾಗಿ, ದಿಢೀರನೆ ಅವನ ಹೃಯದಲ್ಲಿ ಆಸೆಗಳನ್ನು ಹೊತ್ತಿಸಿದವಳು ಸುಗುಣ. ಆಕರ್ಷಕ ಹುಡುಗಿ ನನ್ನ ಹೆಂಡತಿಯಾಲಿದ್ದಾಳೆ ಎನ್ನುವ ಮಾತೇ ಅವನನ್ನು ಕುಣಿಸಿತ್ತು... ಆದರೆ ಅವಳ ಉದಾಸೀನ ಅವನಿಗೆ ಅರ್ಥವಾಗಿರಲಿಲ್ಲ. ಆದರೆ ಅವಳು ತನ್ನನ್ನು ಎಂತಹ ಪ್ರತಾಪಕ್ಕೆ ತಳ್ಳಿಬಿಟ್ಟಳು?.... ಆ ಕ್ಷಣದಲ್ಲಿ ಅವನಲ್ಲಿ ಉದ್ಭವಿಸಿದ್ದು ದ್ವೇಷವೋ, ಅಸೂಯೇಯೋ ವೈರಾಗ್ಯವೋ... ಜಿಗುಪ್ಸೆಯೋ... ಅವನಿಗೇ ತಿಳಿಯದು. ಅದರಿಂದ ಇನ್ನು ಪೂರ್ಣ ಮುಕ್ತನಾಗಿರಲಿಲ್ಲ. ಅವನು ನನ್ನ ಅಪ್ಪನಲ್ಲ; ಅವಳು ನನ್ನ ಹೆಂಡತಿ ಅಲ್ಲ ಆದರೆ ಹೆತ್ತ ತಾಯಿಗಿಂತ ಹೆಚ್ಚಾಗಿ ತನ್ನನ್ನು ಸಾಕಿ ಬೆಳೆಸಿದವಳಿಗೆ ತಿಳಿಯದಂತೆ ಮನೆ ಬಿಟ್ಟು ಬಂದು ಕೃತಘ್ನನಾದೆ ಎಂತೆನಿಸುತ್ತಿತ್ತು. ಆದರೆ, ಒಂದು ವೇಳೆ ಅವಳಿಗೆ ತಿಳಿಸಿದ್ದರೆ....ತನ್ನನ್ನು ಹೋಗಲು ಬಿಡುತ್ತಿರಲಿಲ್ಲ.. ಅಥವಾ ತನ್ನ ಜತೆ ಅವಳೂ ಬರುತ್ತಿದ್ದಳೇನೋ. ಏಕೆಂದರೆ ಅವಳಿಗೂ ಅವಳ ಪತಿಯಿಂದ ದ್ರೋಹವಾಗಿತ್ತಲ್ಲ, ನಿಂತ ಗಳಿಗೆಯಲ್ಲಿ ಹೊರಟವನು ತನಗೇ ಒಂದು ನೆಲೆಯಿರಲಿಲ್ಲ. ಅವಳೇನು ಸ್ವಂತ ತಾಯಿಯಲ್ಲ... ಅವಳ ಮನೆ ಸಂಸಾರ ಅವಳಿಗೆ ಇದ್ದೇ ಇತ್ತು. ತನ್ನ ಅಧಿಕಾರ ಚಲಾಯಿಸಿ, ಸುಗುಣಳನ್ನು ಮನೆಯಿಂದ ಆಚೆ ತಳ್ಳಿರಬಹುದು, ಗಂಡನನ್ನು ಆಚೆ ನೂಕಿರಬಹುದು. ಆದರೆ ತನ್ನ ತಾಯಿ ಅಂತಹವಳಲ್ಲ. ಸಾಧ್ವೀಮಣಿ, ಕೊರಗೆ ಕೊರಗಿ ಏನಾಗಿದ್ದಾಳೋ ಇಲ್ಲಿ ಅವಕಾಶವಿದ್ದರೆ ಅವಳನ್ನೂ ಇಲ್ಲಿಗೆ ಕರೆದು

ಕೊಂಡು ಬರಬಹುದಾಗಿತ್ತು ಇಲ್ಲಿ ಸ್ತ್ರೀಯರು ಇರಲು ಅವಕಾಶವೇ ಇಲ್ಲವಲ್ಲ.

ಸ್ತ್ರೀಯರಿಗೂ ವೃದ್ಧಾಪ್ಯ ಬರುತ್ತದೆ. ಗಂಡನಿಲ್ಲದ, ಮಕ್ಕಳಿಲ್ಲದ ಎಷ್ಟೋ ವೃದ್ಧ ಸ್ತ್ರೀಯರು ಅವರಿವರ ಮನೆಯಲ್ಲಿ ಜೀತದಾಳಿನಂತೆ ದುಡಿಯುತ್ತಾರೆ ಅಂತಹ ಸ್ತ್ರೀಯರಿಗೂ, ಇಲ್ಲಿಯ ವೃದ್ಧಾಶ್ರಮದಲ್ಲಿರಲು ಅನುಕೂಲವಾಗುವಂತಿದ್ದರೇ... ನಾನು ನನ್ನ ತಾಯಿಯನ್ನು ನನ್ನ ಬಳಿಗೆ ಕರೆದುಕೊಂಡು ಬರುವಂತಿದ್ದರೇ... ಅದು ಸಧ್ಯಕ್ಕಂತೂ ಸಾಧ್ಯವಿಲ್ಲ. ಏಕೋ ಏನೋ ನನ್ನ ಮನಸ್ಸು ಇನ್ನು ತಹಬಂದಿಗೆ ಬಂದಿಲ್ಲ... ಎಲ್ಲಾದರೂ ಸರಿಯಾದ ಕೆಲಸ ಹಿಡಿದು ಸುಖವಾಗಿರಬಾರದೇಕೆ ಅಂತ ಸಹ ಅನ್ನಿಸುತ್ತಿತ್ತು. ತಾನೇಕೆ ವಿರಾಗಿಯಂತಿರಬೇಕು! ನಾನೂ ಮನುಷ್ಯನೇ...ನನಗೂ ಸಾಕಷ್ಟು ಆಸೆಗಳಿವೆ. ನನ್ನ ಆಸೆಗಳನ್ನು ಹಾಳು ಮಾಡಿದವರಿಗಿಂತ ಚೆನ್ನಾಗಿ ಬಾಳಬೇಕು... ಹಾಳು ಮನಸ್ಸು. ಎತ್ತೆತ್ತಲೋ ಓಡುತ್ತದೆ.

ಛೆ. ನನ್ನ ಮನಸ್ಸು ಏನೇನನ್ನೋ ಆಲೋಚಿಸುತ್ತಿದೆ. ನಾನೇಕೆ ಹೀಗಾದೆ!.... ನಾನೇಕೆ ಹೀಗೆ ಯೋಚಿಸುತ್ತಿದ್ದೇನೆ ಎಂದುಕೊಂಡು ಎದ್ದ. ಸೀದಾ ಲೈಬ್ರರಿಗೆ ಬಂದ. ಅಲ್ಲಿ ವೃದ್ಧರಿಬ್ಬರು ಕುಳಿತು ಸಿನಿಮಾ ನಟಿಯರ ಬಗ್ಗೆ ಮಾತನಾಡುತ್ತಿದ್ದುದು ಕೇಳಿಸಿತ್ತು. ಮೀನಾಕುಮಾರಿ, ವೈಜಯಂತಿಮಾಲಾ, ಸಾಯಿರಾಬಾನು ಬಗ್ಗೆ ಚರ್ಚೆ ನಡೆಸುತ್ತಿದ್ದರು.

ಮದುವೆಯಾಗಿ ಸಂಸಾರಸ್ಥರಾಗಿದ್ದು, ಹೆಂಡತಿಯನ್ನು ಕಳೆದುಕೊಂಡ ವೃದ್ಧರು ತಮ್ಮ ಬಾಯಿ ಚಪಲವನ್ನು ತೀರಿಸಿಕೊಳ್ಳುತ್ತಿದ್ದರು. ಮೀನಾಕುಮಾರಿಯಂತೆ ದುರಂತ ನಾಯಕಿ, ವೈಜಯಂತಿ ಮಾಲಳಂತೆ ಪ್ರಸಿದ್ಧ ನರ್ತಕಿ, ಸಾಯಿರಾಬಾನುವಿನಂತೆ ಬ್ಯೂಟಿಕ್ವೀನ್. ಇವರ ಪತ್ನಿಯರೇ ಆಗಿದ್ದಿದ್ದರೆ ಇವರುಗಳೇನು ಮಾಡುತ್ತಿದ್ದರು ಅಂತ ಅಂದುಕೊಂಡಾಗ ಅವರ ಬಗ್ಗೆ ಅಸಹ್ಯ ಮೂಡಿತ್ತು. ಅವರ ಸಂಭಾಷಣೆಗಳನ್ನು ಕದ್ದು ಕೇಳಿದ ತನ್ನ ಬಗ್ಗೆ ಹೀನಾಯವೆನಿಸಿತ್ತು. ಛೆ, ನನ್ನ ಮನಸ್ಸು ಇನ್ನೂ ಪಕ್ವವಾಗಿಲ್ಲ.... ಹಾಳು ಮನಸ್ಸು.

ಅಲ್ಲ, ಈ ವೃದ್ಧರ ಮೇಲೇಕೆ ತನಗೆ ಕೋಪ? ಇಲ್ಲಿ ತಮಗೆ ಹೇಗೆ ಬೇಕೋ ಹಾಗಿದಾರೆ. ಮನೆಯಲ್ಲಿ ಸೊಸೆಯಂದಿರ, ಅಳಿಯಂದಿರ ಎದುರಿಗೆ ಹೀಗೆ ಸಿನಿಮಾ ನಟಿಯರ ಬಗ್ಗೆ ಮಾತನಾಡಲು ಸಾಧ್ಯವಿತ್ತೆ! ಅವರಿಗೆ ಸ್ವಾತಂತ್ರ್ಯ ಬೇಡವೇ?

ಇಲ್ಲಿಯ ವೃದ್ಧರಿಗೆ ಯಾವ ಹೆಂಗಸಿನ ಮುಖ ದರ್ಶನವಿಲ್ಲ ಕೆಲಸದಾಳುಗಳೆಲ್ಲರೂ ಗಂಡಸರೇ. ಒಬ್ಬ ಹೆಂಗಸು ಇವರುಗಳ ಎದುರು ಸುಳಿದಾಡಿದ್ದರೂ, ಇಲ್ಲಿ ಒಂದು ಬಯಲು ನಾಟಕವೇ ನಡೆದು ಹೋಗುತ್ತಿತ್ತು. ಆದರೆ ಹಾಗಿಲ್ಲ... ಇಲ್ಲಿ ಎಲ್ಲರೂ ಬ್ರಹ್ಮಚಾರಿಗಳೇ... ಖಡ್ಡಾಯವಾದ ಬ್ರಹ್ಮಚರ್ಯ...

ಆದರೆ ಮನಸ್ಸಿನ ಕಾಮನೆಗಳಿಗೆ ಕಟ್ಟುಪಾಡುಗಳಿಲ್ಲ. ಎಲ್ಲೆಂದರಲ್ಲಿ ಹರಿದಾಡುವ ಆಸೆ. ಅದಕ್ಕೆ ಒಂದು ಕಡಿವಾಣವನ್ನು ಹಾಕುವಂತಿದ್ದರೇ.... ತಾನೀಗ ಪಕ್ಕಾ ಬ್ರಹ್ಮಚಾರಿ ಅದಕ್ಕೇ ಹೀಗೆಲ್ಲಾ ಯೋಚಿಸುತ್ತಿದ್ದಿನೇನೋ ಎಂದುಕೊಂಡು, ಅಲ್ಲಿಂದ ಹೊರಟು ಭೈರಪ್ಪ ಇದ್ದಲ್ಲಿಗೆ ಬಂದ.

"ಏನು ಅನಂತಪ್ಪಾ, ಆಯಪ್ಪ ಈಗ ಹೇಗಿದಾರೆ!"

"ಹುಶಾರಾಗಿದಾರೆ, ಭೈರಪ್ಪಾ ನೀವು ಎಷ್ಟು ವರ್ಷದಿಂದ ಇಲ್ಲಿ ಇದೀರಿ!?" ಇದ್ದಕ್ಕಿದ್ದಂತೆ ಕೇಳಿದ.

"ಇಪ್ಪತ್ತೈದು ವರ್ಷದಿಂದ... ಯಾಕೆ ಕೇಳಿದೆ?"

"ಸುಮ್ಮನೇ ಕೇಳಿದೆ"

"ಸುಮ್ಮನೇ ಕೇಳುವ ಪ್ರಶ್ನೆ ಇದಲ್ಲ ಮನಸ್ಸಲ್ಲಿ ಏನೋ ಇದೆ, ನಾನೂ ನಿನ್ನ ಹಾಗೇ ಇಲ್ಲಿಗೆ ಹೊಸಬನಾಗಿದ್ದಾಗ ಹಾಗೇ ಅನ್ನಿಸ್ತಿತ್ತು.... ಇಪ್ಪತ್ತೈದು ವರ್ಷದ ಕೆಳಗೆ ನಾನು ಆಶ್ರಮಕ್ಕೆ ಹಾಲು ತಂದು ಕೊಡುತ್ತಿದ್ದೆ. ಆಗಿನಿಂದ ನಾನು ಇಲ್ಲಿಯವನೇ ಆಗಿಬಿಟ್ಟಿದೀನಿ."

"ಹಾಗಾದ್ರೆ ತುಂಬಾ ಹಳಬರು... ಆಗಿನಿಂದ ಇದೇ ಸ್ವಾಮೀಜಿ ಇದಾರಾ!"

"ಇಲ್ಲ ಇವರು ಎರಡನೇಯವರು ಮೊದಲನೆಯವರು ಎಲ್ಲಿಂದ ಬಂದರೋ ಯಾತಕ್ಕೆ ಬಂದರೋ ಯಾರಿಗೂ ತಿಳಿಯದು. ಇಲ್ಲಿ ಒಂದು ಗುಹೆ ಇತ್ತು. ಅಲ್ಲಿ ನಿಧಿ ಸಿಕ್ಕಿತಂತೆ, ಅದರಿಂದ ಈ ಅಶ್ರಮ ಕಟ್ಟಿಸಿದರು ಅಂತ ನಮ್ಮಪ್ಪ ಹೇಳುತ್ತಿದ್ದರು"

"ಆ ಗುಹೇನ ನೀವು ನೋಡಿರಲಿಲ್ವಾ!"

ಇಲ್ಲ ಕಣಪ್ಪಾ... ಹುಲಿ ಸಿಂಹ ಸೇರ್ಕೋತಾವೇ ಅಂತ ಆಮೇಲೆ ಮುಚ್ಚಿಸಿ ಬಿಟ್ಟರಂತೆ.... ಈಗ ಭಜನಾ ಮಂದಿರದಲ್ಲಿರುವ ಜಗನ್ನಾಥ ಸ್ವಾಮಿಯ ವಿಗ್ರಹ ಇಲ್ವಾ... ಅದು ಅಲ್ಲಿ ಗುಹೇಲಿತ್ತಂತೆ

"ಓ... ಮೊದಲನೇ ಸ್ವಾಮೀಜಿ ಈಗ ಎಲ್ಲಿ!"

"ಅವರು ಸಮಾಧಿ ಹೋದರು.... ಅದೇ ತೋಟದಲ್ಲಿ ಸಮಾಧಿ ಇಲ್ವಾ ಅದು ಅವರದ್ದೇ..."

"ಇಲ್ಲೇ ಆಶ್ರಮದಲ್ಲೇ ಎಲ್ಲರನ್ನು ಸಮಾಧಿ ಮಾಡ್ತಾರಾ?"

"ಎಲ್ಲರನ್ನೂ ಅಲ್ಲ... ಸ್ವಾಮೀಜಿಗಳನ್ನು ಮಾತ್ರ. ಆದರೆ ನಾನು ಮಾತ್ರ.... ನನ್ನನ್ನು ಇಲ್ಲೇ ಸಮಾಧಿ ಮಾಡಬೇಕು ಅಂತ ಕೇಳಿಕೊಂಡು ಬಿಟ್ಟಿದೀನಿ. ನಾನು ಹುಟ್ಟಿದ್ದು, ಬೆಳೆದಿದ್ದು ಇಲ್ಲೇ... ಮಣ್ಣಾಗೋದೂ ಇಲ್ಲೇ. ಮಾವಿನ ತೋಪಿನ ಹಿಂಭಾಗದ ಖಾಲಿ ಜಾಗದಲ್ಲಿ. ಅಲ್ಲೇ ನಮ್ಮಪ್ಪನನ್ನೂ

ಮಣ್ಣು ಮಾಡಿದ್ದು...ಯಾಕಪ್ಪಾ ಇವತ್ತು ಈ ವಿಚಾರಗಳನ್ನು ಕೇಳ್ತಿದೀಯಾ...ಮನಸ್ಸಿಗೆ ಬೇಜಾರಾಗಿದ್ರೆ ಇವತ್ತು ಇಲ್ಲೇ ಮಲಕ್ಕೋ..."

"ಬೇಡ ಪರವಾಗಿಲ್ಲ, ಸ್ವಾಮೀಜೀಯವರು ಕೇಳಿದ್ರೆ ಏನೂಂತ? ಏನ್ಹೇಳೋದು?"

"ಅವರು ಕೇಳೊಲ್ಲ, ಅವರು ಯಾರ ತಂಟೆಗೂ ಬಂದಿದ್ದನ್ನೇ ಕಾಣೆವು. ಅವರುಂಟು, ಅವರ ಪೂಜೆ, ಧ್ಯಾನ, ಪ್ರವಚನ ಇತ್ಯಾದಿ...ಆಶ್ರಮದ ಕಾರುಬಾರು... ಇಷ್ಟೇ..."

"ಅವರಿಗೆ ಎಲ್ಲರ ಮೇಲೂ ಅಷ್ಟು ನಂಬಿಕೇನಾ?"

"ಹೌದು ಅಷ್ಟು ವಿಶ್ವಾಸ, ವಿಶ್ವಾಸವಿದ್ದರೆ ಏನನ್ನು ಬೇಕಾದರೂ ಸಾಧಿಸಬಹುದು ಅಂತ ಅವರು ಹೇಳ್ತಾನೇ ಇರ್ತಾರಲ್ಲ. ಎಲ್ಲರಲ್ಲೂ ಆತ್ಮವಿಶ್ವಾಸವಿರಲೇ ಬೇಕು... ನಂಬಿಕೆ ಇರಬೇಕು"

"ಭೈರಪ್ಪ... ನಿಮಗೆ ಅವರ ಭಾಷಣವೆಲ್ಲಾ ಅರ್ಥವಾಗುತ್ತಾ?"

"ಅವರು ಮಾಡುವ ಭಾಷಣ ನಮ್ಮಂಥೋರಿಗೇ ತಾನೇ.... ಓದಿದವರಿಗೆ ಏನನ್ನು ತಿಳಿಸಿಕೊಡುವ ಅಗತ್ಯವಿರೋಲ್ಲವಲ್ಲ..."

"ಹಾಗೆನ್ನಬೇಡಿ.... ಓದಿದವರಲ್ಲೇ ಅವಿವೇಕಿಗಳು ಜಾಸ್ತಿ.... ನನ್ನ ಹಾಗೇ... ನಿಮ್ಮ ಹಾಗೆ ನಿರಾಳವಾದ ಮನಸ್ಸು ಎಲ್ಲರಿಗೂ ಇರೋಲ್ಲ..." ಮೆಲ್ಲಗೆ ನಕ್ಕ.

"ನಾನು ಓದ್ದೋನಲ್ಲ, ಬರದೋನಲ್ಲ.... ಹೊರಗೆ ತಿರುಗಿದವನಲ್ಲ... ನನಗೇನು ತಿಳಿಯುತ್ತೆ?"

"ಹಾಗೆನ್ನಬೇಡಿ ಭೈರಪ್ಪ....ನಿಮಗಿರುವಷ್ಟು ತಿಳುವಳಿಕೆ ಯಾರಿಗೂ ಇಲ್ಲ. ನೀವು ನನ್ನ ಆಪ್ತರು. ನಿಮ್ಮ ಸ್ನೇಹ ಇಲ್ಲದಿದ್ದರೆ ನಾನು ಎಂದೋ ಇಲ್ಲಿಂದ ಹೊರಟು ಹೋಗ್ತಿದ್ದೆ." ಎಂದ ಅನಂತನನ್ನೇ ದಿಟ್ಟಿಸಿ ನೋಡಿದ.

ಹಾಗಾದರೂ ಈ ಹುಡುಗನ ಮನಸ್ನಲ್ಲಿ ಏನಿದೆ ಎಂದು ಭೈರಪ್ಪನಿಗೆ ಅರ್ಥವಾಗಲಿಲ್ಲ. ಎಲ್ಲರೊಡನೆ ಸ್ನೇಹದಿಂದ ಇದಾನೆ. ಆಶ್ರಮದ ರೀತಿ ನೀತಿಗಳಿಗೆ ಹೊಂದಿಕೊಂಡಿದಾನೆ... ಆದರೂ ಇಲ್ಲಿ ಏನು ಕೊರತೆ? ಏನು ತೊಂದರೆ! ಇವನನ್ನು ಬಾಧಿಸುತ್ತಿರುವ ಕೊರಗಾದರೂ ಏನು? ಅವನಿಗೆ ಅರ್ಥವಾಗಲಿಲ್ಲ.]

"ನಾನು ಇಲ್ಲಿ ಇರದಿದ್ದರೂ, ನೀನು ಹೋಗುತ್ತಿರಲಿಲ್ಲ ನನಗೆ ಗೊತ್ತು" ಎಂದು ತಮಾಷೆಯಾಗಿ ನುಡಿದ. ಅನಂತ ಸುಮ್ಮನಾದ ಅನಂತನಿಗೆ ಎಷ್ಟೋ ಅನ್ಯಾಯ ಆಗಿದೆ ಅಂತ ತಿಳಿದಿತ್ತು. ಆದರೆ ಅದೇನೆಂದು ಪದೇ ಪದೇ ಕೇಳುತ್ತಿರಲಿಲ್ಲ. ಆಶ್ರಮವಾಸ, ಜನಸೇವೆ, ಸಮಾಜಸೇವೆ ಎಂದು ಜನರು

ತಾವಾಗಿಯೇ ಮುಂದೆ ಬರುವುದಿಲ್ಲ. ಏನೋ ಅಹಿತವಾದ ಘಟನೆ ಅವರ ಜೀವನದಲ್ಲಿ ನಡೆದಿದ್ದರೆ, ವೈರಾಗ್ಯವನ್ನು ತಂದುಕೊಂಡು ಬರಬೇಕು ಅಷ್ಟೇ.... ಇಲ್ಲದಿದ್ದರೆ ಐಹಿಕ ಸುಖಗಳನ್ನು ಬಿಟ್ಟು ಸರಳ ಜೀವನವನ್ನು ಪಾಲಿಸುವ ಆಸೆ ಇಂತಹ ಚಿಕ್ಕವಯಸ್ಸಿನ ಹುಡುಗರಿಗೆ ತಾನಾಗಿಯೇ ಬರುವುದಾದರೂ ಹೇಗೆ? ಅನಂತನೂ ಹೊರತಲ್ಲ.

ಮನೆ ಬಿಟ್ಟು ಓಡಿ ಬಂದಿರಬಹುದು ಎಂದೂಹಿಸಿದ್ದ. ಆದರೆ ಕಾರಣವನ್ನು ತಿಳಿಯುವ ಕುತೂಹಲವನ್ನು ತೋರಿರಲಿಲ್ಲ. ಯಾಕೋ ಈ ಹುಡುಗನ ಮನಸ್ಸು ತಳಮಳಗೊಂಡಿದೆ. ತಾನು ಸ್ವಲ್ಪ ನಿಗಾ ವಹಿಸಬೇಕು ಎಂದುಕೊಂಡ. ಅನಂತನ ಸಹವಾಸ ಅವನಿಗೆ ಹಿಡಿಸಿತ್ತು.

ಎಷ್ಟೋ ದಿನಗಳ ನಂತರ ಪುರುಷೋತ್ತಮ, ಪ್ರಶಾಂತನೊಡನೆ ಆಶ್ರಮಕ್ಕೆ ಬಂದಾಗ ಅನಂತ ಇರಲಿಲ್ಲ. ಭೈರಪ್ಪನೊಡನೆ ಮಾತಾಡಿ, ಅನಂತನ ಬಗ್ಗೆ ವಿಚಾರಿಸಿದ.

"ಹೂನಪ್ಪಾ.... ಚೆನ್ನಾಗಿದಾರೆ. ಆದ್ರೆ ಆಗಾಗ್ಗೆ ಉದಾಸೀನವಾಗ್ಬಿಡ್ತಾರಪ್ಪಾ. ಏನೋ ಮನಸ್ನ ಕೊರೀತಿದೆ ಅಂತನ್ನಿಸುತ್ತೆ. ವೈರಾಗ್ಯ ಬರುವ ವಯಸ್ಸಲ್ಲ. ವೈರಾಗ್ಯವನ್ನು ತಂದುಕೊಂಡಿರುವುದು...ಕಾರಣ ಏನೂಂತ ನಾನೂ ಕೇಳಿಲ್ಲ. ಆಯಪ್ಪನೂ ಹೇಳುವುದಿಲ್ಲ ನಿಮಗೇನಾದ್ರೂ ಗೊತ್ತಾ?"

ಪುರುಷೋತ್ತಮ ಪ್ರಶಾಂತನನ್ನು ತಿರುಗಾಡಲು ಕಳುಹಿಸಿ, ಅನಂತನ ವಿಷಯವನ್ನೆಲ್ಲ ತಿಳಿಸಿದ. ಭೈರಪ್ಪ ಬೆರಗಾದ. ಹೀಗೂ ಉಂಟೆ ಪ್ರಪಂಚದಲ್ಲಿ! ತಂದೆ ಮಕ್ಕಳಲ್ಲಿ ಆಸ್ತಿ ಪಾಸ್ತಿಗೆ ವೈರತ್ವ ಬಂದಿರುವುದುಂಟು... ಆದರೆ ಒಂದು ಸ್ತ್ರೀಗಾಗಿ ತಂದೆಯಾದವನು ಮಗನಿಗೇ ದ್ರೋಹ ಮಾಡುವುದೆಂದರೇನು! ಅವನೂ ಗೊಂದಲಕ್ಕೊಳಗಾದ.

"ಅದಕ್ಕೇ ನಾನು ಇಲ್ಲಿ ಸರಿ ಹೋಗದಿದ್ದರೆ ಬಾ ಅಂತ ಹೇಳಿದ್ದೆ...ಆದರೆ ಒಪ್ಪಲಿಲ್ಲ... ಇಲ್ಲೂ ಇರಲಾಗದಿದ್ದರೆ ಇನ್ನೆಲ್ಲಿಗೆ ಹೋಗ್ತಾನೆ?

"ಚಿಕ್ಕ ವಯಸ್ಸು ಮನಸ್ಸು ಹಾಗೆ ಅಲ್ಲಾಡಿಸುತ್ತೆ, ಇನ್ನೊಂದೆರಡು ವರ್ಷ ಕಳೆದರೆ ಎಲ್ಲಾ ತಾನಾಗಿಯೇ ಸರಿ ಹೋಗುತ್ತೆ"

"ಹಾಗಾದ್ರೆ ಅವನು ಇಲ್ಲಿರುವುದೇ ಸರಿ ಅಂತಿಯೇನಪ್ಪಾ...."

"ಹೂಂ, ಹೊರಗೆ ಹೋದರೆ ಅವನ ಮನಸ್ಸಿನ್ನೂ ಕೆಡುತ್ತೆ ತಂದೆಯ ಮನೆಯ ಆಸರೆ ಇಲ್ಲ, ವಿದ್ಯಾಭ್ಯಾಸದ ಸರ್ಟಿಫಿಕೆಟ್ ಇಲ್ಲ, ಡೈವೋರ್ಸ್ ಇಲ್ಲದೇ ಮತ್ತೆ ಮದುವೆಯಾಗುವಂತಿಲ್ಲ, ಒಂಟಿಯಾಗಿ ಅವನಿರಲಾರ...ಇಲ್ಲಿ ಅವನ ಹಿತೈಷಿಗಳು ಬೇಕಾದಷ್ಟು ಜನರಿದಾರೆ.... ಇದೇ ಸರಿ ಬಿಡಿ."

"ಏನ್ ಹೀಗಂತೀರಿ ಭೈರಪ್ಪಾ... ನಾನು ಅವನ ಹಿತೈಷಿ ಅಲ್ವಾ!"

"ಹೌದು.... ಆದರೆ ನಿಮಗೆ ಸಂಸಾರವಿದೆ.... ನಿಮ್ಮ ನೌಕರಿ ಇದೆ.... ಇದರಿಂದ ನಿಮಗೆ ಬಿಡುವು ಸಿಕ್ಕಾಗ ಅವನ ಹತ್ತಿರ ನಾಲ್ಕು ಮಾತನ್ನು ಆಡುತ್ತೀರಿ... ಇಲ್ಲಿ ಈಗ ಅನಂತ ಎಲ್ಲರಿಗೂ ಪರಿಚಿತ.... ಅವನಿಗೆ ಬೇಕಿರಲಿ... ಬೇಕಿಲ್ಲದಿರಲಿ ಎಲ್ಲರೂ ಮಾತನ್ನಾಡಿಸ್ತಾರೆ. ಅವನಿಲ್ಲಿದ್ದರೇ ಅವನಿಗೆ ಒಳ್ಳೆಯದಾಗುವುದು..."

"ಸರಿ, ಭೈರಪ್ಪಾ ನೀವು ಇಷ್ಟು ಹೇಳಿದ ಮೇಲೆ ನಾನು ಇನ್ನೇನು ಹೇಳಲಿ! ಚಿಕ್ಕವನು ಅವನಿಗೆ ಈ ಜಾಗ, ಈ ಪರಿಸರ ಬೇಸರವಾಗಬಹುದೇನೋ ಅಂತ ಅನ್ನಿಸುತ್ತಿತ್ತು. ಈಗ ನೀವು ಹೇಳುವುದೇ ಸರಿ ಅಂತನ್ನಿಸುತ್ತೆ.... ಅವನಿಗೆ ನಾನು ಬಂದು ವಿಚಾರಿಸಿದೆ ಅಂತ ತಿಳಿಸಿ ಬಿಡಿ...ನನ್ನ ಬಳಿ ಹೇಳುವ ವಿಚಾರಗಳೇನೇ ಇದ್ದರೂ, ನನಗೆ ಒಂದ್ಮಾತು ತಿಳಿಸಿದರೆ ಸಾಕು ತಕ್ಷಣ ಬಂದು ಬಿಡ್ತೀನಿ... ಹಾಗಂತ ಹೇಳಿ... ಹೇಳ್ತೀರಾ?" ಭೈರಪ್ಪ ತಲೆ ಯಾಡಿಸಿದ.

ಪುರುಷೋತ್ತಮ ಮಗನೊಡನೆ ಹೊರಟುಹೋದ. ಅನಂತನನ್ನು ಭೇಟಿಯಾಗಲು ಆಗಲಿಲ್ಲ. ನಂತರ ಅನಂತನಿಗೆ ವಿಷಯ ತಿಳಿದಾಗ ಅವನು ವ್ಯಥೆಗೊಂಡ. ಪ್ರಶಾಂತನನ್ನು ಮಾತನಾಡಿಸಲಿಲ್ಲವಲ್ಲ ಅಂತ ಅನ್ನಿಸಿತ್ತು.

"ಮುಂದಿನ ವರ್ಷದ ರಜೆಗೆ ಇಲ್ಲಿಗೇ ಬರೋಕ್ಕೆ ಹೇಳೋಣ.... ಆಗ ಬೇಕಾದಷ್ಟು ಮಾತನಾಡಿದರಾಯ್ತು" ಭೈರಪ್ಪ ಸಮಾಧಾನ ಹೇಳಿದ.

"ನಿನ್ನ ಬಗ್ಗೆ ತುಂಬಾ ವಿಚಾರಿಸಿದರು. ನಿನ್ನ ಶ್ರದ್ಧೆಯಿಂದ ವೃದ್ಧಾಶ್ರಮದವರಿಗೆ, ಡ್ರೈವರನಿಗೆ ಆದ ಅನುಕೂಲಗಳ ಬಗ್ಗೆ ತಿಳಿಸಿದೆ.... ತುಂಬಾ ಹೊಗಳಿದರು. ಇಂತಹ ಆಶ್ರಮಗಳಿಗೆ, ನಿನ್ನಂತಹ ಆದರ್ಶವ್ಯಕ್ತಿಗಳ ಅಗತ್ಯವಿದೆ ಅಂತ ಎಂದರು."

ಅನಂತ ಸೊಟ್ಟಗೆ ನಕ್ಕ. "ನಾನೆಂತಹ ಆದರ್ಶವ್ಯಕ್ತಿ! ನನ್ನಂತಹವರು ಹುಟ್ಟಿ ಇಲ್ಲಿಗೆ ಬರುವುದೂ ಬೇಡ.... ಮನೆ ಮಂದಿಗೆ ಬೇಡವಾದಂತಹ ವೃದ್ಧರೂ ಇಲ್ಲಿಯ ಸಂಖ್ಯೆಯನ್ನು ಬೆಳೆಸುವುದು ಬೇಡ. ಯಾವುದೋ ಒತ್ತಡದಿಂದ ಇಲ್ಲಿ ಬಂದು ಸೇರಿದವರು ನಾವುಗಳು...." ಎಂದು ತಲೆ ಕೊಡವಿಕೊಂಡಾಗ ಭೈರಪ್ಪನಿಗೆ ಅವನ ತುಮುಲ ಅರ್ಥವಾಗಿತ್ತು. ಏನೂ ತಿಳಿಯದವನಂತೆ ಅವನೊಬ್ಬನನ್ನೇ ಬಿಟ್ಟು ಅಲ್ಲಿಂದ ಸರಿದ.

ತನ್ನ ವಯಸ್ಸಾದ ತಂದೆಯನ್ನು ನೋಡಲು ವಿದೇಶದಿಂದ ನಾಲ್ಕು ವರ್ಷಗಳ ನಂತರ ಅವರ ಮಗ ಬಂದಿದ್ದ. ಸುತ್ತಲೂ ಹರಡಿದ್ದ ನಾಲ್ಕಾರು ಬ್ಯಾಗ್‌ಗಳು. ಅವರು ಭೈರಪ್ಪನನ್ನು ಕರೆದು ಮಗನಿಗೆ ಪರಿಚಯ ಮಾಡಿಸಿದರು.

"ಇಂಥ ಕೊಂಪೆಯಂತಹ ಜಾಗಕ್ಕೆ ನನ್ನನ್ನು ತಂದು ಬಿಟ್ಟೆ ಅಂತ ನಿನ್ನನ್ನು ಎಷ್ಟೋ ಸಲ ಬೈದುಕೊಂಡಿದ್ದೆ. ಆದರೆ ಈಗ ಇದೇ ಸರಿ ಅಂತ

ಅನ್ನಿಸ್ತಿದೆ. ಈಗ ನಿನ್ನ ಕರ್ತವ್ಯ ಅಂತ ನಾಲ್ಕು ವರ್ಷಗಳ ನಂತರ, ಬೇಡವಾದ ದ್ದನ್ನೆಲ್ಲಾ ತಂದುಕೊಟ್ಟು ಮಾತನಾಡಿಸ್ತಿದೀಯ. ಪಾಪ ನೀನಗೆ ಸಮಯ ಹಣ ಎಲ್ಲಾ ವ್ಯರ್ಥ.... ನನಗೋಸ್ಕರ ಇನ್ನು ಮೇಲೆ ನೀನು ಬರುವುದು ಬೇಡ. ತಮ್ಮನಂತಿರುವ ಈ ಭೈರಪ್ಪ ಇದಾರೆ, ಮಗನಿಗಿಂತ ಹೆಚ್ಚಾಗಿರುವ ಅನಂತ ಇದಾನೆ... ಅನಂತ ಎಲ್ಲಿ ಭೈರಪ್ಪಾ? ಅವನನ್ನು ಕರೀತೀರಾ?

"ಲೈಬ್ರರೀಲಿ ಇದ್ದ.... ಅದ್ಸರಿ. ಅಪರೂಪಕ್ಕೆ ಮಗ ಬಂದರೆ ನೀವು ಹೀಗಾ ಮಾತಾಡುವುದು? ಬಿಡಿ."

"ನಾನೇನು ತಪ್ಪು ಹೇಳಿದೆ? ಅರ್ಧಗಂಟೆ ಕಳೆದಿಲ್ಲ. ಆಗಲೇ ವಾಪಸ್ಸು ಹೊರಟಿದಾನೆ... ಒಂದು ರಾತ್ರಿ ನನ್ನೊಡನೆ ಕಳೆಯುವ ವ್ಯವಧಾನವಿಲ್ಲ ಇವನಿಗೆ...ಇವನು ತಂದು ಕೊಡುವ ಬಟ್ಟೆಬರೆ ನನಗೇಕೆ? ಅದನ್ನು ಉಟ್ಟು ನಾನು ಹೊರಗೆಲ್ಲಿ ತಿರುಗಾಡಬೇಕು? ನೀವೇ ಹೇಳಿ"

"ನಾನೇನು ಮಾಡಲಿ? ನನ್ನನ್ನು ಅಮೇರಿಕಾಕ್ಕೆ ನೀವು ಒಪ್ಪಿಯೇ ಕಳಿಸಿದ್ದು, ಈಗ ಹೀಗಾಡ್ತೀರಿ! ನನಗೂ ವಯಸ್ಸಾದ ಮೇಲೆ ನಾನು ಈ ವೃದ್ಧಾಶ್ರಮಕ್ಕೆ ಬಂದು ಸೇರುತ್ತೀನಿ. ಆಗ ಉಳಿದ ಆಯಸ್ಸನ್ನೆಲ್ಲಾ ಹಗಲೂ ರಾತ್ರಿ ಒಟ್ಟಿಗೇ ಕಳೆಯೋಣ..."

"ಹುಚ್ಚಪ್ಪಾ... ನೀನು ಇಲ್ಲಿಗೆ ಬಂದು ಸೇರುವವರೆಗೆ ನಾನು ಬದುಕಿರು ತ್ತೀನಿ ಅಂತ ಅಂದ್ಕೊಂಡ್ಯಾ? ಅದಿರಲಿ, ನಿನಗೆ ಇಂತಹ ಪರಿಸ್ಥಿತಿ ಬರದಿರಲಿ ಅಂತ ಹಾರೈಸ್ತೀನಿ... ಹೋಗು... ಈಗ ಹೊರಟು ಹೋಗು..."

"ನೋಡಿ, ಭೈರಪ್ಪನವರೇ ನನ್ನ ತಪ್ಪೇನಿದೆ ಅಂತ ಹೀಗಾಡ್ತಾರೆ? ಈಗಲೂ ವಾಪಸ್ಸು ಬಾ ಅಂದರೆ ಬಂದು ಬಿಡ್ತೀನಿ..."

"ಬೇಡಪ್ಪಾ ಬೇಡ. ನನಗೋಸ್ಕರ ನೀನು ಬರಬೇಡ. ನಿನ್ನ ಹೆಂಡತಿ ಮಕ್ಕಳು ನಿನ್ನನ್ನು ಸುಮ್ಮನೆ ಬಿಡ್ತಾರಾ? ನಾನು ಇಲ್ಲಿ ಹಾಯಾಗಿದೀನಿ, ದೂರ ದೂರವಿದ್ದೇ ಹಿತವಾಗಿರೋಣ. ಮೊದಲಿನ ಆ ಅನುಬಂಧ ಮತ್ತೆ ಬರಲು ಸಾಧ್ಯವಿಲ್ಲ... ಖಂಡಿತಾ ಸಾಧ್ಯವಿಲ್ಲ"

ಮಗ ಹೊರಟು ಹೋದಮೇಲೆ ಆತ ಭೈರಪ್ಪನ ಕೈ ಹಿಡಿದು ಗಳ ಗಳನೆ ಅತ್ತಿದ್ದರು. ಭೈರಪ್ಪನಿಗೂ ದುಃಖವುಂಟಾಗಿತ್ತು. ನಡೆದ ಮಾತುಕತೆಗಳನ್ನೆಲ್ಲ ಅನಂತನಿಗೆ ತಿಳಿಸಿದಾಗ ಅವನಿಗೂ ಕೆಡುಕೆನಿಸಿತ್ತು.

ಪ್ರಪಂಚದ ವ್ಯಾಮೋಹ, ಈ ಸಂಬಂಧ, ಅಷ್ಟು ಬೇಗ ಕಳಚುವುದಿಲ್ಲ. ವಯಸ್ಸಾದವರು ಹೀಗೆ ಆಡಿದರೆ, ಪಾಪ, ನೊಂದವನು ಎಂದು ಕನಿಕರಿಸುತ್ತಾರೆ. ಅದೇ ನನ್ನಂತಹವನು ಆಡಿದರೆ ಬರೀ ಢೋಂಗಿ ಅಂತ ಅಂದುಕೊಳ್ಳಬಹು ದೇನೋ...? ಅಥವಾ ಏನಾದರೂ ಕತೆ ಕಟ್ಟಬಹುದೇನೋ... ಒಟ್ಟಿನಲ್ಲಿ ನನ್ನ

ಈ ವಯಸ್ಸಿಗೆ ಬೇಕಿರಲಿ, ಬೇಡವಾಗಿರಲಿ, ವೈರಾಗ್ಯವನ್ನು ತಂದುಕೊಳ್ಳಬೇಕಾಗಿದೆ.

ವೈರಾಗ್ಯದಿಂದಿರು ಎಂದು ತನಗೆ ಯಾರೂ ಉಪದೇಶ ಮಾಡಿಲ್ಲ, ಆದರೂ ತಾನೇಕೆ ಹೀಗೆ ಇರಬೇಕು? ಇಲ್ಲಿಂದ ಹೊರಕ್ಕೆ ಹೋಗಿ ಮತ್ತೆ ಆ ಪ್ರಪಂಚದಲ್ಲಿ ಬದುಕುವ ಧೈರ್ಯ ನನಗಿಲ್ಲವೆ? ಒಂದು ಸಲ ನಡೆದದ್ದೇ ಮತ್ತೆ ಮತ್ತೆ ಅನುಭವಕ್ಕೆ ಬಂದೀತು ಎಂಬ ಹೆದರಿಕೆಯೇ?.... ಈ ಕಾರಣ ದಿಂದಲೋ ಏನೋ...ಏನು ಮಾತನಾಡಲೂ ನನ್ನ ನಾಲಿಗೆ ತಡೆಯುತ್ತದೆ. ಮನಸ್ಸು ಹಿಂಜರಿಯುತ್ತದೆ.

ಈಗ ಈ ಆಶ್ರಮದಿಂದ ದೂರ ಎಲ್ಲಿಗೆ ಬೇಕಾದರೂ ಹೋಗಿ ನನ್ನ ಪಾಡಿಗೆ ನಾನು ಇರಬಹುದು. ನನಗೆ ಯಾರ ಅಡ್ಡಿ ಆತಂಕಗಳಿಲ್ಲ. ಸ್ವೇಚ್ಛೆಯಿಂದ ನನ್ನ ಮನಸ್ಸಿಗೆ ಬಂದಂತೆ ಇರಬಹುದು. ಆದರೆ ನನಗೆ ಆ ಆಸೆಯೇ ಆಗುತ್ತಿಲ್ಲ. ಏಕೆ? ಇದು ವೈರಾಗ್ಯವಂತೂ ಅಲ್ಲ.... ಹೆದರಿಕೆಯೇ? ಯಾರ ಹೆದರಿಕೆ? ಗೋಪಾಲನಂತಹವನ, ಸುಗುಣಳಂತಹವಳ ಹೆದರಿಕೆಯೆ?.... ಹೆದರಿಕೆಯೂ ಅಲ್ಲ, ನಾನೇಕೆ ಹೆದರಬೇಕು? ಆದರೆ ಅದಕ್ಕೂ ಮೀರಿದ ಒಂದು ಸ್ಥಿತಿ ನನ್ನನ್ನು ತಡೆಯುತ್ತಿದೆ. ಅದೇನಿರಬಹುದು? ಯಾವುದೋ ಒಂದು ತರಹದ ವಿಶೇಷ ಸ್ಥಿತಿ ನನ್ನಲ್ಲಿ ಬೆಳೆಯುತ್ತಿದೆ. ಅದೇನೆಂದು ನನಗೆ ತಿಳಿಯುತ್ತಿಲ್ಲ.... ನನಗೆ ತಿಳಿಸುವವರ್ಯಾರು?... ಇಂತಹ ಬದಲಾವಣೆಗಳನ್ನು ತಾಯಿಯಾದವಳು ಬೇಗ ಗುರುತಿಸುತ್ತಾಳೆ... ಅವಳು ಇಂದು ನನ್ನ ಬಳಿಯಲ್ಲಿ ಇದ್ದಿದ್ದರೇ...

ಅಮ್ಮನ ಕೈತುತ್ತು ತಿಂದು, ಅವಳ ಮಡಿಲಲ್ಲಿ ಬೆಳೆದಿದ್ದರಿಂದಲೇ ನನಗೀ ವಿಶೇಷ ಅನುಭವವುಂಟಾಗುತ್ತಿರುವುದು. ಅವಳು ನಾನು ಒಬ್ಬ ಸತ್ಪ್ರಜೆಯಾಗಿ ಬಾಳಬೇಕೆಂಬ ಆಸೆಯಿಂದ ಬೆಳೆಸಿದಳಲ್ಲವೇ...? ಆ ಆಸೆಗೆ ನಾನು ಒಂದು ರೂಪವನ್ನು ಕೊಡಬೇಕು. ನಾನು ಒಬ್ಬ ಸದ್ಭಾವನೆಗಳನ್ನುಳ್ಳ ಮನುಷ್ಯನಾಗಬೇಕು.... ಅಮ್ಮನ ಈ ಆಸೆಗಳನ್ನು ಪೂರೈಸಬೇಕು. ಅಮ್ಮನೇ ಮೊದಲ ಗುರು... ಮನೆಯೇ ಮೊದಲ ವಿದ್ಯಾಲಯ.

ಆ ಮನೆಯಿಂದ ಹೊರಬೀಳುವವರೆಗೂ ಆ ಮನೆಯೇ ನನಗೆ ಸರ್ವಸ್ವವಾಗಿತ್ತು. ನನ್ನನ್ನು ಒಬ್ಬ ಅರ್ಹವ್ಯಕ್ತಿಯನ್ನಾಗಿ ಮಾಡಿದ್ದು ಆ ಮನೆ...ಈ ದಿನ ನಾನೊಬ್ಬ ಯೋಗ್ಯ ವ್ಯಕ್ತಿಯಾಗಿದ್ದರೆ ಹಾಗೆ ಮಾಡಿದ್ದು ಆ ಮನೆ.... ನನ್ನ ಆದರ್ಶಗಳಿಗೆ ಆ ಮನೆಯೇ ಅಡಿಗಲ್ಲಾಗಬೇಕು...

ಹೌದು... ಗೋಪಾಲ ನನಗೆ ದ್ರೋಹವನ್ನೇ ಮಾಡಿದ್ದರೂ, ನಾನು ಬೆಳೆದು ವಿದ್ಯಾವಂತನಾಗಲು ಕಾರಣನಾದ.... ಆ ಋಣ ನನ್ನ ಮೇಲಿದೆ. ತನ್ನ ಸ್ವಾರ್ಥದಿಂದ, ನನ್ನ ಬಾಳನ್ನು ಹಾಳು ಮಾಡಲು ಹವಣಿಸಿದ ವ್ಯಕ್ತಿ

ಅವನಾದರೂ, ಲಾಭವಾದದ್ದು ನನಗೇ.... ಇಲ್ಲದಿದ್ದರೆ, ಆ ಮನೆಯಿಂದ ಹೊರಬಂದು, ಈ ಆಶ್ರಮವನ್ನು ಸೇರಿ ನನ್ನನ್ನು ನಾನು ಅರಿತುಕೊಳ್ಳಲು ಸಾಧ್ಯವಿತ್ತೇ!...?

ಎಲ್ಲರಂತೆ ನಾನೂ ಒಬ್ಬನಾಗಿ, ನನ್ನ ಸಂಸಾರ, ನನ್ನ ಸಂಪಾದನೆಗಳಲ್ಲಿ ಕಾಲವ್ಯಯ ಮಾಡುತ್ತಿದ್ದೆ. ಒಂದು ಒಳ್ಳೆಯ ಗ್ರಂಥವನ್ನು ಓದುವುದಿರಲಿ, ಕಣ್ಣೆತ್ತಿ ಸಹ ನೋಡುತ್ತಿರಲಿಲ್ಲ. ಇನ್ನೂ ಈ ಅಸಹಾಯಕ ವೃದ್ಧರನ್ನಾಗಲೀ, ಈ ಅನಾಥ ಮಕ್ಕಳನ್ನು ನೋಡಲೆಂದು ನಾನು ಖಂಡಿತಾ ಇಲ್ಲಿಗೆ ಬರುತ್ತಿರಲಿಲ್ಲ. "ಆದದ್ದೆಲ್ಲಾ ಒಳಿತೇ ಆಯಿತು..." ಎಂದು ನವಕೋಟಿ ನಾರಾಯಣನು, ಪುರಂದರದಾಸರಾಗಿ ಹಾಡಿದಂತೇ...ನಾನು ಹಾಡಬೇಕು.

ಹಾಗಾದರೆ ನಾನು ಈಗ ಎಲ್ಲವನ್ನು ಮೀರಿದ ಜ್ಞಾನಿಯೇ....ಅಥವಾ ನಾನೇ ಜ್ಞಾನಿ ಎಂದುಕೊಂಡ ಅಜ್ಞಾನಿಯೇ... ಅವಿವೇಕಿಯೇ... ಹಾಗಾದರೆ ನಾನ್ಯಾರೂ? ನನ್ನ ಅಸ್ಥಿತ್ವವೇನು?

'ನಾನು' ಎನ್ನುವುದನ್ನು ಬಿಟ್ಟರೆ, ಮೋಕ್ಷ ಸಿಗುತ್ತದೆ ಎಂದರು ದಾಸರು, ಆ ಮೋಕ್ಷ ಎಲ್ಲಿ ಸಿಗುತ್ತದೆ? ಸ್ವರ್ಗದಲ್ಲೇ? ಹಾಗಾದರೆ ಸ್ವರ್ಗ ಎಂದರೇನು? ಮೋಕ್ಷ ಸ್ವರ್ಗದಲ್ಲಿ ಸಿಗುವುದಾದರೆ, ಇಲ್ಲಿ ಭೂಲೋಕದಲ್ಲಿ ಸಿಗುವುದು ಏನು? ಹಾಗಾದರೆ ಮನುಷ್ಯ ಈ ಲೋಕಕ್ಕೆ ಹುಟ್ಟಿ ಬರುವುದು ಏಕೆ? ಇಲ್ಲಿ ಹುಟ್ಟಿದವನು ಕಷ್ಟಪಟ್ಟು ಮೋಕ್ಷವನ್ನು ಪಡೆಯುವುದಾದರೆ...ಸುಖ ಯಾವುದು? ಕಷ್ಟ ಪಡದಿದ್ದರೆ ಸುಖವಿಲ್ಲವೇ?

ಐಹಿಕ ಸುಖಗಳನ್ನು ಅನುಭವಿಸಿದವನನ್ನು ಸುಖ ಪುರುಷ ಎನ್ನುತ್ತಾರೆ. ಹಾಗಾದರೆ ಕಷ್ಟಪಟ್ಟು ಸುಖವನ್ನು ಬಿಟ್ಟು ಮೋಕ್ಷವನ್ನೇಕೆ ಪಡೆಯಬೇಕು! ಕರ್ಮ ಎಂದರೇನು! ಕಷ್ಟ ಪಡುವುದೆ?

ನೋಡುವವರ ಕಣ್ಣಿಗೆ, ಅನುಭವಿಸುವವರ ಮನಸ್ಸಿಗೆ ಐಹಿಕ ಸುಖವೇ ಪರಮ ಸುಖ. ಆದರೆ ಆ ಸುಖಗಳನ್ನು ಅನುಭವಿಸಲಾಗದವರು ಕಷ್ಟಗಳನ್ನು ಅನುಭವಿಸುತ್ತಾರೆ. ಹಾಗಾದರೆ ಅವರಿಗೆ ಸುಲಭವಾಗಿ ಮೋಕ್ಷವೇಕೆ ಸಿಗುವು ದಿಲ್ಲ? ಸುಖ ಕಷ್ಟ ಎರಡನ್ನೂ ವಿಧಿಸುವವನು ಆ ಭಗವಂತನೇ ಅಲ್ಲವೆ? ಅವನೇಕೆ ಎಲ್ಲರಿಗೂ ಸುಲಭವಾಗಿ ಮೋಕ್ಷದ ದಾರಿಯನ್ನು ತೋರುವುದಿಲ್ಲ... ಇದು ಪೂರ್ವಾರ್ಜಿತ ಕರ್ಮವೇ? ಅಥವಾ ಭಗವಂತನ ಮಾಯೆಯೇ?

ಒಬ್ಬನಂತೆ ಇನ್ನೊಬ್ಬನಿಲ್ಲ. ಹಣ, ಗುಣ, ಆಸ್ತಿ ಅಂತಸ್ತು, ರೂಪ ವಿದ್ಯೆ ಎಲ್ಲದರಲ್ಲೂ ಒಬ್ಬನಿದ್ದಂತೆ ಇನ್ನೊಬ್ಬನಿರುವುದಿಲ್ಲ.... ಐಹಿಕ ಸುಖಕ್ಕೆ ಪೈಪೋಟಿ ನಡೆಸಿ ಜನ ಅದನ್ನು ಪಡೆಯಲು ಇಚ್ಛಿಸುತ್ತಾರೆ. ಆದರೆ ಕಷ್ಟಕ್ಕೇ...? ಒಬ್ಬನಂತೆ, ಇನ್ನೊಬ್ಬ ಕಷ್ಟವನ್ನನುಭವಿಸಲು ಇಚ್ಛಿಸುವುದಿಲ್ಲ ಅಥವಾ

ಕಷ್ಟದಲ್ಲಿರುವವನಿಗೆ ಸಹಾಯ ಮಾಡಲು ಮನಸ್ಸಿರುವುದಿಲ್ಲ... ಅಂತಹ ಸಮಯದಲ್ಲಿ ಸ್ವಾರ್ಥಿಗಳಾಗಿ ಬಿಡುತ್ತಾರೆ. ಸದ್ಭಾವನೆ ಅವರಲ್ಲಿ ಮೂಡುವುದಿಲ್ಲ.

ಹಾಗಾದರೆ ನನ್ನಲ್ಲಿ ಅಂತಹ ಭಾವನೆ ಮೂಡಿದೆಯೆ! ಅದನ್ನು ನನಗೆ ತಿಳಿಸುವವರು ಯಾರು?...

ವೃದ್ಧರನ್ನು ನೋಡಿಕೊಳ್ಳಲು ಆಶ್ರಮದಲ್ಲಿ ಎಲ್ಲಾ ಸೌಲಭ್ಯಗಳಿವೆ. ಅದನ್ನು ಅವರು ಹಣ ಕೊಟ್ಟು ಪಡೆಯುತ್ತಾರೆ. ಅದೇ ಈ ಅನಾಥ ಮಕ್ಕಳು? ತಾವು ಈ ಪ್ರಪಂಚಕ್ಕೆ ಹುಟ್ಟಿ ಬಂದುದು ಹೇಗೆ, ಯಾಕೆ? ಎಂಬ ಅರಿವಿಲ್ಲದೇ ಬೆಳೆಯುತ್ತವೆ. ಹಸಿದಾಗ ಊಟ, ಮಲಗಲು ಒಂದಿಷ್ಟು ಜಾಗ... ಅದಷ್ಟೇ ಅವುಗಳ ಬೇಡಿಕೆ. ಇದೂ ಸಿಗದಿದ್ದರೆ ಇವುಗಳ ಪರಿಸ್ಥಿತಿ ಏನು! ತಮ್ಮ ಅಕೃತ್ಯದಿಂದ ಜನಿಸಿದ ಮಕ್ಕಳನ್ನು ಅವುಗಳ ಕರ್ಮ ಎಂದು ತಳ್ಳಿ, ತಮ್ಮ ಸುಖವನ್ನರಸಿ, ಹೋಗುವ ಆ ಹೀನ ತಂದೆ ತಾಯಿಗಳಿಗೆ ಶಿಕ್ಷೆಯೇ ಇಲ್ಲವೆ? ಸಮಾಜ ಹೆದರಿದೆಯೆ?

ಬೇಡದ ಮಗುವನ್ನು ತಾಯಿ ಅನಾದರಣೆಯಿಂದ ಬಿಸಾಡಿ ಹೋದರೂ, ಸಮಾಜ, ಅದನ್ನು ಉದ್ಧಾರ ಮಾಡಬೇಕೆಂದು ನೀತಿ ಹೇಳುತ್ತದೆ. ಅದು ಕರ್ತವ್ಯ ಎಂದು ಹೇಳುತ್ತದೆ ಕರ್ತವ್ಯವನ್ನು ಮರೆತ ತಂದೆ ತಾಯಿಗಳ ಕೃತ್ಯವನ್ನು ಸರಿ ಮಾಡುವಂತೆ, ಸಮಾಜ ಉದ್ಧಾರ ಮಾಡಲು ಸಿದ್ಧವಾಗುತ್ತದೆ. ಅದು ಸರಿಯೆ! ಸಮಾಜದ ಅನಾದರಣೆಗೆ ಆ ಮಕ್ಕಳು ಗುರಿಯಾದರೆ, ಆ ಅವಿವೇಕಿ ತಂದೆ ತಾಯಿಗಳಿಗೆ ಬುದ್ದಿ ಬರಬಹುದೆ! ಅಥವಾ ಅವರಿಗೆ ತಿಳುವಳಿಕೆ ಹೇಳುವವರ್ಯಾರು! ಸಮಾಜಕ್ಕೆ ಹೆದರಿ ಅನೀತಿಯನ್ನು ಹರಡುವ ಅವರ ಪಾಪ ತಟ್ಟುವುದು ಈ ಅನಾಥ ಮಕ್ಕಳಿಗೆ ತಾನೆ...ಅದೇಕೆ ಅವರಿಗೆ ಅರ್ಥವಾಗುವುದಿಲ್ಲ?

ಸ್ವೇಚ್ಛೆಯಾಗಿ ಓಡಾಡಿ, ತಮ್ಮ ಕಾಮವನ್ನು ತಣಿಸಿಕೊಳ್ಳುವಾಗ ಇಂತಹ ಒಂದು ಪಾಪಕೃತ್ಯ ತಮ್ಮಿಂದ ಜರುಗಲಿದೆ ಎಂದೇಕೆ ಅರ್ಥವಾಗುವುದಿಲ್ಲ! ಹಾಗಾದರೆ ಕಾಮ ಅಷ್ಟು ಆಕರ್ಷಕವೇ... ಇಂತಹ ನೀಚಕೃತ್ಯವನ್ನು ಆಹ್ವಾನಿಸುವ ಕಾಮವನ್ನು ಮುಂದುವರೆಯಲು ಬಿಡಬಾರದು. ಅದನ್ನು ತಡೆಗಟ್ಟಬೇಕು ಆಗಲೇ ಈ ಸಮಾಜದ ಉದ್ಧಾರ, ಅನಾಥ ಮಕ್ಕಳ ಜನನ ನಿರ್ಮೂಲನ ವಾಗಬೇಕು. ಬೇಡದ ಒಂದು ಮಗು, ಸಮಾಜಕ್ಕೆ ಎಂತಹ ಭಾರಿ ಹೊರೆ ಎಂದು ಅವರಿಗೆ ತಿಳಿಯದು... ತಾನು ಹುಟ್ಟಲಿದ್ದೇನೆ ಎಂಬ ಅರಿವಿಲ್ಲದೇ, ಭೂಮಿಗೆ ಭಾರವಾಗಿ ಬಂದು, ಹೇಗೋ ಬೆಳೆದು, ದೊಡ್ಡವನಾದ ಮೇಲೆ ತನ್ನ ಜನ್ಮ ರಹಸ್ಯ ತಿಳಿದರೆ, ಆಗುವ ಪರಿಣಾಮ ಏನು ಎಂದು ಯಾರಿಗೂ ತಿಳಿದಿರಲಾರದು. ಮಾನಸಿಕ ಹಿಂಸೆಗಳಿಗೆ ಗುರಿಯಾಗಿ, ಯಾವ ಯಾವ

ಅಕೃತ್ಯಗಳಿಗೆ ನಾಂದಿಯಾಗುತ್ತಾನೋ...? ತನಗೆ ಜನ್ಮ ಕೊಟ್ಟ ಅನಾಮಿಕ ತಂದೆತಾಯಿಗಳನ್ನು ಬೈಯದೇ ಇರುತ್ತಾನೆಯೇ? ಅಂತಹ ಪ್ರೇಮಿಗಳನ್ನು ಕಂಡಲ್ಲಿ ಗುಂಡಿಕ್ಕಿ ಕೊಲ್ಲುವ ಪ್ರವೃತ್ತಿ ಬೆಳೆಯಬಹುದು ಅಥವಾ ತಾನೂ ಅದೇ ಹಾದಿಯಲ್ಲಿ ಮುಂದುವರೆದು ವಂಶಾವಳಿಯನ್ನು ಬೆಳೆಸಬಹುದು.... ಹೀಗೆ ಮುಂದುವರೆಯಬಾರದು. ಇದನ್ನು ತಡೆಯಬೇಕು, ಜನರಲ್ಲಿ ಅರಿವನ್ನು ಮೂಡಿಸಬೇಕು.

ಸಧ್ಯಕ್ಕೆ ಈ ಆಶ್ರಮದಲ್ಲಿ ವೃದ್ಧರಿಗಾಗಲೀ, ಅನಾಥ ಮಕ್ಕಳಿಗಾಗಲೀ ಆ ಬಗ್ಗೆ ತಿಳಿ ಹೇಳುವ ಅವಶ್ಯಕತೆ ಇಲ್ಲ. ಹೊರಗಿನ ಜನ ಸಾಮಾನ್ಯರಿಗೆ ತಿಳುವಳಿಕೆ ಹುಟ್ಟುವಂತೆ ಮಾಡಬೇಕು... ಅದಕ್ಕೆ ಒಂದು ಉಪಾಯವಿದೆ... ಈ ವಿಷಯಕ್ಕೆ ಸಂಬಂಧಿಸಿದಂತೆ ಲೇಖನಗಳನ್ನು ಬರೆದು ಪತ್ರಿಕೆಗಳಲ್ಲಿ ಪ್ರಕಟವಾಗುವಂತೆ ಮಾಡಬೇಕು. ಜನರು ಅದನ್ನು ಓದಿ ಅರ್ಥ ಮಾಡಿಕೊಳ್ಳುವಂತಿರಬೇಕು.

ಬರೀ ಇದೊಂದೇ ವಿಷಯವಲ್ಲ, ಜನರು ಸದ್ಭಾವನೆಗಳ ಕಡೆ ಆಕರ್ಷಿತರಾಗುವಂತೆ, ಪರಿಸರ, ಪ್ರಕೃತಿ ಸೌಂದರ್ಯ, ಅದರಲ್ಲಿ ಅಡಗಿರುವ ಸಾರ, ಹುಟ್ಟು, ಸಾವು, ಬಂಧನ, ಮುಕ್ತಿ ಈ ಎಲ್ಲಾ ವಿಚಾರಗಳನ್ನು ಕುರಿತು, ಸಾಮಾಜಿಕವಾಗಿಯೂ, ವೈಜ್ಞಾನಿಕವಾಗಿಯೂ ಸಾರವತ್ತಾಗಿ ಬರೆಯಬೇಕು...ಈ ನಿರ್ಧಾರಕ್ಕೆ ಬಂದೊಡನೆ, ಬಂಧ ಮುಕ್ತನಾದಂತೆ ಅವನ ಮನಸ್ಸು ಹಗುರವಾಯಿತು.

"ಏನ್ ಅನಂತಪ್ಪಾ ಹಿಂಗೆ ಕುಂತ್ಬುಟ್ಟೆ? ನಾನು ನೋಡ್ತಾನೇ ಇದೀನಿ ಧ್ಯಾನ ಮಾಡ್ತಿದ್ದ ಹಾಗಿತ್ತು..."

"ಹೌದು ಭೈರಪ್ಪಾ... ಇದು ಒಂದು ತರಹ ಧ್ಯಾನವೇ..." ಎನ್ನುತ್ತಾ ತನ್ನ ಮನದಲ್ಲಿ ಮೂಡಿದ ವಿಚಾರಗಳನ್ನೂ ವಿವರವಾಗಿ ತಿಳಿಸಿದ. ಭೈರಪ್ಪ ಖುಷಿಗೊಂಡ. ಹೌದು, ಇದುವರೆಗೂ ಯಾರೂ ಈ ಬಗ್ಗೆ ಮಾತನ್ನು ಸಹ ಆಡಿರಲಿಲ್ಲ, ನೀನು ಹೀಗೆ ಮಾಡಿದರೆ ನಿನ್ನ ಹೆಸರು ಮುಂದೆ ಬರುತ್ತೆ"

"ನನ್ನ ಹೆಸರು ಮುಂದೆ ಬರಲಿ ಅಂತನ್ನುವ ಆಸೆ ನನಗಿಲ್ಲ ಭೈರಪ್ಪಾ...ನಿಮಗಿಷ್ಟವಿದ್ದರೆ ಹೇಳಿ, ನಿಮ್ಮ ಹೆಸರ್ನಲ್ಲೇ ಬರೆಸೋಣ..."

"ಏಯ್ ಬುಡಪ್ಪಾ...ನನಗೆ ಓದುಕ್ಕೆ ಬರೆಯುಕ್ಕೆ ಎಲ್ಲಿ ಬರ್ತದೆ?"

"ಯಾಕೆ ಕಲಿಯಲಿಲ್ಲ? ನಾನು ಹೇಳಿಕೊಡ್ತೀನಿ, ಕಲೀತೀರಾ?"

"ನನಗೆ ಈ ವಯಸ್ಸಲ್ಲಿ ಅದೆಲ್ಲಾ ಯಾಕೆ?"

"ನೀವು ಏನೇ ಹೇಳಿ... ನಾನು ಬಿಡೋಲ್ಲ... ನಾನು ಇಲ್ಲಿಗೆ ಬಂದು ಸೇರಿದ ಹೊಸತರಲ್ಲಿ ನೀವು ಎಷ್ಟು ಸಹಾಯ ಮಾಡಿದ್ರಿ... ಅದಕ್ಕೆ ಬದಲಾಗಿ

ನಾನು ಅಕ್ಷರವನ್ನು ಕಲಿಸಲೇ ಬೇಕು... ದಯವಿಟ್ಟು ಬೇಡ ಅನ್ನಬೇಡಿ"

"ಸರಿಯಪ್ಪಾ... ಆದರೆ ನಾನು ಸ್ವಲ್ಪ ಮೊದ್ದು, ಎಮ್ಮೆ ಹಾಲು ಕುಡಿದು ಮೊದ್ದುಮಣಿಯಾಗಿ ಬಿಟ್ಟಿದೀನಿ... ನನಗೆ ಬರದಿದ್ದರೆ ಬೈಯಬಾರದು, ಹೊಡೆಯಬಾರದು."

ಭೈರಪ್ಪ ತನ್ನ ಕಿವಿಗಳನ್ನು ಹಿಡಿದುಕೊಂಡು ನಕ್ಕ. ಆ ರಾತ್ರಿಯಿಂದಲೇ ಭೈರಪ್ಪನ ಅಕ್ಷರಾಭ್ಯಾಸ ಪ್ರಾರಂಭವಾಯಿತು.

"ಅಲ್ಲ ಅನಂತಪ್ಪ.... ನಿಮಗೆ ಅನ್ನಿಸಿದ ಹಂಗೆ, ಇನ್ಯಾರಿಗೂ ಅನ್ನಿಸಲಿಲ್ಲವಲ್ಲ ಯಾಕೆ ಅಂತೀನಿ..."

"ಯಾಕೇಂದ್ರೆ ಅವರ್ಯಾರೂ ಅನಂತನೂ ಅಲ್ಲ, ಅನಾಥನೂ ಅಲ್ಲ"

"ಇಲ್ಲಿಗೆ ಬಂದ ಮೇಲೂ ನೀವು ಅನಾಥಾನಾ? ನಾವೆಲ್ಲಾ ಇಲ್ವಾ!" ಎನ್ನುತ್ತಾ ಭೈರಪ್ಪ ಅ, ಆ, ತಿದ್ದಿದ.

ಭೈರಪ್ಪ ಅಕ್ಷರಗಳನ್ನು ಕಲಿಯುವ ವಿಷಯ ಸ್ವಾಮೀಜಿಗೆ ತಿಳಿದಾಗ ಅವರು ಅಚ್ಚರಿಗೊಂಡರು.

"ದನ ಮೇಯಿಸುತ್ತಿದ್ದ ಭೈರಪ್ಪ ಅಕ್ಷರ ಕಲಿತು ಕಾಳಿದಾಸ" ನಾಗುತ್ತಾನೆಂದು ವೃದ್ಧರೊಬ್ಬರು ತಮಾಷೆ ಮಾಡಿದರು.

"ಹುಂ, ಅದೊಂದಾಗಿ ಬಿಟ್ರೆ ನನ್ನ ಜೀವನ ಸಾರ್ಥಕವಾಗಿ ಹೋಯ್ತು" ಎಂದು ಭೈರಪ್ಪ ತನ್ನನ್ನು ತಾನು ಹೊಗಳಿಕೊಂಡ.

ಅನಂತ, ತಾನು ಲೇಖನಗಳನ್ನು ಬರೆಯುವ ಬಗ್ಗೆ ಸ್ವಾಮೀಜಿಗೆ ತಿಳಿಸಿದಾಗ, ಅವರು ಸಂತಸಗೊಂಡರು. "ಜೈ ಜಗನ್ನಾಥ" ಎಂದು ನುಡಿದು, ಅನಂತನನ್ನು ಹರಸಿದರು. ಸ್ವಾಮೀಜಿಯ ಅನುಯಾಯಿಗಳಲ್ಲಿ ಒಂದಿಬ್ಬರಿಗೆ ಅಸೂಯೆಯಾಗಿರಬಹುದು. ಆದರೆ ಯಾರೂ ಪ್ರಕಟಗೊಳಿಸಲಿಲ್ಲ.

ಸ್ವಾಮೀಜಿಯೇ ಆಶ್ರಮದ ಮುಖ್ಯಸ್ಥರಾದರೂ, ವಹಿವಾಟುಗಳೆಲ್ಲ ಸಹಾಯಕ ಸಿಬ್ಬಂದಿವರ್ಗದವರುಗಳಿಂದ ನಡೆಯುತ್ತಿದ್ದಿತು. ಆದರೆ ಯಾರೂ ಅವರ ಅಪ್ಪಣೆಯಿಲ್ಲದೇ, ಅವರಿಗೆ ತಿಳಿಸದೇ ಯಾವ ಕೆಲಸವನ್ನು ಮಾಡುತ್ತಿರಲಿಲ್ಲ. ಅವರಿಗೆ ಎಲ್ಲರೂ ಗೌರವವನ್ನು ಕೊಡುತ್ತಿದ್ದರು. ಅದಕ್ಕೆ ಅವರ ಸ್ವಭಾವವೇ ಕಾರಣ. ಅವರು ಎಲ್ಲರನ್ನು ಸಮಾನ ದೃಷ್ಟಿಯಿಂದ ನೋಡುತ್ತಿದ್ದರು. ಯಾರಲ್ಲೂ ಭೇದಭಾವವರಿಲಿಲ್ಲ.

ಹೊಸದಾಗಿ ಬಂದ ಅನಂತನ ಬಗ್ಗೆ ಆದರ, ಅಕ್ಕರೆ, ಸದರ, ಅದಕ್ಕೆ ಬಹುಶಃ ಅವನು ಚಿಕ್ಕವಯಸ್ಸಿನವನು ಎನ್ನುವುದು. ವಿದ್ಯಾವಂತ ತರುಣ ಸಿಗಬೇಕು ಎನ್ನುವುದು ಅವರ ಇಚ್ಛೆ. ಅವನು ಬಂದು ಸೇರಿದಾಗಿನಿಂದ

ಅವನ ಚಲನವಲನ, ನಡೆ ನುಡಿಗಳ ಬಗ್ಗೆ ಅವನಿಗೆ ತಿಳಿಯದಂತೆ ವಿಷಯ ಸಂಗ್ರಹಿಸಿದ್ದರು. ಪ್ರತಿವಾರದ ಸಾಮೂಜಿಕ ಭಜನೆಯ ಸಮಯದಲ್ಲಿ ಕಾರ್ಯಕ್ರಮ ಮುಗಿದ ನಂತರ ಅವನೊಡನೆ ಕೆಲ ಸಮಯ ಮಾತನಾಡಿ, ಅವನ ಮನಸ್ಸಿನಲ್ಲೇನಿದೆ ಎಂದು ತಿಳಿಯಲು ಪ್ರಯತ್ನಿಸುತ್ತಿದ್ದರು. ತನ್ನ ಮನಸ್ಸಿಗಾದ ಆಘಾತದಿಂದ ಹೊರಬಂದು, ಹಳೆಯದನ್ನು ಮರೆಯಲು ಪ್ರಯತ್ನಿಸಿದರೂ, ಅವನಿಂದ ಅದು ಸಾಧ್ಯವಾಗುತ್ತಿಲ್ಲವೆನ್ನುವುದು ಅರಿವಾಗಿತ್ತು...ಆದರೆ ಆ ಬಗ್ಗೆ ಅವನಿಗೆ ಉಪದೇಶ ಮಾಡಲಾರರು. ಕ್ರಮೇಣ ತಾನಾಗಿಯೇ ಮನಸ್ಸು ಸ್ಥಿಮಿತಕ್ಕೆ ಬರುತ್ತದೆ ಎಂಬುದನ್ನು ಬಲ್ಲರು.

ಏನು ಕಾರಣವೋ, ಅವನು ಆದಷ್ಟು ತಮ್ಮ ಸಮೀಪದಲ್ಲಿರುವಂತೆ ನೇಮಿಸಿಕೊಂಡಿದ್ದರು. ಈಗ ಅವನು ಇಷ್ಟು ಚಿಂತೆ ಮಾಡಿ, ಲೇಖನಗಳನ್ನು ಬರೆದು ಪ್ರಕಟಿಸುತ್ತೇನೆಂದು ನುಡಿದಾಗ ಹೇಗೆ ಬೇಡವೆಂದಾರು! ಅದರಿಂದ ಯಾರಿಗೂ ತೊಂದರೆ ಇಲ್ಲ, ಜನರಿಗೆ ಅನುಕೂಲವಾಗು ವಂತಹುದೇ.... ಇದರಿಂದ ತಮ್ಮ ಆಶ್ರಮದ ಹೆಸರು ಶಾಶ್ವತವಾಗಿ ಉಳಿಯುತ್ತದೆ ಎಂದು ಗೊತ್ತು... ಮುಂದೆ ಜಗನ್ನಾಥನ ಇಚ್ಛೆ ಇದ್ದರೆ, ಈ ಆಶ್ರಮಕ್ಕೆ ಉತ್ತರಾಧಿಕಾರಿ ಯಾಗಿ ಈ ಅನಂತನೇ ಮುಂದುವರೆಯಲಿ...

ಆದರೆ ಆ ಬಗ್ಗೆ ಈಗಲಿಂದ ಯೋಚಿಸಲು ಆಗುವುದಿಲ್ಲ... ಅನಂತ ಅತಿಥಿಯಾಗಿ ಬಂದು, ಸದಸ್ಯನಾಗಿ ಆಶ್ರಮದ ಸೇವೆ ಮಾಡುತ್ತಿದ್ದಾನೆ... ಅವನು ಮೊದಲು ಬ್ರಹ್ಮಚಾರಿಯಾಗಿ ಹತ್ತು ವರ್ಷ ಸೇವೆ ಸಲ್ಲಿಸಿದ ನಂತರ, ಸನ್ಯಾಸ ದೀಕ್ಷೆ ಪಡೆದ ನಂತರ ಆ ಆಲೋಚನೆ... ಆದರೂ ಈ ಆಲೋಚನೆ ಅವರ ಮನದಲ್ಲಿ ಆಗಲೇ ಸುಳಿದಿತ್ತು. ಆದರೆ ಅದನ್ನು ತಮ್ಮ ಅಂತರಂಗದಲ್ಲಿ ಬಚ್ಚಿಟ್ಟುಕೊಂಡಿದ್ದರು.

ಎರಡು ಮೂರು ವರ್ಷಗಳು ಕಳೆದರೂ, ಆಶ್ರಮದ ಜೀವನದ ಕ್ರಮದಲ್ಲಿ ಮಹತ್ತರವಾದ ಬದಲಾವಣೆಗಳಾಗಿರಲಿಲ್ಲ. ಒಂದಿಬ್ಬರು ವೃದ್ಧರು ವೃದ್ಧಾಶ್ರಮಕ್ಕೆ ಹೊಸದಾಗಿ ಬಂದು ಸೇರಿದ್ದರು. ಒಬ್ಬ ವೃದ್ಧರನ್ನು ಅವರ ಮಗಳು ಅಳಿಯ ಬಂದು ಕರೆದುಕೊಂಡು ಹೋಗಿದ್ದರು. ಒಬ್ಬರು ಅಲ್ಲಿಯೇ ಕಾಲವಶವಾಗಿದ್ದರು. ಅವರಿಗೆ ವಾರಸುದಾರರು ಯಾರೂ ಇಲ್ಲದ್ದರಿಂದ ಅವರ ಶವ ಸಂಸ್ಕಾರವನ್ನು ಆಶ್ರಮದಲ್ಲಿಯೇ ನೆರವೇರಿಸಿದ್ದರು. ಅವರು ತಮ್ಮ ಆಸ್ತಿಯನ್ನು ಆಶ್ರಮಕ್ಕೆ ದಾನ ಮಾಡಿದ್ದರು.

ಹೈಸ್ಕೂಲು ಮುಗಿಸಿದ್ದ ನಾಲ್ಕಾರು ಮಕ್ಕಳು ಕಾಲೇಜಿಗೆ ಸೇರಿದ್ದರು. ಇದು ಅನಾಥಾಲಯದ ಹಿರಿಮೆ. ಫೇಲಾದ ಒಂದಿಬ್ಬರು ಹುಡುಗರು ಅನಾಥಾಶ್ರಮದಿಂದ ಓಡಿ ಹೋಗಿದ್ದರು. ಪೇಪರಿನಲ್ಲಿ ಆ ಬಗ್ಗೆ ಪ್ರಕಟಣೆ

ಕೊಡಿಸಿದ್ದರೂ, ಇದುವರೆಗೂ ಅವರ ಪತ್ತೆಯಾಗಿರಲಿಲ್ಲ.

ಪುರುಷೋತ್ತಮ ತನ್ನ ಮಗನೊಂದಿಗೆ ಮತ್ತೆ ಬಂದಿರಲಿಲ್ಲ, ಏನು ಕಾರಣವೋ.... ಅನಂತನಿಗೆ ಆಗಾಗ ಅವರುಗಳ ನೆನಪು ಬರುತ್ತಿತ್ತು ಭೈರಪ್ಪ ನೊಡನೆ ಹೇಳಿಕೊಳ್ಳುತ್ತಿದ್ದ.

ಇವುಗಳ ನಡುವೆ ಒಂದು ಮಹತ್ವದ ವಿಷಯವೆಂದರೆ, ಡಾ॥ ಭೀಮಸೇನರಾಯರ ಮದುವೆ ನಡೆದಿದ್ದು, ಮೂವತ್ತೈದು ವರ್ಷಗಳು ಕಳೆದಿದ್ದರೂ, ಅವಿವಾಹಿತರಾಗಿಯೇ ಉಳಿದಿದ್ದ ಅವರನ್ನು ಅವರ ತಾಯಿ ಗೋಳಾಡಿ, ಹಸೆಮಣೆ ಏರುವಂತೆ ಮಾಡಿದ್ದು, ತನಗಿಂತ ಹತ್ತು ವರ್ಷಕ್ಕೆ ಚಿಕ್ಕವಳಾದ ತನ್ನ ಸೋದರ ಮಾವನ ಮಗಳನ್ನು ಮದುವೆಯಾದರೂ ಹೆಂಡತಿಯನ್ನು ಆಶ್ರಮಕ್ಕೆ ಕರೆತರುವಂತಿರಲಿಲ್ಲವಾದ್ದರಿಂದ, ಆಶ್ರಮದಿಂದ ಆಚೆ ಒಂದು ಮನೆ ಮಾಡಿಕೊಂಡರು. ಅವರ ಅನುಕೂಲಕ್ಕಾಗಿ ಒಂದು ಬೈಕ್ ಇತ್ತು. ಅವರ ಸಹಾಯಕನಾಗಿ ಬಂದಿದ್ದ ತರುಣ ಡಾಕ್ಟರು ಆಶ್ರಮದ ಡಿಸ್ಪೆನ್ಸರಿಯಲ್ಲಿ ವಾಸ ಮಾಡ ತೊಡಗಿದ.

ಡಾಕ್ಟರು ಯಾರನ್ನೂ ಮರೆಯದೇ ತನ್ನ ಮದುವೆಗೆ ಎಲ್ಲರಿಗೂ ಆಹ್ವಾನವಿತ್ತಿದ್ದ. ಆದರೆ ವೃದ್ಧಾಶ್ರಮದ ಕೆಲವರು ಹಿರಿಯರು, ಅನಾಥಾಶ್ರಮದ ಕೆಲ ಮಕ್ಕಳು ಹೋಗಿ ಬಂದರು. ಅನಂತ ಬರುವುದಾದರೆ ತಾನೂ ಬರುವು ದಾಗಿ ಭೈರಪ್ಪ ನುಡಿದಾಗ, ಅನಂತ ಕೆಟ್ಟ ಮುಖ ಮಾಡಿದ.

"ಈ ಒಂದು ವಿಚಾರದಲ್ಲಿ ನನ್ನನ್ನು ಬಲವಂತ ಮಾಡಬೇಡಿ." ಭೈರಪ್ಪ ತಾನೂ ಹೋಗಲಿಲ್ಲ. ಅನಂತ ವಿಚಾರಿಸಲೂ ಇಲ್ಲ, ಆದರೆ ಡಾ॥ ಭೀಮಸೇನ ತನ್ನ ಖರ್ಚಿನಲ್ಲಿ ಆಶ್ರಮದವರಿಗೆಲ್ಲರಿಗೂ ಸಿಹಿ ಊಟ ಹಾಕಿಸಿದ್ದ. ಸ್ನೇಹಿತನ ಮನಸ್ಸಿಗೆ ಅಹಿತವನ್ನುಂಟು ಮಾಡಬಾರದೆಂದು ಅನಂತ ಎಲ್ಲರೊಡನೆ ಊಟ ಮಾಡಿದ.

ಭೈರಪ್ಪ ಸುಮ್ಮನಿರಲಾರದೇ ತಮಾಷೆ ಮಾಡಿದ್ದ.

"ಅನಂತಪ್ಪಾ.... ನೀವೂ ಎಂದಾದ್ರೂ ಹಿಂಗೇ ಮದುವೆ ಮಾಡಿ ಕೊಂಡು ನಮ್ಮಿಂದ ದೂರ ಹೋಗ್ತಿರೇನೋ..."

ಅನಂತನ ಮುಖ ರಕ್ತದಿಂದ ಕಪ್ಪಾಯಿತು. ಆದರೂ ಸಾವರಿಸಿ ಕೊಂಡು ನುಡಿದಿದ್ದ.

"ಹೂಂ. ಇಲ್ಲಿಂದ ಹೋದರೂ ಹೋದೆ... ಆದರೆ ಮದುವೆ ಮಾಡಿ ಕೊಂಡು ಮಾತ್ರ ಅಲ್ಲ, ಅದು ಖಂಡಿತಾ..." ಎಂದಿದ್ದ ಅವನ ಗಂಭೀರವಾದ ಮುಖವನ್ನು ಕಂಡು ಎಲ್ಲರೂ ಪೆಚ್ಚಾದರು.

ಇಷ್ಟು ವರ್ಷಗಳ ನಂತರ ಈ ಡಾಕ್ಟರೇಕೆ ಮದುವೆಯಾದನೋ?

ತಾಯಿಯ ಮೇಲಿನ ಭಕ್ತಿಗೋ ಅಥವಾ ತನಗೆ ಸಂಗಾತಿ ಬೇಕೆಂದೋ...? ಏನಾದರೂ ಮಾಡಿಕೊಳ್ಳಲಿ ತನಗೇನು ಎಂದುಕೊಂಡ. ಆ ಗಳಿಗೆಯಲ್ಲಿ ಭೈರಪ್ಪನ ಮಾತಿನಿಂದ ರೇಗಿತ್ತಾದರೂ ಅದನ್ನೇ ದೊಡ್ಡದನ್ನಾಗಿ ಮಾಡಲಿಲ್ಲ. ನಿತ್ಯದಂತೆ ಭೈರಪ್ಪನೊಡನೆ ಮಾತನ್ನಾಡಿದ. ತಕ್ಕಮಟ್ಟಿಗೆ ಬರೆಯಲು ಓದಲು ಕಲಿತಿದ್ದ ಭೈರಪ್ಪ ಅನಂತನ ನೆಚ್ಚಿನ ಶಿಷ್ಯ, ಕಾಲ ಸರಿದಿತ್ತು.

ಒಂದು ಭಾನುವಾರ ಭಜನೆಯ ನಂತರ, ಸ್ವಾಮೀಜಿ ಹೇಳಿ ಕಳಿಸಿದಾಗ ಅನಂತ ಅನುಮಾನಿಸುತ್ತಾ ಒಳಗೆ ಬಂದ. ಪುರುಷೋತ್ತಮ ಸ್ವಾಮೀಜಿಯ ಬಳಿ ಕುಳಿತುದುದನ್ನು ಕಂಡು ಹರ್ಷದಿಂದ ಅವನ ಮುಖ ಅಗಲವಾಯಿತು, ಕಣ್ಣುಗಳು ಅರಳಿದವು.

"ಏನ್ಸಾರ್ ಹೇಗಿದೀರಿ! ಎಷ್ಟು ವರ್ಷಗಳಾದವು! ನೀವು ಬರಲೇ ಇಲ್ಲ, ಪ್ರಶಾಂತ್ ಹೇಗಿದಾನೆ!"

"ನೀವಿಬ್ಬರೂ ಮಾತನಾಡ್ತಿರಿ, ನಾನು ವೃದ್ಧಾಶ್ರಮದ ಕಡೆ ಹೋಗಿ ಬರ್ತೀನಿ" ಎಂದು ಸ್ವಾಮೀಜಿ ನುಡಿದಾಗ, ಏನೋ ವಿಶೇಷವಾದ ಮಾತಿದೆ ಎಂದು ಅನಂತ ಅರಿತ.

"ಹೇಗಿದೀಯಾ ಅನಂತ್? ಸ್ವಾಮೀಜಿ ನಿನ್ನನ್ನು ತುಂಬಾ ಹೊಗಳಿದರು"

"ಅವರು ಎಲ್ಲರನ್ನೂ ಹೊಗಳುತ್ತಾರೆ. ಅವರ ಮನಸ್ಸು ತುಂಬಾ ದೊಡ್ಡದು."

"ನಿನ್ನ ಗುಣಗಳನ್ನು ನನ್ನೆದುರಿಗೆ ಹೊಗಳಿರುವುದು.... ನನಗೆ ಸಂತೋಷವೇ... ಎಲ್ಲರ ಮೆಚ್ಚುಗೆಗೆ ಪಾತ್ರನಾಗಿರುವ ನಿನ್ನಿಂದ ನನಗೆ ಒಂದು ಕೆಲಸವಾಗಬೇಕಾಗಿದೆ..."

"ಏನಾಗಬೇಕು ಹೇಳಿ, ನನ್ನಿಂದಾಗುವುದಾದರೆ ಖಂಡಿತಾ ಮಾಡಿ ಕೊಡ್ತೀನಿ..."

"ನಿನ್ನಿಂದ ಖಂಡಿತಾ ಆಗುತ್ತದೆ, ಆದರೆ...?"

"ಹೇಳಿ... ಅನುಮಾನ ಏಕೆ?"

"ಸ್ವಾಮೀಜಿ ನಿನ್ನನ್ನು ತುಂಬಾ ಹೊಗಳಿದಾರೆ... ನಿನ್ನ ದೊಡ್ಡ ಗುಣವನ್ನು ಪರೀಕ್ಷಿಸುವ ಸಮಯ ಬಂದಿದೆ..."

"ನನಗೆ ಏನಾದರೂ ಪ್ರಶಸ್ತಿ ಕೊಡಿಸುವ ಆಸೆಯೇ ನಿಮಗೆ! ಪೀಠಿಕೆ ಚೆನ್ನಾಗಿದೆ...ಈ ಅನಾಥನಿಗೆಂತಹ ಪ್ರಶಸ್ತಿ?"

"ನಿನ್ನನ್ನು ನೀನು ಅನಾಥ ಅಂತ ಅಂದುಕೊಳ್ಳುವುದನ್ನು ಇನ್ನೂ ಮರೆತಿಲ್ವಾ! ನಿನ್ನ ಹೆಸರು ಅನಂತ... ಸಹಸ್ರಶೀರ್ಷನಂತೆ, ಆದಿ ಅಂತ್ಯ

ಇಲ್ಲದವನು ಹೇಗೆ ಅನಾಥನಾದೀಯ? ಅನಾಥ ರಕ್ಷಕ ನೀನು...!"

"ಏಕೆ ನಿಲ್ಲಿಸಿಬಿಟ್ಟಿರಿ... ಹೊಗಳಿದ್ದು ಸಾಕಾಯಿತೆ!" ಕಿರುನಗೆಯನ್ನು ತುಳುಕಿಸಿದ.

"ನಿನ್ನ ಸ್ವಾಮೀಜಿ ನಿನ್ನನ್ನು ಹೊಗಳಿದರಲ್ಲ.... ನಾನು ಒಂದೆರಡು ಮಾತನ್ನು ಸೇರಿಸಿ ಹೊಗಳಬೇಕು ಅಂತನ್ನಿಸ್ತು. ಆದರೆ ನನಗೆ ಆ ಕೆಲಸವೂ ಸರಿಯಾಗಿ ಬರುವುದಿಲ್ಲ..." ಪುರುಷೋತ್ತಮ ಮುಕ್ತವಾಗಿ ನಕ್ಕ.

"ಹೊಗಳಿದ್ದು ಸಾಕು ಬಿಡಿ... ನಾನು ಅದಕ್ಕೆಲ್ಲ ಅರ್ಹನೂ ಅಲ್ಲ ಅದೇನೋ ಕೆಲಸ ಅಂದ್ರಲ್ಲ ಅದನ್ನು ಹೇಳಿ"

"ಹೇಳ್ತೀನಿ..." ಎನ್ನುತ್ತ, ತನ್ನ ಕೈಲಿ ಮಡಿಸಿಟ್ಟುಕೊಂಡಿದ್ದ ಒಂದು ಪೇಪರನ್ನು ಬಿಚ್ಚಿ ಅವನ ಮುಂದೆ ಹಿಡಿದ.

"ಏನಿದೆ ಇದರಲ್ಲಿ" ಎನ್ನುತ್ತಾ ಅನಂತ ಓದುತ್ತಿದ್ದಂತೇ ಅವನ ಮುಖದ ಬಣ್ಣ ಬದಲಾಯಿಸಿತು. ಪೇಪರನ್ನು ಮಡಿಸಿದ. ಏನೋ ಒಂದು ತರಹ ಆವೇಶ ಬಂದವನಂತೆ ತಲೆ ಕೊಡವಿದ.

"ಅನಂತ... ಯಾಕೆ ಈ ಉದ್ವೇಗ? ನಿನಗೀಗ ದುಃಖವೂ ಆಗ್ತಿಲ್ಲ ಅಥವಾ ಸಂತೋಷವೂ ಆಗ್ತಿಲ್ಲ... ನಿನ್ನ ಬಾಳಿಗೆ ದ್ರೋಹ ಬಗೆದ ಪಾಪಿಗಳಿಗೆ ಇಷ್ಟು ಬೇಗ ಅಂತ್ಯ ಬಂತಲ್ಲ ಅಂತ ಯೋಚಿಸ್ತಿದೀಯಾ? ಅಥವಾ ತಂದೆ ತಾಯಿ ಇಬ್ಬರನ್ನು ಒಟ್ಟಿಗೇ ಕಳೆದುಕೊಂಡು ಆ ಮಕ್ಕಳು ಅನಾಥರಾದರು ಅಂತ ಚಿಂತಿಸ್ತೀದೀಯಾ! ಅಥವಾ ನಿನ್ನ ದೊಡ್ಡಮ್ಮನಿಗೆ ಯಾರು ದಿಕ್ಕು ಅಂತ ಪರಿತಪಿಸುತ್ತಿದೀಯಾ?"

"ನನಗೇನಾಗ್ತಿದೆ ಅಂತ ನನಗೇ ತಿಳೀತಿಲ್ಲ... ನಿಮಗೆ ಇವರೇ ಅವರು ಅಂತ ತಿಳಿದುದ್ದಾದರೂ ಹೇಗೆ?... ಅಮ್ಮ ದೊಡ್ಡಮ್ಮ ಹೇಗಿದಾರೋ ನನಗೆ ತಿಳಿಯಲಿಲ್ಲ ಅಂದ ಮೆತ್ತಗೆ...?"

ಆಕ್ಸಿಡೆಂಟ್ ನಡೆದ ಸಮಯದಲ್ಲಿ ಅದೇ ರಸ್ತೆಯಲ್ಲಿ ನಾನು ಪ್ರಶಾಂತ ಇಬ್ಬರೂ ಒಟ್ಟಿಗೆ ಬರುತ್ತಿದ್ದೆವು. ಜೀಪನ್ನು ನಿಲ್ಲಿಸಿ, ಅವರುಗಳನ್ನು ಆಸ್ಪತ್ರೆಗೆ ಸೇರಿಸಲು ನೆರವಾದೆ... ಆಮೇಲೆ ಅವರ ಮನೆಗೆ ಹೋಗಿ ವಿಷಯ ತಿಳಿಸಿದವನೂ ನಾನೇ... ಅಲ್ಲಿ ನಿಮ್ಮ ದೊಡ್ಡಮ್ಮ... ಎರಡು ಮಕ್ಕಳೊಂದಿಗೆ ಇದ್ದರು. ಆಕೆ ಗಾಬರಿಯಿಂದ ಕೆಲವು ಮಾತುಗಳನ್ನು ಆಡಿದಾಗ, ನನಗೆ ಸ್ವಲ್ಪ ಅನುಮಾನ ಬಂದಿತ್ತು. ಆನಂತರ ಪೇಪರಿನಲ್ಲಿ ಲಾಯರನ ಸಲಹೆಯಂತೆ ವೇದಮ್ಮ ಈ ಪ್ರಕಟಣೆ ಕೊಟ್ಟಿದ್ದಾರೆ. ನೀನು ಒಂದು ಸಲ ಹೋಗಿ ನೋಡಿ ಬರುವುದು ಒಳ್ಳೆಯದು ಅಂತ ಅನ್ನಿಸುತ್ತೆ"

"ನಾನೇಕೆ ಹೋಗಬೇಕು! ಅದೆಲ್ಲ ಮುಗಿದ ಕತೆ"

"ನೀನು ಇಲ್ಲಿದೀಯ ಅಂತ ನಾನು ವೇದಮ್ಮನಗೆ ತಿಳಿಸಿದರೆ ಆಕೆಯೇ ಬಂದು ಮಾತನಾಡಿಸುತ್ತಾರೆ... ಹಾಗೇ ಮಾಡ್ತೀನಿ"

ಅನಂತ ಏನನ್ನು ಆಡಲಿಲ್ಲ.

"ನಿನ್ನ ತಳಮಳ ನನಗೆ ಅರ್ಥವಾಗುತ್ತೆ. ನೀನು ಒಂದು ಸಲ ಹೋಗಿ ನಿನ್ನ ದೊಡ್ಡಮ್ಮನ ಹತ್ತಿರ ಮಾತನಾಡಿ ಬರುವುದು ಒಳ್ಳೆಯದು, ಆಸ್ತಿ ಪಾಸ್ತಿ ಎಲ್ಲಾ ಸೆಟ್ಲ್ ಆಗಬೇಕಲ್ಲ"

"ಆ ಆಸ್ತಿಗೆ ಹಕ್ಕುದಾರ ನಾನಂತೂ ಅಲ್ಲ"

"ಅದನ್ನು ಅಲ್ಲಿಯೇ ಹೋಗಿ ಮಾತನಾಡಬೇಕಲ್ಲ... ನಿನ್ನ ತಾಯಿಯ ಇಚ್ಛೆ ಏನಿದೆಯೋ... ಎಲ್ಲರೂ ಕಂಗೆಟ್ಟಿರುತ್ತಾರೆ"

"ನನಗೆ ಅಲ್ಲಿ ಹೋಗಲು ಆಗುವುದಿಲ್ಲ, ವೇದಮ್ಮನೇ ಬಂದು ನನ್ನನ್ನು ನೋಡುವಂತೆ ತಿಳಿಸಿ"

"ಯಾಕೆ ಇಷ್ಟವಿಲ್ಲ?"

"ಅದು ನರಕ ಸಮಾನ ನನಗೆ...ನಾನು ಅಲ್ಲಿಗೆ ಹೋಗುವುದಿಲ್ಲ"

"ನರಕ ಅಂತ ನೀನೇಕೆ ಭಾವಿಸಬೇಕು? ನಿನ್ನ ತಾಯಿ, ನಿನ್ನ ದೊಡ್ಡಮ್ಮ ಇದಾರೆ. ಏನನ್ನು ಅರಿಯದ ಕಂದಮ್ಮಗಳಿವೆ, ಅದು ಸ್ವರ್ಗ"

"ಅದು ನನಗೆ ಬೇಕಿಲ್ಲದ ಸ್ವರ್ಗ...ಅವರನ್ನೇ ಇಲ್ಲಿಗೆ ಬರುವಂತೆ ತಿಳಿಸಿ, ನಾನು ಅಮ್ಮನ ಹತ್ತಿರ ಮಾತನಾಡ್ತೀನಿ... ಅಮ್ಮ ಒಪ್ಪಿದರೆ... ನಾನು ಅವಳನ್ನು ನನ್ನ ಬಳಿ ಇಟ್ಟುಕೊಳ್ಳುತ್ತೀನಿ"

"ಇಲ್ಲಿ? ಇಲ್ಲಿ ಹೆಂಗಸರಿಗೆ ಪ್ರವೇಶವಿಲ್ಲವಲ್ಲ"

"ನಾನು ಸ್ವಾಮೀಜಿಯವರ ಒಪ್ಪಿಗೆ ಪಡೆದು ಸ್ತ್ರೀಯರ ವೃದ್ಧಾಶ್ರಮವನ್ನು ಪ್ರಾರಂಭ ಮಾಡುತ್ತೇನೆ."

"ದಿಕ್ಕಿಲ್ಲದ ಮಕ್ಕಳನ್ನೂ, ಇಲ್ಲಿ ನೀನು ಆದರದಿಂದ ನೋಡುತ್ತೀಯೆ? ಆದರೆ, ಅಲ್ಲಿ ಈಗ ದಿಕ್ಕಿಲ್ಲದ ಎರಡು ಕಂದಮ್ಮಗಳಿವೆ. ಆಂ... ಇನ್ನೊಂದು ವಿಚಾರ. ನಾನು ಒಂದೆರಡು ಬಾರಿ ಅಲ್ಲಿಗೆ ಹೋದಾಗಲೂ ನಿನ್ನ ತಾಯಿಯನ್ನು ಕಾಣಲಿಲ್ಲ. ಅವರು ಅನಾರೋಗ್ಯದಿಂದ ಮಲಗಿರಬಹುದು, ಅವರು ಇಲ್ಲಿಗೆ ಹೇಗೆ ಬರಲು ಸಾಧ್ಯ?" ಅನಂತ ಪಿಳಿಪಿಳಿ ಅವನನ್ನೇ ನೋಡಿದ.

"ಸರಿ, ನಾನು ಸ್ವಾಮೀಜಿಯವರ ಹತ್ತಿರ ಮಾತನಾಡ್ತೀನಿ, ಬರುವುದಾದರೆ ಈಗಲೇ ಹೊರಡು..." ಪುರುಷೋತ್ತಮ ಸ್ವಾಮೀಜಿಯನ್ನು ಕಂಡು ಮಾತನಾಡಲು ಕಾಯುತ್ತಿದ್ದಾಗ ಭೈರಪ್ಪ ಬಂದ. ಅನಂತನ ಕೆಟ್ಟ ಮುಖವನ್ನು ಕಂಡು ವಿಷಯ ಏನೆಂದು ಭೈರಪ್ಪ ವಿಚಾರಿಸಿದಾಗ, ಪುರುಷೋತ್ತಮ ಎಲ್ಲಾ ತಿಳಿಸಿದ...

"ಹೋಗಿ ನೋಡಿಕೊಂಡು ಬರೋದ್ರಿಂದ ತೊಂದರೆ ಏನಿದೆ ಅನಂತಪ್ಪಾ... ನಾನೂ ನಿಮ್ಮ ಜತೆಗೆ ಬರ್ತೀನಿ ನಡೀರಿ..." ನಗುತ್ತಾ ನುಡಿದ.

"ಹಾಗಾದ್ರೆ ನನ್ನ ಪರವಾಗಿ ನೀವೇ ಹೋಗಿ ಬನ್ನಿ..."

"ನಿಮ್ಮ ಪರವಾಗಿ ನಾನೇ ಕೆಲಸ ಎಲ್ಲಾ ಮಾಡಿದರೆ, ನೀನು ಮಾಡುವುದೇನು! ಅವರವರ ಕರ್ತವ್ಯವನ್ನು ಅವರೇ ನಿಭಾಯಿಸಬೇಕು ಅಲ್ವಾ ಸಾರ್?"

"ನನ್ನ ಕರ್ತವ್ಯ ಏನಿದೆ? ಎಲ್ಲ ಅವತ್ತೇ ತೀರಿ ಹೋಯ್ತು."

"ಋಣ ಬಗೆ ಹರಿದಿಲ್ಲ... ಇಲ್ಲದಿದ್ದರೆ ನೀನು ಎಲ್ಲೇ ಇದ್ದರೂ ಆದಷ್ಟು ಬೇಗ ಬಾ ಅಂತ ನಿಮ್ಮ ದೊಡ್ಡಮ್ಮ ಯಾಕೆ ಬರೆಸುತ್ತಿದ್ದರು! ನಿನ್ನನ್ನು ಸಾಕಿ ಬೆಳೆಸಿದವರನ್ನು ಕಂಡು ಮಾತನಾಡಿಸುವ ಹೃದಯವೂ ಇಲ್ಲವೇ ನಿನಗೆ?"

"ನಡೀರಿ ಸಾರ್... ಸ್ವಾಮೀಜಿಯವರ ಹತ್ತರ ಈಗಲೇ ಮಾತಾನಾಡೋಣ. ಅವರು ಮಾವಿನ ತೋಪಿನ ಕಾಲುದಾರಿಯಲ್ಲಿ ಹೋಗುತ್ತಿದ್ದರು. ಬನ್ನಿ ಬನ್ನಿ..." ಮೂವರು ನಡೆದು ತೋಟದ ಬಳಿಗೆ ಬರುತ್ತಿದ್ದಾಗ ಎದುರಿಗೆ ಬರುತ್ತಿದ್ದ ಸ್ವಾಮೀಜಿಯನ್ನು ಕಂಡು ನಿಂತರು.

"ಜೈ ಜಗನ್ನಾಥಾ" ಎನ್ನುತ್ತಾ ಸ್ವಾಮೀಜಿ ಅನಂತನ ತಲೆಯ ಮೇಲೆ ಕೈಯಿರಿಸಿದರು. "ಅಲ್ಲಿ ನಿನ್ನ ಅಗತ್ಯವಿದೆ.... ನೀನು ಹೋಗಿ ಬಾ..." ಎಂದು ಅವರು ನುಡಿದಾಗ ಅನಂತ ಅವರ ಕಾಲಿಗೆ ಬಿದ್ದ...

"ದಯವಿಟ್ಟು ನನ್ನನ್ನು ಅಲ್ಲಿಗೆ ಕಳಿಸಬೇಡಿ..." ಬೇಡಿದ.

"ಇಲ್ಲ, ಇದು ಜಗನ್ನಾಥನ ಆದೇಶ ನೀನು... ಹೋಗಿ ಬರಲೇ ಬೇಕು..." ಎನ್ನುತ್ತಾ ಅವರು ಅವನನ್ನು ಎಬ್ಬಿಸಿದರು. ಮುಂದೆ ಅವರ್ಯಾರಿಗೂ ಅವಕಾಶ ಕೊಡದಂತೆ ತಾವು ಮುಂದೆ ಮುಂದೆ ನಡೆದರು.

"ನಾನೂ ಹೋಗಿ ಬರಲೇ ಗುರುಗಳೇ..." ಭೈರಪ್ಪ ಕೇಳಿದ.

"ಧಾರಾಳವಾಗಿ ಹೋಗಿ ಬಾ..." ಸ್ವಾಮೀಜಿ ಹರ್ಷದಿಂದ ನುಡಿದು ಭೈರಪ್ಪನ ಬೆನ್ನು ತಟ್ಟಿದಾಗ, ಅವನು ಅವರ ಕಾಲಿಗೆ ಬಿದ್ದ.

"ಜೈ ಜಗನ್ನಾಥಾ" ಎನ್ನುತ್ತಾ ಅವರು ಪಕ್ಕದ ದಾರಿಗೆ ತಿರುಗಿದರು.

ಅನಂತ ಪೋಲೀಸ್ ಜೀಪನ್ನು ಏರಿದಾಗ ಎಲ್ಲರೂ ಬೆರಗಾಗಿ ಅವರುಗಳನ್ನೇ ನೋಡುತ್ತಿದ್ದರು. ಪುರುಷೋತ್ತಮನ ಸ್ನೇಹಿತ ಎಂದು ತಿಳಿದಿದ್ದರೂ, ಈ ದಿನ ಅವನನ್ನೇಕೆ ಕರೆದುಕೊಂಡು ಹೋಗುತ್ತಿದ್ದಾರೆ ಎನ್ನುವ ಕುತೂಹಲ ಇಣುಕಿತ್ತು. ಭೈರಪ್ಪನು ಅವರುಗಳ ಜತೆ ಹೊರಟಿದ್ದರಿಂದ ಆ ಬಗ್ಗೆ ಯಾರನ್ನು ಕೇಳುವುದು!

ಜೀಪು ನಿಂತಾಗ, ಕೂತಲ್ಲೇ ಸುತ್ತಲೂ ನೋಡಿದ ಅನಂತ,

ಯಾವುದೋ ಬೇರೆ ಮನೆ, ಇನ್‌ಸ್ಪೆಕ್ಟರ್ ಇಲ್ಲಿಗೇಕೆ ಕರೆತಂದರೋ ಎಂಬ ಅನುಮಾನ ಇಣುಕಿತು.

"ಇಳಿಯಪ್ಪಾ..." ಪುರುಷೋತ್ತಮ ಕೈದೋರಿದಾಗ ಇಳಿದ.

"ಇದು ಯಾರ ಮನೆ ಸಾರ್!... ನಿಮ್ಮಮನೇನಾ!"

"ಅಲ್ಲ, ಈ ಮನೇನ ನೀನು ಮರೆತು ಬಿಟ್ಟೆಯಾ!"

"ಅಲ್ಲ, ಈ ಮನೆ ಅಲ್ಲ..." ಪುರುಷೋತ್ತಮ ವಿಚಿತ್ರವಾಗಿ ಅವನನ್ನೇ ನೋಡಿ, 'ಈಗ ಬಂದೆ...' ಎನ್ನುತ್ತಾ ಮನೆಯೊಳಗೆ ಹೋದ ಕೆಲವೇ ನಿಮಿಷಗಳಲ್ಲಿ ಅವನು ವೇದಮ್ಮಳ ಜತೆ ಹೊರಗೆ ಬಂದ.

"ಅನಂತಾ..ಅಂತೂ ಬಂದ್ಯಾಪ್ಪಾ" ಎನ್ನುತ್ತಾ ವೇದಮ್ಮ ಅವನ ಬಳಿಗೆ ಬಂದಾಗ ಅವನಿಗೆ ಕಕ್ಕಾಬಿಕ್ಕಿ... ಅವನನ್ನೇ ಮೇಲಿಂದ ಕೆಳಗೆ ನೋಡಿದಳು

"ಈ ಮನೇಲಿ ಯಾಕೆ ಇದೀರಿ?" ಎತ್ತಲೋ ನೋಡುತ್ತಾ ಕೇಳಿದ

"ಮೊದಲು ಬಾ ಒಳಗೆ... ನಿಧಾನವಾಗಿ ಎಲ್ಲವನ್ನೂ ಹೇಳ್ತೀನಿ"

ಎಲ್ಲರೂ ಮನೆಯೊಳಗೆ ಬಂದರು, ಆ ಮನೆಯಷ್ಟು ದೊಡ್ಡದಲ್ಲ, ಮನೆ ತುಂಬಾ ಹರಡಿದ್ದ, ಬಿದ್ದಿದ್ದ ಸಾಮಾನುಗಳು, ಮನೆಯಲ್ಲಿ ಯಾರಾದರೂ ವಾಸವಾಗಿದಾರೋ ಇಲ್ಲವೋ ಎಂಬ ಅನುಮಾನವನ್ನು ಹುಟ್ಟಿಸುವಂತಿತ್ತು.

ಬಾಗಿಲ ಬಳಿಯೇ ಅನುಮಾನಿಸುತ್ತಾ ನಿಂತವನನ್ನು ವೇದಮ್ಮ ಪ್ರಶ್ನಿಸಿದಳು.

"ನಿನಗೆ ಒಳಗೆ ಬರುವ ಮನಸ್ಸಿಲ್ಲ ಅಲ್ಲವೆ?... ನಿನ್ನ ದೊಡ್ಡಮ್ಮ ಹೇಗಿದಾಳೆ ಅಂತ ವಿಚಾರಿಸುವ ಆಸೆಯೂ ಇಲ್ಲವೇ ನಿನಗೆ!"

"ಅಮ್ಮ ಹೇಗಿದಾಳೆ...?"

"ಅಮ್ಮ? ಇನ್ನೆಲ್ಲಿ ಅಮ್ಮ? ನೀನು ಬಿಟ್ಟು ಹೋದ ಗಳಿಗೆಯೇ, ಅವಳು ನಮ್ಮೆಲ್ಲರನ್ನು ತೊರೆದು ಹೋದಳು. ನಾನು ಪಾಪಿ... ಇದನ್ನೆಲ್ಲ ನೋಡಲು ಬದುಕಿದೀನಿ ಅಷ್ಟೇ.." ವೇದಮ್ಮ ಅಳತೊಡಗಿದಳು.

ಅನಂತ ಮುಖವನ್ನು ಮುಚ್ಚಿ ನಿಂತ. ಭೈರಪ್ಪಾ, ಪುರುಷೋತ್ತಮ ಅವನ ಸಮೀಪಕ್ಕೆ ಬಂದು, ಸಮಾಧಾನ ಮಾಡುವಂತೆ ಅವನ ಕೈ ಹಿಡಿದರು.

"ನಾನೆಷ್ಟು ಪಾಪಿ... ನಾನೆಷ್ಟು... ಪಾಪಿ... ಅಮ್ಮನನ್ನು ಕಳೆದುಕೊಂಡೆ ಅನಂತ ಬಿಕ್ಕಿ ಬಿಕ್ಕಿ ಅತ್ತ.

"ಯಾಕೆ ಇಂತಹ ಕೆಲಸ ಮಾಡಿದೆ ಅನಂತ! ಹೇಳದೇ ಹೋಗುವಷ್ಟು ಹೇಡಿಯಾಗಿ ಬಿಟ್ಟೆಯಾ! ನಿನಗೆ ಆದ ದ್ರೋಹ, ನಮಗೂ ಆಗಿರಲಿಲ್ಲವೇ! ನಾವೂ ನಿನ್ನ ಜತೆಯಲ್ಲಿ ಬರುತ್ತಿದ್ದೆವು. ಎರಡೆರೆಡು ದುಃಖವನ್ನು ತಾಳಲಾರದೇ ನಿನ್ನ ತಾಯಿ ಸತ್ತಳು... ಒಂದಲ್ಲ ಒಂದು ದಿನ ನನ್ನನ್ನು ಕರೆದುಕೊಂಡು

ಹೋಗಲು ಬರ್ತೀಯಾ ಅಂತ ನಾನು ಹಗಲಿರುಳೂ ನಿನಗಾಗಿ ಕಾದೆ...." ಅನಂತನ ಕೈ ಹಿಡಿದು ವೇದ ಅತ್ತಳು.

"ಬನ್ನಿ... ನಾನು ಈಗ ನಿಮ್ಮನ್ನು ಕರೆದುಕೊಂಡು ಹೋಗ್ತೀನಿ..."

"ನಾನು ಈಗ ಹೇಗೆ ಬರಲಪ್ಪಾ... ನನ್ನನ್ನೇ ನಂಬಿರುವ ಎರಡು ಹಸುಗೂಸುಗಳಿವೆ...ಅವುಗಳ ಜವಾಬ್ದಾರಿ ನನ್ನ ಮೇಲಿದೆ"

"ಹಾಗಾದರೆ ನನ್ನ ಅಗತ್ಯ ನಿಮಗಿಲ್ಲ... ನನಗೇನು ಇಲ್ಲಿ ಕೆಲಸ? ನಾನು ಹೊರಡ್ತೀನಿ... ಇಲ್ಲಿ ಮಾತ್ರ ಒಂದು ಗಳಿಗೆ ಇರಲಾರೆ."

"ನಿನಗೆ ಇಷ್ಟ ಬಂದಂತೆ ಮಾಡುವ ಹಕ್ಕು ನಿನಗಿದೆ. ತಡೆಯಲು ನಾನ್ಯಾರು! ಆದರೆ ನಿನ್ನಿಂದಲೇ ಆಗಬೇಕಾದ ಕೆಲವು ಕೆಲಸಗಳಿವೆ..."

"ಅದೇನದು? ನನ್ನಿಂದ ಈ ಮನೆಗೆ.... ಆಗಬೇಕಾದ ಕೆಲಸ?" ಸಿಟ್ಟಿನಿಂದ ಕೇಳಿದ.

"ಆಸ್ತಿಪಾಸ್ತಿ ವಿಚಾರ ಇತ್ಯರ್ಥ ಮಾಡುವುದಿದೆ"

"ಈ ಮನೆಯ ಆಸ್ತಿಗೆ, ನನಗೆ ಯಾವ ಸಂಬಂಧವಿಲ್ಲ..."

"ಸಂಬಂಧವಿದೆ... ಲಾಯರ್ರು ನಿನಗೆ ತಿಳಿಸ್ತಾರೆ...ಆದರೆ ಅನಂತ ನೀನು ಇಷ್ಟು ಒರಟನಾಗಬೇಡ... ನಿನ್ನ ದೊಡ್ಡಮ್ಮನ ಯೋಗಕ್ಷೇಮವನ್ನು ವಿಚಾರಿಸಲೂ ಆಗದಷ್ಟು... ನೀನು ದೇಶಾಂತರ ಹೋದರೂ ನನ್ನ ಹೃದಯದಿಂದ ನೀನು ದೂರವಾಗಿಲ್ಲಪ್ಪಾ., ನಿನ್ನನ್ನು ಸಾಕಿ ಬೆಳೆಸಿದವಳು ನಾನು ನಿನ್ನನ್ನು ಮರೆತು ಇರಲಾರೆನಪ್ಪಾ..."

"ದೊಡ್ಡಮ್ಮಾ ನನ್ನನ್ನು ಕ್ಷಮಿಸಿ ಬಿಡಿ... ಆದರೆ ನನಗೆ ಎಂತಹ ದ್ರೋಹವಾಯಿತು ಅಂತ ತಿಳಿದೂ... ಹೀಗೆ ಮಾತನಾಡ್ತೀರಲ್ಲ.."

"ಹೌದಪ್ಪಾ... ನಗೆ ದ್ರೋಹವಾಯಿತು ನಿಜ, ಆದರೆ..."

"ಬೇಡ ದೊಡ್ಡಮ್ಮ... ನನಗೆ ಯಾರ ವಿಚಾರವೂ ಬೇಡ. ಈ ಆಸ್ತಿಪಾಸ್ತಿಯೂ ಬೇಡ, ನಾನು ಅಲ್ಲಿ ನೆಮ್ಮದಿಯಿಂದಿದೀನಿ... ದಯವಿಟ್ಟು ನನ್ನ ಪಾಡಿಗೆ ನನ್ನನ್ನೂ ಬಿಟ್ಟು ಬಿಡಿ..." ಕೈಮುಗಿದ.

"ಹಾಗಾದರೆ ಲಾಯರ್ರ ಹತ್ತಿರ ಮಾತನ್ನಾಡಿ ಅದೇನೇನು ಫೈಸಲ್ ಮಾಡ್ತಿಯೋ ಮಾಡಿ ಬಿಡು. ಆಮೇಲೆ ನಿನ್ನಿಷ್ಟ..."

"ಹಾಗಾದರೆ ಲಾಯರ್ರಿಗೆ ಹೇಳಿ ಕಳಿಸಿ, ಆದಷ್ಟು ಬೇಗ ಈ ಗೋಜಲು ಮುಗಿಯಲಿ"

"ನಾವು ಅಲ್ಲಿಗೇ ಹೋಗೋಣ..." ಭೈರಪ್ಪ ನುಡಿದ. ಅನಂತ ಎದ್ದ..."

"ತಿಂಡಿ ಕಾಫಿ ಮುಗಿಸಿ ಹೊರಡೋರಂತೆ"

"ನನಗೆ ಏನೂ ಬೇಡ..."

"ಹಾಗೆಂದ ಮಾತ್ರಕ್ಕೆ ಎಲ್ಲ ಋಣ ತೀರಿ ಹೋಗುತ್ತದೆಯೇ..."

"ನನಗೆ ಕೊಡಿ..." ಎನ್ನುತ್ತಾ ಭೈರಪ್ಪ ಮತ್ತೆ ಕೂತಾಗ ಅನಂತ ಕೆಟ್ಟ ಮುಖ ಮಾಡಿದ.

ವೇದಮ್ಮ ಒಳಗೆ ಹೋದಾಗ, ಭೈರಪ್ಪ ಅನಂತನ್ನ ಸಮಾಧಾನ ಮಾಡಿದ. "ಹೇಗೂ ಬಂದಿದೀವಿ, ಕೆಲಸ ಮುಗಿದ ತಕ್ಷಣ ಹೊರಡ್ತೀವಿ. ನಿನ್ನ ದೊಡ್ಡಮ್ಮನ ಮನಸ್ಸಿಗೆ ನೋವನ್ನುಂಟು ಮಾಡುವುದೇಕೆ!"

"ನಿಮಗೆ ಅದೆಲ್ಲ ಅರ್ಥವಾಗುವುದಿಲ್ಲ ಬಿಡಿ...ಇನ್ಸ್‌ಪೆಕ್ಟರ್ ಎಲ್ಲಿ?"

"ನಾನು ನಿನಗಿಂತ ವಯಸ್ಸಿನಲ್ಲಿ ದೊಡ್ಡವನು, ನನಗೆ ಎಲ್ಲಾ ಅರ್ಥವಾಗುತ್ತೆ.... ಆದರೆ, ಆಶ್ರಮದಲ್ಲಿ ನೀನು ಒರಟಾಗಿ ಹೀಗೆ ಮಾತನ್ನಾಡುತ್ತಿರಲಿಲ್ಲ"

"ಇದು ಆಶ್ರಮವಲ್ಲ.... ಅಲ್ಲದೇ... ಈ ಮನೆಯೇನು ನನ್ನ ಮನೆಯಲ್ಲ..."

"ಇದು ನಿನ್ನ ಬಾಯಿಂದ ಬರುವಂತಹ ಮಾತುಗಳಲ್ಲ ಅನಂತ. ನಿನ್ನ ಮನೆಯಲ್ಲದ ಮಾತ್ರಕ್ಕೆ ನೀನು ನಿನ್ನ ತಾಳ್ಮೆಯನ್ನು ಕಳೆದುಕೊಂಡರೆ, ನೀನು ಸಾಧಿಸುವುದಾದರೂ ಏನನ್ನು! ಎಲ್ಲರನ್ನು ಒಂದೇ ಎಂದು ಭಾವಿಸುವ ಸ್ವಾಮೀಜಿಯ ಶಿಷ್ಯನಾಗಿ, ನೀನು ಹೀಗೆ ವರ್ತಿಸುವುದು ಸರಿಯಲ್ಲ..."

"ಹಾಗಾದರೆ ನಾನೀಗ ಏನು ಮಾಡಬೇಕು!" ಕೈ ಕಟ್ಟಿ ನಿಂತ.

ಅಷ್ಟರಲ್ಲಿ ವೇದಮ್ಮ ತಟ್ಟೆಗಳಲ್ಲಿ ಒಂದಿಷ್ಟು ಹಣ್ಣು ಬಿಸ್ಕತ್ತುಗಳನ್ನು ತಂದಿತ್ತಳು... ಹೊರಗಿದ್ದ ಇನ್‌ಸ್ಪೆಕ್ಟರ್ ಪುರುಷೋತ್ತಮನೂ ಒಳಗೆ ಬಂದ.... ಅವನ ಹಿಂದೆ ಆ ಎರಡು ಮಕ್ಕಳು... ಅನಂತನ ಮೈ ಗಡಗಡನೆ ನಡುಗಿದಂತಾಯಿತು. ಕೋಪವೋ ತಾಪವೋ... ಅಥವಾ ಇನ್ನೇನೋ ಅವನಿಗೆ ಅರ್ಥವಾಗಲಿಲ್ಲ... ಕೈಲಿ ಹಿಡಿದ ಲೋಟವನ್ನು ಹಾಗೇ ಹಿಡಿದು ತಲೆ ತಗ್ಗಿಸಿ ಕುಳಿತ... ಆ ಮಕ್ಕಳಿಬ್ಬರೂ ವೇದಮ್ಮನ ಹಿಂದೆ ಹೋಗಿ ಅವಿತುಕೊಂಡಾಗ, ಆ ಮಕ್ಕಳು ಯಾರೆಂದು ಪ್ರಶ್ನಿಸಬೇಕಾಗಿರಲಿಲ್ಲ. ಪುರುಷೋತ್ತಮ ಬಿಸ್ಕತ್ತನ್ನು ತಿಂದು ಕಾಫಿಯನ್ನು ಕುಡಿದ. ಭೈರಪ್ಪ ಬಾಳೆಹಣ್ಣುಗಳನ್ನು ತಿಂದು ಮುಗಿಸಿ ಅನಂತನ ಕಡೆ ನೋಡಿದ. ಕೈಯಲ್ಲಿದ್ದ ಬಟ್ಟಲಿನ ಕಾಫಿ ಆರಿ ತಣ್ಣಗಾಗಿತ್ತು. ಅನಂತ ಹಾಗೇ ಇಟ್ಟ.

ಎಲ್ಲರಿಗೂ ಅವನ ಮನಸ್ಸಿನಲ್ಲಿ ನಡೆಯುತ್ತಿರಬಹುದಾದ ತಳಮಳ ಅರ್ಥವಾದ್ದರಿಂದ ಅವನನ್ನು ಮಾತನಾಡಿಸಲಿಲ್ಲ. ಪುರುಷೋತ್ತಮ ಲಾಯರನ ವಿಳಾಸವನ್ನು ಕೇಳಿ ಪಡೆದು ಅನಂತನನ್ನು ಎಬ್ಬಿಸಿದ.

ಲಾಯರ್ ಮೈಲಾರಯ್ಯ ಜೀಪಿನಿಂದ ಇಳಿದವರನ್ನು ಆದರದಿಂದ

ಸ್ವಾಗತಿಸಿದ. ಇನ್‌ಸ್ಪೆಕ್ಟರ್ ಪುರುಷೋತ್ತಮನ ಪರಿಚಯವಿದ್ದುದರಿಂದ, ಬಂದ ಕಾರಣವನ್ನು ಊಹಿಸಿದ. ಅನಂತನ ಹಾಗೂ ಭೈರಪ್ಪನ ಪರಿಚಯವಾಯಿತು.

ಲಾಯರ್ ನೇರವಾಗಿ ವಿಷಯಕ್ಕೆ ಬಂದ.

"ಲಲಿತಮ್ಮ, ಅನಂತನ ತಾಯಿ ವಿಲ್ಲು, ಬರೆಸಿ ರಿಜಿಸ್ಟರ್ ಸಹ ಮಾಡಿಸಿದ್ದರು. ಅದರ ಪ್ರಕಾರ ಲಲಿತನ ತಾಯಿಯ ಕಡೆಯಿಂದ ಬಂದ. ಆಸ್ತಿಗೆಲ್ಲ ಅವಳ ನಂತರ ಅನಂತನೇ ವಾರಸುದಾರ. ರಂಗಣ್ಣನ ಆಸ್ತಿಗೂ ಅನಂತನೇ ಉತ್ತರಾಧಿಕಾರಿ. ಗೋಪಾಲನ ಕಾರುಬಾರಿಗೆ ಸಂಬಂಧಿಸಿದಂತೆ ಬರುವ ಆದಾಯವೂ ಸಹ ಲಲಿತನ ಹೆಸರಿಗೇ....

ಲಾಯರ್ರು ಓದುತ್ತಿದಂತೇ ಅನಂತ ಚಡಪಡಿಸಿದ.

"ಈ ಯಾವ ಆಸ್ತಿಗೂ ನಾನು ಹಕ್ಕುದಾರನಲ್ಲ."

"ಆದರೆ ನೀವು ಗೋಪಾಲರಾಯರ ಮಗ ತಾನೇ...?"

ನಾನು ಅವರ ಸ್ವಂತ ಮಗನಲ್ಲ, ಎಂದು ಹೇಳುವುದೋ ಬೇಡವೋ, ಮೊದಲು ವೇದಮ್ಮ ಏನು ಮಾತನಾಡಿರಬಹುದು ಎಂದು ತಿಳಿದುಕೊಳ್ಳುವ ಆಸೆಯಾಯಿತು.

"ಈಗ, ನಾನು ನನ್ನ ಸ್ವಇಚ್ಛೆಯಿಂದ ಇದನ್ನು ಯಾರ ಹೆಸರಿಗಾದರೂ ವರ್ಗಾಯಿಸಬಹುದು ಅಲ್ಲವೆ!"

"ಮಾಡಬಹುದು ಆ ಹಕ್ಕು ನಿಮಗಿದೆ. ಆದರೆ... ಕಾರಣ?"

"ಕಾರಣ... ನಾನು ಈ ಆಸ್ತಿಗೆ ಹಕ್ಕುದಾರನೂ ಅಲ್ಲ, ಪಾಲುದಾರನೂ ಅಲ್ಲ..." ಅವನು ಉದ್ವೇಗದಿಂದ ಮಾತನಾಡಿದಾಗ ಲಾಯರು ಬೆದರಿ ಭೈರಪ್ಪನ ಕಡೆ ನೋಡಿದ

ಪುರುಷೋತ್ತಮ ಅನಂತನ ಸಹಾಯಕನಾಗಿ ನುಡಿದ.

"ನಾವುಗಳು ಮಾತನಾಡಿ ಒಂದು ನಿರ್ಧಾರಕ್ಕೆ ಬಂದು, ಏನೇನು ಮಾಡಬೇಕು, ಹೇಗೆ ಮಾಡಬೇಕು ಅಂತ ತಿಳಿಸ್ತೀವಿ"

"ಸರಿ, ಹಾಗೇ ಮಾಡಿ..." ಲಾಯರ್ರು ನುಡಿದಾಗ ಮೂವರೂ ಅಲ್ಲಿಂದ ಹೊರಟರು. ಅನಂತನ್ನ ಮನೆಯ ಮುಂದೆ ಇಳಿಸಿದ ಪುರುಷೋತ್ತಮ ತನ್ನ ಮನೆಗೆ ಹೋಗುವುದಾಗಿ ತಿಳಿಸಿದ.

"ನಾನು ಮತ್ತೆ ಬರ್ತೀನಿ... ಈಗ ಸ್ವಲ್ಪ ಕೆಲಸವಿದೆ. ನಿನ್ನ ಜತೆಗೆ ಭೈರಪ್ಪ ಇರ್ತಾರೆ, ಯಾವ ಆತಂಕವೂ ಬೇಡ" ಅನಂತ ಸುಮ್ಮನೇ ನಿಂತಿದ್ದ ಒಳಗಿನಿಂದ ಬಂದ ವೇದಮ್ಮ ಎಲ್ಲರಿಗೂ ಒಳಗೆ ಬರುವಂತೆ ಹೇಳಿದಳು.

ಅನಂತ, ಭೈರಪ್ಪ ಒಳ ಬಾಗಿಲಿಗೆ ಬಂದರು. ಜೀಪು ಹೊರಟಿತ್ತು. ಜೀಪನ್ನು ನೋಡಲೆಂದು ಆ ಮಕ್ಕಳಿಬ್ಬರೂ ಒಳಗಿನಿಂದ ಓಡಿ ಬಂದಿದ್ದರು...

ಅನಂತ ಪಕ್ಕಕ್ಕೆ ಸರಿದ.

"ಏಯ್.... ನಿಲ್ಲಿ...." ಎನ್ನುತ್ತಾ ವೇದಮ್ಮ ತಡೆದಳು.

"ನಾವು ಜೀಪನ್ನು ನೋಡಬೇಕು ದೊಡ್ಡಮ್ಮಾ" ಹುಡುಗ ನುಡಿದಾಗ ಅನಂತ ಬೆಚ್ಚಿದ. ತನ್ನಂತೆ ಈ ಹುಡುಗರೂ ವೇದಮ್ಮನ ದೊಡ್ಡಮ್ಮ ಎಂದೇ ಕರೆಯುತ್ತಾರೆ.

"ಜೀಪು ಹೊರಟೇ ಹೋಯ್ತು" ಹುಡುಗಿ ನುಡಿದಳು. ಭೈರಪ್ಪ ಆ ಹುಡುಗನ ಬಳಿ ಸರಿದ. "ಅವರು ಮತ್ತೆ ಬಂದಾಗ, ಜೀಪಿನಲ್ಲಿ ಒಂದು ರೌಂಡ್ ಹೋಗಿ ಬರೋರಂತೆ... ನಾನು ಅಂಕಲ್‌ಗೆ ಹೇಳ್ತೀನಿ"

"ಹೂಂ..." ಎನ್ನುತ್ತಾ ಆ ಹುಡುಗ ವೇದಮ್ಮನ ಬಳಿಗೆ ಸರಿದ. ಅನಂತನಿಗೆ ಅಲ್ಲಿ ನಿಂತಿರಲು ಮುಜುಗರವೆನಿಸಿತ್ತು.

"ಮುದ್ದಾದ ಮಕ್ಕಳು.... ಪಾಪ" ಎಂದು ಭೈರಪ್ಪ ಕನಿಕರದಿಂದ ನುಡಿದಾಗ ಅನಂತ ಕೋಪದಿಂದ ಹೊರಗೆ ಒಂದು ನಿಂತ. 'ಛೆ... ತಾನು ಪುರುಷೋತ್ತಮನ ಜತೆ ಅವನ ಮನೆಗೇ ಹೊರಟು ಹೋಗಿದ್ದರೆ ಚೆನ್ನಾಗಿತ್ತು' ಎಂದೆನಿಸಿತ್ತು.

"ಮುಂದಿನ ರೂಮು ಖಾಲಿ ಇದೆ... ಫ್ಯಾನು ಇದೆ, ತಣ್ಣಗೆ ಕೂತು ನಿನ್ನ ಸಿಟ್ಟನ್ನು ಕಡಿಮೆ ಮಾಡಿಕೊ..." ವೇದಮ್ಮ ಹಿಂದಿನಿಂದ ನುಡಿದಾಗ ತಿರುಗಿ ಆಕೆಯನ್ನೇ ದುರುದುರು ನೋಡಿದ.

"ನಾನೀಗ ಏನು ಮಾಡಿದೆ?"

"ಆ ಮಕ್ಕಳ ಮೇಲಿನ ದ್ವೇಷ ನಿನ್ನ ಮುಖದ ಮೇಲೆದ್ದು ಕುಣೀತಿದೆ?"

"ದ್ವೇಷ? ನನಗೇಕೆ!"

"ಮತ್ತೆ...? ಇಲ್ಲಿ ಹೊರಗೆ ನಿಂತು ಏನು ಮಾಡ್ತೀಯಾ? ಅವು ಚಿಕ್ಕ ಮಕ್ಕಳು ಅವಕ್ಕೆ ಏನೂ ತಿಳಿಯದು. ಸುಮ್ಮನೇ ಒಳಗೆ ಬಾ..."

ಅನಂತ ಒಳಬಂದು, ಅಲ್ಲಿದ್ದ ಕುರ್ಚಿಯ ಮೇಲೆ ಕೂತ.

"ಲಾಯರ್ರ ಹತ್ತಿರ ಮಾತನಾಡಿದ್ಯಾ?"

"ಹೂಂ... ಆಸ್ತೀನೆಲ್ಲಾ ನಿಮ್ಮ ಹೆಸರಿಗೆ ವರ್ಗಾಯಿಸ್ತೀನಿ..."

"ನನಗೇ ನನಗೇಕಪ್ಪ ನಿನ್ನ ಆಸ್ತಿ? ಅದನ್ನೆಲ್ಲ ಸಂಭಾಳಿಸುವ ಛಾತಿಯಂತೂ ನನ್ನಲಿಲ್ಲ. ನಿನ್ನ ಹೆಸರಿನಲ್ಲೇ ಇರಲಿ"

"ನನಗೆ ಯಾರ ಆಸ್ತಿಯೂ ಬೇಡ, ನಿಮಗೆ ಯಾರು ಇಷ್ಟವೋ ಅವರ ಹೆಸರನ್ನು ತಿಳಿಸಿ, ಅವರ ಹೆಸರಿಗೆ ಬದಲಾಯಿಸ್ತೀನಿ..."

"ಚೆನ್ನಾಗಿದೆ, ನನಗಿನ್ಯಾರಿದಾರೆ? ನೀನೇ ಇಷ್ಟವಾದವನು"

"ಹಾಗಾದರೆ ನನ್ನ ಇಷ್ಟದಂತೆ ಈ ಆಸ್ತೀನೆಲ್ಲಾ ಯಾವುದಾದರೂ

ಆಶ್ರಮಕ್ಕೆ ದಾನ ಮಾಡಿ ಬಿಡ್ತೀನಿ"

"ಸರಿ, ನಿನ್ನಿಷ್ಟ, ಆದರೆ ನಮ್ಮನ್ನು ನಿನ್ನ ಜತೇಲೇ ಕರೆದುಕೊಂಡು ಹೋಗು, ಅಲ್ಲಿ ವೃದ್ಧಾಶ್ರಮ, ಅನಾಥಶ್ರಮ ಇದೆಯಂತೆ"

"ಅಲ್ಲಿ ವೃದ್ಧಾಶ್ರಮದಲ್ಲಿ, ಬರೀ ಗಂಡಸರಿಗೆ ಮಾತ್ರ ಇರಲು ಅನುಕೂಲವಿದೆ. ಮಕ್ಕಳು ಅನಾಥರೇನಲ್ಲ, ನೀವಿದೀರಿ, ಅವರಪ್ಪನ ಆಸ್ತಿ ಇದೆ."

"ಇದ್ದರೇನಾಯ್ತು? ಅದನ್ನೆಲ್ಲ ನೋಡಿಕೊಳ್ಳುವವರು ಯಾರಿದಾರೆ ನಾನು ಮುದುಕಿ, ಅವು ಚಿಕ್ಕವು, ಮುಂದೆ ಅವುಗಳ ಗತಿ ಏನು? ಅನಾಥಾಶ್ರಮವೇ ಗತಿ"

"ಅದಕ್ಕೆ ಏನು ಮಾಡಲಿ!"

"ಏನೂ ತಿಳಿಯದ ಮಕ್ಕಳ ಮೇಲೆ ದ್ವೇಷ ಸಾಧಿಸಿ ಏನು ಮಾಡ್ತೀಯ! ಪಾಪ ಅವುಗಳದ್ದು ಏನು ತಪ್ಪು!"

"ನನ್ನದೂ ಏನೂ ತಪ್ಪಿರಲಿಲ್ಲ, ಆದರೆ ನನಗಾದ ಮೋಸ?"

"ಹಾಗಾದರೆ ನೀನು ಏನನ್ನೂ ಮರೆತಿಲ್ಲ... ಆಶ್ರಮದಲ್ಲಿದ್ದು ನೀನು ಏನೂ ಬದಲಾಗಿಲ್ಲ..."

"ನಾನು ಬದಲಾಗಬಹುದು ಅಂತ ನೀವು ಯೋಚಿಸಿದಿದ್ದಾದರೂ ಹೇಗೆ? ನಿಮಗೂ ಮೋಸವಾಗಿದ್ದಿದ್ದರೆ ಗೊತ್ತಾಗ್ತಿತ್ತು"

"ನೀನು ಹಾಗೆ ತಿಳಿದು ಕೊಂಡಿದೀಯ... ನಿನ್ನ ಅಮ್ಮ ಹೃದಯ ಒಡೆದು ಸತ್ತಳು... ನಾನು ಸಾಯಲಿಲ್ಲ ಅಷ್ಟೇ... ಈ ಮಕ್ಕಳ ಪಾಲನೆ ನನ್ನ ಹಣೆಯಲ್ಲಿ ಬರೆದಿದೆ... ನನ್ನ ಕರ್ಮ"

"ನಿಮಗೆ ಈ ಮನೆಯಲ್ಲಿ ರಕ್ಷಣೆ ಸಿಕ್ಕಿತು. ಆ ದಯಾದಾಕ್ಷಿಣ್ಯದಿಂದ ನೀವು ಇದೀರಿ... ಆದರೆ ನಾನು? ಎಲ್ಲೋ ಬಿದ್ದಿದ್ದವನನ್ನು ಎತ್ತಿ ತಂದು ಸಾಕಿ, ಸಲಹಿ ಮೋಸ ಮಾಡುವ ಬದಲು... ಹಾಗೇ ಬಿಟ್ಟಿದ್ದರೇ... ಈ ದಿನ ಈ ಅನಾಥ ಮಕ್ಕಳ ಮೇಲೆ ನನಗೆ ಮರುಕ ಹುಟ್ಟುತ್ತಿತ್ತು.

"ಆ ಮಾತೆಲ್ಲ ಏಕೆ? ನಿನಗೆ ಮೋಸ ಮಾಡಿದವರು ಯಾರೋ? ಅವರಿಬ್ಬರೂ ಬದುಕಿಲ್ಲ, ಆ ಸೇಡನ್ನು ಈ ಮಕ್ಕಳ ಮೇಲೆ ತೋರಬೇಡ...ಅವತ್ತೇ ನೀನು ಅವರಿಬ್ಬರ ಮೇಲೆ ಕೇಸು ಹಾಕಿಸಬಹುದಾಗಿತ್ತು ಅವಳನ್ನು ಹೊಡೆದು ಮನೆಯಿಂದಾಚೆ ತಳ್ಳಬಹುದಾಗಿತ್ತು"

"ಯಾವ ಮನೆಯಿಂದ? ಬೇಲಿಯೇ ಎದ್ದು ಹೊಲ ಮೇಯ್ದಂತೆ... ಅದಕ್ಕೆ ನಾನೇ ಮನೆ ಬಿಟ್ಟು ಹೋದೆ..."

"ಅದು ನಿನ್ನ ಸಭ್ಯತನ.... ನಿನಗೆ ದೊರೆತ ಶಿಕ್ಷಣದ ಪ್ರಭಾವ...

ನಿನ್ನ ಹುಟ್ಟಿನ ಸಂಸ್ಕಾರ..."

"ನನ್ನ ನಿಜವಾದ ತಂದೆ ತಾಯಿ ಯಾರು ಅಂತ ನಿಮಗೇನಾದರೂ ಗೊತ್ತೆ? ಗೊತ್ತಿದ್ದರೆ ತಿಳಿಸಿ..."

"ಇಲ್ಲ ನನಗೆ ಗೊತ್ತಿಲ್ಲ... ಈ ವಿಷಯ ಸಹ ನನಗೆ ತಿಳಿದದ್ದು ಬಹಳ ತಡವಾಗಿ...ಆದರೆ ನಿನ್ನನ್ನು ಸಾಕಿ ಸಲಹದೇ ನಿನ್ನನ್ನು ದೂರಮಾಡಿದವರ ಬಗ್ಗೆ ತಿಳಿದುಕೊಂಡು ಏನು ಮಾಡ್ತೀಯಾ?"

ಅದೂ ಸರಿ ಎಂದೆನಿಸಿತ್ತು

"ಈಗ ಈ ಮಕ್ಕಳ ಭವಿಷ್ಯ ನಿನ್ನ ಕೈಲಿದೆ ಅನಂತ...ನೀನು ಬೆಳೆಸಿ, ಸಲಹಿ, ನಿನ್ನಂತೆ ಒಳ್ಳೆ ಹಾದಿಯಲ್ಲಿ ಮುಂದುವರೆಯುವಂತೆ ಮಾಡಬೇಕು... ಈ ಮಕ್ಕಳು ಅವರ ತಂದೆ ತಾಯಿಯರಂತೆ ಸ್ವಾರ್ಥಿಗಳಾಗಬಾರದು, ದ್ರೋಹಿಗಳಾಗಬಾರದು... ಸಮಾಜ ದೂಷಿಸುವಂತೆ ಇರಬಾರದು..."

ಅನಂತ ಗಂಭೀರವಾದ. ಈ ಮಾತು ಅವನಿಗೆ ಅನಿರೀಕ್ಷಿತ. ಇದು ಅವನಿಗೆ ಸಮ್ಮತವಿಲ್ಲ. ನನಗಾದ ಅನ್ಯಾಯಕ್ಕಿಂತ, ಈ ಮಕ್ಕಳ ಭವಿಷ್ಯದ ಬಗ್ಗೆಯೇ ಚಿಂತೆಯಲ್ಲ ಈ ದೊಡ್ಡಮ್ಮನಿಗೆ? ಅಥವಾ ಈ ನೆವದಲ್ಲಿ ನನ್ನನ್ನು ಮತ್ತೆ ಸಂಸಾರದ ಬಂಧನಗಳಿಗೆ ಎಳೆಯುವ ಆಸೆಯೇ? ಏನೋ ಒಂದು ರೀತಿಯ ಅಹಿತಕರವಾದ ಭಾವನೆ ಅವನನ್ನು ತುಂಬಿಕೊಂಡಿತ್ತು.

"ಇದೆಲ್ಲ ನನ್ನಿಂದ ಆಗದ ಕೆಲಸ ದೊಡ್ಡಮ್ಮ.... ನಾನು ಆಶ್ರಮಕ್ಕೆ ಸೇರಿದ ಮೇಲೆ, ಹಾಗಲ್ಲಾ ಮತ್ತೆ ಇಲ್ಲಿಗೆ ಬಂದು ಇರುವಂತಿಲ್ಲ... ಅದು ಅಪರಾಧ."

"ಅಪರಾಧವೇನಲ್ಲ..." ಭೈರಪ್ಪ ಅನಿರೀಕ್ಷಿತವಾಗಿ ನುಡಿದ.

"ಸ್ವಾಮೀಜಿಗೆ ಈ ವಿಷಯ ತಿಳಿದರೆ ಅವರಾಗಿಯೇ ಅಪ್ಪಣೆ ಕೊಡಿಸ್ತಾರೆ"

"ಅಂದರೆ? ನನಗೆ ಆದ ಅನ್ಯಾಯವನ್ನೆಲ್ಲಾ ಮರೆತು, ನನಗೆ ದ್ರೋಹ ಮಾಡಿದವರನ್ನು ಮರೆತು, ಅವರುಗಳಿಗೆ ಹುಟ್ಟಿದ ಈ ಮಕ್ಕಳ ಜವಾಬ್ದಾರಿಯನ್ನು ನಾನು ಹೊತ್ತು... ನಿಮ್ಮ ಮಾತು ತಮಾಷೆಯಾಗಿ ಕಾಣ್ತಿದೆ" ಅನಂತ ಅಡ್ಡಡ್ಡ ತಲೆ ಆಡಿಸಿದ.

"ತಮಾಷೆ ಮಾಡ್ತಿಲ್ಲ ನಾನು, ನೀನು ಅವರುಗಳನ್ನು ಕ್ಷಮಿಸಬೇಕು... ನೀನು ಮಹಾತ್ಮನಾಗಬೇಕು."

"ನಾನು ಮಹಾತ್ಮನಾಗುವುದು ಬೇಕಿಲ್ಲ. ನಾನು ಮನುಷ್ಯನಾಗಿಯೆ ಇರುತ್ತೇನೆ"

"ಹಾಗಾದರೆ ನೀನು ಆಶ್ರಮವಾಸವನ್ನು ಬಯಸಿ ಬಂದುದಾದರೂ ಯಾಕೆ? ಇಲ್ಲೇ ಇದ್ದು ಅವರುಗಳ ಮೇಲೆ ಸೇಡನ್ನು ತೀರಿಸಿಕೊಳ್ಳಬಹುದಾಗಿತ್ತಲ್ಲ

ಆಗ ನಿನಗೆ ನೆಮ್ಮದಿ ಸಿಕ್ಕಿರುತ್ತಿತ್ತು." ಭೈರಪ್ಪ ವ್ಯಂಗ್ಯವಾಗಿ ನುಡಿದಾಗ ಅನಂತ ತಲೆತಗ್ಗಿಸಿದ.

"ನಿನ್ನ ಆದರ್ಶಗಳಿಂದ ಆಶ್ರಮದಲ್ಲಿ ಹೊಸ ಬದಲಾವಣೆಗಳು ಕಂಡು ಬಂದವು... ನೀನು ಎಲ್ಲರಿಗೂ ಬೇಕಾದವನಾದೆ. ಇಲ್ಲಿ ಈಗ ನಿನ್ನ ಅವಶ್ಯಕತೆ ಇದೆ. ನೀನು ಈ ಮಕ್ಕಳಿಗಾಗಿ, ಅವರನ್ನು ಕ್ಷಮಿಸಿ ನಿನ್ನ ಅದರ್ಶವನ್ನು ಮೆರೆಯಬೇಕು" ಕ್ಷಮೆ ಒಂದು ಮಹಾದಾನ. ಅಷ್ಟೂ ತಿಳಿಯದೇ ನಿನಗೆ? ಇದು ಪ್ರಬುದ್ಧ ಮನಸ್ಸಿನ, ನಿಜಾತ್ಮನ ಉತ್ತಮ ಗುಣ. ಸಂಸ್ಕಾರವಂತ ಹೃದಯದಲ್ಲಿ ಸತ್‌ಸ್ವಭಾವದ ಬೆಳೆಯಲ್ಲಿ, ಮಾನವೀಯತೆಯ ಭವ್ಯನೋಟದಲ್ಲಿ ಮೂಡುವ ಒಂದು ಹೂವು ಇದು ಮಹತ್ತರವಾದುದು. ಇದಕ್ಕೆ ಕಾರ್ಯ ವನ್ನಾಗಲೀ, ಕಾರಣವನ್ನಾಗಲಿ, ಹುಡುಕುವ ಬದಲು, ಪರಿಣಾಮವನ್ನು, ಅವಲೋಕಿಸುವ, ಮಾನವೀಯತೆಯ ನೈಜತೆಯನ್ನು ಗುರುತಿಸುವ ದೊಡ್ಡ ಹೃದಯವಿರಬೇಕು ಅದು ನಿನ್ನಲ್ಲಿದೆ ಎಂದು ಭಾವಿಸುತ್ತೇನೆ"

ಅನಂತ ತಲೆ ಎತ್ತಿ ಅವರನ್ನೇ ನೋಡಿದ. ಇಷ್ಟು ಪ್ರಬುದ್ಧವಾದ ಮಾತುಗಳನ್ನು ಭೈರಪ್ಪನ ಬಾಯಿಯಿಂದ ಆಡಿಸುತ್ತಿರುವವರು ಯಾರು? ಸ್ವಾಮೀಜಿಯೇ...?

"ನೀನು ಅವರುಗಳನ್ನು ಕ್ಷಮಿಸುವುದರಿಂದ, ನೀನು ಸೋತೆ ಎಂದು ಭಾವಿಸಬೇಡ ಅಥವಾ ಅವರುಗಳನ್ನು ಕ್ಷಮಿಸುವುದರಿಂದ ನೀನು ಭಾರಿ ಕೆಲಸ ಮಾಡಿದೆ ಎಂಬ ಗರ್ವವೂ ಬೇಡ... ಇವೆರಡನ್ನು ಮೀರಿದ ಸಾಫಲ್ಯವನ್ನು ಮಾತ್ರ ಯೋಚಿಸು.."

ಭೈರಪ್ಪ ಅನಂತನ ಕಡೆ ನೋಡದೇ ತನ್ನ ಪಾಡಿಗೆ ತಾನು ನುಡಿಯುತ್ತಿದ್ದಾಗ, ಅನಂತನಿಗೆ ಒಂದು ರೀತಿಯ ಭಯವುಂಟಾಯಿತು.

"ಇದು ನಿಜಕ್ಕೂ ಭೈರಪ್ಪನ ಮಾತುಗಳಲ್ಲ..." ಎಂದುಕೊಂಡು ಅವನ ಬಳಿಗೆ ಬಂದು ಹತ್ತಿರ ನಿಂತು ಎಚ್ಚರಿಸಿದ.

"ನಡೀರಿ.... ನಾವು ಈಗಲೇ ಆಶ್ರಮಕ್ಕೆ ವಾಪಸ್ಸು ಹೋಗೋಣ?"

"ಈಗ? ಈಗೇಕೆ! ಈಗ ಬಸ್ಸು ರೈಲು ಯಾವುದೂ ಇಲ್ಲ ಬೆಳಿಗ್ಗೆ ಹೋಗೋಣ ಆದರೆ..."

"ನಾನು ಮೊದಲು ಸ್ವಾಮೀಜಿಯವರ ಹತ್ತಿರ ಮಾತನಾಡಬೇಕು. ಅವರ ಅಪ್ಪಣೆಯಿಲ್ಲದೇ ನಾನು ಯಾವ ಕೆಲಸವನ್ನು ಒಪ್ಪಿಕೊಳ್ಳುವುದಿಲ್ಲ"

ಭೈರಪ್ಪ ನಕ್ಕ. "ಆಗಲಿ ನಾಳೆ ಹೋಗೋಣ ಈ ರಾತ್ರಿ ಊಟ ಮಾಡಿ ಇಲ್ಲಿಯೇ ಮಲಗೋಣ"

ಅನಂತನಿಗೆ ಊಟದ ಚಿಂತೆ ಇರಲಿಲ್ಲ ಯಾವುದೂ ಬೇಡವೆನ್ನಿಸುವ

ತಳಮಳ. "ನನಗೆ ಏನೂ ಬೇಡ..." ಎಂದ.

"ನನಗೆ ಬೇಕು, ಖಾಲಿ ಹೊಟ್ಟೆಯಲ್ಲಿ ಮಲಗಿದರೆ ನನಗೆ ನಿದ್ದೆ ಬರುವುದಿಲ್ಲ" ಎನ್ನುತ್ತಾ ಭೈರಪ್ಪ ಎದ್ದು, ಆ ಮಕ್ಕಳ ಕೈಹಿಡಿದು ಕೈಕಾಲು ತೊಳೆಯಲು ಹೊರಟಾಗ ಅನಂತ ತಲೆಯ ಮೇಲೆ ಕೈ ಹೊತ್ತ.

"ನೀನು ಫಲಹಾರ ಮಾಡ್ತೀಯೋ ಅಥವಾ...? ದೊಡ್ಡಮ್ಮ ಕೇಳಿದ್ದಳು.

"ನನಗೆ ಏನೂ ಬೇಡ. ನನಗೆ ತಿನ್ನುವ ಮನಸ್ಸಿಲ್ಲ."

"ಬಾಳೆಹಣ್ಣು ತಿಂದು ಹಾಲು ಕುಡಿದು ಮಲಗು. ಹೇಗೂ ನಾಳೆ ಹೊರಟಿದೀಯಲ್ಲ. ನಾನು ಬಲವಂತ ಮಾಡುವುದಿಲ್ಲ. ದೇವರಿಚ್ಛೆ ಇದ್ದಂತೆ ಆಗಲಿ. ಉಪವಾಸವೇಕೆ ಮಲಗಬೇಕು!" ಎನ್ನುತ್ತಾ ಹಾಲು, ಹಣ್ಣುಗಳನ್ನು ತಂದಿತ್ತಳು. ಅವಳ ಮನಸ್ಸನ್ನು ನೋಯಿಸಲು ಇಚ್ಛಿಸದೆ ನಿಧಾನವಾಗಿ ಹಣ್ಣು ಗಳನ್ನು ತಿಂದು, ಹಾಲನ್ನು ಕುಡಿದು ಮುಗಿಸಿದ.

ಬೆಳಿಗ್ಗೆ ಅವನು ಹೊರಟು ನಿಂತಾಗ ವೇದಮ್ಮ ಬೇಡ ಎನ್ನಲಿಲ್ಲ. ಸ್ಕೂಲಿಗೆ ಹೋಗಲು ಸಿದ್ಧರಾಗಿದ್ದ ಮಕ್ಕಳು ಎದುರಾದವು. ಭೈರಪ್ಪ "ಗುಡ್ ಮಾರ್ನಿಂಗ್" ಎಂದಾಗ, ಮಕ್ಕಳೂ ನಗು ನಗುತ್ತಾ "ಗುಡ್‌ಮಾರ್ನಿಂಗ್" ಎಂದು ಹೇಳಿ, ಅನಂತನ ಕಡೆ ನೋಡಿದಾಗ, ಅವನು ಮುಖ ತಿರುಗಿಸಿದ, ಮಕ್ಕಳು ಹೊರಟು ಹೋದವು.

ಬಸ್‌ಸ್ಟ್ಯಾಂಡಿನಲ್ಲಿ ಕಾಯುತ್ತಾ ನಿಂತಿದ್ದಾಗ, ಪುರುಷೋತ್ತಮ ಜೀಪು ನಿಲ್ಲಿಸಿ, "ಭೈರಪ್ನೋರೆ... ಎಂದು ಕರೆದು, ಹಾರನ್ ಸಹ ಮಾಡಿದ. ಇಬ್ಬರೂ ಜೀಪಿನ ಬಳಿಗೆ ಬಂದರು.

"ವಾಪಸ್ಸು ಹೊರಟು ಬಿಟ್ಯಂತೆ ಯಾಕೆ? ಲಾಯರ ಹತ್ತಿರ ಮಾತನಾಡಿದ ನಂತರ ಹೋಗಿದ್ದಿದ್ರೆ ಚೆನ್ನಾಗಿತ್ತು"

"ನಾನು ಅರ್ಜೆಂಟಾಗಿ ಸ್ವಾಮೀಜಿಯವರ ಹತ್ತಿರ ಮಾತನಾಡಬೇಕು. ಅವರು ಅಪ್ಪಣೆ ಕೊಟ್ಟರೆ ಆದಷ್ಟು ಬೇಗ ವಾಪಸ್ಸು ಬರ್ತೀನಿ..."

"ಅಂದರೆ...? ಆದರೆ ಇದು ನಿನ್ನ ಸ್ವಂತ ವಿಚಾರ ತಾನೆ?"

"ನಾನು, ನನ್ನದು ಅಂತ ಸ್ವಾರ್ಥವನ್ನೆಲ್ಲಾ ಬಿಟ್ಟು ಬಿಡುವುದರಲ್ಲಿದ್ದವನ್ನು ಮತ್ತೆ ಈ ಹಳೆಯ ವಿಚಾರಗಳು ಮನಸ್ಸನ್ನು ಕಲಕಿ ಬಿಟ್ಟಿವೆ. ನನಗೆ ಏನು ಮಾಡಬೇಕು ಅಂತ ತೋಚುತ್ತಿಲ್ಲ ಸ್ವಾಮೀಜಿ ಅಪ್ಪಣೆ ಕೊಡಿಸಿದಂತೆ ನಡೆದುಕೊಳ್ತೀನಿ"

"ಸರಿ, ಹಾಗಾದರೆ ಬಸ್‌ಸ್ಟ್ಯಾಂಡ್‌ಗೆ ಬಿಡ್ತೀನಿ...ಬನ್ನಿ"

ಭೈರಪ್ಪ ಯಾವ ಸಂಕೋಚವೂ ಇಲ್ಲದೇ ಜೀಪನ್ನೇರಿ ಕುಳಿತ. ಅನಂತ ಅನುಮಾನಿಸುತ್ತಾ ಹತ್ತಿದ. "ಭೈರಪ್ಪನಷ್ಟು ಸಲೀಸಾಗಿ ತನ್ನಿಂದ ಇರಲು

ಆಗುತ್ತಿಲ್ಲವಲ್ಲ ಏಕೆ?" ಚಿಂತಿಸಿದ.

ಅದೇ ರಾತ್ರಿ ಏಕಾಂತದಲ್ಲಿ ಅನಂತ ಸ್ವಾಮೀಜಿಯವರೊಡನೆ ಮಾತ ನಾಡಿದ. ಅಷ್ಟು ಬೇಗನೇ ಅವನು ಅವನು ವಾಪಸ್ಸು ಬಂದುದು, ಅವರಿಗೂ ಅವನ ತಳಮಳ ಎಂದು ಅರ್ಥವಾಗಿತ್ತು.

"ನನಗೆ ದಿಕ್ಕು ತೋಚುತ್ತಿಲ್ಲ.... ನನಗೆ ಅಲ್ಲಿರಲು ಸಾಧ್ಯವಿಲ್ಲ" ತನ್ನ ದುಗುಡವನ್ನು ತಿಳಿಸಿದ.

"ನಾನು ಏನು ಅಪ್ಪಣೆ ಕೊಟ್ಟರೆ, ಹಾಗೇ ಮಾಡುವೆ ಅಲ್ಲವೆ?"

"ಹುಂ..." ತಲೆ ಆಡಿಸಿದ.

"ಹಾಗಾದರೆ, ನೀನು ಕೆಲವು ಕಾಲ ಅಲ್ಲಿದ್ದು ಬರುವುದೇ ಸರಿ...ಏಕೆ ಅಂತ ಕಾರಣ ಕೇಳಬೇಡ...ಸಾಧ್ಯವಿಲ್ಲ ಅಂತ ನೆವ ಹೇಳಬೇಡ..."

"ಆದರೂ..."

"ನನಗೆ ಗೊತ್ತು.... ಅದು ನಿನ್ನ ಇಷ್ಟಕ್ಕೆ ವಿರುದ್ಧವಾದ ಕೆಲಸ. ಇಷ್ಟವಿದ್ದು ಮಾಡಿದ ಕೆಲಸದಲ್ಲಿ ಜಯ ಸಿಗುವುದು ಕಷ್ಟವೇನಲ್ಲ. ಈಗ ನಿನಗೆ ಇಷ್ಟವಿಲ್ಲದ ಕೆಲಸವನ್ನು ಮಾಡಿ ಗೆಲುವನ್ನು ಸಾಧಿಸಬೇಕು...ಅದು ಮಾನವೀಯತೆಯ ಧರ್ಮ. ಆ ಮಕ್ಕಳೂ ನಿನ್ನ ದ್ವೇಷಿಗಳ ಮಕ್ಕಳೇ ಹೌದು. ಆದರೆ ಅವುಗಳ ತಪ್ಪೇನು ಯೋಚಿಸು... ಏಕಾಂಗಿಯಾಗಿ ಅವುಗಳ ಜವಾಬ್ದಾರಿ ಯನ್ನು ಹೊತ್ತಿರುವ ನಿನ್ನ ದೊಡ್ಡಮ್ಮನ ಬಗ್ಗೆ ಯೋಚಿಸು... ಪರರ ಕಷ್ಟದಲ್ಲಿ ಆಗುವುದೇ ಸಹಜ ದರ್ಮ. ನಿನ್ನ ಧರ್ಮವನ್ನು ಬಿಡಬೇಡ. ನಿನ್ನ ಆದರ್ಶ ಗಳಿಗೆ ಬೆನ್ನು ಮಾಡಿ ತಿರುಗಬೇಡ."

ಮಗನಿಗೆ ಶತೃವಿನ ಹೆಸರನ್ನು ಇಡಬೇಕು ಎಂದು ಪುರಂದರದಾಸರು ಹೇಳಿದ್ದಾರೆ... ಅಂದರೆ ನಿನ್ನ ಶತೃವನ್ನು ಮಗನಂತೆ ಕಾಣು... ಅವರ ತಪ್ಪನ್ನು ಕ್ಷಮಿಸಿ, ಅವರನ್ನು ನಿನ್ನವರಂತೆ ಭಾವಿಸು ಅಂತ ಅರ್ಥ. ಅದು ನಿನಗೆ ಕಷ್ಟ ವಾದುದೇನಲ್ಲ... ನಿನ್ನ ಕಾರ್ಯವನ್ನು ಸಾಧಿಸಿ, ಮಕ್ಕಳನ್ನು ಒಂದು ನೆಲೆಗೆ ತಂದು ನಂತರ ಬಾ..."

"ನಾನು ಅಲ್ಲಿ ಹೇಗಿರಲಿ! ನಾನು ಆಶ್ರಮದ ಜೀವನಕ್ಕೆ ಒಗ್ಗಿ ಹೋಗಿದ್ದೇನೆ"

"ಈ ರೀತಿಯ ಜೀವನವನ್ನು ಪಾಲಿಸುವುದು ಅಲ್ಲಿ ನಿನಗೆ ಕಷ್ಟವಲ್ಲ. ನಿನ್ನ ಕಾರ್ಯದಲ್ಲಿ ಸಫಲನಾಗಿ ಬಾ... ಜಗನ್ನಾಥನು ನಿನಗೆ ಒಳ್ಳೆಯದನ್ನು ಮಾಡಲಿ..." ಹರಸಿದರು.

"ನನಗೆ ದಿಗಿಲಾಗುತ್ತಿದೆ" ಅನಂತ ಕೈ ಕೈ ಹೊಸಕಿದ.

"ದಿಗಿಲೇಕೆ! ನಿನ್ನ ಇಷ್ಟವಿಲ್ಲದೇ, ನೀನು ಮತ್ತೆ ಆ ಬಂಧನಕ್ಕೆ

ಒಳಗಾಗಲಾರೆ. ಇದು ಕೇವಲ ರಕ್ಷಣೆಯ ಕೆಲಸ. ಬೇಕಾದರೆ ನಿನ್ನ ಜೊತೆಗೆ ಭೈರಪ್ಪನನ್ನೂ ಕರೆದುಕೊಂಡು ಹೋಗು. ನಿನಗೆ ಒಬ್ಬ ಆಪ್ತ ಸ್ನೇಹಿತನ ಅಗತ್ಯವಿದೆ."

ಅನಂತನಿಗೆ ಒಂದು ತರಹ ನೆಮ್ಮದಿ ಎನಿಸಿದರೂ, ಸ್ವಾಮೀಜಿ ತಾವಾಗಿಯೇ ಭೈರಪ್ಪನನ್ನು ಏಕೆ ಕಳುಹಿಸುತ್ತಿರಬಹುದು ಎಂದು ಚಿಂತಿಸಿದ. ತಾನು ಅಲ್ಲಿಯೇ ಉಳಿದು ಬಿಡಬಹುದು ಎಂಬ ಅನುಮಾನವೇ... ಅಥವಾ ತನ್ನೊಬ್ಬನಿಂದ ಈ ಜವಾಬ್ದಾರಿ ಅಸಾಧ್ಯ... ತನ್ನಿಂದ ಏನಾದರೂ ಅವರುಗಳಿಗೆ ತೊಂದರೆ ಒದಗಬಹುದು ಎಂಬ ಸಂದೇಹವೇ ಏನಾದರೂ ಆಗಿ ಹೋಗಲಿ... ಜಗನ್ನಾಥನಿದ್ದಾನೆ... ಎಂದುಕೊಂಡು "ಜೈ ಜಗನ್ನಾಥ" ಎಂದು ಸ್ವಾಮಿಜೀಯವರ ಪಾದಗಳಿಗೆ ವಂದಿಸಿ ಅಲ್ಲಿಂದ ಹೊರಬಂದ. ಆದರೆ ಮುಖದಲ್ಲಿ ಸಮಾಧಾನದ ಚಿಹ್ನೆಗಳಿರಲಿಲ್ಲ.

ಅಗತ್ಯವಾದ ತನ್ನ ಕೆಲವು ವಸ್ತುಗಳನ್ನು ಕೆಲವು ಉತ್ತಮ ಪುಸ್ತಕಗಳನ್ನು ತೆಗೆದುಕೊಂಢು, ಅನಂತ ಎಲ್ಲರಿಗೂ ಹೋಗಿ ಬರುವುದಾಗಿ ಹೇಳಿ ಅಲ್ಲಿಂದ ಹೊರಟ. ಅತೀ ಗಂಭೀರನಾಗಿ ನಡೆಯುತ್ತಿದ್ದವನನ್ನು ಭೈರಪ್ಪ ಖುಷಿಯಿಂದ ಹಿಂಬಾಲಿಸಿದ. ಆ ಮುಗ್ಧ ಮಕ್ಕಳೂ ಭೈರಪ್ಪನನ್ನು ಆಕರ್ಷಿಸಿದ್ದವು. ಅವನು ಅನಂತನನ್ನು ವೇಗವಾಗಿ ನಡೆದು ಬಂದು ಸೇರಿದ.

ವಾಪಸ್ಸಾದ ಅನಂತನನ್ನು ವೇದಮ್ಮ ಸಂಭ್ರಮದಿಂದ ಸ್ವಾಗತಿಸಿದಳು. ಆದರೆ ಅನಂತ ಗಂಭೀರನಾಗಿದ್ದ. ಆಕೆಯ ಹಿಂದೆ ನಿಂತಿದ್ದ ಮಕ್ಕಳನ್ನು ಭೈರಪ್ಪ ಸಂಜ್ಞೆಯಿಂದ ಕರೆದ...." ಈ ಮಕ್ಕಳಿಗೆ ನಾನು ಪೋಷಕನಾಗಬೇಕೆ?" ಈ ಮುಗ್ಧ ಮಕ್ಕಳನ್ನು ಹೀಗೆ ಪರದೇಶಿಗಳನ್ನಾಗಿ, ಅನಾಥರನ್ನಾಗಿ ಮಾಡಿ ಹೋಗಲು ಆ ಪಾಪಿಗಳು ಇಷ್ಟು ನಾಟಕವನ್ನಾಡಬೇಕಾಗಿತ್ತೆ?". ಮತ್ತೆ ಅವನ ಮನಸ್ಸು ಕಹಿಯಾಯಿತು.

"ಹೋಗಿ ಕೈಕಾಲು ತೊಳೆದುಕೊಂಡು ಬನ್ನಿ, ತಿಂಡಿ ಕಾಪಿ ಕೊಡ್ತೀನಿ"

"ನನಗೆ ಕಾಫಿ ತಿಂಡಿ ಏನೂ ಬೇಡ. ಒಂದು ಲೋಟ ಮಜ್ಜಿಗೆ ಕೊಡಿ ಸಾಕು..." ಅನಂತ ನುಡಿದ.

ಬಿಳಿ ಪಾಯಿಜಾಮು, ಬಿಳಿ ಜುಬ್ಬಾ ಧರಿಸಿದ್ದ ಅನಂತನನ್ನು ಧೀರ್ಘವಾಗಿ ನೋಡಿದಳು ವೇದಮ್ಮ. ಅವನ ಮುಖದಲ್ಲಿ ವೈರಾಗ್ಯಕ್ಕಿಂತ ಜಿಗುಪ್ಸೆ ಹೆಚ್ಚಾಗಿದ್ದುದನ್ನು ಗುರುತಿಸಿದಳು. ಕುರುಚಲಾಗಿ ಬೆಳೆಸಿದ್ದ ಗಡ್ಡ ಮೀಸೆ ಅವನಿಗೆ ಒಪ್ಪುತ್ತಿರಲಿಲ್ಲ. ಮೊದಲು ಈ ಗಡ್ಡ ಮೀಸೆಯನ್ನು ಬೋಳಿಸಿ, ಬಿಳಿಯ ಬಟ್ಟೆಯ ಬದಲು, ಬಣ್ಣದ ಪ್ಯಾಂಟು ಷರ್ಟು ತೊಡುವಂತೆ ಮಾಡಬೇಕು" ಎಂದುಕೊಂಡಳು.

ಮಾರನೇ ದಿನ ಲಾಯರ್ರು ಮನೆಗೇ ಬಂದರು. ಅನಂತ ಚಡಪಡಿಸುತ್ತಿದ್ದ ಮಕ್ಕಳು ಸ್ಕೂಲಿಗೆ ಹೋಗಿದ್ದವು. ಪುರುಷೋತ್ತಮ ಬರಲಾಗುವುದಿಲ್ಲವೆಂದು ತಿಳಿಸಿದ್ದ.

ಅನಂತ ತನ್ನ ಸ್ವಇಚ್ಛೆಯಿಂದ ಸಮಸ್ತ ಆಸ್ತಿಯನ್ನು ಆ ಮಕ್ಕಳ ಹೆಸರಿಗೆ ಬರೆಸಿ, ಅವರಿಬ್ಬರೂ ವಯಸ್ಕರಾಗುವ ತನಕ ತಾನು ಅವರ ಗಾರ್ಡಿಯನ್ ಆಗಿರಲು ಒಪ್ಪಿ ಸಹಿ ಹಾಕಿದ. ಆಗ ಅವನಿಗೆ, ಆ ಮಕ್ಕಳ ಹೆಸರು ತಿಳಿಯಿತು. ಹುಡುಗಿಗೆ ಆರು ವರ್ಷಗಳು, ಹೆಸರು ಲಲಿತಾ, ಹುಡುಗನ ಹೆಸರು ಸತ್ಯಕಾಮ, ವಯಸ್ಸು ನಾಲ್ಕೂವರೆ ವರ್ಷಗಳು. ಆ ಸಮಯದಲ್ಲೂ ಸುಗುಣ ಹಾಗೂ ಗೋಪಾಲನ ಸಂಬಂಧ ಕುರಿತು, ಆವನ ಮನಸ್ಸು ಯೋಚಿಸಿತು. ಛೆ... ಎಷ್ಟು ಕೀಳಾಗಿ ನಡೆದುಕೊಂಡಿದ್ದರಲ್ಲ... ಈ ದಿನ ತಾನು ಆ ಮಕ್ಕಳ ಜನ್ಮವನ್ನು ಒಪ್ಪಿಕೊಂಡಂತಾಯಿತಲ್ಲವೇ...

ವೇದಮ್ಮ ಎಲ್ಲರಿಗೂ ಕಾಫಿಯನ್ನು ತಂದಿತ್ತಾಗ, ಅವನಿಗೆ ಕುಡಿಯಬೇಕೆನಿಸಲಿಲ್ಲ, ಎದ್ದು ಹೊರಗೆ ಬಂದವನನ್ನು ವೇದಮ್ಮ ಪ್ರಶ್ನಿಸಿದಳು.

"ನಿನ್ನ ಇಷ್ಟದಂತೆ ಮಾಡಿಯಾಯ್ತಲ್ಲ. ಇನ್ನಾದರೂ ಮನಸ್ಸನ್ನು ಸರಿ ಮಾಡಿಕೋ ಬಹುದಲ್ಲವೆ!"

"ಏನು ಸರಿ ಹೋಗುತ್ತೆ? ನೀವೇ ಹೇಳಿ...ನನ್ನ ಪಾಡಿಗೆ ನಾನು ಇದ್ದೆ...ನನ್ನನ್ನು ಕರೆಸಿ, ಬೇಡದ ಬಂಧನಕ್ಕೆ ಸಿಕ್ಕಿಸುತ್ತಿದೀರಲ್ಲ..."

"ನಿನಗೆ ಮಾತ್ರವಲ್ಲ. ನನಗೂ ಬೇಡದ ಬಂಧನವೇ...ನಾನು ಬಯಸಿ ಬಂದು ಇಲ್ಲಿ ಸೇರಿಕೊಂಡೆನೇ?"

"ಏನೋ ನನಗದು ಗೊತ್ತಿಲ್ಲ..."

"ನಿನಗೆ ಗೊತ್ತಿಲ್ಲದ ಎಷ್ಟೋ ವಿಚಾರಗಳಿವೆ" ಎಂದು ಹೇಳ ಹೊರಟವಳು ಸುಮ್ಮನಾದಳು. ತಾನೂ ಸಹ ಗೋಪಾಲನ ಪತ್ನಿಯಾಗಿದ್ದವಳು ಅಂತ ತಿಳಿದರೆ ಇವನಿಗೆ ಏನನ್ನಿಸಬಹುದು! ತಾನು ಮನಸ್ಸು ಮಾಡಿದ್ದರೆ, ಈ ಆಸ್ತಿ ಪಾಸ್ತಿಯನ್ನೆಲ್ಲ ತನ್ನ ಹೆಸರಿಗೆ ಬರೆಸಿಕೊಂಡು ಆರಾಮಾವಾಗಿರಬಹುದಾಗಿತ್ತು... ಆದರೆ... ಗೋಪಾಲನಿಂದ ತನಗೂ ಅನ್ಯಾಯವಾಗಿತ್ತೆನ್ನುವುದನ್ನು ಮರೆಯುವಂತಿರಲಿಲ್ಲವಾದರೂ, ಮಕ್ಕಳ ಹೊರತು ಬೇರೆ ಯಾರಿಗೂ ಹಕ್ಕಿರಲಿಲ್ಲ. ಆದರೆ ಅನಂತ ಎಲ್ಲವನ್ನು ತನಗೆ ಮೋಸ ಮಾಡಿದವರ ಮಕ್ಕಳಿಗೆ ಕೊಟ್ಟು ಬಿಟ್ಟನಲ್ಲ... ಇದು ಸರಿಯೇ... ತಾನೂ ಅನಂತನಿಗೆ ಮೋಸ ಮಾಡಿದಂತಾಗಲಿಲ್ಲವೆ? ಹೇಗೂ ಬಂದಿದಾನೆ. ಅವನೂ ಹಳೆಯದನ್ನೆಲ್ಲ ಮರೆತು, ಮತ್ತೆ ಮದುವೆಯಾಗಿ ಸಂಸಾರಸ್ಥನಾದರೆ, ಲಲಿತಳ ಆತ್ಮಕ್ಕೆ ಶಾಂತಿ ಸಿಗುತ್ತಿತ್ತು.

ಅನಂತ ಯೋಚಿಸುತ್ತಿದ್ದುದೇ ಬೇರೆ..." ಲಲಿತ ಅಂತ ಹೆಸರನ್ನು ಯಾಕೆ ಇಟ್ಟರೋ... ಕೈ ಹಿಡಿದ ಹೆಂಡತಿಗೆ ದ್ರೋಹ ಬಗೆದು... ಆ ಹೆಸರನ್ನು ಮಗಳಿಗೆ ಇಡುವ ಪ್ರಮೇಯವಾದರೂ ಏನಿತ್ತು! ಹೆಸರನ್ನು ಬದಲಾಯಿಸಿದರೇ... ತನಗೇಕೆ!.... ತಾನು ಇಲ್ಲಿರುವ ಉದ್ದೇಶವೇ ಬೇರೆ..."

"ಒಳಗೆ ಬಂದು ಕೂತ್ಕೋ... ನಿನ್ನ ಇಷ್ಟದಂತೆಯೇ ಆಯ್ತಲ್ಲ ಇನ್ನೇನು!"

ಅನಂತ ಮತ್ತೆ ಬಂದು ಕುಳಿತ. ಲಾಯರು ಭೈರಪ್ಪನ ಹಾಗೂ ವೇದಮ್ಮನ ಸಹಿಯನ್ನು ಹಾಕಿಸಿಕೊಂಡಿದ್ದರು. ಅವರಿಗೆ ಕೆಲವು ವಿಷಯ ತಿಳಿದಿದ್ದರೂ ಅನಂತನ ವರ್ತನೆ ಆಶ್ಚರ್ಯವನ್ನುಂಟು ಮಾಡಿತ್ತು.

"ಈ ಕಾಲದಲ್ಲಿ.... ತನಗೆ ಏನೂ ಬೇಡವೆನ್ನುವ ಅನಂತನ ಔದಾರ್ಯ" ಅವರಿಗೆ ಅರ್ಥವಾಗಿರಲಿಲ್ಲ. ಅವನು ತನ್ನ ಬಗ್ಗೆ ಏನನ್ನು ಹೇಳಿಕೊಳ್ಳಲು ಇಚ್ಛಿಸಲಿಲ್ಲ.

ಲಾಯರ್ರು ಹೊರಟ ನಂತರ, ಅವನೂ ತಿರುಗಾಡಿ ಬರಲು ಹೊರಟಾಗ, ವೇದಮ್ಮ ಹೆದರಿದಳು ಆದರೆ ಬೇಡ ಎನ್ನಲಾರಳು, ಕೇಳಲಾರಳು ಅವಳ ತಳಮಳವನ್ನು ಗಮನಿಸಿದ ಭೈರಪ್ಪ ನುಡಿದ.

"ಎಲ್ಲೂ ಹೋಗೊಲ್ಲ, ವಾಪಸ್ಸು ಬರ್ತಾನೆ ಬಿಡಿ..."

ಎಷ್ಟೋ ಹೊತ್ತಿನ ನಂತರ ಅವನು ವಾಪಸ್ಸು ಬಂದಾಗ ಅವನಿಗಾಗಿಯೇ ಕಾಯುತ್ತಾ ಕುಳಿತಿದ್ದ ಪುರುಷೋತ್ತಮ

"ಊಟ ಸಹ ಮಾಡದೇ ಎಲ್ಲಿಗೆ ಹೋಗಿದ್ದೆ?" ಕೇಳಿದ.

"ಸುಮ್ಮನೇ ತಿರುಗಾಡಿ ಬರಲು ಹೋಗಿದ್ದೆ. ಊರು ತುಂಬಾ ಬದಲಾಯಿಸಿ ಹೋಗಿದೆ"

"ಮೊದಲು ಊಟ ಮಾಡು, ಎಷ್ಟು ಹೊತ್ತಾಗಿ ಹೋಗಿದೆ..." ಎನ್ನುತ್ತಾ ವೇದಮ್ಮ ಮೂವರಿಗೂ ಬಡಿಸಿದಳು. ಊಟ ಮುಗಿಸಿ ಏಳುವಷ್ಟು ಹೊತ್ತಿಗೆ ಮಕ್ಕಳು ಸ್ಕೂಲಿನಿಂದ ಬಂದರು. ಅನಂತ ತನ್ನ ಪಾಡಿಗೆ ತಾನು ಮುಂದಿನ ರೂಮನ್ನು ಸೇರಿದ. ಭೈರಪ್ಪ ಮಕ್ಕಳೊಡನೆ ಉಳಿದ ಪುರುಷೋತ್ತಮ ಹೊರಟ.

"ನಾಳೆ ಪ್ರಶಾಂತ ಊರಿಗೆ ಬರುತ್ತಿದ್ದಾನೆ.... ಅವನು ಊರಿನಲ್ಲಿರುವ ವರೆಗೂ ನಾನು ಸ್ವಲ್ಪ ಬಿಸಿ."

"ಅವನನ್ನೂ ಕರೆದುಕೊಂಡು ಬನ್ನಿ... ಪಾಪ ತಾಯಿಯಿಲ್ಲದ ತಬ್ಬಲಿ.... ಒಬ್ಬನಿಗೇ ಬೇಜಾರಾಗುಲ್ವೇ..."

"ಹಾಗೇನಿಲ್ಲ ಈಗ ದೊಡ್ಡವನಾಗಿದಾನೆ...ಅವನ ಜವಾಬ್ದಾರಿ ಅವನಿಗೆ ತಿಳಿದಿದೆ ಖಂಡಿತಾ ಒಂದು ಸಲ ಕರೆದುಕೊಂಡು ಬರ್ತೀನಿ" ಎಂದು ಹೇಳಿ

ಪುರುಷೋತ್ತಮ ಹೊರಟು ಹೋದ.

ಮಕ್ಕಳು ಮನೆಯಲ್ಲಿ ಇವೆ ಎನ್ನುವ ಗಲಾಟೆ ಸಹ ಇಲ್ಲ, ಅನಾಥಶ್ರಮದ ಮಕ್ಕಳು ಸಹ ಊಟ, ತಿಂಡಿ ಕಾಫಿಯ ಸಮಯದಲ್ಲಿ ಅಲ್ಪಸ್ವಲ್ಪ ಗಲಾಟೆ ಮಾಡುತ್ತಿದ್ದರು. ಅಥವಾ ತನಗೆ ಹೆದರಿ ಸುಮ್ಮನಿದಾರೇನೋ ಅಂತ ಅಂದು ಕೊಂಡಾಗ, ಏನೋ ಮುಜುಗರವೆನಿಸಿತ್ತು. ತಮ್ಮ ಪಾಡಿಗೆ ತಾವು ಹಾಯಾಗಿ ಆಡಿಕೊಂಡಿರಬೇಕಾದ ವಯಸ್ಸು... ತಾವು ಅನಾಥರು, ತಮಗೆ ತಂದೆ ತಾಯಿಯರಿಲ್ಲ ಅಂತ ಸಹ ನೆನಪಿಲ್ಲವೇನೋ ಅಂತ ಅಂದುಕೊಂಡಾಗ, ಮೊಟ್ಟ ಮೊದಲ ಬಾರಿಗೆ ಮಕ್ಕಳ ಬಗ್ಗೆ ಕನಿಕರವುಂಟಾಗಿತ್ತು. ವೇದಮ್ಮನ ನಿಷ್ಠೆ ಅತಿಶಯವಾಗಿ ಕಂಡಿತ್ತು.... ಈಗ ವೇದಮ್ಮ ಹಾಗೂ ತಾನೂ ಹೊತ್ತಿರುವ ಜವಾಬ್ದಾರಿ ವಿಚಿತ್ರವಾದರೂ ಏನೋ ಒಂದು ರೀತಿಯ ಉನ್ನತ ಕಾರ್ಯವೆನ್ನುವಂತೆ ತೋರಿತ್ತು. ತನ್ನ ಬಗ್ಗೆಯೇ ಹೆಮ್ಮೆ ಮೂಡಿದಾಗ ತಲೆ ಕೊಡವಿಕೊಂಡ. ಆತ್ಮ ಪ್ರಶಂಸೆ ಸರಿಯಲ್ಲ ಎನ್ನುವುದು ತಿಳಿದಿತ್ತು.

"ಅನಂತ ಕಾಫಿ ಕೊಡಲಾ? ನೀನು ಮಲಗಿದೀಯೇನೋ ಅಂತ ಅಂದುಕೊಂಡೆ...."

"ಮಧ್ಯಾಹ್ನದ ಹೊತ್ತು ನಿದ್ದೆ ಮಾಡುವ ಅಭ್ಯಾಸವಿಲ್ಲ, ಹಾಗೇ ಹೆಚ್ಚಿಗೆ ಕಾಫಿ ಸಹ ಕುಡಿಯುಲ್ಲ, ನನಗೆ ಮಜ್ಜಿಗೆ ಕೊಡಿ"

"ನಾನೊಂದು ಮಾತು ಹೇಳ್ತೀನಿ, ನೀನು ಬೇಸರಿಸಬಾರದು....ಆಶ್ರಮದ ವೈರಾಗ್ಯ ಜೀವನ ನಿನಗಲ್ಲ. ನೀನು ಇನ್ನು ಚಿಕ್ಕವನು ನೀನು ಮತ್ತೆ ಸಂಸಾರಸ್ಥ ನಾಗಬೇಕು.

"ನನಗೆ ಈ ಮಾತು ಹಿಡಿಸುವುದಿಲ್ಲ ದೊಡ್ಡಮ್ಮ, ಈ ಮಾತನ್ನು ಮಾತ್ರ ಆಡಲೇಬೇಡಿ. ನಾನು ನೆಮ್ಮದಿಯಿಂದಿರಲು ಬಿಡಿ"

"ಈಗಲೂ ನಿನಗೆ ನೆಮ್ಮದಿ ಇಲ್ಲ"

"ಹಾಗಂತ ಯಾರು ಹೇಳಿದರು!"

"ನಿನ್ನ ಮುಖವೇ ಹೇಳುತ್ತೆ...." ಅನಂತ ಬೆದರಿದ. ಹಾಗಾದರೆ ನನ್ನ ಮನಸ್ಸಿನ ಭಾವನೆಗಳು ನನ್ನ ಮುಖದಲ್ಲಿ ವ್ಯಕ್ತಗೊಳ್ಳುತ್ತವೆಯೇ...ಇನ್ನು ಮೇಲೆ ಆದಷ್ಟು ಎಚ್ಚರದಿಂದಿರಬೇಕು ಅಂತ ಅಂದುಕೊಂಡ. ಬಲವಂತವಾಗಿ ನಗುವನ್ನು ಬರಿಸಿಕೊಂಡ.

"ಒಬ್ಬನೇ ಒಳಗೆ ಕೂತು ಏನ್ಮಾಡ್ತೀಯಾ... ಹೊರಗೆ ಬಾ..."

"ನನಗೆ ಇಲ್ಲಿ ಹೊತ್ತು ಕಳೆಯುವುದೇ ಕಷ್ಟವಾಗಿದೆ.... ಆಶ್ರಮದಲ್ಲಾದರೆ ಕೈ ತುಂಬಾ ಕೆಲಸ ಇತ್ತು"

"ನೀನೂ ಇಂಜಿನಿಯರ್ ತಾನೇ. ಯಾವುದಾದರೂ ಕೆಲಸಕ್ಕೆ ಸೇರಿಕೋ."

"ನೋಡೋಣ" ಎಂದ.... ತನ್ನ ಇಚ್ಛೆಯಿಂದ ಇಂಜಿನಿಯರಿಂಗ್ ಓದಿದ್ದನಾದರೂ, ಅದು ಗೋಪಾಲ ತನಗೆ ಕೊಡಿಸಿದ್ದ ಶಿಕ್ಷಣ. ಅದರ ಹಂಗು ತನಗೆ ಬೇಡ...ತಾನೇ ಏನಾದರೂ ಸ್ವಂತ ಉದ್ಯೋಗವನ್ನು ಮಾಢಬೇಕು. ಅದು ತನ್ನ ಮನಸ್ಸಮಾಧಾನಕ್ಕಾಗಿ ಅದರಿಂದ ಬರುವ ಆದಾಯವನ್ನು ತನ್ನ ಸ್ವಂತ ಖರ್ಚಿಗಾಗಿ ಬಳಿಸಿಕೊಳ್ಳಬೇಕು.... ಯಾವ ಉದ್ಯೋಗವೂ ಇಲ್ಲದೇ, ಯಾವ ಆದಾಯವೂ ಇಲ್ಲದೇ ತಾನು ಇಲ್ಲಿರಲು ಸಾಧ್ಯವಿಲ್ಲ" ಭೈರಪ್ಪನೊಡನೆ ಸಮಾಲೋಚಿಸಿದರೇ.... ಎಂದುಕೊಂಡು ಹೊರಗೆ ಬಂದ.

ಭೈರಪ್ಪನ ಅಕ್ಕಪಕ್ಕ ಕುಳಿತು, ಕಥೆ ಕೇಳುತ್ತಿದ್ದ ಹುಡುಗರು ಅನಂತನನ್ನು ಕಂಡು ತಲೆತಗ್ಗಿಸಿ ಹಿಂದೆ ಸರಿದವು. ಭೈರಪ್ಪ ಹೇಳುತ್ತಿದ್ದುದನ್ನು ನಿಲ್ಲಿಸಿದ.

"ಕಥೆ ಹೇಳ್ತಿದೀರಾ ಭೈರಪ್ಪ..." ಎನ್ನುತ್ತಾ ಅನಂತ ಅಲ್ಲಿಯೇ ಕೂತ.

"ಮಕ್ಕಳು ನಿನಗೆ ಹೆದರುತ್ವೆ ಅನಂತಪ್ಪಾ... ನೋಡು ಹೇಗೆ ಮಂಕಾಗಿ ಬಿಟ್ರು...ನೀನೂ ನಗುನಗುತ್ತಾ ಮಾತನಾಡಿಸಬಾರದಾ?"

ಅನಂತ ಹುಬ್ಬು ಗಂಟಿಕ್ಕಿದ. "ನಾನು ಬಂದಿದ್ದರಿಂದ ನಿಮಗೆಲ್ಲಾ ಕಷ್ಟವಾದರೆ ನಾನು ಹೋಗ್ತೀನಿ" ಏಳಲು ಹೊರಟವನನ್ನು ಭೈರಪ್ಪನ ಕೈಗಳು ಹಿಡಿದು ನಿಲ್ಲಿಸಿದವು.

"ತೊಂದರೆ, ಕಷ್ಟ ಎಲ್ಲಾ ನಿನಗೆ ಆಗ್ತಿರೋದು..." ಏನೂ ಅರೀದ ಮಕ್ಕಳು ಅವಕ್ಕೇನು ಗೊತ್ತಾಗುತ್ತೆ! ಇನ್ನು ನಾನು...ನನ್ನಿಂದ ನಿಮಗೆ ಕಷ್ಟವಾಗುತ್ತಿದ್ದರೆ ಹೇಳಿಬಿಡು. ನಾನು ಆಶ್ರಮಕ್ಕೆ ವಾಪಸ್ಸು ಹೊರಟು ಬಿಡ್ತೀನಿ."

ಭೈರಪ್ಪ ಲಘುವಾಗಿ ನುಡಿದಿದ್ದರೂ, ಅನಂತ ಪೆಚ್ಚಾದ, ಭೈರಪ್ಪ ತನ್ನ ಜತೆಗೆ ಇರುವುದರಿಂದಲೇ ಅಲ್ಲವೇ ತಾನು ಇಲ್ಲಿರುವುದು. ನನ್ನ ದೌರ್ಬಲ್ಯ ತಿಳಿದುಕೊಂಡು ಈ ಘಾಟಿ ಮನುಷ್ಯ ತನಗೆ ಬೆದರಿಕೆ ಹಾಕುತ್ತಿದ್ದಾನಲ್ಲ ಎಂದುಕೊಂಡು ಹಾಗೇ ಕೂತು ಮೆಲ್ಲನೆ ಕತ್ತೆತ್ತಿ ಮಕ್ಕಳ ಕಡೆಗೆ ಕಣ್ಣು ಹಾಯಿಸಿದ. ಒಂದನ್ನೊಂದು ಅಂಟಿಕೊಂಡು ಕುಳಿತಿದ್ದವು. ಸತ್ಯ ದಿಗಿಲುಗೊಂಡು ಅಕ್ಕನ ಕೈ ಹಿಡಿದಿದ್ದ. ಲಲಿತ ತಮ್ಮನಿಗೆ ಸಮಾಧಾನ ಹೇಳುವಂತೆ ಅವನ ಕೆನ್ನೆ ಸವರುತ್ತಿದ್ದಳು.

ಒಂದು ಗಳಿಗೆ ಧೀರ್ಘವಾಗಿ ಅವರಿಬ್ಬರನ್ನೇ ನೋಡಿ, "ಭೈರಪ್ಪ ನೀವು ಕತೆ ಹೇಳಿ ಮುಗಿಸಿ, ಆಮೇಲೆ ಹೊರಗೆ ಬನ್ನಿ. ನಾನು ನಿಮ್ಮ ಹತ್ತಿರ ಸ್ವಲ್ಪ ಮಾತನಾಡಬೇಕು" ಎನ್ನುತ್ತಾ ದಡಕ್ಕನೇ ಎದ್ದು ಮನೆಯಿಂದ ಹೊರಗೆ ಬಂದು ಕೈ ತೋಟದಲ್ಲಿ ಅತ್ತಿಂದಿತ್ತ ಸುತ್ತಾಡತೊಡಗಿದ. ಕಾಲಿಗೆ ಏನೋ ಚುಚ್ಚಿದಂತಾದಾಗ ಬಗ್ಗಿ ನೋಡಿದ. ಗುಲಾಬಿ ಮುಳ್ಳು ಯಾರೋ ಕಿತ್ತು ಹಾಕಿರಬಹುದು. ತನಗೆ ಚುಚ್ಚಿದಂತೆ, ಮತ್ತೆ ಯಾರಿಗಾದರೂ ಚುಚ್ಚಬಹುದು...

ಹಾಗಾಗಬಾರದು ಎಂದುಕೊಂಡು, ಅದನ್ನು ಎತ್ತಿಕೊಂಡು ದೂರ ಎಸೆಯಲು ಬೇಲಿಯ ಬಳಿಗೆ ಬಂದ.

ಅಷ್ಟರಲ್ಲಿ ಭೈರಪ್ಪ ಅವನನ್ನು ಹಿಂಬಾಲಿಸಿ ಅಲ್ಲಿಗೆ ಬಂದ.

"ಇಲ್ಲಿ ಈ ಪೊದೆ ಹತ್ತಿರ ಏನ್ಮಾಡ್ತಿದೀರಿ ಅನಂತಪ್ಪಾ.... ಏನಾದ್ರೂ ಹುಳು ಹುಪ್ಪಟೆ ಇದ್ದರೆ...."

"ಯಾವ ಹುಳು ಹುಪ್ಪಟ್ಟೆಯೂ ನನಗೇನೂ ಮಾಡುವುದಿಲ್ಲ. ಅಲ್ಲಿ ಬಿದ್ದಿದ್ದ ಮುಳ್ಳನ್ನು ಎಸೆಯೋಣ ಅಂತ ಬಂದೆ ಅಷ್ಟೆ.... ಮೊದಲು ಈ ಜಾಗಾನೆಲ್ಲ ಕ್ಲೀನ್ ಮಾಡಿಸಬೇಕು..."

ಅಚ್ಚರಿಯಿಂದ ಭೈರಪ್ಪ ಅವನನ್ನೇ ನೋಡಿದ.

"ಹೌದು ಭೈರಪ್ಪಾ... ನೋಡಿ ಎಲ್ಲಾ ಹೇಗೆ ಪಾಳು ಬಿದ್ದಿದೆ ಜಾಗಾನೆಲ್ಲಾ ಓರಣ ಮಾಡಿಸಿ, ಹೂ ಗಿಡಗಳನ್ನೂ, ತರಕಾರಿ ಗಿಡಗಳನ್ನೂ ಬೆಳೆಸಿದರೆ ಎಷ್ಟು ಚೆನ್ನಾಗಿರುತ್ತೆ ಅಲ್ವಾ?"

"ಹೌದು, ಅನಂತಪ್ಪಾ ನನಗಿದು ಹೊಳೆದೇ ಇರಲಿಲ್ಲ. ನಾಳೆ ಯಿಂದಲೇ ಈ ಕೆಲಸ ಪ್ರಾರಂಭ ಮಾಡ್ತೀನಿ..."

ಅಷ್ಟರಲ್ಲಿ ವೇದಮ್ಮ ಅಲ್ಲಿಗೆ ಬಂದಳು.

"ಇಲ್ಲೇನು ಮಾಡ್ತೀದೀರಿ ಇಬ್ಬರೂ? ಪುರುಷೋತ್ತಮ ತನ್ನ ಮಗನೊಂದಿಗೆ ಬಂದಿದಾರೆ...." ವೇದಮ್ಮ ಹಾಗೇ ಹಿಂತಿರುಗಿದಳು.

"ಯಾವಾಗ ಬಂದರು ಗೊತ್ತಾಗ್ಲೇ ಇಲ್ಲವಲ್ಲ" ಎನ್ನುತ್ತಾ ಭೈರಪ್ಪ ಅನಂತನ ಹಿಂದೆ ಹಿಂದೆ ನಡೆದ.

"ನಮಸ್ಕಾರ ಸಾರ್...." ಎಂದ ಅನಂತ ವಿನಯದಿಂದ ಕೈ ಮುಗಿದು... ಪುರುಷೋತ್ತಮ ಕೂತಿದ್ದವನು ಎದ್ದು ಬಂದು ಅನಂತನ ಕೈ ಹಿಡಿದು ಕುಲುಕಿ 'ಹಲೋ'... ಎಂದ ಇಬ್ಬರೂ ಕುಳಿತರು.

"ನಮಸ್ಕಾರ ಸಾರ್" ಎಂದ ಭೈರಪ್ಪನಿಗೆ ಪ್ರತಿ ವಂದಿಸಿ, ಮಗನ ಕಡೆ ತಿರುಗಿ, "ಪ್ರಶಾಂತ್‌ಗೆ ನಿಮ್ಮನ್ನೆಲ್ಲಾ ತೋರಿಸಿ, ಮಾತನಾಡಿಸಿಕೊಂಡು ಹೋಗೋಣ ಅಂತ ಬಂದೆ"

ಅನಂತ ಧೀರ್ಘವಾಗಿ ಪ್ರಶಾಂತನ ಕಡೆ ನೋಡಿ ಕಣ್ಣರಳಿಸಿದ. ಕಣ್ಣಿನ ಅಂಚಿನಲ್ಲಿ ನಾಚಿಕೆಯ ರೇಖೆ ಕಂಡಿತಾದರೂ, ಧೀರನಂತೆ ನಿಂತಿದ್ದುದನ್ನು ನೋಡಿ ಮುಗುಳ್ನಕ್ಕು "ಹೇಗಿದೀಯಪ್ಪಾ...." ಎನ್ನುತ್ತಾ ವಿಶ್ವಾಸದಿಂದ ಅವನ ತಲೆಯನ್ನು ಸವರಿದುದನ್ನು ವೇದಮ್ಮ ಗಮನಿಸಿದಳು. ಅವಳ ಕಣ್ಣಿನಂಚಿನಲ್ಲಿ ನೀರು ಜಿನುಗಿತು. ಹಾಗೇ ಹಿಂದೆ ಸರಿದಳು.

"ಈ ವಿಶ್ವಾಸವನ್ನು ಅನಂತ ಈ ಮಕ್ಕಳಿಗೂ ತೋರುವಂತಾದರೆ....

ಅಷ್ಟಾದರೆ ಸಾಕು" ಎಂದುಕೊಂಡು ಅಡಿಗೆ ಮನೆಗೆ ಬಂದಳು.

"ಲಲಿತಾ, ಸತ್ಯ ಎಲ್ಲಿ ಕಾಣ್ತಿಲ್ಲವಲ್ಲ.... ಪುರುಷೋತ್ತಮ ಅತ್ತಿತ್ತ ನೋಡಿ ಕೇಳಿದರೂ ಅನಂತ ಸುಮ್ಮನೇ ಕೂತಿದ್ದ ಭೈರಪ್ಪ ಅಲ್ಲಿಂದ ಸರಿದು, ಅಡಿಗೆ ಮನೆಯಲ್ಲಿ, ವೇದಮ್ಮನ ಸೆರಗು ಹಿಡಿದು ನಿಂತಿದ್ದ ಸತ್ಯನನ್ನು ಎತ್ತಿ ಕೊಂಡು ಲಲಿತಳ ಕೈ ಹಿಡಿದು ಕರೆತಂದ.

ಸಂಕೋಚದಿಂದ ಹಿಂದೆ ಹಿಂದೆ ಸರಿದ ಮಕ್ಕಳನ್ನು ಪುರುಷೋತ್ತಮ, ನಗುತ್ತಾ ಕರೆದ. "ಏಯ್... ಸತ್ಯ ಬಾರೋ ಇಲ್ಲಿ... ನಿನಗೋಸ್ಕರ ಚಾಕ್ಲೇಟು ತಂದಿದೀನಿ... ನೀನು ನನ್ನ ಹತ್ತಿರ ಬಂದರೆ ಮಾತ್ರ ಕೊಡ್ತೀನಿ"

ಸತ್ಯ ಆಸೆ ಕಣ್ಣಿಂದ, ಪುರುಷೋತ್ತಮನ ಕೈಲಿದ್ದ ಚಾಕ್ಲೇಟುಗಳನ್ನು ನೋಡಿ ಲಲಿತಳ ಕೈ ಜಗ್ಗಿದ.

"ಲಲಿತಾ ಹೋಗಲಿ ನೀನಾದ್ರೂ ಬಾ..." ಲಲಿತಳೂ ಹತ್ತಿರ ಬರದಿದ್ದಾಗ ಪುರುಷೋತ್ತಮ ಮಗನ ಕಡೆ ತಿರುಗಿ,

"ಹೋಗು ಪ್ರಶಾಂತ, ಇದನ್ನು ಸತ್ಯನಿಗೆ ಕೊಟ್ಟು ಅವನನ್ನು ನನ್ನ ಬಳಿಗೆ ಕರೆದುಕೊಂಡು ಬಾ..." ಪ್ರಶಾಂತನ ಕೈಲಿದ್ದ ಚಾಕಲೇಟುಗಳನ್ನು ತೆಗೆದುಕೊಂಡು ಸತ್ಯ ಅಲ್ಲಿಂದ ಓಡಿ ಹೋಗಿದ್ದ. ಲಲಿತಳ ಮುಖ ಪೆಚ್ಚಾಗಿತ್ತು. ಪ್ರಶಾಂತನು ಅದನ್ನು ಗಮನಿಸಿದ.... "ಹೋಗಲಿ ಬಿಡು... ಅಪ್ಪ ನಿನಗೆ ಅಂತ ಬೇರೆ ತಂದುಕೊಡ್ತಾರೆ, ಬಾ.... ನಾವು ಹೊರಗೆ ಹೋಗಿ ಅವನು ಏನು ಮಾಡ್ತಿದಾನೆ ಅಂತ ನೋಡೋಣ..." ಲಲಿತ ಅವನೊಡನೆ ಹೋಗಲು ಅನುಮಾನಿಸಿದಾಗ ಭೈರಪ್ಪ ಲಲಿತಳಿಗೆ ಹೇಳಿದ್ದ.

"ಹೋಗು ಲಲಿತ, ಹೊರಗೆ ಆಟ ಆಡಿಕೋ ಹೋಗು. ಸತ್ಯನ ಹತ್ತಿರ ಜಗಳ ಆಡಬೇಡ, ಪಾಪ ಚಿಕ್ಕವನು"

"ನಾನೆಲ್ಲಿ ಜಗಳ ಆಡ್ತೀನಿ... ಅವನೇ ಆಡೋದು" ಲಲಿತ ಮುನಿಸು ತೋರಿದಾಗ ಭೈರಪ್ಪ ನಕ್ಕಿದ್ದ.

"ಇಲ್ಲ ನನ್ನ ತಾಯಿ.... ನೀನು ಜಾಣೆ. ನಿನಗೆ ನಿನ್ನ ತಮ್ಮನ ಮೇಲೆ ಪ್ರೀತಿ ಜಾಸ್ತಿ..."

ಈ ಮಾತುಗಳು ಅನಂತನ ಬೇಸರವನ್ನು ಹೆಚ್ಚಿಸಿದವು. ಭೈರಪ್ಪ ಯಾಕೆ ಈ ಮಕ್ಕಳನ್ನು ಅಷ್ಟು ಮುದ್ದು ಮಾಡ್ತಾನೆ? ಅವುಗಳನ್ನು ನೋಡ್ಕೊಳ್ಳೋಕೆ ವೇದಮ್ಮ ಇದಾರಲ್ಲ."

ಅಷ್ಟರಲ್ಲಿ ವೇದಮ್ಮ ಎಲ್ಲರಿಗೂ ಕುಡಿಯಲು ಬಿಸಿ ಬಾದಾಮಿ ಹಾಲನ್ನೂ, ಮಕ್ಕಳಿಗೆ ತಿನ್ನಲೆಂದು ಬಿಸ್ಕಟ್‌ನ್ನು ತಂದಿತ್ತಳು.

ಅನಂತ ಯಾವುದನ್ನೂ ಮುಟ್ಟಲಿಲ್ಲ. ಪುರುಷೋತ್ತಮನಿಗೆ

ಉಪಚರಿಸಲೂ ಇಲ್ಲ, ವೇದಮ್ಮನೇ...

"ತಗೋಪ್ಪ, ಆರಿ ಹೋಗುತ್ತೆ. ನಾನು ಹೋಗಿ ಮಕ್ಕಳನ್ನು ಕರೆದುಕೊಂಡು ಬರ್ತೀನಿ..." ವೇದಮ್ಮ ಹೊರಗೆ ಹೋದ ನಂತರ ಪುರುಷೋತ್ತಮ ಅನಂತನ ಕಡೆ ತಿರುಗಿದ.

"ಯಾಕೆ ಒಂಥರಾ ಇದೀಯಲ್ಲಾ.... ನಿನಗೆ ಇಲ್ಲಿ ಇನ್ನೂ ಸರಿ ಹೊಂದಿಲ್ಲ ಅಂತ ಕಾಣಿಸುತ್ತೆ"

"ನನಗೆ ಮನೇಲಿ ಬೇಜಾರಾಗುತ್ತೆ. ಮಾಡುಕ್ಕೆ ಏನೂ ಕೆಲಸಗಳಿಲ್ಲ, ಹೊರಗೆ ತಿರುಗಾಡಲು ಇಷ್ಟವಿಲ್ಲ"

"ನಿನ್ನ ಸಮಸ್ಯೆ ನನಗೆ ಅರ್ಥವಾಗುತ್ತೆ.... ನೀನು ಯಾವುದಾದರೂ ಕೆಲಸಕ್ಕೆ ಸೇರಬಹುದಲ್ಲಾ..."

"ನನ್ನ ಹತ್ತರ ಯಾವ ಡಿಗ್ರಿಯ ಸರ್ಟಿಫಿಕೆಟ್ ಇಲ್ಲ ಅಥವಾ ನನಗೆ ಅದು ಬೇಕೇ ಇಲ್ಲ...." ಅವನು ಉದಾಸೀನವಾಗಿ ನುಡಿದಾಗ ಪುರುಷೋತ್ತಮ ನಿಗೆ ಅರ್ಥವಾಗಿತ್ತು.

"ಅಲ್ಲದೇ ಯಾವುದೇ ನೌಕರಿ ಹಿಡಿದು ನಾನು ಇಲ್ಲೇ ಇರುವ ಮಾತೇ ಇಲ್ಲವಲ್ಲ"

ಈ ಮಾತಿಗೆ ಏನು ಹೇಳಬೇಕೆಂದು ತೋಚದೇ ಪುರುಷೋತ್ತಮ ಅವನನ್ನೇ ಮಿಕಿ ಮಿಕಿ ನೋಡಿದ. ಆದರೂ ನಿಧಾನವಾಗಿ ತಮಾಷೆಯಾಗಿ ನುಡಿದ.

"ನಮ್ಮ ಡಿಪಾರ್ಟಮೆಂಟ್‌ಗೆ ಸೇರುವುದಾದರೆ ಹೇಳು.... ಈಗಾಂದ್ರೆ ಈಗ ನಿನ್ನನ್ನ ಶಿಫಾರಸ್ಸು ಮಾಡಿ ಸೇರಿಸ್ತೀನಿ."

ಅನಂಕ ನಕ್ಕ ಚೆನ್ನಾಯ್ತು.... "ನನಗೆ ನೌಕರಿಯೇ ಬೇಡವಾಗಿರುವಾಗ, ನನ್ನಂತಹವನನ್ನು ಸೇರಿಸಿಕೊಂಡ್ರೆ ಮುಗೀತು ನಿಮ್ಮ ಡಿಪಾರ್ಟ್‌ಮೆಂಟ್ ಗತಿ...ನಿಮಗೂ ಕೆಟ್ಟ ಹೆಸರು"

"ಸಧ್ಯ ನಗುವುದನ್ನು ಮರೆತಿಲ್ಲವಲ್ಲ... ನೀನು ಇಲ್ಲಿ ಯಾವ ಉದ್ದೇಶದಿಂದ ಇದ್ದರೂ ಸರಿಯೇ... ನೀನು ನಗುನಗುತ್ತಾ ನಿನ್ನ ಕರ್ತವ್ಯ ವನ್ನು ಪಾಲಿಸಿದರೆ ಎಲ್ಲರಿಗೂ ಹಿತವಾಗಿರುತ್ತೆ..... ಬರ್ತೀಯಾ? ಹಾಗೆ ಹೊರಗೆಲ್ಲಾದರೂ ತಿರುಗಾಡಿ ಬರೋಣ" ಅನಂತ ಪುರುಷೋತ್ತಮ ಹೊರ ಹೊರಟಾಗ, ವೇದಮ್ಮ, ಭೈರಪ್ಪ ಮಕ್ಕಳೊಂದಿಗೆ ಒಳ ಬಂದರು.

"ಈಗೆಲ್ಲಿ ಹೊರಟಿರಿ? ಅಡಿಗೆ ಆಗಿದೆ ಊಟಕ್ಕೇಳೋರಂತೆ"

"ಮಕ್ಕಳಿಗೆ ಬಡಿಸಿ, ಇಲ್ಲೇ ತಿರುಗಾಡಿ ಬರ್ತೀವಿ" ಪುರುಷೋತ್ತಮ ನುಡಿದಾಗ ವೇದಮ್ಮ ಆತಂಕಗೊಂಡಳು.

ಈ ಅನಂತನಿಗೇನಾಗಿದೆ? ತೆಪ್ಪಗಿರಬಾರದೇ... ಪುರುಷೋತ್ತಮ ಒಳ್ಳೆಯವನೇ... ಆದರೂ... ಏನೋ ಮಾತನಾಡಿಕೊಂಡು, ಈ ಅನಂತ ವಾಪಸ್ಸು ಹೊರಟು ಹೋದರೇ...? ಹಾಗಾಗಬಾರದು ಹಾಗಾಗಬಾರದು ಮೊದಲು ಈ ಬಿಳಿಯುಡುಗೆಯನ್ನು ಕಳಚಿ, ಮೊದಲಿನಂತೆ ಬಣ್ಣದ ಷರ್ಟು ತೊಡುವಂತೆ ಮಾಢಬೇಕು. ಈ ಜುಬ್ಬಾ ಪಾಯಿಜಾಮ ಇವನಿಗೆ ಒಪ್ಪುವುದಿಲ್ಲ. ಗಡ್ಡ ಮೀಸೆ ಬೋಳಿಸಿ, ಗರಿಗರಿ ಪ್ಯಾಂಟು ಷರ್ಟು ತೊಟ್ಟರೆ ಇವನು ಸರಿಯಾದ ಮನುಷ್ಯನಾಗುತ್ತಾನೆ. ಆಮೇಲೆ ನಾನೇ ಇವನಿಗೆ ತಕ್ಕ ಹೆಣ್ಣನ್ನು ಹುಡುಕಿ ಇವನನ್ನು ಮತ್ತೆ ಸಂಸಾರಿಯನ್ನಾಗಿ ಮಾಡಬೇಕು. ಮತ್ತೆ ಅದೇ ನೆನಪು ಗಳೊಂದಿಗೆ ವೇದಮ್ಮ ಒಳಗೆ ಬಂದು ಮಕ್ಕಳಿಗೆ ತಟ್ಟೆ ಹಾಕಿ ಊಟಕ್ಕೆ ಆಹ್ವಾನಿಸಿದಳು.

ಪ್ರಶಾಂತ ಸಂಕೋಚಗೊಂಡನಾದರೂ, ಭೈರಪ್ಪನ ಬಲವಂತಕ್ಕೆ ಊಟಕ್ಕೆ ಕೂತ. ಬಿಸಿ ಬಿಸಿಯಾಗಿ ಕಲೆಸಿ ಬಡಿಸಿದ ಹುಳಿಯನ್ನ ರುಚಿಯಾಗಿ ಕಂಡಿತ್ತು. ಮಾತನಾಡದೇ ಊಟ ಮಾಡಿದ. ಸತ್ಯನಿಗೆ ವೇದಮ್ಮನೇ ಊಟ ಮಾಡಿಸಿದಾಗ ಪ್ರಶಾಂತನಿಗೆ ಅವನ ತಾಯಿಯ ನೆನಪಾಗಿತ್ತು. ವೇದಮ್ಮ ಭೈರಪ್ಪನಿಗೂ ಸಹ ಎಲೆ ಹಾಕಿ ಬಡಿಸಿದಳು.

ಹೆಚ್ಚು ದೂರ ತಿರುಗದೇ, ಅನಂತ ಪುರುಷೋತ್ತಮ ವಾಪಸ್ಸಾಗಿದ್ದರು. ಅನಂತನ ಮುಖದ ಮೇಲಿನ ನೆಮ್ಮದಿಯನ್ನು ಕಂಢು ವೇದಮ್ಮ ಮತ್ತೊಮ್ಮೆ ಆತಂಕಗೊಂಡಳು.

"ಊಟಕ್ಕೆ ಬಡಿಸ್ಲಾ?" ಅನಂತನ ಕಡೆ ನೋಡುತ್ತಾ ಕೇಳಿದಳು.

"ನಾನು ರಾತ್ರಿಯ ಹೊತ್ತು ಊಟ ಮಾಡುವುದಿಲ್ಲ ಅಂತ ನಿಮಗೇ ಗೊತ್ತಲ್ಲ ದೊಡ್ಡಮ್ಮ, ಇವರಿಗೆ ಬಡಿಸಿ"

"ನಿನಗೆ?...ನೀನಾದರೂ ಇವನಿಗೆ ಸ್ವಲ್ಪ ಹೇಳಪ್ಪಾ, ಇವನೇನು ಮುದುಕನಾಗಿ ಹೋದ್ನೆ? ಇವನಿಗ್ಯಾಕೆ ಈ ಒಪ್ಪತ್ತು ಊಟ?"

"ದೊಡ್ಡಮ್ಮ ನೀವು ಸ್ವಲ್ಪ ಸುಮ್ಮನಿರ್ತೀರಾ? ನನ್ನ ಸ್ವಂತ ವಿಷಯದ ಬಗ್ಗೆ ನಿಮಗ್ಯಾಕೆ ಆತಂಕ?"

"ನಾನು ನಿನಗೆ ತುತ್ತು ಹಾಕಿ ಬೆಳೆಸಿದವನು ಕಣೋ...ನನಗೆ ಆತಂಕವಿರೊಲ್ಲವೆ?"

"ಈಗ ನಾನು ಆ ಅನಂತನಲ್ಲ. ದಯವಿಟ್ಟು ನನ್ನ ಪಾಡಿಗೆ ನನ್ನನ್ನು ಬಿಟ್ಟು ಬಿಡಿ..." ಅನಂತ ಸ್ವಲ್ಪ ಏರಿದ ಧ್ವನಿಯಲ್ಲಿ ನುಡಿದಾಗ ಆಕೆ ತೆಪ್ಪಗಾದಳು. "ಬನ್ನಿ ನನಗೆ ಬಡಿಸಿ..." ಎಂದು ಪುರುಷೋತ್ತಮನೇ ಮುಂದಾಗಿ ಹೋಗಿ ಡೈನಿಂಗ್ ಟೇಬಲ್ ಬಳಿ ಸಾರಿದಾಗ, ವೇದಮ್ಮ ತಟ್ಟೆ ಬಟ್ಟಲುಗಳನ್ನಿತ್ತು

ಬಡಿಸಲು ಅನುವಾದಳು.

"ನನಗೊಂದು ಲೋಟ ಮಜ್ಜಿಗೆ ಕೊಡಿ" ಎಂದು ಸ್ವಲ್ಪ ಮೆತ್ತಗಿನ ಸ್ವರದಲ್ಲಿ ಕೇಳಿದಾಗ, ಮಾತಿಲ್ಲದೇ ಮಜ್ಜಿಗೆ ತಂದು ಕೊಟ್ಟಳು.

ಪುರುಷೋತ್ತಮ ಮಗನೊಡನೆ ಹೊರಟು ನಿಂತಾಗ "ಆಗಾಗ್ಗೆ ನೀವುಗಳು ಬರ್ತೀರಿ. ಇಲ್ಲದಿದ್ದರೆ ಈ ಮನೇಲಿ ಏನೂ ಗಲಾಟೆಯೇ ಇರುವುದಿಲ್ಲ" ಎಂದು ನುಡಿದಳು.

"ಏನು ಹಾಗಂತೀರಿ ವೇದಮ್ನೊರೇ... ಮಕ್ಕಳಿರುವ ಮನೇಲಿ ಗಲಾಟೆ ಇರುಲ್ವೇ... ನಮ್ಮ ಮನೇಲಿ ನಾನು, ಪ್ರಶಾಂತೂನೇ ಎಷ್ಟು ಗಲಾಟೆ ಮಾಡ್ತೀವಿ ಗೊತ್ತಾ?" ತಮಾಷೆಯಾಗಿ ನಗುತ್ತಾ ನುಡಿದ.

"ಮತ್ತೇ... ಪ್ರಶಾಂತು ಹೇಳಿದ... ಅವನು ಬೇರೆ ಊರಿನಲ್ಲಿ ಬೋರ್ಡಿಂಗ್ ಸ್ಕೂಲಲ್ಲಿ ಓದುತ್ತಿದಾನಂತೆ..." ಲಲಿತ ಹೇಳಿದಾಗ ಪುರುಷೋತ್ತಮ ಬೆಪ್ಪಾದರೂ, "ರಜದಲ್ಲಿ ಬಂದಾಗ... ಅಲ್ವೇನೋ ಪಚ್ಚು..."

"ಏನಪ್ಪಾ! ನನ್ನನ್ನು ಪಚ್ಚು ಅಂತ ಕರೀಬೇಡಿ..." ನಾಚಿದ್ದ.

"ಓ... ಸಾರಿ... ಸಾರಿ... ಹೊರಡೋಣ್ವಾ?

"ಟಾ... ಟಾ... ಪಚ್ಚು... ಮತ್ತೆ ಬಾ... ಲಲಿತ ಕಿಲಕಿಲನೆ ನಕ್ಕು ನುಡಿದಾಗ ಸತ್ಯನೂ... ಪಚ್ಚು ಟಾ ಟಾ..." ಎಂದಿದ್ದ. ಎಲ್ಲರೂ ನಕ್ಕಿದ್ದರು. ಪ್ರಶಾಂತನ ಮುಖ ಕೆಂಪಗಾಗಿತ್ತು. ಕಾರಣವಿಲ್ಲದೇ ಅನಂತ ಕೆಂಪಾಗಿದ್ದ ತಲೆಹರಟೆ ಹುಡುಗಿ ಎಂದು ಬೈದುಕೊಂಡು ಹೊರಗಡೆಗೆ ಬಂದು ನಿಂತ. ಅನಂತನೂ ಜೀಪನ್ನೇರಿದಾಗ ವೇದಮ್ಮ ಕಣ್ಣರಳಿಸಿದೆಳು.

"ನಾನು ಒಂದು ಕಡೆ ಹೋಗಬೇಕಾಗಿದೆ. ಬೇಗ ಬಂದ್ಬಿಡ್ತೀನಿ"

ಭೈರಪ್ಪಾ... "ನಾನು ಬರಲೇ" ಅಂತ ಕೇಳಿದ.

"ಪರವಾಗಿಲ್ಲ ನಾನು ವಾಪಸ್ಸು ಬರ್ತೀನಿ. ನೀವೇನು ನನ್ನ ಬಾಡಿ ಗಾರ್ಡ್ನೇ...?" ಅನಂತ ನಕ್ಕಂತೆ ಮಾಡಿ ನುಡಿದಾಗ, ಎಲ್ಲರಿಗೂ ನಗು ಬಂದಿತ್ತು. ಜೀಪನ್ನೇರಲು ಹವಣಿಸುತ್ತಿದ್ದ ಸತ್ಯನನ್ನು ಭೈರಪ್ಪ ಬಲವಂತವಾಗಿ ಕೆಳಗಿಳಿಸಿದ್ದ. ಅವನನ್ನು ವೇದಮ್ಮ ಎತ್ತಿಕೊಂಡಳು. ಸತ್ಯನ ಕಣ್ಣಿನಲಿ ಕಂಡ ಆಸೆಯನ್ನು ಅನಂತ ಗುರುತಿಸಿದ.

ಅಪ್ಪ ಬದುಕಿದ್ದಿದ್ದರೆ ದಿನಾ ಕಾರಿನಲ್ಲಿ ಕರೆದುಕೊಂಡು ಹೋಗುತ್ತಿದ್ದನೋ ಏನೋ... ಈಗ ಯಾರು ಕರೆದೊಯ್ಯಬೇಕು...? ಆಕ್ಸಿಡೆಂಟ್‌ನಲ್ಲಿ ನಚ್ಚು ಗುಚ್ಚಾಗಿದ್ದ ಕಾರು ಎಲ್ಲಿ ಬಿದ್ದಿದೆಯೋ... ನನಗೇಕೆ ಅವನ ಕಾರಿನ ಚಿಂತೆ? ಅವನೇ ಯಾವ ಚಿಂತೆಯೂ ಇಲ್ಲದೇ ಈ ಮಕ್ಕಳನ್ನು ಅನಾಥರನ್ನಾಗಿ ಮಾಡಿ ಹೋಗಲಿಲ್ಲವೇ... ಮತ್ತೆ ಈ ಸಂಟು ನನಗೆ ತಗುಲಿಕೊಂಡಿತು ಅಲ್ಲವೇ?

ಇದ್ಯಾವ ಧರ್ಮ? ಇದ್ಯಾವ ಕರ್ಮ...? ಈ ಹುಡುಗನೂ ಬೆಳೆದು ದೊಡ್ಡವನಾದ ಮೇಲೆ, ಇವನಿಗೆ ಏನನ್ನಿಸಬಹುದು? ತಮ್ಮನ್ನು ಅನಾಥರನ್ನಾಗಿ ಮಾಡಿ ಹೋದ ಅಪ್ಪ ಅಮ್ಮನ ಬಗ್ಗೆ ಕೋಪವೇ ತಿರಸ್ಕಾರವೇ... ಛೆ... ಕೋಪ ಏಕೆ? ತಿರಸ್ಕಾರ ಏಕೆ? ನಡೆದದ್ದು ಅಪಘಾತ ತಾನೇ... ಅವನು ಗಳಿಸಿಟ್ಟ ಹಣವಿರಬಹುದು. ಬೆಳೆಸಲು ವೇದಮ್ಮ ಇದಾಳೆ. ಪೋಷಕ ನಾನು ಇದೀನಿ, ಇನ್ನೇಕೆ ಚಿಂತೆ, ಆದರೂ...ಆದರೂ ಸ್ವಂತ ತಂದೆ ತಾಯಿ ಇದ್ದಂತೆ ಇರಲು ಸಾಧ್ಯವೆ? ಒಂದು ವೇಳೆ... ತನ್ನ ಅಪ್ಪನ ದುರಾಚಾರ ಇವನಿಗೆ ತಿಳಿದರೆ ಇವನಿಗೆ ಏನನ್ನಿಸಬಹುದು? ತಿಳಿಯಲು ಹೇಗೆ ಸಾಧ್ಯ? ನಾನು ಹೇಳಬೇಕು ಅಥವಾ ವೇದಮ್ಮ ತಿಳಿಸಬೇಕು ವೇದಮ್ಮ ಖಂಡಿತಾ ಹಾಗೆ ಮಾಡುವುದಿಲ್ಲ. ಇನ್ನು ನಾನು...? ಕೋಪ ತಾಪ, ದ್ವೇಷ ಅಸೂಯೆ ಎಲ್ಲವನ್ನು ಪರಿತ್ಯಜಿಸಿ ಇಲ್ಲಿ ಪೋಷಕನಾಗಿದ್ದು, ನಾನು ಆ ಕೆಲಸವನ್ನು ಮಾಡಬಹುದೇ? ಅದು ಸರಿಯೇ...?

ಜೀಪು ನಿಂತಿತು. ಅನಂತನ ಆಲೋಚನಾ ಸರಣಿಯೂ ನಿಂತಿತು. ಪುರುಷೋತ್ತಮ ಮಗನಿಗೆ ಜೀಪಿನಲ್ಲಿಯೇ ಕೂತಿರುವಂತೆ ಹೇಳಿ, ಇಬ್ಬರೂ ಒಂದು ಮನೆಯೊಳಗೆ ಹೊಕ್ಕರು. ಅನಂತ ಅತ್ತಿತ್ತ ನೋಡಿದ. ಒಳಗಿನಿಂದ ಬಂದ ಯುವತಿ ಇಬ್ಬರಿಗೂ ಕುಳಿತುಕೊಳ್ಳುವಂತೆ ಹೇಳಿ ತಾನೂ ಕೂತಳು. ಅನಂತ ಸಂಕೋಚದಿಂದ ಮೈಮುದುರಿ ಕುಳಿತ.

"ಇವರು ಅನಂತ, ಇವರಿಗೆ ನಿಮ್ಮ ಪುಸ್ತಕದ ಅಂಗಡಿಯನ್ನು ಕೊಳ್ಳುವ ಬಗ್ಗೆ ಆಸಕ್ತಿ ಇದೆ..... ಅದಕ್ಕೇ ಬಂದಿದೀವಿ"

"ಹೌದಾ...? ಅಂಗಡಿ ನೋಡಿದಾರಾ" ಅವಳು ಕೇಳಿದಳು.

"ಇಲ್ಲ...ಯಾವಾಗ ಬರೋಣ? ನಾಳೆ ಬರೋಣ್ವಾ?"

"ಪರವಾಗಿಲ್ಲ ಈಗಾದರೆ ಈಗಲೇ ಹೋಗೋಣ. ನನಗೆ ಆದಷ್ಟು ಬೇಗ ಇದನ್ನೆಲ್ಲ ಕ್ಲಿಯರ್ ಮಾಡಬೇಕಾಗಿದೆ.

"ಹಾಗಾದರೆ ಬನ್ನಿ.... ನನ್ನ ಜೀಪ್ ಇದೆ"

"ಸ್ವಲ್ಪ ಹಾಲು, ಟೀ... ಏನಾದರೂ ತಗೋತೀರಾ?"

"ಏನೂ ಬೇಡ. ನಮ್ಮದು ಊಟ ಆಯ್ತು"

"ಇಷ್ಟು ಬೇಗ..." ಎನ್ನುತ್ತಾ ಅವಳು ಮುಗುಳ್ನಕ್ಕಾಗ, ಅನಂತ ಅವಳ ಕಡೆ ನೋಡುವ ಧೈರ್ಯ ಮಾಡಿದ್ದ.

ಲಕ್ಷಣವಾದ ಚಿಕ್ಕ ವಯಸ್ಸಿನ ಯುವತಿ... ಚೆನ್ನಾಗಿದ್ದಾಳೆ ಎಂದೆನಿಸಿದಾಗ ಅನಂತ ಎಚ್ಚೆತ್ತ. ಮುಂದಾಗಿ ಎದ್ದು ಹೊರಬಾಗಿಲಿಗೆ ಬಂದು ನಿಂತ.

ಪುರುಷೋತ್ತಮನೊಡನೆ ಹೊರಬಂದ ಆ ಯುವತಿ, ಬಾಗಿಲಿಗೆ

ಬೀಗ ಹಾಕಿದಳು. ಈ ಮನೆಯಲ್ಲಿ ಇನ್ಯಾರೂ ಇಲ್ಲವೆ... ಎಂದುಕೊಂಡ ಅನಂತ.

ಹಿಂದಿನ ಸೀಟಿನಲ್ಲಿ ಸಲೀಸಾಗಿ ಹತ್ತಿ ಕುಳಿತವಳನ್ನು ತಿರುಗಿ ನೋಡಬೇಕೆನಿಸಿರಲಿಲ್ಲ ಅನಂತನಿಗೆ. ಆದರೂ ಪುರುಷೋತ್ತಮ ಅವಳ ಬಗ್ಗೆ ಹೇಳಿದ್ದ ಮಾತುಗಳು ನೆನಪಾದವು.

ಮದುವೆಯಾದ ಕೆಲವು ತಿಂಗಳುಗಳ ನಂತರ ಅವಳ ಗಂಡ ಅನಾರೋಗ್ಯದಿಂದ ತೀರಿ ಹೋಗಿದ್ದ. ಅವಳ ಗಂಡ ಪುಸ್ತಕದ ಅಂಗಡಿಯನ್ನು ಇಟ್ಟಿದ್ದ. ಇವಳು ಬೇರೆ ಒಂದು ಕಡೆ ಕೆಲಸದಲ್ಲಿದ್ದಳು. ಈಗ ಅವಳಿಗೆ ಮತ್ತೆ ಮದುವೆ ಗೊತ್ತಾಗಿದೆ. ಅವಳ ಗಂಡನಾಗಲಿರುವವನು ಒಳ್ಳೆಯ ಕೆಲಸದಲ್ಲಿದಾನೆ. ಅವರಿಗೆ ಈ ಅಂಗಡಿಯ ಅಗತ್ಯವಿಲ್ಲ. ಆದ್ದರಿಂದ ಅದನ್ನು ಮಾರುತ್ತಿದ್ದಾಳೆ.

ಚಿಕ್ಕವಯಸ್ಸಿನ ಆ ವಿಧವೆಯ ಬಗ್ಗೆ ಒಂದು ಗಳಿಗೆ ಕನಿಕರವುಕ್ಕಿತು. ಗಂಡ ತೀರಿಕೊಂಡ ಕೆಲವೇ ತಿಂಗಳ ನಂತರ ಮರು ಮದುವೆಯಾಗಲಿದ್ದಾಳೆ... ಒಂದು ಗಳಿಗೆ ತಿರಸ್ಕಾರವೂ ಮೂಡಿತು. ಯಾವ ಆಸೆಯಿಂದ ಅವಳು ಮತ್ತೆ ಮದುವೆಯಾಗುತ್ತಿದ್ದಾಳೆ! ಏನು ಆಕರ್ಷಣೆ...? ನೋಡಿದರೆ ಒಳ್ಳೆಯವಳಂತೆ ಕಾಣುತ್ತಾಳೆ. ಆದರೂ, ಹಳೆಯ ಗಂಡನನ್ನು ಅಷ್ಟು ಸುಲಭದಲ್ಲಿ ಮರೆತು ಹೊಸಬನೊಡನೆ ಬಾಳಲು ಸಾಧ್ಯವೆ? ಏಕಾಂಗಿಯಾಗಿ ಬಾಳಲು ಸಾಧ್ಯವಿಲ್ಲವೆ.... ರಕ್ಷಣೆಯನ್ನು ಬಯಸಿ ಮದುವೆಯಾಗುತ್ತಿರಬಹುದೇ...ಅಥವಾ ವಯೋಧರ್ಮದಂತೆ ಗಂಡಸ್ಸಿನ ಸಹವಾಸವನ್ನು ಅವಳ ದೇಹ ಬಯಸುತ್ತಿರ ಬಹುದೇ... ಇದ್ದಕ್ಕಿದ್ದಂತೆ ಅವನ ಆಲೋಚನೆ ಅವನಿಗೇ ಅಸಹ್ಯವಾಗಿ ಕಂಡಿತು. ಛೆ... ನಾನೆಂತಹ ಕೆಡುಕ.. ಒಬ್ಬ ಅಸಹಾಯಕ ಹೆಂಗಸಿನ ಬಗ್ಗೆ ತಾನು ಹೀಗೆಲ್ಲಾ ಯೋಚಿಸಬಹುದೇ... ಇಷ್ಟಕ್ಕೂ ಇವಳ ಬಗ್ಗೆ ಯೋಚಿಸಿ ನನಗೆ ಆಗಬೇಕಾದುದಾದರೂ ಏನು? ಒಂದು ಮದುವೆಯಿಂದ ಅವಳು ಸುಖವಾಗಿರಲಿಲ್ಲ. ಅವಳು ತನ್ನ ಜೀವನವನ್ನು ಮತ್ತೆ ಸುಖವಾಗಿಟ್ಟುಕೊಳ್ಳುವ ಆಸೆ ಅವಳಿಗೆ ಅದು ಅವಳ ಇಷ್ಟ. ಅದರಿಂದ ತನಗೇನು ನಷ್ಟ!"

ಆದರೆ.... ಅವಳಂತೆ ಈ ಪುರುಷೋತ್ತಮನಿಗೆ ಮತ್ತೆ ಮರು ಮದುವೆಯಾಗುವ ಆಸೆ ಯಾಕೆ ಹುಟ್ಟಲಿಲ್ಲವೋ... ಇವನಿಗೆ ಪತ್ನಿಯ ಅಗತ್ಯ ಕಂಡು ಬರಲಿಲ್ಲವೇ?... ಪುರುಷೋತ್ತಮ ನಿಜಕ್ಕೂ ಪುರುಷೋತ್ತಮನೇ ಅವನ ಬಗ್ಗೆ ಬೇರೆ ಯಾವ ಕೆಟ್ಟ ಆಲೋಚನೆಯನ್ನು ಮಾಡುವುದು ಸರಿಯಲ್ಲ...ಪ್ರಶಾಂತನನ್ನು ತಾಯಿಯ ಕೊರತೆ ನೀಗುವಂತೆ ಬೆಳೆಸಿದಾನಲ್ಲ. ಅದು ಮಹತ್ಸಾಧನೆ... ಹೆಂಡತಿಯುಲ್ಲದಿದ್ದರೂ ಗಂಡ ಚೆನ್ನಾಗಿ ಬಾಳಲು

ಸಾಧ್ಯ ಎನ್ನುವುದಕ್ಕೆ ಇವನು ಒಳ್ಳೆಯ ಉದಾಹರಣೆ.. ಹೆಂಡತಿ ಸತ್ತ ಕೆಲವೇ ದಿನಗಳ ನಂತರ ಹಸೆಮಣೆ ಏರುವ ಗಂಡಸರ ಬಗ್ಗೆ ಕೇಳಿದೇನೆ... ಆದರೆ ಈತ ಅದಕ್ಕೆ ಅಪವಾದ... ಗಂಡನಿಲ್ಲದ ವಿಧವೆ ಮರುಮದುವೆಯಾಗುವುದು ತಪ್ಪೇನಲ್ಲ, ಖಂಡಿತಾ ತಪ್ಪಲ್ಲ, ಆದರೂ... ಆದರೂ... ಮದುವೆಯಾಗಲಾರದೇ, ಬಾಳಲಾರದೇ ತೊಳಲುತ್ತಿರುವ ಎಷ್ಟೋ ಜನ ವಿಧವೆಯರಿರಬಹುದಲ್ಲವೇ... ಅವರುಗಳ ಪಾಡೇನು! ಅವರಿಗೆ ದಿಕ್ಕಾರು! ಬೇಲಿಯೇ ಎದ್ದು ಹೊಲ ಮೇಯುವಂತೆ, ಅವಳ ಹತ್ತಿರದವರಿಂದಲೇ ತೊಂದರೆಗೊಳಗಾಗುವ ಅನೇಕ ವಿಧವೆಯರು ಕಾಟ ತಾಳಲಾರದೇ ಸತ್ತಿರುವ ಸುದ್ದಿಯನ್ನು ಕೇಳಿದ್ದೇನೆ.

"ಅನಂತಾ..." ಪುರುಷೋತ್ತಮ ಮೈ ಮುಟ್ಟಿ ಎಚ್ಚರಿಸಿದ. ಆ ಯುವತಿ ಇಳಿದು ಅಂಗಡಿಯ ಬಾಗಿಲನ್ನು ತೆಗೆದು ದೀಪವನ್ನು ಹಾಕಿದಳು. ಅನಂತ ಬಾಗಿಲಲ್ಲೇ ನಿಂತು ಒಳಗೆ ದೃಷ್ಟಿ ಹಾಯಿಸಿದ. ಎಲ್ಲಾ ಷೆಲ್ಪ್‌ಗಳಲ್ಲಿಯೂ ಅಂದವಾಗಿ ಜೋಡಿಸಿಟ್ಟ ಪುಸ್ತಕಗಳು. ಅವನು ಪುಸ್ತಕ ಪ್ರಿಯನೇ ಆದರೂ, ಒಂದು ಗಳಿಗೆ ಅಧೀರನಾದ.... ತನಗೆ ಪುಸ್ತಕಗಳನ್ನು ಓದಿ ಅರ್ಥಮಾಡಿ ಕೊಳ್ಳುವುದು ಗೊತ್ತೇ ಹೊರತು ಅದನ್ನು ಮಾರಿ, ಹಣ ಎಣಿಸುವ ವಿಧಾನ ತಿಳಿಯದು.

"ಒಂದು ಪುಸ್ತಕದ ಅಂಗಡಿ ಮಾರಾಟಕ್ಕಿದೆ. ಬೆಲೆಯೂ ಕಡಿಮೆ ನೋಡ್ತೀಯಾ" ಎಂದಾಗ ಹೂಂ ಎಂದಿದ್ದ.

ಆದರೆ ಈಗ ತಲೆ ಬುಡ ಅರ್ಥವಾಗದವನಂತೆ ನಿಂತ.

"ನೋಡಿ, ಪುಸ್ತಕಗಳ ಬಗ್ಗೆ ವಿವರ, ಲೆಖ್ಖ ಪತ್ರ ಎಲ್ಲಾ ಇಲ್ಲಿಯೇ ಇದೆ. ನೋಡ್ತಾ ನೋಡ್ತಾ ಎಲ್ಲಾ ನಿಮಗೆ ತಿಳಿಯುತ್ತೆ. ಏನು ಕಷ್ಟವಿಲ್ಲ" ಆ ಯುವತಿ ಹೇಳಿದಾಗ, ಅವಳನ್ನೇ ನೋಡಿದ.

ಒಬ್ಬ ಹೆಂಗಸು ಏನೂ ಕಷ್ಟವಿಲ್ಲ ಅಂತ ಹೇಳುತ್ತಿರುವಾಗ, ಏನೂ ತೊಂದರೆಯಿರಲಾರದು ಎಂದೆನಿಸಿತ್ತು. ಆದರೆ ತಾನು ವ್ಯವಹಾರ ಚತುರನಲ್ಲ. ಅದೆಲ್ಲಾ ತನಗೆ ತಿಳಿಯದು ಎಂದುಕೊಂಡು ಸುಮ್ಮನಾದ.

"ನಿಮ್ಮಿಷ್ಟ, ಆದರೆ ನನಗೆ ಆದಷ್ಟು ಬೇಗ ನಿರ್ಣಯವನ್ನು ತಿಳಿಸಬೇಕು" ಆ ಯುವತಿ ನುಡಿದಾಗ ಅನಂತ ಪುರುಷೋತ್ತಮನ ಕಡೆ ನೋಡಿದ.

"ಆಗ್ಲಿ.... ನಾವು ನಾಳೇನೇ ನಮ್ಮ ತೀರ್ಮಾನ ತಿಳಿಸ್ತೀವಿ..." ಎಂದು ಪುರುಷೋತ್ತಮ ನುಡಿದಿದ್ದ. ಅನಂತ ತಾನಾಗಿಯೇ ಏನೂ ಮಾತಾಡುವು ದಿಲ್ಲವೆಂದು ಅವನಿಗೆ ತಿಳಿದಿತ್ತು.

ಆ ನಂತರ ಪುರುಷೋತ್ತಮನೇ ಚರ್ಚೆ ನಡೆಸಿ, ಅಂಗಡಿಯನ್ನು ಅನಂತನ ಹೆಸರಿನಲ್ಲಿ ಖರಿದೀಸಿದ್ದ. ತನಗೆ ಪುಸ್ತಕದ ಅಂಗಡಿಯನ್ನು

ಕೊಳ್ಳುವ ಅಗತ್ಯವಿತ್ತೇ.... ತಾನು ವ್ಯಾಪಾರದಲ್ಲಿ ಪಳಗಿದವನಲ್ಲ ತನ್ನಿಂದ ಈ ಕೆಲಸ ಸಾಧ್ಯವಿಲ್ಲ ಎಂದೆನಿಸಿದಾಗಲೆಲ್ಲಾ ಅನಂತನಿಗೆ ಆ ಯುವತಿಯ ರೂಪ, ಯೌವನ, ಮಾತುಗಳು ಅವನ ಕಣ್ಣ ಮುಂದೆ ಓಲಾಡಿ ಅವನನ್ನು ಕೆರಳಿಸಿ, ಅವಳ ಬಗ್ಗೆ ಯೋಚಿಸುವಂತೆ ಮಾಡುತ್ತಿತ್ತು. ತಾನು ಅವಳಿಗೆ ಉಪಕಾರವನ್ನು ಮಾಡಿದೆ ಅಂತ ಅನ್ನಿಸಿದಾಗ ತನ್ನ ಬಗ್ಗೆ ಹೆಮ್ಮೆ ಅಂತೆನ್ನಿಸಿತ್ತು. ಉಪಕಾರ? ಇದೆಂತಹ ಉಪಕಾರ? ಅವಳನ್ನು ಮರು ಮದುವೆಯಾದವನು ನಿಜಕ್ಕೂ ಉಪಕಾರಿ ಅಂತನ್ನಿಸಿದಾಗ... ಛೆ.... ತನ್ನ ಆಲೋಚನೇಗಳೇ ಸರಿ ಇಲ್ಲ. ತಾನು ಯಾವ ಉನ್ನತ ಮಟ್ಟಕ್ಕೂ ಬರಲು ಸಾಧ್ಯವಿಲ್ಲವೇನೋ ಅಂತ ಅಂದು ಕೊಂಡು ಖಿನ್ನನಾಗುತ್ತಿದ್ದ.

"ಇದ್ದಕ್ಕಿದ್ದಂತೆ ಏನೋ ಆಲೋಚನೆಯಲ್ಲಿ ಮುಳುಗಿ ಹೋಗ್ತೀಯಲ್ಲ ಏನಾಗಿದೆ ನಿನಗೆ!" ವೇದಮ್ಮನ ಪ್ರಶ್ನೆಗೆ ಅವನು ಉತ್ತರಿಸಲಿಲ್ಲ.

ಹೌದು, ಏನಾಗಿದೆ ತನಗೆ? ಆ ಯುವತಿಯ ನೆನಪಿನೊಂದಿಗೆ ತಾನು ಏನೇನನ್ನೋ ಆಲೋಚಿಸುತ್ತೀನಲ್ಲ.

ಪುರುಷೋತ್ತಮ, ಆ ಯುವತಿ, ಭೈರಪ್ಪ, ವೇದಮ್ಮ ಎಲ್ಲರೂ ತನ್ನ ಹಾಗೇ ಏಕಾಂಗಿಗಳೇ ಅಲ್ಲವೆ? ಆದರೆ.... ಎಲ್ಲರೂ ತಮ್ಮ ಒಂಟಿತನವನ್ನು ನೀಗಿಕೊಳ್ಳಲು ತಮ್ಮ ತಮ್ಮ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ತಾನೂ ಹಾಗೇ ಏನೇನು ಮಾಡಿದರೂ, ತನ್ನ ಮನಸ್ಸಿನ ಗೊಂದಲ, ತಳಮಳ ಕಡಿಮೆಯಾಗಿಲ್ಲವಲ್ಲ.... ಅವರೆಲ್ಲರಿಗಿಂತ ತಾನು ಭಿನ್ನ. ಅವರನ್ನು ವಿಧಿ ವಂಚಿಸಿರ ಬಹುದು, ಆದರೆ ತಾನು, ಬೆಳೆದ ಮನೆಯಲ್ಲಿ ತನ್ನನ್ನು ಸಾಕಿದವನಿಂದಲೇ ವಂಚಿತನಾದೆ. ಇದಕ್ಕಿಂತ ಬೇರೆ ದುರ್ವಿಧಿ ಇದೆಯೇ? ಇಲ್ಲದಿದ್ದರೆ ತಾನೂ ಎಲ್ಲರಂತೆ ಸಂಸಾರಸ್ಥನಾಗಿದ್ದು ಆರಾಮವಾಗಿರಬಹುದಾಗಿತ್ತು. ತನಗೂ ಲಲಿತ, ಸತ್ಯರಂತಹ ಮಕ್ಕಳಿರುತ್ತಿದ್ದರು.... .ಅನಂತ ಬೆವೆತು ಹೋಗಿದ್ದ.... ತನ್ನನ್ನು ತಾನು ಸಾವರಿಸಿಕೊಂಡು ಎದುರಿಗೇ ನಿಂತಿದ್ದ ವೇದಮ್ಮನ ಕಡೆ ನೋಡಿ ಹೇಳಿದ.

"ನನಗೆ ಆಶ್ರಮದ ಜೀವನವೇ ಸರಿ. ನಾನು ಆದಷ್ಟು ಬೇಗ ಅಲ್ಲಿಗೆ ಹೋಗಬೇಕು ಅಂತ ಅನ್ನಿಸ್ತಿದೆ."

"ಆಶ್ರಮದ ಜೀವನ ನಿನಗಲ್ಲ ಅನಂತ, ನೀನಿನ್ನು ಚಿಕ್ಕವನು ಮತ್ತೆ ಮದುವೆಯಾಗಿ ಸಂಸಾರಸ್ಥನಾಗಬೇಕು, ಎಲ್ಲಾ ಸರಿ ಹೋಗುತ್ತದೆ"

"ದೊಡ್ಡಮ್ಮಾ.... ಅವತ್ತೇ, ಈ ಮಾತನ್ನಾಡಬೇಡಿ ಅಂತ ಹೇಳಿದ್ದೆ. ಸುಖ ನೆಮ್ಮದಿಯನ್ನು ಮತ್ತೆ ಮತ್ತೆ ಹಾಳು ಮಾಡಿಕೊಳ್ಳುವ ಆಸೆ ನನಗೆ ಖಂಡಿತಾ ಇಲ್ಲ"

"ಈಗಲೂ ನೀನು ಸುಖವಾಗಿಲ್ಲ. ಹೌದು ತಾನೆ? "

"ಹಾಗಂತ ನಿಮಗೆ ಯಾರು ಹೇಳಿದರು?"

"ಯಾರು ಯಾಕೆ ಹೇಳ್ತಾರೆ? ನಿನ್ನ ಮುಖವೇ ಹೇಳುತ್ತೆ... ನಂಗೆಲ್ಲಾ ತಿಳಿಯುತ್ತೆ."

ಅನಂತ ಬೆದರಿದ ಹಾಗಾದರೆ...." ನನ್ನ ಮನಸ್ಸಿನ ಭಾವನೆಗಳೂ ನನ್ನ ಮುಖದ ಮೇಲೆ ವ್ಯಕ್ತಗೊಳ್ಳುತ್ತವೆಯೇ....ಇನ್ನು ಮುಂದೆ ಈ ಆಲೋಚನೆಗಳನ್ನು ಬಿಡಬೇಕು...ಅಲ್ಲಿಂದ ಹೊರಟವನನ್ನು ತಡೆದಳು.

"ಏನಾದ್ರೂ ಹೇಳಿದ್ರೆ.... ನನ್ನ ಎದುರ್ನಿಂದ ಹೊರಟು ಬಿಡ್ತೀಯಾ... ನಾನೂ ನಿನ್ನ ದೊಡ್ಡಮ್ಮ, ನನ್ನೆದುರಿಗೆ ಕೂತು, ನಾಲ್ಕು ಮಾತುಗಳನ್ನಾಡುವಷ್ಟು ವ್ಯವಧಾನವಿಲ್ಲವೇ ನಿನಗೆ?" ಅವಳ ಧ್ವನಿ ನಡುಗಿತ್ತು.

"ಮತ್ತೆ ಮದುವೆ ಸುದ್ದಿ ಎತ್ತದಿದ್ದರೆ ಎಷ್ಟು ಹೊತ್ತು ಬೇಕಾದರೂ ಮಾತನಾಡ್ತೀನಿ." ಅನಂತ ಗಂಭೀರವಾಗಿ ನುಡಿದಾಗ ವೇದಮ್ಮ ಸುಮ್ಮನಾದಳು.

ಅನಂತ ಭೈರಪ್ಪನ ಸಹಾಯದಿಂದ ಅಂಗಡಿಯ ಪುಸ್ತಕಗಳನ್ನೆಲ್ಲಾ ಒಮ್ಮೆ ನೋಡಿ, ಅದರಲ್ಲಿ ತನಗೆ ಬೇಕಾದ ನಾಲ್ಕಾರು ಪುಸ್ತಕಗಳನ್ನು ಓದಲೆಂದು ಮನೆಗೆ ತಂದಿದ್ದ.

"ಈ ಅಂಗಡಿ, ಈ ವ್ಯಾಪಾರದ ಅಗತ್ಯವೇನಿತ್ತು ನಿನಗೆ." ಅದಕ್ಕೆಲ್ಲಾ ವ್ಯವಹಾರ ಜ್ಞಾನವಿರಬೇಕು..." ವೇದಮ್ಮ ಆತಂಕದಿಂದ ಹೇಳಿದ್ದಳು.

"ಸಮಯ ಕಳೆಯಲು ಏನಾದರೂ ಒಂದು ಉದ್ಯೋಗ ಬೇಕಲ್ಲ. ಹಾಗೇ ನನ್ನ ಅನ್ನ ನಾನೇ ಸಂಪಾದಿಸುವ ಆಸೆ ಕೂಡಾ..."

"ಚೆನ್ನಾಗಿದೆ. ನಿನಗೆ ಸೇರಬೇಕಾದ ಹಣವನ್ನೆಲ್ಲ ಈ ಮಕ್ಕಳಿಗೆ ಕೊಟ್ಟು... ನೀನು ಒಂದು ತುತ್ತು ಅನ್ನಕ್ಕೆ ಸಂಪಾದಿಸಬೇಕೇ...? ಇದ್ಯಾಕೋ ಸರಿ ಅನ್ನಿಸಲಿಲ್ಲ ನನಗೆ..."

"ಬಿಡಿ ದೊಡ್ಡಮ್ಮ.... ನನ್ನ ರೀತಿ ನಿಮಗೆ ಯಾವುದೂ ಸರಿ ಇಲ್ಲ. ಆದರೆ ನನಗೆ ಬೇಕಾದ ಹಾಗೆ ನಾನು ಇದ್ದರೇನೇ... ನನಗೆ ತೃಪ್ತಿ...."

"ಇದಕ್ಕಾಗಿ ಸಾಲ ಮಾಡುವ ಅವಶ್ಯಕತೆ ಏನಿತ್ತು?"

"ಈ ವಿಷಯ ನಿಮಗ್ಯಾರು ಹೇಳಿದರು?"

"ಯಾರೂ ಹೇಳಲಿಲ್ಲ, ನನಗೆ ಅಷ್ಟೂ ತಿಳಿಯುವುದಿಲ್ಲವೆ?"

"ಸರಿ, ಎಲ್ಲಾ ಗೊತ್ತಾಯ್ತಲ್ಲ. ಇನ್ನು ನನ್ನನ್ನು ಏನೂ ಕೇಳಬೇಡಿ"

"ಹೀಗೇ ಎಷ್ಟು ದಿನಾಂತ?"

"ನಾನು ಇಲ್ಲಿಯ ಜವಾಬ್ದಾರಿಯನ್ನು ಕಳೆದುಕೊಳ್ಳುವರೆಗೂ"

"ಯಾವ ಜವಾಬ್ದಾರಿ? ಎಲ್ಲಾ ನಾನೇ ಮಾಡ್ತಿದೀನಲ್ಲ, ಆ ಮಕ್ಕಳು

ಯಾವ ಸ್ಕೂಲಿಗೆ ಹೋಗ್ತಾರೆ? ಏನು ಓದುತ್ತಿದ್ದಾರೆ ಅಂತ ನಿನಗೆ ಗೊತ್ತಾ?"

"ಅದೆಲ್ಲ ನನಗೆ ಗೊತ್ತಿಲ್ಲ. ಅದೆಲ್ಲ ನಿಮ್ಮ ಕೆಲಸ ನಿಮ್ಮ ಕೈಲಾಗದಿದ್ದರೆ ಭೈರಪ್ಪನ ಹತ್ತಿರ ಆ ಕೆಲಸಗಳನ್ನು ಮಾಡಿಸಿಕೊಳ್ಳಿ"

"ಭೈರಪ್ಪ ಹೇಳದಿದ್ದರೂ ಎಲ್ಲಾ ಮಾಡ್ತಾನೆ. ಒಳ್ಳೆಯ ಮನುಷ್ಯ"

"ನನ್ನನ್ನು ಕೆಟ್ಟ ಮನುಷ್ಯನನ್ನಾಗಿ ಮಾಡಿದವರು ನೀವುಗಳೇ" ಎಂದು ಹೇಳಬೇಕೆಂದು ಕೊಂಡವನು, ಲಲಿತಳ ಮುಖ ನೋಡಿ ಸುಮ್ಮನಾದ.

"ದೊಡ್ಡಮ್ಮ, ಸ್ಕೂಲ್ನಿಂದ ಬರುವಾಗ ಸತ್ಯ ಎಡವಿ ಬಿದ್ದ."

"ಹೌದಾ! ಎಲ್ಲಿದಾನೆ?" ವೇದಮ್ಮ ಆತಂಕದಿಂದ ಹೊರಗೋಡಿದಳು. ಅನಂತನೂ ಹಿಂದೆ ಹಿಂದೆ ಬಂದ. ಭೈರಪ್ಪ ಸತ್ಯನನ್ನು ಎತ್ತಿಕೊಂಡು ಬರುತ್ತಿದ್ದ. ಅವನ ಮಂಡಿಯಲ್ಲಿ ಆದ ಗಾಯದಿಂದ ಧಾರಾಕಾರವಾಗಿ ರಕ್ತ ಸುರಿಯುತ್ತಿತ್ತು. ಅವನು ನೋವಿನಿಂದ ಅರಚುತ್ತಿದ್ದ.

"ಅಯ್ಯೋ ಕಂದ ಏನಾಯ್ತೊ... ವೇದಮ್ಮ ಎತ್ತಿಕೊಂಡಳು. ಅನಂತನಿಗೂ ವ್ಯಥೆಯಾಗಿತ್ತು. ಏನಾಯ್ತು ಭೈರಪ್ಪಾ? ನಡೀರಿ ಡಾಕ್ಟರ ಹತ್ತಿರ ಕರೆದುಕೊಂಡು ಹೋಗೋಣ. ರಕ್ತ ಹೇಗೆ ಸುರೀತಿದೆ ನೋಡಿ"

"ಕಲ್ಲಿನ ಮೇಲೇ ಬಿದ್ದು ಬಿಟ್ಟ.... ಗಾಯ ತೊಳೆದು ಬಟ್ಟೆ ಕಟ್ಟೋಣ ಅಂತ ಮನೆಗೆ ಕರೆದುಕೊಂಡು ಬಂದೆ..."

"ಹೌದು ದೊಡ್ಡಮ್ಮಾ, ಮೊದಲು ತಣ್ಣೀರಿನಲ್ಲಿ ತೊಳೆಯಿರಿ. ಡೆಟ್ಟಾಲ್ ಇದ್ದರೆ, ಡೆಟ್ಟಾಲ್ ನೀರಿನಲ್ಲೂ ತೊಳೆಯಿರಿ. ಬಟ್ಟೆ ಬದಲಾಯಿಸಿ ತಿಂಡಿ ತಿನ್ನಿಸಿ. ಆಮೇಲೆ ಡಾಕ್ಟರ್ ಹತ್ತಿರ ಹೋಗೋಣ."

ಗಾಯವನ್ನು ತೊಳೆದು ಒಂದು ತೆಳ್ಳನೆಯ ಬಟ್ಟೆಯನ್ನು ಗಾಯದ ಮೇಲೆ ಸುತ್ತುವವರೆಗೂ, ಸತ್ಯ ಅರಚುತ್ತಲೇ ಇದ್ದ. ಬಲವಂತವಾಗಿ ಬಟ್ಟೆ ಬದಲಾಯಿಸಿ ತಿಂಡಿ ತಿನ್ನಿಸಿ, ವೇದಮ್ಮ ಅವನನ್ನು ಎತ್ತಿಕೊಂಡು ಹೊರಟಳು ಅನಂತ ತಡೆದ.

"ಪರವಾಗಿಲ್ಲ, ನೀವು ಮನೇಲಿ ಲಲಿತನ ಜತೇಲಿರಿ, ಭೈರಪ್ಪಾ ನಾನೂ ಕರೆದುಕೊಂಡು ಹೋಗ್ತೀವಿ, ಇಲ್ಲಿ ಡಾಕ್ಟರ್ ಷಾಪು ಎಲ್ಲಿದೆ!

"ಬನ್ನಿ ಅನಂತಪ್ಪಾ... ನಂಗೊತ್ತು..." ಅಳುತ್ತಿದ್ದ ಸತ್ಯನನ್ನು ಎತ್ತಿಕೊಂಡ ಭೈರಪ್ಪ ಮುಂದೆ ಮುಂದೆ ನಡೆದ. ಅನಂತ ಅವನ ಹಿಂದೆ ನಡೆದ.

ಡಾಕ್ಟರು ಗಾಯವನ್ನು ಪರೀಕ್ಷಿಸಿ, ಡ್ರೆಸ್ಸಿಂಗ್ ಮಾಡಿ, ಒಂದು ಇಂಜೆಕ್ಷನ್ ಕೊಟ್ಟು, ಮಾತ್ರೆಯನ್ನು ಬರೆದುಕೊಟ್ಟರು. ಅನಂತ ಫೀಸನ್ನಿತ್ತು 'ಥ್ಯಾಂಕ್ಸ್' ಎಂದು ಹೇಳಿದ. ರಸ್ತೆಯ ಮಗ್ಗುಲಿನಲ್ಲಿದ್ದ ಅಂಗಡಿಗೆ ಔಷಧಿಯನ್ನು ತರಲು ಹೋದ.

"ಭೈರಪ್ಪಾ, ನೀವು ಸತ್ಯನ್ನ ಮನೆಗೆ ಕರೆದುಕೊಂಡು ಹೋಗಿ, ನಾನು ಮಾತ್ರೆ ತರ್ತೀನಿ" ಅವನು ಅಂಗಡಿಯನ್ನು ಹೊಕ್ಕ.

"ಪಾಪ, ಎಷ್ಟು ನೋಯುತ್ತಿದೆಯೋ... ಏನೋ.." ಅಳುತ್ತಿದ್ದ ಸತ್ಯನ ಬಗ್ಗೆ ಮರುಕವುಕ್ಕಿತ್ತು. ಮರೆಯದೇ ಚಾಕ್ಲೇಟು ಬಾರುಗಳನ್ನು ಕೊಂಡುಕೊಂಡ.

ವೇದಮ್ಮ ಅಳುತ್ತಿದ್ದ ಸತ್ಯನಿಗೆ ಸಮಾಧಾನ ಹೇಳುತ್ತಿದ್ದಳು.

"ದೊಡ್ಡಮ್ಮಾ...ಈ ಮಾತ್ರೆಗಳನ್ನು ರಾತ್ರಿ ಒಂದು, ಬೆಳಿಗ್ಗೆ ಒಂದು ಕೊಡಬೇಕಂತೆ, ಹಾಗೇ ಚಾಕ್ಲೇಟುಗಳನ್ನು ಮಕ್ಕಳಿಗೆ ಕೊಡಿ..."

"ನೀನೇ ಕೊಡು... ಅವಕ್ಕೂ ಖುಷಿಯಾಗುತ್ತೆ..."

"ಸರಿ.... ನೀವೊಬ್ರು...." ಅನಂತ ಬಾಯಲ್ಲಿ ನುಡಿದರೂ, ಸತ್ಯನ ಕೈಗೆ ಒಂದು ಬಾರನ್ನಿತ್ತು, ಪೆಚ್ಚಾಗಿ ನಿಂತಿದ್ದ ಲಲಿತಳ ಕೈಗೆ ಇನ್ನೊಂದನ್ನಿತ್ತ.

"ಥ್ಯಾಂಕ್ ಯೂ ಅಂಕಲ್..." ಎಂದಿದ್ದಳು ಲಲಿತ

"ಅಂಕಲ್...." ತಾನು ಈ ಮಕ್ಕಳಿಗೆ ಅಂಕಲ್ಲೇ...ಅವನ ಮನಸ್ಸು ವಿಹ್ವಲಗೊಂಡಿತು. ಗೋಪಾಲ ತನ್ನ ತಂದೆಯಾಗಿದ್ದವನು...ಸುಗುಣ ನನ್ನ ಪತ್ನಿಯಾಗಿದ್ದವಳು... ಆದರೆ ಈ ಮಕ್ಕಳು ನನಗ್ಯಾವ ಸಂಬಂಧ? ಛೆ ತಲೆ ಕೊಡವಿಕೊಂಡ. ಯಾವ ನೆಂಟಸ್ಥಿಕೆಯೂ ಇಲ್ಲದೇ ತಾನು ಇಲ್ಲಿ ಇರಲು ಹೇಗೆ ಸಾಧ್ಯ! ಮಾವನಲ್ಲ; ಅಣ್ಣನಲ್ಲ ಯಾವುದೋ ಒಂದು ಸಂಬಂಧ. ಕರೆಯಲು ಇದಕ್ಕಿಂತ ಸುಲಭದ್ದು ಇನ್ನೇನಿದೆ. ತನಗೆ ತಾನೇ ವಿಷಾದದ ನಗೆಯನ್ನು ನಕ್ಕು ಅಲ್ಲಿಂದ ಸರಿದಿದ್ದ.

ರಾತ್ರಿಯ ಊಟದ ಚಿಂತೆಯಂತೂ ಇರಲಿಲ್ಲ. ಎಲ್ಲರೂ ಏನು ಮಾಡಿದರೋ, ಭೈರಪ್ಪನೂ ಬಂದಿರಲಿಲ್ಲ. ಎದ್ದು ಹೋಗಿ ಸತ್ಯನ ಬಗ್ಗೆ ವಿಚಾರಿಸುವ ಮನಸ್ಸಾದರೂ, ಒಂದು ಬಗೆಯ ಅಳುಕು ಅವನನ್ನು ಸುಮ್ಮನಾಗಿಸಿತ್ತು. ಬೆಳಿಗ್ಗೆ ವಿಚಾರಿಸಿದರಾಯ್ತು ಎಂದುಕೊಂಡು ಪುಸ್ತಕದ ಹಾಳೆಗಳನ್ನು ತಿರುವಿದ. ತದೇಕ ಚಿತ್ತದಿಂದ ಓದಲು ಆಗಲಿಲ್ಲ ಪುಸ್ತಕವನ್ನು ಮಡಿಸಿಟ್ಟು ಕಣ್ಣು ಮುಚ್ಚಿ ಮಲಗಿದ.

"ಅನಂತಾ.... ಅನಂತಾ... ಹಾಗೇ ಮಲಗಿ ಬಿಟ್ಟಿಯೇನೋ..."

ವೇದಮ್ಮ ಕರೆದಿದ್ದು ಕೇಳಿಸಿತ್ತು. ಆದರೆ ಉತ್ತರಿಸಬೇಕೆನಿಸಲಿಲ್ಲ. "ಭೈರಪ್ಪಾ ಈ ಮಜ್ಜಿಗೇನ ಅವನಿಗೆ ಕೊಟ್ಟು ಬಿಡ್ತೀರಾ..."

ಭೈರಪ್ಪ ಒಳ ಬಂದುದರ ಅರಿವಾದರೂ ನಿದ್ದೆಯನ್ನು ನಟಿಸುತ್ತಾ ಮಲಗಿದ. ಅವನು ಮಜ್ಜಿಗೆಯ ಲೋಟವನ್ನು ಇಟ್ಟು ಎಬ್ಬಿಸಿದ. ಭೈರಪ್ಪ ತನ್ನೊಂದಿಗೆ ಈ ಮನೆಯಲ್ಲಿ ಇಲ್ಲದಿದ್ದರೆ, ತಾನು ಹೇಗಿರುತ್ತಿದ್ದೆ ಎಂದು ತನ್ನಿಂದ ಊಹಿಸಲೂ ಸಾಧ್ಯವಿಲ್ಲ. ಯಾವ ಜನ್ಮದಲ್ಲಿ ಈತ ತನ್ನ

ಜನ್ಮದಾತನಾಗಿದ್ದನೋ... ಎಂದುಕೊಂಡು ಎದ್ದ. ಸತ್ಯನ ಬಗ್ಗೆ ಭೈರಪ್ಪನೇ ಏನಾದರೂ ಹೇಳಬಹುದು ಎಂದು ಕಾದ.

"ನಿಮ್ಮದು ಊಟ ಆಯ್ತೇ? ಪ್ರಶ್ನಿಸಿದ.

"ಹೂಂ, ಆಯ್ತು"

"ಎಲ್ಲರದ್ದೂ ಆಯ್ತೇ.... ಆ ಹುಡುಗ ಊಟ ಮಾಡ್ತೇ...?"

"ಯಾರು ಸತ್ಯಪ್ಪಾನಾ...? ಹೂಂ. ಅದ್ರದ್ದೂ ಆಯ್ತು... ಮಲಗಿ ನಿದ್ದೆ ಮಾಡಿದೆ. ನೀವೇನೂ ಆತಂಕ ಪಡಬೇಡಿ"

"ಆತಂಕ...? ತನಗೇಕೆ ಆತಂಕ? ಎಂದು ಕೇಳಬೇಕೆಂದು ಕೊಂಡರೂ ಅವನು ಆತಂಕಗೊಂಡಿದ್ದು ಸ್ಪಷ್ಟವಾಗಿತ್ತು. ಸುಮ್ಮನಾದ ಮಜ್ಜಿಗೆಯ ಲೋಟವನ್ನೆತ್ತಿ ಗಟಗಟನೆ ಕುಡಿದ. ಭೈರಪ್ಪ ಖಾಲಿ ಲೋಟವನ್ನೆತ್ತಿಕೊಂಡು ಹೊರಗೆ ಹೊರಟು ಹೋದ.

ಬೆಳಿಗ್ಗೆ ಅವನು ಏಳುವುದನ್ನೇ ಕಾಯುತ್ತಿದ್ದಂತೆ, ವೇಧಮ್ಮ ನುಡಿದಳು.

"ರಾತ್ರಿಯೆಲ್ಲಾ ಜ್ವರ.... ನರಳ್ತಾನೇ ಇದ್ದ... ನಂಗೆ ತುಂಬಾ ಭಯ ವಾಗಿತ್ತು"

"ಈಗ ಹೇಗಿದಾನೆ! ನನ್ನನ್ನು ಎಬ್ಬಿಸಬಹುದಾಗಿತ್ತು"

"ನಿನ್ನನ್ನು ಎಬ್ಬಿಸಿದ್ದರೆ ತಾನೇ ಏನಾಗ್ತಿತ್ತು? ನೀನು ಕೊಟ್ಟ ಮಾತ್ರೆ ನುಂಗಿಸಿ ಮಲಗಿಸಿದೆ. ಈಗ ನಿದ್ದೆ ಬಂದಿದೆ. ರಾತ್ರಿಯೆಲ್ಲಾ ಅಮ್ಮಾ, ಅಮ್ಮಾ ಅಂತ ಕನವರಿಸ್ತಾ ಇದ್ದ"

ಅನಂತ ತಣ್ಣಗಾದ. ಅವನ ಅಮ್ಮ ಸುಗುಣ. ಅವಳು ದ್ರೋಹ ವೆಸಗಿದ್ದು ತನಗೆ ಮಾತ್ರವಲ್ಲ. ಈ ಅರಿಯದ ಕಂದನಿಗೂ, ಇವನನ್ನು ಅನಾಥನನ್ನಾಗಿ ಮಾಡಿ ಹೋಗುವ ಹಕ್ಕು ಅವಳಿಗೇನಿತ್ತು? ರೋಷದಿಂದ ಹಲ್ಲು ಕಡಿದಾಗ ವೇದಮ್ಮನಿಗೆ ದಿಗಿಲಾಗಿತ್ತು.

"ಏನಾಯ್ತೋ ಅನಂತಾ... ನಿನಗೇನಾಯ್ತೋ...?"

"ಏನಿಲ್ಲ.." ಅಂದ ಸ್ವಲ್ಪ ಮೆತ್ತಗಾಗಿ

"ಏನಪ್ಪಾ, ನನಗಂತೂ ಅರ್ಥವಾಗದ ಹಾಗೆ ವರ್ತಿಸ್ತೀಯಾ..." ಇಲ್ಲಿ ಇರುವವರೆಗಾದರೂ, ಇಲ್ಲಿಯಂತೆ ಇರಬೇಡವೇ?"

ಹೌದು, ವೇದಮ್ಮ ಹೇಳುವುದು ಸರಿ ತಾನು ಇಲ್ಲಿ ಇರುವವರೆಗೂ ತನ್ನ ರೀತಿ ನೀತಿಗಳನ್ನು ಸ್ವಲ್ಪ ಮಟ್ಟಿಗೆ ಬದಲಾಯಿಸಿಕೊಳ್ಳಬೇಕು. ಇಲ್ಲದಿದ್ದರೆ ದೊಡ್ಡಮ್ಮ ಆಗಾಗ್ಗೆ ಮನಸ್ಸು ಕೆಡುವಂತಹ ಮಾತಗಳನ್ನಾಡದೇ ಇರುವುದಿಲ್ಲ. ಮಕ್ಕಳೂ ನನ್ನಿಂದ ದೂರವೇ ಇರುತ್ತಾರೆ. ನಾನು ಪೋಷಕನಾಗಿದ್ದು ಏನು ಪ್ರಯೋಜನ? ನಾನು ಅವರ ಆಪ್ತನಾಗಿರಬೇಕು. ನನ್ನನ್ನು ನೋಡಿದರೆ

ಭಯಪಡುವಂತಿರಬಾರದು. ತಮಗೆ ಯಾರೂ ಇಲ್ಲ ಎನ್ನುವ ಭಾವನೆ ಬರಬಾರದು. ನಾನು ಮಕ್ಕಳ ಜತೆ ಆತ್ಮೀಯವಾಗಿ ಮಾತುಕತೆಯಾನ್ನಾಡಬೇಕು. ಮೇಲ್ನೋಟಕ್ಕಾದರೂ, ನಾನು ನಟನೆ ಮಾಡಬೇಕು. ಆಗ ನಾನು ಇಲ್ಲಿರುವ ಉದ್ದೇಶ ಸಾರ್ಥಕವಾಗುತ್ತದೆ ಇಲ್ಲದಿದ್ದರೆ ಏನೇನಾಗಿ ಬಿಡುತ್ತದೋ?

ಗೋಪಾಲ ನನ್ನ ಬಗ್ಗೆ ಅಸಡ್ಡೆ ಮಾಡಿದಂತೆ ನಾನು ಈ ಮಕ್ಕಳನ್ನು ಮಾಡಬಾರದು. ಊಟ ತಿಂಡಿ, ಹಣಕಾಸು ಎಲ್ಲಾ ಹೇಗೋ ನಡೆಯುತ್ತೆ. ಪ್ರೀತಿ ಪ್ರೇಮ ಬೇಕು. ತಾವು ತಬ್ಬಲಿಗಳು ಎನ್ನುವ ಭಾವನೆ ಅವರಲ್ಲಿ ಬರಬಾರದು. ಯಾವುದೇ ಕೀಳಿರಿಮೆ ಇಲ್ಲದೇ, ಸತ್ಪ್ರಜೆಗಳಾಗಿ ಬೆಳೆಯಬೇಕು. ಸಮಾಜದಲ್ಲಿ ಅವರುಗಳ ಸ್ಥಾನಮಾನ ಸರಿಯಾಗಿರಬೇಕು. ನನ್ನಂತೆ ಮೋಸ ಹೋಗುವಂತಿರಬಾರದು... ನಾನು ಮೋಸ ಹೋದೆ ನಿಜ, ಆದರೆ ನಾನು ಈ ಮಕ್ಕಳಿಗೆ ಮೋಸ ಮಾಡಬಾರದು. ಇಷ್ಟವಿಲ್ಲದಿದ್ದರೂ, ಬಂದು ನಿಂತಿದ್ದಾಗಿದೆ, ನಿಷ್ಠೆಯಿಂದ ಇವರುಗಳನ್ನು ಪಾಲಿಸಿ, ಪೋಷಿಸಿ ದೊಡ್ಡವರನ್ನಾಗಿಸಿ ನನ್ನ ಜವಾಬ್ದಾರಿಯನ್ನು ಕಳೆದುಕೊಳ್ಳಬೇಕು. ಆಗಲೇ ನನಗೆ ತೃಪ್ತಿ. ಇಲ್ಲದಿದ್ದರೆ, ಆ ಗೋಪಾಲನಿಗೂ, ನನಗೂ ಏನು ವ್ಯತ್ಯಾಸ....?"

"ಏನೋ ಅನಂತಾ... ಮತ್ತೆ ಹಾಗೇ ನಿಂತು ಬಟ್ಟೆಯಲ್ಲಾ?"

"ಏನಿಲ್ಲ... ಏನೋ ಯೋಚನೆ... ನಾನು ಸತ್ಯನನ್ನ ನೋಡಿ ಮಾತನಾಡಿಸಿಕೊಂಡು ಬರ್ತೀನಿ ಎಲ್ಲಿ ಮಲಗಿದಾನೆ ಅವನು!"

"ಇಲ್ಲೇ ಮುಂದಿನ ರೂಮಿನಲ್ಲಿ, ಪರವಾಗಿಲ್ಲ ಬಿಡು. ಈಗ ನಿದ್ದೆ ಬಂದಿದೆ. ಎಬ್ಬಿಸಬೇಡ..." ಅನುಮಾನದಿಂದ ನುಡಿದಳು.

"ಸರಿ, ಹಾಗಾದರೆ ಅವನಿಗೆ ಎಚ್ಚರವಾದ ಮೇಲೆ ಹೇಳಿ...ಡಾಕ್ಟರು ಹೇಳಿದಂತೆ ಔಷಧ ಉಪಚಾರ ಮಾಡಿಬಿಡಿ. ನನ್ನಿಂದ ಏನು ಸಹಾಯಬೇಕೋ ಹೇಳಿ. ಅವನು ಮೊದಲಿನಂತೆ ತುಂಟಾಟ ಆಡಿಕೊಂಡಿರುವಂತಾಬೇಕು ಅಷ್ಟೇ..." ವೇದಮ್ಮ ಕಣ್ಣರಳಿಸುವಂತೆ ಮಾತಾಡಿದ್ದ.

ಅಂದಿನಿಂದ ಅನಂತ ತನ್ನ ನಿಲುವನ್ನು ಬದಲಾಯಿಸಿಕೊಂಡ. ಮಕ್ಕಳು ಇದ್ದೆಡೆ ತಾನಾಗಿಯೇ ಬಂದು ಬೆರೆಯಲಾರಂಭಿಸಿದ. ಮಕ್ಕಳನ್ನು ಮಾತನಾಡಿಸಿ ಸ್ಕೂಲ್ ಬಗ್ಗೆ, ಸ್ನೇಹಿತರ ಬಗ್ಗೆ ವಿಚಾರಿಸುತ್ತಿದ್ದ. ತಮಾಷೆಯ ಮಾತುಗಳನ್ನಾಡಿ ನಗಿಸುತ್ತಿದ್ದ. ಕ್ರಮೇಣ ಮಕ್ಕಳು ಅವನಿಗೆ ಹೊಂದಿಕೊಂಡವು. ಏಳೂವರೆ ವರ್ಷದ ಲಲಿತ ಮೂರನೇ ತರಗತಿಯಲ್ಲೂ, ಆರು ವರ್ಷದ ಸತ್ಯ ಎರಡನೇ ತರಗತಿಯಲ್ಲೂ ಓದುತ್ತಿದ್ದರು. ಎಷ್ಟೋ ಸಲ, ಅನಂತನನ್ನು ಓಡಿ ಬಂದು ಮುಟ್ಟಲು, ನಾ ಮೊದಲು ತಾ ಮೊದಲು ಎಂದು ಪೈಪೋಟಿಯಿಂದ ಬರುತ್ತಿದ್ದರು. ಅನಂತ ಸಮಾಧಾನದಿಂದ ಇಬ್ಬರನ್ನು ಮಾತನಾಡಿಸುವ

ಸಹನೆಯನ್ನು ಬೆಳೆಸಿಕೊಂಡ.

ಅನಂತನ ಈ ಮಾರ್ಪಾಡು ಭೈರಪ್ಪನಿಗೆ ಸೋಜಿಗವೆನಿಸಿತ್ತು. ಮಕ್ಕಳು ಎಂತಹವರನ್ನಾದರೂ ಬದಲಾಯಿಸಿ ಬಿಡುವ ಶಕ್ತಿಯನ್ನು ಪಡೆದಿರುತ್ತಾರೆ ಎಂದು ಅನಿಸಿತ್ತು. ಪುರುಷೋತ್ತಮನಿಗೆ ಸಂತಸವಾಗಿತ್ತು. ವೇದಮ್ಮನಿಗೆ ನೆಮ್ಮದಿ, ಸಧ್ಯ ಅನಂತ ಹಿಂದಿನಂತೆ ಆದನಲ್ಲ ಅಂತನ್ನಿಸಿತ್ತು.

ಇಷ್ಟಾದರೂ, ಅನಂತನಿಗೆ ಆಶ್ರಮದ ಒಲವು ಸೆಳೆಯುತ್ತಿತ್ತು. ತಿಂಗಳಿಗೆ ಒಂದು ಸಲ ಭೈರಪ್ಪನೊಡನೆ ಆಶ್ರಮಕ್ಕೆ ಹೋಗಿ ಬರುತ್ತಿದ್ದ. ಕೆಲವು ಸಲ ಪುರುಷೋತ್ತಮನೂ ಬರುತಿದ್ದ. ಆಶ್ರಮವಾಸಿಗಳನ್ನೆಲ್ಲ ಕಂಡು, ವಿಚಾರಿಸಿ, ಮಾತನಾಡಿ ಮುದದಿಂದ ವಾಪಸ್ಸಾಗುತ್ತಿದ್ದ. ಒಂದು ಸಾರಿ ಹೀಗೆ ಹೊರಟಾಗ ಲಲಿತ ಕೇಳಿದ್ದಳು. "ನಮ್ಮನ್ನೂ ಕರೆದುಕೊಂಡು ಹೋಗ್ತೀರಾ?" ಅಂತ "ನಾನೂ ಬರ್ತೀನಿ" ಎಂದಿದ್ದ ಸತ್ಯ ಅವಳೊಡನೆ ನಿಂತು, ಅನಂತ ವೇದಮ್ಮನ ಕಡೆ ನೋಡಿದ.

"ಮಕ್ಕಳೆಂದೂ ಮನೆ ಬಿಟ್ಟು ಹೊರಗೆಲ್ಲೂ ಹೋಗಿಯೇ ಇಲ್ಲ, ಅವರುಗಳು ಕೂಡ ಮನೆಯಲ್ಲಿಯೇ ಬಿಟ್ಟು ತಾವಿಬ್ಬರೇ ಹೋಗುತ್ತಿದ್ದರು" ಎಂದಳು.

ಆ ದಿನ ನಡೆದ ಆ ಹಗರಣ, ಲಲಿತಳ ಸಾವಿಗೆ ಕಾರಣವಾಗಿತ್ತು. ಅನಂತನಿಗೆ ಮೋಸವಾಗಿತ್ತು, ಸುಗುಣ ಮೋಸ ಮಾಡಿದಳು ಎನ್ನುವ ಆಘಾತದೊಂದಿಗೆ, ಅನಂತ ತನ್ನ ಸಾಕು ಮಗ, ಸ್ವಂತ ಮಗನಲ್ಲ ಎನ್ನುವ ರಹಸ್ಯ ತಿಳಿದು, ಅವಳ ಹೃದಯವನ್ನು ಚೂರು ಚೂರು ಮಾಡಿತ್ತು, ಗಂಡ ತನ್ನಿಂದ ಈ ವಿಷಯವನ್ನು ಏಕೆ ಮುಚ್ಚಿಟ್ಟ ಎಂದು ಯೋಚಿಸುತ್ತಿರುವಷ್ಟರಲ್ಲೇ ಅವಳು ಅಸು ನೀಗಿದ್ದಳು. ಅನಂತರ ಮನೆಯಲ್ಲಿ ಯಾರಲ್ಲೂ ಯಾವ ಉತ್ಸಾಹವಾಗಲೀ, ಚೈತನ್ಯವಾಗಲೀ ಇರಲಿಲ್ಲವೆಂದೇ ಹೇಳಬೇಕು.

ಗೋಪಾಲನಿಗೂ ಷಾಕ್ ಹೊಡೆದಂತಾಗಿತ್ತು. ಲಲಿತಳಿಗೆ ಏನೂ ತಿಳಿಯುವುದಿಲ್ಲ. ಅವಳು ಸಾಧ್ವಿ, ಸಾಧು, ವೇದಮ್ಮನಿಗೆ ತಿಳಿದರೆ ತಾನೇನೂ ಹೆದರಬೇಕಾಗಿಲ್ಲ ಎಂದುಕೊಂಡಿದ್ದ. ಆದರೆ ಹಾಗೆ ದಿಢೀರನೇ ರಹಸ್ಯ, ಹೀಗೆ ಬಯಲಾಗಿ, ತನ್ನ ನೆಚ್ಚಿನ ಹೆಂಡತಿಯ ಸಾವಿಗೆ ಕಾರಣವಾಗಬಹುದು ಎಂದು ಖಂಡಿತಾ ಊಹಿಸಿರಲಿಲ್ಲ. ಲಲಿತನ್ನ ಕ್ಷಮೆ ಕೇಳುವ ಅವಕಾಶವನ್ನೇ ಅವಳು ಕೊಡಲಿಲ್ಲ ಎಂದು ಮರುಗಿದ್ದ. ತಾನು ಆಡುವ ನಾಟಕದಿಂದ ಯಾವ ಜೀವಕ್ಕೂ ಧಕ್ಕೆ ಬರುವುದಿಲ್ಲವೆಂದು ಭಾವಿಸಿದ್ದ. ಲಲಿತಾ... ಲಲಿತಾ... ಎಂದು ಗೋಳಾಡಲು ಸಹ ಅಂಜಿದ. ಅದೂ ಸಹ ಸುಗುಣ, ವೇದರ ಎದುರಿಗೆ ನಾಟಕವಾಗಿ ಕಂಡೀತು. ತಾನೀಗ ತಪ್ಪಿತಸ್ಥ. ಆದದ್ದು ಆಗಿ

ಹೋಯ್ತು ಎಂದು ಸುಮ್ಮನಾದ.

ಈ ಘಟನೆ ನಡೆದ ಮೇಲೆ, ಸುಗುಣ ನಿರ್ಜೀವ ಶವದಂತಾಗಿದ್ದಳು. ಕೇಳಿದವರಿಗೆ, ಹೊರಗಿನವರಿಗೆ ಅನುಮಾನ ಬರದಂತೆ ಅನಂತ ಫಾರಿನ್ನಿಗೆ ಹೋಗಿದ್ದಾನೆಂದು ಸುಳ್ಳು ಹೇಳಿ ನಂಬಿಸಿದ್ದರು. ಗೋಪಾಲನ ಪ್ರೀತಿಯ ಮಾತುಗಳನ್ನಾಗಲೀ, ತಂದುಕೊಟ್ಟ ಉಡುಗೊರೆಗಳಾಗಲೀ, ಸುಗುಣಳ ಮನಸ್ಸಿಗೆ ಸಮಧಾನವನ್ನು ಕೊಟ್ಟಿರಲಿಲ್ಲ. ಅವಳ ರೂಪ, ಯೌವನ ಮಾತ್ರ ಗೋಪಾಲನ ಸ್ವತ್ತಾಗಿತ್ತು. ಅವಳನ್ನು ತಾಯಿಯ ಮನೆಯವರೂ ಸಹ ನಿಂದಿಸಿದ್ದರಿಂದ ಅವಳೀಗ ಇಲ್ಲಿ ಇರಲೇಬೇಕಾಗಿತ್ತು. ಮನೆ ಬಿಟ್ಟು ಹೋಗುವಂತೆಯೂ ಇರಲಿಲ್ಲ. ಅವಳ ಜೀವಕ್ಕೇನಾದರೂ ಅಪಾಯ ಮಾಡಿಕೊಂಡಾಳೆಂಬ ಭಯ ಗೋಪಾಲನಿಗೆ ಇದ್ದೇ ಇತ್ತು. ವೇದಮ್ಮನ್ನ ಅವಳ ಕಾವಲಿಗೆ ಎಂಬಂತೆ ಎಚ್ಚರಿಸಿ ಹೇಳಿದ್ದ. ಅವಳ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಮಗು ನನ್ನದು. ಲಲಿತಳಾಗಲೀ, ನೀನಾಗಲೀ, ನನ್ನದೇ ಆದ ಒಂದು ಮಗುವನ್ನು ಹೆತ್ತು ಕೊಟ್ಟಿದ್ದರೆ, ಈ ದಿನ ಹೀಗಾಗುತ್ತಿರಲಿಲ್ಲ, ಆದರಿಂದ ಇದಕ್ಕೆಲ್ಲಾ ಕಾರಣ ನೀವುಗಳೇ... ಈಗ ಆ ಮಗುವಿಗೆ ಏನೂ ತೊಂದರೆಯಾಗಬಾರದು...ಆಮೇಲೆ, ಅವಳು ಮಗು ಹೆತ್ತ ಮೇಲೆ, ಅವಳಿಗೆ ಇಷ್ಟವಿಲ್ಲದಿದ್ದರೆ ಹೊರಟು ಹೋಗಲಿ..” ನಿಷ್ಠುರವಾಗಿ ಗೋಪಾಲನಾಡಿದ ಮಾತುಗಳು ವೇದಮ್ಮನಿಗೆ ಅಸಹ್ಯವಾಗಿ ಕಂಡವು.. ಛಿ...ಗಂಡಸು ಎನ್ನುವ ದರ್ಪದಿಂದ ಹೇಗೆಲ್ಲಾ ಮಾತನಾಡುತ್ತಾನೆ? ಆದರೆ ಮಾನವೀಯತೆ ಬೇಡವೆ! ಮೊದಲೆ ಒಂದು ಕೊಲೆ ನಡೆದಿದೆ.... ಒಂದು ವೇಳೆ ಸುಗುಣ ಇವನು ಆಡಿದಂತೆ ಮಗುವನ್ನು ಬಿಟ್ಟು ಹೊರಟು ಹೋದರೇ... ಹಾಗಾಗಬಾರದು... ಆ ಮಗುವಿಗೆ ತಾಯಿಯ ಆರೈಕೆ ಪ್ರೀತಿ ಸಿಗಬೇಡವೆ! ಲಲಿತ ಅನಂತನ್ನ ಸ್ವಂತ ಮಗುವಂತೆಯೇ ಸಾಕಿ ಬೆಳೆಸಿದ್ದಳಲ್ಲ... ಆದರೂ ಏನೇನೋ ಆಗಿ ಹೋಯಿತು. ಜನಗಳು ತಲಾತಟ್ಟಿ ಮಾತನಾಡುವಂತಾಗಬಾರದು. ಈ ಹಿಂದೆ ಆಡಿಕೊಂಡವರು, ಈಗ ತಮಗ್ಯಾಕೆ ಎಂದು ಸುಮ್ಮನಾಗಿದ್ದರು.

“ನೀವು ಎಷ್ಟು ಒಳ್ಳೆಯವರು ವೇದಮ್ಮ... ನನ್ನಿಂದಾಗಿ ಈ ಮನೆಯಲ್ಲಿ ಎಂತಹ ಅನಾಹುತಗಳು ನಡೆದು ಹೋದವು. ನನಗೆ ಬದುಕುವ ಇಚ್ಛೆಯೇ ಇಲ್ಲ ಆದರೂ ಸಾಯಲೂ ಆಗುತ್ತಿಲ್ಲ. ನಾನೀಗ ಈ ಮನೆಯಲ್ಲಿ ಬಂಧಿ... ಹುಟ್ಟಲಿರುವ ಮಗುವಿನ ಹಂಬಲದಿಂದ ಇವರು ಹೀಗೆಲ್ಲಾ ಮಾಡಬಹುದು ಅಂತ ನಾನಂತೂ ಅಂದುಕೊಂಡಿರಲಿಲ್ಲ. ಹೆರಿಗೆ ಸಮಯದಲ್ಲಿ ನಾನು ಸತ್ತು ಹೋದರೆ ಸಾಕು ಅಂತ ದೇವರನ್ನು ಪ್ರಾರ್ಥಿಸುತ್ತಿದೀನಿ. ನನ್ನ ಮಗುವಿಗೆ ಯಾವ ತೊಂದರೆ ಬರದಂತೆ ನೀವು ಚೆನ್ನಾಗಿ ನೋಡಿಕೊಳ್ತೀರಿ ಅನ್ನುವ

ನಂಬಿಕೆ ನನಗಿದೆ"

"ಛಿ..ಬಿಡ್ತು ಅನ್ನು. ನಿನಗೇನೂ ಆಗಲ್ಲ. ಹಾಗಾಗಲೂಬಾರದು. ಮಗು ಚೆನ್ನಾಗಿ ಬೆಳೆಯಬೇಕಾದರೆ, ತಾಯಿ ಬೇಕೇ ಬೇಕು. ಮಗು ಅನಾಥವಾಗಬಾರದು. ಅನಂತ, ಅನಾಥ ಅಂತ ತಿಳಿದದ್ದೇ ಈ ಎಲ್ಲಾ ಅನಾಹುತಕ್ಕೆ ಕಾರಣವಾಗಲಿಲ್ಲ, ಏನೋ ನಡೆಯಬಾರದು ನಡೆದು ಹೋಯಿತು. ಬರಲಿರುವ ಮಗು ಈ ಮನೆಯದು, ಅದು ಚೆನ್ನಾಗಿರಬೇಕು..."

"ಬಡತನದಲ್ಲಿ ಬೆಳೆದ ನಾನು, ಬದುಕುವ ಆಸೆಯಿಂದ ಈ ಮನೆಗೆ ಬಂದೆ; ಆ ಆಸೆ ಈಗ ನನಗಂತೂ ಇಲ್ಲ, ಅನಂತನ್ನ ಎಲ್ಲಿದ್ದರೂ ಹುಡುಕಿಸಿ ಕರೆಸಿ, ಅವರು ನನ್ನನ್ನು ಕ್ಷಮಿಸಿದೀನಿ ಅಂತ ಹೇಳಿದರೆ, ನನ್ನ ಆತ್ಮಕ್ಕೆ ಶಾಂತಿ ಸಿಗುತ್ತದೆ"

ಸುಗುಣ ಪಶ್ಚಾತ್ತಾಪದ ಬೇಗೆಯಲ್ಲಿ ಬೆಂದು ಹೋಗಿದ್ದಳು. ತಪ್ಪಿನಲ್ಲಿ ಅವಳದೂ ಸಮಪಾಲು. ಆದರೂ ಗೋಪಾಲ ಹೇಳಿದಂತೆ ನಡೆದರೆ ಎಲ್ಲಾ ಸರಿ ಹೋಗುತ್ತದೆ ಎಂಬ ಧೈರ್ಯವಿತ್ತೇನೋ.... ಅನಂತ ಒಂದು ಬಾರಿ ಬಂದರೆ ಎಂದು ಹಂಬಲಿಸುತ್ತಿದ್ದಳು.

"ಅವನು ಇಲ್ಲಿಗ್ಯಾಕೆ ಬಂದಾನು? ಹೋಗಲಿ ಬಿಡು, ಅವನು ಎಲ್ಲೇ ಇರಲಿ, ಸುಖವಾಗಿರಲಿ ಎಂದು ಹಾರೈಸು"

"ನನ್ನಿಂದಾಗಿ ಅವರು ಈ ಮನೆ ಬಿಟ್ಟು ಹೋದರು ಎನ್ನುವ ಬಾಧೆ ನನ್ನನ್ನು ಹಿಂಸಿಸುತ್ತಲೇ ಇರುತ್ತದೆ. ಅವರು ಮತ್ತೆ ಈ ಮನೆಗೆ ಬರುವಂತೆ ನೀವು ಮಾಡಬೇಕು." ಸುಗುಣ ವೇದಮ್ಮನ ಕೈ ಹಿಡಿದು ಕೇಳಿಕೊಂಡಿದ್ದಳು.

ಮನಸ್ಸಿನಲ್ಲಿ ಏನು ಆಸೆ ಇಟ್ಟುಕೊಂಡು ಹಾಗೆ ನುಡಿದಿದ್ದಳೋ ಈ ದಿನ ಅದು ನಿಜವಾಗಿದೆ. ಅನಂತ ಮತ್ತೆ ಮನೆಗೆ ವಾಪಸ್ಸಾಗಿದಾನೆ ಕ್ಷಮೆ ಕೇಳಲು ಅವಳು ಬದುಕಿಲ್ಲ. ಆದರೆ, ಇವನು ಅವಳನ್ನು ಕ್ಷಮಿಸಿರಬಹುದು, ಆ ಮಕ್ಕಳನ್ನು ದ್ವೇಷಿಸುತ್ತಿಲ್ಲ. ಪೋಷಿಸುತ್ತಿದ್ದಾನೆ ಈಗ ಸುಗುಣನ ಆತ್ಮಕ್ಕೆ ಶಾಂತಿ ಸಿಕ್ಕಿರಬಹುದು.

ಮೊದಲನೆಯದು ಹೆಣ್ಣು ಮಗು ಅಂತ ತಿಳಿದಾಗ ಸುಗುಣ ನಿರಾಸೆಯಿಂದ ಅತ್ತಿದ್ದಳು. "ಗಂಡಾಗಿದ್ದರೆ ನಾನು ನೆಮ್ಮದಿಯಾಗಿರುತ್ತಿದ್ದೆ. ನನ್ನಂತೆಯೇ ಮುಂದೆ ಈ ಹುಡುಗಿ ಬೆಳೆದು ಯಾವ ಕೆಟ್ಟ ಸುಳಿಗೆ ಸಿಕ್ಕಿ ಬೀಳುತ್ತಾಳೋ"

"ಛೆ...ಹಾಗೆಲ್ಲ ಯಾಕೆ ಯೋಚಿಸ್ತೀಯಾ! ಮಗು ಎಷ್ಟು ಮುದ್ದಾಗಿದೆ ನೋಡು. ನಿನ್ನ ಕಷ್ಟವೆಲ್ಲಾ ತೀರಿತು ಅಂತ ತಿಳಕೋ..."

"ಇಲ್ಲ ವೇದಮ್ಮ... ನನ್ನ ಕಷ್ಟ ತೀರಿಲ್ಲ, ಅವರಿಗೆ ಬೇಕಾಗಿದ್ದುದು

ಗಂಡು ಮಗು...ನಾನು ಸತ್ತು ಹೋಗಿದ್ದರೇ ಚೆನ್ನಾಗಿತ್ತು"

ವೇದಮ್ಮನಿಗೂ ಆತಂಕವಾಗಿತ್ತು. ಗೋಪಾಲ, ಅನಂತ ತನ್ನ ಸ್ವಂತ ಮಗನಲ್ಲ ಎಂದು ದ್ವೇಷಿಸಿದ್ದ. ಹಾಗೇ ಇದು ಗಂಡು ಮಗುವಲ್ಲ ಎಂದು ದ್ವೇಷಿಸಿದರೇ...?"

ಆದರೆ ಹಾಗಾಗಲಿಲ್ಲ, ಗೋಪಾಲ ಸಂತಸದಿಂದ ಮಗುವನ್ನು ಎತ್ತಿ ಮುದ್ದಾಡಿದ್ದ. ಮಗುವಿಗೆ ಲಲಿತ ಎಂದು ನಾಮಕರಣ ಮಾಡಿ, ತನ್ನ ಪಾಪವನ್ನು ತೊಳೆದುಕೊಳ್ಳಲು ಯತ್ನಿಸಿದ್ದ. ಗೋಪಾಲನ ಉತ್ಸಾಹ ಸುಗುಣಳಿಗೆ ನೆಮ್ಮದಿಯನ್ನು ತಂದಿತ್ತು. ಆದರೆ ಗೋಪಾಲ ನೆಮ್ಮದಿಯಿಂದ ಇರಲು ಬಿಟ್ಟಿರಲಿಲ್ಲ ಸುಗುಣಳನ್ನು ಮತ್ತೆ ಒಲಿಸಿಕೊಂಡಿದ್ದ.

ಎರಡನೇ ಮಗು ಗಂಡು ಎಂದು ತಿಳಿದಾಗ ಹಾಯಾಗಿ ಉಸಿರಾಡಿದ್ದಳು. ಇನ್ನು ಗೆದ್ದೆ ಎಂದುಕೊಂಡಳು. ಗೋಪಾಲ ಖುಷಿಯಿಂದ ಕುಣಿದಾಡಿದ್ದ. ಆದರೆ ಹೊರಗಿನವರಿಗೆ ನಿಜ ತಿಳಿಯಬಾರದಲ್ಲ.... ಈ ಸುಳ್ಳಿನ ಸರಪಳಿ ಸುಗುಣಳಿಗೆ ಬೇಸರವನ್ನು ತರಿಸಿತ್ತು. ತಾನು ಅನಂತನಿಗೆ ನಿಜವಾದ ಹೆಂಡತಿಯಾಗಲಿಲ್ಲ. ಈ ಮಕ್ಕಳು ನಿಜವಾಗಿಯೂ ಅನಂತನ ಮಕ್ಕಳಲ್ಲ. ಈ ಸುಳ್ಳಿನ ಕತೆ ಅಲ್ಲಿಗೇ ಮುಕ್ತಾಯವಾಗಬೇಕು ತಂದೆಯಂತೆ ತಾಯಿಯಂತೆ, ಈ ಮಗು ಮೋಸಗಾರನಾಗಬಾರದು... ಸತ್ಯವಂತನಾಗಿ ಬಾಳಬೇಕು ಎಂದು ಬಯಸಿ ಮಗನಿಗೆ ಸತ್ಯಕಾಮನೆಂದು ಹೆಸರನ್ನಿಟ್ಟಳು. ಇದೆಂತಹ ಹೆಸರು ಎಂದೆನಿಸಿದ್ದರೂ. "ಹೆಸರಿನಲ್ಲೇನಿದೆ..." ಸುಗುಣಳ ಕಡೆ ನೋಡಿ ತಲೆ ಆಡಿಸಿ ಸುಮ್ಮನಾಗಿದ್ದ.

ಮಕ್ಕಳು ಬೆಳೆದಂತೆಲ್ಲಾ ಸುಗುಣ ಕೆಲವನ್ನು ಮರೆಯಲು ಪ್ರಯತ್ನಿಸಿದ್ದಳು. ಆದರೆ ಮರೆಯಲು ಆಗಿರಲಿಲ್ಲ, ಅಕ್ಕ ಪಕ್ಕದವರ ಕುತೂಹಲದ ನಾನಾ ಮಾತುಗಳಿಂದ ಬೇಸರವಾಗುತ್ತಿತ್ತು. ಮಿಲಟರಿಯಲ್ಲಿ ಸೇವೆ ಸಲ್ಲಿಸುತ್ತಿರುವ ತನ್ನ ಮಗ ಆಗಾಗ್ಗೆ ಬರುವುದಿಕ್ಕಾಗುವುದಿಲ್ಲ ಎಂದು ಗೋಪಾಲ ಅವರಿವರಲ್ಲಿ ಹೇಳಿದನಂತೆ. ಸುಗುಣ ಅಕ್ಕ ಪಕ್ಕದವರ ಜತೆ ಬೆರೆತು ಮಾತನಾಡುವ ಪ್ರಶ್ನೆಯೇ ಇರಲಿಲ್ಲ. ಆದರೂ ಯಾರೂ, ಸುಗುಣ ಗೋಪಾಲನ ಸಂಬಂಧ ಕುರಿತು ಎಂದೂ ಪ್ರಶ್ನಿಸಿರಲಿಲ್ಲ. ಹಿಂದೆ ಏನು ಮಾತಾನಾಡಿಕೊಳ್ಳುತ್ತಿದ್ದರೋ ಇವರ ತನಕ ಬಂದಿರಲಿಲ್ಲ.

ಸುಗುಣ ತಾನಾಗಿಯೇ ಗೋಪಾಲನ ಜತೆ ಹೊರಗೆ ಎಲ್ಲೂ ಹೋಗುತ್ತಿರಲಿಲ್ಲ. ಮಕ್ಕಳು ಬೆಳೆದಂತೆ, ಸುಗುಣ ಅವುಗಳ ಲಾಲನೆ ಪಾಲನೆಯಲ್ಲಿಯೇ ಕಾಲ ಹಾಕುತ್ತಿದ್ದಳು. ಆದರೂ ಗೋಪಾಲ ಕೆಲವು ಸಾರಿ ಬಲವಂತವಾಗಿ ಅವಳನ್ನು ಹೊರಗೆ ಕರೆದೊಯ್ದಿದ್ದ. ಅವನ ಪರಿಚಯದವರು ಕೇಳಿದವರಿಗೆ,

ಅನಂತ ಸಧ್ಯಕ್ಕೆ ಇಲ್ಲಿಗೆ ಬರುವಂತಿಲ್ಲ, ನಾವುಗಳೇ ಹೋಗಿ ನೋಡಿ ಮಾತನಾಡಿಸಿಕೊಂಡು ಬರುತ್ತೇವೆ. ಅದೂ ಸ್ಪೆಷಲ್ ಪರ್ಮಿಷನ್ ಎಂದಿದ್ದ. ಈ ಸಾರಿ ಹಾಗೇ ಹೊರಟಾಗ ಲಲಿತ ತಾನೂ ಬರುವುದಾಗಿ ಹಠ ಹಿಡಿದಿದ್ದಳು. ಗೋಪಾಲ ಖಡಾ ಖಂಡಿತವಾಗಿ ಬೇಡ ಎಂದಿದ್ದ. "ಅದು ಮಕ್ಕಳು ಹೋಗುವ ಜಾಗವಲ್ಲ... ಬಂದ ಮೇಲೆ ನಿಮ್ಮಗಳನ್ನು ಬೇರೆಲ್ಲಿಗಾದರೂ ಕರೆದುಕೊಂಡು ಹೋಗ್ತೀನಿ" ಎಂದು ಆಶ್ವಾಸನೆ ನೀಡಿದ್ದ. ಆದರೆ ಆದಿನ ಬರಲೇ ಇಲ್ಲ. ಅಪಘಾತದಲ್ಲಿ ಇಬ್ಬರೂ ತೀರಿ ಹೋಗಿದ್ದರು. ಆ ವಿಷಯವನ್ನು ತನಗೆ ಬಂದು ತಿಳಿಸಿದವನು ಪುರುಷೋತ್ತಮನೇ.... ಈಗ ಪುರುಷೋತ್ತಮನಿಂದ ತನಗೆ ಎಷ್ಟು ಅನುಕೂಲವಾಗುತ್ತಿದೆ...

ಸಧ್ಯ ಆದಿನ ಮಕ್ಕಳೂ ಅವರೊಂದಿಗೆ ಹೋಗಿದ್ದರೇ...ಹಾಗೇ ಯೋಚಿಸಲೂ ಮನಸ್ಸು ಹಿಂಜರಿಯುತ್ತದೆ. ಲಲಿತನ ಆಸ್ತಿಯೆಲ್ಲಾ ಅನಂತನಿಗೇ ಸೇರಬೇಕಾಗಿದ್ದದರಿಂದ ಅವನು ಎಲ್ಲಿದ್ದರೂ ಕರೆಸಬೇಕೆಂದು ಲಾಯರು ಹೇಳಿದ್ದರು. ಈ ವಿಷಯದಲ್ಲಿ ತನಗೆ ಸಹಾಯ ಮಾಡಿದವನೂ ಪುರುಷೋತ್ತಮನೇ ... ಈತನಿಗೇ ಹೇಳಿ ಅನಂತನ ಮನಸ್ಸಿನಲ್ಲೇನಿದೆ ಅಂತ ತಿಳಿದುಕೊಂಡು ಅವನು ಮತ್ತೆ ಸಂಸಾರಿಯಾಗುವಂತೆ ಮಾಡಬೇಕು... ಮತ್ತೆ ಅದೇ ಆಲೋಚನೆಯಲ್ಲಿ ಮುಳುಗಿ ಹೋದವಳನ್ನು ಅನಂತ ಕರೆದು ಎಚ್ಚರಿಸಿದ.

"ಒಂದು ವ್ಯಾನು ಗೊತ್ತು ಮಾಡಿದೀನಿ, ನಾಳೆ ಎಲ್ಲರೂ ಆಶ್ರಮಕ್ಕೆ ಹೋಗಿ ಬರೋಣ.. ಪುರುಷೋತ್ತಮ, ಪ್ರಶಾಂತನೂ ಬರುತ್ತಾರೆ ಎಲ್ಲರಿಗೂ ಆಗುವಷ್ಟು ತಿಂಡಿ, ಕಾಫಿ ಮಾಡಿಬಿಡಿ. ಆಶ್ರಮದಲ್ಲೇ ಊಟ ಮಾಡಿದರಾಯ್ತು"

ವೇದಮ್ಮ ಚಕಿತಳಾಗಿ ಕೇಳಿಸಿಕೊಂಡರು. ಭೈರಪ್ಪ ಉತ್ಸಾಹದಿಂದ ಚಪ್ಪಾಳೆ ತಟ್ಟಿದಾಗ ಮಕ್ಕಳು ಚಪ್ಪಾಳೆ ತಟ್ಟಿದವು.

ಬೆಳಿಗ್ಗೆ ವ್ಯಾನು ಬಂದು ನಿಂತಾಗ ಕಿಟಕಿಯ ಹತ್ತಿರ ನಾನು ತಾನು ಎಂದು ಪೈಪೋಟಿಯಿಂದ ಹತ್ತಿದರು. ಅವರಿಬ್ಬರಿಗಿಂತ ದೊಡ್ಡವನಾದ ಪ್ರಶಾಂತ ಗಂಭೀರದಿಂದ ಒಂದೆಡೆ ಕುಳಿತ. ಅನಂತ ಮೌನವಾಗಿದ್ದ. ವೇದಮ್ಮ ಭೈರಪ್ಪ ಆಗಾಗ್ಗೆ ಮಾತನಾಡುತ್ತಿದ್ದರು. ಮಕ್ಕಳು ಹೊರಗಿನ ಗಿಡಮರಗಳನ್ನು ನೋಡುವುದರಲ್ಲಿ ಆಸಕ್ತರಾಗಿದ್ದರು. ಆಶ್ರಮ ತಲುಪಿ, ವ್ಯಾನು ನಿಂತ ಕೂಡಲೇ ಎಲ್ಲರಿಗೂ ಹಾಯೆನಿಸಿತ್ತು. ಮರಗಳಿಂದ ಹಿತವಾಗಿ, ಬೀಸುತ್ತಿದ್ದ ತಂಗಾಳೀ ಪ್ರಯಾಣದ ಆಯಾಸವನ್ನು ಮರೆಸಿದವು. ಆಶ್ರಮದ ಕೆಲವು ಮಕ್ಕಳು, ಎಲ್ಲಿದ್ದವೋ ಓಡೋಡಿ ಬಂದು, ಅನತಿ ದೂರದಲ್ಲಿ ಪಿಳಿ ಪಿಳಿ ನೋಡುತ್ತಾ ನಿಂತವು. ಎಲ್ಲರೂ ಅತಿಥಿ ಗೃಹಕ್ಕೆ ಬಂದರು. ಭೈರಪ್ಪ ಸರಸರನೆ ಹೋಗಿ ಎಲ್ಲರಿಗೂ ಹಾಲು, ಕಾಪಿ ತಂದಿರಿಸಿದ. ದಣಿವಾರಿಸಿಕೊಂಡು, ಎಲ್ಲರೂ

ಆಶ್ರಮವನ್ನು ಸುತ್ತಾಡಿ ಬರಲು ಹೊರಟರು. ಅನಂತ ಮಾತ್ರ ಸ್ವಾಮೀಜಿಯ ಬಳಿ ಮಾತನಾಡುವ ಉದ್ದೇಶದಿಂದ ಕುಳಿತ.

ಕೈ ಕೈ ಹಿಡಿದು ಮಕ್ಕಳು ತೋಟದಲ್ಲಿ ಆನಂದದಿಂದ ಓಡಾಡಿದರು. ಕೈಗೆ ಸಿಕ್ಕದಿರುವ ಹಣ್ಣನ್ನು ಕೀಳಲು ಎಗರಿ ಎಗರಿ ಸುಸ್ತಾದರು. ಕೆಳಗೆ ಬಿದ್ದಿದ್ದ ಹೂ, ಕಾಯಿಗಳನ್ನು ಆರಿಸಿ ಕೈಗಳನ್ನು ತುಂಬಿಸಿಕೊಂಡರು.

"ಎಷ್ಟು ಪ್ರಶಾಂತವಾಗಿದೆ ಈ ಸ್ಥಳ. ಅದಕ್ಕೇ ಅನಂತನಿಗೆ ಇಲ್ಲೇ ಇರುವ ಆಸೆ" ವೇದಮ್ಮ ನುಡಿದಳು.

"ದೊಡ್ಡವನಾದ ಮೇಲೆ ನಾನೂ ಇಲ್ಲೇ ಬಂದಿರ್ತೀನಿ" ಸತ್ಯ ನುಡಿದಾಗ ವೇದಮ್ಮ ಬೆಚ್ಚಿದಳು. ಆಶ್ರಮದಲ್ಲಿ ಸ್ವಾಮೀಜಿಯ ದರ್ಶನದ ನಂತರ ಎಲ್ಲರಿಗೂ ಊಟ ಆಯಿತು. ಎಲ್ಲರೂ ಸಂತೋಷದಿಂದ ಕಾಲ ಕಳೆದು ಹಿಂತಿರುಗಿದ್ದರು. ಪಾಪ ಮಕ್ಕಳು ಎಲ್ಲಿಯೂ ಹೊರಗೆ ಹೋಗಿರಲಿಲ್ಲ, ಖುಷಿಯಿಂದ ಎಗರಾಡ್ತಿವೆ" ವೇದಮ್ಮ ಭೈರಪ್ಪನೊಡನೆ ಹೇಳಿದಳು.

ಸ್ವಾಮೀಜಿ, ಅನಂತನನ್ನು ಬಾಯ್ತುಂಬಾ ಹೊಗಳಿದರು. "ನಿನ್ನ ದೊಡ್ಡಗುಣವನ್ನು ಎಲ್ಲರೂ ಮೆಚ್ಚುಂವಂಥಾದ್ದು, ಶತೃವಿನ ಹೆಸರನ್ನು ಮಗನಿಡಬೇಕು ಎಂದು ಹಾಡಿದ್ದಾರೆ ಪುರಂದರದಾಸರು ಶತೃತ್ವವನ್ನು ತೊರೆದು ಮಗನನ್ನು ಪ್ರೀತಿಸುವಂತೆ, ನಿರ್ದಾಜ್ಯ ಪ್ರೀತಿಯನ್ನು ತೋರು ಅಂತ ಹಾಡಿನ ಅರ್ಥ. ಹಿಂದೊಮ್ಮೆ ಇದೇ ಮಾತುಗಳನ್ನು ಹೇಳಿದ್ದೆ. ಆ ಹಾಡಿನ ಅರ್ಥವನ್ನು ನೀನೀಗ ಸಾಕಾರಗೊಳಿಸಿದ್ದಿಯೇ. ನಿನ್ನ ಮನಸ್ಸಿನ ನಂಜು ಕರಗಿ ತಿಳಿಯಾಗಿದೆ, ನಿನ್ನ ಉದ್ದೇಶ ಸಫಲವಾಗಲಿ, ಜಗನ್ನಾಥನು ನಿನಗೆ ಸದಾ ಒಳ್ಳೆಯದನ್ನುಂಟು ಮಾಡಲಿ "ಜೈ ಜಗನ್ನಾಥ" ಎಂದು ಹಾರೈಸಿದ್ದರು. ಸತ್ಯ ಅತಿ ಸಂತಸದಿಂದ ತಾನೂ "ಜೈ ಜಗನ್ನಾಥಾ" ಎಂದಿದ್ದ. ಸ್ವಾಮೀಜಿ ಮುಗುಳ್ನಕ್ಕಿದ್ದರು.

** ** **

ದಿನಗಳು ಸರಿದವು. ತಿಂಗಳುಗಳು ಉರುಳಿದವು. ವರ್ಷಗಳು ಕಳೆದವು. ಈಗ ಲಲಿತ ಸತ್ಯ ಇಬ್ಬರೂ ಕಾಲೇಜಿನಲ್ಲಿ ಓದುತ್ತಿರುವ ಹುಡುಗರು ಸುಗುಣಳಂತೆ ಎತ್ತರವಾಗಿ ಬೆಳೆದಿರುವ ಲಲಿತನ್ನ ಕಂಡಾಗ ಅನಂತ ಒಮ್ಮೊಮ್ಮೆ ವಿಚಲಿತನಾಗುತ್ತಿದ್ದ. ಅವಳು ನನ್ನ ಮಗಳಲ್ಲ. ಅಥವಾ ನನ್ನ ತಂಗಿಯಲ್ಲ ಎಂಬ ಆಲೋಚನೆ ಬಂದಾಗ ತನಗೆ ತಾನೇ ಹೆದರುತ್ತಿದ್ದ. ಲಲಿತ ಸುಗಣಳಂತೆ ಹೋಲಿಕೆಯಲ್ಲಿ ಇಲ್ಲದೇ ಇದ್ದಿದ್ದರೇ... ತಾನು ಹೀಗೇಕೆ ಏನೇನೋ ಯೋಚಿಸ ಬೇಕು? ಎಂದು ತನಗೆ ತಾನೇ ತಲೆ ಕೊಡವಿಕೊಳ್ಳುತ್ತಿದ್ದ. ಆದರೂ ಮನಸ್ಸೆಂಬ ಹುಚ್ಚು ಕುದುರೆ ಕಡಿವಾಣವನ್ನು ಕಿತ್ತೊಗೆದು ಅತ್ತಿತ್ತ ದಿಕ್ಕುಗೆಟ್ಟಂತೆ ಓಡುತ್ತಿತ್ತು.

ತಾನು ಇನ್ನು ಇಲ್ಲಿ ಇರುವುದು ಸರಿಯಲ್ಲ; ತಾನು ಆದಷ್ಟು ಬೇಗ ಆಶ್ರಮಕ್ಕೆ ವಾಪಸ್ಸು ಹೊರಟುಹೋಗಬೇಕು ಎಂದುಕೊಳ್ಳುತ್ತಿದ್ದ. ಆದರೆ, ಕೇಳಿದವರಿಗೆ ಕಾರಣ ಏನೆಂದು ಹೇಳಬಲ್ಲ!

ಅಕ್ಕ ತಮ್ಮ ಒಟ್ಟಿಗೆ ಕುಳಿತು ಹರಟುತ್ತಿದ್ದರೆ, ಅವಳನ್ನೆ ಕದ್ದು ಕದ್ದು ನೋಡುತ್ತಿದ್ದಾಗಲೆಲ್ಲಾ ತಾನು ಏನನ್ನೋ ಕಳೆದುಕೊಂಡಂತಹ ಅನುಭವದಿಂದ ಸಂಕಟ ಪಡುತ್ತಿದ್ದ. ಅಲ್ಲಿ ಇರಲಾಗದೇ ಸರಿದು ಹೋಗುತ್ತಿದ್ದ ನಿರುತ್ಸಾಹ ಹೆಚ್ಚಾಗುತ್ತಿತ್ತು. ಅಂಗಡಿಯಲ್ಲಿ ಹೆಚ್ಚು ಹೆಚ್ಚು ಸಮಯವನ್ನು ಕಳೆಯುತ್ತಿದ್ದ. ಅಂಗಡಿಯಿಂದ ಯಾವ ಲಾಭವೂ ಬಂದಿರಲಿಲ್ಲ. ಸಾಲದ ಹಣ, ಬಡ್ಡಿ ಯೊಂದಿಗೆ ಬೆಳೆಯತ್ತಿತ್ತು. ಭೈರಪ್ಪ ಒಮ್ಮೆ ಅಂಗಡಿಯನ್ನು ಮಾರುವ ಸಲಹೆ ನೀಡಿದಾಗ, ಬೇಡ ಭೈರಪ್ಪ ಮನೆಯಲ್ಲಿ ಇರಲು ಬೇಸರವೆನಿಸಿದಾಗ, ಕಾಲ ಕಳೆಯಲು ಇದಕ್ಕಿಂತ ಉತ್ತಮವಾದ ಸ್ಥಳ ಇನ್ನೊಂದಿಲ್ಲ, ಆಶ್ರಮಕ್ಕೆ ವಾಪಸ್ಸು ಹೋಗುವಾಗ ಮಾರಲೇ ಬೇಕಾಗುತ್ತದೆ. ಅಲ್ಲವೆ!

"ಇದರಿಂದ ಆದಾಯವೇ ಇಲ್ಲವಲ್ಲ ಅನಂತಪ್ಪಾ"

"ಹೌದು, ಭೈರಪ್ಪ.... ಆದಾಯವಿಲ್ಲ ನಿಜ, ನನ್ನ ಅನ್ನಕ್ಕೆ ಆಗುವಷ್ಟು ಸಂಪಾದನೆ ಬರುತ್ತಿಲ್ಲ ಆದ್ರೂ ಸಾಕು... ನನಗೆ ಹೆಚ್ಚಿನ ಲಾಭದ ಆಸೆ ಎಂದೂ ಇರಲಿಲ್ಲ, ಈಗಲೂ ಇಲ್ಲ" ಭೈರಪ್ಪ ತಲೆ ಅಲ್ಲಾಡಿಸಿದ್ದ ನಗುತ್ತಾ

ಒಂದು ದಿನ ಪುರುಷೋತ್ತಮ ಬಂದಿದ್ದಾಗ, ಲೋಕಾಭಿರಾಮವಾಗಿ ಮಾತನಾಡುತ್ತಾ, ಲಲಿತ ಹೇಗೆ ಬೆಳೆದು ಬಿಟ್ಟಿದಾಳೆ ನೋಡು ಈ ಸಲದ ಪರೀಕ್ಷೆ ಮುಗಿದ ಮೇಲೆ ಅವಳ ಮದುವೆ ಮುಗಿಸಿ ಬಿಡಬಹುದು, ಅನಂತ ಉತ್ತರಿಸಲಿಲ್ಲ, ಅವನ ಚೇತನ ತಟಸ್ಥವಾಗಿತ್ತು "ಲಲಿತಳಿಗೆ ಮದುವೆ! ...ಮದುವೆ ಮಾಡಿಕೊಂಡು ಈ ಮನೆಯಿಂದ ಅವಳು ಹೊರಟು ಹೋಗ್ತಾಳೆ....! ಆಲೋಚನೆ ಹಿತವಾಗಿರಲಿಲ್ಲ. ಮತ್ತೊಮ್ಮೆ ಪುರುಷೋತ್ತಮ ಅದೇ ಮಾತನ್ನು ಆಡಿದಾಗ ಪ್ರಶ್ನಿಸಿದ್ದ.

"ಅಷ್ಟು ವಯಸ್ಸಾಗಿದೆ ಅವಳಿಗೆ ಅಂತ ಅನ್ನಿಸುತ್ತಾ?"

"ಹೆಣ್ಣು ಮಕ್ಕಳು ಹಾಗೇನೇ... ಇನ್ನು ಲಂಗ ಹಾಕಿಕೊಳ್ಳುವ ವಯಸ್ಸಿರುವಾಗಲೇ, ಸೀರೆ ಉಡುವಷ್ಟು ಬೆಳೆದಿರುತ್ತಾರೆ"

"ಮದುವೆ ಬಗ್ಗೆ ನನಗೇನೂ ತಿಳಿಯುವುದಿಲ್ಲ, ನೀವೇ ವೇದಮ್ಮದರಿಗೆ ಹೇಳಿ ಬಿಡಿ"

"ಆಗಲಿ ನಾನೇ ಹೇಳ್ತೀನಿ," ಅವನೆಡೆ ನೋಡಿ ನಕ್ಕು ನುಡಿದಿದ್ದ.

"ಲಲಿತಂಗೆ ಮದುವೆ.." ಎನ್ನುವ ವಿಚಾರ ಅವನನ್ನು ಮತ್ತೆ ಮತ್ತೆ ಅದೇ ಮಾತನ್ನು ಯೋಚಿಸುವಂತೆ ಮಾಡಿತ್ತು. ಸುಗುಣಳ ಬಗ್ಗೆ ತಿಳಿದವರು.

ಇವಳನ್ನು ಮದುವೆಯಾಗಲು ಒಪ್ಪುವರೇ, ಯಾರೂ ಒಪ್ಪದೇ ಲಲಿತಳ ಮನಸ್ಸು ಒಡೆದು ಹೋದರೇ... ಮದುವೆ ಯಾಕೆ! ಚೆನ್ನಾಗಿ ಓದಿಸಿ ಅವಳು ಒಂದು ಕೆಲಸಕ್ಕೆ ಸೇರಿಕೊಂಡರೇ? ಛೆ... ಬೇಡ ಹೆಣ್ಣು ಹುಡುಗಿ ಹೊರಗೆ ಹೋಗಿ ದುಡಿಯುವುದು ಎಂದರೇನು? ನಾನಾ ಮಾತುಗಳನ್ನು ಕೇಳಬೇಕಾದ ಸ್ಥಿತಿ ಬರಬಹುದು, ಎಷ್ಟಾಗಲೀ, ಸುಗುಣ, ಗೋಪಾಲಳ ರಕ್ತ ಹರಿಯುತ್ತಿರುವ ದೇಹ, ಚಿಕ್ಕ ಹುಡುಗಿ, ಮುಗ್ಧೆ... ಹೊರಗೆ ಹೋಗಿ ಅವರಿವರ ಕೈಗೆ ಸಿಕ್ಕಿ ಮೋಸ ಹೋದರೆ, ಹಾಗಾಗಬಾರದು, ಅವಳು ಸುಖವಾಗಿರಬೇಕು, ನಾನು ಪೋಷಿಸಿದ ಹುಡುಗಿ ಹಾಳಾಗಬಾರದು, ಅವಳು ಸುಖವಾಗಿರಬೇಕು.... ಅವಳನ್ನು ನಾನು... ಮದುವೆ ಆದರೆ,? ತಾನೇ ಬೆಚ್ಚಿದ್ದ. ಏನೇನನ್ನೋ ಆಲೋಚಿಸುತ್ತಾ ಇದ್ದಕ್ಕಿದ್ದಂತೆ ಅವನ ಮನಸ್ಸು ಒಂದು ಕೆಟ್ಟ ಆಲೋಚನೆಗೆ, ಬಂದು ನಿಂತಿತು. ತನಗೆ ಏನಾಗುತ್ತಿದೆ, ತಾನೇಕೆ ಹೀಗೆಲ್ಲಾ ಯೋಚಿಸುತ್ತಿದ್ದೇನೆ. ತನ್ನನ್ನು ತಾನು ಸಂಭಾವಿತ ಅಂತ ಭಾವಿಸಿದ್ದೆನಲ್ಲ ಎಂದು ತನಗೆ ತಾನೇ ಹೇಳಿಕೊಂಡ. ಹಾಗಾದರೆ ನನ್ನಲ್ಲಿ ಉದಿಸಿದ ಈ ಆಲೋಚನೆ ಪ್ರತೀಕಾರದ್ದೇ... ಅಥವಾ ಸುಪ್ತವಾಗಿ ಉಳಿದಿದ್ದ ಆಸೆಯೇ... ಸುಗುಣ ನನ್ನ ಪತ್ನಿಯಾಗಲಿಲ್ಲ, ಅವಳಂತೆಯೇ ಇರುವ ಅವಳ ಮಗಳು ನನ್ನ ಮಡದಿಯಾದರೇ... ಅಂತ ನನ್ನ ಮನಸ್ಸು ಹಂಬಲಿಸಿತೇ...?

"ಛೆ... ಇದೆಂತಹ ಹುಚ್ಚು ಆಲೋಚನೆ ನನ್ನದು...? ನನ್ನ ತಂಗಿಯಂತೆ ಆಧರಿಸಿದ್ದೇನೆ, ಮಗಳಂತೆ ಪೋಷಿಸಿದ್ದೇನೆ. ಥೂ... ಛೀ... ನನಗೆ ಇಂತ ಆಲೋಚನೆ ಬರಬಾರದಾಗಿತ್ತು. ನಾನು ಗೋಪಾಲನಂತೆಯೇ ಕೀಳು ಆಲೋಚನೆಗಳಿಗೆ ಆಸ್ಪದ ಏಕೆ ಕೊಟ್ಟೆ! ನನ್ನ ಮನಸ್ಸು ಕದಡಿ ಹೋಯಿತು. ನಾನು ಇನ್ನು ಇಲ್ಲಿ ಇರುವುದು ಸರಿಯಲ್ಲ. ಇದುವರೆಗೂ ನಾನು ಇಲ್ಲಿದ್ದುದು ಬರೀ ನಾಟಕವನ್ನಾಡಿದಂತೆ ಅಂತ ಎಲ್ಲರೂ ಆಡಿಕೊಳ್ಳುವ ಮೊದಲು ನಾನು ಇಲ್ಲಿಂದ ಹೊರಟು ಬಿಡಬೇಕು. ಇನ್ನು ನಾನು ಇಲ್ಲಿರಬಾರದು. ಒಮ್ಮೆ ಈ ದುರಾಲೋಚನೆಯ ಕೀಟ ನನ್ನ ಮನಸ್ಸನ್ನು ಹೊಕ್ಕಿದೆಯಂದರೆ... ನನ್ನಿಂದ ಏನಾದರೂ ಅಪಚಾರವಾಗುವ ಮೊದಲು ನಾನು ಇಲ್ಲಿಂದ ಹೊರಟು ಹೋಗುವುದೇ ಸರಿ. ನನ್ನ ಮೇಲೇ ನನಗೆ ಅಸಹ್ಯ, ಜಿಗುಪ್ಸೆ, ಒದಗಿಬರುವಂತಹ ಸ್ಥಿತಿ ಬರುವ ಮೊದಲು, ನಾವು ಇಲ್ಲಿಂದ ದೂರ ಹೋಗಲೇ ಬೇಕು. ಅದೇ ಸರಿಯಾದ ಮಾರ್ಗ....ಅದೇ ಸರಿ.."

"ಇದುವರೆಗೂ ಲಲಿತಳನ್ನು ಚಿಕ್ಕ ಹುಡುಗಿಯಂತೆಯೇ ಕಂಡೆ...ಇನ್ನೂ ಮುಂದೆ ನನ್ನಿಂದ ಅದು ಸಾಧ್ಯವಾಗದೇ ಹೋಗಬಹುದು. ನನ್ನ ಬಗ್ಗೆ ಅನುಮಾನ ಬಂದು, ನನ್ನನ್ನು ಹೋಗು ಎಂದು ಆಚೆ ತಳ್ಳುವ ದಿನ

ಬರಬಹುದು, ಹಾಗಾಗಬಾರದು. ನನ್ನ ದ್ವೇಷವನ್ನು ಮರೆತು, ಮಾಡಿದ ಕಾರ್ಯ ಸಫಲವಾಗಬೇಕು..."

ವೇದಮ್ಮ ಹೇಳಿದ್ದಂತೆ, ನಾನು ಎಲ್ಲವನ್ನು ಮರೆತು ಮರು ಮದುವೆಯಾಗಿದ್ದರೆ ಈ ದಿನ ನಾನು ಈ ಕೆಟ್ಟ ಆಲೋಚನೆಯನ್ನು ಕನಸಿನಲ್ಲಿ ಸಹ ಮಾಡುತ್ತಿರಲಿಲ್ಲ ಈ ವಯಸ್ಸಿನಲ್ಲಿ, ಇಷ್ಟು ವರ್ಷಗಳ ನಂತರ ನನಗೆ ಮದುವೆ ಆಸೆ.... ಅದೂ ಲಲಿತನೊಂದಿಗೆ... ಛಿ ಛಿ ಛೀ.... ತನ್ನನ್ನು ತಾನು ಹಳಿದುಕೊಂಡ. ಈಗ ನನ್ನನ್ನು ಎಲ್ಲರೂ ಬಾಯ್ತುಂಬಾ ಹೊಗಳುತ್ತಿದ್ದಾರೆ.... ಆದರೆ ಉಗುಳಿಸಿಕೊಳ್ಳುವಂತಹ ಅವಿವೇಕ ನನ್ನಲ್ಲಿ ಏಕೆ ಹುಟ್ಟಿತ್ತು...? ಲಲಿತ ಸುಗುಣಳಂತೆಯೇ ಇರುವುದರಿಂದಲೇ ಅಥವಾ ಗೋಪಾಲನ ಮಗಳೂ ಎನ್ನುವ ಕಾರಣವೇ ಕಾರಣ ಏನೇ ಇರಲಿ... ನನ್ನ ಆಲೋಚನೆ ಸರಿಯಿಲ್ಲ, ಸರಿಯಲ್ಲ ತಪ್ಪು ಎಂದುಕೊಂಡಾಗ, ತಕ್ಷಣವೇ ಮನೆ ಬಿಟ್ಟು ಓಡಿ ಹೊರಟು ಹೋಗಿ ಬಿಡಬೇಕು ಎಂದೆನಿಸಿತ್ತು. ಆದರೆ ಹಿಂದಿನಂತೆ ದುಡುಕಲಿಲ್ಲ. ಮನಸ್ಸನ್ನು ಬಿಗಿ ಹಿಡಿದು, ವೇದಮ್ಮನ ಬಳಿ ನಿಧಾನವಾಗಿ ಮಾತನಾಡಿದ.

"ನಾನು ಇಲ್ಲಿಗೆ ಬಂದ ಉದ್ದೇಶ ಪೂರೈಸಿದೆ. ನಾನು ಸಧ್ಯದಲ್ಲೇ ಆಶ್ರಮಕ್ಕೆ ವಾಪಸ್ಸಾಗುತ್ತೇನೆ. ಕಳಿಸಿಕೊಡಿ"

"ಏನಂದೆ! ಜವಾಬ್ದಾರಿ ಎಲ್ಲಿ ಮುಗಿದಿದೆ? ಈಗೇನಾಯ್ತು ನಿನಗೆ!"

"ಏನಿಲ್ಲ, ಲಲಿತ ಮದುವೆಯ ವಯಸ್ಸಿಗೆ ಬಂದಿದಾಳೆ; ಸತ್ಯ ಕಾಲೇಜು ಮೆಟ್ಟಿಲು ಹತ್ತಿದಾನೆ, ಬೆಳೆದು ದೊಡ್ಡವರಾಗಿದಾರೆ, ಅವರವರ ಜವಾಬ್ದಾರಿ ಏನು ಎನ್ನುವ ತಿಳುವಳಿಕೆ ಅವರುಗಳಿಗೆ ಬಂದಿದೆ"

"ನೀನು ಹಾಗೆ ತಿಳಿದುಕೊಂಡಿದೀಯ ಅಷ್ಟೆ. ಮದುವೆಯ ವಯಸ್ಸಿಗೆ ಬಂದರೆ; ಕಾಲೇಜಿಗೆ ಸೇರಿಕೊಂಡರೆ, ದೊಡ್ಡವರಾಗಿ ಬಿಟ್ಟರೇ? ಅವರ ಹುಡುಗುತನ ಇನ್ನೂ ಕಮ್ಮಿ ಆಗಿಲ್ಲ. ಅವರಿನ್ನು ಮೆಜಾರಿಟಿಗೆ ಬಂದಿಲ್ಲ, ಲಲಿತನ ಮದುವೆಯ ಕೆಲಸವೂ ನಿನ್ನ ಜವಾಬ್ದಾರಿ ಅಲ್ಲವೇ?"

"ಮಧುವೆ ಜವಾಬ್ದಾರಿ ನನಗೆ ಬೇಡ"

"ಯಾಕೆ ಬೇಡ...? ಅದನ್ನೆಲ್ಲ ಯಾರು ಮಾಡಬೇಕು! ಸತ್ಯನಂತೂ ಚಿಕ್ಕವನು... ನಾನು ಏನು ಮಾಡಬೇಕು ಅಂತೀಯಾ? ತಂದೆ ತಾಯಿ ಇಲ್ಲದ ಅನಾಥ ಮಕ್ಕಳನ್ನು ಪೋಷಿಸಿ ಬೆಳೆಸಿ, ಈಗ ನಡು ನೀರಿನಲ್ಲಿ ಬಿಟ್ಟು ಹೋಗಲು ನೋಡ್ತಾ ಇದೀಯಾ? ಯಾಕೆ ಏನಾಯ್ತು? ಯಾರಾದರೂ ಏನಾದರೂ ಅಂದರೆ?"

ಅನಂತ ಸುಮ್ಮನೇ ನಿಂತಿದ್ದ.

"ಯಾರಾದರೂ ಏನಾದರೂ ಅಂದಿದ್ದರೆ ನೀನು ಅದನ್ನು ಕಿವಿ

ಮೇಲೆ ಹಾಕಿಕೊಳ್ಳಬೇಡ. ಯಾರಿಗೂ ಈ ಮನೆಯ ವಿಚಾರಗಳು ಅರ್ಥವಾಗುವುದಿಲ್ಲ. ಯಾರೋ ಮಾಡಿದ ತಪ್ಪಿಗೆ ಈ ಮಕ್ಕಳು ಬಲಿಯಾಗುವುದು ಬೇಡ. ಲಲಿತ ನೋಡೋಕೆ ಸುಗುಣಳಂತೆಯೇ ಇದಾಳೆ. ಆದರೆ ಗುಣ ನಡತೆ ಅಂಥದ್ದಲ್ಲ ಗಂಭೀರ ಸ್ವಭಾವದ ಹುಡುಗಿ. ಆ ಹುಡುಗಿ ಸುಖವಾಗಿರಲಿ ಅಂತ ನಿನಗೆ ಆಸೆ ಇಲ್ಲವೇ? ಗಂಡು ದಿಕ್ಕಿಲ್ಲದ ಮನೆ, ನೀನೂ ಹೊರಟು ಹೋದರೆ ಆ ಹುಡುಗಿಯ ಗತಿ ಏನು?"

ಅನಂತ ನಿರುತ್ತರನಾದ. ವೇದಮ್ಮ ತನ್ನ ಬಗ್ಗೆ ಯಾವ ಅನುಮಾನಕ್ಕೂ ಆಸ್ಪದ ಕೊಡದೇ ಮಾತನಾಡಿದಾಗ ಅವನ ತಲೆ ತಗ್ಗಿತು. ತನ್ನ ಮೇಲೆ ತನಗೇ ನಂಬಿಕೆ ಇಲ್ಲ ಎಂದು ಹೇಗೆ ಹೇಳಿಕೊಂಡಾನು? ಆದರೆ ಏಕೋ ಏನೋ ತಾನೇ ಕೈಯಾರ ಲಲಿತಳ ಮದುವೆ ನೆರವೇರಿಸುವ ಆಲೋಚನೆ ಹಿತವೆನಿಸಲಿಲ್ಲ. ತಾನು ವೇದಮ್ಮನ ಮಾತಿಗೆ ಒಪ್ಪಿ ಗುರೂಜಿಯ ಮಾತಿಗೆ ಇಲ್ಲವೆನ್ನಲಾಗದೇ ಇಲ್ಲಿಗೆ ಬಂದಿರಬಾರದಾಗಿತ್ತು. ಇಲ್ಲಿ ಬಂದು ಇದ್ದು ಮಹಾಪುರುಷ ನೆಂದೆನಿಸುವ, ಕೊಳದ ನೀರಿನಂತೆ ನಿಷ್ಕಲ್ಮಶವಾದ ಹೃದಯದವನು ನಾನಾಗಲಿಲ್ಲ, ಎಲ್ಲರೆದುರು ತಲೆ ಎತ್ತಿ ಓಡಾಡಲಾಗದ ಕೀಳು ಮಟ್ಟದವನಾಗಿ ಹೋದೆ, ನನ್ನ ಮನಸ್ಸಿನಲ್ಲಿ ಎಂತಹ ಆಲೋಚನೆಗಳಿವೆ ಎಂದು ವೇದಮ್ಮನಿಗೆ ತಿಳಿದರೆ ಪರಿಣಾಮ ಏನಾಗಬಹುದು! ಆ ಚಿಕ್ಕ ಮಕ್ಕಳ ಹೃದಯದಲ್ಲಿ ನನ್ನ ಬಗ್ಗೆ ಯಾವ ಅಭಿಪ್ರಾಯ ಮೂಡಬಹುದು...?

"ಅನಂತ ನೀನೇನು ಆತಂಕ ಪಡಬೇಡ. ಇದು ನೀನೊಬ್ಬನೇ ಮಾಡಬೇಕಾದ ಕೆಲಸವೇನಲ್ಲ. ಎಲ್ಲರೂ ಸೇರಿ ನಿರ್ವಹಿಸಬೇಕಾದ ಶುಭ ಕಾರ್ಯ ಇದು. ನನ್ನ ಮನಸ್ಸಿನಲ್ಲಿ ಬಹಳ ದಿನಗಳಿಂದ ಒಂದು ಆಸೆ ಇದೆ"

ಅನಂತ ಅಚಲನಾದ, ವೇದಮ್ಮನ ಮನಸ್ಸಿನ ಆಸೆ ಏನಿರಬಹುದು, ಅವಳು ಮುಂದೇನಾಡಲಿದ್ದಾಳೋ ಎಂದು ತಳಮಳದಿಂದ ಚಡಪಡಿಸಿದ.

"ಪುರುಷೋತ್ತಮನ ಮಗ ಪ್ರಶಾಂತ ಲಲಿತಂಗೆ ತಕ್ಕವನು ಅಂತ ನನಗನ್ನಿಸುತ್ತೆ...."

ವೇದಮ್ಮನ ಮಾತು ಮುಗಿಯುವ ಮೊದಲೇ ಅನಂತ ಅಲ್ಲಿಂದ ಸರಿದು ಹೋಗಿದ್ದ. ಅವನಲ್ಲಿ ಉದ್ಭವಿಸಿದ ನಾನಾ ಭಾವನೆಗಳ ಅರ್ಥ ಅವನಿಗೆ ಸಿಗಲಿಲ್ಲ. ನಿರಾಶೆಯೋ, ನಿರಾಳವೋ, ಸಂತಸವೋ, ನೆಮ್ಮದಿಯೋ ಏನೆಂದು ತಿಳಿಯಲಿಲ್ಲ. ಸಧ್ಯ ವೇದಮ್ಮ ತನಗೇ ಮಾಡಿಕೋ ಎಂದು ಹೇಳಲಿಲ್ಲವಲ್ಲ ಅಂತಂದುಕೊಂಡರೂ, ನುಂಗಿದ ಉಗುಳು ಕಹಿಯಾಗಿತ್ತು.

"ಛೆ.... ತಾನೇಕೆ ಹಾಗೆ ಆಶಿಸಬೇಕು? ನನ್ನ ಮನಸ್ಸಿನಲ್ಲಿ ಇಂತಹ ಒಂದು ಭಾವನೆ ಬಂದಿರಬಹುದು ಅಂತ ಸಹ ಅವರಿಗೆ ಅನ್ನಿಸಿರಲಾರದು.

ಒಂದು ವೇಳೆ ಅವರು ಕೇಳಿದ್ದರೇ... ತಾನೇನು ಉತ್ತರ ಕೊಡುತ್ತಿದ್ದ? ಹೂಂ... ಎಂದಿದ್ದರೆ ಜನ ನಗುವಂತಾಗುತ್ತಿತ್ತು ಅಷ್ಟೆ.... ಸಧ್ಯ ಈ ಕ್ಷಣ ಇಲ್ಲಿಗೇ ಕಳೆಯಿತಲ್ಲ ನಿಡಿದಾದ ಉಸಿರನ್ನು ಬಿಟ್ಟು, ಕಣ್ಣುಗಳನ್ನು ಮುಚ್ಚಿಕೊಂಡ.

ನಿಜ, ವೇದಮ್ಮ ಹೇಳುವುದು ಸರಿ, ಪ್ರಶಾಂತ ಲಲಿತನಿಗೆ ಸರಿಯಾದ ವರ ಪುರುಷೋತ್ತಮನಿಗೆ ಈ ಮನೆಯ ಪೂರ್ವೋತ್ತರ ಚರಿತ್ರೆಯೆಲ್ಲಾ ತಿಳಿದಿದೆ. ನಾನು ಅವನು ಸ್ನೇಹಿತರು. ಲಲಿತ ಅವನು ಕಂಡ ಹುಡುಗಿ ಪುರುಷೋತ್ತಮ ಒಳ್ಳೆಯವನು, ಆ ಮನೆ ಸೇರಿದರೆ, ಲಲಿತ ಖಂಡಿತಾ ಸುಖವಾಗಿರುತ್ತಾಳೆ, ಆದರೆ ಅವಳ ಮನಸ್ಸಿನಲ್ಲಿ ಏನಿದೆಯೋ, ಅದನ್ನು ತಿಳಿಯಬೇಡವೆ! ಪ್ರಶಾಂತನಿಗೆ ಲಲಿತ ಒಪ್ಪಿಗೆ ಹೌದೋ ಅಲ್ಲವೋ ಅದು ಮುಖ್ಯ ಅಲ್ಲವೆ!

ಸುಮಾರು ಇಪ್ಪತ್ತಾರು ವರ್ಷದ ಯುವಕ ಪ್ರಶಾಂತ, ನೋಡಲು ಆಕರ್ಷಕನಾಗಿದ್ದ ಚುರುಕಾಗಿದ್ದ ತಂದೆಯ ಜತೆ ಆಗಾಗ್ಗೆ ಈ ಮನೆಗೆ ಬರುತ್ತಿದ್ದವನು. ಅನಂತನ ಬಗ್ಗೆ ಅವನಿಗೆ ಗೌರವ, ಲಲಿತ, ಸತ್ಯರೊಡನೆ ಸ್ನೇಹ ಸಲುಗೆ. ವಿದ್ಯಾಭ್ಯಾಸ ಮುಗಿಸಿ ಕೆಲಸಕ್ಕೆ ಸೇರಿದ ಮೇಲೆ ಅವನು ಬಂದಿರಲೇ ಇಲ್ಲ.

ಲಲಿತ, ಎತ್ತರವಾಗಿ ಬೆಳೆದು, ನೋಡುವವರ ಕಣ್ಣು ಸೆಳೆಯುವಂತಿದ್ದಳು. ಕಾಲೇಜಿನಲ್ಲಿ ಓದುತ್ತಿದ್ದರೂ ಗಂಭೀರವಾಗಿದ್ದುದರಿಂದ, ಯಾರ ಗೆಳೆತನವೂ ಇರಲಿಲ್ಲ, ಎಂದೂ ಯಾವ ಸ್ನೇಹಿತೆಯರು ಸಹ ಬಂದುದನ್ನು ಅನಂತ ಕಂಡಂತಿರಲಿಲ್ಲ ಅಥವಾ ಗಮನಿಸಿರಲಿಲ್ಲವೋ...?

ಸತ್ಯ ಕಾಲೇಜಿಗೆ ಸೇರಿದ ಹೊಸ ಹುಮ್ಮಸ್ಸಿನಿಂದ ಸ್ನೇಹಿತರೊಡನೆ ತಿರುಗಾಟ, ಆಟ ಪಾಠಗಳಲ್ಲಿ ಕಾಲ ಕಳೆಯುತ್ತಾನೆಂದು ವೇದಮ್ಮನೇ ಒಂದು ಸಲ ಹೇಳಿದ ನೆನಪು. ಲಲಿತ ವೇದಮ್ಮನ ಜತೆ ಜತೆಯಲ್ಲಿದ್ದು ಅಡಿಗೆ ಕೆಲಸಗಳನ್ನು ಕಲಿತಿದ್ದಳು. ಸತ್ಯ ಇದ್ದಕ್ಕಿದ್ದಂತೆ ಅಡುಗೆ ಮನೆಗೆ ದಾಳಿ ಇಟ್ಟು ತನಗೆ ಬೇಕಾದ ತಿಂಡಿ ತೀರ್ಥಗಳನ್ನು ತಾನೂ ತಿಂದು, ತನ್ನ ಸ್ನೇಹಿತರಿಗೂ ಕೊಂಡೊಯ್ಯುತ್ತಿದ್ದ. ಅಷ್ಟಾದರೂ ಲಲಿತನಿಗೆ ತಮ್ಮನ ಮೇಲೆ ಪ್ರೀತಿ ತಂದೆ ತಾಯಿ ಒಟ್ಟಿಗೇ ತೀರಿ ಹೋದಮೇಲೆ, ತಾಯಿಯ ದೂರದ ಸಂಬಂಧಿ ಅನಂತ ನಮ್ಮ ಪೋಷಕ, ನಮ್ಮನ್ನು ಅನಾಥರನ್ನಾಗಿ ಮಾಡದೇ, ವಿದ್ಯೆ ಬುದ್ಧಿ ಕಲಿಸಿ ಬೆಳೆಸಿದವನು ಅಂತ, ಅನಂತನ ಬಗ್ಗೆ ಅತಿ ಗೌರವ, ಆದರೆ ಸಲುಗೆ ಇಲ್ಲ ಎಷ್ಟು ಬೇಕೋ ಅಷ್ಟು ಮಾತು, ದೊಡ್ಡವಳಾದ ಮೇಲೆ, ಎದುರಿಗೆ ಬಂದು ನಿಲ್ಲುವುದೂ ಸಹ ಕಡಿಮೆಯಾಗಿತ್ತು. ಸತ್ಯ ಸಿಕ್ಕಿದರೆ, ಹರಟೆ, ನಗು ಭೈರಪ್ಪನೂ ಅವರೊಡನೆ ಸೇರಿಸುತ್ತಿದ್ದ. ಅನಂತನನ್ನು ಕಂಡೊಡನೆ ಎಲ್ಲರೂ ಸುಮ್ಮನಾಗುತ್ತಿದ್ದರು.

"ಏನು ವಿಷಯ? ನನಗೂ ಹೇಳಿ...." ಎಂದು ಅನಂತ ತಾನಾಗಿಯೇ ಕೇಳುತ್ತಿರಲಿಲ್ಲ. ಒಮ್ಮೊಮ್ಮೆ ಸತ್ಯನೇ, ತಾನಾಗಿಯೇ ಕೆಲವು ವಿಷಯಗಳನ್ನು ಹೇಳಿದರೆ, ಅನಂತ ಸುಮ್ಮನೇ ಕೇಳಿಸಿಕೊಳ್ಳುತ್ತಿದ್ದ. ಆದರೆ ಭೈರಪ್ಪ ಹಾಗಲ್ಲ, ಆದ್ದರಿಂದ ಹುಡುಗರಿಗೆ ಅವನೊಡನೆ ಸಲುಗೆ ಜಾಸ್ತಿ ಈ ವಿಷಯವನ್ನು ಅನಂತನೂ ಬಲ್ಲ.

ಮಗನಿಗೆ ಕೆಲಸ ಸಿಕ್ಕಿದ ಸಂದರ್ಭದಲ್ಲಿ ಪುರುಷೋತ್ತಮ ತನ್ನ ಸಹೋದ್ಯೋಗಿಗಳಿಗೆ ಔತಣ ಕೂಟವನ್ನು ಏರ್ಪಡಿಸಿದ್ದ. ಇವರುಗಳೆಲ್ಲರನ್ನೂ ಬರಲೇಬೇಕೆಂಬ ಒತ್ತಾಯದಿಂದ ಆಹ್ವಾನಿಸಿದ್ದ.

ಪುರುಷೋತ್ತಮ ತನ್ನ ಸಹೋದ್ಯೋಗಿಗಳೊಡನೆ ತಮಾಷೆಯಾಗಿ ಮಾತನಾಡುತ್ತಿದ್ದ. ಪ್ರಶಾಂತ ತನ್ನ ಸ್ನೇಹಿತರೊಂದಿಗೆ ನಗು ನಗುತ್ತಾ ಮಾತನಾಡುತ್ತಿದ್ದ. ಅವನು ತನ್ನ ಸ್ನೇಹಿತರಿಗೆ ಲಲಿತ, ಸತ್ಯರನ್ನು ಪರಿಚಯಿಸಿ ಕೊಟ್ಟಿದ್ದರೂ, ಲಲಿತ ವೇದಮ್ಮನ ಜತೆ ಒಂದು ಕಡೆ ಕುಳಿತಿದ್ದಳು. ಭೈರಪ್ಪ ಕೇಳಿದವರಿಗೆ ಸಹಾಯ ಮಾಡಲು ಅನುವಾಗಿದ್ದ. ಏಕಾಂಗಿಯಾಗಿ ಕುಳಿತ ಅನಂತ ಎಲ್ಲರನ್ನು ಗಮನಿಸುತ್ತಿದ್ದ. ಅವನ ಹೊಟ್ಟೆಯಲ್ಲಿ ಕಲಕಿದಂತಾಗಿತ್ತು.

ತಾನು ವಿರಾಗಿಯಂತೆ ಕುಳಿತಿರಬೇಕಾದ ಸ್ಥಿತಿ ತನ್ನ ಬಾಳಿನಲ್ಲಿ ಒದಗಿತಲ್ಲ, ಹೀಗೆ ಜನರೊಡನೆ ಕಲೆತು ಬೆರೆತು, ನಕ್ಕು ನಲಿವ ಅವಕಾಶವೇ ತನಗೆ ಒದಗಿ ಬರಲಿಲ್ಲ. ಗೋಪಾಲನ ಸ್ವಾರ್ಥದಿಂದಾಗಿ, ವಿಕಾಸಗೊಳ್ಳುವ ಮೊದಲೇ ಮುದುಡಿ ಹೋದೆ. ವಯಸ್ಸಿಗೆ ಮೀರಿದ ಪ್ರೌಢತೆಯನ್ನು ರೂಢಿಸಿ ಕೊಂಡು, ಬೇಡವಾದ ಬಂಧನಕ್ಕೆ ಸಿಲುಕಿ, ಮಹಾಪುರುಷನಂತೆ ಸೋಗು ಹಾಕಿ, ಕುಳೀತಿದ್ದೇನಲ್ಲ. ನನ್ನ ಅಂತರಂಗ, ನನ್ನ ಮನಸ್ಸಿನ ಕೋಲಾಹಲ ಯಾರಿಗೂ ತಿಳಿಯುವಂತಿಲ್ಲ. ಎಲ್ಲಾ ಗೋಪ್ಯ, ಎಲ್ಲಾ ನನಗೆ ನಾನೇ ಹಾಕಿ ಕೊಂಡ ನಿಬಂಧನೆಗಳು ಇದಕ್ಕಾಗಿ ಈಗ ವಿಷಾದವಾಗುತ್ತಿದೆಯಲ್ಲಾ ಅಯ್ಯೋ ವಿಧಿಯೇ.... ಒಬ್ಬ ಸಾಮಾನ್ಯ ಮನುಷ್ಯನಂತೆ ಬಾಳಲು ಆಶಿಸಿದ ನನಗೇಕೆ ಈ ಹಣೇ ಬರಹ? ದೇವಾ, ಹುಂ, ಹೋಗಲಿ ಮುಂದಿನ ಜನ್ಮದಲ್ಲಾದರೂ ನನಗೆ ಇಂತಹ ಬರಡು ಜೀವನವನ್ನು ಕೊಡಬೇಡ. ನಗು ನಗುತ್ತಾ ಹಾಯಾಗಿ ಹೆಂಡತಿ ಮಕ್ಕಳೊಂದಿಗೆ ಸುಖವಾಗಿರುವ ಸಂಸಾರಿಯ ಜೀವನವನ್ನು ಕರುಣಿಸು..."

ಪುರುಷೋತ್ತಮ ಎದುರಿಗೆ ಬಂದು ನಿಂತುದರಿಂದ ಅನಂತ ವಾಸ್ತವಕ್ಕೆ ಬಂದ. "ಬೇಜಾರಾಗ್ತಾ ಇದೆಯೇನಪ್ಪಾ ಅನಂತ ನಿನಗೆ?"

"ಏನಿಲ್ಲ... ಹೀಗೆ ಎಲ್ಲರನ್ನು ಗಮನಿಸ್ತಾ ಇದ್ದೆ"

"ನಾನು ನಿನ್ನೊಡನೆ ಸ್ವಲ್ಪ ಪ್ರೈವೇಟಾಗಿ ಮಾತನಾಡಬೇಕು ಸ್ವಲ್ಪ

ಒಳಗೆ ಬರ್ತೀಯಾ?"

ಅನಂತ ಸಂದೇಹದಿಂದ ಅವನನ್ನೇ ನೋಡಿದ.

"ಆತಂಕ ಪಡಬೇಡ... ಪರವಾಗಿಲ್ಲ ಬಾ...." ಅನಂತ, ಅವನನ್ನು ಹಿಂಬಾಲಿಸಿದ. ರೂಮಿನ ಬಾಗಿಲನ್ನು ಹಾಕಿ, ಅವನನ್ನು ಕೂರಲು ಹೇಳಿ ತಾನು ಕೂತ.

"ಲಲಿತನ್ನ ಈ ವರ್ಷದ ಕೋರ್ಸು ಮುಗಿದ ನಂತರ, ಅವಳ ಮದುವೆ ಮಾಡಬೇಕು ಅಂತ ವೇದಮ್ಮ ಹೇಳಿದರು. ನೀನು ಏನಂತೀಯಾ?"

"ಈ ವಿಷಯದಲ್ಲಿ ನನಗೇನೂ ತಿಳಿಯದು. ನೀವುಗಳು ಹೇಗೆ ಹೇಳಿದರೆ ಹಾಗೆ"

"ಹಾಗಂದರೆ ಹೇಗೆ! ನೀನು ಅವಳ ಪೋಷಕ. ನಿನ್ನ ಅಭಿಪ್ರಾಯವೂ ಮುಖ್ಯ"

"ಅವಳ ಒಪ್ಪಿಗೆ ಮುಖ್ಯ, ಅವಳನ್ನೇ ಕೇಳಿ"

"ಅವಳಿನ್ನೂ ಚಿಕ್ಕವಳು ಪಾಪ ಏನು ಹೇಳ್ತಾಳೆ, ನೀನು ಹೇಳು"

"ಮದುವೆಯಾಗುವುದು ಅವಳಿಗೆ ಅವಳನ್ನು ಕೇಳಬೇಡವೇ...?"

"ಕೇಳೋಣ... ಮೊದಲು ನಿನ್ನ ಅಭಿಪ್ರಾಯ ಹೇಳು."

"ನನಗೆ ಈ ವಿಷಯದಲ್ಲಿ ಯಾವ ಅನುಭವವೂ ಇಲ್ಲ, ಹೇಗೆ ಮಾತನಾಡಬೇಕು? ಯಾರನ್ನೂ ಕೇಳಬೇಕು ಅಂತ ಸಹ ತಿಳಿಯದು; ಅಲ್ಲದೇ ನಮ್ಮ ಮನೆಯ ಇತಿಹಾಸವೆಲ್ಲಾ ತಿಳಿದರೆ, ಅವಳನ್ನು ಯಾರು ಮದುವೆ ಯಾಗ್ತಾರೆ? ಸುಮ್ಮನೇ ಎಲ್ಲರ ಮನಸ್ಸು ಕೆಡುತ್ತೆ ಅಷ್ಟೇ"

"ಹಾಗಂತ, ಬೆಳೆದು ನಿಂತಿರುವ ಹುಡುಗಿಯನ್ನು ಎಷ್ಟು ದಿನ ಹಾಗೇ ಇರು ಅಂತ ಹೇಳುಕ್ಕಾಗುತ್ತೆ... ನಾನು ಮಾತನಾಡ್ತೀನಿ, ಅದಕ್ಕೇನಂತೆ?"

"ಸರಿ ಹಾಗಿದ್ದರೆ ನಿಮ್ಮಿಷ್ಟ, ನನಗೆ ಯಾವ ಸಂಬಂಧವೂ ಬೇಡ"

"ನೀನ್ಯಾಕೋ ಸ್ವಾರ್ಥಿಯಾಗ್ತಿದೀಯಾ ಅಂತ ಅನ್ನಿಸ್ತಿದೆ.... ನಾನೇ ಬಾಯಿ ಬಿಟ್ಟು ಕೇಳಬೇಕಾದ ಸ್ಥಿತಿ ಬಂದಿದೆ. ನಮ್ಮ ಪ್ರಶಾಂತನಿಗಿಂತ ಒಳ್ಳೆಯ ಗಂಡು ನಿಮ್ಮ ಲಲಿತಂಗೆಲ್ಲಿ ಸಿಗ್ತಾನೆ ನೀನೇ ಹೇಳು" ಪುರುಷೋತ್ತಮ ಜೋರಾಗಿ ನಕ್ಕರೂ ಅನಂತ ನಗಲಿಲ್ಲ.

"ನೀವೇ ಎಲ್ಲಾ ತೀರ್ಮಾನಿಸಿದೀರಿ? ಮತ್ತೆ ನನ್ನ ಅಭಿಪ್ರಾಯವನ್ನು ಕೇಳುವ ಅಗತ್ಯವೇನಿತ್ತು!" ಬಿಗುವಾಗಿ ಕೇಳಿದ.

"ಕೋಪಿಸ್ಕೋ ಬೇಡಯ್ಯಾ.... ಎಷ್ಟಾಗಲೀ ನಾನು ಗಂಡಿನ ತಂದೆ.... ನಾನೇ ಕೇಳುವ ಬದಲು, ನೀನು ಕೇಳಿದ್ದರೆ ಅಂತ ಅಷ್ಟೇ..." ತಮಾಷೆಯಾಗಿ ನುಡಿದ

"ನನಗೆ ಕೇಳಬೇಕು ಅಂತ ತೋಚಲೇ ಇಲ್ಲ" ತಲೆ ತಗ್ಗಿಸಿ ನುಡಿದ.

"ಹೋಗಲಿ ಬಿಡು. ನ್ನಗೆ ಏನೋ ಅಳುಕು. ಲಲಿತನ್ನ ಚಿಕ್ಕವಯಸ್ಸಿನಿಂದ ಕಂಡವನು, ಮೊದಲಿನಿಂದ ನನಗೆ ಆ ಆಸೆ ಇತ್ತು"

"ನಿಮ್ಮ ಆಸೆಯೇನೋ ಸರಿ. ಆದರೆ ಪ್ರಶಾಂತನನ್ನೂ ಒಂದ್ಮಾತು ಕೇಳಬೇಡವೇ"

"ಕೇಳದೇ ಉಂಟೆ? ಅವನು ನನ್ನ ಮಾತಿಗೆ ಇಲ್ಲ ಅನ್ನಲ್ಲ, ನಿನ್ನ ಮನಸ್ಸಿನಲ್ಲಿ ಏನಿದೆ ಈಗ್ಲಾದ್ರೂ ಹೇಳು..." ಈಗಲೇ ಮದುವೆ... ಮದುವೆ ಎಂದೇಕೆ ಆತುರ ಪಡುತ್ತೀರಿ ಎಂದು ಕೇಳುವ ಮನಸ್ಸಾದರೂ ಆಡಲಾಗಲಿಲ್ಲ.

"ನನ್ನ ಕೆಲಸವನ್ನು ಹಗುರ ಮಾಡಿದೀರಿ...." ಎಂದು ನಿರಾಳತೆಯನ್ನು ನಟಿಸಿದ, "ಹಾಗಾದರೆ ಇವತ್ತೇ ಅವರಿಬ್ಬರ ಒಪ್ಪಿಗೆಯನ್ನು ಕೇಳಿ ಬಿಡೋಣ. ಏನಂತೀಯಾ?" ಪುರುಷೋತ್ತಮನ ಅವಾಂತರ ಅವನಿಗೆ ಅಸಹನೀಯವೆನಿಸಿತು.

ಕಾರಣವಿಲ್ಲದೇ ಅನಂತ ಚಡಪಡಿಸಿದ. ಲಲಿತ ಮದುವೆಯಾಗಿ ಗಂಡನ ಮನೆಗೆ ಹೊರಟು ಹೋಗ್ತಾಳೆ. ಮನೆ ಬಿಕೋ ಬಿಕೋ ಅಂತ ಅನ್ನುತ್ತೆ.... ಲಲಿತಳ ಬಗ್ಗೆ ನನ್ನ ಆಲೋಚನೆ ಬೇರೆ ದಿಕ್ಕಿನಲ್ಲಿ ಹರಿಯುತ್ತಿದ್ದಂತೆ ನಾನು ಅವಳನ್ನು ಪ್ರೀತಿಸತೊಡಗಿದೆನೆ?...ಇಲ್ಲ ಇಲ್ಲ...ಇದು ಇಲ್ಲದಿದ್ದರೆ; ಪ್ರತೀಕಾರ.... ನನ್ನಲ್ಲಿ ಸುಪ್ತವಾಗಿ ಅಡಗಿರುವ ಪ್ರತೀಕಾರ. ಇಲ್ಲದಿದ್ದರೆ, ಲಲಿತೆ ಸುಖವಾಗಿರಲಿ ಅಂತ ನಾನು ಬಯಸುತ್ತಿರಲಿಲ್ಲವೆ?.... ಮುಗ್ಧ ಹುಡುಗಿಯ ಬಾಳಿನಲ್ಲಿ ನಾನು ಮುಳ್ಳಾಗಿರುವಂತಹ ಆಲೋಚನೆಯೇಕೆ! ...ನಾನು ಆದಷ್ಟು ಬೇಗ ಆಶ್ರಮಕ್ಕೆ ವಾಪಸ್ಸು ಹೊರಟು ಹೋಗಬೇಕು. ಇಲ್ಲದಿದ್ದರೆ ನನಗೆ ನೆಮ್ಮದಿಯೇ ಇಲ್ಲವಾಗುತ್ತದೆ. ಅಸ್ತವ್ಯಸ್ತಗೊಂಡ ನನ್ನ ಮನಸ್ಸು ಇನ್ನು ಯಾವ ಯಾವ ದಿಕ್ಕಿನಲ್ಲಿ ಹರಿಯುತ್ತದೋ...?

"ಅನಂತ ಯಾಕೆ ಒಂಥರಾ ಇದೀಯಲ್ಲ? ಏನಾಯ್ತು..." ಕಳವಳ ಗೊಂಡಿದ್ದ ಅನಂತನ ಮುಖವನ್ನು ಕಂಡ ಪುರುಷೋತ್ತಮ ಪ್ರಶ್ನಿಸಿದ.

"ಏನಿಲ್ಲ ಸರಿಯಾಗಿದೀನಿ" ಎಂದು ನಕ್ಕಂತೆ ಮಾಡಿದ. ಪುರುಷೋತ್ತಮ ಹೊರಗೆ ಹೋಗಿ ಕೆಲವೇ ನಿಮಿಷಗಳಲ್ಲಿ ಲಲಿತ, ಪ್ರಶಾಂತರನ್ನು ಕರೆತಂದ ಜತೆಯಲ್ಲಿ ವೇದಮ್ಮನೂ ಇದ್ದಳು.

"ಏನಮ್ಮಾ ಲಲಿತ ನಮ್ಮ ಪ್ರಶಾಂತನ್ನ ಮದುವೆಯಾಗ್ತೀಯಾ?" ನೇರವಾಗಿ ಅವಳನ್ನೇ ಕೇಳಿದ. ಅವಳ ಉತ್ತರ ಏನೆಂದು ಮತ್ತೊಮ್ಮೆ ಹೇಳ ಬೇಕಾಗಿರಲಿಲ್ಲ, ಅನಂತನಿಗೆ ಅರ್ಥವಾಗಿತ್ತು. ಅವನ ಎದೆ ಭಾರವಾಯಿತು. ಅವನು ಸೋತಂತೆ... ಇನ್ನು ಎಲ್ಲಾ ಇತ್ಯರ್ಥವಾದಂತೆ ನಾನು ಮತ್ತೊಮ್ಮೆ

ಸೋತೆ ಎಂದುಕೊಂಡು ಲಲಿತ, ಪ್ರಶಾಂತರ ಕಡೆ ನೋಡದೇ ಅಲ್ಲಿಂದ ಹೊರಟಿದ್ದ.

ಪುರುಷೋತ್ತಮನಿಗೆ ಅವನ ವರ್ತನೆ ವಿಚಿತ್ರವಾಗಿ ತೋರಿತು. ಈ ಸಂಸಾರದ ಪರಿಚಯಕ್ಕೆ ಇವನೇ ಕಾರಣ. ನನ್ನ ಸ್ನೇಹಿತನಂತೆ, ವಿಶ್ವಾಸಿಯಾಗಿದ್ದಾನೆ, ಆದರೆ ಈ ದಿನ, ಈ ಮದುವೆಗೆ ಅವನ ಮನಸ್ಸು ಒಡಂಬಡದಿರುವುದಕ್ಕೆ ಕಾರಣ ಏನು! ಬಹುಶ ತನ್ನ ಮದುವೆಯ ಸಮಯ ನೆನಪಾಗಿರಬೇಕು: ಎಲ್ಲಾ ನೇರವ್ವಾಗಿದ್ರೆ, ಲಲಿತ ಈ ದಿನ ಅವನ ಸ್ವಂತ ಮಗಳಾಗಿರುತ್ತಿದ್ದಳು. ಸ್ವಂತ ಮಗಳಿಗೂ ಸಾಕು ಮಗಳಿಗೂ ಅಂತರವಿದ್ದೇ ವಿರುತ್ತದೆ ಅಲ್ಲವೇ... ಆದರೂ ಇವನೆಂದೂ ಹಾಗೆ ಪ್ರಕಟಗೊಂಡವನಲ್ಲ. ಲಲಿತಳನ್ನು ಪೋಷಿಸಿದ್ದು ನಿಜ. ಆದರೆ ಮನದಲ್ಲಿ ಏನೇನು ಭಾವನೆಗಳೋ.... ಒಂದು ದಿನವಾದರೂ ಬಾಯಿ ಬಿಟ್ಟು ಏನನ್ನೂ ಹೇಳಿಲ್ಲ. ಪ್ರಶಾಂತನನ್ನು ಕಂಡರೆ ಅಕ್ಕರೆಯೇ, ಆದರೆ ಈದಿನ ಒಂದು ಮಾತನ್ನು ಆಡದೇ ಹೊರಟು ಹೋದನಲ್ಲ. ಹೋಗಲಿ ನನಗೇನಾಗಬೇಕಾಗಿದೆ? ಈ ಬ್ರಹ್ಮಚಾರಿಯ ಸಾಕುಮಗಳು ನಮ್ಮ ಮನೆಗೆ ಸೊಸೆಯಗಿ ಬಂದರೆ ಸಾಕು. ಹೆಂಗಸಿನ ಹೆಜ್ಜೆಯ ಸದ್ದು ಇಲ್ಲದೇ ಈ ಮನೆ ಭಣ ಭಣ ಎನ್ನುತ್ತಿದೆ. ಕಳೆಯೇ ಇಲ್ಲದಂತಾಗಿದೆ, ಆದಷ್ಟು ಬೇಗ ಈ ಶುಭ ದಿನ ಬಂದು ನನ್ನ ಮನೆ ತುಂಬಲಿ ಎಂದು ಮನದಲ್ಲೇ ಪ್ರಾರ್ಥಿಸಿದ.

ಮೊದಲಿನಿಂದ ಮಾತನಾಡಿಕೊಂಡಿದ್ದರೇನೋ ಅಂತನ್ನುವಂತೆ, ಪ್ರಶಾಂತ ಲಲಿತರ ಒಪ್ಪಿಗೆ ಕೇಳಿ ತಿಳಿದುಕೊಂಡ ಮೇಲೆ, ಮದುವೆಯ ಕಾರ್ಯ ಮುಗಿಸಲು ನಿಧಾನಿಸಬೇಕೇನಿರಲಿಲ್ಲ. ಲಲಿತಳ ವಾರ್ಷಿಕ ಪರೀಕ್ಷೆ ಮುಗಿಯುತ್ತಿದ್ದಂತೆಯೇ ಮದುವೆಯ ಸಿದ್ಧತೆಗಳನ್ನು ಪ್ರಾರಂಭಿಸಿದರು. ಅನಂತ ತಾನಾಗಿಯೇ ಮುಂದಾಗಿ ಯಾವುದಕ್ಕೂ ಕೈ ಹಾಕಲಿಲ್ಲವಾದ್ದರಿಂದ, ಪುರುಷೋತ್ತಮನೇ ಎಲ್ಲಾ ಸಿದ್ಧತೆಗಳಿಗೆ ಮುಂದಾದ.

ಪ್ರಶಾಂತ ಬಂದು ಲಲಿತಳನ್ನು ಹೊರಗೆ ತಿರುಗಾಡಲೆಂದು ಕರೆದೊಯ್ದಾಗ ಅನಂತ ಮುಖ ಸಿಂಡರಿಸಿದ. ಅದು ಅವನಿಗೆ ಸರಿ ಎನಿಸಲಿಲ್ಲ.

"ವೇದಮ್ಮಾ ಅವಳೇಕೆ ಹೋಗಬೇಕು? ಬೇಡ ಅಂತ ಹೇಳಿ."

"ಹೋಗಲಿ ಬಿಡು, ಚಿಕ್ಕವಯಸ್ಸಿನಲ್ಲಿ ಇಂತಹ ಆಸೆ ಸಹಜ"

"ದೊಡ್ಡವರಾಗಿ ನೀವೇ ಇದನ್ನ ಪ್ರೋತ್ಸಾಹಿಸಬಾರದು"

"ಬೇಡ ಅಂತಂದರೆ ಮುಖ ಚಿಕ್ಕದಾಗುತ್ತೆ ಮದುವೆಯಾಗುವವನ ಜತೇಲಿ ತಾನೇ ಹೋಗ್ತಿರುವುದು? ನನಗಿಂತ ಚಿಕ್ಕವನು, ನೀನು ಇದನ್ನೆಲ್ಲ ಏಕೆ ವಿರೋಧಿಸ್ತೀಯಾ? ಬ್ರಹ್ಮಚಾರಿಯಂತೆ ಇದ್ದೂ ಇದ್ದೂ ನಿನಗೆ ಇವೆಲ್ಲ

ಸರಿ ಅಂತ ಅನ್ನಿಸುಲ್ಲ ಅಲ್ವಾ? ವೇದಮ್ಮ ನಕ್ಕಳು. ಅನಂತ ನಗಲಿಲ್ಲ. ಅವನ ಮೈಯೆಲ್ಲಾ ಉರಿದ ಅನುಭವ, ಮುಖದ ಚಹರೆಯೇ ಬದಲಾಗಿತ್ತು, ನನ್ನನ್ನು ಬ್ರಹ್ಮಚಾರಿ ಮಾಡಿದ್ದು ಯಾರು?.... ಇವಳ ಅಮ್ಮ ತಾನೇ...? ಎಂದು ಜೋರಾಗಿ ಕಿರುಚಿ ಹೇಳಬೇಕೆಂದೆನಿಸತ್ತು. ಹೇಗೋ ತಡೆದುಕೊಂಡ. ಕ್ಷುಬ್ಧಗೊಂಡ ಮನಸ್ಸು ನಾನಾ ದಿಕ್ಕಿನಲ್ಲಿ ಯೋಚಿಸತೊಡಗಿತು. ಲಲಿತಳ ಮದುವೆ ನಡೆಯ ಕೂಡದು. ನಾನು ಬ್ರಹ್ಮಚಾರಿಯಾಗಿ ನೊಂದೆನಲ್ಲವೆ? ಹಾಗೇ ಅವಳೂ ಏಕಾಂಗಿಯಾಗಿರಬೇಕು. ಅಂತ ಒಂದು ಸಲ ಅನ್ನಿಸಿದರೆ.... ಇನ್ನೊಂದು ಸಲ...ಅವಳನ್ನು ಒಂದು ಸಲ ಕೆಡಿಸಿ ಬಿಟ್ಟರೇ... ಅವಳ ಮದುವೆ ನಡೆಯು ವುದಿಲ್ಲ, ನನ್ನವಳೇ ಆಗಿರುತ್ತಾಳೆ ಅಂತ ಎಂದುಕೊಂಡು ಗಹಗಹಿಸಿ ನಕ್ಕಾಗ, ಅವನ ನಗು ಅವನಿಗೇ ಅಸಹ್ಯವಾಗಿ ಕೇಳಿಸಿತ್ತು.

ಛಿ! ತಾನೆಂತಹ ಕೀಳು ಮನುಷ್ಯ! ಮತ್ತೆ ಮತ್ತೆ ನನ್ನಲ್ಲಿ ಈ ದುರಾಲೋಚನೆ ಏಕೆ ಹುಟ್ಟುತ್ತಿದೆಯೋ? ಇದಕ್ಕೆ ಗೋಪಾಲ, ಸುಗುಣರ ದ್ರೋಹವೇ ಮಾತ್ರ ಕಾರಣವಲ್ಲ. ನನ್ನಲ್ಲಿ ಹರಿಯುತ್ತಿರುವ ಕೊಳಕು ರಕ್ತವೂ ಅದಕ್ಕೆ ಕಾರಣವಾಗಿರಬಹುದು. ಯಾವ ದುರಾಚಾರಕ್ಕೋ, ಅತ್ಯಾಚಾರಕ್ಕೋ ಬಲಿಯಾಗಿ ನನ್ನ ತಾಯಿ ನನ್ನನ್ನು ಹೆತ್ತಿರಬಹುದು ಅಥವಾ ಕಾಮದಾಸೆಯಿಂದ ಸ್ವೇಚ್ಛೆಯಗಿ ಓಡಾಡಿ ನನ್ನ ಜನ್ಮಕ್ಕೆ ಕಾರಣವಾಗಿರಬಹುದು.... ಅಂತಹ ಜನ್ಮದಾತರಿಗೆ ಹುಟ್ಟಿದ್ದರಿಂದಲೇ ನಾನು ಅನಾಥನಾದೆ. ಗೋಪಾಲ ತಂದೆ ಯಂತೆ ಪ್ರೀತಿ ತೋರದಿದ್ದರೂ, ಲಲಿತಮ್ಮ ನನ್ನನ್ನ ಸ್ವಂತ ತಾಯಿಯಂತೆಯೇ ನೋಡಿಕೊಂಡಳಲ್ಲ. ಆ ತಾಯಿಯ ಪ್ರೀತಿಯ ಮಡಿಲಲ್ಲಿ ಬೆಳೆದ ನನಗೆ ಸ್ವಲ್ಪವಾದರೂ ಸಂಸ್ಕೃತಿ ಬಂದಿರಲೇಬೇಕು. ಆದರೆ ಆಕೆ ನನ್ನ ತಾಯಿಯಲ್ಲ ಎಂದು ತಿಳಿದು ಎಲ್ಲರನ್ನು ಬಿಟ್ಟು ಓಡಿ ಹೋಗುವ ಹೇಡಿಯಾದೆ. ಆಶ್ರಮದಲ್ಲಿದ್ದು ನನ್ನನ್ನು ನಾನು ಸುಧಾರಿಸಿಕೊಂಡಿದ್ದೆ ಎಂದುಕೊಂಡಿದ್ದೆ. ಆದರೆ ಈಗ! ಹೀಗೇಕೆ ತೊಳಲಾಟ? ಓಡಿ ಹೋಗದೇ ಈ ಮನೆಯಲ್ಲೇ ಉಳಿದಿದ್ದರೆ, ನನ್ನ ತಾಯಿ ಉಳಿದಿರುತ್ತಿದ್ದಳೋ ಏನೋ...ಅವಳನ್ನು ಕರೆದುಕೊಂಡು ಎಲ್ಲಿಯಾದರೂ ನನ್ನ ಪಾಡಿಗೆ ನಾನು ಇದ್ದಿದ್ದರೆ ಈದಿನ ನಾನು ಹೀಗೆ ನೀಚನಂತೆ ಯೋಚಿಸಲು ಸಾಧ್ಯವಿರುತ್ತಿರಲಿಲ್ಲ. ಆಶ್ರಮದಲ್ಲಿನ ಸತ್ಸಂಗದಲ್ಲಿ ನಾನು ಹಿಂದಿನದೆಲ್ಲವನ್ನು ಮರೆಯಲು ಪ್ರಯತ್ನಿಸಿ ನನ್ನ ಕೈಲಾದ ಸಮಾಜ ಸೇವೆಮಾಡಿ, ಹಾಗೇ ಒಂದು ದಿನ ಈ ದೇಹವನ್ನು ತ್ಯಜಿಸುವ ಆಸೆಯನ್ನಿಟ್ಟುಕೊಂಡಿದ್ದೆ. ಆದರೆ ಅದಕ್ಕೂ ವಿಧಿ ಅಡ್ಡಗೆತೆ ಹಾಕಿತು. ಮತ್ತೆ ನನ್ನನ್ನು ಇಲ್ಲಿಗೆ ತಂದು ಸೇರಿಸಿತು. ನನ್ನದೇ ಸ್ವಂತ ಅಂಗಡಿಯ ಕೆಲವಾರು ಪುಸ್ತಕಗಳನ್ನು ಓದಿ, ನಾನು ಬುದ್ಧಿವಂತ, ಸಂಭಾವಿತ ಅಂತ ನನಗೆ ನಾನೇ

ಹೇಳಿಕೊಂಡಿದ್ದೆ. ಅಲ್ಲ ನಾನು ಸಂಭಾವಿತನಲ್ಲ; ಯಾವುದೋ ಆಕ್ರೋಶದ ಒಂದು ಕಿಡಿ ನನ್ನ ಹೊಟ್ಟೆಯೊಳಗೆ ಹಾಗೇ ಉಳಿದಿತ್ತೇನೋ, ಅದು ಹೊಗೆಯಾಡುತ್ತಿದೆ. ಹತ್ತಿ ಉರಿಯಲಾರಂಭಿಸಿ, ನನ್ನಿಂದ ಮಾಡಬಾರದ ಕೆಲಸವನ್ನು ಮಾಡಿಸುವ ಮೊದಲು ಇಲ್ಲಿಂದ ಹೋಗುವುದು ನನಗೂ ಒಳಿತು. ಆ ಹುಡುಗಿಗೂ ಶ್ರೇಯಸ್ಕರ. ನನ್ನ ತಾಯಿಯ ಹೆಸರನ್ನು ಇಟ್ಟುಕೊಂಡು, ನನ್ನ ಮಗಳಂತೆ ಇರುವ ಹುಡುಗಿಯ ಬಾಳನ್ನು ಹಾಳು ಮಾಡಲು ನನ್ನ ಈ ಹುಚ್ಚು ಮನಸ್ಸು ಯೋಚಿಸುತ್ತಲ್ಲ? ನಾನು ವಿದ್ಯಾವಂತನೆಂದು ಹೇಳಿಕೊಳ್ಳಲೇ ಹೀನಾಯವೆನಿಸುತ್ತದೆ. ಆಶ್ರಮದಲ್ಲಿ ನನ್ನನ್ನು ನಾನೇ ಸಂಭಾಳಿಸಿಕೊಂಡು ಸಂಭಾವಿತನೆಂದೆನಿಕೊಂಡೆನಲ್ಲ, ಈಗ ನನಗೆ ನಾನೇ ಧಿಕ್ಕಾರ ಹಾಕಿಕೊಳ್ಳುವ ಹಂತಕ್ಕೆ ಬಂದೆನಲ್ಲ. ಯಾವುದೋ ಒಂದು ಸುಸಂಸ್ಕೃತಿಯ ಎಳೆ ನನ್ನನ್ನು ಇನ್ನೂ ಕಟ್ಟಿ ಹಾಕಿದೆ. ಇಲ್ಲದಿದ್ದರೆ, ಎಂದೋ ಹೇಗೋ ಆ ಎಳೆ ಕತ್ತರಿಸಿ, ನನ್ನಿಂದ ಆಗಬಾರದ ಕೆಲಸ ಆಗಿ ಹೋಗುತ್ತದೆ.... ಹಾಗಾಗಬಾರದು.... ಹಾಗಾಗಬಾರದು

ಅನಂತ ಸರಸರನೆ ತನ್ನ ಬಟ್ಟೆಗಳನ್ನು ಪುಸ್ತಕಗಳನ್ನು ಜೋಡಿಸಿ, ಕಿಟ್‌ಬ್ಯಾಗ್‌ಗೆ ತುಂಬಿಡಲಾರಂಭಿಸಿದ. ಅವನ ಹಿಂದೆ ಬಂದು ನಿಂತಿದ್ದ ಭೈರಪ್ಪನನ್ನು ಅವನು ಗಮನಿಸಲಿಲ್ಲ.

"ಎಲ್ಲೋ ಹೊರಟ ಹಾಗೆ ಇದೆಯಲ್ಲಾ ಅನಂತಪ್ಪಾ?" ಅನಂತ ತಿರುಗಿದ.

"ಹೂಂ. ಭೈರಪ್ಪ ಆಶ್ರಮಕ್ಕೆ ಹೋಗ್ತಾ ಇದೀನಿ"

"ಯಾಕೆ? ಯಾವಾಗ ಬರ್ತೀರಿ?" ಎಂದು ಭೈರಪ್ಪ ಕೇಳಲಿಲ್ಲ. "ನನಗೂ ಅಲ್ಲಿಯವರನ್ನೆಲ್ಲಾ ನೋಡಬೇಕು ಅಂತನ್ನಿಸ್ತಿದೆ" ಅಂತ ಅವನೂ ಹೊರಡುವ ಸಿದ್ಧತೆ ನಡೆಸಿದಾಗ ಅನಂತ ಬೇಡ ಎನ್ನಲಿಲ್ಲ.

ಅವರಿಬ್ಬರೂ ಹೊರಟು ನಿಂತಾಗ ವೇದಮ್ಮನಿಗೆ ಆಶ್ಚರ್ಯ, ಕೋಪ, "ಇದೇನಿದು? ಮನೇಲಿ ಖಂಡುಗ ಕೆಲಸ ಬಿದ್ದಿರುವಾಗ ಹೊರಟಿದೀರಲ್ಲ, ಶುಭಕಾರ್ಯ ಮುಗಿದ ಮೇಲೆ ಹೋದರಾಗೊಲ್ವೇ?"

"ಸ್ವಲ್ಪ ಕೆಲಸವಿದೆ. ನಾನು ಹೋಗಲೇಬೇಕು, ನನ್ನನ್ನು ತಡೆಯಬೇಡಿ" ಎಂದಿದ್ದ ಕಟುವಾಗಿ.

ಯಾಕೋ ಅವನ ಮನಸ್ಸು ಸರಿಯಾಗಿಲ್ಲ ಎನ್ನುವುದನ್ನು ಭೈರಪ್ಪ ಗಮನಿಸಿದ್ದವನು, ಗುಟ್ಟಾಗಿ ವೇದಮ್ಮನೊಡನೆ ನುಡಿದ.

"ಲಲಿತ ಮದುವೆಯಾಗಿ ಗಂಡನ ಮನೆಗೆ ಹೋಗ್ತಾಳೆ, ಸತ್ಯ ಗಂಡು ಹುಡುಗ ಕಾಲೇಜಿಗೆ ಬಂದಿದಾನೆ, ಇಲ್ಲಿಗೆ ನಾನು ಬಂದ ಉದ್ದೇಶ ಮುಗಿಯಿತು.

ನಾನು ಆಶ್ರಮಕ್ಕೆ ಹೋಗ್ತೀನಿ ಅಂತ ಹೇಳ್ತಾ ಇದ್ರು. ನಾನು ಬೇಡ ಅಂದ್ರೆ ನಿಲ್ತಾರೇನಮ್ಮಾ?"

"ಅಂದ್ರೆ ನೀವುಗಳು ಮತ್ತೆ ವಾಪಸ್ಸು ಬರುವುದಿಲ್ಲವೆ?"

"ನಾನು ಬರ್ತೀನಿ, ಖಂಡಿತಾ ಬರ್ತೀನಿ. ಅದಕ್ಕೇ ನಾನು ಅವರ ಜತೇಲಿ ಹೊರಟಿರುವುದು. ಅರ್ಧ ದಾರೀಲಿ ಬಸ್ಸು ಇಳಿದು ವಾಪಸ್ಸು ಬಂದರೆ ಭಯ ಪಟ್ಕೋಬೇಡಿ ಹೊರಡೋರನ್ನ ಬೇಡ ಅಂತ ತಡೀಬೇಡಿ. ಸ್ವಾಮೀಜಿ ತಿಳುವಳಿಕೆ ಹೇಳಿ ಕಳಿಸ್ತಾರೆ. ಅವರನ್ನು ನಾನು ಮತ್ತೆ ವಾಪಸ್ಸು ಕರೆದುಕೊಂಡು ಬರುವ ಜವಾಬ್ದಾರಿ ನನಗಿರಲಿ. ಅಧೈರ್ಯ ಪಡಬೇಡಿ"

"ನನಗೆ ನಿಮ್ಮ ಮಾತು ಅರ್ಥವಾಗುವುದಿಲ್ಲ. ಎಷ್ಟೋ ವರ್ಷದಿಂದ ಹೇಗೂ ಇಲ್ಲೇ ಇದೀರಿ, ಇಲ್ಲೇ ಇರಬಹುದಲ್ಲ, ಆಶ್ರಮಕ್ಕೆ ವಾಪಸ್ಸು ಹೋಗಿ ಸಾಧಿಸುವುದಾದರೂ ಏನು?"

"ಅವರು ಮತ್ತೆ ವಾಪಸ್ಸು ಹೋಗುವ ಉದ್ದೇಶವನ್ನಿಟ್ಟುಕೊಂಡೇ ಇಲ್ಲಿಗೆ ಬಂದಿದ್ದು. ಅಲ್ಲಿಂದ ಬರುವಾಗಲೂ ಅವರ ಮನಸ್ಥಿತಿ ಸರಿಯಾಗಿರಲಿಲ್ಲ. ಈ ಮಧ್ಯೆ ಮಕ್ಕಳ ಭವಿಷ್ಯವನ್ನು ರೂಪಿಸುವುದಕ್ಕಾಗಿ ಇಲ್ಲಿದ್ದರು ಅಷ್ಟೇ. ಬೇರೆ ಯಾರೇ ಇತರೇ ಸಾಮಾನ್ಯ ಮನುಷ್ಯನಾಗಿದ್ದಿದ್ದರೆ, ಮಕ್ಕಳ ಭವಿಷ್ಯವನ್ನು ಸುಲಭವಾಗಿ ಹಾಳು ಮಾಡುತ್ತಿದ್ದರು.

ವೇದಮ್ಮ ಪೆಚ್ಚಾದಳು. ಹೌದು ಅದು ನಿಜ. ಅನಂತ ತನಗಾದ ಅನ್ಯಾಯವನ್ನು ಮರೆತು ಮಕ್ಕಳನ್ನು ಬೆಳೆಸಿ ದೊಡ್ಡವರನ್ನಾಗಿ ಮಾಡಿದ. ಯಾವ ತಂದೆಯೂ ಇಷ್ಟು ಮಾಡುತ್ತಿದ್ದನೋ ಇಲ್ಲವೋ, ಅವಳ ಕಣ್ಣಲ್ಲಿ ನೀರುಕ್ಕಿತ್ತು. ನಾಲಿಗೆ ತೊದಲಿತು.

"ಹಾಗಾದ್ರೆ.... ಇಲ್ಲಿಯ ಜೀವನ ಸಾಕು ಎನ್ನಿಸಿತೇ ಅವನಿಗೆ?"

"ಹಾಗಲ್ಲ ತಾಯಿ, ಈಗ ಸ್ವಲ್ಪ ದಿನದಿಂದ ಅವರು, ಕಳವಳ, ಆತಂಕ ಅಶಾಂತಿಯಿಂದ ರಾತ್ರಿ ಹೊತ್ತು ಸರಿಯಾಗಿ ನಿದ್ರಿಸುತ್ತಿರಲಿಲ್ಲ. ಮಧ್ಯರಾತ್ರಿ ಎದ್ದು ಕುಳಿತು ಧ್ಯಾನ ಮಾಡುತ್ತಿದ್ದುದನ್ನು ಕಂಡಿದೀನಿ. ಆದ್ದರಿಂದ ಆಶ್ರಮಕ್ಕೆ ಹೋಗುವ ತವಕ ಹೆಚ್ಚಾಗಿರಬಹುದು. ಸ್ವಾಮೀಜಿ ಹತ್ತಿರ ಮಾತನಾಡಿದರೆ ಅವನಿಗೆ ನೆಮ್ಮದಿ ಸಿಗಬಹುದು"

"ಅಂಥಾದ್ದೇನಾಯ್ತು ಈಗ? ಅವನ ಹಣೇಬರಹಕ್ಕೆ ನಾನೇನು ಮಾಡಲಿ? ನನ್ನಿಂದ ತಡೆಯುಕ್ಕೆ ಆಗುತ್ಯೆ?" ಅವಳ ಗಂಟಲುಬ್ಬಿ ಬಂತು.

ಅವನು ಇದ್ದಕ್ಕಿದ್ದಂತೆ ಹೊರಟು ನಿಂತಿದ್ದನ್ನು ಕಂಡು ಲಲಿತ, ಸತ್ಯ ಪೆಚ್ಚಾಗಿದ್ದರು. ಆದರೂ ಅನಂತನ ಗಂಭೀರವಾದ ಮುಖವನ್ನು ನೋಡಿ ಏನನ್ನೂ ಪ್ರಶ್ನಿಸುವ ಧೈರ್ಯವಾಗಿರಲಿಲ್ಲ. ಆದರೂ, "ಪ್ಲೀಸ್, ಬೇಗ ಬಂದು

ಬಿಡಿ ಅಂಕಲ್..." ಎಂದು ಕೇಳಿಕೊಂಡಿದ್ದರು. ಅನಂತ ಬಲವಂತದಿಂದ ಎಂಬಂತೆ 'ಆಗಲಿ' ಎಂದಿದ್ದ ತಲೆ ಆಡಿಸಿ, ಸುಳಿಗೆ ಸಿಕ್ಕ ತರಗೆಲೆಯಂತೆ ಅವನ ಮನಸ್ಸು ಸ್ಥಿರತೆಯನ್ನು ಕಳೆದುಕೊಂಡಿತ್ತು.

ಆಶ್ರಮ ತಲುಪುತ್ತಿದ್ದಂತೆಯೇ ಭೈರಪ್ಪನ ಆರೋಗ್ಯ ಕೆಟ್ಟಿತ್ತು. ಸುಸ್ತು ಎದೆನೋವು, ಭಾರ ಎಂದು ಬೆವರುತ್ತಾ ಕುಸಿದು ಬಿಟ್ಟ. ಬೇಗನೇ ಡಾಕ್ಟರಿಗೆ ತಿಳಿಸಿದ್ದಾಯಿತು. ಅವರು ಬಂದು ಒಂದು ಇಂಜೆಕ್ಷನ್ ಕೊಟ್ಟು ಮೇಲೇಳ ಬಾರದು, ಎಂದು ಹೇಳಿ ಮಲಗಿ ಆರಾಮ ತೆಗೆದುಕೊಳ್ಳುವಂತೆ ತಿಳಿಸಿದರು.

ಅನಂತ ಮಂಕಾದ. ಇಷ್ಟು ವರ್ಷ ಪರ ಊರಿನಲ್ಲಿ ತನ್ನ ಜತೆ ಯಲ್ಲಿದ್ದು, ಒಂದು ದಿನವೂ ಅನಾರೋಗ್ಯವೆಂದು ಮಲಗದವರು, ಇದ್ದಕ್ಕಿದ್ದಂತೆ ಊರಿಗೆ ಬಂದ ಕೂಡಲೇ ಮಲಗಿದುದನ್ನು ಕಂಡು ಅಧೈರ್ಯಗೊಂಡ. ಸ್ವಾಮೀಜಿ ಬಂದು ಅರೋಗ್ಯವನ್ನು ವಿಚಾರಿಸಿ, ಅನಂತನಿಗೆ ಅಲ್ಲಿಯೇ ಜತೆಯಲ್ಲಿರುವಂತೆ ತಿಳಿಸಿ ಹೋಗಿದ್ದರು.

ಸ್ವಲ್ಪ ಚೇತರಿಸಿಕೊಂಡ ಭೈರಪ್ಪ ಅಸ್ಪಷ್ಟವಾಗಿ ಮಾತನಾಡತೊಡಗಿದ. ಅನಂತ ಬಾಗಿ ಕಿವಿಗೊಟ್ಟ.

"ಲಲಿತಮ್ಮನ ಮದುವೆಗೆ ನಾನು ಬಂದೇ ಬರ್ತೀನಿ ಅಂತ ಹೇಳಿದೀನಿ. ನಾನು ಹೋಗಲೇಬೇಕು, ಅನಂತಪ್ಪಾ ನನ್ನನ್ನು ಕರೆದುಕೊಂಡು ಹೋಗಪ್ಪಾ."

ಅನಂತನಿಗೆ ಬಳಲಿದ ಭೈರಪ್ಪನ ಮುಖ ಕಂಡು ಗಾಬರಿಯಗಿತ್ತು. "ಆಗಲಿ" ಎಂದು ಕೈ ಹಿಡಿದು ಮೃದುವಾಗಿ ನುಡಿದ.

"ಆಗಲಿ ಎಂದಿದೀರ... ಒಂದು ವೇಳೆ ನನಗೇ ಬರಲಾಗದಿದ್ದರೇ?"

"ಹಾಗೇನೂ ಆಗೋಲ್ಲ, ನೀವು ಈಗ ಮಾತನಾಡದೇ ಮಲಗಿ"

"ಹಾಗಲ್ಲ... ಒಂದು ವೇಳೆ ಆಗದಿದ್ದರೇ... ನೀವಾದರೂ ಖಂಡಿತಾ ಹೋಗಲೇಬೇಕು. ನನಗೋಸ್ಕರವಾದರೂ ಹೋಗಲೇಬೇಕು... ಹುಂ"

"ಹಾಗೇ ಮಾಡೋಣವಂತೆ.... ಈಗ ಮಲಗಿ, ಸುಸ್ತು ಮಾಡ್ಕೋಬೇಡಿ"

"ಇಲ್ಲ.... ನೀನು ಮಾತುಕೊಡಬೇಕು"

"ಯಾಕೆ ನನ್ನ ಮೇಲೆ ನಂಬಿಕೆ ಇಲ್ಲವೇ....? ನಿಧಾನವಾಗಿ ಆಮೇಲೆ ಮಾತನಾಡೋಣ ಡಾಕ್ಟರು ಏನಂದುಕೊಳ್ತಾರೆ?"

"ಅವರು ಏನಾದರೂ ಅಂದುಕೊಳ್ಳಲಿ, ನನಗೀಗ ಮಾತನಾಡುವ ಶಕ್ತಿ ಇದ್ದಾಗ ಆಡಿ ಬಿಡ್ತೀನಿ. ಬೇಡ ಅಂತನ್ನಬೇಡಪ್ಪಾ..." ಅನಂತನ ಕೈ ಹಿಡಿದು ನಿಧಾನವಾಗಿ ಮಾತನಾಡಿದ.

"ಈಚೆಗೆ, ನಿನಗೆ ಅಲ್ಲಿ ಸರಿ ಹೋಗ್ತಿರಲಿಲ್ಲ ಅಂತ ನನಗೆ ತಿಳಿದಿತ್ತು ನಿನಗೆ ಆಶ್ರಮಕ್ಕೆ ಬರುವ ಮನಸ್ಸಾಗಿತ್ತು ಅಲ್ವಾ! ನೀನು ಹೋಗದೇ ಇಲ್ಲಿಯೇ

ಎಲ್ಲಿ ಉಳಿದು ಬಿಡ್ತೀಯೋ ಎನ್ನುವ ಭಯ ನನಗೆ.... ಹಾಗೆ ಮಾತ್ರ ಮಾಡಬೇಡ ಅನಂತಪ್ಪಾ..."

"ನಿಮಗೇಕೆ ಈ ಸಂದೇಹ... ಬಂತು?"

"ನಾನು ವಯಸ್ನಲ್ಲಿ ನಿನಗಿಂತ ಹಿರಿಯ..."

"ನೀವು ನನ್ನ ಆಪ್ತರು ಭೈರಪ್ಪನವರೇ...ನಿಮ್ಮ ಮಾತನ್ನು ಮೀರುವ ದಿಟ್ಟತನ ನನಗಿಲ್ಲ. ಒಂದ್ಮಾತು ಹೇಳ್ತೀನಿ, ಒಂದು ವೇಳೆ ನನಗೆ ವಾಪಸ್ಸು ಹೋಗಲಾಗದಿದ್ದರೂ, ನಿಮ್ಮನ್ನ ಮಾತ್ರ ಖಂಡಿತಾ ಕಳಿಸಿಕೊಡ್ತೀನಿ"

"ಅದು ಸರಿ, ಒಂಭತ್ತು ಹತ್ತು ವರ್ಷಗಳಿಂದ ಆಶ್ರಮದಿಂದ ದೂರವೇ ಇದ್ದರೂ, ನಿನಗೆ ಆಶ್ರಮದ ನಂಟು ಏಕೆ ಬಿಡಲಿಲ್ಲ?"

"ನೀವೂ ಆಶ್ರಮವನ್ನು ಮರೆತಿಲ್ಲ ಅಲ್ಲವೇ...? ಹಾಗೇ..."

"ನನ್ನ ವಿಷಯ ಬಿಡು.... ನಿನಗೆ ಈ ಆಸೆ ಏಕೆ ಮತ್ತೆ ಬಂತು?"

"ಅಲ್ಲಿ ನನಗಿನ್ನೇನು ಕೆಲಸ ಉಳಿದಿತ್ತು, ನೀವೇ ಹೇಳಿ. ನನ್ನ ಕರ್ತವ್ಯ, ನನ್ನ ಜವಾಬ್ದಾರಿಗಳು ಮುಗಿದವಲ್ಲ"

"ಏನು ಮುಗೀತು? ಆ ಹುಡುಗಿ ಮದುವೆ ನಡೆದು ಗಂಡನ ಮನೆ ಸೇರಬೇಡವೇ? ಸತ್ಯ ಓದು ಮುಗಿಸಿ ಕೆಲಸಕ್ಕೆ ಸೇರಿ ಒಂದು ನೆಲೆಗೆ ಬರಬೇಡವೇ! ನಿಮ್ಮ ಕೆಲಸ ಅಪೂರ್ಣ ಅಂತ ಅನ್ನಿಸ್ತಾ ಇಲ್ವಾ? ನಿಮ್ಮ ಅಂತರ್ಯದಲ್ಲಿ ಏನಿದೆ? ಏನು ಸಂಘರ್ಷಣೆ? ನನಗೆ ಹೇಳಿದರೆ ನನಗೆ ತಿಳಿದ ಉಪಾಯ ಹೇಳಿಯೇನು..."

"ಏನೂ ಇಲ್ಲ..." ಮಾತನ್ನು ಮೊಟಕುಗೊಳಿಸಿದ.

"ಇಷ್ಟು ದಿನವೇ ಇದ್ದವನಿಗೆ, ಇನ್ನು ನಾಲ್ಕಾರು ದಿನವಿದ್ದು ಆ ಹುಡುಗಿಯ ತಲೆ ಮೇಲೆ ನಾಲ್ಕು ಕಾಳು ಅಕ್ಷತೆ ಹಾಕಿ ಆಶೀರ್ವಾದ ಮಾಡಿದ್ದರೆ ಏನಾಗ್ತಿತ್ತು!?"

"ಈ ಮದುವೆ, ಸಡಗರ, ಸಮಾರಂಭ ಅಂತಂದ್ರೆ ನನಗೊಂದು ತರಹ ಮುಜುಗರ. ಕಂಡವರ ಪ್ರಶ್ನೆಯ ಚಿಹ್ನೆಯಾಗಿ ಭಾಗಿಯಾಗಲು ನನಗೆ ಅಸಾಧ್ಯ. ನನ್ನಿಂದ ಸಾಧ್ಯವಿಲ್ಲ" ಅನಂತ ಉದ್ವೇಗದಿಂದ ನುಡಿದಾಗ ಭೈರಪ್ಪ ಬೆದರಿದ. ತಕ್ಷಣಕ್ಕೆ ಏನು ಹೇಳಬೇಕೆಂದು ತೋಚಲಿಲ್ಲ. ಎಷ್ಟೋ ಹೊತ್ತಿನ ತನಕ ಸುಮ್ಮನಿದ್ದು ನಂತರ ಹೇಳಿದ್ದ.

"ಹಾಗಾದರೆ ನಾನೂ ಹೋಗುವುದಿಲ್ಲ"

"ಹಾಗೆ ಮಾಡಬೇಡಿ ಭೈರಪ್ಪನವರೇ, ಅವರಿಬ್ಬರಿಗೂ ನಿಮ್ಮನ್ನು ಕಂಡರೆ ಬಹಳ ಅಕ್ಕರೆ, ನೀವು ಹೋಗದಿದ್ದರೆ ನೊಂದುಕೊಳ್ಳುವುದಿಲ್ಲವೇ?"

"ಚೆನ್ನಾಗಿದೆ ನಿಮ್ಮ ಮಾತು, ನಿಮ್ಮ ಮನೆಗೆ, ನಿಮ್ಮ ಜತೆಗೆ ಬಂದವನು

ನಾನು. ಆದರೆ ಈಗ ನಿಮಗೆ ಬೇಡವಾದದ್ದನ್ನು ನನ್ನ ತಲೆಗೆ ಏಕೆ ಕಟ್ತಾ ಇದೀರಿ? ನನಗೆ ಬಲವಂತ ಮಾಡಬೇಡಿ" ತಲೆ ಕೊಡವಿದ.

"ನಿಮ್ಮಿಷ್ಟ" ಎಂದು ಬಿಟ್ಟ ಅನಂತ ಭೈರಪ್ಪ ನಿರಾಸೆಗೊಂಡ.

ಮಾತು ಎಲ್ಲಿಂದೆಲ್ಲಿಗೋ ಹೋಗಿತ್ತು. ಆದರೂ ಅನಂತನ ಮನಸ್ಸಿನಲ್ಲೇನಿದೆ ಅಂತ ತಿಳಿಯಲಾಗಿರಲಿಲ್ಲ. ಆಗಲೇ ಅಲ್ಲಿಂದ ಅನಂತ ಹೊರಡದೇ ಇರುವಂತೆ ಏನಾದರೂ ಉಪಾಯ ಹುಡುಕ ಬೇಕಾಗಿತ್ತು. ಈಗ, ಅನಂತನಿಗೆ ಸಮಾಧಾನ ಸಿಗುವುದಿರಲಿ, ನನ್ನ ಅಶಾಂತಿಯೂ ಹೆಚ್ಚುವಂತಾಯಿತಲ್ಲ, ಭೈರಪ್ಪ ವ್ಯಥೆಗೊಂಡ.

ದೊಡ್ಡ ಸಂಸಾರದಲ್ಲಿ ಹುಟ್ಟಿ ಬೆಳೆದವನಾದರೂ, ಅವನಿಗೆ ಮಕ್ಕಳಾಗಿರಲಿಲ್ಲ. ಅದೇ ಕೊರಗಿನಲ್ಲಿ ಹೆಂಡತಿಯೂ ಸತ್ತು ಹೋಗಿದ್ದಳು. ಇನ್ನೊಂದು ಮದುವೆಯಾಗುವಂತೆ ಮನೆಯವರೆಲ್ಲಾ ಬಲವಂತ ಮಾಡಿದರೂ, ಅದಕ್ಕೆ ಒಪ್ಪಿರಲಿಲ್ಲ, ಮಕ್ಕಳಾಗೋದಾಗಿದ್ದರೆ ನನ್ನ ಸರಸ್ವತಿಗೇ ಆಗಬೇಕಾಗಿತ್ತು. ಈಗ ಅವರೇ ಇಲ್ಲದ ಮೇಲೆ ನನಗೆ ಮಕ್ಕಳ ಮೇಲೂ ಆಸೆ ಇಲ್ಲ ಎಂದು ಹೇಳಿ ಎಲ್ಲರನ್ನು ಸುಮ್ಮನಾಗಿಸಿದ್ದ.

ಅಣ್ಣ ತಮ್ಮಂದಿರ ಮಕ್ಕಳು ಬೆಳೆದು ದೊಡ್ಡವರಾದ ನಂತರ, ಅವರಾಗಿಯೇ, ಇವನ ಆಸ್ತಿಯನ್ನು ಪಾಲು ಮಾಡಿಕೊಡಲು ಕೇಳಿದಾಗ ಅತಿಯಾಗಿ ನೊಂದಿದ್ದ. ಅದೆಲ್ಲ ಸರಸ್ವತಿಯ ಸ್ವತ್ತು. ಅವನನ್ನು ಕೀಳಾಗಿ ಕಾಣಲು ಪ್ರಾರಂಭಿಸಿದ್ದರು. ಆಗ ಅವನು ಅತಿಯಾಗಿ ನೊಂದಿದ್ದ. ನಾನು ನನ್ನದು, ಮನೆ ಮಠ, ಮಕ್ಕಳು, ಈ ಬಾಂಧವ್ಯ ಎಲ್ಲಾ ಸುಳ್ಳು ಎನಿಸಿ, ತನ್ನ ತೋಟದಲ್ಲಿ ಏಕಾಂಗಿಯಾಗಿ ವಾಸಿಸಲು ಪ್ರಾರಂಭಿಸಿದ್ದ. ಆಗ ಅಲ್ಲಿ ಇಲ್ಲಿ ಪರದೇಶಿಯಂತೆ ಅಲೆಯುತ್ತಿದ್ದವನಿಗೆ ಸ್ವಾಮೀಜಿಯ ಪರಿಚಯವಾಗಿತ್ತು. ತನ್ನ ದುಗುಡವನ್ನು ಹೇಳಿಕೊಂಡಿದ್ದ. ಅವರು "ಜೈ ಜಗನ್ನಾಥಾ" ಎಂದು ನುಡಿದು ಹರಸಿ, ಸಂತೈಸಿದ್ದರು.

"ಜಗನ್ನಾಥನನ್ನು ನಂಬು, ನಿನಗೆ ಖಂಡಿತಾ ನೆಮ್ಮದಿ ಸಿಗುತ್ತದೆ" ಎಂದು ಅವರು ಹರಸಿ ನುಡಿದ ಮಾತು ನಿಜವಾಗಿತ್ತು. ಅವರ ಜತೆಯೇ ಬಂದು ಈ ಆಶ್ರಮಕ್ಕೆ ಸೇರಿಕೊಂಡಿದ್ದ. ಆಗ ಆಶ್ರಮ ಒಂದು ಚಿಕ್ಕ ಕುಟೀರದಂತೆ ಇತ್ತು. ಭೈರಪ್ಪ ಸರಸ್ವತಿಯ ಹೆಸರಿನಲ್ಲಿದ್ದ ಜಮೀನನ್ನು ಆಶ್ರಮಕ್ಕೆ ದಾನವಾಗಿ ಕೊಟ್ಟು ಆಶ್ರಮ ವೃದ್ಧಿಯಾಗುವಂತೆ ಅನುಕೂಲಗಳನ್ನು ಒದಗಿಸಿಕೊಟ್ಟಿದ್ದ. ಸ್ವಾಮೀಜಿಯು ಇವನ ಸಹಕಾರದಿಂದ, ಆಶ್ರಮವನ್ನು ವಿಸ್ತರಿಸಿ, ಸುತ್ತ ಮುತ್ತಲ ಹಳ್ಳಿಯ ಅಸಹಾಯಕ, ಅನಾಥ ಮಕ್ಕಳಿಗೆ, ಬಡಬಗ್ಗರಿಗೆ, ಕೆಲವಾರು ಅನುಕೂಲಗಳನ್ನು ಒದಗಿಸಿಕೊಟ್ಟರು. ಭೈರಪ್ಪನ ಸಲಹೆಯಂತೆ, ಅವನಂಥ

ಅಸಹಾಯಕ ವೃದ್ಧರಿಗೆ ಆಶ್ರಯವಾಗುವಂತೆ 'ವೃದ್ಧಾಶ್ರಮ' ವನ್ನು ಪ್ರಾರಂಭಿಸಿದರು. ಇಷ್ಟೆಲ್ಲ ಪ್ರಗತಿ ಭೈರಪ್ಪನ ಸಹಾಯ ಸಹಕಾರದಿಂದ ನಡೆದರೂ, ತಾನು ಮಾತ್ರ ಎಲೆ ಮರೆಯ ಕಾಯಿಯಂತೆ, ಹಿಂದೆ ಉಳಿದಿದ್ದ ಅವನಿಗೆ ಯಾವ ಹೊಗಳಿಕೆ, ಹೆಗ್ಗಳಿಕೆ ಬೇಕಿರಲಿಲ್ಲ. ತನ್ನ ಹೆಸರನ್ನು ಬಹಿರಂಗ ಪಡಿಸದಂತೆ ಸ್ವಾಮೀಜಿಯವರನ್ನು ಬೇಡಿಕೊಂಡಿದ್ದ. ಇಷ್ಟಾದರೂ ಭೈರಪ್ಪ ಹಾಗೂ ಸ್ವಾಮೀಜಿ ಕೆಲವಾರು ವಿಷಯಗಳಲ್ಲಿ ದೂರ ದೂರವೇ. ಅನಕ್ಷರಸ್ಥ ರೈತ ಭೈರಪ್ಪನ ನಡೆವಳಿಕೆಗಳೂ, ವಿದ್ಯಾವಂತ ಸ್ವಾಮೀಜಿಯವರ ಸ್ವಭಾವ, ವಿಚಾರಗಳಲ್ಲಿ ಸಾಮ್ಯತೆ ಇರಲು ಸಾಧ್ಯವೇ ಇರಲಿಲ್ಲ. ಹಾಗಾಗಿ ಇಬ್ಬರೂ, ಕೇವಲ ಸ್ನೇಹಿತರಂತೆ ಇದ್ದರು. ಭೈರಪ್ಪನಿಗೆ, ಆಶ್ರಮದ ನಿಯಮ, ವಿಧಿಗಳ ಕಟ್ಟುಪಾಡು ಇರಲಿಲ್ಲವಾದ್ದರಿಂದ, ತನ್ನ ಪಾಡಿಗೆ ತಾನು ಹಾಯಾಗಿ ಓಡಾಡಿಕೊಂಡಿದ್ದ, ಆದರೂ ಭೈರಪ್ಪ ಎಲ್ಲರಿಗೂ ಬೇಕು. ಅಲ್ಲದೇ ಸ್ವಾಮೀಜಿ ಸಹ, ಯಾರೇ ಬರಲಿ, ಮೊದಲು ಅವರು ಭೈರಪ್ಪನನ್ನು ಕಂಡು ಮಾತನಾಡುವಂತೆ ಹೇಳಿ, ಪರಿಚಯ ಮಾಡಿಸಿಕೊಡುತ್ತಿದ್ದರು.

ಆಶ್ರಮದ ಉದ್ದ, ಅಗಲ ವಿಸ್ತಾರವಾದಂತೆ ಆಸ್ಪತ್ರೆ, ವಾಚನಾಲಯ, ಶಾಲೆ, ಮನೋರಂಜನಾ ಕಾರ್ಯಕ್ರಮಗಳನ್ನು ನೆರವೇರಿಸಲು ವೇದಿಕೆ, ಹೀಗೆ ಕಟ್ಟಡಗಳು ಬೆಳೆದವು. ಆಶ್ರಮದಲ್ಲಿರುವವರನ್ನೆಲ್ಲಾ ವಿಶ್ವಾಸದಿಂದ ಮಾತನಾಡಿಸಿ ಅವರ ಸ್ನೇಹವನ್ನು ಗಳಿಸಿದ್ದ. ವೃದ್ಧಾಶ್ರಮದಲ್ಲಿ ಕೆಲವು ವಯಸ್ಸಾದ ವೃದ್ಧರು ಅಸಹನೆ ವ್ಯಕ್ತಪಡಿಸಿದರೂ ಅವನು ಬೇಸರಗೊಳ್ಳುತ್ತಿರಲಿಲ್ಲ.

ಅನಂತನನ್ನು ಸ್ವಾಮೀಜಿ ಪರಿಚಯ ಮಾಡಿಸಿಕೊಟ್ಟು ಅವನ ಯೋಗಕ್ಷೇಮವನ್ನು ನೋಡಿಕೊಳ್ಳುವಂತೆ ತಿಳಿಸಿದಾಗ, ಅನಂತನನ್ನು ನೋಡಿದಾಗ ಕನಿಕರವುಂಟಾಗಿತ್ತು. ತನಗೊಬ್ಬ ಮಗನಿದ್ದಿದ್ದರೇ ಸುಮಾರು ಇವನ ವಯಸ್ಸಿನವನೇ ಆಗಿರುತ್ತಿದ್ದನೋ ಏನೋ ಅಂತನ್ನಿಸಿತ್ತು. ಹಾಗಾಗಿ ಅನಂತನ ಬಗ್ಗೆ ವಿಶೇಷ ಅಕ್ಕರೆ, ವಿಶ್ವಾಸ ಅವನಿಗೆ, ಭೈರಪ್ಪನ ಅಂತರಂಗವನ್ನು ಅರಿತಿದ್ದ ಸ್ವಾಮೀಜಿ ಅನಂತನೊಡನೆ ಭೈರಪ್ಪನಿಗೂ ಹೋಗಲು ತಿಳಿಸಿದ್ದರು. ಅವರ ಆದೇಶದಂತೆ ಆಗಾಗ್ಗೆ ಆಶ್ರಮಕ್ಕೂ ಇಬ್ಬರೂ ಬಂದು ಹೋಗುತ್ತಿದ್ದರು.

ಅನಂತ ಮಾಡುತ್ತಿರುವುದು ಸತ್ಕಾರ್ಯ ಎಂದೇ ಭೈರಪ್ಪನ ಭಾವನೆ. ತನ್ನದಲ್ಲದ, ಮಕ್ಕಳ ಜವಾಬ್ದಾರಿಯನ್ನು ಹೊತ್ತು ಪೋಷಿಸಿದ ಅನಂತನ ಬಗ್ಗೆ ಹೆಮ್ಮೆ. ಅನಂತ ಅಲ್ಲಿ ಗಂಭೀರವಾಗಿ ವರ್ತಿಸಿದರೂ, ಭೈರಪ್ಪ ಮನೆಯವರೊಡನೆ, ಅದರಲ್ಲೂ ಲಲಿತಳೊಡನೆ ಆತ್ಮೀಯತೆಯನ್ನು ಹೆಚ್ಚಾಗಿ ಬೆಳೆಸಿಕೊಂಡಿದ್ದ. ಲಲಿತ ಮುದ್ದಾಗಿ 'ತಾತಾ' ಎಂದು ಕರೆದಾಗ ತನ್ನ ದೃಢವಾದ, ಸ್ವಚ್ಛವಾದ ದಂತಪಂಕ್ತಿಯನ್ನು ತೋರಿ ನಕ್ಕಿದ್ದ. ಲಲಿತನ ನೆನಪು ಬಂದೊಡನೆ,

ತಾನು ಇಲ್ಲಿ ಬಂದು ಅನಾರೋಗ್ಯದಿಂದ ಮಲಗಿದ್ದುದು ಅವನಿಗೇ ಜಿಗುಪ್ಸೆಯನ್ನುಂಟು ಮಾಡಿತು. ಮದುವೆಯ ದಿನಗಳು ಹತ್ತಿರದಲ್ಲಿರುವುದು ತಿಳಿದಿದ್ದೂ ಅನಂತ ಇಲ್ಲಿಗೆ ಬರಲು ಇಚ್ಛಿಸಿದ್ದು ಭೈರಪ್ಪನಿಗೆ ಸರಿ ಎನಿಸಿರಲಿಲ್ಲ. ಆದರೆ ಬೇಡ ಎನ್ನಲಾರದೇ ಅವನೊಡನೆ ಬಂದಿದ್ದ. ಆದರೆ ಈಗ ತನಗೇ ವಾಪಸ್ಸು ಹೋಗಲಾರದ ಸ್ಥಿತಿ. ಉದ್ವಿಗ್ನತೆಯಿಂದ ಅವನ ಉಸಿರು ಕಟ್ಟಿದಂತಾಯಿತು. ಮಾತನಾಡಿ ಸುಸ್ತಾಗಿದ್ದರಿಂದ ಬಳಲಿಕೆ ಉಂಟಾಗಿತ್ತು. ಎದುರಿಗೆ ಅನಂತ ಕೂತಿದ್ದರೂ, ಅವನೊಡನೆ ಮಾತನಾಡಲು ಆಗದಂತೆ, ಗಂಟಲು ಹಿಡಿದು ಕೊಂಡಂತಾಗಿತ್ತು. ಕಣ್ಣುಗಳು ಭಾರದಿಂದ ಮುಚ್ಚಿಕೊಂಡವು.

ಭೈರಪ್ಪನ ಮಾತಿನೊಂದಿಗೇ ಅನಂತನೂ ಯಾವ ಯಾವುದೋ ಯೋಚನೆಗಳಲ್ಲಿ ಮುಳುಗಿ ಹೋಗಿದ್ದ. ಅವರು ಮಲಗಿದುದನ್ನು ಕಂಡು ನಿದ್ದೆ ಬಂದಿರಬಹುದು ಎಂದೂಹಿಸಿ, ತಾನು ಮಲಗಿದ. ಬೆಳಗಿನ ಝಾವದ ತಂಗಾಳಿ ಹಿತವಾಗಿ ಬೀಸಿದಾಗ ಅನಂತನಿಗೆ ಎಚ್ಚರವಾಯಿತು. ತಾನು ಗಾಢವಾಗಿ ನಿದ್ರಿಸಿ ಮಲಗಿ ಬಿಟ್ಟೆ. ಭೈರಪ್ಪನನ್ನು ವಿಚಾರಿಸಲೇ ಇಲ್ಲ ಎಂದುಕೊಂಡು ಅವರ ಕಡೆ ತಿರುಗಿದ್ದ.

ಅಸ್ತವ್ಯಸ್ತವಾಗಿ ಮಲಗಿದ್ದ ಭೈರಪ್ಪನನ್ನು ಕಂಡು ಅವನ ಎದೆ ಗುಂಡಿಗೆ ನಿಂತಂತಾಯಿತು. ಮುಟ್ಟಿ ನೋಡಿದ. ಭೈರಪ್ಪನ ಶರೀರ ಕಟ್ಟಿಗೆಯಂತೆ ಆಗಿತ್ತು. ದೇಹದ ಶಾಖ ಆರಿ ಹೋಗಿ ತಣ್ಣಗಾಗಿತ್ತು. ಏನಾಗಿದೆ ಎಂದು ಊಹಿಸಲು ಆಗದಂತೆ ಅವನ ದೇಹ ಚೇತನವನ್ನು ಕಳೆದುಕೊಂಡ ಅನುಭವ. ಎಷ್ಟು ಹೊತ್ತು ಹಾಗೆ ನಿಂತಿದ್ದನೋ, ಕ್ರಮೇಣ ಅವನ ಅರಿವಿಗೆ ವಸ್ತು ಸ್ಥಿತಿಯ ಅರಿವಾದಾಗ, ಭೈರಪ್ಪನ ನಿರ್ಜೀವ ದೇಹದ ಬಳಿ ಕುಳಿತು ರೋಧಿಸಿದ.

ಭೈರಪ್ಪನ ಸಾವಿಗೆ ತಾನೇ ಕಾರಣ ಎಂದು ಅನ್ನಿಸತೊಡಗಿತ್ತು. ನನ್ನ ಮಾತಿನಿಂದ ಅವರಿಗೆ ನೋವಾಗಿದೆ. ಮೊದಲೇ ಅವರ ಆರೋಗ್ಯ ಹದಗೆಟ್ಟಿತ್ತು. ತನಗಾಗಿ ಒದ್ದಾಡಿದವರನ್ನು ತಾನು ಕೊಂದೆನಲ್ಲ ಅಂತ ಅವನ ಮನಸ್ಸು ಚಡಪಡಿಸಿತು. "ಭೈರಪ್ಪನವರೇ ನನ್ನನ್ನು ಕ್ಷಮಿಸಿ ಬಿಡಿ" ಎಂದು ಅವರ ಕಾಲುಗಳ ಮೇಲೆ ಬಿದ್ದು ಹೊರಳಾಡಿದ.

ಧ್ಯಾನಕ್ಕೆ ಕೂರುವ ಮೊದಲು ಭೈರಪ್ಪನ ಆರೋಗ್ಯ ಹೇಗಿದೆ ಎಂದು ವಿಚಾರಿಸಲು ಬಂದ ಸ್ವಾಮೀಜಿಯವರಿಗೆ ಅನಂತನ ರೋಧನ ಎಲ್ಲವನ್ನು ತಿಳಿಸಿತ್ತು. ಮಗುವಿನಂತೆ ಅಳುತ್ತಿದ್ದವನನ್ನು ಸಮಾಧಾನಗೊಳಿಸಿ, "ಎಲ್ಲಾ ಜಗನ್ನಾಥನ ಇಚ್ಛೆ, ಏಳು" ಎಂದು ಎಬ್ಬಿಸಿದರು. ಕೆಲವೇ ಸಮಯದಲ್ಲಿ ಆಶ್ರಮವಾಸಿಗಳಿಗೆಲ್ಲ ಭೈರಪ್ಪನ ನಿಧನದ ವಾರ್ತೆ ತಲುಪಿತು. ಎಲ್ಲರೂ ಸಾಲುಸಾಲಾಗಿ ಅಂತಿಮದರ್ಶನ ಪಡೆಯಲು ಬಂದರು. ಡಾಕ್ಟರ್ ಬಂದು,

ಹೃದಯಾಘಾತದಿಂದ ಸಾವುಂಟಾಗಿದೆ ಎಂದು ಖಚಿತಪಡಿಸಿ ಸರ್ಟಿಫಿಕೆಟ್ ಬರೆದುಕೊಟ್ಟರು.

ಸುಮಾರು ಇಪ್ಪತ್ತು ವರ್ಷಗಳಿಂದ ಆಶ್ರಮದ ಒಡನಾಡಿಯಾಗಿದ್ದ ಭೈರಪ್ಪನಿಗೆ ಸಕಲ ಮರ್ಯಾದೆಯೊಂದಿಗೆ ಯಥಾವತ್ತಾಗಿ ಶವಸಂಸ್ಕಾರವನ್ನು ನಡೆಸಿದರು. ಭೈರಪ್ಪನ ಸ್ವಂತ ತೋಟದಲ್ಲಿ ಅಂತಿಮ ಕ್ರಿಯೆಗಳನ್ನು ಮಾಡಿ ಅಲ್ಲಿ ಅವನ ನೆನಪಿಗಾಗಿ ಒಂದು ಸಮಾಧಿಯನ್ನು ಕಟ್ಟಿಸಿದರು.

ಅನಂತ ಅಂತರ್ಮುಖಿಯಾದ. ಅವನ ಆತ್ಮ ಬಲವೇ ಕುಸಿದು ಹೋದಂತಾಯಿತು. ಆತ್ಮೀಯ ಬಂಧುವನ್ನು ಕಳೆದುಕೊಂಡು ಅವನು ಮತ್ತೊಮ್ಮೆ ಅನಾಥನಾಗಿದ್ದ. ಭೈರಪ್ಪನಂತಹ ಆತ್ಮೀಯ ಸ್ನೇಹಿತ, ತನಗೆ ಈ ಜನ್ಮದಲ್ಲಿ ಮತ್ತೆ ಯಾರೂ ಸಿಗುವುದಿಲ್ಲ ಎಂದು ದುಃಖವಾಗಿತ್ತು. ಉದಾಸೀನತೆ ಹೆಚ್ಚಾಗಿತ್ತು. ಯಾವ ವಿಷಯದಲ್ಲಿಯೂ ಆಸಕ್ತಿ ಇರಲಿಲ್ಲ. ಏಕಾಂಗಿಯಾಗಿ, ಭೈರಪ್ಪನ ಸಮಾಧಿಯ ಬಳಿ ಕುಳಿತು ರೋಧಿಸಿ, ಅಶ್ರುತರ್ಪಣ ಬಿಡುತ್ತಿದ್ದ. ಕ್ರಮೇಣ ಅವನ ದುಃಖ ಕಡಿಮೆಯಾಗುತ್ತದೆಂದು ಸ್ವಾಮೀಜಿ ಏನನ್ನು ಹೇಳದೇ ಸುಮ್ಮನಾಗಿದ್ದರು.

ವಾರ ಕಳೆದರೂ, ಅನಂತ ವಾಪಸ್ಸು ಬರದಿದ್ದಾಗ ವೇದಮ್ಮ ಆತಂಕಗೊಂಡಳು. "ಅವನಿಂದ ಯಾವ ವಿಷಯವೂ ತಿಳಿಯಲಿಲ್ಲ. ಮದುವೆಗೆ ಕೆಲವೇ ದಿನಗಳು ಉಳಿದಿವೆ. ನೀವು ಹೋಗಿ ವಿಚಾರಿಸಿಕೊಂಡು ಬರ್ತೀರಾ?" ಪುರುಷೋತ್ತಮನನ್ನು ಪ್ರಶ್ನಿಸಿದ್ದಳು.

ಪುರುಷೋತ್ತಮನೂ, ಆತಂಕ ಅನುಮಾನಗಳಿಂದ ಚಡಪಡಿಸಿದ್ದ. ಲಲಿತ–ಪ್ರಶಾಂತರ ಮದುವೆಯ ಮಾತು ಬಂದಾಗಿಲಿಂದ ಅನಂತ ಮಂಕಾಗಿದ್ದುದು ಅವನ ಪೋಲೀಸ್ ಕಣ್ಣುಗಳಿಗೆ ಬಿದ್ದಿತ್ತು. ಅವನ ಹಿಂದಿನ ವೈವಾಹಿಕ ಜೀವನದ ದುರಂತದ ನೆನಪು ಅವನನ್ನು ವಿಚಲಿತಗೊಳಿಸಿದೆ. ನಾಲ್ಕಾರು ದಿನ ಆಶ್ರಮದಲ್ಲಿದ್ದು ಬರುವುದೇ ವಾಸಿ ಎಂದು ಅಂದುಕೊಂಡು ಏನನ್ನು ಆಡಿರಲಿಲ್ಲ. ಆದರೆ ವಾರವಾದರೂ ಅವನು ಬರಲಿಲ್ಲ, ಭೈರಪ್ಪನಾದರೂ ಏನೂ ಹೇಳಿರಲಿಲ್ಲ.... ಪುರುಷೋತ್ತಮ ಆದಿನವೇ ಆಶ್ರಮಕ್ಕೆ ಹೊರಟ.

ಅವನು ತಲುಪುತ್ತಿದ್ದಂತೆಯೇ ಭೈರಪ್ಪನ ನಿಧನದ ವಾರ್ತೆ ಕೇಳಿ ಅವನೂ ವ್ಯಥೆಗೊಂಡ. ಯಾರ ತಂಟೆಗೂ ಬರದೇ ಮಕ್ಕಳೊಂದಿಗೆ ಮಕ್ಕಳಂತೆ ಕಾಲ ಕಳೆಯುತ್ತಿದ್ದ ಭೈರಪ್ಪನ ವ್ಯಕ್ತಿತ್ವ ಅವನಿಗೆ ಹಿಡಿಸಿತ್ತು. ಎಂಥಾ ಅನಾಹುತವಾಗಿ ಹೋಯ್ತಲ್ಲ. ಆ ಮಕ್ಕಳಿಗೆ ಈ ವಿಷಯವನ್ನು ತಿಳಿಸುವುದು ಹೇಗೆ, ಪುರುಷೋತ್ತಮ ಪರಿತಪಿಸಿದ.

ಭೈರಪ್ಪ ವಿದ್ಯಾವಂತನಲ್ಲದಿದ್ದರೇನು? ನವನಾಗರೀಕತೆಯ

ಅರಿವಿಲ್ಲದಿದ್ದರೇನು? ನಿರ್ಮಲ ಮನೋಭಾವದ, ಮಾನವೀಯ ಮೌಲ್ಯಗಳನ್ನರಿತಿದ್ದ, ಭೈರಪ್ಪ ನಮಗೆಲ್ಲರಿಗೂ ಹಿರಿಯನಂತಿದ್ದು, ಮಾರ್ಗದರ್ಶಕನಾಗಿದ್ದ. ನಾವುಗಳು ಅವನನ್ನು ಕಳೆದುಕೊಂಡು ತಬ್ಬಲಿಗಳಾದೆವು. ಅವನ ಕಣ್ಣುಗಳು ಹನಿಗೂಡಿದವು. ಅನಂತನಿಗೆ ಏನು ಸಮಾಧಾನ ಹೇಳಬೇಕೆಂದು ತೋಚಲಿಲ್ಲ. ಆದರೂ ಉದ್ದೇಶವನ್ನು ತಿಳಿಸಬೇಕಾಗಿತ್ತು.

"ಆದದ್ದಾಗಿ ಹೋಯ್ತು. ಎಲ್ಲರಿಗೂ ದುಃಖವಾಗಿದೆ. ನೀನು ಯಾವಾಗ ಬರ್ತೀದೀಯಾ? ಆ ಮಕ್ಕಳಿಗೆ ನೀನೇ ಸಮಾಧಾನ ಹೇಳಬೇಕು"

"ನನಗೆ ಅಲ್ಲಿಗೆ ವಾಪಸ್ಸು ಬರುವ ಮನಸ್ಸೇ ಇಲ್ಲ"

"ಹಾಗಂದ್ರೆ ಹೇಗೆ? ಮದುವೆ ಲಗ್ನ ಗೊತ್ತು ಮಾಡಿಯಾಗಿದೆಯಲ್ಲ"

"ಮದುವೆ ಕಾರ್ಯ ನಾನು ಅಲ್ಲಿಲ್ಲದೆಯೂ ನಡೆಯುತ್ತೆ"

"ಹೌದು, ನಾನೀಗ ಹೋಗದಿದ್ದರೂ, ಯಾವ ಕಾರ್ಯವೂ ನಿಲ್ಲುವುದಿಲ್ಲ. ಈಗ ಭೈರಪ್ಪನೂ ಇಲ್ಲ, ನೀನೂ ಬರದಿದ್ದರೆ ಎಲ್ಲರಿಗೂ ನೋವಾಗುತ್ತೆ ಅಷ್ಟೇ"

ಅನಂತನಿಗೆ ಭೈರಪ್ಪನಾಡಿದ ಮಾತುಗಳು ನೆನಪಾದವು...

"ಸದ್ಯಕ್ಕೆ ನನಗೆ ಅಲ್ಲಿಗೆ ಬರುವ ಮನಸ್ಸಾಗ್ತಿಲ್ಲ. ನಾಲ್ಕಾರು ದಿನಗಳ ನಂತರ ಬರ್ತೀನಿ" ಪುರುಷೋತ್ತಮನ ಕೈ ಹಿಡಿದು ನುಡಿದಿದ್ದ. ಅವನ ಮಾತುಗಳನ್ನು ನಂಬಿದ ಪುರುಷೋತ್ತಮ ಹೊರಟ

ಈಗ ಭೈರಪ್ಪನೂ ಇಲ್ಲದೇ ತಾನೂ ಹೇಗೆ ಆ ಮನೆಯಲ್ಲಿ ಇರಬಲ್ಲ? ಮಾತನಾಡಲು ಆಪ್ತರಿಲ್ಲ, ಏನೋ ಅಪರಾಧಿ ಮನೋಭಾವ ತನ್ನನ್ನು ಅಲ್ಲಿರಲು ಬಿಡುತ್ತದೆಯೇ? ಅಪರಾಧದ ಮೇಲೆ ಅಪರಾಧ.... ಥೆ ತಾನು ಏನನ್ನು ಸಾಧಿಸಿದಂತಾಯ್ತು? ನಡು ರಾತ್ರಿಯಲ್ಲಿ ನಿದ್ದೆ ಬಾರದೇ ಹೊರಳಾಡಿ, ಎದ್ದು ಭೈರಪ್ಪನ ಸಮಾಧಿಯ ಕಡೆ ಹೊರಟ. ಅಪರಾಧಿಯಂತೆ ಕತ್ತು ಬಗ್ಗಿಸಿ ಕ್ಷಮೆ ಕೇಳುವವನಂತೆ ಮಾತನಾಡಿದ.

ನನ್ನ ಅಂತರಂಗದಲ್ಲಿ ನಡೆಯುತ್ತಿದ್ದ ಚಡಪಡಿಕೆ, ತಳಮಳ, ಅರ್ಥಹೀನ ಆಸೆಗಳು, ಅದರ ವಿರುದ್ಧ ನಡೆಸುವ ಮಾನಸಿಕ ಮಂಥನ ಇದೆಲ್ಲ ನಿಮಗೆ ಅರ್ಥವಾಗುವಂತಿದ್ದರೆ ಚೆನ್ನಾಗಿತ್ತು. ನಾನಾಗಿಯೇ ನಾನು ಇದನ್ನು ಯಾರಿಗಾದರೂ ಹೇಗೆ ಹೇಳಬಲ್ಲೆ? ಮೇಲು ನೋಟಕ್ಕೆ ಅಡಗಿದ್ದ ದ್ವೇಷ, ನಿರಾಸೆ, ಎಂದು ನನ್ನಿಂದ ಏನು ಅಪಚಾರವನ್ನು ಮಾಡಿಸಿಬಿಡುತ್ತದೋ ಎನ್ನುವ ದಿಗಿಲು ನನ್ನನ್ನು ಅಲ್ಲಿರಲು ಬಿಡಲಿಲ್ಲ. ಇಷ್ಟು ವರ್ಷಗಳ ನಂತರ ಲಲಿತೆಯ ಬಗ್ಗೆ ಮೂಡಿದ ಕಾಮನೆ ನನ್ನನ್ನು ಅಧೋಗತಿಗೆ ಇಳಿಸುವ ಮುನ್ನ ಅಲ್ಲಿಂದ ಹೊರಬಂದೆ. ನನಗೆ ಮತ್ತೆ ಅಲ್ಲಿಗೆ ಹೋಗುವ ಮನಸ್ಸು

ಇಲ್ಲವೇ ಇಲ್ಲ. ನಿಮ್ಮಷ್ಟು ನಿರಾಳ ಮನಸ್ಸಿನವನು ನಾನು ಅಲ್ಲ....ಈಗ ನೀವೂ ಇಲ್ಲದೇ, ನಾನು ಅಲ್ಲಿಗೆ ಹೋಗಲಾರೆ.... ಹೋಗಲಾರೆ... ದಯವಿಟ್ಟು ನನ್ನನ್ನು ಕ್ಷಮಿಸಿ, ನಿಮಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲಾರದ ಪಾಪಿ ನಾನು ನಾನು ಪಾಪಿ... ಆ ನಿಶೆರಾತ್ರಿಯಲ್ಲಿ ನೀರವವಾಗಿ ರೋಧಿಸುತ್ತಿದ್ದವನನ್ನು ಯಾರೋ ಅಲುಗಾಡಿಸಿ ಎಚ್ಚರಿಸಿದಂತಾಯಿತು. ಬೆಚ್ಚಿ ಬಿದ್ದು ಅತ್ತಿತ್ತ ತಿರುಗಿ ನೋಡಿದ ಯಾರೂ ಕಾಣಲಿಲ್ಲ. ಈ ನಡುರಾತ್ರಿಯಲ್ಲಿ ಇಲ್ಲಿಗೆ ಬಂದಿದ್ದು ಸರಿಯಲ್ಲ ಎನ್ನುವ ಭೀತಿ ಅವನಲ್ಲಿ ತೋರಿತು. ಈ ಹಿಂದೆ ಎಂದೂ ಅವನಿಗೆ ಹೆದರಿಕೆ ಆಗಿರಲಿಲ್ಲ. ಕುಳಿತವನು ಕೈ ಊರಿ ಎದ್ದು ನಿಲ್ಲಲು ನೋಡಿದ. ತೂರಾಡುತ್ತಾ ನಿಂತವನನ್ನು ಯಾರೋ ಮುಂದಕ್ಕೆ ಎಳೆದಂತಾಯಿತು. ನಿಲ್ಲಲಾಗದೇ ಹಾಗೇ ಮುಂದಕ್ಕೆ ಆಯತಪ್ಪಿ ಬಿದ್ದುಬಿಟ್ಟ.

ಎಷ್ಟೋ ಹೊತ್ತಿನ ನಂತರ ಅವನಿಗೆ ಎಚ್ಚರವಾದಾಗ ಅವನಿಗೆ ತಾನು ಯಾವುದೋ ಒಂದು ಬೇರೆ ಲೋಕಕ್ಕೆ ಹೋಗಿ ಬಂದ ಅನುಭವವಾಗಿತ್ತು. ಏನು ನಡೆಯಿತು ಎಂದು ನೆನಪಿಸಿಕೊಳ್ಳಲು ಯತ್ನಿಸಿದ. ಸರಿಯಾಗಿ ಏನೂ ನೆನಪಿಗೆ ಬರಲಿಲ್ಲ. ತಲೆಯ ಮುಂಭಾಗಕ್ಕೆ ಪೆಟ್ಟು ಬಿದ್ದಿದುದರಿಂದ ಸ್ವಲ್ಪ ನೋಯುತ್ತಿತ್ತು. ಹಾಗೆ ಮುಟ್ಟಿ ನೋಡಿಕೊಂಡ. ಊದಿಕೊಂಡಿದೆ ಅಂತನ್ನಿಸಿತು. ಈ ಕತ್ತಲೆಯಲ್ಲಿ ತಾನೇಕೆ ಇಲ್ಲಿಗೆ ಬಂದೆ? ಎಷ್ಟು ಹೊತ್ತಿನಿಂದ ಇಲ್ಲಿಯೇ ಇದೀನಲ್ಲ ಅಂತನ್ನಿಸಿದೊಡನೆ, ಮೈಮೇಲೆ ಆವೇಶ ಬಂದವನಂತೆ ಎದ್ದು ಬಿರಬಿರನೆ ಆಶ್ರಮದ ದಿಕ್ಕಿನತ್ತ ನಡೆದ.

ಸ್ವಾಮೀಜಿ ಧ್ಯಾನಕ್ಕೆ ಕುಳಿತುಕೊಳ್ಳುವುದರಲ್ಲಿದ್ದರು. ಹೆಜ್ಜೆಯ ಸದ್ದಿಗೆ ತಿರುಗಿ, ಅನಂತನತ್ತ ನೋಡಿದರು.

"ನಾನು ಊರಿಗೆ ಹೊರಟಿದೀನಿ" ಎಂದಷ್ಟೇ ಹೇಳಿ ಕೈಕಟ್ಟಿ ನಿಂತ.

"ಜೈ ಜಗನ್ನಾಥ" ಎಂದು ಕೈ ಎತ್ತಿ ಹರಸಿ, ತಮ್ಮ ಪಾಡಿಗೆ ತಾವು ಧ್ಯಾನಾಸಕ್ತರಾಗಿ ಕುಳಿತಾಗ ಅನಂತ ಅಲ್ಲಿಂದ ಹೊರಟಿದ್ದ.

ಅನಂತ ವಾಪಸ್ಸಾದುದನ್ನು ಕಂಡು ಎಲ್ಲರಿಗೂ ಸಂತಸವಾಗಿತ್ತು. ಎಲ್ಲರೂ ಭೈರಪ್ಪ ಏಕೆ ಬಂದಿಲ್ಲವೆಂದು ಪ್ರಶ್ನಿಸಿದಾಗ ಅವನು ನಿರುತ್ತರನಾದ. ಹಾಗಾದರೆ ಯಾರಿಗೂ ವಿಷಯ ತಿಳಿದಿಲ್ಲವೆಂದು ಊಹಿಸಿದ. ನಿಧಾನವಾಗಿ ನುಡಿದ. "ಅವರಿಗೆ ತುಂಬಾ ಹುಶಾರಿಲ್ಲ, ಮದುವೆ ಹೊತ್ತಿಗೆ ಆದರೆ, ಬರುತ್ತಾರೆ" ಲಲಿತನ ಕಡೆ ನೋಡಿ ಹೇಳಿದ. ಅವಳ ಮುಖ ಪೆಚ್ಚಾಗಿತ್ತು. ಅವಳ ಸಮೀಪಕ್ಕೆ ಬಂದ, "ಭೈರಪ್ಪ ಬರಲಿಲ್ಲ ಅಂತ ಬೇಜಾರಾ? ಕಿರುನಗೆ ನಗುತ್ತಾ ಪ್ರಶ್ನಿಸಿದಾಗ ಲಲಿತ ಹಿಂದೆ ಸರಿದಳು. ಅನಂತ ಎಂದೂ ಹಾಗೆ ಸಮೀಪಕ್ಕೆ ಬಂದವನಲ್ಲ, ವೇದಮ್ಮ ಕಣ್ಣರಳಿಸಿದಳು.

"ಇನ್ನು ನಾಲ್ಕಾರು ದಿನ ಅಷ್ಟೇ.... ಆಮೇಲೆ ಎಲ್ಲರನ್ನು ಮರೆತೇ ಬಿಡ್ತೀಯ ಅಷ್ಟೇ..." ಹಾಸ್ಯವಾಗಿ ಮಾತನಾಡಿದಾಗ ಎಲ್ಲರಿಗೂ ಅಚ್ಚರಿ.

"ನಿನ್ನ ಮದುವೆ ಸೀರೆ, ಒಡವೇನೆಲ್ಲಾ ನನಗೆ ತೋರಿಸೋಲ್ವಾ!" ಅವನು ಕೇಳಿದಾಗ ವೇದಮ್ಮ ಯೋಚಿಸುತ್ತಿದ್ದಳು. ಅನಂತ ಎಂದೂ ಹೆಂಗಸರ ಒಡವೆ ವಸ್ತು ಬಗ್ಗೆ ವಿಚಾರಿಸಿದವನಲ್ಲ. ಇಂದೇಕೆ ಹೀಗೆ?"

"ಇನ್ನೂ ತಂದೇ ಇಲ್ಲಪ್ಪಾ.... ಬ್ಯಾಂಕಿನಿಂದ ಹಣ ತಂದಿಲ್ಲ, ಜತೆಗೆ ಎಲ್ಲಾದಕ್ಕೂ ಒಬ್ಬರು ಗಂಡಸರು ಬೇಡವೆ?"

"ನಾನು ಬಂದಾಯ್ತಲ್ಲ, ನಾನು ಬರ್ತೀನಿ, ಯಾವಾಗ ಹೋಗಬೇಕು? ಹೇಳಿ" ಉತ್ಸಾಹದಿಂದ ಅನಂತ ನುಡಿದಾಗ ವೇದಮ್ಮ ಮೂಗಿನ ಮೇಲೆ ಬೆರಳನ್ನಿಟ್ಟುಕೊಳ್ಳುವಂತಾಗಿತ್ತು. "ಇವನು ನಮ್ಮ ಅನಂತನೇನಾ! ಇವನ್ಯಾವಾಗ ಇಷ್ಟು ಬದಲಾದ?"

"ನಿನಗೆ ಅದೆಲ್ಲ ಇಷ್ಟವಿಲ್ಲದ ಕೆಲಸ. ಭೈರಪ್ಪ ಇದ್ದಿದ್ದರೆ ಚೆನ್ನಗಿರ್ತೀತ್ತು ನಿನಗೆ ಈ ತೊಂದರೆ ಏಕೆ?"

"ತೊಂದರೆ ಏನು ಬಂತು? ನಡೆಯುತ್ತಿರುವುದು ನಮ್ಮ ಲಲಿತನ ಮದುವೆ ಅಲ್ವಾ" ಎನ್ನುತ್ತಾ ಲಲಿತಳ ಗಲ್ಲ ಹಿಂಡಿದಾಗ ಅವಳು ಹಿಂದೆ ಸರಿದಳು. ಅಷ್ಟರಲ್ಲಿ ಸತ್ಯ ಬಂದ.

"ನನಗೂ ಹೊಸ ಬಟ್ಟೆಗಳು ಬೇಕು, ಅದೇ ಹಳೆ ಬಟ್ಟೆಗಳಣ್ನು ಕಾಲೇಜಿಗೆ ಹಾಕಿಕೊಂಡು ಹೋಗಲು ನನಗಿಷ್ಟವಿಲ್ಲ" ವೇದಮ್ಮ ಮಧ್ಯೆ ಬಾಯಿ ಹಾಕಿದಳು. "ನಿನಗೆ ಬಟ್ಟೆ ಹೊಲಿಸದೇ, ತರದೇ ಇರ್ತಾರಾ? ಅವನಿನ್ನು ಈಗ್ತಾನೇ ಬರ್ತಾ ಇದಾನೆ, ಮೊದಲು ಸ್ವಲ್ಪ ಸುಧಾರಿಸಿಕೊಳ್ಳಲಿ"

"ಹೋಗು, ಮೊದಲು ಸ್ನಾನ ಮುಗಿಸಿ ಬಾ, ತಿಂಡಿ ಕಾಫಿ ಕೊಡ್ತೀನಿ"

"ಹುಂ, ಮೊದಲು ಈ ಆಯಾಸ ಕಳೆದುಕೊಂಡು, ನಂತರ ಬೀಗರ ಮನೆಗೆ ಹೋಗಿ ಬರ್ತೀನಿ"

"ಅಂ! ಯಾರ ಮನೆಗೆ!" ವೇದಮ್ಮ ಕಣ್ಣರಳಿಸಿ ಕೇಳಿದಳು.

"ಭಾವಿ ಬೀಗರ ಮನೆಗೆ!"...ಅನಂತ ನಕ್ಕು ನುಡಿದಾಗ ವೇದಮ್ಮ ನಂಬದವಳಂತೆ ಅವನನ್ನೇ ನೋಡಿದಳು. "ಇದು ಅನಂತ ತಾನಾಗಿಯೇ ಆಡುವ ಮಾತುಗಳಲ್ಲ, ಎಲ್ಲೋ ಭೈರಪ್ಪ ಹೇಳಿಕಳಿಸಿರಬೇಕು" ಅನಂತ ಬದಲಾಗಿದಿದ್ದರೆ, ಅವನನ್ನೂ ಒಪ್ಪಿಸಿ ಅವನಿಗೂ ಮದುವೆ ಮಾಡಿ...." ವೇದಮ್ಮನ ಚಿಂತೆ "ಸತ್ಯ ನಿನ್ನ ಸೈಕಲ್ ಸರಿಯಾಗಿದೆಯಾ?" ಅನಂತ ಕೇಳಿದ್ದ.

"ಹೂಂ ಏಕೆ!"

"ನಿನ್ನ ಭಾವನ ಮನೆಗೆ ಹೋಗುಕ್ಕೆ, ನೀನೂ ಬರ್ತೀಯಾ?"

"ನಿಮಗೆ ಸೈಕಲ್ ಬರುತ್ತಾ! ಅದೂ ಡಬ್ಬಲ್ ರೈಡಿಂಗ್...."

"ಹೂಂ ಬರದೇ ಏನು? ಅದೇನು ಹಾಗೇ ಕೇಳ್ತೀಯಾ! ಹೂಂ ಹೋಗು" ವೇದಮ್ಮ ಗದರಿ ಕಳಿಸಿದಳು ಅನಂತ ಸೈಕಲ್‌ನ ಮುಟ್ಟಿ ಸಪ ನೋಡಿರಲಿಲ್ಲ, ನಡದೇ ಹೋಗುತ್ತಿದ್ದ. ಈಗ ಈ ಮಾತು.

"ಅಂಕಲ್ ಸೈಕಲ್ ಹತ್ತಿದ್ದುದನ್ನು ನಾವೆಂದೂ ಕಂಡೇ ಇರಲಿಲ್ಲ. ಅಲ್ವೇನೇ ಲಲಿತೂ!" ಸತ್ಯ ಅಚ್ಚರಿಯಿಂದ ಪ್ರಶ್ನಿಸಿದ್ದ.

"ಹೂಂ, ನಾನೂ ಅದನ್ನೇ ಯೋಚಿಸುತ್ತಿದ್ದೆ" ಅನಂತ ಎಲ್ಲರನ್ನು ಅಚ್ಚರಿಯ ಆಳಕ್ಕೆ ತಳ್ಳಿ ತಾನು ಬಚ್ಚಲ ಮನೆ ಕಡೆ ನಡೆದಿದ್ದ.

ಸೈಕಲ್‌ನಿಂದ ಇಳಿದು ಬೆಲ್ ಮಾಡಿದ. ಸದ್ದಿಗೆ, ಪುರುಷೋತ್ತಮ ಬಾಗಿಲು ತೆಗೆದು ಕಣ್ಣರಳಿಸಿದ.

"ಅರೇ... ಅನಂತ ನೀನಾ? ಯಾವಾಗ ಬಂದೆ? ಇದೇನು ಸೈಕಲ್ಲು, ಹೊಸಾ ರೀತಿ..."

"ನಿಮಗೆ ಸೈಕಲ್ ಓಡಿಸುಕ್ಕೆ ಬರುತ್ತ ಅಂತ ನನಗೆ ಗೊತ್ತಿರಲೇ ಇಲ್ಲ" ಪ್ರಶಾಂತ್ ಪ್ರಶ್ನಿಸಿದಾಗ ಅನಂತ ಜೋರಾಗಿ ನಕ್ಕ.

"ಸೈಕಲ್ ಓಡಿಸುಕ್ಕೆ ಇಂಜಿನಿಯರಿಂಗ್ ತಲೆ ಏನೂ ಬೇಕಿಲ್ಲ" ಎನ್ನುತ್ತಾ ಪ್ರಶಾಂತನ ಭುಜವನ್ನು ಒತ್ತಿದ. ಅನಂತನ ಈ ಪರಿ ಅವರಿಬ್ಬರಿಗೂ ಹೊಸದೇ, ಮುಖ ಮುಖ ನೋಡಿಕೊಂಡರು.

ನಾಲ್ಕಾರು ದಿನಗಳ ಹಿಂದೆ ನೋಡಿದ ಅನಂತನಿಗೂ, ಎದುರಿಗೆ ನಿಂತಿರುವ ಅನಂತನಿಗೂ ಎಷ್ಟು ವ್ಯತ್ಯಾಸ? ಈ ಬದಲಾವಣೆ ಹೇಗಾಯ್ತು?

ದೊಡ್ಡಮ್ಮ ಹೇಳುತ್ತಿದ್ದರು...."ನೀವು ಬಂದೇ ಇಲ್ಲವಂತೆ.... ನೋಡಿಕೊಂಡು ಬಾ ಅಂತ ಕಳಿಸಿದರು. ಲಲಿತಾ ನಿನಗೋಸ್ಕರ ದಿನಾಕಾಯ್ತಾ ಇರ್ತಾಳಂತೆ ನೀನೂ ಹೋಗಲಿಲ್ವಾ?" ಪ್ರಶಾಂತನನ್ನು ಪ್ರಶ್ನಿಸಿದ.

"ಇಲ್ಲ" ಎಂದಷ್ಟೇ ಹೇಳಿ ತಲೆ ತಗ್ಗಿಸಿದ. "ಮದುವೆಗೆ ಮುಂಚೆ ಹೊರಗೆ ತಿರುಗಾಡುವುದು ಇಷ್ಟವಿಲ್ಲ ಎನ್ನುವ ಮಾತನ್ನು ಅನಂತ ಹೇಳಿದ್ದನೆಂದು ಲಲಿತ ತಿಳಿಸಿದ್ದಳು. ಆದರೆ ಈಗ?

"ಭೈರಪ್ಪನಿಗೆ ಹುಶಾರಿಲ್ಲ ಎಂದಷ್ಟೇ ಹೇಳಿದ್ದೆ, ಯಾಕೋ ನಿಜ ಸಂಗತಿ ತಿಳಿಸಲು ಕಷ್ಟವಾಯ್ತು ನನಗೆ" ಪುರುಷೋತ್ತಮ ನುಡಿದ

"ಹೋಗಲಿ ಬಿಡಿ, ಒಳ್ಳೇದಾಯ್ತು, ನಾನು ಹಾಗೇ ಹೇಳಿದೀನಿ... ಸಾಯಂಕಾಲ ಎಲ್ಲರೂ ಬನ್ನಿ, ಹಾಗೇ ಜವುಳಿ, ಒಡವೆ ತಂದು ಬಿಡೋಣ"

"ನೀನು ಬಟ್ಟೆ ಅಂಗಡಿಗೆ ಬರ್ತೀಯಾ? ಒಡವೆ ಬಗ್ಗೆ ನಿನಗೆ ಯಾವಾಗ ಆಸಕ್ತಿ ಬಂತು?" ಪುರುಷೋತ್ತಮ ತಮಾಷೆ ಮಾಡಿದ.

"ಸರಿ ಬಿಡಿ... ದೊಡ್ಡಮ್ಮ ಹೇಳಿದರು ಅಂತ ಹೇಳಿದೆ. ಲಲಿತಂಗೆ ಏನು ಬೇಕು ಅಂತ ನನಗೇನು ಗೊತ್ತಾಗುತ್ತೆ? ನೀವು ಪ್ರಶಾಂತ, ಲಲಿತನ ಜತೆಯಲ್ಲಿ ಹೋಗಿ ಎಲ್ಲಾ ತಂದು ಬಿಡಿ"

"ಏನಯ್ಯಾ ಅಷ್ಟಕ್ಕೆ ಅಸಮಾಧಾನನಾನ? ಲಲಿತ ನಮ್ಮ ಹುಡುಗಿ... ಅವಳಿಗೆ ಏನು ಬೇಕೋ ಅದನ್ನೇ ಕೊಡಿಸೋಣ.... ಎಲ್ಲಾ ಒಟ್ಟಿಗೆ ಹೋಗಿ ಬರೋಣ" ಪುರುಷೋತ್ತಮ ನಗುತ್ತಾ ನುಡಿದ.

ಸ್ವಲ್ಪ ಹೊತ್ತಿನ ನಂತರ, ಮೂವರೂ ವಾಪಸ್ಸಾದರು. ಪ್ರಶಾಂತ ಲಲಿತ ನಗುನಗುತ್ತಾ ಮಾತನಾಡುತ್ತಾ ಇದ್ದರೂ, ಅನಂತ ಹೆಚ್ಚಿಗೆ ಗಮನ ನೀಡಲಿಲ್ಲ. ಸತ್ಯನೂ ನಡು ನಡುವೆ ಮಾತನಾಡುತ್ತಿದ್ದ. ಮೂವರಿಗೂ ಅನಂತನ ಬದಲಾದ ನಿಲುವಿನ ಬಗ್ಗೆ ಆಶ್ಚರ್ಯ ವೇದಮ್ಮ ಪುರುಷೋತ್ತಮ ನೊಂದಿಗೆ ಮದುಮಗಳಿಗೆ ಏನೇನು ತರಬೇಕೆಂದು ತಿಳಿಸುತ್ತಿದ್ದಳು. ಅವನು ಪಟ್ಟಿ ಮಾಡಿಕೊಳ್ಳುತ್ತಿದ್ದ. ಅನಂತ ಬ್ಯಾಂಕಿಗೆ ಹೋಗಿ ಅಗತ್ಯವಾದಷ್ಟು ಹಣವನ್ನು ತಂದ. ಊಟದ ನಂತರ ಎಲ್ಲರೂ ಜವುಳಿ ಅಂಗಡಿಗೆ ಹೊರಟರು,.

ಅನಂತರ ಮದುವೆಯ ಸಿದ್ಧತೆಗಳು ಸುಗಮವಾಗಿ ನೆರವೇರಿದವು. ಒಡವೆಗಳನ್ನು ತಂದಿದ್ದಾಗಿತ್ತು. ಛತ್ರ ಗೊತ್ತು ಮಾಡಿಯಾಯ್ತು. ಅನಂತ ಹೊರಗೆ ಹೋದಾಗಲೆಲ್ಲಾ ಮಕ್ಕಳಿಗೆಂದು ಸಿಹಿ ತಿಂಡಿಗಳನ್ನು ಕಟ್ಟಿಸಿಕೊಂಡು ತರುತ್ತಿದ್ದ. ಈಗ ಹತ್ತು ವರ್ಷಗಳ ನಂತರ, ಅನಂತ ಇದ್ದಕ್ಕಿದ್ದಂತೆ ಹೇಗೆ ಬದಲಾದ ಎನ್ನುವುದೇ ಎಲ್ಲರಿಗೂ ಅರ್ಥವಾದ ಪ್ರಶ್ನೆ. ಅಷ್ಟಾದರೂ ಭೈರಪ್ಪ ಯಾಕೋ ಬರಲಿಲ್ಲವೆಂದು ಎಲ್ಲರಿಗೂ ಕಳವಳ.

ಪುರುಷೋತ್ತಮ ತನ್ನ ನೆಂಟರು, ಸಹೋದ್ಯೋಗಿಗಳನ್ನು ಕರೆದಿದ್ದ. ಬರೀ ಅವನ ಬಳಗವೇ, ಗೋಪಾಲ, ಲಲಿತ, ಸುಗುಣಳೇ ಇಲ್ಲದಿದ್ದ ಮೇಲೆ ಯಾವ ನೆಂಟರು? ಹಾಗಾಗಿ ಯಾರನ್ನೂ ಹುಡುಕಿಸಿ ಕರೆಯುವ ಆಸೆಯನ್ನೇ ತೋರಲಿಲ್ಲ ವೇದಮ್ಮ ಲಲಿತ, ಸತ್ಯರ ಸಹಪಾಠಿಗಳು ಅಷ್ಟೇ, ಅನಂತ ಆಶ್ರಮದವರನ್ನು ಆಹ್ವಾನಿಸಿದ್ದರೂ ಅವರ್ಯಾರೂ ಬರುವುದಿಲ್ಲವೆಂದು ತಿಳಿದಿತ್ತು.

ಮದುವೆ ಜರುಗಿತು. ಎಲ್ಲರಿಗೂ ನೆಮ್ಮದಿ. ಪುರುಷೋತ್ತಮ ಸೊಸೆ ಯನ್ನು ಆಲಂಗಿಸಿಕೊಂಡು "ನಿನ್ನ ಅಗತ್ಯ ನಮ್ಮ ಮನೆಗೆ ತುಂಬಾ ಇದೆ... ಆದಷ್ಟು ಬೇಗ ಬಂದು ಬಿಡು" ಎಂದು ಹರಸಿದ್ದ. ಅನಂತ ಯಾವ ಸಂಕೋಚವನ್ನು ತೋರದೇ ಲಲಿತಳನ್ನು ತಬ್ಬಿ ಹರಸಿದ್ದ. ಸತ್ಯ ಪೆಚ್ಚಾಗಿ ನಿಂತಿದ್ದಾಗ, ಅನಂತ ಅವನನ್ನು ತನಗೆ ಒರಗಿಸಿಕೊಂಡು ಬೆನ್ನು ಮೇಲೆ ಕೈಯಾಡಿಸಿದ.

ಮದುವೆ ನಡೆದು ಮೂರು ದಿನ ಕಳೆಯಿತು. ಪ್ರಶಾಂತ-ಲಲಿತರನ್ನು ಹನಿಮೂನ್‌ಗೆ ಕಳುಹಿಸಲು ಪುರುಷೋತ್ತಮನೇ ಎಲ್ಲಾ ಏರ್ಪಾಟನ್ನು ಮಾಡಿದ್ದ. ಲಲಿತ ಖುಷಿ ಖುಷಿಯಾಗಿ ಗಂಡನೊಡನೆ ಹೊರಟು ಹೋದಳು. ಅವಳಿಲ್ಲದ ಮನೆ ಬಿಕೋ ಬಿಕೋ ಎನ್ನುತ್ತಿತ್ತು.

"ಲಲಿತ ಇಲ್ಲದೇ ಎಷ್ಟು ಬೇಜಾರಾಗ್ತಿದೆ ಅಲ್ವಾ" ವೇದಮ್ಮ ಕೇಳಿದಾಗ ಅನಂತ ತಲೆಯಾಡಿಸಿದ್ದ.

"ಸತ್ಯನ ಓದು ಮುಗಿದಿದ್ದರೆ, ಅವನಿಗೂ ಮದುವೆ ಮಾಡಿ, ಲಲಿತಳ ಜಾಗವನ್ನು ತುಂಬಿಸಿಕೊಳ್ಳಬಹುದಾಗಿತ್ತು" ಅನಂತ ತಮಾಷೆ ಮಾಡಿದ್ದ.

"ಅವನಿಗೇನು ಮದುವೆಗೆ ಅವಸರ? ಈಗಲೂ ನೀನು ಒಪ್ಪುವುದಾದರೆ ನಿನ್ನ ಮದುವೆಗೆ ಏರ್ಪಾಡು ಮಾಡ್ತೀನಿ" ವೇದಮ್ಮ ಅಳುಕುತ್ತಾ ನುಡಿದಳು. ಮುಂಚಿನಂತೆ ಅನಂತ ಸಿಡುಕಲಿಲ್ಲ, ದುಡುಕಿ ಎದ್ದು ಹೋಗಲಿಲ್ಲ

"ಈ ಮುದುಕನಿಗೆ ಯಾರು ಹೆಣ್ಣು ಕೊಡ್ತಾರೆ?" ನಗುತ್ತಾ ನುಡಿದ.

"ನಿನಗೇನು ವಯಸ್ಸು ಮೀರಿ ಹೋಗಿರುವುದು? ಇನ್ನು ನಲವತ್ತು ನಿನ್ನ ತಂದೆ..." ಎಂದು ಹೇಳಹೋದವಳು ನಿಲ್ಲಿಸಿದಳು. ಅನಂತನ ಕಡೆ ನೋಡುತ್ತಾ

"ಯಾರ ತಂದೆ? ಅಂಕಲ್ ತಂದೇನಾ?" ಸತ್ಯ ಕೇಳಿದಾಗ, ವೇದಮ್ಮ ನಾಲಿಗೆ ಕಚ್ಚಿ ಒಳಗೆದ್ದು ಹೊರಟುಹೋದಳು.

"ಅಂಕಲ್.... ದೊಡ್ಡಮ್ಮ ಯಾರ ವಿಚಾರ ಹೇಳಿದ್ದು! ಯಾಕೆ ಅಷ್ಟಕ್ಕೇ ಎದ್ದು ಹೋದ್ರಲಾ...." ಸತ್ಯ ಪ್ರಶ್ನಿಸಿದಾಗ, ಅನಂತ ತನಗೆ 'ಗೊತ್ತಿಲ್ಲ' ಎಂದ

ಹನಿಮೂನ್ ಮುಗಿಸಿ ಬಂದ ನವದಂಪತಿಗಳು ಆಗಾಗ್ಗೆ ಬಂದು ಹೋಗುತ್ತಿದ್ದರು. ಸತ್ಯನಿಗೆ ಇಂಜನಿಯರಿಂಗ್ ಕೋರ್ಸ್‌ಗೆ ಸೀಟು ಸಿಕ್ಕಿರಲಿಲ್ಲವಾದ್ದರಿಂದ ಅವನು ಬಿ.ಎಸ್ಸಿಗೆ ಸೇರಿದ್ದ. ಮೊದಲ ದಿನ ಅವನನ್ನು ಅವನ ಸೀನಿಯರ್ಸ್ ತುಂಬಾ ರೇಗಿಸಿದ್ದರು. ಮನೆಗೆ ಬಂದವನೇ ವೇದಮ್ಮನ ಮೇಲೆ ಸಿಡಿ ಕಾರಿದ್ದ.

"ನನಗೆ ಸತ್ಯಕಾಮ ಅಂತ ಹೆಸರನ್ನಿಟ್ಟವರ್ಯಾರು? ಎಲ್ಲಾ ಆಡಿ ಕೊಂಡು ನಕ್ಕರು. ಅವಮಾನವಾಯ್ತು ಗೊತ್ತಾ?"

ಅನಂತ ಪ್ರಶ್ನಿಸಿದ "ಯಾಕಂತೆ ಸತ್ಯಕಾಮ ಎಂದರೆ ಅರ್ಥ ಗೊತ್ತಾ ಅವರಿಗೆ!

"ಅರ್ಥ ಕಟ್ಟಿಕೊಂಡು ಏನಾಗಬೇಕಾಗಿದೆ? ನಾನು ಒಂದು ಆಡಿಕೆಯ ವಸ್ತುವಾಗಿದ್ದೆ ಅಷ್ಟೆ.... ಒಬ್ಬರು ಸತ್ಯಕಾಮ ಜಾಬಾಲ... ಅಂತ ಹೇಳಿ ನಕ್ಕರು. ಇನ್ನೊಬ್ಬ ಬಾಲ ಎಲ್ಲೋ ಸತ್ಯಜಾ... ಎಂದರು. ಥು ಎಷ್ಟು ಅಸಹ್ಯ ನಾನು

ನಾಳೆಯಿಂದ ಕಾಲೇಜಿಗೆ ಹೋಗುಲ್ಲ."

"ಛೆ, ಇಷ್ಟಕ್ಕೆಲ್ಲಾ ಯಾರಾದ್ರೂ ಹೆದರ್ತಾರೆಯೆ? ನಿನಗೆ ಸತ್ಯಕಾಮ ಜಾಬಾಲನ ಕತೆ ಗೊತ್ತಾ?" ಅನಂತ ಹತ್ತಿರ ಬಂದು ಕೇಳಿದಾಗ ಸತ್ಯ ಮೆತ್ತಗಾದ.

"ಹುಂ, ಗೊತ್ತು ಹೈಸ್ಕೂಲಿನಲ್ಲಿದ್ದಾಗ ಪಾಠ ಮಾಡುವಾಗ ಹೇಳಿದ್ದರು."

"ಸರಿ ಮತ್ತೆ ಆ ಪುಟ್ಟ ಹುಡುಗ ಹೆದರದೇ, ತನ್ನ ಜನ್ಮ ರಹಸ್ಯವನ್ನು ತನ್ನ ತಾಯಿಯ ಬಾಯಿಂದ ಕೇಳಿ ತಿಳಿದುಕೊಂಡು ಜಾಬಾಲ ಮುನಿಯಾಗಿ ಹೆಸರು ಮಾಡಿದವನು, ಅವನ ವಿದ್ಯೆಗೆ, ಗುರುಕುಲಕ್ಕೆ ಸೇರಲು ಅವನ ಜನ್ಮ ರಹಸ್ಯ ಅಡ್ಡ ಬರಲಿಲ್ಲ. ಅಂಥಾದ್ದರಲ್ಲಿ ಯಾರೋ ಏನೋ ಅಂದರು ಅಂತ ನೀನೇಕೆ ಹೆದರಬೇಕು! ನಿನ್ನ ಹೆಸರು ಸತ್ಯ, ನೀನು ಸತ್ಯವಂತನಾಗಿರಬೇಕು... ನಿನ್ನ ತಾಯಿ ನಿನಗೆ ಇಟ್ಟ ಹೆಸರನ್ನು ಸಾರ್ಥಕಗೊಳಿಸಬೇಕು.

"ನಿಮಗೆ ನನ್ನ ಕಷ್ಟ ಅರ್ಥವಾಗುವುದಿಲ್ಲ...." ಸತ್ಯ ನುಡಿದ.

"ಹೌದು.... ಆದರೆ ಒಂದು ಮಾತನ್ನು ಹೇಳ್ತೀನಿ. ಸತ್ಯಕಾಮ ಜಾಬಾಲನಿಗೆ ಬಾಲವಿತ್ತೋ ಇಲ್ಲವೋ ತಿಳಿಯದು. ಆದರೆ ಹನುಮಂತನಿಗೆ ಬಾಲವಿತ್ತು. ಅವನು ಬಲಶಾಲಿ. ನೀನು ಅವನಂತೆ ಬಲಶಾಲಿಯಾಗಬೇಕು, ಯಾವುದಕ್ಕೂ ಹೆದರಬಾರದು. ಸತ್ಯಕಾಮ ಜಾಬಾಲಿಯಂತೆ, ಹನುಮಂತನಂತೆ ಶ್ರೇಷ್ಠ ವ್ಯಕ್ತಿಯಾಗಬೇಕು. "ವೇದಮ್ಮ ಅನಂತನ ಮಾತಿಗೆ ತಲೆತೂಗಿದಳು.

ನಮ್ಮ ಅನಂತ ಎಂತಹ ಮೇಧಾವಿ ಯಾರೋ ತಮಾಷೆಯಾಗಿ ಆಡಿದ ಮಾತನ್ನು ಅರ್ಥೈಸಿ, ಗಂಭೀರವಾಗಿ ಹೇಳುವ ಪ್ರಬುದ್ಧತೆ ಇದೆ. ಇದು ಆ ಆಶ್ರಮದಿಂದ ದೊರೆತಿರುವ ಸಂಸ್ಕೃತಿ ಇನ್ನು ಯಾವ ಹೆಣ್ಣು, ಯಾವ ಸಂಸಾರವೋ, ಇವನಿಗೆ ಆತ್ಮಬಲವನ್ನು, ಆತ್ಮಶಕ್ತಿಯನ್ನು ನೀಡಬೇಕಾಗಿಲ್ಲ. ಅನಂತನಿಗೆ ಅನ್ಯಾಯವಾಯಿತು ಎಂದು ನಾನು ಚಿಂತಿಸಬೇಕಾಗಿಲ್ಲ, ಅನಾಥನಾಗಿ ಹುಟ್ಟಿದ ಅನಂತ ಈಗ ಅನಾಥ ಬಂಧುವಾಗಿದಾನೆ" ವೇದಮ್ಮ ತನಗೇ ಅರಿಯದಂತೆ ಅನಂತನಿಗೆ ಕೈ ಮುಗಿದಿದ್ದಳು.

"ದೊಡ್ಡಮ್ಮಾ.... ಯಾರಿಗೆ ಕೈ ಮುಗಿಯುತ್ತೀರಿ?" ಸತ್ಯ ಪ್ರಶ್ನಿಸಿದ್ದ.

"ನಮ್ಮ ಸತ್ಯಕಾಮ ಜಾಬಾಲನಿಗೆ" ಎಂದ ನಗುತ್ತಾ ಅನಂತ

ಲಲಿತಳ ಮದುವೆಯಾಗಿ ಮೂರು ನಾಲ್ಕು ತಿಂಗಳು ಕಳೆದಿದ್ದವು. ಅವಳೀಗ ತಾಯಿಯಾಗುವುದರಲ್ಲಿದ್ದಳು. ಮೊದಲಿನ ಎಳಸುತನ ಮಾಯವಾಗಿ ಪ್ರೌಢವಾಗಿದ್ದಳು. ಅನಂತ ಅವಳನ್ನು ಕಣ್ತುಂಬ ನೋಡಿಯೇ ನೋಡಿದ. ಹುಡುಗಿಯರು ಎಷ್ಟೆಷ್ಟು ಬೇಗ ಬೆಳೆದು, ಪ್ರೌಢವಾಗಿ ಬಿಡುತ್ತಾರೆ ಎಂದು ಅಂದುಕೊಳ್ಳುತ್ತಿದ್ದ. ಆಶ್ರಮದಿಂದ ಅವನ ಹೆಸರಿಗೆ ಒಂದು ಪತ್ರ ಬಂದಿತ್ತು.

ಬಿಡಿಸಿ ಓದಿದ. ಸ್ವಾಮೀಜಿಯವರು ಅನಾರೋಗ್ಯದಿಂದ ಮಲಗಿದ್ದಾರೆ. ಆದಷ್ಟು ಬೇಗ ಬರುವುದು ಎಂದು ಸ್ವಾಮೀಜಿಯವರ ಪರವಾಗಿ, ಅಲ್ಲಿಯ ಸಿಬ್ಬಂದಿ ವರ್ಗದವರು ಬರೆದಿದ್ದರು.

ಕಾಗದವನ್ನು ಓದಿ ಅವನಿಗೆ ಆತಂಕದ ಜತೆಗೆ ನಾಚಿಕೆಯೂ ಆಗಿತ್ತು. ತನ್ನ ಇಲ್ಲಿಯ ಉದ್ದೇಶಗಳು ಮುಗಿದಿದ್ದರೂ, ತಾನೇಕೆ ಇನ್ನು ಇಲ್ಲಿಯೇ ಇದೀನಿ! ಲಲಿತಳ ಮಗುವನ್ನು ಎತ್ತಿ ಆಡಿಸುವ ಆಸೆಯೇ? ಪೂರ್ವ ವೃತ್ತಾಂತವನ್ನು ಮರೆತಂತೆ ಹಾಯಾಗಿದ್ದು ಬಿಟ್ಟೆನಲ್ಲ.... ಸಧ್ಯ ಕಾಗದ ಬಂದಿದ್ದು ಒಳ್ಳೆಯದೇ ಆಯ್ತು. ಇಲ್ಲಿಂದ ಬಿಡಿಸಿಕೊಂಡು ಹೋಗುವ ಅವಕಾಶ ಒದಗಿದೆ ಎಂದುಕೊಂಡು ಎಲ್ಲರಿಗೂ ವಿಷಯ ತಿಳಿಸಿದ. ಯಾರಿಗೂ ಆ ಮಾತು ಇಷ್ಟವಾಗಿಲಿಲ್ಲ. "ಲಲಿತಳ ಹೆರಿಗೆ ಆಗುವವರೆಗಾದರೂ ಇರಬಾರದೇ..." ಎಂದಳು ವೇದಮ್ಮ

"ನಾನು ಈಗ ಹೋಗಲೇ ಬೇಕು. ಸ್ವಾಮೀಜಿಯ ಆರೋಗ್ಯ ಚೆನ್ನಾಗಿಲ್ಲವಂತೆ. ಲಲಿತನಿಗೆ ಹೆರಿಗೆಯಾದ ನಂತರ ತಿಳಿಸಿ, ನಾನೇ ಒಮ್ಮೆ ಬಂದು ಹೋಗುತ್ತೀನಿ..." ಅನಂತ ಹೊರಟೇ ಬಿಟ್ಟ.

ಸ್ವಾಮೀಜಿ, ಅನಂತನೊಡನೆ ಮುಂಚಿನ ವಿಶ್ವಾಸದಿಂದ ಮಾತನಾಡಿಸಿದರೂ, ಅನಂತನಿಗೇ ಏನೋ ತಳಮಳ, ಕಳವಳ, ಅವನು ಮೊದಲಿನಂತೆ ಇಲ್ಲ ಏನೋ ಬದಲಾಗಿದಾನೆ ಎಂದು ಅರಿತರು ಸ್ವಾಮೀಜಿ ತಾವಾಗಿಯೇ ಏನನ್ನು ಪ್ರಶ್ನಿಸಲಿಲ್ಲ. ಎಂಟು ಹತ್ತು ವರ್ಷಗಳಿಂದ ಆಶ್ರಮದಿಂದ ದೂರ ವಿದ್ದವನ್ನು ಆ ಪ್ರಪಂಚದ ಆಗು ಹೋಗುಗಳಲ್ಲಿ ಬೆರೆತಿದ್ದವನು ಬದಲಾಗುವುದು ಅನಿವಾರ್ಯವಾಗಿರಬಹುದು ಎಂದುಕೊಂಡಿದ್ದರು.

"ನನಗೂ ವಯಸ್ಸಾಯಿತು, ನನಗೆ ವಿಶ್ರಾಂತಿ ಬೇಕು, ಆಶ್ರಮದ ಜವಾಬ್ದಾರಿಯನ್ನು ನಿನಗೆ ವಹಿಸಿಕೊಡಬೇಕು ಅಂತ ಅಂದ್ಕೊಂಡಿದ್ದೆ. ಅದಕ್ಕೇ ಹೇಳಿ ಕಳಿಸಿದೆ, ನಿನಗೆ ಇಷ್ಟವಿಲ್ಲದಿದ್ದರೆ ಹೇಳಿ ಬಿಡು"

ಅನಂತ ಪೆಚ್ಚಾದ ಎಂಟು ವರ್ಷಗಳ ಹಿಂದೆ, ಸ್ವಾಮೀಜಿಯ ಆಪ್ತನಾಗಿ ಎಲ್ಲಾ ನಿರ್ವಹಿಸುತ್ತಿದ್ದ. ಆಗ ಬಹುತೇಕ ಮಂದಿ, ಅವನೇ "ಮರಿ ಸ್ವಾಮೀಜಿ" ಎಂದು ಊಹಿಸಿದ್ದರೂ, ಇರಬಹುದು....ಆದರೆ ಮಧ್ಯೆ ಅವನನ್ನು ಸ್ವಾಮೀಜಿಯೇ ಬೇರೆ ಕರ್ತವ್ಯವನ್ನು ನಿರ್ವಹಿಸಲು ಕಳಿಸಿದ್ದರು. ಈಗ ಕರೆಸಿ ಈ ಮಾತನ್ನು ಹೇಳುತ್ತಿದ್ದಾರೆ. ಉಳಿದ ಎಷ್ಟೋ ಜನ ಶಿಷ್ಯಂದಿರು ತನ್ನ ಬಗ್ಗೆ ಏನೆಂದು ಕೊಳ್ಳಬಹುದು? ಅಲ್ಲದೆ ಈಗ ಇಲ್ಲಿ ಏನೇನು ಬದಲಾವಣೆಗಳಾಗಿದೆಯೋ, ತನಗೆ ತಿಳಿಯದು ಅನಂತ ಅನುಮಾನಿಸಿದ.

"ಅಲ್ಲಿನ ಜವಾಬ್ದಾರಿ ಮುಗಿದಿದೆ. ಮತ್ತೆ ಆಶ್ರಮಕ್ಕೆ ಬಂದು ಬಿಡುವ

ತವಕದಿಂದ ಇದಾನೆ ಅಂತ ಭೈರಪ್ಪ ಹೇಳಿದ ನೆನಪು. ಇರಲಿ ಬಿಡು, ನಿನಗೆ ಇಷ್ಟವಿಲ್ಲದಿದ್ದರೆ ಬಲವಂತವಿಲ್ಲ..."

"ಹಾಗೇನಿಲ್ಲ ಅನಂತ ನಾಚುತ್ತಾ ನುಡಿದ. ನಿಮ್ಮ ಸ್ಥಾನವನ್ನು ತುಂಬುವ ಸಾಮರ್ಥ್ಯ ನನಗಿದೆಯೇ ಅಂತ"

"ನಿನ್ನ ಸಾಮರ್ಥ್ಯದ ಬಗ್ಗೆ ಬೇರೆಯವರು ಹೇಳಬೇಕು. ಒಂದು ದಿನ ಬಹಿರಂಗವಾಗಿ ಈ ವಿಷಯವನ್ನು ಎಲ್ಲರ ಮುಂದಿಡುತ್ತೇನೆ. ಅವರೆಲ್ಲರೂ ಏನನ್ನುತ್ತಾರೋ, ಅದಕ್ಕೆ ನೀನು ಸಿದ್ಧನಾಗಿರಬೇಕು"

ಇಲ್ಲವೆನ್ನಲಾಗದೇ, ಹೂಂ ಅನ್ನಲಾರದೇ ಅನಂತ ಚಡಪಡಿಸುವುದನ್ನು ಸ್ವಾಮೀಜಿ ಅರಿತರು. "ಆಗಲಿ ನಿನಗೆ ಸ್ವಲ್ಪ ಸಮಯ ಕೊಡುತ್ತೇನೆ, ನೀನು ಆಲೋಚಿಸಿ, ನಿನ್ನ ಅಭಿಪ್ರಾಯವನ್ನು ತಿಳಿಸು" ಸ್ವಾಮೀಜಿ ಕಣ್ಣುಗಳನ್ನು ಮುಚ್ಚಿದರು. ಅನಂತ ಕೈ ಮುಗಿದು ಹೊರಬಂದ.

ಎರಡು ದಿನಗಳು ಕಳೆದರೂ, ಅವನಿಂದ ನಿಶ್ಚಯಿಸಲಾಗಿರಲಿಲ್ಲ. ಏನೋ ಅಸ್ಥಿರತೆ ಅವನನ್ನು ಬಾಧಿಸುತ್ತಿತ್ತು. ತನಗೆ ಆಶ್ರಮದ ಜವಾಬ್ದಾರಿ ಬೇಕಿಲ್ಲ ಎಂದು ಹೇಳಲಾರ. ಬೇಕೆಂದು ಒಪ್ಪಿ ವಹಿಸಿಕೊಳ್ಳಲಾರ ಇದ್ದಕ್ಕಿದ್ದಂತೆ ಏನನ್ನೋ ನೆನಪಿಸಿಕೊಂಡು ಸ್ವಾಮೀಜಿಯ ಬಳಿಗೆ ಬಂದ

ಸ್ವಾಮೀಜಿ ಅವನನ್ನು ನಗು ಮುಖದಿಂದ ಬರಮಾಡಿಕೊಂಡರು ಧೈರ್ಯಗುಂದಿದವನಂತೆ ಕಂಡವನನ್ನು ಸಮಾಧಾನಗೊಳಿಸುವಂತೆ ಮಾತನಾಡಿಸಿದರು.

"ನಿನ್ನ ಮನಸ್ಸನ್ನು ಏನೋ ಕೊರೀತಿದೆ. ಅದೇನು ಅಂತ ಹೇಳಿಬಿಡು. ನಿನ್ನ ಹೃದಯ ಹಗುರವಾಗುತ್ತದೆ. ಒಂದು ವೇಳೆ ನೀನೇನಾದರೂ ತಪ್ಪು ಮಾಡಿದ್ದರೆ.... ಅದಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಸಿದರಾಯ್ತು."

"ಇಲ್ಲ ನಾನು ಏನೂ ತಪ್ಪು ಮಾಡಿಲ್ಲ," ಅನಂತನೂ ಬೆವರುತ್ತಿದ್ದ. ಸ್ವಾಮೀಜಿಗೆ ಅಯ್ಯೋ ಎನಿಸಿತ್ತು.

"ನಿನ್ನ ಮನಸ್ಸು ಸ್ಥಿರತೆಯನ್ನು ಕಳೆದುಕೊಂಡಿದೆ. ನೀನು ಹಿಂದಿನ ಅನಂತನಲ್ಲ. ನಿನ್ನನ್ನು ಅಲ್ಲಿಗೆ ಕಳಿಸಿ, ಬಹುಶಃ ನಾವೇ ಅಪರಾಧವನ್ನೆಸಗಿರಬೇಕು. ನಿನ್ನ ಈ ಸ್ಥಿತಿಗೆ ಪರೋಕ್ಷವಾಗಿ ನಾವೇ ಕಾರಣವಾಗುತ್ತೇವೆ."

"ಇಲ್ಲ.... ಇಲ್ಲ...." ಅನಂತ ತೊದಲಿದ ಅವನ ಬವಣೆಯನ್ನು ಕಂಡು ಸ್ವಾಮೀಜಿ ಹೆದರಿದರು. "ನಿನಗೆ ವಿಶ್ರಾಂತಿಯ ಅಗತ್ಯವಿದೆ.... ನೀನಿನ್ನು ಹೋಗಬಹುದು. ಜೈ ಜಗನ್ನಾಥಾ" ಎಂದು ಕೈ ಎತ್ತಿ ಹರಸಿದರು.

ಅನಂತ ನಿಟ್ಟುಸಿರು ಬಿಡುತ್ತಾ ಹೊರಗೆ ಬಂದ. ಹುಣ್ಣಿಮೆಯ ರಾತ್ರಿ, ಬೆಳದಿಂಗಳ ಆಶ್ರಮವನ್ನೆಲ್ಲಾ ಆಕ್ರಮಿಸಿತ್ತು. ಬೀಸುತ್ತಿದ್ದ ತಂಗಾಳಿ ಚಳಿಯ

ತೀವ್ರತೆಯನ್ನು ಹೆಚ್ಚಿಸಿತ್ತು. ಅದಾವುದರ ಅರಿವಲ್ಲದಂತೆ, ತನಗೆ ತೋಚಿದ ದಾರಿಯನ್ನು ಹಿಡಿದ. ಬಿಳಿಯ ಜುಬ್ಬಾ ಪೈಜಾಮ ಧರಿಸಿದ್ದ, ದಟ್ಟವಾದ ಹೆಜ್ಜೆಯನ್ನು ಹಾಕುತ್ತಾ ಮುಂದೆ ಮುಂದೆ ನಡೆದ. ಅವನ ಕಾಲುಗಳು ಅವನನ್ನು ಮಾವಿನ ತೋಪಿನೊಳಕ್ಕೆ ಕರೆದೊಯ್ದಿದ್ದವು. ಭೈರಪ್ಪನ ಸಮಾಧಿಯನ್ನು ಕಂಡೊಡನೆ, ಮಾಂತ್ರಿಕ ಶಕ್ತಿಗೆ ಒಳಗಾದವನಂತೆ, ಸೀದಾ ಸಮಾಧಿಯ ಬಳಿಗೆ ಬಂದು ಕತ್ತು ತಗ್ಗಿಸಿ, ಮೊಳಕಾಲುಗಳನ್ನೂರಿ ಕುಳಿತವನಿಗೆ ನೆಮ್ಮದಿ, ಮಾವಿನ ತೋಪಿನಲ್ಲಿ ಆವರಿಸಿದ್ದ ಮಂದ ಕತ್ತಲು ಅವನನ್ನು ವಿಚಲಿತಗೊಳಿಸಲಿಲ್ಲ. ಕ್ರಿಮಿಕೀಟಗಳ ಭಯ ಅವನನ್ನು ಅಲುಗಾಡಿಸಲಿಲ್ಲ. ಪ್ರಾಣಿ, ಪಕ್ಷಿಗಳ ಕಲರವ ಅವನನ್ನು ತಾಕಲಿಲ್ಲ. ಒಂದು ಗಳಿಗೆ, ತಣ್ಣನೆಯ ಶೀತಲಗಾಳಿ ಅವನನ್ನು ಸೋಕಿದಂತಾಯ್ತು. ಗಡಗಡನೆ ನಡುಗಿ ಹಾಗೇ, ಬಿದ್ದು ಬಿಟ್ಟ. ಆದರೂ ಅವನಿಗೆ ನೋವಾಗಲಿಲ್ಲ. ಎಲ್ಲಿಯೋ ತೇಲಿ ಹೋಗುತ್ತಿರುವ ಅನುಭವ.... ಹಗುರವಾದ ಮೈ.... ಎಲ್ಲೋ ದೂರ ದೂರ ಹೋಗುತ್ತಿರುವಂತೆ....ಎಲ್ಲಾ ಬಂಧನಗಳಿಂದ ಮುಕ್ತನಾದವನಂತೆ, ಹಿತವಾದ ಅನುಭವದಿಂದ ಕಣ್ಣು ಮುಚ್ಚಿ ಸುಖಿಸಿದ.

ತಿಂಗಳುಗಳೇ ಕಳೆದರೂ, ಅನಂತನಿಂದ ಯಾವ ವರ್ತಮಾನವೂ ಬಂದಿರಲಿಲ್ಲ. ಅಂತೂ ಮತ್ತೆ ಅಲ್ಲಿಗೇ ಹೋಗಿ ಸೇರಿಬಿಟ್ಟ ಅಂತ ವೇದಮ್ಮ ಅಲವತ್ತುಕೊಂಡಳು. ಲಲಿತ ಕೂಡ ಅದೇ ಮಾತನ್ನಾಡಿದಾಗ, ಅನಂತ, ಲಲಿತಳ ಹೆರಿಗೆಯಾದ ನಂತರ ಬರ್ತೀನಿ ಅಂತ ಅಂದಿದ್ದ. ನಾವುಗಳೇ ಏಕೆ ಒಂದು ಸಾರಿ ಹೋಗಿ ಬರಬಾರದು ಅಂತ ವೇದಮ್ಮ ಅಂದುಕೊಂಡಳು.

ಆದರೆ ಅದನ್ನು ಪುರುಷೋತ್ತಮ ನಯವಾಗಿ ನಿರಾಕರಿಸಿದ." ಲಲಿತಳಿಗೆ ಈ ಸ್ಥಿತಿಯಲ್ಲಿ ಪ್ರಯಾಣ ಮಾಡಿಸುವುದು ಬೇಡ. "ನನಗೆ ಬಿಡುವಾದಾಗ ನಾನೇ ಹೋಗಿ ನೋಡಿಕೊಂಡು ಬರ್ತೀನಿ" ಎಂದಿದ್ದ.

"ಸ್ವಾಮೀಜಿಗೆ ಹುಶಾರಿಲ್ಲ ಅಂತ ಹೋದವನು, ಅಲ್ಲಿ ಪರಿಸ್ಥಿತಿ ಹೇಗಿದೆಯೋ..." ಅವನು ಲೊಚಗುಟ್ಟಿದಾಗ, ಸತ್ಯ ನುಡಿದಿದ್ದ.

"ಸ್ವಾಮೀಜಿ ತುಂಬಾ ಒಳ್ಳೆಯವರು ಅಂತ ಅಂಕಲ್ ಹೇಳುತ್ತಿದ್ದರು. ನಾನು ಅವರನ್ನು ನೋಡಬೇಕು, ನಾನು ಬರ್ತೀನಿ"

"ಈಗ ಬೇಡ ಸತ್ಯ ಪ್ರಶಾಂತ ಟೂರ್‌ನಿಂದ ಬಂದಿಲ್ಲ, ಲಲಿತ ಒಬ್ಬಳೇ ಆಗ್ತಾಳೆ, ನೀನು ಅವಳ ಜತೆಯಲ್ಲಿರು, ನಾನು ಹೀಗೇ ಹೋಗಿ ಹಾಗೆ ಬಂದು ಬಿಡ್ತೀನಿ"

ಪುರುಷೋತ್ತಮ ಬಿಡುವು ಮಾಡಿಕೊಂಡು ಹೊರಟ. ಆಶ್ರಮದ ಕಳೆಯೇ ಬದಲಾಯಿಸಿ ಹೋಗಿದೆಯೆಂದೆನಿತ್ತು. ಪುರುಷೋತ್ತಮನ

ಪರಿಚಯಸ್ಥರು ಮುಗುಳ್ನಕ್ಕು ವಂದಿಸಿದರೇ ಹೊರತು, ಏನೂ ಮಾತನ್ನಾಡಿರಲಿಲ್ಲ. ಭೈರಪ್ಪ ಬದುಕಿದ್ದಿದ್ದರೇ ಎಂದೆನಿಸದೇ ಇರಲಿಲ್ಲ. ಎಷ್ಟೋ ಹೊತ್ತಿನ ನಂತರ ಸ್ವಾಮೀಜಿಯರನ್ನು ಭೇಟಿ ಮಾಡಲು ಸಾಧ್ಯವಾಯಿತು. ಅವರು "ಜೈ ಜಗನ್ನಾಥಾ" ಎಂದು ಹಾರೈಸಿ ಕುಶಲವನ್ನು ವಿಚಾರಿಸಿದರು. ಪುರುಷೋತ್ತಮ ವಿಷಯಕ್ಕೆ ಬಂದ. ಅನಂತ ಬಂದು ನಾಲ್ಕು ತಿಂಗಳ ಮೇಲಾಯಿತು. ನಮ್ಮ ಸೊಸೆ ಲಲಿತಂಗೆ ದಿನ ತುಂಬಿದೆ, ಒಂದು ಸಲ ಅನಂತನ್ನ ನೋಡಿ ಮಾತನಾಡಿಸುವ ಆಸೆ. ಇಷ್ಟು ಹೊತ್ತಾದರೂ ಅನಂತನ ಸುಳಿವಿಲ್ಲ, ಯಾಕೆ? ಹೊರಗೆಲ್ಲಾದರೂ ಹೋಗಿದ್ದಾನೆಯೇ"

"ಜಗನ್ನಾಥನ ಇಚ್ಛೆ" ಎನ್ನುತ್ತಾ ಸ್ವಾಮೀಜಿ ನಡೆದ ವಿಷಯವನ್ನು ತಿಳಿಸಿದರು. "ನಮಗೂ ಯಾವ ಅನುಮಾನವಿರಲಿಲ್ಲ, ಆಗಾಗ್ಗೆ ಭೈರಪ್ಪನ ಸಮಾಧಿಯ ಬಳಿಗೆ ಹೋಗಿ ಕೂತಿರುತ್ತಿದ್ದ. ಊರಿಗೆ ಹೋಗಿ ಬರುತ್ತೇನೆಂದು ಹೇಳಿದ್ದರೆ ಖಂಡಿತಾ ಕಳಿಸಿಕೊಡುತ್ತಿದ್ದೆ. ಬಲವಂತವಾಗಿ ಇಲ್ಲಿ ಯಾರನ್ನು ಇರಿಸಿಕೊಳ್ಳುವುದಿಲ್ಲ, ಊರಿನಿಂದ ವಾಪಸ್ಸಾದವನು ಹಿಂದಿನ ಅನಂತನಾಗಿರಲಿಲ್ಲ. ಏನೋ ಮಹತ್ವದ ಬದಲಾವಣೆ ಅವನ ಮನಸ್ಸಿನಲ್ಲೇನಿದೆ ಅಂತ ಬಾಯಿ ಬಿಟ್ಟು ಹೇಳಲಿಲ್ಲ. ಭೈರಪ್ಪನ ಸಮಾಧಿಯ ಬಳಿ ಹೋಗಿ ಆತ್ಮಾರ್ಪಣೆ ಮಾಡಿಕೊಂಡಿದಾನೆ. ಹುಚ್ಚು ಹುಡುಗ...."

"ಅಂದರೆ... ಆತ್ಮಹತ್ಯೆಯೇ..." ಪುರುಷೋತ್ತಮ ಕೇಳಬೇಕೆಂದುಕೊಂಡರೂ ಕೇಳಲಾಗಲಿಲ್ಲ.

"ಅವನ ಅಂತ್ಯವೇ ಒಂದು ಗೂಢ ರಹಸ್ಯ...ಅಲ್ಲಿ ಅವನಿಗೆ ಏನಾದರೂ ಬೇಸರವಾಗಿತ್ತೇ?"

"ಇಲ್ಲ, ಭೈರಪ್ಪನ ಅಗಲಿಕೆಯಿಂದ ಬೇಸರಗೊಂಡಿದ್ದ ಅಂತ ಅನ್ನಿಸುತ್ತೆ. ಆದರೆ ಅದನ್ನು ತೋರ್ಪಡಿಸಿರಲಿಲ್ಲ"

"ಹೌದು, ಭೈರಪ್ಪ ಅನಂತನ ನೆರಳಿನಂತೆ ಅವನ ಅಗಲಿಕೆ ಅವನನ್ನು ಅಲುಗಾಡಿಸಿತ್ತು. ಅಂತೂ ಭೈರಪ್ಪನನ್ನು ಬಿಟ್ಟಿರಲಾರದೇ ಅವನ ಬಳಿಗೆ ಹೊರಟು ಹೋದ. ಎಲ್ಲಾ ಜಗನ್ನಾಥನ ಇಚ್ಛೆ ನಮ್ಮ ಕೈಲೇನಿದೆ?" ಸ್ವಾಮೀಜಿ ಮಾತು ಮುಗಿಯಿತು ಎನ್ನುವಂತೆ ನುಡಿದಾಗ ಪುರುಷೋತ್ತಮ ಎದ್ದ. ಅನಂತನ ಸಮಾಧಿಯ ಬಳಿಗೆ ಹೋಗಿ ಶ್ರದ್ಧಾಂಜಲಿಯನ್ನು ಅರ್ಪಿಸುವ ಮನಸ್ಸಾಯಿತು. ವಿಚಾರಿಸಿಕೊಂಡು ಹೊರಟ.

ಭೈರಪ್ಪನ ಸಮಾಧಿಯ ಪಕ್ಕದ್ದೇ ಅನಂತನ ಸಮಾಧಿ. ನೋಡುತ್ತಿದ್ದಂತೇ ಪುರುಷೋತ್ತಮನ ಕಣ್ಣುಗಳು ತುಂಬಿ ಬಂದವು. ಹೃದಯ ಭಾರವಾಯಿತು.

ಹೀಗೇಕೆ ಮಾಡಿದೆ ಅನಂತ? ನಾನು ಲಲಿತಂಗೆ ಸತ್ಯಂಗೆ ಏನು

ಹೇಳಲಿ! ಭೈರಪ್ಪನ ನಿಧನ ಕುರಿತೇ ಅವರಿಗೆ ತಿಳಿದಿಲ್ಲ. ಲಲಿತ ಈ ದುಃಖವನ್ನು ಹೇಗೆ ಸಹಿಸುತ್ತಾಳೆ? ಅವಳಿಗೆ ಹೆರಿಗೆಯಾಗುವವರೆಗೆ ನೀನು ಅಲ್ಲಿಯೇ ಇದ್ದಿದ್ದರೆ ಚೆನ್ನಾಗಿತ್ತು. ನಿನ್ನನ್ನು ಇಲ್ಲಿಗೆ ಹೋಗಲು ಬಿಡಬಾರದಾಗಿತ್ತು. ಇಲ್ಲಿಗೆ ಬಂದು ಸೇರಿ, ನೀನು ನಮಗೆ ಮೋಸ ಮಾಡಿಬಿಟ್ಟೆ. ಸತ್ಯಂಗೆ ಏನು ಹೇಳಲಿ!" ಸಮಾಧಿಯ ಮೇಲೆ ಹೂಗಳನ್ನು ಇರಿಸಿದ.

ಭಾರವಾದ ಹೃದಯವನ್ನು ಹೊತ್ತು ಊರಿಗೆ ವಾಪಸ್ಸಾದ ಬಸುರಿ ಹುಡುಗಿ ಲಲಿತಳನ್ನು ದುಃಖಿತಳನ್ನಾಗಿ ಮಾಡುವ ಮನಸ್ಸಿಲ್ಲದೇ "ಅನಂತನ ಜವಾಬ್ದಾರಿ ಹೆಚ್ಚಾಗಿದೆ, ಅವನಿಗೆ ಬಿಡುವಿಲ್ಲ.... ನಿಮ್ಮನ್ನೆಲ್ಲಾ ತುಂಬಾ ವಿಚಾರಿಸಿದ ಎಂದು ಸುಳ್ಳು ಹೇಳಿದ ಎಲ್ಲರೂ ಅವನನ್ನು ನಂಬಿದರು.

ಲಲಿತಳಿಗೆ ಸೀಮಂತ ಮಾಡುವ ಆಸೆಯನ್ನು ವೇದಮ್ಮ ವ್ಯಕ್ತಪಡಿಸಿದಾಗ, ಪುರುಷೋತ್ತಮ ಬೇಡ ಎನ್ನಲಿಲ್ಲ. "ನಮ್ಮ ಮನೆಯಲ್ಲಿ ಅದನ್ನೆಲ್ಲಾ ನಡೆಸಿಕೊಡುವ ಹಿರಿಯ ಹೆಂಗಸರು ಯಾರೂ ಇಲ್ಲವಲ್ಲ" ಎಂದಿದ್ದ.

"ಪರವಾಗಿಲ್ಲ...ನಮ್ಮ ಮನೇಲಿ, ಮನೆ ಮಟ್ಟಿಗೆ ಮಾಡಿದರಾಯ್ತು ನಿಮ್ಮ ಕಡೆ ಹತ್ತಿರದ ನೆಂಟರಿಷ್ಟರಿಗೆ ಹೇಳಿ ಬಿಡಿ" ವೇದಮ್ಮ ಜವಾಬ್ದಾರಿ ಹೊತ್ತುಕೊಂಡಳು. ಸತ್ಯ ತಾನಾಗಿಯೇ ದೊಡ್ಡಮ್ಮನಿಗೆ ಸಹಾಯ ಮಾಡುವ ಕೆಲಸವನ್ನು ವಹಿಸಿಕೊಳ್ಳದಿದ್ದರೂ, ಲಲಿತ ಏನೂ ಮಾಡಲಾಗುವುದಿಲ್ಲವೆಂದು ತಿಳಿದು ಮಾಡಬೇಕಾಗಿತ್ತು.

ವೇದಮ್ಮ ಸಡಗರದಿಂದ ಅಟ್ಟದ ಮೇಲಿದ್ದ ವಸ್ತುಗಳನ್ನು ತೆಗೆದು ಕೊಡುವಂತೆ ಸತ್ಯನನ್ನು ಅಟ್ಟ ಹತ್ತಿಸಿದಳು. ಅಟ್ಟದ ಇನ್ನೊಂದು ಬದಿಗಿದ್ದ ರೂಮನ್ನು ಅಲ್ಲಿಂದ ಸತ್ಯ ಇಣುಕಿ ನೋಡಿದ. ಕಿಟಕಿ ಬಾಗಿಲು ಮುಚ್ಚಿ, ಗಾಳಿ ಬೆಳಕಿನ ಅಂಶವೇ ಇಲ್ಲದೆ ರೂಮಿನಿಂದ ಒಂದು ತರಹ ತಲೆ ಧಿಂ ಎನ್ನುವ ವಾಸನೆ, ಸದಾ ರೂಮಿನ ಬಾಗಿಲಿಗೆ ಬೀಗ ಹಾಕಿರುತ್ತಿದ್ದುದರಿಂದ ಯಾರೂ ಹೋಗಿರಲಿಲ್ಲ.

"ಬೇಡವಾದ ಏನೇನೋ ಸಾಮಾನುಗಳಿವೆ. ದಿನಗಟ್ಟಲೇ ಉಪಯೋಗಿಸುವುದಿಲ್ಲ ಏನಿಲ್ಲ, ಬಿದ್ದಿರಲಿ" ಎಂದು ಎಂದೋ ದೊಡ್ಡಮ್ಮ ಹೇಳಿದ್ದ ಮಾತು ನೆನಪಿಗೆ ಬಂತು. ರೂಮಿನೊಳಕ್ಕೆ ಎಂದೂ ಯಾರೂ ಹೋಗಿರಲಿಲ್ಲ ಆ ಕುತೂಹಲವೂ ಇರಲಿಲ್ಲ. ಈ ದಿನ ಇದ್ದಕ್ಕಿದ್ದಂತೆ ಸತ್ಯನಲ್ಲಿ ಆ ಕುತೂಹಲ ಉದಯಿಸಿತು. ಏನೇನು ಅವಶೇಷಗಳಿವೆಯೋ, ಆವಿಷ್ಕಾರ ಮಾಡಿ ನೋಡಿಯೇ ಬಿಡ್ತೀನಿ... ಎನ್ನುತ್ತಾ ಉತ್ಸಾಹದಿಂದ ಆ ರೂಮಿನೊಳಕ್ಕೆ ಜಿಗಿದ. ಬೇಡವಾದ ಹಳೇ ಸಾಮಾನುಗಳು ಎಲ್ಲೆಂದರಲ್ಲಿ ಬಿದ್ದಿದ್ದವು. ಅರೆ ತುಂಬಿದ ಪೆಟ್ಟಿಗೆಗಳು ಕೆಟ್ಟದಾಗಿ ಸುತ್ತಿಟ್ಟ ಹಾಸಿಗೆಗಳು ಗಂಟು ಕಟ್ಟಿಟ್ಟ ಹಳೆ ಬಟ್ಟೆಗಳು,

ಗೋಡೆಯ ಮೊಳೆಗಳಿಗೆ ನೇತು ಹಾಕಿದ ಚೀಲಗಳು, ಹಳೆಯ ಒಂದು ಮಂಚ, ಮಂಚದ ಮೇಲೆ ಚೆದುರಿದಂತೆ ಬಿದ್ದಿದ್ದ ಏನೇನೋ ಪುಸ್ತಕಗಳು, ಕುತೂಹಲದಿಂದ ಪುಸ್ತಕಗಳನ್ನು ಎತ್ತಿ ಧೂಳನ್ನು ಕೊಡವಿ ತಿರುಗಿಸಿ ನೋಡಿದ. ಕೆಲವು ಕತೆ ಪುಸ್ತಕಗಳು ಕೆಲವು ಪಠ್ಯಪುಸ್ತಕಗಳು ಹಾಳೆಯನ್ನು ತಿರುವಿದ. ಅನಂತನ ಹೆಸರು ಬರೆದಿತ್ತು. ಇಂಜಿನಿಯರಿಂಗ್ ಪುಸ್ತಕ ಹಾಗೇ ಹಾಳೆಗಳನ್ನು ಸರಸರನೆ ತಿರುಗಿಸಿದಾಗ ಒಂದು ಫೋಟೋ ಕೆಳಗೆ ಬಿತ್ತು. ಧೂಳನ್ನು ಒರೆಸಿ, ಕುತೂಹಲದಿಂದ ನೋಡಿದ... ಅನಂತ.. .ಅನಂತನ ಪಕ್ಕ ನಿಂತಿರುವ ಈ ಹೆಂಗಸು ಯಾರು? ಎಲ್ಲಿಯೋ ನೋಡಿದೆಯಂತಿದೆಯಲ್ಲಾ... ಹ್ಞಾ... ಲಲಿತನ ಹೋಲಿಕೆ ಇದೆ. ಆದರೆ ಆದರೆ ಈ ಫೋಟೋ ತೆಗೆದಿದ್ದು ಯಾವಾಗ? ಅಂಕಲ್ ಚಿಕ್ಕವರಂತೆ ಕಾಣುತ್ತಾರಲ್ಲ.... ಅನಂತನಿಗೂ ನಮಗೂ ಏನು ಸಂಬಂಧ ಅಂತ ಸರಿಯಾಗಿ ತಿಳಿದಿಲ್ಲ. ವೇದಮ್ಮನ್ನ ಕೇಳಿದರಾಯ್ತು ಎಂದುಕೊಂಡು ಫೋಟೋವನ್ನು ಮತ್ತೆ ಪುಸ್ತಕದೊಳಗಿಟ್ಟು ಇನ್ನೊಂದು ಪುಸ್ತಕವನ್ನು ತೆಗೆದ. ಅದರ ಕೆಳಗೆ ಜೋಡಿಸಿಟ್ಟ ಹತ್ತಾರು ಪತ್ರಗಳು ಕುತೂಹಲದಿಂದ ಬಿಡಿಸಿ ಓದಿದ... ಪ್ರೀತಿಯ ಸುಗುಣಳಿಗೆ ಎಂದು ಪ್ರಾರಂಭವಾಗಿತ್ತು. ಕೆಳಗಿನ ಸಹಿಯನ್ನು ನೋಡಿದ ಅವನ ಹೃದಯದ ಚಲನೆ ನಿಂತಂತಾಯ್ತು. ಸುಗುಣ ನನ್ನ ತಾಯಿಯ ಹೆಸರು, ಸ್ಕೂಲಿಗೆ ಸೇರಿಸುವಾಗ ಅರ್ಜಿ ಫಾರಂನಲ್ಲಿ ತಂದೆಯ ಹೆಸರನ್ನು ಬರೆದಿರಲಿಲ್ಲ. ಪೋಷಕರ ಹೆಸರಿನ ಕಾಲಂನಲ್ಲಿ ಗೋಪಾಲನ ಹೆಸರನ್ನು ಬರೆದಿತ್ತು. ಗೋಪಾಲ ಯಾರು ಎಂದು ಜ್ಞಾಪಕವಿಲ್ಲ, ಬಹುಶಃ ಸುಗುಣಳ ತಂದೆ ಇರಬಹುದು ಎಂದು ಭಾವಿಸಿದ್ದ. ವೇದಮ್ಮನ್ನ ಆ ಬಗ್ಗೆ ಕೇಳಿದಾಗ ಅವಳು ಸರಿಯಗಿ ಉತ್ತರಿಸಿರಲಿಲ್ಲ ಅನಂತ ಆ ಮನೆಗೆ ಬಂದು ಸೇರಿ ಪೋಷಕನಾದ ಮೇಲೆ, ಅವನಾಗಲೀ, ಲಲಿತಳಾಗಲೀ, ತನ್ನ ತಂದೆ ತಾಯಿಯರ ಬಗ್ಗೆ ಹೆಚ್ಚು ಚಿಂತಿಸಿರಲಿಲ್ಲ, ತಾಯಿಂಯು ಸ್ಥಾನವನ್ನು ವೇದಮ್ಮ ಆಕ್ರಮಿಸಿಕೊಂಡಿದ್ದಳು. ತಾತನ ಪ್ರೀತಿಯನ್ನು ಭೈರಪ್ಪ ತೋರುತ್ತಿದ್ದ, ಅನಂತ ಅಂಕಲ್ ಆಗಿದ್ದ. ಈ ಅಂಕಲ್ ಅನಂತನಿಗೂ, ಸುಗುಣಳಿಗೂ ಏನು ಸಂಬಂಧ? ಈ ಸುಗುಣ, ಹಾಗೂ ನನ್ನ ತಾಯಿ ಒಬ್ಬಳೇನೇ.... ಇದುವರೆಗೂ ತಮಗೆ ತಿಳಿಯದ ರಹಸ್ಯ ಏನೋ ಅಡಗಿದೆ ಎಂಬ ಅನುಮಾನ ಪ್ರಬಲವಾಯಿತು. ಆ ಫೋಟೋವನ್ನು ಹಿಡಿದು ಮತ್ತೆ ಅಟ್ಟ ಹತ್ತಿ ಈ ಕಡೆಯಿಂದ ಕೆಳಗೆ ಇಳಿದ. ಲಲಿತ ಪ್ರತ್ಯಕ್ಷಳಾದಳು.

"ಅಲ್ಲಿ ಕೂತು ಏನು ಮಾಡ್ತಿದ್ಯೋ...? ಅದೆಷ್ಟು ಹೊತ್ತು?"

"ಏನಿಲ್ಲ" ಅಂತ ಬಾಯಿ ಹೇಳಿದರೂ, ಲಲಿತಳಿಗೆ ತೋರುವ ಮನಸ್ಸಾಗಿತ್ತು. ಅಷ್ಟರಲ್ಲಿ ವೇದಮ್ಮ ಬಂದಳು.

"ಅಲ್ಲಪ್ಪಾ... ಅದೆಷ್ಟು ಹೊತ್ತು? ನೀನು ಎಲ್ಲೋ ಹೊರಟುಹೋದೆ ಅಂತ ಅಂದ್ಕೊಂಡೆ.... ಅದ್ಸರಿ ಇಷ್ಟು ಹೊತ್ತು ಅಲ್ಲಿ ಕೂತು ಏನು ಮಾಡ್ತಿದ್ದೆ? ಕತೆ ಪುಸ್ತಕ ಓದ್ತಾ ಇದ್ದೆಯಾ? ತಮಾಷೆ ಮಾಡುವಂತೆ ಆಡಿದಳು.

"ಸ್ವಾರಸ್ಯವಾದ್ದು ಏನೇನೋ ಸಿಕ್ತು, ನೋಡ್ತಿದ್ದೆ? ಗಂಭೀರವಾಗಿ ಹೇಳಿ ತನ್ನ ಕೈಗಳನ್ನು ನೋಡಿಕೊಂಡ.

"ಮಣೆಗಳನ್ನು ಪಾತ್ರೆಗಳನ್ನು ತೆಗೆದು ಇಳಿಸಲೇ ಇಲ್ಲ ನೀನು. ಕೆಲಸದವಳು ಬಂದಾಗ ತೊಳೆಸಬೇಡವೆ? ನನ್ನ ಕೈಲಿ ಏಣಿ ಹತ್ತುಕ್ಕಾಗಲ್ಲ, ಲಲಿತ ಹತ್ತಲೇಬಾರದು. ನಿನಗೆ ಹೇಳಿದರೆ ಹೀಗೆ..."

ಲಲಿತ ಅವನನ್ನೇ ಗದರಿದಳು. "ಯಾಕೆ ಹೀಗ್ಮಾಡ್ತೀಯೋ, ಸತ್ಯ. ಕೇಳಿದ್ದನ್ನು ಇಳಿಸಬಾರದಾ?

"ಲಲಿತಾ ಇಲ್ಲಿ ಬಾ, ಒಂದು ವಿಷಯ.... ಅಷ್ಟರಲ್ಲಿ ಲಲಿತಾ ಅಲ್ಲಿಂದ ಮರೆಯಾಗಿದ್ದಳು. ಪ್ರಶಾಂತ ಬಂದಿದ್ದ ಸತ್ಯ ಪೆಚ್ಚಾದ ವೇದಮ್ಮನನ್ನು ಕೇಳಿದರೆ? ಎಂದುಕೊಂಡು, ಅವಳ ಕಡೆ ತಿರುಗಿದ. ವೇದಮ್ಮ ಪುರುಷೋತ್ತಮನೊಡನೆ ಮಾತನಾಡುತ್ತಿದ್ದಳು.

"ಸರಿ ಈಗಂತೂ ಕೇಳಲಾಗುವುದಿಲ್ಲ, ಇವರೆಲ್ಲ ಹೋದಮೇಲೆ ಎಂದುಕೊಂಡು ಅದನ್ನೆಲ್ಲ ಅಲ್ಲಿಯೇ ಇದ್ದ ಒಂದು ಬುಟ್ಟಿಯಲ್ಲಿ ಅಡಗಿಸಿ ಮತ್ತೆ ಅಟ್ಟ ಹತ್ತಿ ವೇದಮ್ಮನಿಗೆ ಬೇಕಾಗಿದ್ದ ಪಾತ್ರೆ ಪಡಗವನ್ನು ಇಳಿಸಿಕೊಟ್ಟು, ಸ್ನಾನ ಮಾಡಲೆಂದು ಬಚ್ಚಲು ಮನೆಗೆ ಹೋದ. ಸ್ನಾನ ಮಾಡುತ್ತಾ ಹಾಗೇ ಆಲೋಚಿಸಿದ ಹಾಗೇ ಆ ರೂಮಿನಲ್ಲಿ ರಹಸ್ಯವನ್ನು ಅರಹುವ ಏನೇನು ವಸ್ತುಗಳಿವೆಯೋ, ಒಮ್ಮೆ ತಾನು ನೋಡಲೇಬೇಕು. ಅದಕ್ಕೆ ಮೊದಲು ದೊಡ್ಡಮ್ಮನ್ನ ಕೇಳಬೇಕು, ಅವರಿಗೀಗ ಬಿಡುವಿಲ್ಲ.... ಸತ್ಯ ಮತ್ತೆರಡು ಬಾರಿ ಗುಟ್ಟಾಗಿ ಅಟ್ಟ ಹತ್ತಿ ಆರೂಮಿನಲ್ಲಿಳಿದು, ಕೆದಕಾಡಿದರೂ ಕುತೂಹಲವನ್ನು ಹೆಚ್ಚಿಸುವ ಯಾವ ವಸ್ತುವೂ ಸಿಕ್ಕಿರಲಿಲ್ಲ. ಪೆಟ್ಟಿಗೆ ತುಂಬಾ ಉಡಲು ಯೋಗ್ಯವಾದ ಬಟ್ಟೆಗಳು, ನಾನಾ ಬಗೆಯ ಆಟದ ಸಾಮಾನುಗಳು, ಅವುಗಳನ್ನು ನೋಡಲು ಆಸಕ್ತಿ ಹುಟ್ಟಲಿಲ್ಲ.

ಎರಡು ದಿನಗಳು ಕಳೆದರೂ ವೇದಮ್ಮ ಒಂಟಿಯಗಿ ಸಿಗಲಿಲ್ಲ. ಲಲಿತ ಪ್ರಶಾಂತ ಸಹ ಅಲ್ಲಿಯೇ ಇದ್ದರು. ಪುರುಷೋತ್ತಮ ಊಟದ ಸಮಯ ದಲ್ಲಿ ಬಂದುಹೋಗುತ್ತಿದ್ದ. ಸತ್ಯನ ಮುಖದ ಮ್ಲಾನತೆಯನ್ನು ಕಂಡು ಪುರು ಷೋತ್ತಮ ವಿಚಾರಿಸಿದ್ದ. "ಯಾಕೆ ಹುಶಾರಿಲ್ವಾ? ಒಂಥರಾ ಇದೀಯಲ್ಲಾ?"

"ಹುಶಾರಾಗಿದೀನಿ, ಯಾಕೋ ಬೇಜಾರು. ಅಂಕಲ್ ಬಗ್ಗೆ ಯೋಚಿಸ್ತಿದ್ದೆ"

ಪುರುಷೋತ್ತಮ ಸತ್ಯನ ಕಡೆ ನೋಡಲಿಲ್ಲ. ಕಣ್ಣುಗಳಲ್ಲಿ ಅಪರಾಧಿ ಭಾವ ತುಳುಕಿದ್ದು ಅನಂತ ಇಲ್ಲದ ವಿಚಾರವನ್ನು ತಿಳಿಸುವ ಕಾಲ ಇನ್ನೂ ಬಂದಿಲ್ಲ. ಲಲಿತನ ಹೆರಿಗೆ ಒಂದು ಆಗಿ ಬಿಡಲಿ..."

"ಲಲಿತ ಒಂದು ಸಲ ಬಂದು ಹೋಗಿದ್ದರೇ..." ಎಂದು ಹಲುಬಿದ್ದಳು.

"ಅವನಿಗೆ ಬರೊಕ್ಕಾಗೊಲ್ಲಮ್ಮ, ಆಶ್ರಮದ ಬಂಧನ ಜಾಸ್ತಿ...ನಾವೇ ಹೋಗಿ ಬರೋಣ... ಮೊದಲು ನಿನ್ನ ಹೆರಿಗೆ ಆಗಲಿ..."

ಲಲಿತ ನಾಚಿಕೆಯಿಂದ ತಲೆ ತಗ್ಗಿಸಿದಳು. ಅರಕ್ತವಾದ ಅವಳ ಮುಖವನ್ನೇ ಪುರುಷೋತ್ತಮ ನೋಡಿದ. ನನ್ನ ಸೊಸೆಮುದ್ದು ಎಷ್ಟು ಚೆನ್ನಾ? ಅವನ ಮನಸ್ಸು ಹಿಗ್ಗಿತು. ಹಿಂದೆಯೇ ಅಧೈರ್ಯ.... ಏನೋ ಅವ್ಯಕ್ತ ಭಯ.

"ವೇದಮ್ಮ... ಇವತ್ತು ಈ ಮಗೂಗೆ ದೃಷ್ಟಿ ತೆಗೆದು ಬಿಡಿ...ನನ್ನ ಕಣ್ಣು ತಾಗಿದೆ" ವೇದಮ್ಮ ಕಣ್ಣು ಕಣ್ಣು ಬಿಟ್ಟಳು.

"ಹೋಗಿ ಮಾವ.... ನನಗೇನೂ ಆಗೊಲ್ಲ...." ನಾಚಿ ನುಡಿದಳು ಲಲಿತ.

"ನನ್ನ ಆಸೆ ಅದೇ ಕಣಮ್ಮ... ಪುರುಷೋತ್ತಮ ಸೊಸೆಯ ತಲೆ ಸವರಿದರು. ಅಲ್ಲಿಯೇ ನಿಂತು ಲಲಿತಳನ್ನೇ ನೋಡುತ್ತಿದ್ದ ಸತ್ಯ ಮತ್ತೆ ಅವನಿಗೆ ತನ್ನ ತಾಯಿ ಸುಗುಣಳ ನೆನಪಾಗಿತ್ತು. ಆದರೆ ತಡೆದುಕೊಂಡ.

ಮನೆಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡಿದಾರೆ. ಈಗ ಈ ವಿಷಯವನ್ನು ಎತ್ತಿದರೂ, ನನಗೆ ವಿಷಯ ಸರಿಯಗಿ ತಿಳಿಯುವುದಿಲ್ಲ. ಲಲಿತಳ ಮನಸ್ಸು ಕೆಡಬಹುದು, ಆಗಲಿ, ಒಂದೆರಡು ದಿನಗಳು ಕಳೆಯಲಿ

ಶಾಸ್ತ್ರದಂತೆ ಸೀಮಂತ ಬಳೆ ತೊಡಿಸುವ ಕಲಾಪಗಳು ಮುಗಿದವು. ಲಲಿತ ಸುಸ್ತಾಗಿ ಮಲಗಿದ್ದಳು. ಅಡಿಗೆಯವರು ಬಡಿಸಲು ಸಜ್ಜಾಗಿದ್ದರು. ಹತ್ತಿರದ ಕೆಲವರು ನೆಂಟರು ಬಂದಿದ್ದರು. ಸತ್ಯನಿಗೆ ಈ ಎಲ್ಲಾ ಕಲಾಪಗಳೂ ಮುಗಿದು, ಎಲ್ಲರೂ ಬೇಗ ಹೋಗಬಾರದೇ...ವೇದಮ್ಮನಿಗೆ ಬಿಡುವು ಸಿಕ್ಕಿ ತನ್ನ ಅನುಮಾನಗಳನ್ನು ಬಗೆಹರಿಸಿಕೊಳ್ಳುವಂತಿದ್ದರೆ....? ಎಂಬ ಚಡಪಡಿಕೆ.

ಅಂತೂ ಆ ಗಳಿಗೆ ಬಂದಿತು. ಒಂದೆರಡು ದಿನಗಳ ನಂತರ ಲಲಿತ ಗಂಡನ ಮನೆಗೆ ಹೊರಟು ಹೋಗಿದ್ದಳು. ಮನೆಯ ಅಸ್ತವ್ಯಸ್ತವನ್ನು ಸರಿ ಮಾಡುವ ಕೆಲಸದಲ್ಲಿ ತೊಡಗಿದ್ದಳು ವೇದಮ್ಮ ಸತ್ಯ ತಾನು ಬಚ್ಚಿಟ್ಟಿದ್ದ ಕಾಗದಗಳನ್ನು ಫೋಟೋವನ್ನು ಹುಡುಕಿದ. ಅಲ್ಲೆಲ್ಲೂ ಕಾಣಲಿಲ್ಲ, ಆತಂಕ ಅನುಮಾನಗಳಿಂದ ಕೆದಕಿ, ಬೆದಕಿ ಹುಡುಕುತ್ತಿದ್ದವನನ್ನು ಪ್ರಶ್ನಿಸಿದಳು ವೇದಮ್ಮ.

"ಏನೋ, ಏನು ಹುಡುಕ್ತಾ ಇದೀಯೋ....?"

"ಇಲ್ಲಿ ಏನನ್ನೋ ಇಟ್ಟಿದ್ದೆ, ಎಲ್ಲೋ ಕಾಣ್ತಿಲ್ಲ..."

"ಏನೂ ಅಂತ ಹೇಳಿದ್ರೆ..."

"ಹೋಗಲಿ ಬಿಡಿ ನಿಧಾನವಾಗಿ ಹುಡುಕ್ತೀನಿ.... ದೊಡ್ಡಮ್ಮ ನಿಮ್ಮನ್ನ ಒಂದು ಮಾತು ಕೇಳ್ಲಾ?"

"ಹೂಂ ಕೇಳಪ್ಪಾ, ನೂರು ಕೇಳು, ಹೇಳ್ತೀನಿ"

"ಅಮ್ಮ ಯಾರ ಹಾಗಿದ್ಲು? ಲಲಿತ ಹಾಗೇ ಇದಾಳಾ? ನಾನು ಯಾರ ಹಾಗೆ?"

"ಈಗ ಯಾಕೆ ಅದೆಲ್ಲ ಅಂತ...."

"ಹೇಳ್ತೀನಿ ಅಂದಿದೀರಿ, ಸುಮ್ಮನೇ ಹೇಳಿ..." ಒರಟಾಗಿ ನುಡಿದ.

"ಲಲಿತ ಎಲ್ಲಾ ಅವರ ಅಮ್ಮನ ತದ್ರೂಪು...ನೀನು ನಿನ್ನ ಅಪ್ಪನ ಹಾಗೆ..."

"ನನ್ನ ಅಪ್ಪ ಯಾರು? ನನ್ನ ಅಪ್ಪನ ಹೆಸರೇ ನನಗೆ ನೆನಪಿಲ್ಲ"

"ಇಲ್ಲದ ಅಪ್ಪನ್ನ ನೆನಸಿಕೊಂಡರೆ ಏನು ಪ್ರಯೋಜನ?" ನಿಟ್ಟುಸಿರು ಬಿಟ್ಟಳು.

"ಏನೋ ರಹಸ್ಯ ಇದೆ ಅಂತ ನನಗೆ ಸಂದೇಹ... ಅದೇನು ಅಂತ ನೀವು ನನಗೆ ಹೇಳಲೇಬೇಕು" ಒತ್ತಾಯಿಸುವಂತೆ ಆಡಿದ.

"ಏನಿರುತ್ತೆ ರಹಸ್ಯ?" ವೇದಮ್ಮ ಬೆದರಿದ್ದಳು.

"ಅಮ್ಮನ ಹೆಸರು ಸುಗುಣ ಅಂತ ನನಗೆ ಗೊತ್ತು ಅಪ್ಪನ ಹೆಸರನ್ನೆಲ್ಲಿಯೂ ಬರೆಸಿಲ್ಲ, ಗೋಪಾಲ ಯಾರು? ಗೋಪಾಲನಿಗೂ ಅನಂತನಿಗೂ ಏನು ಸಂಬಂಧ? ಅಪ್ಪ ಅಮ್ಮ ಇಲ್ಲದ ನಮ್ಮನ್ನು ಆ ಅನಂತ ಪೋಷಿಸಿದರಲ್ಲ.... ಅನಂತ ನಮಗೇನಾಗಬೇಕು! ಅದೇನೂಂತ ನೀವು ಹೇಳಲೇ ಬೇಕು"

"ಅದನ್ನೆಲ್ಲ ಈಗ ಯಾಕೆ ಹೀಗೆ ಇದ್ದಕ್ಕಿದ್ದಂತೆ ಕೇಳ್ತಿದೀಯ? ಅನಂತನಿಂದ ನಿನಗೇನೂ ತೊಂದರೆಯಾಗಲಿಲ್ಲವಲ್ಲ"

"ಇದುವರೆಗೂ ತೊಂದರೆ ಏನಿರಲಿಲ್ಲ, ಆದರೆ ಈಗ ಅನುಮಾನ ಬಂದಮೇಲೆ, ಮನಸ್ಸಿಗೆ ಕಿರಿಕಿರಿ.... ಮುಜುಗರ"

ಏನು ಅನುಮಾನ ಎಂದು ವೇದಮ್ಮ ಕೇಳಲಿಲ್ಲ, ಅವಳ ಮುಖದ ಕಳೆಯೇ ಬದಲಾಯಿಸಿ ಹೋಗಿತ್ತು. ಅಲ್ಲಿಂದ ಸರಿದು ಹೋದರೆ ಸಾಕೆನಿಸಿತ್ತು.

"ಈ ಅನಂತ... ಆ ಅನಂತ ಇಬ್ಬರೂ ಒಬ್ಬನೇನಾ!" ಮತ್ತೆ ಪ್ರಶ್ನೆ.

"ಯಾವ ಅನಂತಾ?" ತನಗೇನೂ ಅರಿಯದವಳಂತೆ ಪ್ರಶ್ನಿಸಿದಳು.

"ಯಾವ ಅನಂತ ಅಂತ ನಿಮಗೆ ತಿಳೀದೆ?" ವ್ಯಂಗ್ಯದಿಂದ ಕೇಳಿದ.

"ಏನಪ್ಪಾ ಏನೇನೋ ಮಾತನಾಡ್ತಿದೀಯಲ್ಲ, ಈ ಅನಂತನಿಗೂ ನಿನ್ನ ಈ ಮಾತುಗಳಿಗೂ ಏನು ಸಂಬಂಧ ಅಂತ ನನಗೆ ಅರ್ಥವಾಗ್ತಿಲ್ಲವಲ್ಲ"

ಸಂಬಂಧ ಇದೆ, ಅದು ನಿಮಗೂ ಗೊತ್ತು. ಅಮ್ಮನಿಗೂ ಈ ಅನಂತನಿಗೂ ಏನು ಸಂಬಂಧವಿತ್ತು ಅಂತ ನಿಮಗೆ ಗೊತ್ತಿಲ್ವೆ? [illegible]ತಾ ಗೊತ್ತಿಲ್ವೆ?"

"ಸತ್ಯನಿಗೆ ಏನೋ ಬಲವಾದ ಅನುಮಾನ ಬಂದಿದೆ"ಎಂದು ವೇದಮ್ಮನಿಗೆ ಅರ್ಥವಾಯಿತು. ಅದನ್ನು ಮರೆಸುವಂತೆ ಹೇಳಿದಳು.

"ನೀನು ಏನು ಮಾತಾನಾಡ್ತಾ ಇದೀಯ ಅಂತ ನನಗೆ ಅರ್ಥವಾಗ್ತಿಲ್ಲ"

"ಯಾಕೆ ಅರ್ಥವಾಗ್ತಿಲ್ಲ? ಮುಚ್ಚಿಡ್ತಾ ಇದೀರಾ ಅಷ್ಟೇ... ನನಗೆ ಆ ಕಾಗದಗಳು, ಆ ಫ಼ೋಟೋ ಸಿಕ್ಕಿದ್ದಿದ್ದರೇ... ಏನು ಅಂತ ಬಿಡಿಸಿ ಕೇಳ್ತಿದ್ದೆ. ಇಲ್ಲಿಟ್ಟಿದ್ದು ಎಲ್ಲಿ ಹೋಯ್ತೋ.... ಅಥವಾ..."

"ಯಾವ ಕಾಗದ? ಯಾವ ಪೋಟೋ? ವೇದಮ್ಮ ಗಾಬರಿಯಿಂದ ಕೇಳಿದಳು!

"ಯಾವುದೋ ಒಂದು ನಿಮಗ್ಯಾಕೆ? ಮೊದಲು ಅದು ಸಿಗಲಿ..."

"ನಿನಗೆ ಏನೋ ಅನುಮಾನ ಅದಕ್ಕೆ ಹೀಗೆ ಮಾತಾನಾಡ್ತೀದೀಯ.... ಈ ಮನೆಗೆ ನಾನು ಅಡಿಗೆಯವಳಾಗಿ ಸೇರಿದ್ದು, ನನಗೆ ಏನೂ ವಿಷಯ ತಿಳಿಯದು..." ಅವನ ಕಣ್ಣುಗಳನ್ನು ತಪ್ಪಿಸಿ ನುಡಿದಳು.

"ಸುಳ್ಳು ಹೇಳಬೇಡಿ, ಬರೀ ಅಡಿಗೆಯವರಲ್ಲ, ನಮಗೆ ನೀವು ದೊಡ್ಡಮ್ಮ ಅನಂತ ಸಹ ನಿಮ್ಮನ್ನು ದೊಡ್ಡಮ್ಮ ಅಂತ ಕರೀತಿರಲಿಲ್ವಾ?"

"ನಲವತ್ತು ವರ್ಷದಿಂದ ಈ ಮನೇಲಿದೀನಿ, ಅದಕ್ಕೇ ನನ್ನನ್ನು ದೊಡ್ಡಮ್ಮ ಅಂತ ಎಲ್ಲರೂ ಕರೀತಾರೆ....ಅಷ್ಟೇ"

"ನಿಮಗೆ ಹೇಳೋಕ್ಕೆ ಇಷ್ಟವಿಲ್ಲದಿದ್ದರೆ ಬಿಡಿ, ನಾನು ಅನಂತನನ್ನೇ ಹೋಗಿ ಕೇಳಿ, ನಿಜ ಏನು ಅಂತ ತಿಳಿದುಕೊಳ್ತೀನಿ"

"ನೀನು ಅವನನ್ನೇನೂ ಕೇಳಕೂಡದು. ಅಲ್ಲ ಹಳೇದನ್ನೆಲ್ಲಾ ಕೇಳಿ ತಿಳಿದುಕೊಳ್ಳುವ ಆಸೆಯೇಕೆ ನಿನಗೆ!?" ತಟ್ಟನೆ ಹೆದರಿದ್ದಳು.

"ಅನಂತನನ್ನ ಯಾಕೆ ಕೇಳಬಾರದು! ಅವರು ನಿಮ್ಮ ಮಗನೇ?"

"ಸತ್ಯ...ದಯವಿಟ್ಟು ಸುಮ್ಮನಿರೋ.. ನಿನಗೇಕೆ ಈ ಹುಚ್ಚು?"

"ಹೌದು. ನನಗೆ ಹುಚ್ಚು, ನನ್ನನ್ನು ಮಗನಂತೆ ಸಾಕಿದೀರಿ...ಹೇಳದಿದ್ದರೆ ನಾನು ನಿಮ್ಮ ಜತೆ ಮಾತನಾಡುವುದಿಲ್ಲ ಊಟ ಮಾಡುವುದಿಲ್ಲ."

"ಬೇಡ ಕಣೋ ಸತ್ಯ ಹೀಗೆಲ್ಲಾ ಆಡಬೇಡ. ಯಾವುದೋ ಹಳೇ ವಿಷಯಗಳನ್ನು ಕಟ್ಟಿಕೊಂಡು ನಿನಗೇನಾಗಬೇಕಾಗಿದೆ! ಹಾಯಾಗಿರಬಾರದೇ!?

ಸಂತೈಸಲು ನೋಡಿದಳು.

"ಯಾಕೆ ಸುಮ್ಮನಿರಬೇಕು? ನಿಮ್ಮ ಅನಂತ ಮಾಡಿರುವ ಘನಕಾರ್ಯ ನನಗೆ ತಿಳಿಯಬಾರದು ಅನ್ನುವ ಹಠ ನಿಮಗ್ಯಾಕೆ?"

"ಸತ್ಯ... ಅನಂತನ ಬಗ್ಗೆ ನೀನು ಯಾವ ಅನುಮಾನಾನೂ ಇಟ್ಟುಕೋಬೇಡ. ಅವನು ದೇವರಂತಹ ಮನುಷ್ಯ..."

"ನಿಮ್ಮ ದೇವರಂತಹ ಮನುಷ್ಯ ಮಾಡಿರುವ ಕೆಲಸ ಏನು ಅಂತ ನಾನು ಹೇಳಲಾ? ಸುಗುಣಳಿಗೆ.... ಅಂದರೆ ನಮ್ಮಮ್ಮನಿಗೆ ಪ್ರೇಮ ಪತ್ರಗಳನ್ನು ಬರೆದಿದ್ದಾನೆ, ಜತೇಲಿ ನಿಂತು ಪೋಟೋ ತೆಗೆಸಿಕೊಂಡಿದಾನೆ...ನಿಮಗೆ ತಿಳೀದಾ? ಅವನದ್ದೇನೂ ತಪ್ಪಿಲ್ಲ ಅಂತೀರಲ್ಲ... ಅದೆಲ್ಲಾ ಏನು?"

"ಹೌದು, ನಾನು ಈಗಲೂ ಹೇಳ್ತೀನಿ, ಅವನದ್ದು ಏನೂ ತಪ್ಪಿಲ್ಲ, ಯಾರೋ ಮಾಡಿದ ತಪ್ಪಿಗೆ ಅನ್ಯಾಯವಾದದ್ದು ಅವನಿಗೆ. ಇಲ್ಲದಿದ್ದರೆ, ಅವನು ನಿಮ್ಮಗಳಂತೆ ಈ ಮನೆಯಲ್ಲಿ ಹಾಯಾಗಿರುತ್ತಿದ್ದ. ಆಶ್ರಮಕ್ಕೆ ಹೋಗಿ ಯಾಕೆ ಸೇರುತ್ತಿದ್ದ?" ವೇದಮ್ಮನ ಧ್ವನಿ ಭಾರವಾಯಿತು.

"ಮಾಡಿದ ತಪ್ಪನ್ನು ಮುಚ್ಚಿಡುವುದಕ್ಕಾಗಿ, ಇನ್ಯಾತಕ್ಕೆ? ನನಗೆ ಮುಂಚೇನೇ ಈ ವಿಷಯ ಗೊತ್ತಾಗಿದ್ದಿದ್ದರೇ..." ಹಲ್ಲು ಹಲ್ಲು ಕಡಿದ.

"ಗೊತ್ತಾಗಿದ್ದಿದ್ದರೆ.... ನೀನು ಈ ದಿನ ಹೀಗೆ ಕಟುವಾಗಿ ಮಾತನಾಡ್ತಿರಲಿಲ್ಲ..."

"ಭೇಷ್ ದೊಡ್ಡಮ್ಮ...ಅಂತೂ ಅವನ ಪರ ವಹಿಸಿ ಮಾತನಾಡ್ತಿದೀರಲ್ಲ, ಅವನು ಎಂತಹವನು ಎನ್ನುವ ಸಾಕ್ಷಿ ನನ್ನ ಹತ್ತಿರ ಇದೆ...."

"ನಿನ್ನ ಸಾಕ್ಷಿ ನಿನಗೆ ತಿಳಿಸಿದ್ದೇನು? ನಿನಗೇನು ನಿಜ ತಿಳಿದಿದೆ! ಅವನ ಬಗ್ಗೆ ಸುಳ್ಳು ಆಡಿದರೆ ನಿನ್ನ ನಾಲಗೇಲಿ ಹುಳು ಬೀಳುತ್ತೆ..." ಬಿಕ್ಕಿದಳು.

"ಹಾಗಾದರೆ ನಿಜ ಏನು ಅಂತ ಹೇಳಬಾರದಾ?" ವೇದಮ್ಮನ ಅಳುವಿಗೆ ಸ್ವಲ್ಪ ತಗ್ಗಿದ್ದ. ತಾನು ಮಾತಾಡಿದ್ದು ಅತಿಯಾಯ್ತು ಎಂದೆನಿಸತ್ತು.

"ನೀನು ಇಷ್ಟೆಲ್ಲಾ ಆಡಿದ ಮೇಲೆ, ನಿಜ ಏನು ಅಂತ ನಾನು ಹೇಳಲೇಬೇಕು. ಆಗ ನಿನಗೆ ನ್ಯಾಯ ಅನ್ಯಾಯದ ಬಗ್ಗೆ ತಿಳಿಯುತ್ತೆ. ಈ ಮನೆಯ ಪಾಪವನ್ನು ಕಳೆದು ಪವಿತ್ರಗೊಳಿಸಿದವನು ಅನಂತ, ನೀವು ಎಷ್ಟೇ ಜನ್ಮಗಳನ್ನೆತ್ತಿ ಬಂದರೂ, ಅನಂತನಂತೆ ಆಗಲಾರಿರಿ..." ಎನ್ನುತ್ತಾ ತನ್ನ ಮತ್ತು ಗೋಪಾಲನ ಸಂಬಂಧದ ವಿಷಯವನ್ನುಳಿದು, ಎಲ್ಲಾ ವಿಷಯಗಳನ್ನು ತಿಳಿಸಿದಳು. ಸತ್ಯವನ್ನು ತಿಳಿದ ಸತ್ಯ, ಪಶ್ಚಾತ್ತಾಪದಿಂದ ಹಣೆ ಹಣೆ ಘಟ್ಟಿಸಿಕೊಂಡ. ಗೋಪಾಲನ ಮಿಲಟರಿಯಲ್ಲಿ ಕೆಲಸದಲ್ಲಿದ್ದ ಮಗನ ಹೆಂಡತಿ ಸುಗುಣ ಎಂದು ಎಲ್ಲರೂ ತಿಳಿದಿದ್ದರು. ಗೋಪಾಲ ಪೋಷಕನ ವೇಷ ತೊಟ್ಟು

ಎಲ್ಲರ ಕಣ್ಣಿಗೂ ಮಣ್ಣೆರಚಿದ್ದ. ಇದು ಹೇಗೆ ಸಾಧ್ಯವಾಯಿತು? ತನ್ನ ತಂದೆಯ, ತಾಯಿಯ ಅಪಚಾರದ ಫಲ ತಾನು. ಛೆ... ಅವನ ಜನ್ಮ ರಹಸ್ಯ ಅವನಿಗೆ ಅಶ್ಲೀಲವಾಗಿ ಕಂಡಿತು.

ಹೀಗೂ ಉಂಟೆ! ಅನಂತನನ್ನು ಮಗನಂತೆ ಸಾಕಿ, ಅವನಿಗೆ ದ್ರೋಹ ಮಾಡುವುದೆ!.... ಗೋಪಾಲನ ಕೆಟ್ಟ ರಕ್ತ ನನ್ನ ಮೈಯಲ್ಲಿ ಹರಿಯುತ್ತಿದೆಯಲ್ಲ. ನಾನೀಗ ಏನು ಮಾಡಲಿ!... ನಾನು ಪಾಪಿ... ಪಾಪಿಯ ಹೊಟ್ಟೆಯಲ್ಲಿ ಹುಟ್ಟಿದವನು ಮಹಾಪಾಪಿಯಾಗದೇ ಇನ್ನೇನಾಗಲು ಸಾಧ್ಯ! ಅವನು ನಖ ಶಿಖಾಂತ ಉರಿಯಲ್ಲಿ ಬೆಂದವನಂತೆ ಕೆಂಪಾಗಿದ್ದ.

"ಈಗ ಹೇಳು, ಸುಮ್ಮನಾಗಿ ಬಿಟ್ಟೆಯಲ್ಲ...ಅನಂತ ಮತ್ತೆ ಬಂದು ನಿಮ್ಮಗಳನ್ನು ಪೋಷಿಸುವ ಅಗತ್ಯವೇನಿತ್ತು? ತನಗೆ ಸೇರಬೇಕಾಗಿದ್ದ ಆಸ್ತಿಯನ್ನು ಸಹ ಅವನು ನಿಮ್ಮಿಬ್ಬರಿಗೆ ಹಂಚಿ ಬಿಟ್ಟನಲ್ಲ. ಅವನು ಮೋಸಗಾರನಾಗಿ ನಿಮಗೆ ಒಂದು ಕಾಸೂ ದಕ್ಕದಂತೆ ಮಾಡಿದ್ದರೇ.... ಈ ದಿನ ನೀನು ಇಂತಹ ಮಾತುಗಳನ್ನಾಡುವ ಸಮಯವೇ ಒದಗುತ್ತಿರಲಿಲ್ಲ"

"ನನ್ನನ್ನು ಕ್ಷಮಿಸಿ ದೊಡ್ಡಮ್ಮ ನಿಜ ಏನು ಅಂತ ತಿಳಿದೇ ಏನೇನೋ ಆಡಿಬಿಟ್ಟೆ. ಈಗ ನಿಜ ತಿಳಿದ ಮೇಲೆ, ನನ್ನ ಬಗ್ಗೆ ನನಗೇ ಅಸಹ್ಯವಾಗುತ್ತಿದೆ. ಬದುಕಿರಬಾರದು ಅಂತ ಅನ್ನಿಸ್ತಿದೆ" ಸತ್ಯ ವೇದಮ್ಮನ ತೊಡೆಯ ಮೇಲೆ ತಲೆಯನ್ನಿಟ್ಟು ಗೊಳೋ ಅಂತ ಅತ್ತಾಗ ಆಕೆಯ ಹೃದಯ ಅತ್ತಿತ್ತು. ಅವನ ತಲೆಯ ಮೇಲೆ ಕೈ ಇಟ್ಟಳು.

"ಹೋಗಲಿ ಬಿಡು, ಏನೇನೋ ನಡೆದು ಹೋಯಿತು. ಈಗ ನೀನು ಅತ್ತೇನು ಪ್ರಯೋಜನ? ನಿನ್ನ ತಂದೆ ತಾಯಿ ಬದುಕಿಲ್ಲ. ಅನಂತ ಕೂಡಾ ಮತ್ತೆ ಆಶ್ರಮಕ್ಕೆ ವಾಪಸ್ಸು ಹೊರಟುಹೋದ. ಲಲಿತ ಸುಖವಾಗಿದಾಳೆ... ನಿನ್ನ ಓದು ಬರಹದ ಕಡೆ ಗಮನ ಕೊಡು. ನಿನ್ನನ್ನು ಇಷ್ಟರ ಮಟ್ಟಿಗೆ ಮುಂದಕ್ಕೆ ತಂದ ಅನಂತನಿಗೆ ನೀನು ಕೃತಜ್ಞನಾಗಿರಬೇಕು. ದೊಡ್ಡ ಹುದ್ದೆಗೆ ಸೇರಿ, ನಾಲ್ಕು ಜನಕ್ಕೆ ಉಪಯೋಗವಾಗುವಂತಹ ಕೆಲಸವನ್ನು ಮಾಡಬೇಕು. ಆಗ ಅನಂತನ ಉದ್ದೇಶ ಸಾರ್ಥಕವಾಗುತ್ತದೆ.

"ಹೌದು, ದೊಡ್ಡಮ್ಮ ನೀವು ಹೇಳೋದು ಸರಿ...ನೀವೇ ನನ್ನ ತಾಯಿ ನೀವು ಹೇಳಿದಂತೆ ಕೇಳುವುದು ನನ್ನ ಧರ್ಮ.... ಆದರೆ ನನ್ನದೂ ಒಂದು ಆಸೆ...ಅಂಕಲ್‌ನ ಮತ್ತೆ ಈ ಮನೆಗೆ ಕರೆದುಕೊಂಡು ಬರಲೇಬೇಕು. ಇದು ಅವರ ಮನೆ. ಈ ಆಸ್ತಿಯೆಲ್ಲಾ ಅವರದು. ಇದರಲ್ಲಿ ನನಗಾಗಲೀ, ಲಲಿತಳಿಗಾಗಲೀ ಯಾವ ಪಾಲಿಲ್ಲ, ನಾನು ಈಗಲೇ ಹೋಗಿ ಈ ವಿಷಯವನ್ನು ಲಲಿತಂಗೆ ಪ್ರಶಾಂತನಿಗೆ ತಿಳಿಸ್ತೀನಿ..." ಸತ್ಯ ಎದ್ದ. ವೇದಮ್ಮ ತಡೆದಳು.

"ಛೆ... ಛೆ... ದುಡುಕಬೇಡ. ನಿನಗೆ ಈ ವಿಷಯ ತಿಳಿದದ್ದೇ ಸರಿಯಲ್ಲ, ಲಲಿತ ಹುಡುಗಿ; ಬಸುರಿ, ತುಂಬಾ ಸೂಕ್ಷ್ಮ ಅವಳಿಗೆ ಈಗ ಇದನ್ನೆಲ್ಲ ತಿಳಿಸಿ, ಅವಳು ಕೊರಗುವಂತೆ ಮಾಡಬೇಡ. ಲಲಿತಳಿಗೆ ಈ ವಿಷಯ ತಿಳಿಯದಿದ್ದರೂ ಪರವಾಗಿಲ್ಲ"

"ಪುರುಷೋತ್ತಮನಿಗೆ ತಿಳಿದರೆ ಏನಂದುಕೊಳ್ತಾರೆ! ನಮ್ಮನ್ನು ಮರ್ಯಾದಸ್ಥರು ಅಂತ ತಿಳಿದುಕೊಂಡಿದಾರೆ. ಆಮೇಲೆ ಲಲಿತನಿಗೆ ಏನಾದರೂ ತೊಂದರೆಯಾದರೆ? ನಾವು ತಿಳಿಸುವುದು ಒಳ್ಳೆಯದು"

"ಏನೂ ತೊಂದರೆಯಾಗುಲ್ಲ, ಈ ವಿಷಯವೆಲ್ಲಾ ಪುರುಷೋತ್ತಮನಿಗೆ ತಿಳಿದಿರುವುದೇ.... ಆತ ಸಹ ತುಂಬಾ ಒಳ್ಳೆಯ ಮನುಷ್ಯ.... ನೀನು ಅದೃಷ್ಟವಂತ"

"ಏನು ಅದೃಷ್ಟವಂತನೋ.... ನನ್ನ ಅಪ್ಪನ ಮಗನಾಗಿ!" ಕೆಟ್ಟ ಮುಖ ಮಾಡಿದ. "ನಿನ್ನ ಅಪ್ಪ ಮಾಡಿದ್ದು ತಪ್ಪೇನೇ.... ಅದನ್ನು ಯಾರೂ ಅಲ್ಲಗಳೆಯದೇ ಇರಲಾರರು..... ಆದರೆ ಅದಕ್ಕಾಗಿ ನೀನು ಕೊರಗಬೇಡ. ಅನಂತನ ವ್ಯಕ್ತಿತ್ವವನ್ನೂ ಪುರುಷೋತ್ತಮನಂತಹ ಹೃದಯ ವೈಶಾಲ್ಯವನ್ನು ನೀನು ಬೆಳೆಸಿಕೊಳ್ಳಬೇಕು. ಆಗ ನೀನು ಸತ್ಯಕಾಮನಾದದ್ದಕ್ಕೂ ಸಾರ್ಥಕ"

"ಹೌದು ದೊಡ್ಡಮ್ಮ, ನನ್ನ ಹೆಸರನ್ನು ನಾನು ಸಾರ್ಥಕಗೊಳಿಸಿಕೊಳ್ಳಬೇಕು.... ನಾನು ಮೊದಲು ಅನಂತನ್ನ ಹೋಗಿ ನೋಡಿ ಕ್ಷಮೆ ಕೇಳಬೇಕು"

"ಅವಸರಪಡಬೇಡ.... ಲಲಿತಳಿಗೆ ಹೆರಿಗೆಯಾಗುವವರೆಗೂ ನೀನು ಈ ಊರನ್ನು ಬಿಟ್ಟು ಎಲ್ಲಿಯೂ ಹೋಗಕೂಡದು... ಅಥವಾ ಅಷ್ಟರಲ್ಲಿ ಅನಂತ ಎಂದಾದರೂ ಅವನೇ ಬರ ಬಹುದು..." ಸತ್ಯ ಸುಮ್ಮನಾಗಬೇಕಾಯ್ತು.

" ಎಲ್ಲಿದಾನೋ... ಹೇಗಿದಾನೋ..., ಯಾವವಿಚಾರವೂ ತಿಳಿಯದು... ಒಂದು ಸಲ ಬಲವಂತದಿಂದ ಅವನನ್ನು ಕರೆತಂದಾಯ್ತು. ಋಣ ಬಾಧೆಯನ್ನು ಪರಿಹರಿಸಿಕೊಳ್ಳಲು ಇಲ್ಲಿ ಇದ್ದ. ಈಗ ಮತ್ತೆ ಯಾಕೆ ಬಂದಾನು? ಹುಂ....." ವೇದಮ್ಮ ನಿಟ್ಟುಸಿರಿನೊಂದಿಗೆ ನುಡಿದಾಗ ಸತ್ಯ ಆಡಿದ.

"ಹಾಗೆ ಹೇಳಬೇಡಿ ದೊಡ್ಡಮ್ಮ, ಅವರು ಎಲ್ಲಿದ್ದರೂ ಸರಿ, ಹೇಗಿದ್ದರೂ ಸರಿ, ನಾನು ಹುಡುಕಿ ಕರೆತರ್ತೀನಿ, ನಾನು ಅವರನ್ನು ಇಲ್ಲಿಗೆ ಕರೆತರುವ ತನಕ ಈ ವಿಷಯವನ್ನ ಯಾರಿಗೂ ತಿಳಿಸಬೇಡಿ"

"ಇದನ್ನೆಲ್ಲ ಇಷ್ಟಕ್ಕೆ ಬಿಡು ಅತ್ಲಾಗೆ. ನಿನ್ನ ಓದಿನ ಕಡೆ ಗಮನ ಕೊಡು. ಏನೋ ಅವನ ಕರ್ಮ, ಅವನು ಹಾಗಾದ, ಅವನು ಎಲ್ಲಿದಾನ್ನೋ, ಅಲ್ಲಿಯೇ ಸುಖವಾಗಿರಲಿ, ಇಲ್ಲಿ ಯಾವ ಸುಖಕ್ಕೆ ಮತ್ತೆ ಬರ್ತಾನೆ!

ಬರುವುದೂ ಬೇಡ"

"ನಿಮಗೆ ಏನೋ ಹೆದರಿಕೆ ಅದಕ್ಕೇ ಹೀಗೆಲ್ಲ ಮಾತನಾಡ್ತಿದೀರಿ, ಮೊದಲೆಲ್ಲಾ ಅನಂತ ಬರಲಿ ಅಂತ ಹಂಬಲಿಸುತ್ತಿರಲಿಲ್ಲವೆ? ನನ್ನ ಮೇಲೆ ನಂಬಿಕೆ ಇಲ್ಲ ನಿಮಗೆ ಅದಕ್ಕೇ ಹೀಗೆ ಹೇಳ್ತಿದೀರಿ"

"ನಂಬಿಕೆ ಪ್ರಶ್ನೆ ಅಲ್ಲ, ನಿನ್ನ ಮಾತಿಗೆ ಒಪ್ಪಿ ಬರ್ತಾನೆ ಅಂತ ನನಗನ್ನಿಸುವುದಿಲ್ಲ"

"ನಾನು ಒಪ್ಪಿಸಿ ಕರೆತಂದು, ಅವರಿಗೆ ಮದುವೆ ಮಾಡಿಸಿ...."

"ಮದುವೆ, ಸಂಸಾರ ಅಂತೆನ್ನುವ ಆಸೆ ಅವನಿಗಿದ್ದಿದ್ದರೆ ಅವನೇಕೆ ಮತ್ತೆ ಹೋಗ್ತಿದ್ದ? ಅದು ಬಲವಂತವಾಗಿ ಒಪ್ಪಿಸಿ ಮಾಡುವ ಕೆಲಸವಲ್ಲ, ವಿದ್ಯೆ ಬುದ್ಧಿ ಹಣ ಎಲ್ಲಾ ಅವನ ಕೈಯಲ್ಲಿತ್ತು. ಆದರೂ ಎಲ್ಲವನ್ನು ಬಿಟ್ಟು ಹೋಗುವಷ್ಟು ಅವನ ಮನಸ್ಸು ಕೆಟ್ಟು ಹೋಯಿತು. ಇನ್ನು ಈ ಮಾತು ಸಾಕು..."

ಅಷ್ಟರಲ್ಲಿ ಹೊರಗೆ ಯಾರೋ ಬಂದಂತೆ ಆಯಿತು. ಸತ್ಯ ಬಾಗಿಲು ತೆಗೆದ.... ಹೊರಗೆ ನಿಂತಿದ್ದ ವ್ಯಕ್ತಿ.

"ಅನಂತ ಅನ್ನೋರು ಇದಾರಾ?..." ಕೇಳಿತು.

"ನೀವ್ಯಾರು? ಅವರಿಂದ ಏನಾಗಬೇಕು?"

"ಅಂಗಡಿ ಬಾಗಿಲು ತೆಗೆದು ಎಷ್ಟೋ ದಿನಗಳಾಯಿತು. ಯಾಕೆ ಅಂತ ವಿಚಾರಿಸಿಕೊಂಡು ಹೋಗೋಣ ಅಂತ ಬಂದೆ. ನಾನು ಪಕ್ಕದ ಅಂಗಡಿಯವನು" ಹಲ್ಲು ಕಿರಿಯಿತು ಆವ್ಯಕ್ತಿ.

"ಅವರು ಊರಿನಲ್ಲಿಲ್ಲ, ಸಧ್ಯಕ್ಕೆ ಆ ಅಂಗಡಿ ತೆಗೆಯೊಲ್ಲ"

"ಮುಂಚೆ ಸಹ ತಾನೇ ಎಲ್ಲಿ ತೆಗೀತಿದ್ರು..... ಆಗ ಈಗ ಅವರಿಗೆ ಬೇಕಾದಾಗ....ಈಗ ಬೇಡವಾದ್ರೆ ಮಾರಿಬಿಡಬಹುದಲ್ಲ"

"ಅದೆಲ್ಲ ನನಗೆ ಗೊತ್ತಿಲ್ಲ, ಅವರು ಬಂದ ಮೇಲೆ ವಿಚಾರಿಸಿಕೊಳ್ಳಿ"

"ಯಾವಾಗ ಬರ್ತಾರೆ!" ಮತ್ತೆ ಪ್ರಶ್ನೆ.

"ನನಗೆ ಗೊತ್ತಿಲ್ಲಪ್ಪ.... ಏನಷ್ಟು ಅರ್ಜೆಂಟು!" ರೇಗಿದ ಸತ್ಯ.

"ಮೊದಲೇ ಇಲಿ ಕಾಟ, ಪುಸ್ತಕದಂಗಡಿ, ಆಮೇಲೆ ಹಳೇಗೊಬ್ಬರವಾಗಿ ಹೋಗುತ್ತೆ ಅಷ್ಟೇ..." ಆ ವ್ಯಕ್ತಿ ನಕ್ಕಿತು.

"ಅದೆಲ್ಲ ನಿನಗ್ಯಾಕಯ್ಯಾ? ಹೋಗು ಸುಮ್ಮನೇ..." ಆ ವ್ಯಕ್ತಿ ವಿಚಿತ್ರವಾಗಿ ಸತ್ಯನನ್ನೇ ನೋಡಿ ಹೊರಟು ಹೋಯಿತು. ಒಳಗೆ ನಿಂತು ಮಾತುಗಳನ್ನು ಕೇಳಿಸಿಕೊಂಡು ವೇದಮ್ಮ ಈಗ ಹೊರಗೆ ಬಂದಳು.

"ಯಾಕೆ ಬೇಕಿತ್ತೋ ಈ ಪುಸ್ತಕದಂಗಡಿ? ಆ ವಿಧವೆ ಹೆಂಗಸಿಗೆ

ಉಪಕಾರ ಮಾಡಲು, ಸುಮ್ಮನೇ ತಗೊಂಡ. ಒಂದು ದಿನ ಒಂದು ಪುಸ್ತಕ ಮಾರಿದ್ದು ನಾನು ಕಾಣೆ..."

"ಅಲ್ಲಿಂದ ಪುಸ್ತಕಗಳನ್ನು ತಂದು ಓದುತ್ತಿದ್ದರಲ್ಲ..."

"ಹೇಗಾದರಾಗಲಿ, ಒಂದು ಸಲ ಬಾಗಿಲು ತೆಗೆದು ಒಳಗೆ ನೋಡುವುದು ಒಳ್ಳೆಯದು. ಇಲಿ ಹೆಗ್ಗಣ ಸೇರಿ ಬಿಟ್ಟರೆ ಆಮೇಲೆ ಕಷ್ಟ"

"ನನ್ನ ಕೈಲಿ ಅದೆಲ್ಲ ಆಗೋಲ್ಲ, ಬೇಕಾದರೆ ನೀವು ಹೋಗಿ ಬನ್ನಿ...ಲಲಿತನ ಮಾವ ಕೊಡಿಸಿದ್ದು ತಾನೇ.... ಅವರಿಗೇ ಒಂದು ಮಾತು ತಿಳಿಸ್ತೀನಿ..."

"ಸರಿ ಹಾಗೇ ಮಾಡು, ಹಾಗೇ ಲಲಿತನ್ನ ನೋಡಿಕೊಂಡು ಬಂದಂತಾಗುತ್ತದೆ.... ಪಾಪ ಅವಳಿಗೂ ಬೇಜಾರು..."

"ನೀವು ಸುಮ್ಮನಿರಿ, ಅವಳಿಗೇಕೆ ಬೇಜಾರು? ಗಂಡ, ಅಷ್ಟು ಚೆನ್ನಾಗಿ ನೋಡ್ಕೋತಾನೆ ಇನ್ನೂ ಮಾವ ಅಂತೂ ಅವಳು ನೆಡೆದರೆ ಸವೆದು ಹೋಗ್ತಾಳೆ ಅನ್ನುವ ಹಾಗೆ ನೋಡ್ಕೋತಾರೆ.... ಇನ್ನೇನು ಬೇಜಾರಿಗೆ ಕಾರಣ?

"ಹೌದು... ನಮ್ಮ ಲಲಿತೂ ಅದೃಷ್ಟವಂತೆ.... ನನಗಂತೂ ತುಂಬಾ ಹೆದರಿಕೆ ಇತ್ತು. ಈ ಮನೆಯಲ್ಲಿ ನಡೆದ ಅನ್ಯಾಯದ ಕರಿ ನೆರಳೂ ಆ ಹುಡುಗಿಯ ಮೇಲೆ ಬೀಳಲಿಲ್ಲವಲ್ಲ ನಮ್ಮ ಪುಣ್ಯ...." ಸತ್ಯ ಏನನ್ನೋ ಯೋಚಿಸುತ್ತಿದ್ದ.

"ಆ ಪುಣ್ಯವನ್ನು ಉಳಿಸಿಕೊಟ್ಟ ಪುಣ್ಯಾತ್ಮ ನಮ್ಮ ಅನಂತ" ಎಂದು ವೇದಮ್ಮ ನುಡಿದಾಗ, ಹೌದೆಂದು ತಲೆಯಾಡಿಸಿದ್ದ.

ಪುರುಷೋತ್ತಮನೊಂದಿಗೆ ವೇದಮ್ಮ ಸಹ ಅಂಗಡಿಗೆ ಬಂದರು. ಪಕ್ಕದ ಅಂಗಡಿಯವನೂ ಬಂದು ನಿಂತಿದ್ದ. ಬಾಗಿಲು ತೆಗೆದು ಒಂದು ಗಳಿಗೆ ಹೊರಗೇ ನಿಂತಿದ್ದರು. ಪೇಪರಿನ ವಾಸನೆ ಸ್ವಲ್ಪ ಕಮ್ಮಿಯಾದ ಮೇಲೆ ಒಳಗೆ ಹೊಕ್ಕರು. ಕೊಂಡ ದಿನ ಹೇಗಿತ್ತೋ ಹಾಗೇ ಇತ್ತು ಅಲ್ಲಿಯ ವ್ಯವಸ್ಥೆ. ಅಂಗಡಿಗೆ ಸಂಬಂಧಿಸಿದ ಪತ್ರಗಳೂ ಅಲ್ಲೇ ಇದ್ದವು. ಅದನ್ನು ಪುರುಷೋತ್ತಮ ಪರಿಶೀಲಿಸಿದ. ಅದರಲ್ಲಿ ಹೊಸದಾಗಿ ಸೇರಿದ್ದ ಪತ್ರ ಒಂದಿತ್ತು, ಅದು ಅನಂತ ಬರೆದಿಟ್ಟಿದ್ದ ಪತ್ರ, ದಿನಾಂಕ ಬಹಳ ಹಳೆಯದೇ ಅನಂತ ವೇದಮ್ಮನಿಗೆ ಬರೆದಿದ್ದ ಪತ್ರ.

"ದೊಡ್ಡಮ್ಮ.... ನಾನು ಮಾಡುತ್ತಿರುವುದು ಸರಿಯೋ ತಪ್ಪೋ ನನಗೆ ತಿಳಿಯದು. ಈ ಅಂಗಡಿಗಾಗಿ ನಾನು ಸಾಲ ತೆಗೆದುಕೊಂಡಿದ್ದೆ. ಆ ಸಾಲವನ್ನು ತೀರಿಸಲಾಗಿಲ್ಲ. ನಿಮಗೇ ತಿಳಿದಂತೆ ನನಗೇನೂ ಆದಾಯವಿರಲಿಲ್ಲ.... ಆದರೆ ಆಶ್ರಮದ ಬ್ಯಾಂಕಿನ ನನ್ನ ಖಾತೆಯಲ್ಲಿ ಸ್ವಲ್ಪ ಹಣ ಇದೆ. ಅದನ್ನು ಅಂಗಡಿಯ

ಸಾಲಕ್ಕೆ ಕಳುಹಿಸುತ್ತೇನೆ. ಅಂಗಡಿಯನ್ನು ಇಟ್ಟುಕೊಳ್ಳುವುದು ಅಥವಾ ಮಾರಿ ಬಿಡುವುದು ನಿಮಗೆ ಸೇರಿದ್ದು, ಪುಸ್ತಕಗಳಲ್ಲಿ ಕೆಲವನ್ನು ನನ್ನ ಉಡುಗೊರೆಯಾಗಿ ಲಲಿತಳಿಗೆ ಕೊಡಲು ಇಚ್ಛಿಸುತ್ತೇನೆ, ಅವುಗಳನ್ನು ಪ್ರತ್ಯೇಕವಾಗಿ ತೆಗೆದಿಟ್ಟಿದ್ದೇನೆ. ಉಳಿದವುಗಳನ್ನು ನಿಮಗೆ ತೋರಿದಂತೆ ಮಾಡಬಹುದು"

ಇತಿ ಅನಂತ

ವೇದಮ್ಮನೂ ಕಾಗದವನ್ನು ಓದಿದಳು. ಅವಳಿಗೆ ತಕ್ಷಣವೇ ಏನು ಇದರ ಅರ್ಥ ಎಂದು ಅಗಲಿಲ್ಲ. ಪುರುಷೋತ್ತಮನ ಕಡೆ ತಿರುಗಿದಳು. ಅವನು ಏನನ್ನೋ ನೋಡುತ್ತಿರುವನಂತೆ ನಟಿಸಿದ. ವೇದಮ್ಮ ಏನು ಕೇಳಿಬಿಡುವಳೋ, ತಾನು ಏನು ಹೇಳಬೇಕಾಗಬಹುದೋ ಎಂಬ ಅಂಜಿಕೆ.

ಅಲ್ಲಿದ್ದ ಕುರ್ಚಿಯ ಮೇಲೆ ಕುಳಿತ ವೇದಮ್ಮ ಸತ್ಯನಿಗೆ ತಾನು ಹೇಳಬೇಕಾಗಿ ಬಂದ ನಿಜಸ್ಥಿತಿಯನ್ನು ತಿಳಿಸಿದಳು ಅವನಿಗೆ, ಅನಂತನನ್ನು ಮತ್ತೆ ನೋಡಿದರೆ, ಅವನು ಎಲ್ಲಾ ತೀರ್ಮಾನಿಸಿಯೇ ಹೊರಟು ಹೋಗಿದಾನೆ ಅಂತನ್ನಿಸುತ್ತೆ. ತನ್ನ ಭಾಗದ ಅಷ್ಟು ಆಸ್ತಿಯನ್ನು ಮಕ್ಕಳಿಬ್ಬರಿಗೆ ಹಂಚಿಕೊಟ್ಟು ಬಿಟ್ಟ. ಈ ಅಂಗಡಿಯಿಂದ ಆದಾಯವಿರದಿದ್ದ ಮೇಲೆ, ಇದರ ಅಗತ್ಯವೇನಿತ್ತು? ಅದಕ್ಕಾಗಿ ಸಾಲ ಮಾಡಬೇಕಾಗಿತ್ತೆ? ಅವನದ್ದೇ ಹಣವಿರಲಿಲ್ಲವೇ...?

"ಅವನ ಮನಸ್ಸಿನಲ್ಲಿ ಏನಿತ್ತೋ ನನಗೆ ತಿಳಿಯದು. ಆಶ್ರಮದ ಬ್ಯಾಂಕಿನಲ್ಲಿರುವುದು, ಅವನ ಸ್ವಂತ ಹಣ.... ಅದು ಅವನ ಸಂಪಾದನೆ. ಇಲ್ಲಿಯ ಪುಸ್ತಕಗಳನ್ನು ಆಶ್ರಮಕ್ಕೆ ಅಲ್ಲಿಯ ಗ್ರಂಥಾಲಯಕ್ಕೆ ಕೊಟ್ಟು ಬಿಡುವ ಆಸೆ ಇತ್ತು ಅವನಿಗೆ. ಈಗಲೂ ಹಾಗೇ ಮಾಡಬಹುದು...."

"ಅಂದ್ರೆ.... ಅನಂತ ಮತ್ತೆ ಬರುವುದಿಲ್ಲವೆ!"

ಪುರುಷೋತ್ತಮ ತಿದ್ದಿಕೊಂಡ. "ಹಾಗಲ್ಲ...ಅವನ ಆಸೆಗೆ ನಾವು ವಿರೋಧಿಸುವುದು ಬೇಡ ಅಂತ ಅಷ್ಟೇ.... ಬರೀ ಅಂಗಡಿ ಯಾತಕ್ಕೆ? ಮಾರಿ ಬಿಡೋಣ. ಬಂದ ಹಣವನ್ನು ಸಾಲಕ್ಕೆ ಕೊಟ್ಟು ಬಿಡೋಣ. ಸಾಲದೇ ಬಂದರೆ ನಾನು ಕೊಡ್ತೀನಿ"

"ಬೇಡ.... ಸತ್ಯನ್ನ ಕೇಳಿದರೆ ಕೊಡ್ತಾನೆ"

"ಸತ್ಯನಿಗೆ ಈ ವಿಷಯವನ್ನು ತಿಳಿಸುವುದೇ ಬೇಡ. ಅವನು ಈ ಆಲೋಚನೆಗಳಿಗೆ ಒಪ್ಪಲಾರ"

"ಸರಿ ಮೊದಲು ಅನಂತನಿಗೆ ಈ ವಿಷಯ ತಿಳಿಯಬೇಡವೇ....?"

"ತಿಳಿಸೋಣ.... ಆತುರವೇನು! ಇನ್ನು ಹತ್ತು ಹದಿನೈದು ದಿನಗಳಲ್ಲಿ ಲಲಿತ ತಾಯಿಯಾಗುತ್ತಾಳೆ. ಆ ಸಂತೋಷವನ್ನು ಅನಂತನಿಗೆ ತಿಳಿಸಬೇಡವೆ!"

ಪುರುಷೋತ್ತಮನ ಕಣ್ಣುಗಳಲ್ಲಿ ನೀರುಕ್ಕಿದುದನ್ನು ವೇದಮ್ಮ ಗಮನಿಸಲಿಲ್ಲ.

ಆ ಪತ್ರಗಳನ್ನು ತನ್ನ ವಶದಲ್ಲಿಟ್ಟುಕೊಂಡು ಇಬ್ಬರೂ ಹೊರಬಂದರು. ಪಕ್ಕದ ಅಂಗಡಿಯವನು ಕಾಯುತ್ತಿದ್ದ. "ನಾನು ಮತ್ತೆ ಮಾತನಾಡುತ್ತೀನಿ" ಎಂದು ಪುರುಷೋತ್ತಮ ತಿಳಿಸಿದ. ಇಬ್ಬರೂ ಮನೆಗೆ ಬಂದರು.

ಇಪ್ಪತ್ತು ದಿನಗಳು ಕಳೆದವು. ಲಲಿತ ಆ ರಾತ್ರಿ ಗಂಡು ಮಗುವಿಗೆ ಜನ್ಮವಿತ್ತಳು. ಎಲ್ಲರಿಗೂ ಸಂತಸ ನೆಮ್ಮದಿ. ಇನ್ನಾದರೂ ಅನಂತನನ್ನು ಕರೆತರಲೇಬೇಕೆಂದು ಸತ್ಯ ಹೊರಟ. ಪುರುಷೋತ್ತಮ ಅವನನ್ನು ತಡೆದ.

"ನಾನು ಹೋಗಿ ಬರ್ತೀನಿ... ನೀನು ಚಿಕ್ಕವನು!"

"ಏಕೆ ನಾನು ಕರೆದರೆ ಬರೋಲ್ಲ ಅಂತ ಅನುಮಾನವೆ!"

"ಹೌದು..."

"ಹಾಗಾದರೆ ನಾನು ನಿಮ್ಮ ಜತೆಯಲ್ಲಿಯೇ ಬರ್ತೀನಿ" ಇನ್ನು ಏನೇ ಹೇಳಿದರೂ ಸತ್ಯ ಹೊರಡದೇ ಬಿಡುವವಲ್ಲ ಎಂದುಕೊಂಡು ಪುರುಷೋತ್ತಮ ಒಪ್ಪಿದ.

"ಬೇಡ ಅಂದರೂ ನಿನಗೇಕೆ ಈ ಹಠವೋ...?" ವೇದಮ್ಮ ನುಡಿದಾಗ ಸತ್ಯ ಸುಮ್ಮನಾಗಲಿಲ್ಲ.

"ನೀವು ನನ್ನನ್ನು ತಡೆಯಬೇಡಿ... ನಾನು ಈಗ ಚಿಕ್ಕವನಲ್ಲ. ಮೆಜಾರಿಟಿಗೆ ಬಂದಿದೀನಿ, ನನಗೇನು ಇಷ್ಟವೋ ಅದನ್ನು ಮಾಡುವ ಹಕ್ಕು ನನಗಿದೆ"

"ಸರಿ ನಿನ್ನಿಷ್ಟ, ಅದೇನಾಗಬೇಕಾಗಿದೆಯೋ ಆ ದೇವರಿಗೇ ಗೊತ್ತು"

"ಯಾಕೆ ವೇದಮ್ಮ ಇವತ್ತು ಹೀಗೇ ಮಾತನಾಡ್ತಾ ಇದೀರಿ. ಅವನ ಜತೆಯಲ್ಲಿ ನಾನಿರ್ತೀನಿ. ನಿಮಗೆ ಭಯ ಬೇಡ" ಪುರುಷೋತ್ತಮ ಧೈರ್ಯ ಹೇಳಿದ.

"ಯಾಕೋ ಏನೋ ಕಳವಳ, ಇವನು ಚಿಕ್ಕವನು ಅನಂತನ ಹತ್ತಿರ ಏನೇನು ಆಡಿಬಿಡ್ತಾನೋ ಅಂತ ನನಗೆ ಭಯ ಅನಂತ ಇಲ್ಲಿದ್ದಾಗ, ಒಂದು ದಿನವೂ ಆ ಹಳೆಯ ವಿಷಯಗಳನ್ನು ನೆನೆಸಿಕೊಂಡವನಲ್ಲ"

"ಪುರುಷೋತ್ತಮ ಆ ಮಾತಿಗೆ ಏನನ್ನೂ ನುಡಿಯಲಿಲ್ಲ, ಅನಂತ ಬದುಕಿಲ್ಲ, ಆ ವಿಷಯ ತಿಳಿದೊಡನೆ ಇವನಿಗೆ ಹೇಗನ್ನಿಸಬಹುದು? ತಾನು ಲಲಿತಳಿಗೋಸ್ಕರ ಈ ವಿಷಯವನ್ನು ಮುಚ್ಚಿಟ್ಟಿದ್ದೆ. ಅವಳಿಗೆ ಈಗಲೂ ತಿಳಿಸುವಂತಿಲ್ಲ.... ಬಾಣಂತಿ, ಹಸಿಮೈ... ದುಃಖದಿಂದ ಏನಾದರೂ ಆದರೇ... ಸತ್ಯ ಹೋಗದಂತೆ ತಡೆಯಬೇಕು.... ಆದರೆ ಹೇಗೆ? ಆ ಉಪಾಯ ತಿಳಿಯದೇ ಚಡಪಡಿಸಿದ.

ಇಬ್ಬರೂ ಬಸ್ಸು ಹತ್ತಿದರು. ಬಸ್ಸಿನಲ್ಲಿ ಕುಳಿತು ಇಬ್ಬರೂ ಅನಂತನ ಬಗ್ಗೆಯೇ ಚಿಂತಿಸುತ್ತಿದ್ದರು. ಅಷ್ಟು ವರ್ಷ ನಮ್ಮ ಜತೆಯಲ್ಲಿದ್ದು, ನಮ್ಮಗಳ ಭವಿಷ್ಯಕ್ಕಾಗಿ ತನ್ನ ತನವನ್ನು ಬಚ್ಚಿಟ್ಟವನನ್ನು, ತಾನು ಕೆಲವೇ ಕ್ಷಣಗಳಲ್ಲಿ ತಪ್ಪಾಗಿ ತಿಳಿದು ಕೆಳಕ್ಕೆ ತಳ್ಳಿದ್ದೆನಲ್ಲವೇ? ನಿಜಾಂಶ ತಿಳಿಯದೇ ಇದ್ದಿದ್ದರೆ ಇನ್ನೂ ಏನೇನು ಅನಾಹುತಗಳು ನಡೆದು ಹೋಗುತ್ತಿತ್ತೋ, ದೊಡ್ಡಮ್ಮ ತಿಳಿಸಿದ್ದು ಒಳ್ಳೆಯದೇ ಆಯ್ತು. ಅನಂತನನ್ನು ನೂರು ಸಾರಿ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ನನ್ನ ಪಾಪ ಕಳೆಯುವುದಿಲ್ಲ, ಅನಂತನಂತೆಯೇ ನಾನು ಆಗಬೇಕು, ಅವರಿಗೆ ಹಣದ ಆಸೆ ಇರಲಿಲ್ಲ, ಆಸ್ತಿಯ ಚಿಂತೆ ಇರಲಿಲ್ಲ, ಸಂಸಾರದ ಹಂಬಲವಿರಲಿಲ್ಲ, ತನಗೋಸ್ಕರ ಯಾವ ಆಸೆಯನ್ನು ಇಟ್ಟುಕೊಳ್ಳದ ವಿರಾಗಿ.

ಆಶ್ರಮದಲ್ಲಿ ಏನು ರಂಪವಾಗಲಿದೆಯೋ ಎಂದು ಪುರುಷೋತ್ತಮ ಚಿಂತಿಸುತ್ತಿದ್ದ. "ಆಶ್ರಮಕ್ಕೆ ಹೋಗುವ ದಾರಿ" ಎಂಬ ಫಲಕದ ಬಳಿ ಬಸ್ಸು ನಿಂತಾಗ, ಇಬ್ಬರೂ ಇಳಿದರು. ಪುರುಷೋತ್ತಮ ನೀನು ಆಶ್ರಮಕ್ಕೆ ಹೋಗು, ನಾನು ಆಮೇಲೆ ಬರುತ್ತೇನೆ, ನನಗೆ ಇಲ್ಲಿ ಸ್ವಲ್ಪ ಕೆಲಸವಿದೆ ಎಂದು ಹೇಳಿ ಪಕ್ಕದ ಹಳ್ಳಿಯ ಕಡೆ ಬೆರಳನ್ನು ತೋರಿದ. ಸತ್ಯ ಮುಂದೆ ನಡೆದ ಪುರುಷೋತ್ತಮ ಇನ್ನೊಂದು ಕಾಲು ದಾರಿಯನ್ನು ಹಿಡಿದು, ಭೈರಪ್ಪ ಹಾಗೂ ಅನಂತನ ಸಮಾಧಿ ಇದ್ದ ಜಾಗಕ್ಕೆ ಬಂದ.

ಸತ್ಯ ನೇರವಾಗಿ ಆಶ್ರಮವನ್ನು ಸೇರಿ, ತಾನೀಗಲೇ ಸ್ವಾಮೀಜಿಯನ್ನು ಕಾಣಬೇಕೆಂದು ಹೇಳಿಕಳಿಸಿದ. ಸತ್ಯನ ಪರಿಚಯ ಯಾರಿಗೂ ಇಲ್ಲವಾದ್ದರಿಂದ, ಅವನನ್ನು ಯಾರೂ ಏನನ್ನು ವಿಚಾರಿಸಲಿಲ್ಲ. ಅವನ ಸಹನೆಯನ್ನು ಪರೀಕ್ಷಿಸುವಂತೆ, ಸ್ವಾಮೀಜಿ ಅವನನ್ನು ಬಹಳ ತಡವಾಗಿ ಭೇಟಿಯಾದರು. ಅಸಹನೆಯಿಂದ ಕೆಂಪಾಗಿ ಕೂತಿದ್ದ ಸತ್ಯನನ್ನು ಕಂಡು ಅವರಿಗೆ ಕನಿಕರವುಂಟಾಯಿತು.

"ನೀನು ಯಾರು ಮಗು! ಯಾಕೆ ಬಂದಿದೀಯ!" ಮೃದುವಾಗಿ ಪ್ರಶ್ನಿಸಿದಾಗ ಸತ್ಯ ಮೆತ್ತಗಾದ. ಧಿಗ್ಗನೆ ಎದ್ದು ನಿಂತವನು, ಅವರ ಕಾಲುಗಳಿಗೆ ಬಗ್ಗಿ ನಮಸ್ಕರಿಸಿದ.

"ಜೈ ಜಗನ್ನಾಥಾ... ನನ್ನಿಂದೇನಾಗಬೇಕಾಗಿದೆಯಪ್ಪ?"

"ನಾನು ಅನಂತ ಅವರನ್ನು ಕರೆದುಕೊಂಡು ಹೋಗಲು ಬಂದಿದೇನೆ. ಅವರೆಲ್ಲಿ? ಕಾಗದ ಬರೆದರೂ ಅವರಿಂದ ಉತ್ತರ ಬರಲಿಲ್ಲ. ಅದಕ್ಕೇ ನಾನೇ ಬಂದೆ. ಸ್ವಾಮೀಜಿ ಗಂಭೀರವಾದರು. ಈ ಹುಡುಗನ್ಯಾರೋ ತಮಗೆ ತಿಳಿಯದು. ಆದರೆ ನಿಜ ಇವನಿಗೆ ತಿಳಿದಿಲ್ಲ... ಎಂದುಕೊಂಡು,

"ಅವರು ಈ ಆಶ್ರಮದಲ್ಲಿಲ್ಲ..." ಎಂದು ನುಡಿದರು.

"ಅಂದರೆ! ಬೇರೆಲ್ಲಿಗಾದರೂ ಅವರನ್ನು ಕಳಿಸಿದಿರಾ? ಅದಕ್ಕೆ ನಮಗೆ ಅವರು ಉತ್ತರ ಬರೆಯಲಿಲ್ಲ. ಈಗ ಅವರು ಎಲ್ಲಿದಾರೆ ಹೇಳಿ, ನಾನು ಅಲ್ಲಿಗೇ ಹೋಗಿ ಅವರನ್ನು ನೋಡ್ತೀನಿ, ಅವರನ್ನು ಕರೆದುಕೊಂಡು ಹೋಗ್ತೀನಿ"

"ಅವರೀಗ ಎಲ್ಲಿಗೂ ಬರುವುದಿಲ್ಲ..."

"ಯಾಕೆ? ಯಾಕೆ ಬರುವುದಿಲ್ಲ? ಅವರು ಬರಲೇಬೇಕು" ಗಡುಸಾಗಿ ನುಡಿದ.

"ನೀನು ಹಾಗೇಲ್ಲ ಒರಟಾಗಿ ಮಾತನಾಡಬಾರದು. ಮೊದಲು ಸುಧಾರಿಸಿಕೋ. ನಂತರ, ನೀನ್ಯಾರು... ಬಂದ ಕಾರಣವೇನು ಅಂತ ಮೊದಲಿನಿಂದ ಮಾತನಾಡೋಣ..."

"ಮೊದಲು ನಾನು ಅವರನ್ನು ಕಂಡು ಮಾತಾನಾಡಬೇಕು.... ನಾನು ಸತ್ಯ ಅಂತ.... ಅನಂತ ನನ್ನ ಅಣ್ಣನಾಗಬೇಕು"

"ಓ...." ಸ್ವಾಮೀಜಿ ಒಂದು ಗಳಿಗೆ ಕಣ್ಣು ಮುಚ್ಚಿ ಕುಳಿತರು. ಅನಂತನ ವೃತ್ತಾಂತವೆಲ್ಲ ಈ ಹುಡುಗನಿಗೆ ತಿಳಿದು ಹೋಗಿದೆ ಎಂದು ಅರಿತರು.

"ಭೈರಪ್ಪ ಅನಂತ ಇಬ್ಬರೂ, ಇಲ್ಲಿಗೆ ಬಂದವರು, ವಾಪಸ್ಸು ಬರಲೇ ಇಲ್ಲ, ನಮಗೆ ತುಂಬಾ ದುಃಖವಾಗಿದೆ, ನನ್ನ ಅಕ್ಕ ಅವರಿಬ್ಬರನ್ನು ನೋಡಬೇಕು ಅಂತ ಆಸೆ ಪಡ್ತಾಳೆ"

"ನಿಮ್ಮಗಳ ಆಸೆ ಸಹಜವಾದುದೇ, ಆದರೆ ಅನಂತ ವಹಿಸಿಕೊಂಡಿದ್ದ ಜವಾಬ್ದಾರಿ ಮುಗಿದ ಮೇಲೆ ಅಲ್ಲಿರುವುದು ಸರಿಯಲ್ಲ, ಆದ್ದರಿಂದಲೇ ವಾಪಸ್ಸು ಬಂದು ಬಿಟ್ಟರು. ಇನ್ನು ಯಾರು ಏನೇ ಹೇಳಿದರೂ, ಅವರು ಅಲ್ಲಿಗೆ ವಾಪಸ್ಸು ಬರುವುದಿಲ್ಲ" ಮತ್ತೆ ಒಗಟಾಗಿ ಮಾತಾಡಿದಾಗ ಸತ್ಯ ಒರಟಾಗಿ ನುಡಿದ. "ಹಾಗಾದರೆ ನಾನು ವಾಪಸ್ಸು ಹೋಗುವುದಿಲ್ಲ. ಅವರ ಜತೆಯಲ್ಲಿ ಇಲ್ಲಿಯೇ ಇದ್ದು ಬಿಡ್ತೀನಿ"

"ಅವಿವೇಕಿಯಂತೆ ಮಾತನಾಡಬೇಡ. ಈ ಕಾರಣದಿಂದ ನೀನು ಈ ಆಶ್ರಮದಲ್ಲಿರುವುದು ತಪ್ಪಾಗುತ್ತೆ... ನೀನು ಚಿಕ್ಕವನು... ತಿಳುವಳಿಕೆ ಸಾಲದು"

"ಅನಂತ ಆಶ್ರಮ ಸೇರಿದಾಗ ಅವರೂ ಚಿಕ್ಕವರೇ ಆಗಿದ್ದರಲ್ಲ. ಅವರಿಗೆ ನೀವು ಆಶ್ರಯ ಕೊಡಲಿಲ್ಲವೆ! ಸತ್ಯ ಮರುಸವಾಲು ಹಾಕಿದಾಗ ಅವರಿಗೆ ಕೋಪ ಬರಲಿಲ್ಲ. ಹಠಮಾರಿಯಂತೆ ಮಾತಾನಾಡುತ್ತಿದ್ದವನನ್ನೂ ಕಂಡು ಮರುಕವುಕ್ಕಿತ್ತು, ಮುಗುಳ್ನಕ್ಕರು.

"ಅದು ಹಳೆಯ ಕತೆ ಅದನ್ನೆಲ್ಲ ಮರೆತು, ವಾಪಸ್ಸು ಹೋಗು"

"ಹೋಗ್ತೀನಿ, ಆದರೆ ಅವರು ಹೇಳಿದರೆ ಮಾತ್ರ. ಅವರೆಲ್ಲಿದಾರೆ ಹೇಳಿ. ನಾನು ಮೊದಲು ಅವರೊಡನೆ ಮಾತನಾಡಬೇಕು..."

"ಸರಿ ಬಾ ನನ್ನ ಜತೆ. ಸ್ವಾಮೀಜಿಯ ಹಿಂದೆ ಹಿಂದೆ ಸತ್ಯ ನಡೆದ. ಮೌನವಾಗಿ ಇಬ್ಬರೂ, ಮಾವಿನ ತೋಪಿನ ಬಳಿ ಬಂದರು" ಇಲ್ಲಿ ತೋಪಿನಲ್ಲಿ ಏಕಾಂಗಿಯಾಗಿ ಯಾಕೆ ಇದಾರೆ" ಎಂದು ಚಿಂತಿಸಿದ ಸತ್ಯ.

ಸಮಾಧಿಯ ಕಡೆ ಕೈ ಮಾಡಿ ಸ್ವಾಮೀಜಿ ನುಡಿದರು.

"ನೋಡು... ಅನಂತ ಅಲ್ಲಿದಾರೆ. ದೂರದಿಂದ ಅಲ್ಲಿ ಕುಳಿತಿದ್ದ ಪುರುಷೋತ್ತಮನನ್ನು ಸತ್ಯ ಕಂಡು, ಒಂದು ಗಳಿಗೆ ಅನಂತನೆಂದೇ ಭಾವಿಸಿ ನಡೆದ. ಆತುರಾತುರವಾಗಿ ಬಂದ ಸತ್ಯನನ್ನು ಕಂಡು ಪುರುಷೋತ್ತಮ ಎದ್ದು ನಿಂತು ಕಣ್ಣು ತಪ್ಪಿಸಿದ...."

"ಅಂಕಲ್.... ನೀವಾ? ಅನಂತ ಎಲ್ಲಿ? ನಾನು ಅವರನ್ನು ಹುಡುಕಿಕೊಂಡು ಬಂದೆ...ಇಲ್ಲಿದಾರೆ ಅಂತ ಹೇಳಿದರು..." ಎನ್ನುತ್ತಾ ತಿರುಗಿದ. ಸ್ವಾಮೀಜಿ ಅವನಿಗೆ ಬೆನ್ನು ಮಾಡಿ ನಡೆಯುತ್ತಿದ್ದರು.

"ಸತ್ಯ ನೀನ್ಯಾಕೆ ಬಂದೆ ಇಲ್ಲಿಗೆ? ಇದು ಚಿಕ್ಕವರು ಬರುವ ಜಾಗವಲ್ಲ... ನಡೀ ಹೋಗೋಣ..."

"ಅಂಕಲ್ ಎಲ್ಲಿ? ಅವರನ್ನು ನೋಡಬೇಕಲ್ಲ..."

"ಅವನೀಗ ನಿನಗೆ ಕಾಣುವುದಿಲ್ಲ... ಇಲ್ಲಿ ಇಲ್ಲಿ ಈ ಸಮಾಧಿಯ ಒಳಗಿದಾನೆ..."

ಸತ್ಯನಿಗೆ ತಕ್ಷಣಕ್ಕೆ ಅರ್ಥವಾಗಲಿಲ್ಲ. ಕೆಲವು ಕ್ಷಣಗಳ ನಂತರ ಅರ್ಥ ಮಾಡಿಕೊಂಡ.

"ನೋ.... ಸುಳ್ಳು ಎಂದು ಕಿರುಚಿದ. ಅವನ ಧ್ವನಿಗೆ ಬೆದರಿ ಹಕ್ಕಿಗಳು ಹಾರಿಹೋದವು. ತಲೆಯ ಮೇಲೆ ಕೈ ಹೊತ್ತ ಸತ್ಯ ಕುಸಿದು ಸಮಾಧಿಯ ಬಳೀ ಕುಳಿತ. ವಿಚಿತ್ರವಾದ ಮೌನ ಆವರಿಸಿತು.

ಪುರುಷೋತ್ತಮನ ಕೈಗಳು ಅವನ ಭುಜವನ್ನು ಒತ್ತಿದವು... "ಏಳು.... ಏಳು.... ಎಬ್ಬಿಸಲು ನೋಡಿದ ಪುರುಷೋತ್ತಮನನ್ನೇ ಕ್ರೂರವಾಗಿ ನೋಡಿದ.

"ಯಾಕೆ ಹೀಗಾಯ್ತು? ಯಾವಾಗ? ನಮಗೆ ಯಾರೂ ತಿಳಿಸಲೇ ಇಲ್ಲ... ನಿಮಗೆ ಗೊತ್ತಿದ್ದರೂ ನೀವೂ ತಿಳಿಸಲಿಲ್ಲ.... ಯಾಕೆ? ಯಾಕೆ?"

"ಹೌದು. ನಿಮಗೆ ನಾನು ತಿಳಿಸಲಿಲ್ಲ, ಆದರೆ ಅದು ತಪ್ಪು ಅಂತ ನನಗನ್ನಿಸುವುದಿಲ್ಲ. ನಿಮ್ಮ ದೊಡ್ಡಮ್ಮನಿಗೆ ಸಹ ಈ ವಿಷಯ ತಿಳಿಯದು... ಲಲಿತಳಿಗೆ ತಿಳಿಯಬಾರದು ಅಂತ ವಿಷಯ ಮುಚ್ಚಿಟ್ಟೆ.... ಅಷ್ಟೇ...."

"ಯಾಕೆ ಹೀಗೆ ಮಾಡಿದಿರಿ ಅಂಕಲ್! ನನ್ನದೇನೂ ತಪ್ಪಿರಲಿಲ್ಲ... ನಿಮ್ಮ ಸತ್ಯನ ಎದುರಿಗೆ ಒಂದೇ ಒಂದು ಸಲ ಬನ್ನಿ.... ದಯವಿಟ್ಟು ಒಂದು ಸಲ ಹೊರಗೆ ಬನ್ನಿ... ನನ್ನ ಮನಸ್ಸಿನ ಗೊಂದಲವನ್ನೆಲ್ಲ ನಿಮಗೆ ತಿಳಿಸಬೇಕು.

ನನ್ನ ಅಪ್ಪ ಅಮ್ಮನ ಪರವಾಗಿ ನಿಮ್ಮನ್ನು ಕ್ಷಮೆ ಕೇಳಬೇಕು.... ನಿಮ್ಮನ್ನು ವಾಪಸ್ಸು ಕರೆದುಕೊಂಡು ಬರ್ತೀನಿ ಅಂತ ದೊಡ್ಡಮ್ಮನಿಗೆ ಹೇಳಿಬಂದಿದೀನಲ್ಲ. ಈಗೇನು ಮಾಡಲಿ? ನಾನೂ ವಾಪಸ್ಸೂ ಹೋಗುವುದಿಲ್ಲ. ಇಲ್ಲೇ ಇದ್ದು ಬಿಡ್ತೀನಿ..." ಪ್ರಲಾಪಿಸುತ್ತಿದ್ದವನನ್ನು ಹೇಗೆ ಸಮಾಧಾನಗೊಳಿಸಬೇಕೆಂದು ತಿಳಿಯದೇ ಪುರುಷೋತ್ತಮನಿಗೆ ಕಸಿವಿಸಿಯಾಯಿತು. ಒಂದೆರಡು ನಿಮಿಷಗಳ ನಂತರ ಅವನು ಸಮಾಧಾನಗೊಂಡು ಏಳುತ್ತಾನೆಂದು ಕಾದರೂ, ಸತ್ಯ ಹಾಗೇ ಕೂತಿದ್ದ.

ಸಮಾಧಿಯೊಳಗಿದ್ದ ಅನಂತನ ಆತ್ಮ ಕಸಿವಿಸಿಕೊಂಡಿತ್ತು. ತನಗಾಗಿ ಬಂದು ಅಳುತ್ತಿರುವ ಸತ್ಯನನ್ನು ಸಂತೈಸಬೇಕೆಂದೆನಿಸಿತ್ತು. ಆದರೆ ಹೊರಬರುವಂತಿಲ್ಲ. "ಸತ್ಯ ಎದ್ದು ಹೋಗು.... ಇಲ್ಲಿಂದ ಹೊರಟು ಹೋಗು..." ಅನಂತನ ಆತ್ಮ ಚೀರಿತು. ಆದರೆ ಆ ಕೂಗು ಸತ್ಯನನ್ನು ತಲುಪಲಿಲ್ಲ.

ಪುರುಷೋತ್ತಮ ಬಲವಂತವಾಗಿ ಸತ್ಯನನ್ನು ಎಬ್ಬಿಸಿ, ತನ್ನೊಡನೆ ನಡೆಸಿಕೊಂಡು ಬಂದನು. ದಾರಿಯಲ್ಲಿ ನಡೆದುದನ್ನೆಲ್ಲಾ ಹೇಳಿದನು. ಸತ್ಯ ಎಷ್ಟರ ಮಟ್ಟಿಗೆ ಕೇಳಿಸಿಕೊಂಡನೋ ಅವನಿಗೇ ಗೊತ್ತಿಲ್ಲ. ಅವನು ಯೋಚಿಸುತ್ತಿದ್ದುದೇ ಬೇರೆ. ಇಬ್ಬರೂ ಊರಿಗೆ ವಾಪಸ್ಸು ಬಂದರು. ಮನೆಯವರಿಗೆಲ್ಲ ಅನಂತನ ನಿಧನದ ಬಗ್ಗೆ ತಿಳಿದು ಖೇದವಾಗಿತ್ತು. ಪುರುಷೋತ್ತಮ ತನ್ನಿಂದ ಸಹ ಈ ವಿಷಯಗಳನ್ನು ಮುಚ್ಚಿಟ್ಟನಲ್ಲ ಎಂದು ವೇದಮ್ಮನಿಗೆ ಅಸಮಾಧಾನವಾಗಿತ್ತು. ಸತ್ಯನ ಮನೋವ್ಯಥೆ ಮಾತ್ರ ದಿನ ದಿನಕ್ಕೆ ಹೆಚ್ಚಾಯಿತು. ತಾನು ಅನಂತನೊಡನೆ ಒಂದು ಬಾರಿ ಬಾಯ್ತುಂಬಾ ಮಾತನಾಡಬೇಕಾಗಿತ್ತು. ಒಂದು ಸಾರಿ ಅವನ ಕಾಲು ಹಿಡಿದು ಕ್ಷಮೆ ಕೇಳಬೇಕಾಗಿತ್ತು. ನಮ್ಮ ಭವಿಷ್ಯವನ್ನು ರೂಪಿಸಿದ, ಅನಂತ ಈ ಜಗತ್ತಿನಿಂದ ಕಣ್ಮರೆಯಾದ ವಿಷಯ ಸಹ ನನಗೆ ತಿಳಿಯಲಿಲ್ಲ, ಅಂತಿಮ ದರ್ಶನದ ಭಾಗ್ಯ ಸಹ ನಮಗೆ ಸಿಗಲಿಲ್ಲ. ನಾವುಗಳು ಎಂತಹ ಪಾಪಿಗಳು...! ಮತ್ತೆ ಮತ್ತೆ ಅದೇ ಧ್ಯಾನ. ಅವನಿಗೆ ಗೆಳೆಯರು ಬೇಡವಾದರು. ಕಾಲೇಜು ಬೇಡವಾಯಿತು, ಮನೆಯ ಜನರೊಂದಿಗೆ ಹೆಚ್ಚು ಮಾತುಕತೆಯಾಡುವುದನ್ನು ಬಿಟ್ಟು ಬಿಟ್ಟ. ವೇದಮ್ಮ ಆತಂಕಗೊಂಡಳು ಅನಂತನ ಬಗ್ಗೆ ಯೋಚಿಸಿ ಯೋಚಿಸಿ ತಲೆ ಕೆಡಿಸಿಕೊಂಡಿದಾನೆ ಏನು ಗತಿಯಪ್ಪಾ ದೇವರೇ... ಅಂತ. ಡಾಕ್ಟ್ರನ್ನು ಕರೆಸಿದ್ದಾಯಿತು. ಅವರು ಯಾವ ಖಾಯಿಲೆ ಇಲ್ಲವೆಂದು ತಿಳಿಸಿದರು.

ಕೆಲವು ದಿನಗಳ ನಂತರ ಸತ್ಯ ಒಂದು ತೀರ್ಮಾನಕ್ಕೆ ಬಂದು, ತನ್ನ ಭಾಗದ ಆಸ್ತಿಯನ್ನೆಲ್ಲಾ ವೇದಮ್ಮನ ಹೆಸರಿಗೆ ವರ್ಗಾಯಿಸಿ, ಅದನ್ನು ಯಾರಿಗೂ ತಿಳಿಸಬಾರದೆಂದು ಲಾಯರಿಗೆ ಆದೇಶ ನೀಡಿದ್ದ. ಇದ್ದಕ್ಕಿದ್ದಂತೆ ಅವನು

ಆಶ್ರಮಕ್ಕೆ ಹೊರಟೀದೀನಿ ಎಂದು ತಿಳಿಸಿದಾಗ, ತಡೆಯುವ ಮನಸ್ಸಾದರೂ, ಸುಮ್ಮನಾದಳು. ಅನಂತನ ಸಮಾಧಿ ಬಳಿ ಕೂತು ನಾಲ್ಕು ಹನಿ ಕಣ್ಣೀರು ಸುರಿಸಿದರೆ ಮನಸ್ಸಿಗೆ ಸಮಾಧಾನವಾಗಬಹುದು ಎಂದುಕೊಂಡಳು.

ಧೃಢವಾದ ಹೆಜ್ಜೆಗಳನ್ನಿಟ್ಟು ಸತ್ಯ ಆಶ್ರಮವನ್ನು ಪ್ರವೇಶಿಸಿದ.. ಮೊದಲು ಸ್ವಾಮಿಜೀಯವರನ್ನು ಕಂಡು ನಮಸ್ಕರಿಸಿದ. ಅವರು ಮುಗುಳ್ನಕ್ಕು "ಜೈ ಜಗನ್ನಾಥಾ" ಎಂದು ಹರಸಿದಾಗ, ತಾನು "ಜೈ ಜಗನ್ನಾಥಾ" ಎಂದು ಧ್ವನಿ ಜೋಡಿಸಿದ.

"ನಾನು ಈದಿನ, ಸ್ವಪ್ರೇರಣೆಯಿಂದ ಎಲ್ಲಾ ಬಂಧನಗಳನ್ನು ಕಿತ್ತೊಗೆದು ಇಲ್ಲಿಗೆ ಬಂದಿದ್ದೇನೆ. ನನ್ನ ಅನಂತ ಇರುವ ಸ್ಥಳವೇ ನನ್ನ ವಾಸಸ್ಥಳ. ಅವರು ನಡೆದ ಹಾದಿಯೇ ನನ್ನ ಹಾದಿ. ಅವರ ಆದರ್ಶವೇ ನನಗೆ ಮಾರ್ಗದರ್ಶನ. ಜಗನ್ನಾಥನೇ ನನ್ನ ಆರಾಧ್ಯ ದೈವ" ಎನ್ನುತ್ತಾ ಮತ್ತೊಮ್ಮೆ ಅವರಿಗೆ ವಂದಿಸಿದ.

"ಏನಪ್ಪಾ ಇದೆಲ್ಲಾ?" ಸ್ವಾಮೀಜಿ ಪ್ರಶ್ನಿಸಿದರು.

"ಅನಂತ ಇಲ್ಲದ ಮನೆಯಲ್ಲಿ ನಾನಿರಲಾರೆ. ಅವರು ನಮ್ಮನ್ನು ಉದ್ಧರಿಸಿದರು. ಆ ಉಪಕಾರವನ್ನು ಮರೆಯಲಾರೆ. ಕೃತಜ್ಞತೆಯನ್ನು ತಿಳಿಸುವ ಅವಕಾಶವೂ ನನಗೆ ಸಿಗಲಿಲ್ಲ. ಈಗ ನನ್ನ ಮನಸ್ಸು ಅನಂತ ನಡೆಸಿದ ಸರಳ ಜೀವನವನ್ನು ಬಯಸುತ್ತಿದೆ. ಅವರು ತೋರಿಸಿದ ಆದರ್ಶವನ್ನು ನನ್ನ ಆದರ್ಶವನ್ನಾಗಿ ಮಾಡಿಕೊಳ್ಳುವ ಹಂಬಲ ಮೂಡುತ್ತಿದೆ....ಏನೋ ಒಂದು ರೀತಿಯ ವೈರಾಗ್ಯ ಆವರಿಸಿದೆ"

"ಯಾಕಪ್ಪಾ ಈ ಚಿಕ್ಕ ವಯಸ್ಸಿನಲ್ಲಿ ನಿನಗೆ ವೈರಾಗ್ಯ?"

"ಅನಂತ ತಮ್ಮದಾಗ ಬೇಕಾಗಿದ್ದ, ಸುಖ ಸಂಪತ್ತಿನಿಂದ ವಂಚಿತರಾದರು. ಅವರದಾಗಿದ್ದ ಆಸ್ತಿಯನ್ನು ನಮಗೆ ಹಂಚಿದ್ದರು. ನನಗೆ ಅದರ ಮೇಲೆ ಆಸಕ್ತಿಯಿಲ್ಲ ಅನಂತನನ್ನು ವಂಚಿಸಿದ, ನನ್ನ ತಂದೆಯ ಮನೆಯಲಿದ್ದು ಆ ಸುಖ ಸಂಪತ್ತನ್ನು ನಾನು ಅನುಭವಿಸಿದರೆ, ನಾನು ಮತ್ತೊಮ್ಮೆ ಅನಂತನಿಗೆ ವಂಚನೆ ಮಾಡಿದಂತಾಗುತ್ತದೆ. ನಿನಗೆ ಆ ಹಕ್ಕು ಇಲ್ಲ....ನನಗೆ ಯಾವ ಆಸೆಯೂ ಇಲ್ಲ, ಆದ್ದರಿಂದ ಎಲ್ಲವನ್ನು ತೊರೆದು ಬಂದಿದೀನಿ. ದಯವಿಟ್ಟು ನಿಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳಿ, ನಿರಾಕರಿಸಬೇಡಿ, ಆಶೀರ್ವಾದ ಮಾಡಿ"

"ಸರಿ ಜಗನ್ನಾಥನ ಇಚ್ಛೆ ಇದು ಆಗಿದ್ದರೆ ಅದು ನೆರವೇರುತ್ತದೆ. ಮೊದಲು ಅನಂತನ ಸಮಾಧಿಗೆ ನಮಸ್ಕರಿಸಿ ಅವರ ಆಶೀರ್ವಾದವನ್ನು ಪಡೆದು ಬಾ, ನಿನಗೆ ಮಂಗಳವಾಗುತ್ತದೆ" ಅನಂತ ಅವರ ಆಜ್ಞೆಯಂತೆ ಅತ್ತ

ಹೊರಟ. "ಮತ್ತೇಕೆ ಈ ಸತ್ಯ ನನ್ನ ಬಳಿಗೆ ಬರುತ್ತಿದ್ದಾನೆ" ಎಚ್ಚರಗೊಂಡ ಅನಂತನ ಆತ್ಮ ಯೋಚಿಸಿತು. ಆತಂಕಗೊಂಡಿತು.

"ಅಂಕಲ್, ಇಂದಿನಿಂದ ನಾನು ಈ ಆಶ್ರಮವಾಸಿ, ನಿಮ್ಮ ಬಳಿಯೇ ಇರುವ ಆಸೆಯಿಂದ ಬಂದಿದೀನಿ...ನೀವು ನಡೆಯುವ ದಾರಿಯೇ ನನ್ನ ದಾರಿ. ನಿಮ್ಮ ಆದರ್ಶವೇ ನನ್ನ ಆದರ್ಶ.... ನಾನು ಸಮಾಜ ಸೇವೆ ಮಾಡಬೇಕು...

"ಆದರೆ ಸಮಾಧಿಯ ಒಳಗಿದ್ದ ಅನಂತನ ಆತ್ಮ ಅತ್ತಿತು. ಸತ್ಯನ ನಿರ್ಧಾರವನ್ನು ಒಪ್ಪಲಿಲ್ಲ" ಬೇಡ ಸತ್ಯ... ಬೇಡ... ಈ ಆಶ್ರಮವಾಸ ನಿನಗಲ್ಲ, ನಿನ್ನಂತಹ ಹರೆಯದ ಹುಡುಗನಿಗಲ್ಲ ಆಟ ಆಡಿಕೊಂಡು, ಮಜಾ ಮಾಡಿಕೊಂಡು ಬಾಳಬೇಕಾದ ವಯಸ್ಸು ನಿನ್ನದು... ಆಶ್ರಮದ ನಿಯಮ, ಕಟ್ಟುಪಾಡು ನಿನ್ನಂತಹವನಿಗಲ್ಲ... ಬೇಡ.... ಬೇಡ... ಈ ಬಾಳನ್ನು ನೀನು ಬಯಸಿ ಬರಬೇಡ. ಎದ್ದುಹೋಗು. ನಿನಗಾಗಿ ಕಾತರಿಸುವ ವೇದಮ್ಮ ಇದಾಳೆ, ನಿನ್ನ ಹಿತೈಷಿಯಾಗಿ ಲಲಿತಳಿದ್ದಾಳೆ. ಅಪದ್ಬಾಂದವನಾಗಿ ಪುರುಷೋತ್ತಮನಿದಾನೆ..." ಆತ್ಮ ದುಃಖಿಸಿತು. "ಆದರೆ ನನಗೆ.... ನನಗೆ ಯಾರೂ ಇರಲಿಲ್ಲ ಸತ್ಯ.... ನಾನು ನಂಬಿದವರೇ ನನಗೆ ಮೋಸ ಮಾಡಿಬಿಟ್ಟರು. ಆಗ ನಾನು ವಿಧಿಯಿಲ್ಲಧೇ ಈ ಬಾಳನ್ನು ಅಪ್ಪಿಕೊಳ್ಳಬೇಕಾಯ್ತು. ಆದರೆ ಆಶ್ರಮವಾಸ ನನ್ನ ಮನಸ್ಸಿಗೆ ಹಿತವನ್ನು ನೀಡಿದ್ದೇನೋ ನಿಜ...ಈ ಸ್ಥಳದಲ್ಲಿ ನಾನು ಹಿಂದಿನದೆಲ್ಲವನ್ನು ಮರೆತು ನನ್ನ ಬಾಳಿಗೆ ಒಂದು ಧ್ಯೇಯವನ್ನು ಕಂಡುಕೊಳ್ಳುವುದರಲ್ಲಿದ್ದೆ.... ಆದರೆ ವಿಧಿ ಮತ್ತೆ ನನ್ನನ್ನು ನಿಮ್ಮಲ್ಲಿಗೆ ಎಳೆದು ತಂದಿತು. ಮತ್ತೆ ಅಲ್ಲಿರಲು ನಾನು ನನ್ನ ಮನಸ್ಸಿನ ತಾಕಲಾಟದಲ್ಲಿ ಬಳಲಿದ್ದು ನನಗೆ ಮಾತ್ರ ಗೊತ್ತು. ಆದರೆ ಅಲ್ಲಿ ನನಗೆ ನೆಮ್ಮದಿ ಇರಲಿಲ್ಲ. ದ್ವೇಷ, ಕಮ್ಮಿ ಆಗಿರಲಿಲ್ಲ. ಸೇಡಿನ ಮನೋಭಾವ ಹೋಗಿರಲಿಲ್ಲ. ನಾನು ಮೇಲ್ನೋಟಕ್ಕೆ ಎಲ್ಲರ ಮೆಚ್ಚುಗೆಗೆ ಪಾತ್ರನಾದವನಾಗಿದ್ದೆ. ಆದರೆ ನನ್ನ ಅಂತರಾತ್ಮದಲ್ಲಿನ ಅಶಾಂತಿ ನನಗೆ ಮಾತ್ರ ಗೊತ್ತು. ನಾನು ಪರಿಪಕ್ವವಾಗಲು ಸಾಧ್ಯವಾಗಲಿಲ್ಲ. ಆದ್ದರಿಂದ ನಾನು ನಿನಗೆ ಈಗಲೇ ಹೇಳಿ ಬಿಡುತ್ತೇನೆ....." ಆತ್ಮಕ್ಕೆ ತನ್ನ ಸ್ಥಿತಿಯ ಬಗ್ಗೆ ಅರಿವಾಯಿತು.

"ಅರೆ! ನಾನು ಏನು ಹೇಳಿದರೆ ತಾನೇ ಅದು ಸತ್ಯನಿಗೆ ಕೇಳಿಸುತ್ತೆ? ನಾನೀಗ ಅಗೋಚರ.... ನಾನು ಅವನ ಕಣ್ಣಿಗೆ ಬೀಳುವುದಿಲ್ಲ. ನನ್ನ ಮಾತುಗಳು ಅವನ ಕಿವಿಗೆ ಕೇಳಿಸುವುದಿಲ್ಲ. ಆದರೂ ಆದರೂ..." ಆತ್ಮದ ಚಡಪಡಿಕೆ ಹೆಚ್ಚಾಯಿತು. "ಅವನು ಈ ಆಶ್ರಮವನ್ನು ಸೇರಬಾರದು. ನನ್ನ ಜೀವನದಂತೆ ಅವನ ಜೀವನ ನಿಸ್ಸಾರವಾಗಬಾರದು. ನನ್ನಂತೆ ಇವನ ಬದುಕು ಆಗಬಾರದು. ನಾನು ಬಯಸಿ ಇಲ್ಲಿಗೆ ಬಂದವನಲ್ಲ, ಬದುಕು ನನ್ನನ್ನು ಇಲ್ಲಿಗೆ ಕರೆ ತಂದಿತು.

ಇದನ್ನು ಅವನಿಗೆ ತಿಳಿಸುವುದು ಹೇಗೆ.... ಹೇಗೆ....!" ತಿಳಿಯದೇ ಅನಂತನ ಆತ್ಮ ಒದ್ದಾಡಿತು. ಒಂದು ನಿಮಿಷಕ್ಕಾದರೂ ಸರಿ, ತಾನು ಈ ಸಮಾಧಿಯಿಂದ ಹೊರ ಬರುವಂಥಾದರೆ... ಸತ್ಯ ಸಮಾಧಿಯನ್ನು ಮುಟ್ಟಿದ ಹಸ್ತಗಳನ್ನು ಕಣ್ಣಿಗೊತ್ತಿಕೊಂಡು ಎದ್ದು ಆಶ್ರಮದ ಕಡೆಗೆ ಹೊರಟ. ಆತ್ಮ ಅವನನ್ನು ತಡೆದು ನಿಲ್ಲಿಸಲು ಬಯಸಿತ್ತು. ಆದರೆ ಕೈಗಳನ್ನೆತ್ತಲು ಆಗಲೇ ಇಲ್ಲ. ಕಟ್ಟಿ ಹಾಕಿದಂತೆ ಅನ್ನಿಸಿತು. ಕೂಗಲು ನೋಡಿತ್ತು, ಆದರೆ ಬಾಯಿ ಬಿಡಲು ಆಗಲಿಲ್ಲ. ಹೊಲಿದಂತೆ ಸೇರಿಕೊಂಡಿತ್ತು. ಕಾಲನ್ನು ಎತ್ತಿ ಏಳಲು ಪ್ರಯತ್ನಿಸಿತ್ತು. ಆದರೆ ಕಾಲುಗಳನ್ನು ಅಲುಗಾಡಿಸಲು ಸಹ ಆಗಲಿಲ್ಲ. ತನ್ನ ಅಸಹಾಯಕತೆ ಅಸಹ್ಯವಾಗಿ ತೋರಿತು. ಅಸಹನೆಯಿಂದ ವಿಲವಿಲನೆ ಒದ್ದಾಡಿತು.

ಯಾವ ಅರಿವೂ ಇಲ್ಲದವನಂತೆ ಸತ್ಯ ತಲೆ ತಗ್ಗಿಸಿ ಆಶ್ರಮದ ಕಡೆಗೆ ಹೆಜ್ಜೆ ಹಾಕಿದ. ಆತ್ಮ ಅವನ ಬೆನ್ನನ್ನು ನೋಡುತ್ತಲೇ ಇತ್ತು.... **"ಛೆ.... ಎಂತಹ ಕೆಲಸ ಮಾಡಿ ಬಿಟ್ಟೆಯಲ್ಲೋ..."** ತನ್ನೊಳಗೆ ಚೀರಿಕೊಂಡಿತು. ಚೀರುತ್ತಲೇ ಇತ್ತು.

* * * * *

* * * * *

* * *

* * *

o



"ಅನಿರೀಕ್ಷಿತ" ಕಾದಂಬರಿಯಲ್ಲಿ ಬರುವ ಪಾತ್ರಗಳು ನನ್ನ ಕಲ್ಪನೆಯಲ್ಲಿ ರೂಪುಗೊಂಡವು. ವೇಷ, ವೇಷಕ್ಕೆ ತಕ್ಕ ಭಾವ, ಭಾವಕ್ಕೆ ತಕ್ಕ ನಟನೆ, ನಡವಳಿಕೆಗಳನ್ನು ಪಾತ್ರಗಳ ಮುಖಾಂತರ ತಿಳಿಸುತ್ತಾ ಕತೆ ಬೆಳೆಯುತ್ತದೆ.

ವಿಚಿತ್ರ ಎನಿಸುವಂತಹ ಸಂಬಂಧಗಳನ್ನು ಒಳಗೊಂಡಿರುವ ಕಥಾ ಚಿತ್ರಣ ಇದು. ಅನಿರೀಕ್ಷಿತವಾದ ತಿರುವುಗಳಿಂದ ಪ್ರಾರಂಭವಾಗುವ ಈ ಸಾಂಸಾರಿಕ ಕತೆ, ಅನಿರೀಕ್ಷಿತವಾಗಿ ಮುಕ್ತಾಯಗೊಳ್ಳುತ್ತದೆ. ಸಾಧಾರಣವಾಗಿ ಒಂದುಕುಟುಂಬದಲ್ಲಿ ಅಸಂಭವ ಎನಿಸುವ ಘಟನೆಗಳ ಸುತ್ತ ಹೆಣೆದಿರುವ ಈ ಕಥಾ ಚಿತ್ರಣವನ್ನು ಸಹೃದಯ ಓದುಗರು ಸ್ವೀಕರಿಸುವರೆಂಬ ವಿಶ್ವಾಸ ನನ್ನದು.

ಕಾದಂಬರಿ ಪ್ರಕಟಗೊಂಡು, ಓದುಗರನ್ನು ಆಸಕ್ತಿಯಿಂದ, ಕುತೂಹಲ ದಿಂದ ರಂಜಿಸಿದರೆ, ನನ್ನ ಬರಹಕ್ಕೆ ಸನ್ಮಾನ ಸಿಕ್ಕಂತಾಗುತ್ತದೆ.

ಪದ್ಮಾಶ್ರೀಧರ್